ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಪುರಾತತ್ತ್ವ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಉದಯಕುಮಾರ ಕೆ.ಸಿ.

ಮಾರ್ಗದರ್ಶಕರು
ಡಾ. ಸಿ. ಮಹದೇವ
ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೩

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಪುರಾತತ್ವ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ.
ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಉದಯಕುಮಾರ ಕೆ.ಸಿ.

ಮಾರ್ಗದರ್ಶಕರು
ಡಾ.ಸಿ.ಮಹದೇವ
ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೩

ಘೋಷಣಾ ಪತ್ರ

ಡಾ.ಸಿ.ಮಹದೇವ ಅವರ ಮಾರ್ಗದರ್ಶನದಲ್ಲಿ **ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಪುರಾತತ್ವ ಅಧ್ಯಯನ** ಎಂಬ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿ, ಪಿಎಚ್.ಡಿ.ಪದವಿಗಾಗಿ **ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ** ಸಾದರಪಡಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲ. ಇದು ನನ್ನ ಸ್ವತಂತ್ರವಾದ ಸಂಶೋಧನಾ ಅಧ್ಯಯನವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಉದಯಕುಮಾರ ಕೆ.ಸಿ.
ಸಂಶೋಧನಾ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: 16.12.2013

ಮಾರ್ಗದರ್ಶಕರ ಪ್ರಮಾಣ ಪತ್ರ

ಉದಯಕುಮಾರ ಕೆ.ಸಿ. ಅವರು ನನ್ನ ಮಾರ್ಗದರ್ಶನದಲ್ಲಿ **ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಪುರಾತತ್ವ ಅಧ್ಯಯನ** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಸಿ.ಮಹದೇವ
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: 16/12/13

ಪರಿವಿಡಿ

೩. ತಲನಕ್ಷೆಗಳು

೪. ಕೋಷ್ಟಕಗಳು

೫. ಪದಕೋಶ

೬. ವಕ್ತೃವಿವರಗಳು

೭. ಗ್ರಂಥ ಋಣ

೮. ಛಾಯಾಚಿತ್ರಗಳು

ಅಧ್ಯಾಯ ಒಂದು

ಪ್ರಸ್ತಾವನೆ

ಅಧ್ಯಾಯ ಒಂದು

ಪ್ರಸ್ತಾವನೆ

ಮನುಕುಲದ ಸಂಸ್ಕೃತಿ ಉಳಿಸಿಹೋದ ಹಲವು ಅವಶೇಷಗಳಲ್ಲಿ ಪುರಾತತ್ವ ಆಕರಗಳು ಪ್ರಮುಖವಾಗಿವೆ. ಈ ಅವಶೇಷಗಳನ್ನು ಅನ್ವೇಶಿಸಿ ಬೆಳಕಿಗೆ ತಂದು ಇತಿಹಾಸವನ್ನು ಪುನರ್ರಚಿಸ ಲಾಗುತ್ತದೆ. ಇತಿಹಾಸ ಕಾಲಘಟ್ಟಕ್ಕಿಂತ ಬಹಳ ಹಿಂದೆಯೇ ಮಾನವನ ಅಸ್ತಿತ್ವವಿದ್ದುದ್ದು ಪುರಾತತ್ವ ಅಧ್ಯಯನದಿಂದ ತಿಳಿಯಬಹುದಾಗಿದೆ. ಇದು ಇತಿಹಾಸಪೂರ್ವದ ಜನಸಂಸ್ಕೃತಿ ಅವಶೇಷಗಳ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿರದೆ, ಇತಿಹಾಸ ಕಾಲದ ಗ್ರಾಮ, ನಗರಗಳ ವಿನ್ಯಾಸ, ಕೋಟೆ-ಕೊತ್ತಳ, ಕೆರೆ ಕಟ್ಟೆ, ಬಾವಿ, ಅರಮನೆ ಹಾಗು ಲೋಹ ವಸ್ತುಗಳು, ವರ್ಣ ಚಿತ್ರಗಳು ಅಧ್ಯಯನಕ್ಕೆ ಪ್ರಮುಖವಾಗಿವೆ. ಸಮಕಾಲೀನ ರಾಜರು ಮತ್ತು ವರಿಷ್ಠ ಅಧಿಕಾರಿಗಳು ಹೊರಡಿಸಿದ ಶಾಸನಗಳು ಪುರಾತತ್ವ ಅಧ್ಯಯನ ವ್ಯಾಪ್ತಿಗೆ ಒಳಪಟ್ಟಿವೆ. ಇವುಗಳ ಅಧ್ಯಯನದಿಂದ ಅಂದಿನ ಕಾಲದ ರಕ್ಷಣಾ ವಿಧಾನಗಳು, ವಾಸ್ತುಶಿಲ್ಪ, ಮೂರ್ತಿಶಿಲ್ಪ, ವ್ಯಾಪಾರ, ಕೃಷಿ, ವಾಣಿಜ್ಯ, ನಾಣ್ಯ ಮತ್ತು ಭಾಷೆಗಳ ಬೆಳವಣಿಗೆ ಕುರಿತಂತೆ ಸ್ಪಷ್ಟ ಮಾಹಿತಿಗಳು[೧] ದೊರೆಯುತ್ತವೆ.

ಭಾರತದಲ್ಲಿ ಪುರಾತತ್ವ ಶಾಸ್ತ್ರದ ಮೇಲೆ ವೈಜ್ಞಾನಿಕ ಬೆಳಕು ಬಿದ್ದದ್ದು ಸರ್ ಮಾರ್ಟಿಮರ್ ವೀಲರ್ ಅವರು ಪುರಾತತ್ವ ಇಲಾಖೆಯಲ್ಲಿ ನಿರ್ದೇಶಕರಾಗಿದ್ದ(ಕ್ರಿ.ಶ. ೧೯೪೪-೪೮ರ) ಅವಧಿ ಯಲ್ಲಿ. ಈತ ರೂಪಿಸಿದ ತರಬೇತಿ ಶಾಲೆ ಹಲವು ಶ್ರೇಷ್ಠ ಪುರಾತತ್ವ ಶಾಸ್ತ್ರಜ್ಞರನ್ನು[೨] ರೂಪಿಸಲು ಪ್ರಥಮ ಮೆಟ್ಟಿಲು ಆಯಿತೆಂದು ಹೇಳಬಹುದು. ಒಟ್ಟಿನಲ್ಲಿ ಭಾರತದಲ್ಲಿ ಪ್ರಾಚ್ಯವಸ್ತುಗಳ ಬಗ್ಗೆ ನಿಜವಾದ ಆಸಕ್ತಿ ಪ್ರಾರಂಭವಾದದ್ದು ಪಾಶ್ಚಾತ್ಯರ ಆಗಮನದ ನಂತರವೆಂದೇ ಹೇಳಬೇಕು. ಭಾರತದಲ್ಲಿ ಲಿಖಿತ ಹಾಗು ಮೌಖಿಕ ಸಾಹಿತ್ಯವು ಅಪಾರವಾಗಿದ್ದರೂ ಒಬ್ಬ ಲೇಖಕನೂ ವಿಪುಲ ಪ್ರಾಚ್ಯಾವಶೇಷಗಳನ್ನು ನೈಜ ಕುತೂಹಲ ದೃಷ್ಟಿಯಿಂದ ನೋಡದಿದ್ದುದು ಆಶ್ಚರ್ಯ ಗೊಳಿಸುವ ವಿಷಯವಾಗಿತ್ತು. ಇದಕ್ಕೆ ಅಪವಾದವೆನಿಸಿ ವಾಸ್ತವಿಕ ದೃಷ್ಟಿಯಿಂದ ಇತಿಹಾಸದೆಡೆಗೆ

ಕಣ್ಣು ಹಾಯಿಸಿದ ಭಾರತೀಯ ಇತಿಹಾಸಕಾರನೆಂದರೆ ಕಲ್ಹಣ. ಈತ ಹನ್ನೊಂದನೆಯ ಶತಮಾನದ ಕಾಶ್ಮೀರದ ಇತಿಹಾಸಕಾರ. ಈತನು ವಿವಿಧ ಮೂಲ ಆಕರಗಳನ್ನು ಕಲೆ ಹಾಕಿ, ಅರ್ಥೈಸಿ, ಇತಿಹಾಸದ ಪುನರ್‌ರಚನೆಗೆ ಪ್ರಯತ್ನಿಸಿದ. ಪ್ರಾಚೀನ ನಾಣ್ಯಗಳು, ಶಾಸನಗಳು, ಹಾಗು ಪ್ರಾಚ್ಯಾವಶೇಷಗಳು ಇತಿಹಾಸ ರಚನೆಗೆ ಸಹಾಯಕವಾಗಬಲ್ಲವೆಂಬುದನ್ನು ತನ್ನ ಅಧ್ಯಯನ ಕ್ರಮದಿಂದ ತಿಳಿಸಿದನು. ಸ್ವಾತಂತ್ರ್ಯಪೂರ್ವದಲ್ಲಿ ದೇಶಿಯ ಸಂಸ್ಥಾನಗಳಿಂದ ಆಡಳಿತ ನಡೆಯಲ್ಪಡುತ್ತಿತ್ತು. ಅಂತಹ ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನ ಪ್ರಮುಖವಾಗಿದ್ದು ವಿದೇಶಿಯರಿಂದಲೂ ಮೆಚ್ಚುಗೆ ಪಡೆದಿತ್ತು. ಅಂದಿನ ಮೈಸೂರು ಸರ್ಕಾರ ಕ್ರಿ.ಶ. ೧೮೮೪ರಲ್ಲಿ ಬಿ.ಎಲ್.ರೈಸ್‌ರವರನ್ನು ಪುರಾತತ್ವ ಇಲಾಖೆಯ ಅಧಿಕಾರಿಯನ್ನಾಗಿ[೩] ನೇಮಕ ಮಾಡಿತು. ಮುಂದೆ ಅವರನ್ನು ಪುರಾತತ್ವ ಇಲಾಖೆಯ ನಿರ್ದೇಶಕರನ್ನಾಗಿ ನೇಮಕಮಾಡಿತು. ಇವರು ತಮ್ಮ ಸೇವಾವಧಿಯಲ್ಲಿ, ಅಂದರೆ ಕ್ರಿ.ಶ.೧೮೮೬ರ ನಂತರ ಸುಮಾರು ೯೦೦೦ ಶಾಸನಗಳನ್ನು ಸಂಗ್ರಹಿಸಿ ಎಪಿಗ್ರಾಫಿಯ ಕರ್ನಾಟಿಕ ಎಂಬ ಹೆಸರಿನಲ್ಲಿ ಹದಿಮೂರು ಸಂಪುಟಗಳನ್ನು ಪ್ರಕಟಿಸಿದರು. ಹೀಗೆ ಪ್ರಾಚ್ಯ ಅವಶೇಷಗಳನ್ನು ಸಂಗ್ರಹಿಸುವುದರ ಮೂಲಕ ಪ್ರಾದೇಶಿಕ ಅಧ್ಯಯನಕ್ಕೆ ಕಾರಣಕರ್ತರಾದರು.

ದೇಶದ ಪ್ರತಿಯೊಂದು ಸ್ಥಳ, ಗ್ರಾಮ, ಜಿಲ್ಲೆ ಹಾಗು ರಾಜ್ಯಕ್ಕೆ ತನ್ನದೇ ಆದ ಚರಿತ್ರೆ ಇದೆ. ಆ ಚರಿತ್ರೆಯನ್ನು ಕ್ರಮಬದ್ಧ ಹಾಗು ವ್ಯವಸ್ಥಿತವಾಗಿ ಅಧ್ಯಯನ ಮಾಡಿ ಪುನರ್‌ರಚನೆ ಮಾಡಲಾಯಿತು. ಇದನ್ನೇ ಸ್ಥಳೀಯ ಇತಿಹಾಸ ಎನ್ನಬಹುದು. ಆದರೆ ಭಾರತದಂತಹ ಬಹುಭಾಷಾ ದೇಶಕ್ಕೆ ಪ್ರಾದೇಶಿಕ ಇತಿಹಾಸ ಎನ್ನುವ ಪದ ಅನ್ವಯಿಸುವುದಿಲ್ಲ ಎನ್ನುವುದು ಅನೇಕ ವಿದ್ವಾಂಸರುಗಳ ಅಭಿಪ್ರಾಯ. ಅಂದರೆ ನಮ್ಮ ನಾಡಿನಲ್ಲಿ ಚಾರಿತ್ರಿಕವಾಗಿ ಬೆಳವಣಿಗೆ ಹೊಂದಿದ ಪ್ರದೇಶಗಳು ಯಾವುದೇ ಕೇಂದ್ರಾಡಳಿತಕ್ಕೆ ಸಂಪೂರ್ಣವಾಗಿ ಒಳಪಟ್ಟಿರಲಿಲ್ಲ. ಹಾಗಾಗಿ ಭಾರತದ ಇತಿಹಾಸವೆಂದರೆ ವಿವಿಧ ರಾಜ್ಯಗಳ, ಪ್ರದೇಶಗಳ, ಇತಿಹಾಸವೇ ಹೊರತು, ಕೆಲವೇ ರಾಜವಂಶಗಳ ಇತಿಹಾಸವಲ್ಲ ಎನ್ನುವುದು ಸ್ಪಷ್ಟ. ಆದ್ದರಿಂದ ಯಾವುದನ್ನು ಪ್ರಾದೇಶಿಕ ಇತಿಹಾಸವೆಂದು ಕರೆಯಲಾಗುವುದು ಅದನ್ನು ಸ್ಥಳೀಯ ಇತಿಹಾಸವೆಂದು[೪] ಕರೆಯುವುದು ಸೂಕ್ತ. ಆಯಾ ಪ್ರದೇಶದಲ್ಲಿ ದೊರೆಯುವ ಪುರಾತತ್ವ ಮತ್ತು ಸಾಹಿತ್ಯಕ ಆಕರಗಳು ಸ್ಥಳೀಯ ಚರಿತ್ರೆಕಾರನಿಗೆ ಪ್ರಮುಖವಾಗಿವೆ. ಅಲ್ಲದೆ ಜಾನಪದ ಜೀವನಕ್ಕೆ ಸಂಬಂಧಿಸಿದ ವಸ್ತು ವಿಶೇಷತೆ, ವಾಸ್ತುಶಿಲ್ಪ, ವಿವಿಧ ಸಮುದಾಯಗಳ ರಾಜಕೀಯ, ಆರ್ಥಿಕ, ಬೌದ್ಧಿಕ ಹಾಗು ಉಡುಗೆ-ತೊಡುಗೆಗಳನ್ನು ಅರಿಯಲು ಸಹಾಯಕವಾಗಿವೆ. ಒಟ್ಟಿನಲ್ಲಿ ವಸ್ತು ವಿಶ್ಲೇಷಣೆಗೆ ಆಯಾ ಪ್ರಾಂತೀಯ ಆಡಳಿತವನ್ನು ಅಧ್ಯಯನ ಮಾಡುವಾಗ ಸ್ಥಳೀಯ ಮಾಹಿತಿ ಹಾಗು ವಿಶ್ಲೇಷಣಾ

ವಿಧಾನಗಳು ಹೆಚ್ಚು ಉಪಯುಕ್ತ. ಇದನ್ನು ನಾವು ಪ್ರಾದೇಶಿಕವಾಗಿ ಪ್ರಚಲಿತವಿರುವ ಮೌಖಿಕಸಾಹಿತ್ಯ, ಆಚರಣೆ, ನಂಬಿಕೆ, ಭಾಷೆಗಳ ಮೂಲಕ ಗ್ರಹಿಸಬಹುದು. ಆದರೆ ಯಾವುದೇ ದೇಶದ ಅಥವಾ ಪ್ರಾದೇಶಿಕ ಇತಿಹಾಸ ರಚನೆಗೆ ಅಥವಾ ಪುನರ್‌ರಚನೆಗೆ ಆಧಾರಗಳು ಬಹುಮುಖ್ಯ. ಆದ್ದರಿಂದಲೇ ಆಧಾರಗಳಿಲ್ಲದೆ ಇತಿಹಾಸವಿಲ್ಲವೆನ್ನಬಹುದು. ಇತಿಹಾಸವು ಮಾನವನ ಗತಕಾಲದ ಜೀವನದ ಸತ್ಯಸಂಗತಿಯ ನಿರೂಪಣೆಯಾಗಬೇಕಾದರೆ ಆಧಾರಗಳು ನೆಲೆಗಟ್ಟನ್ನು ಹೊಂದಿರಬೇಕು. ಇಲ್ಲದಿದ್ದರೆ ಇತಿಹಾಸದಲ್ಲಿ ವಿವರಿಸಲ್ಪಡುವ ಘಟನೆಗಳು ವ್ಯಕ್ತಿಗಳ ಕಲ್ಪಿತ ಕಥೆಯಾಗುತ್ತದೆ.

ಸ್ಥಳೀಯ ಚರಿತ್ರೆ ಅಧ್ಯಯನ ಮಾಡುವಾಗ ಎರಡು ರೀತಿಯ ಆಕರಗಳಿವೆ. ಅವುಗಳಲ್ಲಿ ಸಾಹಿತ್ಯ ಮತ್ತು ಪುರಾತತ್ವ ಆಕರಗಳು ಪ್ರಮುಖವಾದವು. ಇವುಗಳನ್ನು ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳೆಂದು ವಿಂಗಡಿಸಿಕೊಳ್ಳಲಾಗಿದೆ. ಪ್ರಾಥಮಿಕ ಆಕರಗಳು ಸಮಕಾಲೀನ ದಾಖಲೆ–ಪತ್ರಗಳಾಗಿದ್ದು, ವಸ್ತುನಿಷ್ಠತೆಗೆ ಬದ್ಧವಾಗಿರುತ್ತವೆಂಬ ನಂಬಿಕೆಯಿದೆ. ಶಾಸನ, ನಾಣ್ಯ, ತಾಳೆಗರಿ, ಕಂಚಿನಪತ್ರ, ವಾಸ್ತುಶಿಲ್ಪ, ಸಮಕಾಲೀನ ದಾಖಲೆ, ದಿನಚರಿ ಮತ್ತು ಸ್ಮಾರಕಗಳನ್ನು ಹೆಸರಿಸಬಹುದು. ಆನುಷಂಗಿಕ ಆಕರಗಳು ಪ್ರಕಟಗೊಂಡವುಗಳಾಗಿದ್ದು, ಕಾಲ, ಸಮಯ, ಸ್ಥಳಗಳಿಂದ ಭಿನ್ನವಾಗಿರುತ್ತವೆ. ಸಾಹಿತ್ಯ ಆಕರಗಳಲ್ಲಿ ಶಿಷ್ಟ ಮತ್ತು ಮೌಖಿಕ ಸಾಹಿತ್ಯವೆಂದು ವಿಂಗಡಿಸಿದರೂ ವಿದೇಶಿ ಸಾಹಿತ್ಯವನ್ನು ಕೈಬಿಡುವಂತಿಲ್ಲ. ದೇಶಿ ಅಥವಾ ಶಿಷ್ಟ ಸಾಹಿತ್ಯದಲ್ಲಿ ಕಾವ್ಯ, ಕಥೆ, ಕಾದಂಬರಿ ಪ್ರಮುಖ ಪ್ರಕಾರಗಳಾದರೆ, ವಿದೇಶಿ ಸಾಹಿತ್ಯದಲ್ಲಿ ಪ್ರವಾಸಿಗರ ವರದಿ ಮತ್ತು ಚಾರಿತ್ರಿಕ ಸಂಗತಿಗಳು ಬೆಳಕು ಚೆಲ್ಲುತ್ತವೆ. ಲಿಖಿತ ಸಾಹಿತ್ಯಕ್ಕೆ ಪೂರಕವಾಗಿ ಮೌಖಿಕ ಸಾಹಿತ್ಯ ಸ್ಥಳೀಯ ಚರಿತ್ರೆಗೆ ನೆರವಾಗುವುದು ಉಂಟು. ನಂಬಿಕೆ ಪುರಾಣ, ದಂತಕಥೆ, ಐತಿಹ್ಯ, ಜನಪದಗೀತೆ, ಕೋಲಾಟ, ಸೋಬಾನೆ, ಲಾವಣಿ, ಕಥನಗೀತೆ, ಕಥನಕಾವ್ಯ, ಒಗಟು, ಗಾದೆ ಇತ್ಯಾದಿ ಮೌಖಿಕ ಪ್ರಕಾರಗಳು ಸ್ಥಳೀಯ ಚರಿತ್ರೆಯನ್ನು ವಿಸ್ತರಿಸುತ್ತವೆ. ಹಾಗೆಯೇ ಜನ್ಮಕುಂಡಲಿ, ಕೈಫಿಯತ್ತು, ಬಖೈರ್, ನಾಮೆ, ದಸ್ತಾವೇಜು, ವರದಿ, ಹಸ್ತಪ್ರತಿ ಇತ್ಯಾದಿ ಲಿಖಿತ ಆಕರಗಳು ನಿರ್ಣಾಯಕ ಪಾತ್ರವಹಿಸುತ್ತವೆ. ಜೊತೆಗೆ ಭೌಗೋಳಿಕ ವಿವರ,[೫] ಸ್ಥಳನಾಮ, ಕೋಟೆ, ಶಾಸನ, ವೀರಗಲ್ಲು, ದೇವಾಲಯಗಳ ಮಾಹಿತಿ, ಜಾತ್ರೆ, ಉತ್ಸವ, ಯಾತ್ರಾಸ್ಥಳಗಳು, ಕೆರೆ–ಕಾಲುವೆ, ಐತಿಹಾಸಿಕ ಕಟ್ಟಡ, ಶಿಲ್ಪ, ನಿವೇಶನ, ಆಯುಧ, ಸ್ಮಾರಕಗಳು ಸ್ಥಳೀಯ ಚರಿತ್ರೆಯ ಆಕರಗಳಾಗಿವೆ. ಈ ಆಕರ ಸಾಮಗ್ರಿಗಳೆಲ್ಲವೂ ಗತಕಾಲದ ಮಾನವನ ಇತಿಹಾಸ ಮತ್ತು ಸಂಸ್ಕೃತಿಯನ್ನು ಭಿನ್ನ ನೆಲೆಯಲ್ಲಿ ವಸ್ತುನಿಷ್ಠವಾಗಿ ಕಟ್ಟಿಕೊಡುವಲ್ಲಿ ಸಹಾಯಕ ವಾಗುತ್ತವೆ. ಇದರಿಂದ ಗತಕಾಲದ ರಾಜಕೀಯ, ಆರ್ಥಿಕ, ಸಾಮಾಜಿಕ ಸಂಗತಿಗಳನ್ನು

ತಿಳಿಯಬಹುದು. ಹೀಗೆ ಒಂದು ಪ್ರದೇಶದಲ್ಲಿ ದೊರೆಯುವ ಸಾಹಿತ್ಯಿಕ, ಪುರಾತತ್ವ ಹಾಗು ಮೌಖಿಕ ಆಕರಗಳನ್ನು ವಿಶ್ಲೇಷಿಸುವುದರ ಮೂಲಕ ಚರಿತ್ರೆಯನ್ನು ವ್ಯವಸ್ಥಿತವಾಗಿ ಕಟ್ಟಿಕೊಡಬಹುದೆಂಬುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಪ್ರಾಗಿತಿಹಾಸ ಮತ್ತು ಇತಿಹಾಸ ಕಾಲದ ಸಾಂಸ್ಕೃತಿಕ ಅಧ್ಯಯನದಲ್ಲಿ ಮೈಸೂರು ಜಿಲ್ಲೆ ತನ್ನದೇ ಆದ ಮಹತ್ವ ಹೊಂದಿದೆ. ಸಾವಿರಾರು ವರ್ಷಗಳ ಇತಿಹಾಸವುಳ್ಳ ಹಲವು ನೆಲೆಗಳಿವೆ. ಇತಿಹಾಸ ಕಾಲದಿಂದ ಅನೇಕ ರಾಜಮನೆತನಗಳು, ಸಾಮಂತರು, ಅಧಿಕಾರಿವರ್ಗಗಳು ಆಡಳಿತ ನಿರ್ವಹಿಸಿರುವ ದಾಖಲೆಗಳಿವೆ. ಜಿಲ್ಲೆಯಲ್ಲಿ ಹರಿದಿರುವ ಕಾವೇರಿ, ಕಪಿಲ ಮತ್ತು ಅದರ ಉಪನದಿಗಳು ಈ ಪ್ರದೇಶದಲ್ಲಿ ಮಾನವ ನೆಲೆಗೊಳ್ಳಲು ಕಾರಣವಾಗಿವೆ. ಕದಂಬ, ಗಂಗ, ಚಾಲುಕ್ಯ, ಹೊಯ್ಸಳ, ಚಂಗಾಳ್ವ, ವಿಜಯನಗರ, ಮೈಸೂರು ಒಡೆಯರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿರುವುದಕ್ಕೆ ಆಧಾರಗಳಿವೆ. ಪ್ರಾಗಿತಿಹಾಸಕಾಲದ ಅವಶೇಷಗಳು ಮತ್ತು ಇತಿಹಾಸ ಕಾಲದ ಶಾಸನ ದೇವಾಲಯ, ಅರಮನೆ, ಕೋಟೆಕೊತ್ತಲಗಳು ಹಾಗೆಯೇ ಜಾನಪದೀಯ ಅಂಶಗಳು ಸ್ಥಳೀಯ ಚರಿತ್ರೆ ರಚನೆಗೆ ಸಹಾಯಕವಾಗಿವೆ. ಮೈಸೂರು ಜಿಲ್ಲೆಯಲ್ಲಿ ಆದಿ ಶಿಲಾಯುಗ, ಮಧ್ಯ ಶಿಲಾಯುಗ ಮತ್ತು ನವ ಶಿಲಾಯುಗ ಹಾಗು ಬೃಹತ್ ಶಿಲಾಯುಗಕ್ಕೆ ಸೇರಿದ ನೆಲೆಗಳು ಕಂಡುಬರುತ್ತವೆ. ಅವುಗಳಲ್ಲಿ ಅಂದಿನ ಮಾನವ ಉಪಯೋಗಿಸಿದ ಆಯುಧ ಪ್ರಕಾರಗಳು ಆಯಾ ಕಾಲದ ಸಂಸ್ಕೃತಿಯ ಕುರುಹುಗಳಾಗಿದ್ದು, ಅಂದಿನ ಸಾಂಸ್ಕೃತಿಕ ಜೀವನಕ್ರಮವನ್ನು ತಿಳಿಯಲು ನೆರವಾಗಿವೆ.

ಸಣ್ಣಪುಟ್ಟ ಸಂಸ್ಥಾನಗಳು ಸಾಂಸ್ಕೃತಿಕವಾಗಿ ಕರ್ನಾಟಕದ ಇತಿಹಾಸದಲ್ಲಿ ಮಹತ್ತರ ಪಾತ್ರ ವಹಿಸಿವೆ. ದೊಡ್ಡ ದೊಡ್ಡ ರಾಜಮನೆತನಗಳು ತಮ್ಮ ಘನತೆ ಮತ್ತು ವೈಭವವನ್ನು ಪ್ರಕಟಪಡಿಸುವಲ್ಲಿ ಸ್ಥಳೀಯ ಮನೆತನಗಳ ಸಹಾಯ ಪಡೆದುಕೊಂಡಿವೆ. ಸ್ಥಳೀಯ ರಾಜರು ದೊಡ್ಡ ರಾಜಮನೆತನಗಳಿಗೆ ಕಪ್ಪಕಾಣಿಕೆ ನೀಡುತ್ತಿದ್ದರು. ಇದಲ್ಲದೆ ಸೈನ್ಯವನ್ನು ತರಬೇತಿಗೊಳಿಸಿ ಕೊಂಡು ಯುದ್ಧಗಳಲ್ಲಿ ಸಹಾಯವನ್ನು ಒದಗಿಸುತ್ತಿದ್ದರು. ಅಂದರೆ ಚಿಕ್ಕ ಸಂಸ್ಥಾನಗಳಿಂದ ದೊಡ್ಡ ಅಥವಾ ಪ್ರಾಬಲ್ಯ ಹೊಂದಿದ ಸಂಸ್ಥಾನಗಳಿಗೆ ಸಹಕಾರ ದೊರೆಯುತ್ತಿದ್ದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಹಣದ ಸಹಾಯ ಹಾಗು ಸೈನಿಕ ಸಹಾಯ. ಈ ದೃಷ್ಟಿಯಿಂದ ಅವಲೋಕಿಸಿದಾಗ ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ರಾಜಕೀಯ ಚರಿತ್ರೆಯನ್ನು ಕರ್ನಾಟಕದ ಚರಿತ್ರೆಯಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲವೆಂದೇ ಹೇಳಬಹುದು. ದೊಡ್ಡ ದೊಡ್ಡ ರಾಜಮನೆತನದ ಹಾಗು ಚಿಕ್ಕ ಸಂಸ್ಥಾನಗಳ ನಡುವೆ ಹಲವು ಸಂಬಂಧವನ್ನು ವಿಶ್ಲೇಷಿಸಬಹುದು. ಕರ್ನಾಟಕದ ಚರಿತ್ರೆಯಲ್ಲಿ ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಚಾಲುಕ್ಯ, ಹೊಯ್ಸಳ, ವಿಜಯನಗರ, ಬಹಮನಿ ಮತ್ತು ಮೈಸೂರು ಒಡೆಯರು ಸಾಮಾನ್ಯ ಜನರೊಂದಿಗೆ ನೇರವಾದ

ಸಂಪರ್ಕ ಹೊಂದಿರಲಿಲ್ಲ. ಸಣ್ಣಪುಟ್ಟ ಸಂಸ್ಥಾನಗಳು ಅಥವಾ ಪಾಳೆಯಗಾರಿಕೆ ಮನೆತನಗಳು ಗ್ರಾಮೀಣ ಭಾಗದ ಜನರೊಂದಿಗೆ ನೇರವಾದ ಸಂಪರ್ಕ ಹೊಂದಿದ್ದು, ಜನರ ಆಶೋತ್ತರಗಳಿಗೆ ಸ್ಪಂದಿಸುತ್ತಿದ್ದರೆಂದು ಹೇಳಲಾಗಿದೆ. ಅಲ್ಲದೇ ಅವರು ರಾಜರು ಹಾಗು ಜನಸಾಮಾನ್ಯರ ನಡುವೆ ಮಧ್ಯವರ್ತಿಗಳಾಗಿದ್ದರೆಂದರೆ ತಪ್ಪೇನಿಲ್ಲ. ಆದ್ದರಿಂದ ಜನಸಾಮಾನ್ಯರ ನಿಷ್ಠೆ ದೊಡ್ಡ ಮನೆತನಗಳಿಗಿಂತ ಸಣ್ಣಪುಟ್ಟ ರಾಜಮನೆತನಗಳಿಗೆ ಹೆಚ್ಚು ಸಮೀಪವಾಗಿತ್ತು ಎಂದು ಹೇಳಬಹುದು. ಈ ದೃಷ್ಟಿಯಿಂದ ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಸುತ್ತಮುತ್ತಲಿನ ಪ್ರದೇಶವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡು ಆಳಿದ ಸಾಮಂತ ಮನೆತನದ ಬಗ್ಗೆ ಅಧ್ಯಯನ ಮಾಡುವುದು ಅತ್ಯಂತ ಅವಶ್ಯಕವೆಂದು ಹೇಳಬಹುದು.

ಪ್ರಸ್ತುತ ಅಧ್ಯಯನದ ವಿಷಯ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ "ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಪುರಾತತ್ವ ಅಧ್ಯಯನ"ವಾಗಿದೆ. ಜಿಲ್ಲೆಯು ಪ್ರಾಗೈತಿಹಾಸಿಕ, ಚಾರಿತ್ರಿಕ ಹಾಗು ಸಾಂಸ್ಕೃತಿಕವಾಗಿ ಮಹತ್ವದ ಸ್ಥಾನಪಡೆದಿದ್ದು, ಸ್ಥಳೀಯ ಚರಿತ್ರೆಯ ಅಧ್ಯಯನ ದೃಷ್ಟಿಯಿಂದ ವಿಶೇಷವಾಗಿದೆ. ಮೈಸೂರು ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದಾದ ಪಿರಿಯಾಪಟ್ಟಣವು ಜಿಲ್ಲೆಯ ಪಶ್ಚಿಮ ಹಾಗು ವಾಯವ್ಯ ಗಡಿಯಾಗಿದೆ. ಜಿಲ್ಲೆಯ ಇತರೆ ಆರು ತಾಲ್ಲೂಕುಗಳಿಗೆ ಹೋಲಿಸಿದರೆ ಪಿರಿಯಾಪಟ್ಟಣ ತಾಲ್ಲೂಕಿನ ಭೌಗೋಳಿಕ ಲಕ್ಷಣ ವಿಶಿಷ್ಟವಾದದ್ದು. ಇತ್ತ ಬಯಲು ಸೀಮೆ ಅತ್ತ ಮಲೆನಾಡು ಅಲ್ಲದ ಪಿರಿಯಾಪಟ್ಟಣ ತಾಲ್ಲೂಕು ಪರಿಸರವು ಅರೆಮಲೆನಾಡಗಿದ್ದು, ಜನಜೀವನಕ್ಕೆ ಅತ್ಯಂತ ಉಪಯುಕ್ತ ಪ್ರದೇಶವಾಗಿದೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಪ್ರಾಗೈತಿಹಾಸಿಕ ಕಾಲದ ಅವಶೇಷ ಹಾಗು ನೆಲೆಗಳು ಅಪಾರ ಪ್ರಮಾಣದಲ್ಲಿ ಕಂಡುಬರುತ್ತವೆ. ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳು ಹಾಗು ಗೋರಿಗಳು ಅಪಾರ ಪ್ರಮಾಣದಲ್ಲಿವೆ. ಅವುಗಳಲ್ಲಿ ಕೊಪ್ಪ ಗ್ರಾಮದಲ್ಲಿ ಉತ್ಖನನಗೊಂಡ ನೆಲೆಯನ್ನು ಪ್ರಮುಖವಾಗಿ ದಾಖಲಿಸಬಹುದು. ಚಾರಿತ್ರಿಕ ಕಾಲಘಟ್ಟದಲ್ಲಿ ಕದಂಬ, ಗಂಗ, ಚಾಲುಕ್ಯ, ಹೊಯ್ಸಳ, ವಿಜಯನಗರ ಸಾಮ್ರಾಜ್ಯಗಳು ಹಾಗು ಪಿರಿಯಾಪಟ್ಟಣವನ್ನಾಳಿದ ಚಂಗಾಳ್ವರು, ಕೊಂಗಾಳ್ವರು, ಕೊಡಗಿನ ಹಾಲೇರಿ ಅರಸರು, ಮೈಸೂರು ಒಡೆಯರು, ಟಿಪ್ಪುಸುಲ್ತಾನ್ ಮತ್ತು ಬ್ರಿಟಿಷರು ಆಳ್ವಿಕೆ ನಡೆಸಿರುವ ಕುರುಹುಗಳು ತಾಲ್ಲೂಕು ಪರಿಸರದಲ್ಲಿ ಕಂಡುಬರುತ್ತವೆ.

ಪಿರಿಯಾಪಟ್ಟಣ ತಾಲ್ಲೂಕು ಭೌಗೋಳಿಕವಾಗಿ ಜಿಲ್ಲೆಯಲ್ಲಿ ಐದನೆಯ ಸ್ಥಾನದಲ್ಲಿದೆ. ಜನಸಂಖ್ಯೆ ದೃಷ್ಟಿಯಿಂದ ಏಳನೆಯ ಸ್ಥಾನ ಪಡೆದಿದ್ದು, ಶ್ರೀಮಂತವಾದ ಸಾಂಸ್ಕೃತಿಕ ಪರಂಪರೆ ಯನ್ನು ಹೊಂದಿದೆ. ತಾಲ್ಲೂಕು ಕೇಂದ್ರವಾಗಿರುವ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಒಟ್ಟು ೨೦೨ ಗ್ರಾಮಗಳಿವೆ. ಪ್ರಾಚೀನವಾಗಿ ಸಿಂಹಪಟ್ಟಣವೆಂದು, ಸಿಂಗಪಟ್ಟಣವೆಂದು ನಂತರ

ಪೆರಿಯಾರಾಜಪಟ್ಟಣವೆಂದು ಕರೆಯಲ್ಪಟ್ಟಿದ್ದು, ಪ್ರಸ್ತುತ ಪಿರಿಯಾಪಟ್ಟಣವೆಂದು ಗುರುತಿಸಿಕೊಂಡಿದೆ. ಒಂದು ಕಾಲಕ್ಕೆ ಚಂಗಾಳ್ವರ ರಾಜಧಾನಿಯಾಗಿದ್ದ ಪಿರಿಯಾಪಟ್ಟಣ ಇಂದು ತಾಲ್ಲೂಕು ಆಡಳಿತ ಕೇಂದ್ರವಾಗಿದೆ. ಹಿಂದೆ ಈ ಪ್ರದೇಶವು ಚೋಳರ ಸಾಮಂತರಾದ ಚಂಗಾಳ್ವರು ಮತ್ತು ಕೊಂಗಾಳ್ವರ ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಕೇಂದ್ರವಾಗಿತ್ತೆಂದು ಇಲ್ಲಿ ಕಂಡುಬರುವ ಸ್ಮಾರಕಗಳಿಂದ ತಿಳಿದುಬರುತ್ತದೆ.

ಅಧ್ಯಯನದ ಸಮೀಕ್ಷೆ

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಪ್ರಾಚೀನತೆ, ರಾಜಕೀಯ ಚರಿತ್ರೆ, ಐತಿಹಾಸಿಕ ಸ್ಥಳಗಳ ಪರಿಚಯ ಮತ್ತು ಜನಪದ ಸಾಹಿತ್ಯ ವಿಷಯಗಳನ್ನು ಕುರಿತಂತೆ ಕೆಲವು ಅಧ್ಯಯನಗಳು ನಡೆದಿದ್ದು, ಅವುಗಳು ಪರಿಚಯಾತ್ಮಕ ಲೇಖನ, ಸಂಶೋಧನಾತ್ಮಕ ಲೇಖನ, ಪರಿಚಯ ಕೈಪಿಡಿ, ಅಭಿನಂದನ ಗ್ರಂಥ ಹಾಗು ಕೃತಿಗಳ ರೂಪದಲ್ಲಿ ಪ್ರಕಟಗೊಂಡಿವೆ. ಅವುಗಳಲ್ಲಿ ಕೆಲವನ್ನು ಈ ಮುಂದಿನಂತೆ ಗಮನಿಸಬಹುದು:

ಪಿರಿಯಾಪಟ್ಟಣ ತಾಲ್ಲೂಕು ಪರಿಸರ ಸೇರಿದಂತೆ ಇದುವರೆಗೆ ಸುಮಾರು ೧೪೮ ಶಾಸನಗಳು ದೊರೆತಿವೆ. ಕರ್ನಲ್‌ಮೆಕೆಂಜಿ ಕ್ರಿ.ಶ. ೧೭೮೩ ರಿಂದ ೧೮೨೧ರ ಅವಧಿಯಲ್ಲಿ ಕರ್ನಾಟಕವು ಸೇರಿದಂತೆ ದಕ್ಷಿಣ ಭಾರತದ ನಾನಾ ಭಾಗಗಳಲ್ಲಿ ಶಾಸನಗಳನ್ನು ಸಂಗ್ರಹಿಸಿದನು. ವ್ಯವಸ್ಥಿತ ಶಾಸನಗಳ ಅಧ್ಯಯನ ಪ್ರಾರಂಭವಾದುದು ವಾಲ್ಟತ್ ಇಲಿಯಟ್‌ನಿಂದ. ಕ್ರಿ.ಶ.೧೮೭೦ರ ಹೊತ್ತಿಗೆ ಜೆ.ಎಫ್.ಫ್ಲೀಟ್ ಕರ್ನಾಟಕದ ಶಾಸನಗಳನ್ನು ಪ್ರಕಟಿಸಲು ಆರಂಭಿಸಿದರು. ನಂತರ ಬಿ.ಎಲ್.ರೈಸ್ ಅವರು ಮೈಸೂರು ಇನ್‌ಸ್ಕ್ರಿಪ್ಷನ್ಸ್ ಎಂಬ ಸಂಪುಟವನ್ನು ಕ್ರಿ.ಶ. ೧೮೭೯ರಲ್ಲಿ ಪ್ರಕಟಿಸಿದರು. ನಂತರ ಹಳೆಯ ಮೈಸೂರು ಸಂಸ್ಥಾನ ಮತ್ತು ಕೊಡಗಿನಲ್ಲಿ ಕ್ರಮಬದ್ಧವಾಗಿ ಶಾಸನಗಳನ್ನು ಸಂಗ್ರಹಿಸಿ ಕ್ರಿ.ಶ. ೧೮೮೬ ರಿಂದ ೧೯೦೬ ರವರೆಗೆ ಎಪಿಗ್ರಾಫಿಯ ಕರ್ನಾಟಿಕ ಎಂಬ ಹೆಸರಿನಲ್ಲಿ ಹದಿಮೂರು ಸಂಪುಟಗಳನ್ನು ಪ್ರಕಟಿಸಿದರು. ಶಾಸನಗಳನ್ನು ಸಂಗ್ರಹಿಸಿದ ಇತರ ವಿದ್ವಾಂಸರೆಂದರೆ ಎಸ್.ಲಕ್ಷ್ಮೀನಾರಾಯಣರಾವ್, ಆರ್.ರಾಮರಾವ್, ಪಿ.ಬಿ.ದೇಸಾಯಿ, ಮತ್ತು ಆರ್.ಎಸ್.ಪಂಚಮುಖಿಯವರು. ಇವರು ಶಾಸನ ಸಂಗ್ರಹಣೆ ಮಾಡಿ ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ಎಂಬ ಸಂಪುಟವನ್ನು ಹೊರತಂದಿರುವರು.

ಪಿ.ಕೆ.ರಾಜಶೇಖರ ಅವರು ಸಂಪಾದಿಸಿರುವ 'ಪಿರಿಯಾಪಟ್ಟಣ ಕಾಳಗ'ದಲ್ಲಿ ಚಂಗಾಳ್ವರ ರಾಜಕೀಯ ಚರಿತ್ರೆಯನ್ನು ವಿವರಿಸಿದ್ದಾರೆ. ಕ್ರಿ.ಶ.೧೬೪೪ರಲ್ಲಿ ಕಂಠೀರವ ನರಸರಾಜ ಒಡೆಯರ್ ಮತ್ತು ಪಿರಿಯಾಪಟ್ಟಣದ ವೀರರಾಜನಿಗೆ ನಡೆದ ಭೀಕರ ಕದನವನ್ನು ಜನಪದರು ವೀರಕಾವ್ಯವನ್ನಾಗಿಸಿದ್ದಾರೆ. ಆ ಯುದ್ಧದ ಕಾರಣಗಳು, ಯುದ್ಧದ ಗತಿ, ವೀರರು, ಸ್ತ್ರೀ ಪಾತ್ರಗಳು,

ಹಾಗು ಯುದ್ಧದ ಅಂತ್ಯ ವಿಷಯಗಳನ್ನು ಇಲ್ಲಿ ವಿವರಿಸಲಾಗಿದೆ. ಪಿ.ಕೆ. ರಾಜಶೇಖರ ಅವರು ಈ ಕಾಳಗವನ್ನು ಕನ್ನಡದ ಈಲಿಯಡ್ ಎಂದು ಕರೆದಿರುವರು.

ಎಚ್.ಎಸ್.ಗೋಪಾಲರಾವ್‌ರವರು ರಚಿಸಿರುವ ಚಂಗಾಳ್ವರು ಎಂಬ ಕೃತಿಯು ಪಿರಿಯಾಪಟ್ಟಣ ವನ್ನಾಳಿದ ಚಂಗಾಳ್ವ ಮನೆತನಕ್ಕೆ ಸಂಬಂಧಿಸಿದ ಚರಿತ್ರೆಯನ್ನು ತಿಳಿಸುತ್ತದೆ. ಇದು ಚಂಗಾಳ್ವ ಮನೆತನ, ಮೈಸೂರು ಒಡೆಯರು, ನಂಜರಾಯಪಟ್ಟಣದ ಚಂಗಾಳ್ವರು ಹಾಗು ಮತ್ತಿತರ ಚಾರಿತ್ರಿಕ ಸಂಗತಿಗಳನ್ನು ತಿಳಿಯಲು ಸಹಾಯಕವಾಗಿದೆ. ರಾಜಾರಾಮ ಹೆಗಡೆ, ಅಶೋಕ ಶೆಟ್ಟರ್ ಅವರು ಸಂಪಾದಿಸಿರುವ ಮಲೆಕರ್ನಾಟಕದ ಅರಸು ಮನೆತನಗಳು ಕೃತಿಯಲ್ಲಿ ಪಿ.ಕೆ.ರಾಜಶೇಖರ ಅವರ ಚಂಗಾಳ್ವರ ರಾಜಕೀಯ ಇತಿಹಾಸ ಲೇಖನ ಪ್ರಕಟವಾಗಿದೆ. ಗೋವಿಂದವೈದ್ಯನ ಕಂಠೀರವ ನರಸರಾಜ ವಿಜಯ ಕೃತಿಯಲ್ಲಿ, ಕಂಠೀರವ ನರಸರಾಜ ಮತ್ತು ಪಿರಿಯಾಪಟ್ಟಣದ ರಾಜನಿಗೆ ನಡೆದ ಹೋರಾಟವನ್ನು ಪಿರಿಯಾಪಟ್ಟಣದ ಲಗ್ಗೆ ಎಂದು ಪ್ರಸ್ತಾಪಿಸಿದ್ದಾರೆ. ಪಿರಿಯಾಪಟ್ಟಣದ ರಾಜ ಕಪ್ಪ ಕೊಡಲಿಲ್ಲ ಎಂಬ ಕಾರಣಕ್ಕೆ ಮೈಸೂರಿನ ಅರಸನು ಪಿರಿಯಾಪಟ್ಟಣವನ್ನು ಮುತ್ತಿ ವಶಪಡಿಸಿಕೊಂಡ ವಿಚಾರ ಇಲ್ಲಿ ತಿಳಿದುಬರುತ್ತದೆ.

ದೊಡ್ಡಯ್ಯ ಕವಿಯ ಚಂದ್ರಪ್ರಭಾ ಸಾಂಗತ್ಯವು ಧರ್ಮ, ಸಮಾಜ ಮತ್ತು ಸಾಹಿತ್ಯವನ್ನು ಕುರಿತು ವಿವರಗಳನ್ನು ನೀಡುತ್ತದೆ. ಇವನ ಭುಜಬಲಿಶತಕವು ಗೊಮ್ಮಟೇಶ್ವರನು ಶ್ರವಣಬೆಳಗೊಳ ದಲ್ಲಿ ಪ್ರತಿಷ್ಠಾಪನೆಯಾಗಲು ಕಾರಣನಾದ ಚಾವುಂಡರಾಯನ ಪ್ರಯತ್ನವನ್ನು ವಿವರಿಸುತ್ತದೆ. ದೇವಪ್ಪ ಕವಿಯ ವಿರಚಿತ ರಾಮವಿಜಯ ಕಾವ್ಯವು ಧಾರ್ಮಿಕತೆ, ಮನರಂಜನೆ, ಜಾತಿ, ಆಹಾರ, ಸಮಾಜ ಮತ್ತು ಆರ್ಥಿಕ ಮಾಹಿತಿಗಳನ್ನು ನೀಡುತ್ತದೆ. ಕಲ್ಲಹಳ್ಳಿಯ ಮೂರನೆಯ ಮಂಗರಸನ ಸೂಪಶಾಸ್ತ್ರವು ಅಡಿಗೆ ಬಗ್ಗೆ ರಚನೆಗೊಂಡ ಪ್ರಥಮ ಕೃತಿಯಾಗಿದೆ. ಇದರಲ್ಲಿ ಅಡಿಗೆಯ ಭಕ್ಷ್ಯಗಳು, ಅಡುಗೆ ಮನೆಯ ವಿವರ, ಅಡುಗೆ ಮಾಡುವವರು ಹೇಗಿರಬೇಕು ಹಾಗು ಆರೋಗ್ಯ ಕುರಿತ ಸಂಗತಿಗಳನ್ನು ತಿಳಿಯಲು ಸಹಾಯಕವಾಗಿದೆ. ಚಂಗಾಳ್ವರ ಕಾಲ ದಲ್ಲಿ ರಚಿತವಾದ ನಂಜುಂಡ ಕವಿಯ ರಾಮನಾಥ ಚರಿತೆಯು ಕನ್ನಡ ಸಾಹಿತ್ಯದಲ್ಲಿ ರಚನೆ ಗೊಂಡಿರುವ ಪ್ರಮುಖ ಸಾಂಗತ್ಯ ಕೃತಿ. ಇದರಲ್ಲಿ ರಾಮನಾಥನ ಶೌರ್ಯ, ತ್ಯಾಗ, ಸಾಹಸ ಮತ್ತು ಆದರ್ಶಗಳನ್ನು ಪ್ರಧಾನವಾಗಿ ಹೇಳಲಾಗಿದೆ. ಜತೆಗೆ ಕುಮ್ಮಟದುರ್ಗದ ಅರಸರ ರಾಜಕೀಯ ಸಾಧನೆ ಹಾಗು ಸಾಂಸ್ಕೃತಿಕ ಚಿತ್ರಣವನ್ನು ನೀಡುತ್ತದೆ.

ಡಿ.ಎನ್.ಕೃಷ್ಣಯ್ಯನವರು 'ಕೊಡಗಿನ ಇತಿಹಾಸ' ಕೃತಿಯಲ್ಲಿ ಕೊಡಗನ್ನು ಆಳಿದ ಚಂಗಾಳ್ವರು ಮತ್ತು ಹಾಲೇರಿ ಅರಸರ ಬಗ್ಗೆ ವಿವರಿಸಿದ್ದಾರೆ. ಹಾಗು ಪಿರಿಯಾಪಟ್ಟಣ ಕಾಳಗದ ನಂತರ ಪಿರಿಯಾಪಟ್ಟಣದ ರಾಜ ನಂಜುಂಡನು ಮುದ್ದುರಾಜನ ಆಶ್ರಯ ಪಡೆದ ವಿಷಯ, ಟಿಪ್ಪುಸುಲ್ತಾನ್

ಕೊಡಗಿನ ರಾಜನನ್ನು ಪಿರಿಯಾಪಟ್ಟಣ ಕೋಟೆಯಲ್ಲಿ ಬಂಧಿಸಿದ್ದು, ನಂತರ ಅವರು ಅಲ್ಲಿಂದ ತಪ್ಪಿಸಿಕೊಂಡ ವಿಷಯ, ಅನಂತರ ಟಿಪ್ಪು ಕೊಡಗಿನ ರಾಜನನ್ನು ಸೋಲಿಸಲು ಸೈನ್ಯ ತೆಗೆದುಕೊಂಡು ಬಂದು ಪಿರಿಯಾಪಟ್ಟಣ ಕೋಟೆಯಲ್ಲಿ ಬೀಡು ಬಿಟ್ಟ ವಿವರಗಳು ಈ ಕೃತಿಯಿಂದ ತಿಳಿದುಬರುತ್ತದೆ. ದೇ.ಜ.ಗೌ. ಅವರು ರಚಿಸಿರುವ 'ನಂಜುಂಡಕವಿ' ಕೃತಿಯಲ್ಲಿ ಕವಿಯ ದೇಶ, ಮತ, ಕಾಲಗಣನೆ, ಇತ್ಯಾದಿ ಸಾಮಾಜಿಕ ವಿವರಣೆಗಳು, ಜನಜೀವನ, ಸಮಕಾಲೀನ ಕೃತಿಯಿಂದ ದೊರೆಯುವ ಚಿತ್ರಣಗಳನ್ನು ವಿವರಿಸಲಾಗಿದೆ. ಪಿ.ಕೆ.ರಾಜಶೇಖರವರ ಸಂಪಾದಕತ್ವದ 'ಶಿವಸಂಪದ' ಅಭಿನಂದನ ಕೃತಿಯಲ್ಲಿ ತಾಲ್ಲೂಕಿನ ಇತಿಹಾಸ, ಜಾನಪದ, ರಾಜಕಾರಣ, ಧಾರ್ಮಿಕ, ಸಾಹಿತ್ಯ ಹಾಗು ಸಾಂಸ್ಕೃತಿಕ ವಿಷಯಗಳ ಮೇಲೆ ಬೆಳಕು ಚೆಲ್ಲುವಂಥ ಲೇಖನಗಳಿವೆ. ಅಲ್ಲದೆ, ಇವರ ಸಂಪಾದಕತ್ವದ ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್ ಕೃತಿಯಲ್ಲಿ ಹಲವು ವಿಷಯ ಕುರಿತಂತೆ ವಿಶ್ಲೇಷಿಸಲಾಗಿದೆ. ಎಚ್.ಎಲ್.ಶೋಭಾ ರವರ 'ಪಿರಿಯಾಪಟ್ಟಣದ ಶಾಸನಗಳು ಮತ್ತು ಜನಪದ ಸಾಹಿತ್ಯದ ಐತಿಹಾಸಿಕ ಅಧ್ಯಯನ'ದ ಶೀರ್ಷಿಕೆಯ ಪಿಎಚ್.ಡಿ. ಮಹಾಪ್ರಬಂಧದಲ್ಲಿ ತಾಲ್ಲೂಕಿನ ರಾಜಕೀಯ ಚರಿತ್ರೆ, ಜಾನಪದ, ಆರ್ಥಿಕ, ಸಾಮಾಜಿಕ ಅಂಶಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ. ಎಸ್.ನಾಗಾಚಾರಿಯವರು 'ಮೈಸೂರು ಜಿಲ್ಲಾ ಗ್ರಾಮನಾಮಗಳ' ಶೀರ್ಷಿಕೆಯಡಿಯಲ್ಲಿ ಅಧ್ಯಯನ ಮಾಡಿರುವರು. ಎಸ್.ಕೃಷ್ಣಪ್ಪ ಅವರು 'ಪಿರಿಯಾಪಟ್ಟಣ ತಾಲ್ಲೂಕು ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನ ಮಾಡಿರುವರು. ಇದರೊಂದಿಗೆ ಕೆ.ಸಿ.ಉದಯಕುಮಾರ ಅವರ 'ಬೆಟ್ಟದಪುರ ಪರಿಸರದ ಪುರಾತತ್ವ ಅಧ್ಯಯನ' ಎಂಬ ವಿಷಯದ ಎಂ.ಫಿಲ್. ನಿಬಂಧವು ಬೆಟ್ಟದಪುರ ಪರಿಸರಕ್ಕೆ ಮಾತ್ರ ಸೀಮಿತಗೊಂಡಿದೆ.

ಒಟ್ಟಾರೆ ಇದುವರೆಗಿನ ಅಧ್ಯಯನಗಳನ್ನು ಗಮನಿಸಿದರೆ ಪಿರಿಯಾಪಟ್ಟಣ ತಾಲ್ಲೂಕಿನ ರಾಜಕೀಯ ಇತಿಹಾಸ, ಜನಪದ ಸಾಹಿತ್ಯ, ಸ್ಥಳನಾಮಗಳ ಪರಿಚಯಾತ್ಮಕ ಅಧ್ಯಯನಗಳು ನಡೆದಿವೆಯೇ ಹೊರತು ಇಡೀ ಪಿರಿಯಾಪಟ್ಟಣ ತಾಲ್ಲೂಕು ಪರಿಸರಕ್ಕೆ ವ್ಯವಸ್ಥಿತ ಹಾಗು ಸಮಗ್ರವಾದ ಪುರಾತತ್ವ ಅಧ್ಯಯನ ನಡೆದಿಲ್ಲವೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಪುರಾತತ್ವ ಮಾಹಿತಿಗಳನ್ನು ಶೋಧಿಸಿ, ದಾಖಲಿಸಿಕೊಂಡು ವಿಶ್ಲೇಷಿಸುವ ಉದ್ದೇಶ ಹೊಂದಿದೆ.

ಅಧ್ಯಯನದ ಉದ್ದೇಶ

ಸಂಶೋಧನ ಕ್ಷೇತ್ರವು ಸಮಸ್ಯೆಗಳನ್ನು ಇಟ್ಟುಕೊಂಡು ಆ ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದಾಗಿದೆ. ಉತ್ತರವು ವೈಯಕ್ತಿಕವಾಗಿರಬಹುದು ಅಥವಾ ಸಾಮೂಹಿಕವಾಗಿರ

ಬಹುದು. ಒಟ್ಟಿನಲ್ಲಿ ಸಂಶೋಧನೆಯಿಂದ ಹೊರಹೊಮ್ಮಿದ ಫಲಿತಾಂಶ ಸಮೂಹ ದೃಷ್ಟಿಯಿಂದ ಉಪಯುಕ್ತವಾಗಿರಬೇಕು. ಆದರೆ ಕೆಲವು ವೇಳೆ ದುರುಪಯೋಗವಾದರೂ ಅದಕ್ಕಿಂತ ಸದುದ್ದೇಶ ವನ್ನು ಒಳಗೊಂಡಿರಬೇಕಾಗುತ್ತದೆ. ಸಂಶೋಧನೆಯ ಉದ್ದೇಶಗಳು ನಿರ್ದಿಷ್ಟ ಯೋಜನೆಯಡಿಯಲ್ಲಿ ಬರುವ ಒಟ್ಟು ಕೆಲಸಗಳ ಒಂದು ಸ್ಥೂಲ ಚಿತ್ರಣವನ್ನು ಕೊಡುತ್ತವೆ. ಸಮಸ್ಯೆ ರೂಪದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸವನ್ನು ಉದ್ದೇಶ ಸೂಚಿಸುತ್ತದೆ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಯೋಜನೆ ಏನನ್ನು ಶೋಧಿಸಲು ಅಥವಾ ಪರೀಕ್ಷಿಸಲು ಅಥವಾ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ ಎನ್ನಬಹುದು. ಅಧ್ಯಯನದ ಉದ್ದೇಶಗಳು ಸಂಶೋಧನ ಕೆಲಸಕ್ಕೆ ಒಂದು ಮಾರ್ಗಸೂಚಿಯಂತೆ ಕೆಲಸ ಮಾಡುತ್ತವೆ.[೬] ಈ ನಿಟ್ಟಿನಲ್ಲಿ ಸಂಶೋಧನ ಅಧ್ಯಯನಕ್ಕೆ ಉದ್ದೇಶವಿರಲೇಬೇಕು. ನಿರ್ದಿಷ್ಟ ಉದ್ದೇಶಗಳನ್ನಿಟ್ಟು ಕೊಂಡು ಅಧ್ಯಯನ ಅಥವಾ ಸಂಶೋಧನೆಯನ್ನು ಕೈಗೊಂಡು ಕಾರ್ಯನಿರ್ವಹಿಸಿದಾಗ ಪರಿಪೂರ್ಣ ವೆನಿಸುತ್ತದೆ.

ಸ್ಥಳೀಯ ಚರಿತ್ರೆಯ ಅಧ್ಯಯನದ ದೃಷ್ಟಿಯಿಂದ ಹೆಚ್ಚಿನ ಸಂಖ್ಯೆಯ ಆಕರ ಸಾಮಗ್ರಿಗಳನ್ನು ಹೊಂದಿರುವ ಪಿರಿಯಾಪಟ್ಟಣ ತಾಲ್ಲೂಕು ಮೈಸೂರು ಜಿಲ್ಲೆಯಲ್ಲಿದೆ. ಕಾವೇರಿ ನದಿತೀರದಲ್ಲಿರುವ, ಅರೆಮಲೆನಾಡು ಪ್ರದೇಶವಾಗಿರುವ ಇಲ್ಲಿ ನೈಸರ್ಗಿಕ ಬೆಟ್ಟಗುಡ್ಡ, ಗವಿ, ಕೆರೆಕಟ್ಟೆ ಮತ್ತು ಗುಡಿ ಗುಂಡಾರಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಭೌಗೋಳಿಕವಾಗಿ ಉತ್ತಮ ಹವಾಮಾನ ಒಳಗೊಂಡಿದೆ. ಇಂತಹ ಭೌಗೋಳಿಕ ಅಂಶಗಳು ಇಲ್ಲಿನ ಚರಿತ್ರೆ ಮತ್ತು ಸಂಸ್ಕೃತಿಯ ಮೇಲೆ ಬೀರಿರುವ ಪ್ರಭಾವವನ್ನು ಕುರಿತು ವಿವರವಾಗಿ ಚರ್ಚಿಸಲಾಗಿದೆ. ಐತಿಹಾಸಿಕವಾಗಿ ಕದಂಬ, ಗಂಗ, ಚಾಲುಕ್ಯ, ಚಂಗಾಳ್ವ, ಹೊಯ್ಸಳ, ವಿಜಯನಗರ ಹಾಗು ಟಿಪ್ಪು, ಬ್ರಿಟಿಷ್ ಆಳ್ವಿಕೆಯ ಕುರುಹುಗಳನ್ನು ಪುರಾತತ್ವ ಹಾಗು ಚಾರಿತ್ರಿಕ ಆಧಾರಗಳ ಮೂಲಕ ವಿಶ್ಲೇಷಿಸಲಾಗಿದೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರವು ಪ್ರಾಗಿತಿಹಾಸ ಕಾಲದಿಂದಲೂ ಜನವಸತಿಯ ನೆಲೆಯಾಗಿದೆ. ಇದಕ್ಕೆ ಅನುಗುಣವಾಗಿ ಮಾನವ ವಸತಿಯ ಬೃಹತ್ ಶಿಲಾಯುಗದ ನೆಲೆಗಳನ್ನು ವಿಶ್ಲೇಷಿಸಲಾಗಿದೆ. ಅಲ್ಲದೆ, ಪರಿಸರಕ್ಕೆ ಅನುಗುಣವಾಗಿ ಅನುಚಾನವಾಗಿ ಬಂದಿರುವ ನಂಬಿಕೆ, ಆಚರಣೆ ಮತ್ತು ಸಂಪ್ರದಾಯ ಅಂಶಗಳನ್ನು ಸಹ ದಾಖಲಿಸುವುದಾಗಿದೆ.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸುಮಾರು ೧೪೮ ಪ್ರಕಟಿತ ಶಾಸನಗಳನ್ನು ಕಾಣುತ್ತೇವೆ. ಇವುಗಳು ಕದಂಬ, ಗಂಗ, ಕಲ್ಯಾಣ ಚಾಲುಕ್ಯ, ಚೋಳ, ಹೊಯ್ಸಳ, ವಿಜಯನಗರ, ಮೈಸೂರಿನ ಒಡೆಯರು ಹಾಗು ಚಂಗಾಳ್ವ ಮನೆತನಕ್ಕೆ ಸೇರಿದವುಗಳಾಗಿವೆ. ಈ ಶಾಸನಗಳಲ್ಲಿ ಕಂಡುಬಂದಿರುವ ಸಾಮಾಜಿಕ, ಆರ್ಥಿಕ, ಧಾರ್ಮಿಕ, ನೀರಾವರಿ ವಿಷಯಗಳು ಅಂದಿನ ವಾಸ್ತವವನ್ನು ಅರಿಯಲು ಸಹಾಯಕವಾಗಿವೆ. ಪಿರಿಯಾಪಟ್ಟಣವು ಚಂಗಾಳ್ವ ಮನೆತನದ

ಪ್ರಮುಖ ರಾಜಧಾನಿ. ಈ ಹಿನ್ನೆಲೆಯಲ್ಲಿ ಗಂಗರಿಂದ ವಿಜಯನಗರದವರೆಗೆ ಕಾಲದಲ್ಲಿ ಜರುಗಿದ ಜೈನ ಬಸದಿ, ದೇವಾಲಯಗಳ ನಿರ್ಮಾಣ, ದಾನದತ್ತಿ ವಿಷಯಗಳು ಮತ್ತು ಇವುಗಳನ್ನು ಕುರಿತು ನಡೆದಿರುವ ಅಧ್ಯಯನಗಳನ್ನು ಗಮನದಲ್ಲಿರಿಸಿಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇದರಿಂದ ಶಿಸ್ತುಬದ್ಧ ಅಧ್ಯಯನದ ಚೌಕಟ್ಟಿಗೆ ಪ್ರಸ್ತುತ ವಿಷಯವನ್ನು ಒಳಪಡಿಸಿ ಚರ್ಚಿಸಲಾಗಿದೆ.

ಪಿರಿಯಾಪಟ್ಟಣವನ್ನಾಳಿದ ಚಂಗಾಳ್ವ ಮತ್ತು ಕೊಂಗಾಳ್ವರ ನಡುವಿನ ಸಂಬಂಧ, ಗಡಿ, ಹಿನ್ನೆಲೆ, ಅಂದಿನ ಅರಸರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳು, ಮೂರ್ತಿಶಿಲ್ಪ, ಕೋಟೆಗಳು, ಕೆರೆಕಟ್ಟೆಗಳು, ಸ್ಮಾರಕಶಿಲ್ಪ ಹಾಗು ಮಂಟಪಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಇಲ್ಲಿನ ದೇವಾಲಯಗಳು ಯಾವುದೇ ಒಂದು ಕಾಲಘಟ್ಟದಲ್ಲಿ ನಿರ್ಮಾಣಗೊಂಡಿರದೆ ನಂತರದಲ್ಲಿ ಬಂದ ಅರಸರ ಆಳ್ವಿಕೆಯಲ್ಲಿ ವಿಸ್ತರಿಸಲ್ಪಟ್ಟಿರುವುದನ್ನು ಇಲ್ಲಿ ಚರ್ಚಿಸಲಾಗಿದೆ. ರಾಜಕೀಯ ಇತಿಹಾಸ ನಿರ್ಮಾಣದಲ್ಲಿ ಇಲ್ಲಿನ ಪ್ರಾಚೀನ ಕೋಟೆಗಳು ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸಿದ್ದು ಅವುಗಳ ರಚನೆ, ನಿರ್ಮಾಣದ ಉದ್ದೇಶ, ಕಾಲಮಾನ, ಪ್ರಸ್ತುತ ಅವುಗಳ ಸ್ಥಿತಿ-ಗತಿಗಳನ್ನು ಕುರಿತು ವಿಮರ್ಶಿಸಲಾಗಿದೆ. ಪ್ರಾಚೀನ ಕೆರೆ ನೀರಾವರಿ ವ್ಯವಸ್ಥೆಯು ಅಂದಿನ ಮಾನವನ ಆರ್ಥಿಕ ಜೀವನದ ಪ್ರಮುಖ ಅಂಶವಾಗಿದ್ದು, ಕೆರೆಕಟ್ಟೆಗಳನ್ನು ಆಕರಗಳ ಮೂಲಕ ವಿವರವಾಗಿ ಅವಲೋಕಿಸಿದೆ.

ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ನೈಸರ್ಗಿಕ ಹಾಗು ಸಾಂಸ್ಕೃತಿಕ ಹಿನ್ನೆಲೆಯ ಸ್ಥಳನಾಮಗಳು ವಿಶಿಷ್ಟವಾಗಿದ್ದು, ಅಂತಹ ಸ್ಥಳನಾಮಗಳನ್ನು ಅಧ್ಯಯನಕ್ಕೆ ಅನುಗುಣವಾಗಿ ವ್ಯವಸ್ಥಿತವಾಗಿ ವಿಂಗಡಿಸಿಕೊಂಡು ಅವುಗಳ ಹಿನ್ನೆಲೆಯ ಬಗ್ಗೆ ಅಧ್ಯಯನ ಮಾಡುವುದಾಗಿದೆ. ಹಿಂದಿನಿಂದಲೂ ರೂಢಿಸಿ ಪಾಲಿಸಿಕೊಂಡು ಬಂದಿರುವ ನಂಬಿಕೆ, ಆಚರಣೆಗಳು ಹಾಗು ಸಂಪ್ರದಾಯಗಳ ಬಗ್ಗೆ ಚರ್ಚಿಸಲಾಗಿದೆ. ಇವುಗಳ ಜತೆಯಲ್ಲಿಯೇ ಧಾರ್ಮಿಕ ಶ್ರದ್ಧೆಯ ಹಿನ್ನೆಲೆಯಲ್ಲಿ ಮೂಡಿರುವ ಐತಿಹ್ಯ ಮತ್ತು ಪುರಾಣಗಳ ಬಗ್ಗೆ ಐತಿಹಾಸಿಕವಾಗಿ ಹಾಗು ಜಾನಪದೀಯವಾಗಿ ವಿಮರ್ಶಿಸಲಾಗಿದೆ.

ರಾಜರು ಮತ್ತು ಅವರ ದಂಡನಾಯಕರು ಯುದ್ಧದಲ್ಲಿ ಜಯಗಳಿಸಿದಾಗ ವಿಜಯದ ನೆನಪಿಗಾಗಿ ವಿಜಯಸ್ತಂಭಗಳನ್ನು ನಿಲ್ಲಿಸುತ್ತಿದ್ದರು. ಅದೇ ರೀತಿ ವೀರರ ವರ್ಣನೆಯನ್ನು ವೀರಗಲ್ಲುಗಳಿಂದ ತಿಳಿಯಬಹುದು. ವೀರಗಲ್ಲು ಮತ್ತು ಮಾಸ್ತಿಗಲ್ಲುಗಳ ಬಗ್ಗೆ ವಿಮರ್ಶಿಸಲಾಗಿದೆ. ಚಾರಿತ್ರಿಕ ಕಾಲಘಟ್ಟ ಕುರಿತಂತೆ ಹಲವು ಲೇಖನಗಳು ಪ್ರಕಟಗೊಂಡಿವೆ. ಆದರೆ ಅವುಗಳು ಸಮಪ್ರಮಾಣದಲ್ಲಿ ದಾಖಲಾಗದಿರುವುದರಿಂದ ಹಾಗು ಈ ಪರಿಸರದ ಬಗ್ಗೆ ಹೆಚ್ಚು ಮಾಹಿತಿಯು

ಇಲ್ಲದಿರುವುದರಿಂದ ಈ ಪರಿಸರದ ಚಾರಿತ್ರಿಕ ಹಿನ್ನೆಲೆಯನ್ನು ಗುರುತಿಸುವ ಉದ್ದೇಶದಿಂದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ರಾಜ್ಯದ ಹಂತದಿಂದ ಜಿಲ್ಲೆಯ ಹಂತಕ್ಕಿಳಿದು, ತರುವಾಯ ಜಿಲ್ಲೆಯ ಹಂತದಿಂದ ತಾಲ್ಲೂಕು ಹಂತಕ್ಕಿಳಿದು ಅಧ್ಯಯನ ನಡೆಸಲಾಗುವುದರಿಂದ ಇಂತಹ ಅಧ್ಯಯನವನ್ನು ಮೈಕ್ರೋಸ್ಟಡಿ ಎನ್ನಬಹುದಾಗಿದೆ. ಸ್ಥೂಲಸ್ತರದ ಇತಿಹಾಸವೆಂದರೆ ದೊಡ್ಡ ದೊಡ್ಡ ಸಾಮ್ರಾಜ್ಯಗಳ ಹಾಗು ವಿಸ್ತಾರವಾದ ಪ್ರದೇಶಗಳ ಪಕ್ಷಿನೋಟವನ್ನು ನೀಡತಕ್ಕಂತಹ ಸಂಶೋಧನ ಗ್ರಂಥಗಳು. ಇಂಥಹ ಸಂಶೋಧನ ಗ್ರಂಥಗಳು ಆಯಾ ಕಾಲದ ಹಾಗು ಸ್ಥಳದ ಇತಿಹಾಸದಲ್ಲಿನ ಏರುಪೇರುಗಳನ್ನು ಸ್ಪಷ್ಟವಾಗಿ ಗುರುತಿಸಲು ವಿಫಲವಾಗಿರುತ್ತವೆ. ಸಾಮಾನ್ಯ ರೀತಿಯ ವೈಭವೀಕರಣದಲ್ಲಿ ಮುಳುಗುವ ಸಾಧ್ಯತೆ ಅಧ್ಯಯನದಲ್ಲಿ ಉಂಟಾಗುತ್ತದೆ. ನಿಜವಾದ ಚಿತ್ರಣ ದೊರಕಬೇಕಾದರೆ ದೊಡ್ಡ ಸಾಮ್ರಾಜ್ಯಗಳ ಆಧಾರಸ್ತಂಭಗಳಂತಿದ್ದ ಚಿಕ್ಕ ಚಿಕ್ಕ ರಾಜಕೀಯ ಘಟಕಗಳ ವಿವರವಾದ ಮತ್ತು ಆಳವಾದ ಐತಿಹಾಸಿಕ ಸಂಶೋಧನೆಗಳು ಅವಶ್ಯಕ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಸಾಂಸ್ಕೃತಿಕ ಇತಿಹಾಸವನ್ನು ರಚಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಎಲ್ಲದಕ್ಕಿಂತ ಮುಖ್ಯವಾಗಿ ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಚರಿತ್ರೆಯು ರಾಜ್ಯ ಪುರಾತತ್ವ ಇಲಾಖೆ ಮತ್ತು ಕರ್ನಾಟಕ ಇತಿಹಾಸದ ನಿರ್ಲಕ್ಷ್ಯಕ್ಕೆ ಒಳಗಾಗಿರುವುದಾಗಿದೆ. ಆದ್ದರಿಂದ ಈ ಪರಿಸರದ ಚರಿತ್ರೆಯನ್ನು ಕರ್ನಾಟಕದ ಚರಿತ್ರೆಯ ಪ್ರಮುಖ ಸಾಲಿನಲ್ಲಿ ದಾಖಲಿಸುವಂಥದ್ದಾಗಿದೆ.

ಅಧ್ಯಯನದ ವ್ಯಾಪ್ತಿ

ಇತಿಹಾಸ ಎಂದರೆ ಇದು ಹೀಗೆಯೆ ನಡೆದಿತ್ತು ಎಂದರ್ಥವಾಗುತ್ತದೆ. ಕಳೆದ ಕಾಲದ ವ್ಯಕ್ತಿ, ವಸ್ತು, ವಿಷಯಗಳು ಹೀಗೆಯೇ ಇದ್ದವು ಎಂದು ಖಚಿತವಾಗಿ ತಿಳಿಸುವ ಇತಿಹಾಸದ ವ್ಯಾಪ್ತಿಗೆ ವಿಜ್ಞಾನದ ವಿವಿಧ ಶಾಖೆಗಳು ಸೇರುತ್ತವೆ. ಕಳೆದ ಕಾಲದ ರಾಜಕೀಯ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ಶಿಕ್ಷಣ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ ಎಲ್ಲ ವಿಷಯಗಳನ್ನು ಒಳಗೊಳ್ಳುವ ಇತಿಹಾಸವು, ವರ್ತಮಾನದ ಮೂಲಕ ಭವಿಷ್ಯತ್ತಿನ ಜೊತೆ ಸಂಪರ್ಕ ಪಡೆಯುತ್ತದೆ. ನೆನ್ನೆ ಮತ್ತು ನಾಳೆಗಳ ಕೊಂಡಿಯಾದ ಇಂದು, ನಾಳೆಗೆ ನೆನ್ನೆಯ ಮಾಹಿತಿಗಳನ್ನು ಮತ್ತು ವಿಚಾರಗಳನ್ನು ವಿರೂಪಗೊಳಿಸದಂತೆ ಖಚಿತವಾಗಿ ವರ್ಗಾಹಿಸಬೇಕು. ಹಿಂದಿನ ಕಹಿ ಘಟನೆಗಳು ಪುನರಾವರ್ತನೆಯಾಗದಂತೆ ಎಚ್ಚರವಹಿಸಲು ಇತಿಹಾಸದ ಅಧ್ಯಯನ ಪ್ರೇರಣೆ ನೀಡಬೇಕು. ಬದುಕು ಮುಂದುವರಿದಂತೆಲ್ಲಾ ಹಸನಾಗಬೇಕು.[೭] ಸಾಮಾನ್ಯ ಅರ್ಥದಲ್ಲಿ ವ್ಯಾಪ್ತಿಯೆಂದರೆ ಎಲ್ಲೆ, ಮೇರೆ, ಹರವು, ಗಡಿ, ವೈಶಾಲ್ಯತೆ ಅಥವಾ ಸೀಮಾರೇಖೆ ಎಂದಾಗುತ್ತದೆ. ಆದರೆ

ಯಾವುದೇ ಒಂದು ವಿಷಯದ ವ್ಯಾಪ್ತಿಯೆಂದರೆ ಆ ಕ್ಷೇತ್ರದ ವೈಶಾಲ್ಯತೆ, ಹರವು ಅಥವಾ ಅಧ್ಯಯನದ ಸೀಮಾರೇಖೆ ಎಂದರ್ಥ. ಸಂಶೋಧನೆಗೆ ಒಂದು ಚೌಕಟ್ಟು ಅಂದರೆ ವ್ಯಾಪ್ತಿ ಬಹುಮುಖ್ಯ. ನಿರ್ದಿಷ್ಟ ಹಾಗು ಉದ್ದೇಶಪೂರಿತವಾದ ಸಂಶೋಧನೆ ಯಶಸ್ಸು ಕಾಣಬೇಕೆಂದರೆ ಅದಕ್ಕೆ ಚೌಕಟ್ಟು ಅಗತ್ಯ. ಈ ಚೌಕಟ್ಟಿನ ಕ್ರಮಬದ್ಧತೆಯಿಂದ ಸ್ಪಷ್ಟವಾದ ಇತಿಹಾಸವನ್ನು ರಚಿಸಲು ಸಾಧ್ಯವಾಗುತ್ತದೆ. ವ್ಯಾಪ್ತಿಗಳಿಲ್ಲದ ಅಧ್ಯಯನವು ಗೊಂದಲಮಯವಾಗಿ ಸಂಶೋಧಕನನ್ನು ದಾರಿ ತಪ್ಪಿಸುತ್ತದೆ. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಭೌಗೋಳಿಕ ವ್ಯಾಪ್ತಿಗೆ ಅನುಗುಣವಾಗಿ ಇಂದಿನ ಪಿರಿಯಾಪಟ್ಟಣ ತಾಲ್ಲೂಕು ಹಾಗು ತಾಲ್ಲೂಕಿನಲ್ಲಿ ಬರುವ, ಪಿರಿಯಾಪಟ್ಟಣ(ಕಸಬಾ) ಹಾರನಹಳ್ಳಿ, ಬೆಟ್ಟದಪುರ ಹಾಗು ರಾವಂದೂರು ನಾಲ್ಕು ಹೋಬಳಿಗಳೊಂದಿಗೆ ತಾಲ್ಲೂಕಿನ ಸುತ್ತಮುತ್ತಲಿನ ಗ್ರಾಮಗಳು ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಬರುತ್ತವೆ. ಅಲ್ಲದೆ ಈ ತಾಲ್ಲೂಕು ಪರಿಸರದಲ್ಲಿ ಕಂಡುಬರುವ ಪ್ರಾಗಿತಿಹಾಸ ಕಾಲದಿಂದ ಆಧುನಿಕ ಸ್ವತಂತ್ರ ಹೋರಾಟದವರೆಗಿನ ವಿವಿಧ ಸಾಂಸ್ಕೃತಿಕ ಆಯಾಮಗಳನ್ನು ಗುರುತಿಸುವ ಪ್ರಯತ್ನ ಪ್ರಸ್ತುತ ಅಧ್ಯಯನದ ಗುರಿಯಾಗಿದೆ.

ಅಧ್ಯಯನದ ವಿಧಾನ

ಯಾವ ಮೂಲದಿಂದ ಮತ್ತು ಯಾವ ವಿಧಾನದಲ್ಲಿ ಅಧ್ಯಯನ ಉದ್ದೇಶಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ ಎನ್ನುವ ವಿವರಗಳನ್ನು ಇಲ್ಲಿಯ ವಿಧಾನ ತಿಳಿಸುತ್ತದೆ.[೮] ಸಂಶೋಧನೆ ನಡೆಸಿಕೊಂಡು ಹೋಗಲು ಉಪಯುಕ್ತ ಹಾಗು ಕ್ರಮಬದ್ಧವಾದ ಅಧ್ಯಯನ ಇರಬೇಕಾಗುತ್ತದೆ. ಇತಿಹಾಸ ಸಂಶೋಧನೆಯಲ್ಲಿ ಮಾರ್ಗದರ್ಶನ ಮಾಡುವುದಕ್ಕಾಗಿ ಪ್ರತ್ಯೇಕ ಶಾಸ್ತ್ರವಿದ್ದು, ಇದನ್ನು ಇತಿಹಾಸ ಸಂಶೋಧನ ಮಾರ್ಗ ಎಂದು ಕರೆಯುವರು. ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳುವ ಮುನ್ನ ವಿವಿಧ ವಿದ್ವಾಂಸರೊಂದಿಗೆ ಚರ್ಚಿಸಿ ಪ್ರಸ್ತುತ ವಿಷಯವನ್ನು ತೆಗೆದುಕೊಳ್ಳಲಾಯಿತು. ಮತ್ತು ಈಗಾಗಲೇ ಸಂಶೋಧನೆ ಆಗಿರುವ ವಿಷಯಗಳನ್ನು ಬಿಟ್ಟು ಮಾರ್ಗದರ್ಶಕರ ಸಲಹೆಯ ಮೇರೆಗೆ ಹಾಗು ಸ್ವ-ಆಸಕ್ತಿಯಿಂದ ಕ್ಷೇತ್ರಕಾರ್ಯವೇ ಪ್ರಧಾನವಾಗಿರುವ ಪ್ರಸ್ತುತ ಅಧ್ಯಯನ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಆಯ್ಕೆಯು ಅಧಿಕೃತಗೊಂಡ ಬಳಿಕ 'ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಪುರಾತತ್ವ ಅಧ್ಯಯನ' ವಿಷಯದಲ್ಲಿ ಯಾವ ಅಂಶಗಳು ಒಳಗೊಂಡಿರಬೇಕು ಎಂಬ ಪಠ್ಯಕ್ರಮವನ್ನು ತಯಾರಿಸಲಾಯಿತು. ನಂತರ ಮೈಸೂರು ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ಹಾಗು ಕೇಂದ್ರ ಪುರಾತತ್ವ ಇಲಾಖೆಗೆ ಸೇರಿದ ಗ್ರಂಥಾಲಯಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅಧ್ಯಯನಕ್ಕೆ ಪೂರಕವಾಗಿ ದೊರೆಯುವ ಪ್ರಾಥಮಿಕ ಹಾಗು ಆನುಷಂಗಿಕ ಆಧಾರಗಳು, ಸರ್ಕಾರಿ, ಖಾಸಗಿ ದಾಖಲೆಗಳು, ಛಾಯಾಚಿತ್ರಗಳು, ರಾಜ್ಯಪತ್ರಾಗಾರ ಇಲಾಖೆ, ಮೈಸೂರು ಕೇಂದ್ರ ಗ್ರಂಥಾಲಯ, ಬೆಂಗಳೂರಿನ ಐ.ಸಿ.ಹೆಚ್.ಆರ್, ಮಿಥಿಕ್ ಸೊಸೈಟಿ, ಸಂಘ–ಸಂಸ್ಥೆ, ಪ್ರಕಟಿತ ಕೃತಿಗಳು, ಲೇಖನಗಳು, ವಿವಿಧ ಸಂಚಿಕೆಗಳ ಸಂಶೋಧನಾ ಲೇಖನಗಳು, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧಗಳನ್ನು ಆಧರಿಸಿ ಅವಶ್ಯ ವಿಷಯಗಳನ್ನು ಪರಿಶೀಲಿಸಿ ಮಾಹಿತಿ ಪಡೆದುಕೊಳ್ಳಲಾಗಿದೆ. ಮತ್ತು ತಾಲ್ಲೂಕಿನ ಪ್ರತಿಯೊಂದು ಗ್ರಾಮಗಳಿಗೂ ಭೇಟಿ ನೀಡಿ, ಅಲ್ಲಿನ ಪ್ರಾಚೀನ ಸ್ಮಾರಕಗಳಾದ ದೇವಾಲಯ, ಮೂರ್ತಿಶಿಲ್ಪ, ಶಾಸನ, ವೀರಗಲ್ಲು, ಸತಿಗಲ್ಲು, ನಿಷಿದಿ ಗಲ್ಲು, ಕೆರೆಕಟ್ಟೆ, ಕೋಟೆ ಮೊದಲಾದ ಪ್ರಾಚ್ಯಾವಶೇಷಗಳನ್ನು ಕುರಿತು ದಾಖಲೀಕರಣ ಮಾಡಿಕೊಳ್ಳ ಲಾಯಿತು. ಮತ್ತು ಆಯಾ ಪರಿಸರದಲ್ಲಿರುವ ಐತಿಹ್ಯ, ಪೌರಾಣಿಕ ಕಥೆ, ನಂಬಿಕೆ, ಆಚರಣೆ ಮತ್ತು ಮೌಖಿಕ ಅಂಶಗಳನ್ನು ದಾಖಲಿಸಿಕೊಳ್ಳಲಾಯಿತು. ಸಾಂಸ್ಕೃತಿಕವಾಗಿ ಇಂದಿಗೂ ನಡೆದುಕೊಂಡು ಬರುತ್ತಿರುವ ಜಾತ್ರೆ ಉತ್ಸವಗಳಲ್ಲಿ ಭಾಗವಹಿಸಿ ದಾಖಲೀಕರಣ ಕಾರ್ಯವನ್ನು ಛಾಯಾಚಿತ್ರ ಸಹಿತ ಮಾಡಿಕೊಳ್ಳಲಾಯಿತು. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಎಲ್ಲಾ ಮಾಹಿತಿಗಳನ್ನು ಪರಿಶೀಲಿಸಿ ಸಂಶೋಧನೆಗೆ ತೆಗೆದುಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಮಹಾಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಎಂಟು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಇದು ಮಹಾಪ್ರಬಂಧದ ವಿಷಯಕ್ಕೆ ಅನುಗುಣವಾಗಿ ಸಂಶೋಧನಾತ್ಮಕ ಅಧ್ಯಯನವಾಗಿರುತ್ತದೆ. ಹಾಗು ಮುಂದಿನ ಅಧ್ಯಯನ ಮತ್ತು ಸಂಶೋಧನೆಗಳಿಗೆ ಅನುವು ಮಾಡಿಕೊಡುವ ಸ್ವರೂಪವನ್ನು ಹೊಂದಿದೆ.

ಮಹಾಪ್ರಬಂಧದ ಮೊದಲನೆಯ ಅಧ್ಯಾಯ ಪ್ರಸ್ತಾವನೆ. ಇದರಲ್ಲಿ ಮಹಾಪ್ರಬಂಧದ ಉದ್ದೇಶ, ವ್ಯಾಪ್ತಿ, ಅಧ್ಯಯನದ ಸ್ವರೂಪ, ಅಧ್ಯಯನದ ವಿಧಾನವನ್ನು ಹಾಗು ಈವರೆಗೆ ನಡೆದ ಅಧ್ಯಯನದ ಸಮೀಕ್ಷೆಯನ್ನು ಒಳಗೊಂಡಿದೆ. ಚಾರಿತ್ರಿಕ ನೆಲೆಗಟ್ಟು, ಸ್ಥಳೀಯ ಚರಿತ್ರೆಗೆ ಸ್ಫೂರ್ತಿದಾಯಕವಾಗಿ ಮೂಕ ಸಾಕ್ಷಿಗಳಂತಿರುವ ಸ್ಮಾರಕಗಳು ಮತ್ತು ಕ್ಷೇತ್ರಕಾರ್ಯದಲ್ಲಿ ಒಳಪಡುವ ಗ್ರಾಮಗಳ ಮಿತಿಯಾಗಿರುವುದಾಗಿದೆ. ಈ ಪ್ರದೇಶಗಳ ಬಗ್ಗೆ ಬಂದಿರುವ ಸಾಹಿತ್ಯಕ ಮಾಹಿತಿ ಹಾಗು ಪುರಾತತ್ವವು ಜನತೆಯನ್ನು ಆಕರ್ಷಿಸಿದ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯವು ಭೌಗೋಳಿಕತೆ ಮತ್ತು ಚಾರಿತ್ರಿಕ ಹಿನ್ನೆಲೆಯಾಗಿದೆ. ಮಹಾ ಪ್ರಬಂಧಕ್ಕೆ ಸಂಬಂಧಪಟ್ಟಂತೆ ಇರುವ ಭೌಗೋಳಿಕತೆಯ ಅಂಶಗಳಾದ, ಪ್ರದೇಶಗಳ ಎತ್ತರ, ವಿಸ್ತೀರ್ಣತೆ, ಬೆಟ್ಟಗುಡ್ಡಗಳು, ಮಳೆಯ ಪ್ರಮಾಣ, ಜನಸಂಖ್ಯೆ ಮತ್ತು ಜನಸಾಂದ್ರತೆ, ತಾಲ್ಲೂಕಿನ

ಗಡಿಭಾಗಗಳು, ರಾಜ್ಯ ಹೆದ್ದಾರಿ ಮಾರ್ಗ, ಜಿಲ್ಲೆ, ತಾಲ್ಲೂಕು ಅರಣ್ಯ ಸಂಪತ್ತು, ಹವಾಗುಣ, ಮಣ್ಣು, ಕೃಷಿ ವಿಷಯಗಳನ್ನು ಹೊಂದಿರುವುದು ಮತ್ತು ಈ ಪರಿಸರದಲ್ಲಿ ಚಂಗಾಳ್ವ ಮನೆತನ ಸ್ಥಾಪನೆಯಾದ ಬಗ್ಗೆ, ಚೋಳರು, ಚಂಗಾಳ್ವರು ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡು ಆಳಿದ ರಾಜಧಾನಿ ಹಾಗು ಇತರೆ ರಾಜಮನೆತನದೊಂದಿಗೆ ಹೊಂದಿದ ರಾಜಕೀಯ ಸಂಬಂಧ ಗಳನ್ನು ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಪ್ರಾಗಿತಿಹಾಸಕಾಲದ ನೆಲೆಗಳು ಅವುಗಳ ಲಕ್ಷಣ, ಸ್ವರೂಪ, ಅವುಗಳು ಬೆಳೆದು ಬಂದ ಹಾದಿ ಮತ್ತು ಮುಖ್ಯವಾಗಿ ಅವುಗಳು ನೆಲೆಗೊಳ್ಳುತ್ತಿದ್ದ ಸ್ಥಳಗಳ ಬಗ್ಗೆ ವಿವರಿಸಲಾಗಿದೆ ಹಾಗು ಪ್ರಾದೇಶಿಕವಾಗಿ ಅಥವಾ ಜಾನಪದೀಯವಾಗಿ ಕರೆಯುತ್ತಿದ್ದ ಹೆಸರುಗಳು, ಇವುಗಳ ನಡುವಿನ ಮುಖ್ಯವಾದ ವ್ಯತ್ಯಾಸಗಳ ಬಗ್ಗೆ ಅವಲೋಕಿಸುವುದಾಗಿದೆ. ಇವುಗಳಲ್ಲಿ ಕಂಡುಬರುವ ವಿವಿಧ ರೀತಿಯ ಆಕರಗಳು ಮತ್ತು ಸಾಮಾನ್ಯವಾಗಿ ಕಂಡುಬರುವ ಸ್ಥಳಗಳ ಬಗ್ಗೆ ಪರಿಶೀಲಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ಐತಿಹ್ಯ ಮತ್ತು ಸ್ಥಳನಾಮಗಳನ್ನು ಕುರಿತಿದೆ. ಈ ಅಧ್ಯಾಯದಲ್ಲಿ ರಾಜಮನೆತನಗಳು, ಅವರ ಆಳ್ವಿಕೆ ಹಾಗು ಮಹಾಪುರುಷರು ಅವರ ನೆನಪಿನಾರ್ಥವಾಗಿ ಹುಟ್ಟಿಕೊಂಡ ಕಥೆಗಳು ಮತ್ತು ಪುರಾಣಗಳ ಬಗೆಗೆ ವಿಮರ್ಶಿಸಲಾಗಿದೆ. ಇಲ್ಲಿನ ಸ್ಥಳನಾಮಗಳು ಸಾಮಾನ್ಯವಾಗಿ ಭೌಗೋಳಿಕ, ಸಾಂಸ್ಕೃತಿಕ, ಚಾರಿತ್ರಿಕ ಹಾಗು ಭಾಷಿಕ ಹಿನ್ನೆಲೆಯಲ್ಲಿ ನಿಷ್ಪತ್ತಿ ಗೊಂಡಿವೆ. ಭೌಗೋಳಿಕವಾಗಿ ಇಲ್ಲಿ ಬೆಟ್ಟ, ಗುಡ್ಡ, ನದಿ, ತೊರೆ, ಹಳ್ಳ, ಅರಣ್ಯ ಪ್ರದೇಶ ಗಳು ಕಂಡುಬಂದಿರುವುದರಿಂದ, ಪ್ರಾಗಿತಿಹಾಸ ಕಾಲಘಟ್ಟದಿಂದ ಚಾರಿತ್ರಿಕ ಕಾಲದ ವರೆಗಿನ ಕುರುಹುಗಳನ್ನು ಈ ಪರಿಸರದಲ್ಲಿ ಗುರುತಿಸಬಹುದು. ಇಲ್ಲಿಯ ಸ್ಥಳನಾಮಗಳನ್ನು ಮುಖ್ಯವಾಗಿ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಸ್ಥಳನಾಮಗಳು ಎಂಬುದಾಗಿ ವಿಂಗಡಿಸಿಕೊಂಡು ಚರ್ಚಿಸಲಾಗಿದೆ. ರಾಜರು ಅಥವಾ ಸಾಮಂತರ ಘಟನೆಗಳ ಪ್ರತೀಕವಾಗಿ ಮೂಡಿರುವ ಸ್ಥಳನಾಮಗಳ ಬಗೆಗೆ ಹಾಗು ಇಂದಿಗೂ ಉಳಿದುಕೊಂಡು ಬಂದಿರುವ ಬಗೆಗೆ ಪರಿಶೀಲಿಸಿದೆ.

ಐದನೆಯ ಅಧ್ಯಾಯವು ತಾಲ್ಲೂಕಿನ ವಾಸ್ತುಶಿಲ್ಪವನ್ನು ಕುರಿತಿದೆ. ಇದರಲ್ಲಿ ರಾಜರು ಅಂದು ಆಳ್ವಿಕೆ ಮಾಡಿದ ಆಡಳಿತ ಪದ್ಧತಿ, ಧಾರ್ಮಿಕ ನೀತಿ ಅಥವಾ ಅವರ ಆದರ್ಶ ನೀತಿಗಳನ್ನು ನಾವು ಇಂದು ಪ್ರತ್ಯಕ್ಷವಾಗಿ ನೋಡಲು ಸಾಧ್ಯವಿಲ್ಲ. ಆದರೆ ಅವರು ಉತ್ತಮ ಧಾರ್ಮಿಕ, ಆಡಳಿತ ನಿರ್ವಹಣೆ ಮಾಡಿದಕ್ಕೆ ಬಿಟ್ಟುಹೋಗಿರುವ ಮತ್ತು ಮೂಕ ಪ್ರೇಕ್ಷಕವಾಗಿ ಇಂದಿಗೂ ಅವರನ್ನು ನೆನಪಿಸುವ ವಾಸ್ತುಶಿಲ್ಪಗಳಾದ ದೇವಾಲಯ, ಬಸದಿ, ಕೋಟೆಕೊತ್ತಲಗಳು, ಅರಮನೆ, ಅರಸರ ಮತ್ತು ದೇವರ ಪ್ರತಿಮೆಗಳು ಸಾಕ್ಷಿಯಾಗಿವೆ. ಇಲ್ಲಿಯ ದೇವಾಲಯಗಳನ್ನು ಶೈವ, ವೈಷ್ಣವ, ಶಾಕ್ತ ಮತ್ತು ಬಸದಿಗಳೆಂದು ವಿಂಗಡಿಸಿ ಕೊಂಡು ವಿಶ್ಲೇಷಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ತಾಲ್ಲೂಕಿನಲ್ಲಿ ಕಂಡುಬರುವ ಮೂರ್ತಿಶಿಲ್ಪಗಳನ್ನು ಕುರಿತು ಅವಲೋಕಿಸಲಾಗಿದೆ. ಪ್ರಾಚೀನಕಾಲದಲ್ಲಿ ದೇವಾಲಯಗಳನ್ನು ಸ್ಥಾಪಿಸಿ ಮೂರ್ತಿಶಿಲ್ಪಗಳನ್ನು ಪ್ರತಿಷ್ಠಾಪಿಸುವುದು ಪುಣ್ಯದ ಕೆಲಸವಾಗಿತ್ತು. ಇವುಗಳನ್ನು ಸಾಮಾನ್ಯವಾಗಿ ರಾಜರು, ಶ್ರೀಮಂತರು ಹಾಗು ಅಧಿಕಾರಿಗಳು ಸ್ಥಾಪಿಸುತ್ತಿದ್ದರು. ಇವುಗಳನ್ನು ತಮ್ಮ ತಂದೆ-ತಾಯಿಯರ ಹೆಸರಿನಲ್ಲಿ ಅವರಿಗೆ ಪುಣ್ಯವಾಗಲೆಂದು ಹಾಗು ಸಾಮಾಜಿಕ ಒಳತಿಗಾಗಿ ನಿರ್ಮಿಸುತ್ತಿದ್ದರ ಬಗ್ಗೆ ದಾಖಲೆಗಳಿಂದ ಅರಿಯಬಹುದು. ಈ ನಿಟ್ಟಿನಲ್ಲಿ ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಪ್ರಾಚೀನ ಕಾಲದಲ್ಲಿ ಸ್ಥಾಪನೆಗೊಂಡಿದ್ದ ಶೈವ, ವೈಷ್ಣವ ಶಾಕ್ತ ಹಾಗು ಜೈನ ಮೂರ್ತಿಶಿಲ್ಪಗಳು ಪ್ರಮುಖವಾಗಿವೆ. ಅವುಗಳ ಲಕ್ಷಣ ಸ್ವರೂಪ, ಅವುಗಳು ಬೆಳೆದು ಬಂದ ಹಾದಿಯನ್ನು ಆಗಮಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ತಾಲ್ಲೂಕಿನಲ್ಲಿ ಬರುವ ಪ್ರಾಚೀನ ಕೆರೆಕಟ್ಟೆಗಳನ್ನು ಕುರಿತು ಚರ್ಚಿಸಲಾಗಿದೆ. ಪ್ರಾಚೀನ ಕಾಲದಲ್ಲಿ ಬಾವಿ, ಕೆರೆ, ಕಟ್ಟೆ ನಿರ್ಮಿಸುವುದು ಪುಣ್ಯದ ಕೆಲಸವಾಗಿತ್ತು. ಇಂತಹ ಕೆರೆಕಟ್ಟೆಗಳನ್ನು ಸಾಮಾನ್ಯವಾಗಿ ರಾಜರು, ಅವರ ಸಾಮಂತ ಅಧಿಕಾರಿಗಳು, ಶ್ರೀಮಂತರು ನಿರ್ಮಿಸುತ್ತಿದ್ದರು. ಇವುಗಳನ್ನು ತಮ್ಮ ತಂದೆ-ತಾಯಿಯರ ಹೆಸರಿನಲ್ಲಿ, ಅವರಿಗೆ ಪುಣ್ಯವಾಗಲೆಂದು ಹಾಗು ಜನಸಾಮಾನ್ಯರ ಒಳಿತಿಗಾಗಿ ನಿರ್ಮಿಸುತ್ತಿದ್ದರ ಬಗ್ಗೆ ಇತಿಹಾಸದ ದಾಖಲೆಗಳಿಂದ ತಿಳಿದುಬರುತ್ತದೆ. ಈ ನಿಟ್ಟಿನಲ್ಲಿ ಪ್ರಾಚೀನ ಕೆರೆಕಟ್ಟೆಗಳು ನಿರ್ಮಾಣಗೊಂಡಿದ್ದು, ಅವುಗಳ ರಚನೆ, ನಿರ್ವಹಣೆ ಹಾಗು ಇಂದಿನ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಲಾಗಿದೆ.

ಕೊನೆಯ ಅಧ್ಯಾಯ ಸಮಾರೋಪ. ಇದರಲ್ಲಿ ಮಹಾಪ್ರಬಂಧ ರಚಿಸಲು ಕೈಗೊಂಡ ಪ್ರಯತ್ನ, ಅದರಲ್ಲಿ ಕಂಡುಕೊಂಡ ಫಲಿತಗಳು ಹಾಗು ಅವುಗಳ ಸ್ವರೂಪವನ್ನು ಕುರಿತು ವಿವೇಚಿಸಲಾಗಿದೆ. ಇದಕ್ಕೆ ಕಾರಣವಾದ ಅಂಶಗಳು, ಮುಂದೆ ಸಾಧಿಸಬೇಕಾದ ಒಟ್ಟಾರೆ ಅಂಶಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಡಿಟಿಪ್ಪಣಿಗಳು

೧. **ಕನ್ನಡ ವಿಷಯ ವಿಶ್ವಕೋಶ ಸಂಪುಟ-೯,** ೧೯೭೫: ಪು.೬೦೦.

೨. ಅದೇ ಪು.೬೦೧

೩. ನರಸಿಂಹಮೂರ್ತಿ ಎ.ವಿ., ೧೯೮೩: **ಪುರಾತತ್ವ ಶೋಧನೆ,** ಪು.೭.

೪. ಶ್ರೀನಿವಾಸ್ ಎಂ.ಪಿ. ೨೦೦೧: **ಸ್ಥಳೀಯ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೪,** ತಂಬಂಡ ವಿಜಯ್ ಪೂಣಚ್ಚ(ಸಂ). ಪು.೩೯.

೫. ಲಕ್ಷ್ಮಣ್ ತೆಲಗಾವಿ, ೨೦೦೩: **ಸ್ಥಳೀಯ ಚರಿತ್ರೆ, ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ,** ಪು.೨೦

೬. ಚಂದ್ರಪೂಜಾರಿ ಎಂ., ೨೦೦೫: **ಸಮಾಜ ಸಂಶೋಧನೆ,** ಪು.೧೧೭

೭. ಗೋಪಾಲ್‌ರಾವ್ ಎಚ್.ಎಸ್., ೧೯೭೭: **ಇತಿಹಾಸ ಅಧ್ಯಯನ: ಅಂದು-ಇಂದು,** ಪು. ೧೬.

೮. ಚಂದ್ರಪೂಜಾರಿ ಎಂ., ೨೦೦೫: **ಪೂರ್ವೋಕ್ತ,** ಪು.೧೧೯.

அ

ಅಧ್ಯಾಯ ಎರಡು

ಭೌಗೋಳಿಕತೆ ಮತ್ತು ಚಾರಿತ್ರಿಕ ಹಿನ್ನೆಲೆ

ಅಧ್ಯಾಯ ಎರಡು

ಭೌಗೋಳಿಕತೆ ಮತ್ತು ಚಾರಿತ್ರಿಕ ಹಿನ್ನೆಲೆ

ಕರ್ನಾಟಕವು ವಿಭಿನ್ನ ರೀತಿಯ ಭೌಗೋಳಿಕ ಲಕ್ಷಣಗಳನ್ನು ಒಳಗೊಂಡಿರುವ ಪ್ರದೇಶ. ಇಂತಹ ಭಿನ್ನ ನೆಲೆಯಲ್ಲಿ ಒಂದಾದ ಮೈಸೂರು ಜಿಲ್ಲೆ ಮತ್ತು ಪಿರಿಯಾಪಟ್ಟಣದ ಸುತ್ತಮುತ್ತಲಿನ ಪ್ರದೇಶವು ಪ್ರಾಗಿತಿಹಾಸ ಕಾಲದಿಂದ ಜನವಸತಿ ಪ್ರದೇಶವಾಗಿ ಬೆಳೆದು, ನಂತರ ವಿವಿಧ ರಾಜಮನೆತನಗಳ ಆಳ್ವಿಕೆಯಿಂದ ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಳ್ಳಲು ಇಲ್ಲಿನ ಭೌಗೋಳಿಕ ಪರಿಸರ ಪೂರಕವಾಗಿದೆ. ಈ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಪಿರಿಯಾಪಟ್ಟಣವು ಒಂದು. ಮೈಸೂರು ಜಿಲ್ಲಾ ಕೇಂದ್ರದಿಂದ ಪಶ್ಚಿಮಕ್ಕೆ ಸುಮಾರು ೭೦ ಕಿ.ಮೀ. ದೂರದಲ್ಲಿರುವ ತಾಲ್ಲೂಕು ಕೇಂದ್ರ ಪಿರಿಯಾಪಟ್ಟಣ. ಇದು ಜಿಲ್ಲೆಯ ಪಶ್ಚಿಮ ಹಾಗು ವಾಯವ್ಯ ಗಡಿಯಾಗಿದ್ದು, ಅರೆಮಲೆನಾಡು ಪ್ರದೇಶದಲ್ಲಿದೆ. ಭೌಗೋಳಿಕವಾಗಿ ಜಿಲ್ಲೆಯಲ್ಲಿ ಐದನೆಯ ಸ್ಥಾನದಲ್ಲಿದ್ದು, ಜನಸಂಖ್ಯೆ ದೃಷ್ಟಿಯಿಂದ ಆರನೆಯ[೧] ಸ್ಥಾನ ಪಡೆದಿದೆ. ಕ್ರಿ.ಶ.೧೮೬೯ರಲ್ಲಿ ಪಿರಿಯಾಪಟ್ಟಣ ತಾಲ್ಲೂಕು ಅಸ್ತಿತ್ವಕ್ಕೆ ಬಂದಿತು. ಆ ವೇಳೆಯಲ್ಲಿ ತಾಲ್ಲೂಕಾಗಿ ಅಸ್ತಿತ್ವಕ್ಕೆ ಬಂದರೂ ಹುಣಸೂರು ತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು. ಕ್ರಿ.ಶ.೧೮೮೨ರಲ್ಲಿ ಹುಣಸೂರು ತಾಲ್ಲೂಕು ರಚನೆಗೊಂಡಾಗ ಅದರಲ್ಲಿ ಪಿರಿಯಪಟ್ಟಣ ತಾಲ್ಲೂಕು ವಿಲೀನವಾಯಿತು. ಪಿರಿಯಾಪಟ್ಟಣ ತಾಲ್ಲೂಕಿನ ಗಡಿಯಾಗಿ ವಾಯವ್ಯ ಭಾಗದಲ್ಲಿ ಕಾವೇರಿ ನದಿ ಸ್ವಲ್ಪ ದೂರ ಹರಿದು ಪಕ್ಕದ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಮೂಲಕ ಪ್ರವೇಶಿಸುತ್ತದೆ. ಪ್ರಸ್ತುತ ಹುಣಸೂರು ಉಪವಿಭಾಗಕ್ಕೆ ಸೇರಿರುವ ಪಿರಿಯಾಪಟ್ಟಣ ತಾಲ್ಲೂಕು ಅರಣ್ಯ ಪ್ರದೇಶದಿಂದಾವೃತವಾದ ಅರೆಮಲೆನಾಡು ಪ್ರದೇಶವಾಗಿದ್ದು, ಭೌಗೋಳಿಕವಾಗಿ, ಚಾರಿತ್ರಿಕವಾಗಿ ಹಾಗು ಸಾಂಸ್ಕೃತಿಕವಾಗಿ ಸಮೃದ್ಧವಾಗಿದೆ.[೨] ಆದರೆ ಕಮಿಷನರ್ ಆಳ್ವಿಕೆಯಲ್ಲಿ ಮೈಸೂರು ಜಿಲ್ಲೆಯನ್ನು ೧೪ ತಾಲ್ಲೂಕುಗಳಾಗಿ ವಿಭಜಿಸಿದಾಗ ಪಿರಿಯಾಪಟ್ಟಣ ತಾಲ್ಲೂಕು ಒಂದಾಗಿತ್ತು. ಕ್ರಿ.ಶ.೧೯೩೧ರಲ್ಲಿ ಪಿರಿಯಾಪಟ್ಟಣ ಉಪತಾಲ್ಲೂಕು ಅಸ್ತಿತ್ವಕ್ಕೆ ಬಂದಿತ್ತು. ಕ್ರಿ.ಶ. ೧೯೩೫ರಲ್ಲಿ ಪೂರ್ಣ ಪ್ರಮಾಣದ ಪಿರಿಯಾಪಟ್ಟಣ ತಾಲ್ಲೂಕಾಗಿ ಅಸ್ತಿತ್ವ ಪಡೆಯಿತು.[೩]

ಮೈಸೂರಿನಿಂದ ಸುಮಾರು ೭೦ ಕಿ.ಮೀ.ಗಳ ದೂರದಲ್ಲಿರುವ ಈ ಪ್ರದೇಶವು ೧೨°-೨೦° ಉತ್ತರ ಅಕ್ಷಾಂಶ ಮತ್ತು ೭೬°-೧೩° ಪೂರ್ವ ರೇಖಾಂಶವನ್ನು ಹೊಂದಿದೆ.[೪] ಪಿರಿಯಾಪಟ್ಟಣವು ಇಂದು ಪಿರಿಯಾಪಟ್ಟಣ(ಕಸಬಾ), ಬೆಟ್ಟದಪುರ, ಹಾರನಹಳ್ಳಿ ಮತ್ತು ರಾವಂದೂರು ಎಂಬ ನಾಲ್ಕು ಹೋಬಳಿಗಳನ್ನು ಹೊಂದಿದ್ದು, ೨೦೨ ಗ್ರಾಮಗಳನ್ನು ಒಳಗೊಂಡಿದೆ. ಭೌಗೋಳಿಕವಾಗಿ ೮೫.೧೨೧ ಹೆಕ್ಟೇರ್ ಭೂಪ್ರದೇಶವನ್ನು ಹೊಂದಿದೆ. ಪೂರ್ವ ಹಾಗೂ ಉತ್ತರ ದಿಕ್ಕುಗಳಲ್ಲಿ ವಿಶಾಲವಾದ ಭೂಪ್ರದೇಶವನ್ನು ಹೊಂದಿದ್ದು, ಪಶ್ಚಿಮ ಹಾಗೂ ದಕ್ಷಿಣ ದಿಕ್ಕಿನಲ್ಲಿ ಅರಣ್ಯ ಪ್ರದೇಶಗಳನ್ನು ಹೊಂದಿದೆ. ಹಸಿರುವನ, ಬೆಟ್ಟಗುಡ್ಡಗಳಿಂದ ಆವೃತ್ತವಾಗಿದೆ. ಸಮುದ್ರಮಟ್ಟದಿಂದ ಸರಾಸರಿ ೨೨೮೫ ಅಡಿಗಳಷ್ಟು ಎತ್ತರದಲ್ಲಿರುವ ಪಿರಿಯಾಪಟ್ಟಣ ತಾಲ್ಲೂಕು ಹೆಚ್ಚಾಗಿ ಮಳೆಯಾಧಾರಿತ ಬೇಸಾಯವನ್ನು ಅವಲಂಬಿಸಿದೆ.[೫] ಪಿರಿಯಾಪಟ್ಟಣ ತಾಲ್ಲೂಕಿನ ಪೂರ್ವಕ್ಕೆ ಹುಣಸೂರು, ಪಶ್ಚಿಮಕ್ಕೆ ಕೊಡಗು ಜಿಲ್ಲೆಯ ಸೋಮವಾರಪೇಟೆ, ದಕ್ಷಿಣಕ್ಕೆ ವಿರಾಜಪೇಟೆ, ಉತ್ತರಕ್ಕೆ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕುಗಳು ಇದರ ಗಡಿಗಳಾಗಿವೆ. ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿಯುವ ಕರ್ನಾಟಕದ ಜೀವನದಿಗಳಲ್ಲೊಂದಾದ ಕಾವೇರಿ, ಹಾಸನ ಜಿಲ್ಲೆ ಮತ್ತು ಪಿರಿಯಾಪಟ್ಟಣ ತಾಲ್ಲೂಕಿನ ಪ್ರಮುಖ ಗಡಿರೇಖೆಯಾಗಿದೆ.[೬] ಇದು ಸಂಪೂರ್ಣ ಮಲೆನಾಡು ಅಲ್ಲದೆ, ಬಯಲು ಪ್ರದೇಶವೂ ಅಲ್ಲದೆ ಅರೆಮಲೆನಾಡು ವ್ಯಾಪ್ತಿಗೆ ಒಳಪಟ್ಟಿದೆ.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಬೆಟ್ಟದಪುರ ಬೆಟ್ಟ ಸಮುದ್ರಮಟ್ಟದಿಂದ ಸುಮಾರು ೪೩೮೯ ಅಡಿಗಳ ಎತ್ತರದಲ್ಲಿದೆ.[೭] ಈ ಬೆಟ್ಟವು ಜಿಲ್ಲೆಯಲ್ಲಿಯೇ ಎರಡನೆಯ ಎತ್ತರವಾದ ಬೆಟ್ಟವಾಗಿದೆ. ಇದು ಸುಮಾರು ೬೬೦೦ ಎಕರೆ ಭೂಮಿಯನ್ನು ಆಕ್ರಮಿಸಿದ್ದು, ಅದರ ಸುತ್ತಳತೆ ಸುಮಾರು ಹನ್ನೆರಡು ಮೈಲಿಗಳಾಗಿದ್ದು, ಪಿರಿಯಾಪಟ್ಟಣದಿಂದ ಹದಿನಾರು ಕಿ.ಮೀಟರ್ ಅಂತರದಲ್ಲಿದೆ. ಭೌಗೋಳಿಕವಾಗಿ ಪಿರಿಯಾಪಟ್ಟಣವು ಹಲವು ಬೆಟ್ಟ ಗುಡ್ಡಗಳಿಂದ ಆವರಿಸಲ್ಪಟ್ಟಿದೆ. ಅವುಗಳಲ್ಲಿ ಬೆಟ್ಟದಪುರ ಬೆಟ್ಟ ಅತ್ಯಂತ ದೊಡ್ಡದಾದರೆ, ಮಾಕಲ್ಲಯ್ಯನಬೆಟ್ಟ, ಹೊನ್ನೂರಯ್ಯನ ಗುಡ್ಡ, ಏಣಿ ಹನುಮಂತನ ಬೆಟ್ಟಗಳು ಕಂಡುಬರುತ್ತವೆ. ಬೆಟ್ಟದಪುರದ ವಾಯವ್ಯ ದಿಕ್ಕಿಗೆ ಎರಡೂವರೆ ಮೈಲಿ ದೂರದಲ್ಲಿ ಬೆಟ್ಟಗಳ ಮುಂದುವರೆದ ಭಾಗದಂತಿರುವ ಹಳ್ಳಿಗಾಡು ಪ್ರದೇಶವಿದ್ದು, ಇಲ್ಲಿಯ ಜನರು ಈ ಪ್ರದೇಶವನ್ನು ಸೀತೆ ಗುಡ್ಡವೆಂದು ಕರೆಯುತ್ತಾರೆ. ಈ ಪ್ರದೇಶವು ಪೂರ್ವದಲ್ಲಿ ಅಲಪನಾಯಕನ ಹಳ್ಳಿಯಿಂದಲೂ, ಪಶ್ಚಿಮದಲ್ಲಿ ತರಿಕಲ್ಲು ಮತ್ತು ಚಿಕ್ಕನೇರಳೆ ಗ್ರಾಮದಿಂದಲೂ, ಉತ್ತರ ಭಾಗದಲ್ಲಿ ಹುಣಸೆತಪ್ಪಲು ಮತ್ತು ದಕ್ಷಿಣದಲ್ಲಿ ಬ್ಯಾಡರ ಬಿಳಗುಳಿಯಿಂದಲು ಸುತ್ತುವರೆದಿದೆ.[೮] ಇಡೀ ಬೆಟ್ಟಗಳು ಗ್ರಾನೈಟ್ ಶಿಲೆಗಳಿಂದ ಕೂಡಿದ್ದು, ಬೆಟ್ಟಗಳ ನಡುವೆ ಅಲ್ಲಲ್ಲಿ ಸಣ್ಣ ಬಯಲು ಪ್ರದೇಶವಿದೆ. ಇಲ್ಲಿ ಕಂಡುಬರುವ ತಗ್ಗುಪ್ರದೇಶಗಳು

ಹಿಂದೆ ನೀರಿನ ಸಂಗ್ರಹಣ ತಾಣಗಳಾಗಿದ್ದವು. ಈ ಪ್ರದೇಶದಲ್ಲಿ ಪ್ರಾಚೀನ ಕಾಲದ ಕುರುಹುಗಳು ಹರಡಿಕೊಂಡಿರುವುದನ್ನು ಕಾಣಬಹುದು. ಬೃಹತ್ ಶಿಲಾಯುಗದಿಂದ ಇಂದಿನವರೆಗೆ ಅನೇಕ ಕುರುಹು ಕಂಡುಬರುತ್ತವೆ.

ಜನಸಂಖ್ಯೆ

೨೦೧೧ನೆಯ ಜನಗಣತಿಯ ಪ್ರಕಾರ ತಾಲ್ಲೂಕಿನ ಜನಸಂಖ್ಯೆ ೨೪೩೦೭೬, ಪುರುಷರು ೧೨೪೭೫೫, ಹೆಂಗಸರು ೧೧೮೩೨೧, ಗ್ರಾಮೀಣ ಪ್ರದೇಶದ ಜನಸಂಖ್ಯೆ ೨,೨೬೩೯೧, ನಗರ ಪ್ರದೇಶದ ಜನಸಂಖ್ಯೆ ೧೬೬೮೫, ಜನಸಾಂದ್ರತೆ ಪ್ರತಿ ಚ.ಕಿ. ಮೀಟರ್‌ಗೆ ೨೭೫, ಲಿಂಗಾನುಪಾತ ೧೦೦೦ ಗಂಡಸರಿಗೆ ೯೩೬ ಹೆಂಗಸರು, ಒಟ್ಟು ಪರಿಶಿಷ್ಟ ಜಾತಿಯವರು ೪೧೮೨೫, ಇದರಲ್ಲಿ ಗಂಡಸರು ೨೧೨೧೦, ಹೆಂಗಸರು ೨೦೬೧೫, ಒಟ್ಟು ಪರಿಶಿಷ್ಟ ಪಂಗಡದವರು ೨೦೬೧೦, ಇದರಲ್ಲಿ ಗಂಡಸರು ೧೦೩೧೯, ಹೆಂಗಸರು ೧೦೨೯೧. ಸಾಕ್ಷರತೆ ಪ್ರಮಾಣಸಂಖ್ಯೆ ೧೪೮೧೭೨, ಇದರಲ್ಲಿ ಗಂಡಸರು ೮೨೨೮೮, ಹೆಂಗಸರು ೬೫೮೮೪.[೯] ಪಿರಿಯಾಪಟ್ಟಣ ತಾಲ್ಲೂಕು ಶೇಕಡ ೭ರಷ್ಟು ಅರಣ್ಯ ಪ್ರದೇಶವನ್ನು ಹೊಂದಿದೆ. ತಾಲ್ಲೂಕಿನಲ್ಲಿ ಒಟ್ಟು ೧೪೮೪೬.೮೪ ಎಕರೆಗಳಷ್ಟು ಮೀಸಲು ಅರಣ್ಯ ಪ್ರದೇಶಗಳಿಂದ ಕೂಡಿದೆ. ಈ ಅರಣ್ಯ ಪ್ರದೇಶಗಳಲ್ಲಿ ಶ್ರೀಗಂಧ, ಬೀಟೆ, ತೇಗ, ಹೊನ್ನೆ, ಬೇವು, ಬಿದಿರು ಮತ್ತಿತರ ಗಿಡಮರಗಳು ಕಂಡುಬರುತ್ತವೆ. ಜೊತೆಗೆ ನೆಲ್ಲಿಕಾಯಿ, ಸೀಗೇಕಾಯಿ, ಮೇಣ, ಅಂಟುವಾಳಕಾಯಿ, ಹುಣಸೆಹಣ್ಣು ಉತ್ಪನ್ನಗಳು ದೊರೆಯುತ್ತವೆ. ತಾಲ್ಲೂಕಿನಲ್ಲಿ ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿಯಲ್ಲಿ ಸರ್ಕಾರದ ಅರಣ್ಯ ಇಲಾಖೆಯ ಮೂಲಕ ಸುಮಾರು ೫೮೦ ಹೆಕ್ಟೇರ್‌ಗಳಿಗಿಂತಲೂ ಹೆಚ್ಚು ಭೂಮಿಯಲ್ಲಿ ಸಾಮಾಜಿಕ ಅರಣ್ಯವನ್ನು ಅಭಿವೃದ್ಧಿಪಡಿಸಲಾಗಿದೆ. ನೈಸರ್ಗಿಕವಲ್ಲದ, ಮಾನವಶಕ್ತಿ ಬಳಸಿ, ಸಣ್ಣಸಣ್ಣ ಸಸಿ ಅಥವಾ ಗಿಡಗಳನ್ನು ನೆಟ್ಟು ಬೆಳೆಸಲಾಗುವ ಅರಣ್ಯವನ್ನು ಸಾಮಾಜಿಕ ಅರಣ್ಯ ಎಂದು ಕರೆಯಲಾಗುತ್ತದೆ. ಇಂತಹ ಸಸ್ಯಗಳಲ್ಲಿ ನೀಲಗಿರಿ, ಸುರಗಿ, ಬೇವು, ಹೊಂಗೆ ಜಾತಿಯ ಗಿಡಮರಗಳನ್ನು ಬೆಳೆಸಲಾಗುತ್ತಿದೆ. ನೈಸರ್ಗಿಕ ಅಥವಾ ಸಾಮಾಜಿಕ ಅರಣ್ಯ ಪ್ರದೇಶಗಳಲ್ಲಿ ಹುಲಿ, ಚಿರತೆ, ನವಿಲು, ಕಡವೆ, ಜಿಂಕೆ, ಕಾಡುಕೋಣ ಮೊದಲಾದ ಪ್ರಾಣಿಗಳು ಮತ್ತು ಪಕ್ಷಿಗಳು ಕಂಡುಬರುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಮಾನವ ಬೇಟೆ, ಅರಣ್ಯ ನಾಶ ಹಾಗು ಕಾಡ್ಗಿಚ್ಚಿನಿಂದಾಗಿ ಅವುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಪಿರಿಯಾಪಟ್ಟಣ ತಾಲ್ಲೂಕಿನಾದ್ಯಂತ ಕೃಷಿ ಮಳೆಯಾಧಾರಿತವಾಗಿದ್ದು, ೨೦೦೮ರಲ್ಲಿ ಸುಮಾರು ೯೩೫ ಮೀಲಿಮೀಟರ್ ಮಳೆಯಾಗಿದೆ. ಸಾಮಾನ್ಯವಾಗಿ ೮೩೦ ಮೀ.ಮೀಟರ್‌ಗಿಂತ ಅಧಿಕ ಮಳೆಯಾಗಿದೆ. ತಾಲೂಕಿನ ಹಲವೆಡೆ ಖನಿಜ ಸಂಪತ್ತಿದ್ದು, ಅವುಗಳಲ್ಲಿ ಕುಡುಕೂರು, ಕಣಗಾಲು ಗ್ರಾಮಗಳಲ್ಲಿ ಅಗ್ನಿಶಿಲೆಗಳು ಕಂಡು

ಬಂದಿದ್ದು, ಬೆಟ್ಟದಪುರ, ವಡ್ಡರಕ್ಯಾಂಪ್, ಚನ್ನಕಲ್ಲ್‌ಕಾವಲು, ಗ್ರಾಮಗಳಲ್ಲಿ ಗ್ರಾನೈಟ್ ಶಿಲೆಗಳಿವೆ. ಸುಮಾರು ೮೧೪.೭ ಚ.ಕಿ.ಮೀಟರ್ ಭೌಗೋಳಿಕ ವಿಸ್ತೀರ್ಣ[10] ಹೊಂದಿರುವ ಪಿರಿಯಾಪಟ್ಟಣ, ಪಶ್ಚಿಮ ಹಾಗು ದಕ್ಷಿಣ ದಿಕ್ಕುಗಳಲ್ಲಿ ಅರಣ್ಯ ಪ್ರದೇಶಗಳಿಂದ ಆವೃತವಾಗಿದೆ. ಪೂರ್ವ ಹಾಗು ಉತ್ತರಕ್ಕೆ ವಿಶಾಲವಾದ ಭೂಪ್ರದೇಶವಿದೆ. ಪಶ್ಚಿಮದಲ್ಲಿ ಸಮುದ್ರಮಟ್ಟದಿಂದ ೯೦೦ ರಿಂದ ೧.೫೦೦ ಮೀಟರ್‌ಗಳಷ್ಟು ಎತ್ತರದಲ್ಲಿದ್ದು, ಪೂರ್ವದ ಮೈದಾನ ಭಾಗವು ೮೦೦ ರಿಂದ ೯೦೦ ಮೀಟರ್‌ಗಳಷ್ಟು ಎತ್ತರದಲ್ಲಿದೆ. ತಾಲ್ಲೂಕಿನಲ್ಲಿ ಒಟ್ಟು ೨೬ ಗ್ರಾಮ ಪಂಚಾಯತಿಗಳು ಹಾಗು ಒಂದು ಪಟ್ಟಣ ಪಂಚಾಯತಿ(ಪಿರಿಯಾಪಟ್ಟಣ) ಇದೆ.

ಚಾರಿತ್ರಿಕ ಹಿನ್ನೆಲೆ

ಇತಿಹಾಸವೆಂದರೆ ಕೇವಲ ರಾಜಕೀಯ ಇತಿಹಾಸ ಎಂಬ ಅಭಿಪ್ರಾಯಕ್ಕೆ ಈಗ ಅರ್ಥವಿಲ್ಲ. ಮಾನವನ ಬದುಕಿನ ಬಹುತೇಕ ಎಲ್ಲ ಅಂಶಗಳನ್ನು ಇತಿಹಾಸ ಒಳಗೊಂಡಿರುತ್ತದೆ. ಮೊದಲಿಗೆ ಇದರಲ್ಲಿ ರಾಜಕೀಯ ಇತಿಹಾಸಕ್ಕೆ ಹೆಚ್ಚಿನ ಮಹತ್ವ ಇತ್ತು. ಆದರೆ ಈಗ ಇತಿಹಾಸ ಎಂದಾಗ, ಅದರಲ್ಲಿ ರಾಜಕೀಯ ಇತಿಹಾಸ ಮಾತ್ರವಲ್ಲದೆ ಸಾಮಾಜಿಕ, ಆರ್ಥಿಕ, ಸಾಹಿತ್ಯಕ, ಸಾಂಸ್ಕೃತಿಕ ಹಾಗು ಮಾನವ ವಿಕಾಸದ ವಿವಿಧ ಸ್ತರದ ಇತಿಹಾಸಗಳೆಲ್ಲವೂ ಸೇರುತ್ತವೆ. ಅದ್ದರಿಂದ ಇತ್ತೀಚಿಗೆ ಇತಿಹಾಸದ ಎಲ್ಲ ಮುಖಗಳ ಅಧ್ಯಯನ ಮಹತ್ವ ಪಡೆದಿದೆ. ಹಿಂದೆ ಇತಿಹಾಸದ ಅಧ್ಯಯನದಲ್ಲಿ ಹೆಚ್ಚಿನ ಸ್ಥಾನ ಪಡೆದಿದ್ದವರು ಪ್ರಮುಖ ರಾಜಮನೆತನಗಳ ಅರಸರು. ಅದರಲ್ಲೂ ಹೆಚ್ಚು ಯುದ್ದಗಳನ್ನು ಮಾಡಿದ, ರಾಜ್ಯ ವಿಸ್ತಾರ ಮಾಡಿದ, ಹೆಚ್ಚಾಗಿ ಗೆಲುವನ್ನು ಸಾಧಿಸಿದ ಪ್ರಮುಖ ಅರಸರು ಪಡೆಯುವ ಸ್ಥಾನಮಾನಗಳನ್ನು ಇತರ ಅರಸರು ಪಡೆದಿರುವುದಿಲ್ಲ. ಇಂತಹವರೆಲ್ಲರನ್ನು ಕುರಿತ ಅಧ್ಯಯನವು ಇತಿಹಾಸದಲ್ಲಿ ಸ್ಥಾನ ಪಡೆಯದಿದ್ದರೆ ನಮಗೆ ತಿಳಿಯುವ ಇತಿಹಾಸವು ಅಪೂರ್ಣ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಇತಿಹಾಸದ ಕೆಲವು ಪ್ರಮುಖ ಪುಟಗಳ ತಿಳುವಳಿಕೆ ಮಾತ್ರ ನಮಗೆ ಸಾಲದು. ಖಚಿತವಾದ ಹಾಗು ಪೂರ್ಣಸ್ವರೂಪದ ಇತಿಹಾಸವನ್ನು ತಿಳಿಯಬೇಕಾದ ಅವಶ್ಯಕತೆ ಇಂದು ಪ್ರಸ್ತುತವಾಗಿದೆ. ಈ ನಿಟ್ಟಿನಲ್ಲಿ ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಮಧ್ಯಕಾಲೀನ ಇತಿಹಾಸದಲ್ಲಿ ಪಿರಿಯಾಪಟ್ಟಣ ತಾಲ್ಲೂಕು ಮತ್ತು ಸುತ್ತಮುತ್ತಲಿನ ಪ್ರದೇಶವನ್ನಾಳಿದ ಚೆಂಗಾಳ್ವ ಮನೆತನ ಮಹತ್ವಪೂರ್ಣವಾದ ಘಟನೆಯಾಗಿರುವುದಾಗಿದೆ.

ಪ್ರಾಚೀನ ಭಾರತದ ಅತಿ ದೊಡ್ಡ ಸಾಮ್ರಾಜ್ಯ ಮೌರ್ಯ ಸಾಮ್ರಾಜ್ಯ. ಈ ಸಾಮ್ರಾಜ್ಯದ ಆಳ್ವಿಕೆಗೆ ಇಂದಿನ ಕರ್ನಾಟಕದ ಕೆಲವು ಭಾಗಗಳು ಒಳಗಾಗಿದ್ದವು. ಇಂದಿನ ಮೈಸೂರು

ಮಹಾಭಾರತದ ಕಾಲದಲ್ಲಿ ಮಹಿಷಮಂಡಲವೆಂದು ಹೆಸರಾಗಿತ್ತು. ಮೌರ್ಯಚಂದ್ರಗುಪ್ತನು ಕ್ರಿ.ಪೂ. ೩ನೆಯ ಶತಮಾನದಲ್ಲಿ ತನ್ನ ಗುರುವಾದ ಜೈನಮುನಿ ಭದ್ರಬಾಹುವಿನೊಡನೆ ಕಳ್ವಪ್ಪಿನಲ್ಲಿ ಅಂದರೆ ಶ್ರವಣಬೆಳಗೊಳದಲ್ಲಿ ನೆಲೆಸಿದನೆಂಬುದು ಶಾಸನಗಳಿಂದ ತಿಳಿದುಬರುವ ಅಂಶ. ಶ್ರವಣಬೆಳಗೊಳಕ್ಕೆ[೧೧] ಕಳ್ವಪ್ಪು ಎಂಬ ಹೆಸರಿದ್ದಿತೆಂದು ಅಲ್ಲಿನ ಶಾಸನಗಳು ತಿಳಿಸುತ್ತವೆ. ಮೌರ್ಯ ಚಕ್ರವರ್ತಿ ಅಶೋಕನು ಬೌದ್ಧ ಧರ್ಮಬೋಧಕರನ್ನು ಪುನ್ನಾಟ ಮತ್ತು ಬನವಾಸಿಗಳಿಗೆ ಕಳುಹಿಸಿದನೆಂಬ ಮಾಹಿತಿ ಮಹಾವಂಶ ಬೌದ್ಧ ಗ್ರಂಥದಲ್ಲಿ ಕಂಡುಬರುತ್ತದೆ. ಅಲ್ಲದೆ ಮೌರ್ಯ ಚಕ್ರವರ್ತಿ ಅಶೋಕ ಬೌದ್ಧ ಮತ ಪ್ರಚಾರದಲ್ಲಿ ಭಿಕ್ಷುಗಳೊಡನೆ ವೈಜಯಂತಿಪುರಕ್ಕೆ ಭೇಟಿ ನೀಡಿದ್ದನೆಂದು ಉಲ್ಲೇಖಿಸಿದೆ. ಕಲ್ಲುಬಂಡೆಗಳ ಮೇಲೆ ಧರ್ಮ ಶಾಸನಗಳನ್ನು ಕೊರೆಯಿಸಿದನು. ಕ್ರಿಸ್ತಶಕ ಪ್ರಾರಂಭದ ವೇಳೆಗೆ ಕರ್ನಾಟಕವು ಪ್ರಬಲವಾದ ಶಕ್ತಿಯಾಗಿ ಪರಿಣಮಿಸಿತ್ತೆಂಬುದರಲ್ಲಿ ಸಂದೇಹವಿಲ್ಲ. ಕ್ರಿ.ಪೂ. ೨೦೫ರಲ್ಲಿ ಚೋಳರಾಜ 'ಏಲಾಲ' ಲಂಕೆಯನ್ನು ಗೆಲ್ಲಲು ಮೈಸೂರಿನ ಸೈನ್ಯದ ಸಹಾಯವನ್ನು ಪಡೆದನಂತೆ.[೧೨] ರಾಜಕೀಯವಾಗಿ ಮಾತ್ರವಲ್ಲದೆ ನಾಗರಿಕತೆ, ಸಂಸ್ಕೃತಿಗಳಲ್ಲಿಯೂ ಮುಂದುವರೆದಿತ್ತು. ಮತ್ತು ಹೊರದೇಶಗಳೊಡನೆ ವ್ಯಾಪಾರ ಸಂಪರ್ಕಗಳನ್ನು ಪಡೆದಿತ್ತು. ಟಾಲೆಮಿಯು ತನ್ನ ಭೂಗೋಳ ಗ್ರಂಥದಲ್ಲಿ ವೈಜಯಂತಿಯನ್ನು ಬೈಜಾಂಟಿಯಂ ಎಂದಿದ್ದಾನೆ. ಬೈಜಾಂಟಿಯಂ ವೈಜಯಂತಿಯ ಗ್ರೀಕ್ ರೂಪಾಂತರ. ಜಿನಸೇನನ ಮಹಾಪುರಾಣದಲ್ಲಿ ಬನವಾಸಿಯನ್ನು ವೈಜಯಂತಿ ಎಂದು, ಹಾಗೆ ಮಹಾಭಾರತದಲ್ಲಿ ಬನವಾಸಿಯನ್ನು ವನವಾಸ ಅಥವಾ ವೈಜಯಂತಿ ಎಂದು ವರ್ಣಿಸಲಾಗಿದೆ. ಟಾಲೆಮಿಯು ಪುನ್ನಾಟ ಎಂಬುದನ್ನು ಪೌನ್ನಾಟ ಎಂದು ಕರೆದಿದ್ದಾನೆ. ಪುನ್ನಾಗ ಎಂದರೆ ಪುರುಷರಲ್ಲಿ ಶ್ರೇಷ್ಠನಾದವನು ಎಂದರ್ಥ. ಮೌರ್ಯ ಸಾಮ್ರಾಜ್ಯದ ಸ್ಥಾಪಕನಾದ ಚಂದ್ರಗುಪ್ತ ಮೌರ್ಯನು ತನ್ನ ಗುರುವಾದ ಜೈನಮುನಿ ಭದ್ರಬಾಹುವಿನೊಂದಿಗೆ ಕರ್ನಾಟಕಕ್ಕೆ ಬಂದು ನೆಲೆಸಿದನು. ಈತ ಸುತ್ತಾಡಿದ ಅಥವಾ ನೆಲೆಸಿದ ಸ್ಥಳವೇ ಪುನ್ನಾಟವಾಗಿರಬೇಕು. ಇಂದಿನ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಕಿತ್ತೂರು ಹಿಂದೆ ಪುನ್ನಾಟವಾಗಿದ್ದಿತು. ಪುನ್ನಾಟದ ದೊರೆಗಳು ಕೀರ್ತಿಪುರದಿಂದ[೧೩] ಪುನ್ನಾಟ ೬೦೦೦ವನ್ನು, ಬೃಹತ್ ಬಾಣರು ಕೋಲಾರದ, ಆಂಧ್ರದ ಮತ್ತು ಕರ್ನಾಟಕದ ಕೆಲವು ಭಾಗಗಳನ್ನು ಆಳುತ್ತಿದ್ದರೆಂದು ಕಂಡುಬರುತ್ತದೆ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಪುನಾಡನಹಳ್ಳಿಯೇ ಪುನ್ನಾಟ ಎಂದು ದೇ.ಜ.ಗೌ.ರವರ ಅಭಿಪ್ರಾಯ. ಆದರೆ ಪುನಾಡನ ಹಳ್ಳಿಯೇ ಪುನ್ನಾಟ ಎಂಬುವುದಕ್ಕೆ ಯಾವುದೇ ಆಧಾರಗಳಿಲ್ಲ. ಒಟ್ಟಿನಲ್ಲಿ ಪುನ್ನಾಟವೆಂಬುದು ಕನ್ನಡ ದೇಶದ ಒಂದು ಭಾಗವೆಂಬುದನ್ನು ಸೂಚಿಸುತ್ತದೆ.

ಕ್ರಿ.ಶ.೪ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ಕದಂಬರು ತಲೆಯೆತ್ತಿದ್ದರು. ಇವರ ನಾಯಕ ಮಯೂರಶರ್ಮನು ಭಾರತದ ಶಕಸ್ಥಾನ,

ಪಾರಿಯಾತ್ರ, ಮೊಖಾರಿ ಪ್ರದೇಶಗಳನ್ನು, ದಕ್ಷಿಣದ ಸೇಂದ್ರಕ, ಪುನ್ನಾಟ ಮತ್ತು ಪಲ್ಲವರನ್ನು, ಪಶ್ಚಿಮದ ತ್ರಿಕೂಟ ಮತ್ತು ಅಭೀರರನ್ನು ಜಯಸಿದನೆಂದು ಚರಿತ್ರೆಯಿಂದ ಕಂಡುಬರುತ್ತದೆ. ಟಾಲೆಮಿ ತನ್ನ ಭೂಗೋಳ ಗ್ರಂಥದಲ್ಲಿ ಕರ್ನಾಟಕದ ಕೆಲವು ಪ್ರಸಿದ್ಧ ಸ್ಥಳಗಳನ್ನು ಹೆಸರಿಸಿದ್ದಾನೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಬಾದಿಯಾಮೊಯಿ (ಬಾದಾಮಿ), ಇಂಡೆ(ಇಂಡಿ), ಕಲ್ಲಿಗೇರಿಸ್ (ಕಲ್ಲಗೇರಿ), ಮೊದೂಗೌಲ(ಮುದಗಲ್), ಪೆಟಿರ್‌ಗಾಲ (ಪಟ್ಟದಕಲ್ಲು), ಬನವಾಸ್ಯೆ (ಬನವಾಸಿ), ಕರ್ನಾಟಕದ ಒಂದು ಭಾಗವಾದ ಪೌನ್ನಾಟ (ಪುನ್ನಾಟ)ದ ವಜ್ರ ವೈಢೂರ್ಯಗಳನ್ನು ಆತ ವರ್ಣಿಸಿದ್ದಾನೆ. ಸಮುದ್ರ ದಡದಲ್ಲಿರುವ ಮಲಿಪ್ಪಾಲ ಎಂಬ ಬಂದರನ್ನು ಅವನು ಹೇಳುತ್ತಾನೆ. ಅದು ಇಂದಿನ ಮಲ್ಪೆಯಾಗಿರಬಹುದು.

ಕದಂಬರು

ಕರ್ನಾಟಕವನ್ನಾಳಿದ ಪ್ರಾಚೀನ ರಾಜಮನೆತನಗಳಲ್ಲಿ ಕದಂಬರು ಮೊದಲಿಗರು. ಈ ಮನೆತನಕ್ಕೆ ಸೇರಿದ ತಾಮ್ರಶಾಸನ ಹಿಟ್ನೆಹೆಬ್ಬಾಗಿಲು ಗ್ರಾಮದಲ್ಲಿ ಕಂಡುಬಂದಿದೆ. ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಕದಂಬ ಅರಸ ಶ್ರೀವಿಜಯ ಶಿವಮೃಗೇಶವರ್ಮ. ಇವನು ತನ್ನ ಆಳ್ವಿಕೆಯ ಅವಧಿಯ ಏಳನೆಯ ವರ್ಷದಲ್ಲಿ ಹೊರಡಿಸಿರುವ ಶಾಸನ ಇದಾಗಿದೆ. ಕ್ರಿ.ಶ.ಸುಮಾರು ೪೬೩–೪೬೫ ರಲ್ಲಿ ವೇದ ವಿದ್ಯಾಪಾರಂಗತನಾದ ಔಪಗಹನಿಗೋತ್ರ ಮತ್ತು ಅಥರ್ವಣವೇದ ಶಾಖೆಗೆ ಸೇರಿದ ಪಿಂಗಲಸ್ವಾಮಿಯ ಮಗ ಸರ್ವಸ್ವಾಮಿಗೆ ಅರಸನಾದ ಮೃಗೇಶವರ್ಮನು ಕಿರುನೆಲ್ಲಿ ಗ್ರಾಮವನ್ನು ದಾನ ಮಾಡಿರುವನು. ಈ ಶಾಸನದಲ್ಲಿ ದಾನ ಕೊಟ್ಟಿರುವ ಗ್ರಾಮವನ್ನು ಅಭಟಪ್ರವೇಶ ಎಂದು ಘೋಷಿಸಿ ಅನ್ತಷ್ಕರಮ್ ಮತ್ತು ಪಂಗೋತ್ಕೋಟಮ್ ತೆರಿಗೆಗಳಿಂದ ಮುಕ್ತಿ ಮಾಡಿರುವುದಾಗಿದೆ ಎಂದು ಹೇಳಲಾಗಿದೆ. ಅಭಟ ಪ್ರವೇಶವೆಂದರೆ ಯಾವ ಕಾರಣಕ್ಕೂ ಯೋಧರು ದಾನಕೊಟ್ಟ ಗ್ರಾಮವನ್ನು ಪ್ರವೇಶ ಮಾಡದಿರುವುದು. ಹಾಗೆಯೇ ಎಷ್ಟ ಎಂಬ ಮತ್ತೊಂದು ಬಿಟ್ಟಿ ಕೆಲಸವನ್ನು ಮಾಡಿಸುವಂತಿರಲಿಲ್ಲ. ಈ ರೀತಿಯಿಂದ ದಾನ ಕೊಟ್ಟ ಗ್ರಾಮ ತೆರಿಗೆಗಳಿಂದ ಮುಕ್ತವಾಗಿತೆಂದು ಹೇಳಬಹುದು. ದಾನಪಡೆದ ಸರ್ವಸ್ವಾಮಿಯು ವೇದವೇದಾಂಗ ಪಾರಂಗತನಾದ ವಿದ್ವಾಂಸ, ಕದಂಬ ದೊರೆಯನ್ನು ಪ್ರಜಾಪಾಲಕ, ದಕ್ಷ, ಸರ್ವಜೀವನ ಬಂಧು, ಯುಧಿಷ್ಠಿರನಂತೆ ಧರ್ಮಜ್ಞ ಸತ್ಯವಾದಿ ಎಂದು ಹೊಗಳಲಾಗಿದೆ.[೧೪] ಇದೊಂದು ದಾನ ಶಾಸನವಾಗಿದ್ದು, ದಾನಿಯ ಹೆಸರನ್ನು ಶ್ರೀ ವಿಜಯ ಶಿವಮೃಗೇಶವರ್ಮನೆಂದು ಹೇಳಲಾಗಿದೆ ಮತ್ತು ಕದಂಬರ ರಾಜಲಾಂಛನ ಸಿಂಹಮುದ್ರೆ ಇರುವುದು. ದಾನ ಕೊಟ್ಟ ಗ್ರಾಮವಾದ ಕಿರುನೆಲ್ಲಿಯನ್ನು ಗುರುತಿಸಲು ಸಾಧ್ಯವಾಗಿಲ್ಲ ಎಂದು ಬಾ.ರಾ.ಗೋಪಾಲ್‌ರವರು ಅಭಿಪ್ರಾಯಪಟ್ಟಿದ್ದಾರೆ.[೧೫] ಆದರೆ ಹಿಟ್ನೆಹೆಬ್ಬಾಗಿಲು ಗ್ರಾಮದಿಂದ

ಪೂರ್ವಕ್ಕೆ ಸುಮಾರು ೩ ಕಿ.ಮೀ. ದೂರದಲ್ಲಿ ಕಿರುನೆಲ್ಲಿ ಎಂಬ ಹೆಸರಿನ ಗ್ರಾಮ ಇಂದಿಗೂ ಸಹ ಇದೆ. ಮತ್ತು ಈ ಗ್ರಾಮಕ್ಕೆ ಹೊಂದಿಕೊಂಡಂತೆ ಕೆರೆ ಇರುವುದರಿಂದ ಇಂದಿನ ಸ್ಥಳವೇ ಅಂದಿನ ಪ್ರಾಚೀನ ದಾನ ಕೊಟ್ಟ ಗ್ರಾಮ ಅಥವಾ ಸ್ಥಳವೆಂದು ಹೇಳಬಹುದು. ಸಾಮಾನ್ಯವಾಗಿ ಜನರು ಇಂದು ಕಿರನಲ್ಲಿ ಎಂದು ಕರೆಯುತ್ತಿರುವರು.

ಗಂಗರು

ಗಂಗರು ಆಡಳಿತ ನಡೆಸಿದ ಪ್ರದೇಶವನ್ನು ಗಂಗವಾಡಿ ೯೬೦೦೦ ಎಂದು ಕರೆಯಲಾಗಿದೆ. ಇವರು ತಮ್ಮ ಆಡಳಿತಾವಧಿಯಲ್ಲಿ ರಾಜಧಾನಿ ಪ್ರದೇಶವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುತ್ತಿದ್ದರು.[೧೬] ಇವರ ಆಳ್ವಿಕೆ ಅವಧಿಯಲ್ಲಿ ಪಿರಿಯಾಪಟ್ಟಣ ಪ್ರದೇಶದಲ್ಲಿ ಎರಡು ಶಾಸನಗಳು ಕಂಡುಬಂದಿವೆ. ಒಂದು ಕೂರಗಲ್ಲು ಗ್ರಾಮದಲ್ಲಿ ಕಂಡುಬಂದಿದೆ. ಇದೊಂದು ವೀರಗಲ್ಲು ದತ್ತಿ ಶಾಸನ. ಈ ಶಾಸನದಲ್ಲಿ ಹೆಚ್ಚಿನ ಮಾಹಿತಿ ಕಂಡುಬರುವುದಿಲ್ಲವಾದರೂ ಅಲ್ಪಮಾಹಿತಿಯನ್ನು ಒದಗಿಸುವುದಾಗಿದೆ. ಗಂಗಪೆರ್ಮಾನಡಿಯ ಆಳ್ವಿಕೆಯಲ್ಲಿ ಎರೆಯಪ್ಪನು ಕೊಳಗಲ್ಲುನಾಡು ಅಥವಾ ಕೊಂಗಲ್‌ನಾಡು ೮೦ ಸಾವಿರವನ್ನಾಳುತ್ತಿರಲು, ಭೂತುಗನ ರಾಣಿಯಾದ ಪರಮಬ್ಬೆಯು ಕೂರ್ಗಲ್ಲನ್ನು ಆಳುತ್ತಿದ್ದಳು. ಈ ಸಂದರ್ಭದಲ್ಲಿ ನಡೆದ ತುರುಗೋಳ ಕಾಳಗದಲ್ಲಿ ವೀರನೊಬ್ಬನು ಮಡಿಯುತ್ತಾನೆ. ಆಗ ಎರೆಯಪ್ಪರಸನು ಮೂರು ಖಂಡುಗ ಭೂಮಿಯನ್ನು ಅವನ ಬಂಧುವರ್ಗಕ್ಕೆ ದತ್ತಿ ಬಿಡುತ್ತಾನೆ.[೧೭]

ಗಂಗರ ಮತ್ತೊಂದು ಶಾಸನ ತಾಲ್ಲೂಕಿನ ಹಿರೇಮಳಲಿ ಹಳ್ಳಿಯಲ್ಲಿ ದೊರೆತಿದೆ. ಇದರ ಕಾಲ ಸುಮಾರು ಕ್ರಿ.ಶ.೯೭೬-೭೭. ಇದರಲ್ಲಿ ಸತ್ಯವಾಕ್ಯಪೆರ್ಮಾನಡಿಯನ್ನು ಎರಡನೆಯ ರಾಚಮಲ್ಲನೆಂದು ತಿಳಿಯಲಾಗಿದೆ. ನಂದಿಗಿರಿನಾಥ, ಕುವಳಾಳ ಪರಮೇಶ್ವರ, ಮಹಾರಾಜಧಿರಾಜ ಎಂಬ ಬಿರುದುಗಳಿವೆ. ಪೆರ್ಮಾನಡಿ ದೊರೆಯು ಗಂಗವಾಡಿ ೩೨೦೦೦ ಪ್ರದೇಶವನ್ನು ಆಳುತ್ತಿದ್ದ. ಕುಪ್ಪೆನಾಡಿಗೆ ಸೇರಿದ ಮಣಲೂರು ಗ್ರಾಮವನ್ನು ಮೈದುನ ಗೋಮಯ್ಯನು ಅಗ್ರಹಾರವಾಗಿ ದಾನಕೊಟ್ಟ ವಿಷಯವಿದೆ. ಆದರೆ ದಾನ ಪಡೆದವರ ಹೆಸರು, ಇತ್ಯಾದಿ ವಿವರಗಳುಳ್ಳ ಭಾಗ ಸವೆದಿದೆ.[೧೮] ಇವಿಷ್ಟು ಬಿಟ್ಟರೆ ಗಂಗರ ಬೇರೆ ಯಾವ ಶಾಸನಗಳು ಕಂಡುಬಂದಿಲ್ಲ.

ಚಾಲುಕ್ಯರು

ಚಾಲುಕ್ಯರ ಆಳ್ವಿಕೆಗೆ ಸಂಬಂಧಿಸಿದಂತೆ ಒಂದು ಶಾಸನ ತಾಲ್ಲೂಕಿನ ಬೆಟ್ಟದಪುರ ಸಮೀಪದ ಕುಡುಕೂರಿನಲ್ಲಿ[೧೯] ದೊರೆತಿದೆ. ಇದರ ಕಾಲ ಸುಮಾರು ಕ್ರಿ.ಶ.೯೯೭-೯೯೮.

ಇದು ವೀರಗಲ್ಲು ಶಾಸನ. ಚಾಲುಕ್ಯ ಪೆರ್ಮಾನಂದಿ ದೇವನ ಮಗಳಾದ ಪಂಪಾದೇವಿ ಆಳ್ವಿಕೆ ಮಾಡುತ್ತಿದ್ದ ಕಾಲಾವಧಿ ಇದಾಗಿದೆ. ಪೆಳ್ತಿಯಾರೆಂಬ ಗ್ರಾಮದ ಮೇಲಿನ ದಾಳಿಯ ಸಮಯದಲ್ಲಿ ಕುಡುಕೂರಿನ ಸಮೀಪದ ಈಚಲೂರಿನ ದೋರಯ್ಯನ ಮಗ ಮಾರಯ್ಯನು ಯುದ್ಧ ಮಾಡಿ ಮರಣ ಹೊಂದಿದನು. ಪಂಪಾದೇವಿಯು[೨೦] ಗಂಗರಾಜನೊಬ್ಬನ ಪತ್ನಿಯಾಗಿದ್ದು, ಈ ಕಾಲಕ್ಕೆ ವಿಧವೆಯಾಗಿದ್ದಿರಬೇಕೆಂದು ಬಿ.ಎಲ್. ರೈಸ್‌ರವರು ಅಭಿಪ್ರಾಯಪಟ್ಟಿರುತ್ತಾರೆ. ಒಟ್ಟಾರೆ ಕೂರ್ಗಲ್ಲು ಮತ್ತು ಕುಡುಕೂರು ಗ್ರಾಮಗಳು ಬಹು ಹತ್ತಿರದಲ್ಲಿರುವುದರಿಂದ ಇಬ್ಬರು ರಾಜ ಮನೆತನದ ಸ್ತ್ರೀಯರು ಆಳ್ವಿಕೆ ಮಾಡಿರಬಹುದೆಂದು ಹೆಚ್.ಎಂ.ನಾಗರಾಜರಾವ್‌ರವರು ಅಭಿಪ್ರಾಯ ವ್ಯಕ್ತಪಡಿಸಿರುವರು.[೨೧]

ಹೊಯ್ಸಳರು

ಹೊಯ್ಸಳರಿಗೆ ಸಂಬಂಧಿಸಿದಂತೆ ಎರಡು ಶಾಸನಗಳು ತಾಲ್ಲೂಕಿನ ಕಂಪಲಾಪುರ ಮತ್ತು ಹಳಗನಹಳ್ಳಿಯಲ್ಲಿ ಕಂಡುಬಂದಿವೆ. ಮೊದಲನೆಯದು ಕಂಪಲಾಪುರದ ಕರಕಂಠೇಶ್ವರ ದೇವಾಲಯದ ಪ್ರಾಕಾರದ ಗುಡಿಯೊಳಗಿದೆ. ಈ ಶಾಸನದ ಕಾಲ ಕ್ರಿ.ಶ.೧೧೭೪, ಆಗ ಎರಡನೆಯ ಬಲ್ಲಾಳನು ದೋರಸಮುದ್ರದಿಂದ ಆಳುತ್ತಿದ್ದ. ಅರಸನ ಬಿರುದುಗಳನ್ನು ಈ ಶಾಸನ ಉಲ್ಲೇಖಿಸುತ್ತದೆ. ತೆಂಕಣ ಚಕ್ರವರ್ತಿ ಎಂಬ ಬಿರುದಿನಿಂದ ಹೊಯ್ಸಳರು ಚಾಲುಕ್ಯರ ಹಿಡಿತದಿಂದ ಬಿಡುಗಡೆಯಾಗಿದ್ದರೆಂದು ಭಾವಿಸಬಹುದು. ಕೋಟೆಯಕುಪ್ಪೆಯ ಮಾದೆಯನಾಯಕ ಕಾದಾಟವೊಂದರಲ್ಲಿ ತೀರಿಹೋದಾಗ, ಆತನ ಮಕ್ಕಳಾದ ಮಾದಪ್ಪ ಮತ್ತು ಮಲ್ಲಪ್ಪ ನೆತ್ತರು ಕೊಡಗೆಯಾಗಿ ಬೆಟ್ಟರಸದಣ್ಣಾಯಕನಿಂದ ಹೊನ್ನೆಯನಹಳ್ಳಿಯನ್ನು, ಪಾಲ್ಪರೆಯಲ್ಲಿ ಸ್ವಲ್ಪ ಭೂಮಿಯನ್ನು ಪಡೆದರು. ಉಯಿಣಬಾಳಿನ ಹತ್ತು ಕುದುರೆಗಳ ನಾಯಕತನ(ಬಾಳಿಕೆ)ವನ್ನು ಪಡೆದ ಕೋಟೆಯಕುಪ್ಪೆಯ ಮಾದೆಯನಾಯಕನು ಕಂದಾಯವನ್ನು ವಸೂಲು ಮಾಡುವ ಕೆಲಸಕ್ಕೆ ನೇಮಕಗೊಂಡಿದ್ದನು. ಇದಕ್ಕಾಗಿ ಕುಪ್ಪೆನಾಡಿನ ಕೋಟೆಯಕುಪ್ಪೆ ಗ್ರಾಮದ ಹತ್ತು ಕಾಲುವಳಿಗಳನ್ನು ಪಡೆದಿದ್ದನು. ಬೆಟ್ಟರಸದಣ್ಣಾಯಕನಿಗೂ ಚಂಗಾಳ್ವ ಮಹಾದೇವನಿಗೂ ನಡೆದ ಯುದ್ದದಲ್ಲಿ ಚಂಗಾಳ್ವ ಮಹಾದೇವನು ಮೃತ ಹೊಂದಿದ. ಆ ಸೇಡನ್ನು ತೀರಿಸಲು ಆತನ ಉತ್ತರಾಧಿಕಾರಿಯಾದ ಮಹಾಮಂಡಲೇಶ್ವರ ಪೆಮ್ಮವೀರರಸ ಚಂಗಾಳ್ವನು ಹೊಯ್ಸಳ ಸೇನಾಪಡೆಯ ವಶದಲ್ಲಿದ್ದ ಪಾಲ್ಪರೆಯ ಮೇಲೆ ದಾಳಿ ಮಾಡಿದನು. ಆಗ ನಡೆದ ಯುದ್ದದಲ್ಲಿ ಮಾದೆಯ ನಾಯಕನು ಹೊಯ್ಸಳ ಸೇನಾಪಡೆಯ ಪರವಾಗಿ ಯುದ್ದ ಮಾಡಿ ಮರಣ ಹೊಂದಿದನು. ಈ ವೀರನ ಗೌರವಾರ್ಥವಾಗಿ ದಂಡನಾಯಕನು ನೆತ್ತರು ಕೊಡುಗೆಯಾಗಿ ದತ್ತಿಯನ್ನು ಬಿಟ್ಟ. ವಿಜಯವು ಹೊಯ್ಸಳರದಾಯಿತು ಎಂಬುವುದು ಸ್ಪಷ್ಟ. ಪ್ರಸ್ತುತ ಶಾಸನೋಕ್ತ ನಂದಿದೇವನೂ ಚಂಗಾಳ್ವ ದೊರೆಯೆಂದು ಕಾಣುತ್ತದೆ. ಎಂ. ಹವಳಯ್ಯ ಪತ್ತೆ ಮಾಡಿರುವ ಒಂದು ವೀರಗಲ್ಲು

ಶಾಸನದಲ್ಲಿ ಮಹಾಮಂಡಲೇಶ್ವರ ವೀರನಂದಿದೇವನ ರಾಜ್ಯಭಾರದ ಉಲ್ಲೇಖವಿದೆ. ಈ ಶಾಸನದ ಕಾಲ ಕ್ರಿ.ಶ. ೧೨ನೆಯ ಶತಮಾನ.[೨೨]

ಮೂರನೆಯ ಬಲ್ಲಾಳನ ಶಾಸನ ಹಳಗನಹಳ್ಳಿಯಲ್ಲಿ ಕಂಡುಬರುತ್ತದೆ. ಇದರ ಕಾಲ ಕ್ರಿ.ಶ.೧೩೩೮ರ ಆಗಸ್ಟ್ ೨೫. ಹೊಯ್ಸಳರ ಆಳ್ವಿಕೆಯ ಅಂತ್ಯ ಆರಂಭಗೊಂಡಿತು. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾಗಿತ್ತು. ಮಹಾಪ್ರಧಾನ ಸಿಂಗೆಯ ದಣ್ಣಾಯಕನು ಹಳಗನಹಳ್ಳಿ ಹಾಗು ಹೊಲಗದ್ದೆಗಳನ್ನು ದಾನವಿತ್ತ ವಿಷಯವನ್ನು ಈ ಶಾಸನ ನಿರೂಪಿಸುತ್ತದೆ. ಆದರೆ ದಾನ ಪಡೆದವನ ಹೆಸರು ತಿಳಿದುಬರುವುದಿಲ್ಲ.[೨೩]

ವಿಜಯನಗರ ಅರಸರು

ವಿಜಯನಗರ ಸಾಮ್ರಾಜ್ಯ ದಕ್ಷಿಣಭಾರತದ ದೊಡ್ಡ ಸಾಮ್ರಾಜ್ಯ. ಈ ಸಾಮ್ರಾಜ್ಯಕ್ಕೆ ಸಂಬಂಧಪಟ್ಟ ಕೆಲವು ಶಾಸನಗಳು ತಾಲ್ಲೂಕಿನಲ್ಲಿ ಕಂಡುಬಂದಿವೆ. ಅವುಗಳಲ್ಲಿ ಮಹತ್ವವಾದ ರಾಜಕೀಯ ಅಂಶಗಳು ಕಂಡುಬರದಿದ್ದರೂ ಅಲ್ಪ ಪ್ರಮಾಣದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಕ್ರಿ.ಶ. ೧೫೦೬ರ ಸೆಪ್ಟೆಂಬರ್ ೧೭ರ ಅವಧಿಗೆ ಸಂಬಂಧಪಟ್ಟ ವೀರಗಲ್ಲು ಶಾಸನ ಪಿರಿಯಾಪಟ್ಟಣದಲ್ಲಿದೆ.[೨೪] ಈ ಶಾಸನದಲ್ಲಿ ಶ್ರೀಮತ್ ಮಹಾಮಂಡಲೇಶ್ವರ, ಅರಿರಾಯವಿಭಾಡ (ಶತೃಗಳನ್ನು ನಾಶ ಮಾಡಿದವನು) ಬಿರುದುಗಳು ಉಲ್ಲೇಖಗೊಂಡಿರುವುದು. ಶತೃಗಳೊಂದಿಗೆ ನಡೆದ ಕಾಳಗದಲ್ಲಿ ಬಯಿಚಂಗನು ಮರಣ ಹೊಂದಿದ ಮಾಹಿತಿ ಒದಗಿಸುತ್ತದೆ. ಗಂಗಪ್ಪನಾಯಕ ಅರಸನ ಸೈನ್ಯ ಆಕ್ರಮಿಸಿದಾಗ ಬಯಿಚಂಗನು ಅವರ ಮೇಲೆ ಎರಗಿ ವಿಜಯ ಪಡೆದನು. ವಿಜಯನಗರದ ಅರಸರ ಬಿರುದುಗಳು ಸ್ಪಷ್ಟವಾಗಿವೆ. ಆದರೆ ಅರಸನ ಹೆಸರು ಸವೆದಿದೆ. ಶಾಸನದ ಕಾಲ ಕ್ರಿ.ಶ. ೧೫೦೬ರ ಸೆಪ್ಟೆಂಬರ್ ೧೭, ಈ ವೇಳೆಯಲ್ಲಿ ಕೃಷ್ಣದೇವರಾಯನ ಅಣ್ಣನಾದ ವೀರನರಸಿಂಹ ಆಳ್ವಿಕೆ ಮಾಡುತ್ತಿದ್ದನು.

ಈ ವೇಳೆಗಾಗಲೇ ತಾಲ್ಲೂಕಿನ ಬೆಟ್ಟದಪುರದ ಮಲ್ಲಿಕಾರ್ಜುನ ದೇವಾಲಯ ದಾನ ಧರ್ಮಗಳಿಗೆ ಹೆಸರುವಾಸಿಯಾಗಿತ್ತು. ಭಕ್ತಾದಿಗಳಿಗಾಗಿ ಅನ್ನದಾನ ನಿರಂತರವಾಗಿ ಸಾಗುತ್ತಿತ್ತು. ಇಲ್ಲಿಯ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳು ವಿಜಯನಗರ ಸಾಮ್ರಾಜ್ಯಕ್ಕೆ ಹರಡಿ, ಅಂದಿನ ಕಂದಾಯಾಧಿಕಾರಿಯಾದ ಹಂಪರಸನು[೨೫] ಮಲ್ಲಿಕಾರ್ಜುನರಾಯರಿಗೆ ಒಳ್ಳೆಯದಾಗಲಿ ಯೆಂದು ನಾಲ್ಕು ಗ್ರಾಮಗಳನ್ನು ದೇವಾಲಯದ ಪೂಜಾವಿಧಿಗಳಿಗಾಗಿ ದಾನ ನೀಡಿರುವನು. ಅವುಗಳೆಂದರೆ, ಒರಿಯಪುರ, ಚಿಕಪುರ, ಮಲ್ಲಿನಾಥಪುರ, ದೇವರಾಯಪುರ. ಮಲ್ಲಿಕಾರ್ಜುನ ರಾಯನು ವಿಜಯನಗರದ ಅಂದಿನ ಅರಸನಾಗಿದ್ದನೆಂದು ಕಂಡುಬರುತ್ತದೆ. ಈತನ ಕಾಲವನ್ನು

ಶಾಸನದಲ್ಲಿ ಕ್ರಿ.ಶ. ೧೪೫೩ ಜನವರಿ ಎಂದು ಹೇಳಬಹುದು. ಇಂದಿನ ಬೆಟ್ಟದಪುರ ಅಂದಿನ ವೇಳೆಯಲ್ಲಿ ಕುಡುಕೂರು ಎಂದು ಹೆಸರುವಾಸಿಯಾಗಿತ್ತು. ಅಲ್ಲಿಯ ದೇವರನ್ನು ಅನ್ನದಾನಿ ಮಲ್ಲಿಕಾರ್ಜುನನೆಂದು ಕರೆಯಲಾಗುತ್ತಿತ್ತು. ಕೂರಗಲ್ಲು ಗ್ರಾಮದಲ್ಲಿರುವ ಶಾಸನ ವಿಜಯನಗರ ಸಂಬಂಧಿಸಿದ ದಾನ ಶಾಸನವಾಗಿದೆ. ಇದು ರಾಯನಾದ ದೇವರಾಯ ಮಹಾರಾಯರ[೨೬] ಆದೇಶದ ಮೇರೆಗೆ ಅನ್ನದಾನಿ ಮಲ್ಲಿಕಾರ್ಜುನ ದೇವರ ಅಂಗ-ರಂಗಭೋಗಕ್ಕಾಗಿ ಸಿಂಗಪಟ್ಟಣದ ಗೋಪರಸನು ಇರುಗಲುಹಳ್ಳಿ ಮತ್ತು ಕೊರ್ಗಲು ಗ್ರಾಮಗಳನ್ನು ದಾನ ನೀಡಿರುವ ವಿಷಯ ತಿಳಿದುಬರುತ್ತದೆ. ಆದರೆ ಇದರಲ್ಲಿ ಕಾಲ ಕಂಡುಬರುವುದಿಲ್ಲ.

ಕೃಷ್ಣದೇವರಾಯನ[೨೭] ಆಳ್ವಿಕೆಯ ಅವಧಿಗೆ ಸಂಬಂಧಪಟ್ಟ ಒಂದು ಶಾಸನ ಶೆಟ್ಟಿಹಳ್ಳಿಯಲ್ಲಿ ದೊರೆತಿದೆ. ಇದರಲ್ಲಿ ಕೃಷ್ಣದೇವರಾಯನಿಗೆ ಸಂಬಂಧಿಸಿದ ಕೆಲವು ಬಿರುದುಗಳಾದ ಮಹಾರಾಜಾಧಿರಾಜ, ಪರಮೇಶ್ವರ, ವೀರಪ್ರತಾಪ, ಕೃಷ್ಣರಾಯ, ಮಹಾರಾಯ ಎಂಬುದಾಗಿ ಉಲ್ಲೇಖಿತಗೊಂಡಿರುವವು. ಕೃಷ್ಣದೇವರಾಯನ ಅಧಿಕಾರಿಯಾದ ಕೃಷ್ಣರಾಯನಾಯಕನು ಕೋಟೆಯ ಸೀಮೆಯ ತುಂಗಸ್ಥಳದಲ್ಲಿರುವ ಶೆಟ್ಟಿಹಳ್ಳಿಯನ್ನು ಅನ್ನದಾನಿ ಮಲ್ಲಿಕಾರ್ಜುನ ದೇವರ ಸೇವೆಗಾಗಿ ದತ್ತಿ ನೀಡಿರುವುದಾಗಿದೆ. ಆದರೆ ಈ ಶಾಸನದಲ್ಲಿ ಅನ್ನದಾನಿ ಮಲ್ಲಿಕಾರ್ಜುನ ಎಂಬ ಹೆಸರು ಉಲ್ಲೇಖಿತಗೊಂಡಿರುವುದಿಲ್ಲ. ಧಾರ್ಮಿಕ ಕಾರ್ಯವನ್ನು ಗಮನಿಸಿದಾಗ ಅನ್ನದಾನಿ ಮಲ್ಲಿಕಾರ್ಜುನ ದೇವರಿಗಾಗಿಯೇ ಬಿಟ್ಟಿರುವ ದತ್ತಿ ಶಾಸನವಾಗಿದೆ. ಹಾಗೆಯೇ ಅಚ್ಚುತರಾಯನ[೨೮] ಕಾಲಾವಧಿಗೆ ಸಂಬಂಧಪಟ್ಟ ಒಂದು ಶಾಸನ ಬೆಟ್ಟದಪುರದಲ್ಲಿದೆ. ಶಾಸನದಲ್ಲಿರುವ ಉಲ್ಲೇಖಗಳು ಅಪೂರ್ಣವಾಗಿದ್ದು, ಮಹಾರಾಜ, ಪರಮೇಶ್ವರ ಎಂಬ ಬಿರುದುಗಳು ದಾಖಲಾಗಿವೆ. ಬಹುಶಃ ಮುದ್ದುಗಾವುಂಡ ವ್ಯಕ್ತಿಯು ತನ್ನ ತಂದೆಯ ಸ್ಮರಣಾರ್ಥ ಹಾಕಿಸಿರುವ ಶಾಸನವಾಗಿದೆ. ಮತ್ತೊಂದು ವಿಜಯನಗರದ ಎರಡನೆಯ ಹರಿಹರ[೨೯] ಅಥವಾ ವೀರಹರಿಹರರಾಯನ ಆಳ್ವಿಕೆಗೆ ಸಂಬಂಧಿಸಿದ ಒಂದು ಶಿಲಾಶಾಸನ ಮಲ್ಲಿನಾಥಪುರದಲ್ಲಿ ಇರುವುದು. ಕ್ರಿ.ಶ. ೧೩೭೮ ಫೆಬ್ರವರಿ ೧೮ ರಂದು ಅರಸನ ಆದೇಶದ ಮೇರೆಗೆ ಲಕ್ಕಣ ಒಡೆಯರು ಕುಡುಕೂರಿನ ಮಲ್ಲಿಕಾರ್ಜುನ ದೇವರಿಗೆ ಸಿಂಗಪಟ್ಟಣದ ಉಪಗ್ರಾಮವಾದ ಆಪಗೊಂಡನಹಳ್ಳಿಯನ್ನು ದಾನ ನೀಡಿರುವುದಾಗಿದೆ. ಆ ಗ್ರಾಮದ ಆದಾಯ ೨೫ ಗದ್ಯಾಣಗಳು, ಶಾಸನದಲ್ಲಿ ಉಲ್ಲೇಖಿತವಾಗಿರುವ ಸಿಂಗಪಟ್ಟಣ ಇಂದಿನ ಪಿರಿಯಾಪಟ್ಟಣವಾಗಿರುವುದು.

ತಿರುಮಲರಾಯನ[೩೦] ಮಂತ್ರಿ ಮತ್ತು ದಂಡನಾಯಕ ದೇವರಾಯನಿಗೆ ಸಂಬಂಧಪಟ್ಟ ಶಿಲಾಶಾಸನ ಸಂಗರಶೆಟ್ಟಿಹಳ್ಳಿಯಲ್ಲಿ ಕಂಡುಬಂದಿದೆ. ಇದರ ಕಾಲ ಕ್ರಿ.ಶ.೧೫೭೩. ಆದರೆ ಇಷ್ಟನ್ನು ಬಿಟ್ಟರೆ ಯಾವುದೇ ಮಾಹಿತಿ ಶಾಸನದಿಂದ ಕಂಡುಬರುವುದಿಲ್ಲ. ವಿಜಯನಗರಕ್ಕೆ

ಸಂಬಂಧಪಟ್ಟ ಮತ್ತೊಂದು ಶಿಲಾಶಾಸನ ಬೆಟ್ಟದಪುರದಲ್ಲಿದೆ. ರಾಮರಾಜಯ್ಯನ ಪುತ್ರನಾದ ತಿರುಮಲರಾಜಯ್ಯ ದೇವಮಹಾಅರಸು೩೧ ನಂಜರಾಯಪಟ್ಟಣದ ರುದ್ರಗಣನಿಗೆ ಶಿಲಾಶಾಸನವನ್ನು ಕ್ರಿ.ಶ. ೧೬೦೭ರಂದು ನೀಡಿರುವನು. ತಿರುಮಲರಾಜಯ್ಯನು ತನ್ನ ತಂದೆ ತಾಯಿಯಾದ ರಾಮರಾಜಯ್ಯ ಮತ್ತು ತಿಮ್ಮಾಜಮ್ಮನವರಿಗೆ ಒಳ್ಳೆಯದಾಗಲೆಂದು ಮಲ್ಲಿಕಾರ್ಜುನ ದೇವರ ಅಂಗ–ರಂಗ–ಭೋಗಕ್ಕಾಗಿ ಮಳವಾಡಿ ರಾಜ್ಯವನ್ನು ದಾನ ನೀಡಿರುವನು. ಈ ಶಾಸನದಲ್ಲಿ ಕಾಶಿ, ಕೇದಾರ, ನೀಲಕಂಠ, ಲೇಪಾಲ, ತುಂಗಾಭದ್ರ ಮತ್ತು ವಾರಣಾಸಿಯ ಅಭಿಮಾನಿ ದೇವರುಗಳನ್ನು ವಂದಿಸುತ್ತಾ ರಾಮನಾಥಪುರದ ಪವಿತ್ರ ಕ್ಷೇತ್ರದಲ್ಲಿ ಸ್ನಾನಮಾಡಿ, ಶ್ರೀಶೈಲ ಪರ್ವತದ ಮಲ್ಲಿಕಾರ್ಜುನನಿಗೆ ನಮಿಸುತ್ತಾ, ತಿರುಪತಿಯ ತಿರುವೆಂಗಳನಾಥ ದೇವರನ್ನು ಪ್ರಾರ್ಥಿಸುತ್ತಾ, ಕಪಿಲೆಯ ನಂಜುಂಡೇಶ್ವರನನ್ನು ಪ್ರಾರ್ಥಿಸುತ್ತಾ, ಶ್ರೀರಂಗಪಟ್ಟಣದ ರಂಗನಾಥನನ್ನು ನೆನೆಯುತ್ತಾ, ಅನ್ನದಾನಿಮಲ್ಲಿಕಾರ್ಜುನ ದೇವರ ರಥೋತ್ಸವದ ಸಮಯದಲ್ಲಿ ೨೧ ತಲೆಮಾರಿನವರಿಗೆ ಒಳ್ಳೆಯದಾಗಲೆಂದು ದಾನವನ್ನು ನೀಡಿರುವುದಾಗಿದೆ. ಮತ್ತು ಶ್ರೀರಂಗಪಟ್ಟಣಕ್ಕೆ ರುದ್ರಗಣನು ಕೊಡಬೇಕಾದ ತೆರಿಗೆಯನ್ನು ಮನ್ನಾ ಮಾಡಲಾಗಿದೆ ಎಂದು ಹೇಳಲಾಗಿದೆ. ಈ ಶಿಲಾಶಾಸನವನ್ನು ನಂಜುಂಡರಾಜನ ಪುತ್ರನಾದ ಶ್ರೀಕಂಠರಾಜನ ಪುತ್ರ ರುದ್ರಗಣನ ಆಳ್ವಿಕೆಯ ಕಾಲದಲ್ಲಿ ಹಾಕಿಸಿ ಒಂದು ಲಕ್ಷ ತೊಂಬತ್ತಾರು ಸಾವಿರ ಜಂಗಮರ ಮುಂದೆ ನೀಡಲಾಗಿದೆ. ಚಂಗಾಳ್ವ ವಂಶದ ಪಿರಿಯರಾಜನೆಂಬ ಮೊದಲ ಹೆಸರುಳ್ಳ ರುದ್ರಗಣನು ನಂಜರಾಯಪಟ್ಟಣ ರಾಜ್ಯದ ರಾಜನಾಗಿದ್ದನು. ರಾಮರಾಜಯ್ಯನ ಪುತ್ರನಾದ ತಿರುಮಲರಾಜಯ್ಯನಿಂದ ನಿರ್ಮಿಸಲ್ಪಟ್ಟ ನಂಜರಾಯಪಟ್ಟಣ ರಾಜ್ಯಕ್ಕೆ ಒಳ್ಳೆಯದಾಗಲಿ ಎಂದಿದೆ.

ಚಂಗಾಳ್ವರ ಕಾಲದಲ್ಲಿನ ಪಿರಿಯಾಪಟ್ಟಣ

ಮಧ್ಯಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಚಂಗಾಳ್ವ ಮನೆತನ ಚಿಕ್ಕದಾದರೂ ಸುಮಾರು ಹತ್ತನೆಯ ಶತಮಾನದಿಂದ ಹದಿನೇಳನೆಯ ಶತಮಾನದವರೆಗೂ ಸುದೀರ್ಘ ಕಾಲ ರಾಜ್ಯಭಾರ ಮಾಡಿರುವುದಾಗಿದೆ. ಚಂಗಾಳ್ವರಂತೆ ಸಮಕಾಲೀನರಾದ ಕೊಂಗಾಳ್ವರ ಚರಿತ್ರೆಯು ಕೊಡಗಿನ ಚರಿತ್ರೆಯೊಂದಿಗೆ ಸಂಯುಕ್ತಗೊಂಡಿದೆ. ಚಂಗಾಳ್ವರಿಗೂ ಕೊಂಗಾಳ್ವರಿಗೂ ಪದೇ ಪದೇ ಕದನ ನಡೆದು ಕೊನೆಗೆ ಹದಿಮೂರನೆಯ ಶತಮಾನದಲ್ಲಿ ಚಂಗಾಳ್ವರು ಕೊಂಗಾಳ್ವರ ಪ್ರದೇಶವನ್ನು ವಶಪಡಿಸಿಕೊಂಡಿರುವಂತೆ ಕಂಡುಬರುತ್ತದೆ. ಈ ಎರಡು ವಂಶದವರು ಒಂದೇ ಮೂಲದವರಾಗಿದ್ದು, ಕನ್ನಡದಲ್ಲಿ ಶಾಸನಗಳನ್ನು ಹಾಕಿಸಿರುವರು. ಹೊಯ್ಸಳರು ಇವರನ್ನು ಮಲೆಪರೆಂದು ಕರೆದಿರುವುದರಿಂದ ಇವರು ಬೆಟ್ಟಗುಡ್ಡಗಳ ಪ್ರದೇಶವನ್ನು ಆಳುತ್ತಿದ್ದರೆಂದು ಕಂಡುಬರುತ್ತದೆ. ಇದಕ್ಕೆ ಉದಾಹರಣೆಯಾಗಿ ಪಿರಿಯಾಪಟ್ಟಣ ಮತ್ತು ಸುತ್ತಮುತ್ತಲಿನ ಪರಿಸರ ಬೆಟ್ಟಗುಡ್ಡಗಳಿಂದ

ಆವೃತ್ತವಾಗಿರುವುದಾಗಿದೆ. ಗಂಗ ಮತ್ತು ಚೋಳ ವಂಶಗಳ ಸಂಘರ್ಷದ ಸಂದರ್ಭದಲ್ಲಿ ಹುಟ್ಟಿಕೊಂಡ ಎರಡು ಪ್ರಮುಖ ಅರಸು ಮನೆತನಗಳೆಂದರೆ ಚಂಗಾಳ್ವರು ಮತ್ತು ಕೊಂಗಾಳ್ವರು. ಚಂಗಾಳ್ವರು ಆಳಿದ ಭೂಪ್ರದೇಶವೇ ಚಂಗನಾಡು. ಈ ಚಂಗನಾಡಿನ ಮೊದಲ ಉಲ್ಲೇಖ ಕ್ರಿ.ಶ.೧೧೦೪ರ ಹಾಸನ ತಾಲ್ಲೂಕಿನ ಗುಡ್ಡತ್ತಿರಣ್ಯದ ಶಾಸನದಲ್ಲಿ ಕಂಡುಬರುತ್ತದೆ.[೩೨] ಅಲ್ಲಿ ಚಂಗನಾಡು ಮಾವನೂರು ಉಲ್ಲೇಖಗೊಂಡಿದೆ. ನಂತರ ಅರಕಲಗೂಡು ತಾಲ್ಲೂಕಿನ ರಾಮನಾಥಪುರ,[೩೩] ರುದ್ರಪಟ್ಟಣ[೩೪], ಪಿರಿಯಾಪಟ್ಟಣ ತಾಲ್ಲೂಕಿನ ದೊಡ್ಡ ಬೆಲಹಾಳು,[೩೫] ರಾವಂದೂರು,[೩೬] ಕೂರಗಲ್ಲು,[೩೭] ಕುಡುಕೂರು,[೩೮] ಶಾಸನಗಳಲ್ಲೂ ಚಂಗನಾಡಿನ ಪ್ರಸ್ತಾಪವಿದೆ.

ಚೋಳರು ಗಂಗರನ್ನು ಸೋಲಿಸಿ ಗಂಗವಾಡಿಯ ದಕ್ಷಿಣ ಭಾಗಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು ಪ್ರಬಲರಾಗಿದ್ದರು. ಆಗ ಅಸ್ತಿತ್ವಕ್ಕೆ ಬಂದ ಚಂಗಾಳ್ವರ ಆಳ್ವಿಕೆಯು ಇಂದಿನ ಮೈಸೂರು[೩೯] ಜಿಲ್ಲೆಯ ಕೃಷ್ಣರಾಜನಗರ, ಪಿರಿಯಾಪಟ್ಟಣ, ಹುಣಸೂರು ತಾಲ್ಲೂಕುಗಳು, ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು, ಹಾಸನ ಜಿಲ್ಲೆಯ ಅರಕಲಗೂಡು ಮತ್ತು ಚನ್ನರಾಯಪಟ್ಟಣ ತಾಲ್ಲೂಕಿನ ಕೆಲವು ಭಾಗಗಳನ್ನು ಒಳಗೊಂಡಿತ್ತು. ಅಲ್ಲಿ ಅವರ ಶಾಸನಗಳು ದೊರೆತಿರುವವು. ದೊರೆತಿರುವ ಶಾಸನಗಳ ಆಧಾರದ ಮೇಲೆ ಹನ್ನೊಂದನೆಯ ಶತಮಾನದಿಂದ[೪೦] ಹದಿಮೂರನೆಯ ಶತಮಾನದವರೆಗೆ ಆಳಿದ ಚಂಗಾಳ್ವರನ್ನು ಪ್ರಾರಂಭದ ಚಂಗಾಳ್ವರೆಂದೂ, ಮತ್ತು ಎರಡು ಶತಮಾನಗಳ ನಂತರ ಮತ್ತೆ ಕ್ರಿ.ಶ. ೧೫೦೩–೦೪ರ ಸುಮಾರಿನಲ್ಲಿ ಕಾಣಿಸಿಕೊಂಡು ಕ್ರಿ.ಶ. ೧೬೪೫ರವರೆಗೆ ಆಳಿದ ಚಂಗಾಳ್ವರನ್ನು ನಂತರದ ಚಂಗಾಳ್ವರೆಂದೂ ಪರಿಗಣಿಸಲಾಗಿದೆ. ಪ್ರಾರಂಭದಲ್ಲಿ ಚಂಗಾಳ್ವರು ಚೋಳರ ಆಶ್ರಿತರಾಗಿಯೇ ಆಳ್ವಿಕೆ ನಡೆಸಿದಂತೆ ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ.೧೦೦೪ರಲ್ಲಿ ಚೋಳರು ಗಂಗವಾಡಿಯ ದಕ್ಷಿಣಭಾಗಗಳನ್ನು ಗೆದ್ದುಕೊಂಡರು. ಗೆಲುವಿನ ನಾಯಕ ರಾಜೇಂದ್ರಚೋಳನಾಗಿದ್ದು, ಅವನ ಗುರಿ ತಲಕಾಡನ್ನು ವಶಪಡಿಸಿಕೊಳ್ಳು ವುದಾಗಿತ್ತು. ಅದರಲ್ಲಿ ಸಫಲರಾದ ಚೋಳರು ತಾವು ಗೆದ್ದ ಪ್ರದೇಶಗಳಲ್ಲಿ ತಮಗೆ ವಿಧೇಯ ರಾಗಿರಬಲ್ಲ ಸ್ಥಳೀಯರನ್ನೇ ಮಾಂಡಲೀಕರನ್ನಾಗಿ ನೇಮಿಸಿರುವ ಸಾಧ್ಯತೆಗಳಿವೆ.

ಚಂಗಾಳ್ವ–ಚೋಳ ಸಂಘರ್ಷ ಕನಿಷ್ಟ ಮೂವತ್ತು ವರ್ಷಗಳ ಕಾಲವಾದರೂ ಮುಂದುವರಿದು ಗಂಗರ ಅಧೀನರಾಗಿ ಆಳುತ್ತಿದ್ದ ಚಂಗಾಳ್ವರು ಪ್ರಬಲರಾಗಿ ವಿರೋಧಿಸುತ್ತಲೇ ಚೋಳರ ಮಾಂಡಳಿಕತ್ವವನ್ನು ಒಪ್ಪಿಕೊಂಡಿರಬೇಕು. ಅವರ ಮೊದಲ ಪ್ರಬಲ ನೆಲೆ ಹನಸೋಗೆ, ಚೋಳರ ಅಧಿಕಾರವನ್ನು ಒಪ್ಪಿಕೊಂಡ ಚಂಗಾಳ್ವರು, ನಂತರ ಸಂಪ್ರದಾಯವೆಂಬಂತೆ ತಮ್ಮ ಹೆಸರಿನ ಜೊತೆಗೆ ಚೋಳ ರಾಜರ ಹೆಸರುಗಳನ್ನು ಸೇರಿಸಿಕೊಂಡಿರಬೇಕು. ಆದ್ದರಿಂದ ನಂತರದ ಚಂಗಾಳ್ವರು ವೀರರಾಜೇಂದ್ರ ನನ್ನಿಚಂಗಾಳ್ವ, ರಾಜೇಂದ್ರಚೋಳ ನನ್ನಿಚಂಗಾಳ್ವ, ಕುಲೋತ್ತುಂಗ ಭುಜಬಲಚಂಗಾಳ್ವ ಹೆಸರುಗಳಿಂದ ಪ್ರಸ್ತಾಪಿತರಾಗುತ್ತಾರೆ.[೪೧]

ಚಿಕ್ಕಹನಸೋಗೆಯ ಅಬ್ಬೆಯ ಜಿನಾಲಯದ ನಿರ್ಮಾಣ ಕುರಿತಂತೆ ಇರುವ ಎರಡು ಶಾಸನಗಳು ಉಪಯುಕ್ತವಾಗಿದ್ದರೂ ಗೊಂದಲಕಾರಿಯಾಗಿವೆ. ಒಂದು ಶಾಸನವು ಶ್ರೀ ರಾಜೇಂದ್ರ ಚೋಳನ್ ಅಬ್ಬೆಯ ಜಿನಾಲಯಮ್ ದೇಸಿಗಣಮ್ ಬಸದಿ ಪುಸ್ತಕಗಚ್ಚಮ್ ಎಂದು ಉಲ್ಲೇಖಿಸಿದೆ.[೪೨] ಇದು ಮೇಲ್ಭಾಗದಲ್ಲಿರುವ ಶಾಸನ. ಆ ಶಾಸನದ ಕೆಳಗೆ ಶ್ರೀ ವೀರರಾಜೇಂದ್ರ ನನ್ನಿಚಂಗಾಳ್ವ ದೇವರ್ಮ್ಮಾಡಿಸಿದ ಪುಸ್ತಕ ಗಚ್ಚದ ಬಸದಿ ಎಂದು ಶಾಸನವಿದೆ.[೪೩] ವೀರರಾಜೇಂದ್ರ ಎನ್ನುವುದು ಚೋಳ ಒಂದನೆಯ ರಾಜೇಂದ್ರನ ಬಿರುದು. ಈ ವೀರರಾಜೇಂದ್ರನ ಕಾಲದಲ್ಲಿ ನನ್ನಿ ಚಂಗಾಳ್ವನು ಹನಸೋಗೆಯಲ್ಲಿ ಬಸದಿ ನಿರ್ಮಿಸಿದ್ದಾನೆ. ಬಹುತೇಕ ಇದೇ ವಿಷಯವನ್ನು ರಾಜೇಂದ್ರ ಚೋಳನ ಉಲ್ಲೇಖವಿರುವ ಶಾಸನವೂ ಪ್ರಸ್ತಾಪಿಸುತ್ತದೆ. ರಾಜೇಂದ್ರಚೋಳ ಮತ್ತು ವೀರರಾಜೇಂದ್ರ ಇಬ್ಬರೂ ಪ್ರತ್ಯೇಕ ವ್ಯಕ್ತಿಗಳು ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಇವರಿಬ್ಬರೂ ಒಬ್ಬರೇ ಇರಬೇಕು ಎಂದು ಡಾ. ಬಾ.ರಾ. ಗೋಪಾಲ್‌ರವರ ಅಭಿಪ್ರಾಯ.[೪೪]

ನಮಗೆ ಶಾಸನಗಳ ಮೂಲಕ ತಿಳಿದುಬರುವ ಮೊದಲ ಚಂಗಾಳ್ವ ಅರಸ ನನ್ನಿ ಚಂಗಾಳ್ವ. ಅವನು ತನ್ನ ಹೆಸರಿನ ಜೊತೆಗೆ ವೀರರಾಜೇಂದ್ರ ಹೆಸರನ್ನು ಸೇರಿಸಿಕೊಂಡಿರುವುದರಿಂದ ಆ ವೇಳೆಗೆ ಅವನು ಚೋಳರ ಅಧಿಕಾರವನ್ನು ಒಪ್ಪಿಕೊಂಡು ಮಾಂಡಲಿಕನಾಗಿದ್ದನೆಂಬುದು ಕಂಡುಬರುತ್ತದೆ. ಜೊತೆಗೆ ಅಂದಿನ ಶಾಸನಗಳು ಹೆಚ್ಚಾಗಿ ಚಿಕ್ಕಹನಸೋಗೆಯಲ್ಲೇ ದೊರೆತಿರುವುದರಿಂದ ಮೊದಲಿಗೆ ಚಂಗಾಳ್ವರ ನೆಲೆ ಇದೇ ಆಗಿತ್ತೆಂದು ಕಾಣಬಹುದು. ಮೊದಲ ಚಂಗಾಳ್ವರ ಖಚಿತವಾದ ಕಾಲದ ಉಲ್ಲೇಖವಿರುವುದು ಕಿರಂಗೂರಿನ ಶಾಸನದಲ್ಲಿ.[೪೫] ಇದು ಹುಣಸೂರು ತಾಲ್ಲೂಕಿನಲ್ಲಿ ಕಂಡುಬರುತ್ತದೆ. ಕ್ರಿ.ಶ.೧೦೯೧ರ ಶಾಸನವು ಚಂಗಾಳ್ವ ದೇವರ ಮರಿಯ ಪೆರ್ಗಡೆ ಹಿಮ್ಮಿವಯ್ಯನ ಜೊತೆಗೆ ನೀಡಿದ ದಾನದ ವಿವರ ನೀಡುತ್ತದೆ.

ಚಂಗಾಳ್ವರ ಮೂಲ ನೆಲೆ ಹುಣಸೂರು ಮತ್ತು ಅದರ ಸುತ್ತಮುತ್ತಲ ಪ್ರದೇಶ. ಈ ಪ್ರದೇಶವೇ ಚಂಗನಾಡು.[೪೬] ಡೆರೆಟ್ ಅವರು ತಿಳಿಸುವಂತೆ ಚಂಗಾಳ್ವರ ರಾಜ್ಯದ ಎಲ್ಲೆಕಟ್ಟು ಉತ್ತರ ದಕ್ಷಿಣಕ್ಕೆ ಹೇಮಾವತಿಯಿಂದ ಕಾವೇರಿಯವರೆಗೆ, ಪೂರ್ವ ಪಶ್ಚಿಮಕ್ಕೆ ಕಾವೇರಿಯಿಂದ ಕೊಡಗಿನವರೆಗೆ[೪೭] ಹರಡಿರುವುದಾಗಿದೆ. ಜನಪದ ವೀರಕಾವ್ಯ ಪಿರಿಯಾಪಟ್ಟಣ ಕಾಳಗದಲ್ಲಿ ಪಿರಿಯಾಪಟ್ಟಣ ರಾಜ್ಯವನ್ನು ಗಂಡುಭೂಮಿ ಎಂದು ಕರೆಯಲಾಗಿದೆ. ಗಂಡುಭೂಮಿಯ ಸಂಸ್ಕೃತ ರೂಪವೇ ಪುಂರಾಷ್ಟ್ರ. ಈ ಗಂಡು ಭೂಮಿ ಮೈಸೂರಿನಿಂದ ಪಡುವಣ ಭಾಗದ ನಾಡು ಎಂಬ ಅರ್ಥ ಬರುವಂತೆ ಹೇಳಿಕೊಂಡು ಬರಲಾಗಿದೆ.[೪೮] ಪುಂರಾಷ್ಟ್ರದ ವ್ಯಾಪ್ತಿಯನ್ನು ಸ್ಪಷ್ಟವಾಗಿ ಹೇಳಬರುವುದಿಲ್ಲವಾದರೂ ಯಳಂದೂರು ತಾಲ್ಲೂಕಿನ ಮಾಂಬಳ್ಳಿ ಶಾಸನ ಒಂದರಲ್ಲಿ ಕಾವೇರಿ ಹಾಗು ಕಪಿಲ ನದಿಗಳಿಂದ ಶೋಭಿಸುತ್ತಿತ್ತೆಂದು ಹೇಳಲಾಗಿದೆ.[೪೯] ಈ ಪುಂರಾಷ್ಟ್ರ

ಅಥವಾ ಪುನ್ನಾಟವು ಕಾವೇರಿ ನದಿ ಹರಿದುಬರುವ ಕೊಡಗಿನ ಕುಶಾಲನಗರದಿಂದ ರಾಮನಾಥ ಪುರ, ಎಡತೊರೆ ಸೇರಿದಂತೆ ಕಪಿಲ ಹರಿದುಬರುವ ಹೆಗ್ಗಡದೇವನಕೋಟೆ, ನಂಜನಗೂಡು, ಟಿ. ನರಸೀಪುರಗಳವರೆಗೂ ಆವರಿಸಿರುವ ಹುಣಸೂರು, ಪಿರಿಯಾಪಟ್ಟಣಗಳ ವಿಸ್ತಾರವಾದ ನಾಡೆಂದು ಕಾಣುತ್ತದೆ. ಇದಕ್ಕೆ ಪೂರಕವಾಗಿ ದೇ.ಜ.ಗೌ. ಅವರು ಪಿರಿಯಾಪಟ್ಟಣದ ಸುತ್ತಮುತ್ತಲ ಪ್ರದೇಶಕ್ಕೆ ಹಿಂದೆ 'ಪುನ್ನಾಟ' ಎಂಬ ಹೆಸರಿತ್ತು ಎಂದು ಹೇಳಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಪೂನಾಡಹಳ್ಳಿಯೇ ಪುನ್ನಾಟದ ಅವಶೇಷ ರೂಪವಾಗಿರಬಹುದೆಂದು ಹೇಳುತ್ತಾರೆ.[೫೦] ಆದರೆ ಇಂದಿನ ಪೂನಾಡಹಳ್ಳಿಯೇ ಐತಿಹಾಸಿಕ ಪುನ್ನಾಟ ಎಂಬುವುದಕ್ಕೆ ಯಾವುದೇ ಆಧಾರಗಳಾಗಲಿ ಅಥವಾ ಸ್ಮಾರಕಗಳಾಗಲಿ ದೊರೆತಿಲ್ಲ ವಾದ್ದರಿಂದ ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ.

ಚಿಕ್ಕಹನಸೋಗೆಯ ಶಾಸನವು[೫೧] ಚಂಗಾಳ್ವರನ್ನು ಯಾದವರೆಂದೂ, ಅಡಗೂರಿನ ಶಾಸನಗಳು[೫೨] ದ್ವಾರಾವತಿ ಪುರವರಾಧೀಶ್ವರರೆಂದೂ ಉಲ್ಲೇಖಿಸಿವೆ. ಚಂಗಾಳ್ವರ ಮತ್ತೊಂದು ಪ್ರಮುಖ ಶಾಸನ ಸನ್ಯಾಸಿಪುರದ ತಾಮ್ರಶಾಸನ.[೫೩] ಇದು ನಾಗರಿಲಿಪಿಯಲ್ಲಿದ್ದು, ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿದೆ. ಈ ಶಾಸನದಿಂದ ಮೊದಲ ಬಾರಿಗೆ ಚಂಗಾಳ್ವರು ಹರಿತ ಗೋತ್ರದ ಆಶ್ವಲಾಯನ ಸೂತ್ರದ ರುಕ್ ಶಾಖೆಗೆ ಸೇರಿದವರೆಂದು ಮತ್ತು ಯದು ವಂಶದವರೆಂದು ತಿಳಿಸುತ್ತದೆ. ಇದರಿಂದ ಇವರು ಮೂಲತಃ ಗುಜರಾತಿನ ಯಾದವ ಪಂಗಡಕ್ಕೆ ಸೇರಿದವರೆಂದೇ ಭಾವಿಸಲಾಗಿದೆ.

ಪ್ರಾರಂಭದ ಚಂಗಾಳ್ವರು

ಚಂಗಾಳ್ವರು ಗಂಗರ ತರುವಾಯ ಚೋಳರ ಸಾಮಂತರಾಗಿದ್ದು, ಸ್ವತಂತ್ರರಾಗಲು ಹೊಯ್ಸಳ, ವಿಜಯನಗರ ಮತ್ತು ಮೈಸೂರು ಅರಸರೊಡನೆ ನಿರಂತರ ಹೋರಾಡಿದರು. ಆದರೆ ಅವರು ಹೊಯ್ಸಳರಂತೆ, ಮೈಸೂರಿನ ಒಡೆಯರಂತೆ, ಇಕ್ಕೇರಿಯ ನಾಯಕರಂತೆ ದೊಡ್ಡ ರಾಜ್ಯವನ್ನು ಸ್ಥಾಪಿಸಲು ಸಾಧ್ಯವಾಗಲೇ ಇಲ್ಲ. ಚಂಗಾಳ್ವ ರಾಜ್ಯ ಸ್ಥಾಪನೆಯ ವಿಚಾರ ಅರೆ ಇತಿಹಾಸ ಹಾಗು ಐತಿಹ್ಯಗಳಿಂದ ಕೂಡಿದೆ. ಹತ್ತನೆಯ ಶತಮಾನದಲ್ಲಿ ದ್ವಾರಕಾಪಟ್ಟಣದಿಂದ ದಕ್ಷಿಣದ ಕಡೆಗೆ ವಲಸೆ ಬಂದ ಜೈನಕ್ಷತ್ರಿಯ ವಿಕ್ರಮ ಚಂಗಾಳ್ವನು[೫೪] ಪಿರಿಯಾಪಟ್ಟಣ ತಾಲ್ಲೂಕಿನ ತುಂಗ ಎಂಬಲ್ಲಿ ತನ್ನೊಂದಿಗೆ ಬಂದ ಸುಮಾರು ೫೦೦–೬೦೦ ಕುಟುಂಬಗಳೊಂದಿಗೆ ನೆಲೆಸಿ ಅಲ್ಲಿಯ ಮುಖಂಡನಾದನು. ಇವನು ಸ್ಥಳೀಯ ಬೇಡ ನಾಯಕರನ್ನು ಸೋಲಿಸಿ ರಾಜ್ಯ ವಿಸ್ತರಿಸಿದ. ಬೇಡನಾಯಕರಲ್ಲಿ ಪ್ರಬಲರಾದವರು. ವಲಸೆ ಬಂದ ಚಂಗಾಳ್ವರ ಹೆಣ್ಣುಗಳ ಸೌಂದರ್ಯಕ್ಕೆ ಮನಸೋತು ವಿವಾಹ ಸಂಬಂಧಕ್ಕೆ ಒತ್ತಾಯ ಮಾಡಿದಾಗ ವಿಕ್ರಮ ಚಂಗಾಳ್ವನು ವಿವಾಹಕ್ಕೆ ಚಪ್ಪರವನ್ನು ಕಟ್ಟಿಸಿ ಚಪ್ಪರದ ಕೊನೆಯಲ್ಲಿ ನಿರ್ಮಿಸಿದ ಕತ್ತಲೆಯ ಕೋಣೆಯಲ್ಲಿ

ಕಂದಕವನ್ನು ತೋಡಿಸಿ ಪೂಜೆಯ ನೆಪದಿಂದ ಬೇಡರನ್ನು ಒಬ್ಬೊಬ್ಬರನ್ನಾಗಿ ಕಳುಹಿಸಿ, ಅವರನ್ನು ಕಡಿದು ಕಂದಕದಲ್ಲಿ ಹಾಕಿಸಿದ. ಈ ರೀತಿ ಬೇಡರ ಉಪದ್ರವ ಅಂತ್ಯಗೊಂಡಿತ್ತು.[೫೫] ಹೀಗೆ ಪ್ರಬಲಗೊಂಡ ವಿಕ್ರಮ ಚಂಗಾಳ್ವನು ತೀರ್ಥಂಕರ ಬೆಟ್ಟದ ಬಳಿ ಮೊಲವೊಂದು ಬೇಟೆ ನಾಯಿಯನ್ನು ಅಟ್ಟಿಸಿಕೊಂಡು ಹೋಗುತ್ತಿದ್ದ ದೃಶ್ಯ ಕಂಡನು. ನಂತರ ರಾಜ್ಯ ಸ್ಥಾಪನೆಗೆ ಯೋಗ್ಯವಾದ ಗಂಡುಭೂಮಿ ಎಂದು ತಿಳಿದು ಅಲ್ಲಿ ಕೋಟೆ ಸಮೇತ ಪಟ್ಟಣ ಕಟ್ಟಿಸಿ ಅದನ್ನು ಬೆಟ್ಟದಪುರವೆಂದು ಕರೆದ. ನಂತರ ಅವನು ಬೆಟ್ಟದಪುರದ ಆಡಳಿತವನ್ನು ತನ್ನ ಮಗ ಚಂಗಲರಾಯನಿಗೂ ಮತ್ತು ಕಲ್ಲಹಳ್ಳಿಯನ್ನು ತನ್ನ ಮಂತ್ರಿ ಹಾಗು ಕುಲದವನೂ ಆದ ಮಂಗರಸನಿಗೆ[೫೬] ವಹಿಸಿದನೆಂದು ಹೇಳಲಾಗಿದೆ.

ಚಂಗಲರಾಯನ ಬಗೆಗೆ ಜನಪದ ಕಥೆಗಳಿವೆ.[೫೭] ಒಂದು ಕಥೆಯ ಪ್ರಕಾರ ಅವನ ಒಂದು ಕಿವಿ ಕತ್ತೆಯ ಕಿವಿಯಂತಿದ್ದು ಆ ರಹಸ್ಯವು ಅವನ ಕ್ಷೌರಿಕನಿಗೆ ಮಾತ್ರ ತಿಳಿದಿತ್ತು. ಕ್ಷೌರಿಕ ಆ ರಹಸ್ಯವನ್ನು ತನ್ನಲ್ಲೆ ಇರಿಸಿಕೊಳ್ಳಲಾಗದೆ ಅರಮನೆಯ ಹೊರಾಂಗಣದಲ್ಲಿದ್ದ ಗಂಧದ ಮರಕ್ಕೆ ತಿಳಿಸಿದ. ಸ್ವಲ್ಪ ದಿನಗಳ ನಂತರ ದೊಂಬರ ತಂಡವೊಂದು ಆಟವಾಡಿ ತನ್ನನ್ನು ಸಂತೋಷಗೊಳಿಸಲು ಚಂಗಲರಾಯನು ಅವರಿಗೆ ಡೋಲು ಮಾಡಿಕೊಳ್ಳಲೆಂದು ಗಂಧದ ಮರವನ್ನು ಕಡಿದುಕೊಟ್ಟ. ಅವರು ತಯಾರಿಸಿದ ಡೋಲು ಕ್ಷೌರಿಕ ಹೇಳಿದ್ದ ಅರಸನ ಕಿವಿಯ ರಹಸ್ಯದ ಹೊರತು ಯಾವ ನಾದವನ್ನೂ ಹೊರಡಿಸಲಿಲ್ಲ. ಅರಸನ ಕಿವಿ ಕತ್ತೆ ಕಿವಿ ಎಂದು ಡೋಲು ಬಡಿದುಕೊಳ್ಳುವಾಗ ಅವನಿಗೆ ನಾಚಿಕೆ ಆಯಿತು. ಮತ್ತೊಂದು ದಂತಕಥೆಯ ಪ್ರಕಾರ ಚಂಗಲರಾಯನ ತೋಳುಗಳು ಮೊಣಕಾಲನ್ನು ಮುಟ್ಟುತ್ತಿದ್ದವು. ಜೈನನಾದ ಅವನು ಜೀವಂತ ಪ್ರಾಣಿಗಳನ್ನು ಎಲ್ಲಿ ತುಳಿದು ಬಿಡುವೆನೋ ಎಂಬ ಧರ್ಮಭೀತಿಯಿಂದ ತನ್ನ ಪಾದಗಳನ್ನು ಭೂಮಿಯ ಮೇಲೆ ಇರಿಸುತ್ತಿರಲಿಲ್ಲ ಮತ್ತು ಅವನ ಅಂಗಾಲು ತುಂಬಾ ಕೂದಲುಗಳಿಂದ ಕೂಡಿತ್ತು.

ಚೋಳರು ಚಂಗಾಳ್ವರನ್ನು ಸೋಲಿಸಿದ್ದು ಕ್ರಿ.ಶ.೧೦೦೪ರ ಪನಸೋಗೆ ಅಂದರೆ ಇಂದಿನ ಹನಸೋಗೆ ಕದನದಲ್ಲಿ. ಚೋಳರ ಪಂಚವಾನ್ ಮಹಾರಾಯನಿಗೆ ಕೊಂಗಾಳ್ವ ಅರಸ ಮನಿಜ(ಕ್ರಿ.ಶ. ೧೦೦೪-೧೦೨೦)ಚಂಗಾಳ್ವರ ವಿರುದ್ದ ನೆರವು ನೀಡಿದ ಕಾರಣ ಚಂಗಾಳ್ವರಿಗೆ ಸೋಲಾಯಿತು. ಚಂಗಾಳ್ವರಿಗೆ ಸೇರಿದ ಕೊಡಗಿನ ಕುಡುಮಲೈನಾಡು ರಾಜರಾಜ ಚೋಳನ ಸ್ವಾಧೀನವಾಯಿತು. ರಾಜೇಂದ್ರಚೋಳನು ತನ್ನ ನೆರವಿಗೆ ಬಂದ ಕೊಂಗಾಳ್ವ ಮನಿಜನಿಗೆ ಮಾಳಪ್ಪ(ಮಾಳಂಬಿ)ಮತ್ತು ಅರಕಲಗೂಡು ಏಳುಸಾವಿರ ಸೀಮೆಯನ್ನು ಕೊಟ್ಟುದಲ್ಲದೆ ಕ್ಷತ್ರಿಯ ಶಿಖಾಮಣಿ ಕೊಂಗಾಳ್ವ[೫೮] ಎಂಬ ಬಿರುದನ್ನು ನೀಡಿದನು. ಮುಂದೆ ಮಾಂಡಳಿಕರನ್ನಾಗಿ

ಮಾಡಿಕೊಂಡರು ಮಲ್ಲೇಗೌಡನ ಕೊಪ್ಪಲಿನ ಶಾಸನದಲ್ಲಿ ಚಂಗಾಳ್ವನನ್ನು ತಿಲುಗರ ಮಾರಿ ಚಂಗಾಳ್ವ[೫೯] ಎಂದು ಸಂಬೋಧಿಸಲಾಗಿರುವುದರಿಂದ, ಅಂದಿನ ತಮಿಳರೂ ಕನ್ನಡದವರನ್ನು ತೆಲುಗರು ಎಂದು ಭಾವಿಸಿದ್ದರು ಎಂಬ ಅನುಮಾನಕ್ಕೆ ಅವಕಾಶ ದೊರೆತರೆ ಚಂಗಾಳ್ವರೂ ಕನ್ನಡೇತರರಾಗುತ್ತಾರೆ. ಆದರೆ ಚಂಗಾಳ್ವರ ಶಾಸನಗಳೆಲ್ಲವೂ ಕನ್ನಡದಲ್ಲೇ ಇರುವುದರಿಂದ ಅವರನ್ನು ಕನ್ನಡೇತರರು ಎಂದು ತಿಳಿಯುವುದು ಸರಿಯಲ್ಲ. ಇದು ಶಿಲ್ಪಿಯ ತಪ್ಪು ಬರವಣಿಗೆಯಿರಬಹುದಾಗಿದೆ.

ಚಂಗಾಳ್ವರು ಮತ್ತು ಹೊಯ್ಸಳರು

ಹನಸೋಗೆಯ ಕದನದ ನಂತರ ಮಲೆಪರನಾಡನ್ನು ಗೆದ್ದುಕೊಳ್ಳಲು ರಾಜ್ಯಕಟ್ಟಿಕೊಂಡಿದ್ದ ಹೊಯ್ಸಳರಿಗೂ, ಚೋಳರಿಗೂ ಯುದ್ಧಗಳು ನಡೆಯಲಾರಂಭಿಸಿದವು. ತಲಕಾಡಿನ ಬಳಿ ಕಾವೇರಿಯ ದಕ್ಷಿಣ ತಟದ ಕಲವೂರು(ಕಲಿಯೂರು) ಯುದ್ಧದಲ್ಲಿ(ಕ್ರಿ.ಶ.೧೦೦೬) ಚೋಳರ ದಂಡನಾಯಕ ಅಪ್ರಮೇಯನು ಹೊಯ್ಸಳ ನೃಪಕಾಮನ(ಕ್ರಿ.ಶ.೧೦೦೬–೪೭) ದಳವಾಯಿ ನಾಗಣ್ಣನನ್ನು ಸೋಲಿಸಿದ. ಈ ಶಾಸನದಲ್ಲಿ[೬೦] ಅಪ್ರಮೇಯ ತನ್ನನ್ನು ಮಲೆಪಕುಲಕಾಲಂ ಎಂದು ಕರೆದುಕೊಂಡಿದ್ದಾನೆ. ಈ ಯುದ್ಧವು ಮಲೆನಾಡನ್ನು ಗೆದ್ದುಕೊಳ್ಳಲು ಹೊಯ್ಸಳರು ಚೋಳರ ವಿರುದ್ಧ ಮಾಡಿದ ಯುದ್ಧಗಳಲ್ಲಿ ಮೊದಲನೆಯದೆಂದು ಕಾಣುತ್ತದೆ. ಚೋಳರ ಸಾಮಂತರಾಗಿದ್ದ ಚಂಗಾಳ್ವ ಮತ್ತು ಕೊಂಗಾಳ್ವರನ್ನು ಸದೆಬಡಿದು ಮಲೆನಾಡನ್ನು ಗೆದ್ದುಕೊಳ್ಳುವ ಉದ್ದೇಶ ಹೊಯ್ಸಳರದಾಗಿತ್ತು. ರಾಜೇಂದ್ರಚೋಳ ಕೊಂಗಾಳ್ವನು(ಕ್ರಿ.ಶ.೧೦೨೫–೫೫) ನೃಪಕಾಮನ ಮೇಲೆ ದಂಡೆತ್ತಿ ಬರುತ್ತಾನೆ. ಕೊಂಗಾಳ್ವನ ದಳಪತಿ ಸಮರದಲ್ಲಿ ನೃಪಕಾಮನನ್ನು ಎದುರಿಸಿ ನಿಂತಾಗ ನೃಪಕಾಮನ ದಳವಾಯಿ ಜೋಗಿಮಯ್ಯನು ಕೊಂಗಾಳ್ವ ಏರಿದ್ದ ಅಶ್ವದತ್ತ ನುಗ್ಗಿ ಅವನನ್ನು ಕೊಂದು ತಾನೂ ಬಲಿಯಾದ.[೬೧] ಮತ್ತೆ ಕ್ರಿ.ಶ. ೧೦೨೬ರಲ್ಲಿ ಕೊಂಗಾಳ್ವರನ್ನು ಮನ್ನೆ ಎಂಬಲ್ಲಿ ನೃಪಕಾಮ ಸೋಲಿಸಿದ್ದಾನೆ.[೬೨]

ನೃಪಕಾಮನ ನಂತರ ಬಂದ ಹೊಯ್ಸಳ ವಿನಯಾದಿತ್ಯನ ಕಾಲದಲ್ಲಿ (ಕ್ರಿ.ಶ. ೧೦೪೭–೧೦೯೮) ಚಂಗಾಳ್ವರ ನನ್ನಿಚಂಗಾಳ್ವ, ಮಾಚೆಯರಸ, ಮಾದೇವ, ಒಡೆಯಾದಿತ್ಯ ಅರಸರು ಶಾಸನಗಳಲ್ಲಿ ಕಂಡಬರುತ್ತಾರೆ. ಚಿಕ್ಕಹನಸೋಗೆಯಲ್ಲಿ ಶಾಂತಿನಾಥ ಬಸದಿ (ಅಬ್ಬೆಯ ಜಿನಾಲಯ) ಕಟ್ಟಿಸಿದ ನನ್ನಿಚಂಗಾಳ್ವನು ರಾಜೇಂದ್ರಚೋಳ ನನ್ನಿಚಂಗಾಳ್ವ, ವೀರರಾಜೇಂದ್ರ ನನ್ನಿಚಂಗಾಳ್ವ (ಕ್ರಿ.ಶ.೧೦೩೪–೧೦೬೦) ಹೆಸರುಗಳನ್ನು ಹೊತ್ತಿದ್ದ. ಚೋಳರ ಅಧೀನರಾಗಿದ್ದ ಕಾರಣ ನನ್ನಿ ಚಂಗಾಳ್ವ ತನ್ನ ಹೆಸರಿನೊಂದಿಗೆ ಚೋಳ ಚಕ್ರವರ್ತಿಗಳ ಹೆಸರುಗಳನ್ನು ಸೇರಿಸಿಕೊಂಡಿದ್ದಾನೆ. ಈತ ಪ್ರಬಲನಾಗಿದ್ದು, ಬೆಟ್ಟದಪುರ ಕೋಟೆ ಭದ್ರಪಡಿಸಿ ರಾಜ್ಯ ವಿಸ್ತರಿಸಿದ. ಪಿರಿಯಾಪಟ್ಟಣದ

(ಸಿಂಗಪಟ್ಟಣ)ನಂಜುಂಡರಾಜನ ಮಗ ವೀರರಾಜನಿಗೆ ತನ್ನ ಮಗಳು ಮಲ್ಲಾಜಮ್ಮನನ್ನು ಕೊಟ್ಟು ವಿವಾಹಮಾಡಿ ನಂಜುಂಡನೊಡನೆ ಸ್ನೇಹ ಬೆಳೆಸಿದನೆಂದು ಕಂಡುಬರುತ್ತದೆ.[೬೩] ಹೊಯ್ಸಳ ಒಂದನೆಯ ಬಲ್ಲಾಳನು(ಕ್ರಿ.ಶ.೧೧೦೨-೧೧೦೮)ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಅವಧಿಯಲ್ಲಿ ಸ್ವತಂತ್ರ ರಾಜನಾಗಿರಲಿಲ್ಲ. ಹೊಯ್ಸಳ ರಾಜ್ಯವನ್ನು ವಿಸ್ತರಿಸುವ ಯೋಜನೆಯಲ್ಲಿ ಅವನು ಗಂಗವಾಡಿ ಮತ್ತು ಕೊಡಗಿನ ಪ್ರದೇಶಗಳಲ್ಲಿದ್ದ ಮಲೆಪರ ಪಾಳೇಯಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಈ ರಾಜ್ಯ ವಿಸ್ತರಣೆಯ ನೀತಿಗನುಗುಣವಾಗಿ ಚಂಗಾಳ್ವದೇವನ ಮೇಲೆ ದಂಡೆತ್ತಿ ಹೋಗಿರುವ ಅಂಶ ಕಂಡುಬರುತ್ತದೆ.[೬೪] ಇದೇ ವೇಳೆಯಲ್ಲಿ ಗುಂಡೆತ್ತ್ಯರಣ್ಯದ ಸೋಮೇಶ್ವರ ದೇವಾಲಯಕ್ಕೆ ದಾನ ನೀಡಿರುವನು.[೬೫]

ಒಂದನೇ ಬಲ್ಲಾಳನ ನಂತರ ಸಹೋದರ ವಿಷ್ಣುವರ್ಧನ (ಕ್ರಿ.ಶ. ೧೧೦೮-೧೧೪೨) ಚೋಳರಿಂದ ಗಂಗವಾಡಿ ವಶಪಡಿಸಿಕೊಂಡ ಮೇಲೆ ಚಂಗಾಳ್ವ ಮತ್ತು ಕೊಂಗಾಳ್ವರನ್ನು ನಿಯಂತ್ರಿಸಲು ಪ್ರಯತ್ನಿಸಿದನು. ಇದರಿಂದ ಕೊಂಗಾಳ್ವರು ವಿಷ್ಣುವರ್ಧನನ ಪ್ರಭುತ್ವವನ್ನು ಸ್ವೀಕರಿಸಿದರು. ಇದೇ ವೇಳೆಯಲ್ಲಿ ಈತ ತ್ರಿಭುವನಮಲ್ಲ ಕೊಂಗಾಳ್ವನ (ಸು. ಕ್ರಿ.ಶ. ೧೧೦೦-೧೧೭೦) ಮಗಳಾದ ಚಂದಲಾದೇವಿಯನ್ನು ಮದುವೆಯಾದನೆಂದು ಕಂಡುಬರುತ್ತದೆ.[೬೬] ಮುಂದೆ ಚಂಗಾಳ್ವರಿಗೂ ಮತ್ತು ಹೊಯ್ಸಳರಿಗೂ ಕದನ (ಕ್ರಿ.ಶ.೧೧೨೪) ನಡೆಯಿತೆಂದು ಕಂಡುಬರುತ್ತದೆ. ಆದರೆ ವಿಷ್ಣುವರ್ಧನನ ವಿರುದ್ಧ ಯುದ್ಧ ಮಾಡಿದ ಚಂಗಾಳ್ವನ ಹೆಸರು ತಿಳಿದುಬರುವುದಿಲ್ಲ.[೬೭] ಮುಂದೆ ಅಧಿಕಾರಕ್ಕೆ ಬಂದ ಮಹದೇವ ಚಂಗಾಳ್ವನು ರಾಜಧಾನಿಯನ್ನು ಬೆಟ್ಟದಪುರದಿಂದ ಕೊಡಗಿನ ಕಿಗ್ಗಟ್ಟುನಾಡಿನ ಪಾಲ್ಪರೆಗೆ ಬದಲಾಯಿಸಿದ. ಹೊಯ್ಸಳ ಒಂದನೆಯ ನರಸಿಂಹನು ಚಂಗಾಳ್ವರ ವಿರುದ್ಧ ಯುದ್ದ ಮಾಡಿದರೂ ಚಂಗನಾಡಿನವರೊಡನೆ ವೈವಾಹಿಕ ಸಂಬಂಧ ಮಾಡಿಕೊಂಡಿರುವಂತೆ ಕಾಣುತ್ತದೆ. ಈತನ ರಾಣಿ ಚಂಗಾಲದೇವಿ ಚಂಗಾಳ್ವ ಕುಲದ ರಾಜಕುಮಾರಿಯಾಗಿರಬಹುದು.[೬೮]

ಚಂಗಾಳ್ವರು ಹೊಯ್ಸಳರ 'ದ್ವಾರಾವತಿಪುರವರಾಧೀಶ್ವರ', 'ಭುಜಬಲ', 'ಗಂಡಭೇರುಂಡ' ಬಿರುದುಗಳನ್ನು ಪಡೆದು ಮೆರೆಯುತ್ತಿದ್ದುದೇ ಬಲ್ಲಾಳನು ಚಂಗಾಳ್ವರ ಮೇಲೆ ದಾಳಿ ಮಾಡಲು ಕಾರಣವಾಯಿತು. ಕ್ರಿ.ಶ. ೧೧೭೨ರ ಹುಣಸೂರು ಶಾಸನವು ಬಲ್ಲಾಳನ ದಂಡೆಯಾತ್ರೆಯ ವಿವರಗಳನ್ನು ಕೊಡುತ್ತದೆ. ಬಲ್ಲಾಳನ ದಂಡನಾಯಕ ಬೆಟ್ಟದರಸನು ಪಾಲ್ಪರೆ ಕೋಟೆಗೆ ಮುತ್ತಿಗೆ ಹಾಕಿ, ಚಂಗಾಳ್ವ ಅರಸ ಮಹದೇವನನ್ನು ಕೊಂದು, ಪಾಲ್ಪರೆಯನ್ನು ವಶಪಡಿಸಿಕೊಂಡು ಪಟ್ಟಣ ವಿಸ್ತರಿಸಿದನು. ಮಹಾದೇವ ಚಂಗಾಳ್ವನ ಮಗ ಪೆಮ್ಮವೀರಚಂಗಾಳ್ವನು ಪಾಲ್ಪರೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನ ಮಾಡಿದ. ಕುಲೋತ್ತುಂಗಚೋಳ ಚಂಗಾಳ್ವ ಪೆಮ್ಮವೀರರಸ

ಎಂಬುದಾಗಿ ಕರೆದುಕೊಂಡಿರುವ ಈತ ಕೊಡಗು ನಾಡಿನ ಎಲ್ಲಾ ಕೊಡವರನ್ನು ಸಂಘಟಿಸಿಕೊಂಡು ಅವರ ನೆರವಿನಿಂದ ಬೆಟ್ಟದರಸನನ್ನು ಪಾಲ್ಪರೆಯಿಂದ ಓಡಿಸಲು ಮುಂದಾದ. ಬೆಟ್ಟದರಸನಿಗೂ ಪೆಮ್ಮವೀರ ಚಂಗಾಳ್ವನಿಗೂ ನಡೆದ ಪಾಲ್ಪರೆ ಕದನದಲ್ಲಿ ಮೊದಲು ಕೊಡವರಿಗೆ ಜಯಲಭಿಸುವಂತೆ ಕಂಡರೂ ಕೊನೆಯಲ್ಲಿ ಹೊಯ್ಸಳ ವೀರ ಮಾದಯ್ಯನಾಯಕನ ಸಾಹಸದಿಂದ ಬೆಟ್ಟದರಸನಿಗೆ ಜಯವಾಯಿತು. ಆದರೆ ಯುದ್ಧದಲ್ಲಿ ಮಾದಯ್ಯನಾಯಕ ಮರಣ ಹೊಂದಿದ. ಚಂಗಾಳ್ವರಿಗೆ ಕೊಡವರ ನಿಕಟಸಂಪರ್ಕ ಇಲ್ಲಿಂದ ಪ್ರಾರಂಭವಾಗುವುದಲ್ಲದೆ ಕೊಡವರ ಹೆಸರು ನಿರ್ದಿಷ್ಟವಾಗಿ ಮೊದಲ ಬಾರಿಗೆ ಕಾಣುವುದು ಪಾಲ್ಪರೆ ಯುದ್ಧಕ್ಕೆ ಸಂಬಂಧಪಟ್ಟ ಹುಣಸೂರು ಶಾಸನದಲ್ಲಿ. ಈ ಯುದ್ಧದಲ್ಲಿ ಹೊಯ್ಸಳರ ಕಡೆಯ ಮಾಚದಂಡನಾಯಕ, ಚಂಗಾಳ್ವ ಕುಳಿತಿದ್ದ ಆನೆಯ ಮೇಲೆ ತನ್ನ ಅಶ್ವವನ್ನು ನುಗ್ಗಿಸಿ ಚಂಗಾಳ್ವನ ಛತ್ರವನ್ನು[೨೦] ಕಿತ್ತುಕೊಂಡನೆಂದು ಕಂಡುಬರುತ್ತದೆ. ಪಾಲ್ಪರೆ ಯುದ್ಧದ ಸೋಲಿನ ನಂತರ ಕುಲೋತ್ತುಂಗ ಚೋಳ ಚಂಗಾಳ್ವನೆಂದು ಕರೆದುಕೊಳ್ಳುವ ಪೆಮ್ಮವೀರರಸನ ಹೆಸರು ಕ್ರಿ.ಶ.೧೧೮೬–೮೭ರ ಶಾಸನದಲ್ಲಿ[೨೧] ದೊರೆಯುತ್ತದೆ. ನಂತರ ಅವನ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ. ಅವನ ಬಳಿಕ ಸುಮಾರು ೭೦ ವರ್ಷಗಳ ಕಾಲ ಚಂಗಾಳ್ವರ ಇತಿಹಾಸ ತಿಳಿದುಬರುವುದಿಲ್ಲ.

ನಂತರದ ಚಂಗಾಳ್ವರು

ಸೋಮದೇವ ಮತ್ತು ಬೊಪ್ಪದೇವ ಚಂಗಾಳ್ವರ ನಂತರ ಸುಮಾರು ೩೦೦ ವರ್ಷಗಳ ತನಕ, ಚಂಗಾಳ್ವ ಅರಸರ ಹಾಗು ಅವರ ಚಟುವಟಿಕೆಗಳ ಬಗ್ಗೆ ಶಾಸನಗಳಲ್ಲಿ ಯಾವುದೇ ಮಾಹಿತಿ ದೊರೆಯುವುದಿಲ್ಲ. ಕ್ರಿ.ಶ.೧೫ನೆಯ ಶತಮಾನದ ಮಿರ್ಲೆಯ ಶಾಸನದಲ್ಲಿ ತೆಂಗಾಳ್ವ ದೇವನು ಚನ್ನಿಗರಾಯ ದೇವಾಲಯಕ್ಕೆ ದಾನಕೊಟ್ಟ ವಿಷಯ ಇದೆ. ಇಲ್ಲಿ ಚಂಗಾಳ್ವಕ್ಕೆ ಬದಲಿಗೆ ತೆಂಗಾಳ್ವ[೨೨] ಎಂದು ಉಲ್ಲೇಖಿತಗೊಂಡಿದೆ. ಇದು ಶಿಲ್ಪಿ ಬರವಣಿಗೆಯ ದೋಷ ದಿಂದಾಗಿದೆ ಎಂಬ ಅಭಿಪ್ರಾಯವಿದೆ. ಈ ಉಲ್ಲೇಖದ ನಂತರ ಕ್ರಿ.ಶ. ೧೬ನೆಯ ಶತಮಾನದ ಪ್ರಾರಂಭದಲ್ಲಿ ಚಂಗಾಳ್ವರು ಮತ್ತೆ ಕಾಣಿಸಿಕೊಳ್ಳುತ್ತಾರೆ ಎಂಬುದಾಗಿ ಬಿ.ಎಲ್. ರೈಸ್[೨೩] ಹೇಳಿರುವರು. ಹಿರೇಮಳಲಿಯ, ಹದಿನಾರನೆಯ ಶತಮಾನದ ಸಂಸ್ಕೃತ ಶಾಸನದಲ್ಲಿ[೨೪] ಚಂಗನಾಡನ್ನು ಆಳಿದ ಅರಸರ ಹೆಸರುಗಳನ್ನು ಕಾಣುತ್ತೇವೆ. ವಂಶಾವಳಿಯಲ್ಲಿ ಕ್ರಮವಾಗಿ ಚಂಗಾಳ್ವ, ಅವರ ಮಗ ರಂಗ, ರಂಗನ ಮಗ ಪಿರಿಯಣ್ಣ, ಪಿರಿಯಣ್ಣನ ಇಬ್ಬರು ಮಕ್ಕಳು ನಂಜ(ವೀರನಂಜಯ್ಯದೇವ) ಮತ್ತು ಮಹದೇವ ಹೆಸರುಗಳು ಕಂಡುಬರುತ್ತವೆ. ನಂಜ ಮತ್ತು ಮಹದೇವ ಚಂಗಾಳ್ವರಿಬ್ಬರೂ ಒಂದೇ ಕಾಲಕ್ಕೆ ಕ್ರಿ.ಶ.೧೫೦೩ರಿಂದ ೧೫೦೫ರವರೆಗೆ ಆಳಿದರೆಂದು ತಿಳಿದುಬರುತ್ತದೆ.[೨೫] ಮಹಾದೇವನನ್ನು ಹಿರೇಮಳಲಿ ಶಾಸನದಲ್ಲಿ ಮಹಾಮಂಡಲೇಶ್ವರನೆಂದೂ, ಶ್ರವಣಬೆಳಗೊಳದ ಶಾಸನದಲ್ಲಿ ಮಹೀಪಾಲನೆಂದು[೨೬] ಹೆಸರಿಸಲಾಗಿದೆ.

ನಂಜರಾಜನು (ಕ್ರಿ.ಶ. ೧೫೦೩–೧೫೩೩) ಅಧಿಕಾರಕ್ಕೆ ಬಂದ ಕೆಲವು ವರ್ಷಗಳಲ್ಲಿಯೇ ಅಂದರೆ ಕ್ರಿ.ಶ. ೧೫೦೯ರಲ್ಲಿ ಕೃಷ್ಣದೇವರಾಯನು ಪಟ್ಟಕ್ಕೆ ಬಂದ. ಆತನು ಅಧಿಕಾರ ವಹಿಸಿಕೊಂಡ ಕೂಡಲೇ ಉಮ್ಮತ್ತೂರಿನ ಮೇಲೆ ದಂಡೆತ್ತಿ ಬಂದಾಗ ಹೊಯ್ಸಳನಾಡಿಗೂ ಬಂದಿದ್ದನೆಂದೂ ಕಂಡುಬರುತ್ತದೆ. ಬಹುಶಃ ಆ ಸಂದರ್ಭದಲ್ಲಿ ಸ್ವತಂತ್ರನಾಗಿಯೇ ಇರಲು ಪ್ರಯತ್ನಿಸಿದ ಚಂಗಾಳ್ವ ನಂಜರಾಜನಿಗೂ ಕೃಷ್ಣದೇವರಾಯನ ಸೈನ್ಯಕ್ಕೂ[೭೭] ಯುದ್ಧ ನಡೆದಿರಬಹುದು. ವಿಜಯನಗರದ ಅರಸರ ಅಧೀನಕ್ಕೆ ಚಂಗಾಳ್ವರು ಒಳಗಾದ ಕಾರಣದಿಂದಾಗಿ ಚಂಗಾಳ್ವ ಭೂಮಿಯಲ್ಲೆಲ್ಲ ಅವರು ಹಾಕಿಸಿದ ಶಾಸನಗಳು, ಅವರು ಕಟ್ಟಿಸಿದ ದೇವಾಲಯಗಳು, ಅವರ ಹೆಸರಿನ ಊರುಗಳು ಈ ಪ್ರದೇಶದಲ್ಲಿ ಕಾಣಸಿಗುತ್ತವೆ. ವಿಜಯನಗರದ ರಾಜರು ಅಥವಾ ಪ್ರತಿನಿಧಿಗಳು ಆಗಿರಬಹುದಾದ ಬುಕ್ಕರಾಯ, ಮಲ್ಲಿಕಾರ್ಜುನ, ನರಸಣ್ಣನಾಯಕ, ಕೃಷ್ಣ ದೇವರಾಯ, ಲಕ್ಕಣ್ಣವೊಡೆಯ, ಹಂಪರಸ, ವೀರನರಸಿಂಹ, ಕೃಷ್ಣರಾಮನಾಯಕ, ಮಹಾ ಮಂಡಲೇಶ್ವರ ರಾಮರಾಜರಾಯ, ತಿರುಮಲರಾಜಯ್ಯದೇವರ ಹೆಸರುಗಳು ಈ ಪ್ರದೇಶಗಳ ಶಾಸನಗಳಲ್ಲಿ[೭೮] ದೊರೆಯುತ್ತವೆ.

ಚಂಗಾಳ್ವ ನೆಲದಲ್ಲಿ ವೀರಶೈವ ಹಾಗು ಶ್ರೀವೈಷ್ಣವ ಧರ್ಮಗಳು ತಲೆಯೆತ್ತಿದ್ದಲ್ಲದೆ ಪರಸ್ಪರ ಪೈಪೋಟಿ ಹಾಗು ದ್ವೇಷಕ್ಕೂ ಕಾರಣವಾದಂತೆ ತಿಳಿದುಬರುತ್ತದೆ. ಅಲ್ಲದೆ ಈ ಅವಧಿಯಲ್ಲಿ ಜೈನಧರ್ಮ ತಬ್ಬಲಿಯಾದುದು ಮಾತ್ರವಲ್ಲ ಬೆಟ್ಟದಪುರದ ಮಲ್ಲಿನಾಥಬಸದಿ ಮಲ್ಲಿಕಾರ್ಜುನಸ್ವಾಮಿ ದೇವಾಲಯವಾಗಿ ಪರಿವರ್ತಿತವಾಯಿತು. ಚಂಗಾಳ್ವರು ಮಲ್ಲಿಕಾರ್ಜುನ ಸ್ವಾಮಿಯನ್ನು ತಮ್ಮ ಕುಲದೇವರನ್ನಾಗಿ ಸ್ವೀಕರಿಸಿದರು. ನಂಜರಾಜಪಟ್ಟಣದಿಂದ ಆಳ್ವಿಕೆ ನಡೆಸುತ್ತಿದ್ದ ನಂಜಯ್ಯನು ತನ್ನ ಕುಲದೇವರಾದ ಶ್ರೀಗಿರಿಯ ಅನ್ನದಾನಿ ಮಲ್ಲಿಕಾರ್ಜುನ ದೇವಾಲಯಕ್ಕೆ ಅಲ್ಲನಾಯಕನ ಹಳ್ಳಿಯನ್ನು ಕ್ರಿ.ಶ. ೧೫೨೧ರಲ್ಲಿ ನೀಡಿದ್ದಾನೆ.[೭೯]

ನಂಜಯ್ಯದೇವನ ಮಗ ನಂಜುಂಡನು ಕ್ರಿ.ಶ.೧೫೨೫ರಿಂದ ೧೫೪೦ರವರೆಗೆ ನಂಜರಾಯ ಪಟ್ಟಣದಿಂದ ರಾಜ್ಯವಾಳಿದನು. ಈತನ ಬಗ್ಗೆ ಹೆಚ್ಚಿನ ಯಾವುದೇ ಮಾಹಿತಿಗಳು ದೊರೆಯುವುದಿಲ್ಲ. ರಾಮವಿಜಯ ಕಾವ್ಯ ಬರೆದ ರಾವಂದೂರು ದೇವಪ್ಪ ಕವಿ ತಾನು 'ಹೊಯ್ಸಳ ದೇಶಕ್ಕೆ ಒಪ್ಪುವ ಚಂಗನಾಡ ನಡುವೆ ಇರುವ ರಾವಂದೂರಿನಿಂದ ನಂಜರಾಯಪಟ್ಟಣಕ್ಕೆ ಹೋಗಿ ನಂಜುಂಡರಸನ ಆಶ್ರಯದಲ್ಲಿ ಕಾವ್ಯ ರಚಿಸಿರುವುದಾಗಿ ತಿಳಿಸುತ್ತಾನೆ.[೮೦] ನಂಜುಂಡ ಚಂಗಾಳ್ವನು ಜೈನಧರ್ಮಕ್ಕೆ ಹಾಗು ಕನ್ನಡ ಸಾಹಿತ್ಯಕ್ಕೆ ನೀಡಿರುವ ಪ್ರೋತ್ಸಾಹ ಇಲ್ಲಿ ಅಭಿವ್ಯಕ್ತವಾಗಿದೆ. ನಂಜುಂಡರಸನು ನಂಜರಾಯಪಟ್ಟಣದಲ್ಲಿರುವಾಗಲೇ ಪಿರಿಯಾಪಟ್ಟಣದಲ್ಲಿ ಮಣ್ಣಿನ ಕೋಟೆ ಕಟ್ಟಿಸಿದ. ಇದಕ್ಕನುಗುಣವಾಗಿ ಐತಿಹ್ಯದ ಪ್ರಕಾರ ಅವನು ಹನಗೋಡಿಗೆ ಹೋಗುತ್ತಿದ್ದಾಗ

ದಾರಿಯಲ್ಲಿ ಮೊಲವೊಂದು ಕುದುರೆಯನ್ನು ಹೆದರಿಸುತ್ತಿದ್ದನ್ನು ಕಂಡು, ಅಲ್ಲಿ ಪಟ್ಟಣವನ್ನು ಕಟ್ಟಲು ಯೋಗ್ಯವಾದ ಸ್ಥಳವೆಂದು ತಿಳಿದು ಕೋಟೆ ಕಟ್ಟಿಸಿದ. ಈ ಸ್ಥಳಕ್ಕೆ ಹಿಂದೆ ಸಿಂಗಪಟ್ಟಣವೆಂಬ ಹೆಸರಿದ್ದು, ಕರಿಕಾಲ ಚೋಳನು ಅಲ್ಲಿಯೇ ಒಂದು ಕೆರೆ ಮತ್ತು ಶಿವದೇವಾಲಯ ಕಟ್ಟಿಸಿದನೆಂದೂ ಹೇಳಲಾಗಿದೆ.[೮೧] ಕದಂಬರ ಮೃಗೇಶವರ್ಮನಿಂದ ಸಿಂಹಪಟ್ಟಣವೆಂದು ಹೆಸರು ಬಂದಿರುವುದಾಗಿದೆ. ಮೃಗೇಶ ಎಂದರೆ ಸಿಂಹ, ಮೃಗೇಶವರ್ಮನಿಂದ ಸಿಂಹಪಟ್ಟಣವಾಗಿದೆ. ಪಿರಿಯ ಎಂದರೆ ವಯಸ್ಸು, ಗುಣ ಮೊದಲಾದವುಗಳಲ್ಲಿ ದೊಡ್ಡವನಾದವನು. ಇಂತಹ ವ್ಯಕ್ತಿ ಸ್ಥಾಪಿಸಿದ ಊರು ಮುಂದೆ ಪುರ ಪಟ್ಟಣವಾಗಿದೆ. ಚಂಗಾಳ್ವ ಮನೆತನದ ಶ್ರೇಷ್ಠ ಪೆರಿಯರಾಜನು ಮಣ್ಣಿನ ಕೋಟೆಯ ಬದಲಿಗೆ ಕಲ್ಲಿನ ಕೋಟೆಯನ್ನು ನಿರ್ಮಿಸಿದ. ಇದರಿಂದ ಆ ಗ್ರಾಮಕ್ಕೆ ಆತನ ಹೆಸರಾದ ಪೆರಿಯರಾಜ ಪಟ್ಟಣವೆಂದು ಕರೆಯುವಂತೆ ಆದೇಶಿಸಿದ. ಮುಂದೆ ಅದು ಪಿರಿಯಪಟ್ಟಣವೆಂದು ಕರೆಸಿಕೊಂಡಿತು.

ನಂಜುಂಡರಸ ಚಂಗಾಳ್ವನ ಮಗ ಶ್ರೀಕಂಠನು ಪ್ರಮುಖನಾಗಿದ್ದು, ರಾಜಾಧಿರಾಜ ಪರಮೇಶ್ವರ ಬಿರುದನ್ನು ಹೊಂದಿದ್ದ.[೮೨] ಅವನನ್ನು ಶ್ರೀಕಂಠರಸ, ಶ್ರೀಕಂಠವೊಡೆಯ ಎಂದು ಸಹ ಕರೆಯಲಾಗಿದೆ. ಇವನ ರಾಜ್ಯಭಾರ ಆಳ್ವಿಕೆಯ ಕಾಲಾವಧಿ ಕ್ರಿ.ಶ. ೧೫೪೦–೧೫೬೦. ಈತನು ನಂಜರಾಜಪಟ್ಟಣದ ಅರಸನಾಗಿದ್ದನೆಂದು ಕ್ರಿ.ಶ. ೧೫೪೫ರ ದೊಡ್ಡ ಬೇಲಾಳು ಶಾಸನ ತಿಳಿಸುತ್ತದೆ.[೮೩] ಶ್ರೀಕಂಠನ ಮಗ ವೀರರಾಜನು ನಂಜರಾಯಪಟ್ಟಣದ ಅರಸನಾಗಿದ್ದ. ಈತನಿಗೆ ವೀರರಾಜಯ್ಯ ಮತ್ತು ಚಿಕ್ಕರಾಜಯ್ಯ ಎಂಬ ಹೆಸರುಗಳಿದ್ದವು. ಇವನ ಆಳ್ವಿಕೆ ಕ್ರಿ.ಶ. ೧೫೬೦ ರಿಂದ ೧೫೮೫. ಬಸವಾಪಟ್ಟಣದ ಕ್ರಿ.ಶ. ೧೫೭೯ರ ಶಾಸನದಲ್ಲಿ ಅವನ ಮಗಳನ್ನು ಮಹಾಮಂಡಲೇಶ್ವರ ರಾಮರಾಜಯ್ಯದೇವ ಮಹಾಅರಸು ಮದುವೆಯಾಗಿ ವಧುವಿನ ಪಲ್ಲಕ್ಕಿಯೊಂದಿಗೆ ಬಳುವಳಿಯಾಗಿ ಬಸವಾಪಟ್ಟಣ ಮತ್ತು ಕೊಣನೂರು ಗ್ರಾಮಗಳನ್ನು ಕೊಡುಗೆಯಾಗಿ[೮೪] ನೀಡಿದನೆಂದು ಕಂಡುಬರುತ್ತದೆ. ಈ ರಾಮರಾಜು ಶ್ರೀರಂಗಪಟ್ಟಣದಲ್ಲಿ ವಿಜಯನಗರದ ಪ್ರತಿನಿಧಿಯಾಗಿ ನೇಮಕಗೊಂಡಿದ್ದನು. ಅವನು ವಿಜಯನಗರದ ಅರವೀಡು–ಮನೆತನದ ಒಂದನೆಯ ತಿರುಮಲರಾಯನ(ಕ್ರಿ.ಶ. ೧೫೭೦–೧೫೭೪)ಎರಡನೆಯ ಮಗ. ಆದ್ದರಿಂದ ಅವನನ್ನು ದೊಡ್ಡಬೇಲಾಳು ಶಾಸನದಲ್ಲಿ[೮೫] ಮಹಾಮಂಡಲೇಶ್ವರ ಮಹಾಅರಸು ಎಂದು ಕರೆಯಲಾಗಿದೆ.

ವೀರರಾಜಯ್ಯನ ತಮ್ಮ(ಶ್ರೀಕಂಠನ ಎರಡನೆಯ ಮಗ)ಪೆರಿಯರಾಜರುದ್ರಗಣ(ಕ್ರಿ.ಶ. ೧೫೮೫–೧೬೧೫) ನಂಜರಾಜಪಟ್ಟಣದಲ್ಲಿ ಆಳುತ್ತಿದ್ದ. ಕ್ರಿ.ಶ.೧೬೦೦ರ ಹಾರನಹಳ್ಳಿ ಶಾಸನದಿಂದ ಅವನ ತಾಯಿ ವಲ್ಲಭಾಜಮ್ಮನೆಂದು[೮೬] ಕಂಡುಬರುತ್ತದೆ. ಇವನು ಪಿರಿಯಾಪಟ್ಟಣದ ಮಣ್ಣಿನ

ಕೋಟೆಗೆ ಬದಲಾಗಿ ಕಲ್ಲಿನಕೋಟೆ ಕಟ್ಟಿಸಿ ಪಿರಿಯಾಪಟ್ಟಣವನ್ನು ಭದ್ರಗೊಳಿಸಿದ. ಇವನ ಕಾಲದಲ್ಲಿ(ಕ್ರಿ.ಶ.೧೬೦೭) ಶ್ರೀರಂಗಪಟ್ಟಣದಲ್ಲಿ ವಿಜಯನಗರ ಸಾಮ್ರಾಜ್ಯದ ಪರವಾಗಿ ರಾಜ್ಯಪಾಲ ನಾಗಿದ್ದ ತಿರುಮಲರಾಯನು, ನಂಜರಾಜ ಪಟ್ಟಣದ ಚಂಗಾಳ್ವ ಅರಸ ಸಂತತಿ ಇರುವ ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನ ಪೂಜೆ ಸುಸೂತ್ರವಾಗಿ ಸಾಗುವಂತೆ ಕಟ್ಟೆ ಮಳಲ ವಾಡಿಯನ್ನು ದಾನ ನೀಡಿದ್ದಾನೆ.[೮೭]

ಪೆರಿಯರಾಜದೇವ ರುದ್ರಗಣನ ನಂತರ ನಾಲ್ಕು ರಾಜರು ಪೆರಿಯಾಪಟ್ಟಣದಲ್ಲಿ ಆಳಿದರು. ಪೆರಿಯರಾಜದೇವನ ಕಾಲದಲ್ಲಿ ಕೊಡಗಿನ ಹಾಲೇರಿಯಲ್ಲಿ ಇಕ್ಕೇರಿ ನಾಯಕರ ವಂಶಸ್ಥರು ತಮ್ಮ ರಾಜ್ಯವನ್ನು ಸ್ಥಾಪಿಸಿದರು. ನಂಜರಾಜಪಟ್ಟಣದ ಅಥವಾ ಪಿರಿಯಾಪಟ್ಟಣದ ರಾಜರು ಕೊಡಗಿನ ಹಾಲೇರಿ ವಂಶದ ರಾಜರ ದೂರದ ದಾಯಾದಿಗಳೂ, ಸಂಬಂಧಿಕರೂ ಆಗಿದ್ದರು. ಕ್ರಿ.ಶ.೧೬೪೪ ರಲ್ಲಿ ಪಿರಿಯಾಪಟ್ಟಣದಲ್ಲಿ ವೀರರಾಜನೆಂಬುವವನು ಆಳುತ್ತಿದ್ದನು. ಈತನ ತಂದೆ ನಂಜರಾಜನು ಆಗ ಜೀವಂತವಾಗಿದ್ದರೂ ತಾನು ವೃದ್ಧನಾದುದರಿಂದ ರಾಜ್ಯವನ್ನು ತನ್ನ ಮಗ ವೀರರಾಜನಿಗೆ ವಹಿಸಿದ್ದನು.[೮೮]

ಮೈಸೂರಿನ ಕಂಠೀರವ ನರಸರಾಜ ಎಲ್ಲ ಕಡೆ ರಾಜ್ಯ ವಿಸ್ತರಣೆ ಮಾಡಿದರೂ ಅವನ ಅಧೀನಕ್ಕೆ ಬಂದ ರಾಜರೆಲ್ಲ ನಿಷ್ಠರಾಗಿದ್ದರೆಂದು ಹೇಳಲಾಗುವುದಿಲ್ಲವೆಂದು ಗೋವಿಂದವೈದ್ಯ ತಿಳಿಸಿದ್ದಾನೆ. ಇದರಲ್ಲಿ ನರಸಿಂಹಪುರ ಮತ್ತು ಪಿರಿಯಾಪಟ್ಟಣದ ರಾಜರ ವಿಷಯವಾಗಿ ಕವಿ ಪ್ರತ್ಯೇಕವಾಗಿ ಪ್ರಸ್ತಾಪಿಸಿದ್ದಾನೆ. ಮೊದಲಿನಿಂದಲೂ ಪಿರಿಯಾಪಟ್ಟಣದವರು ಕಂಠೀರವನೊಡನೆ ಸ್ನೇಹದಿಂದಿದ್ದರು. ಅವರು ಕಪ್ಪ ಕೊಡದೆ ಹೋದುದು ಘರ್ಷಣೆಗೆ ದಾರಿಯಾಯಿತು. ಇವರಿಬ್ಬರಿಗೂ ಬೆಂಬಲವಾಗಿ ನಿಂತವರು ಬಿಜಾಪುರದವರು. ಕವಿ ಇವರನ್ನು "ಇಕ್ಕೇರಿಯ ತುರುಕರು' ಎಂಬುದಾಗಿ ಕರೆದಿದ್ದಾನೆ. ಬಿಜಾಪುರದ ಸೈನ್ಯ ಇಕ್ಕೇರಿಯಲ್ಲಿ ಲಗ್ಗೆ ಇಟ್ಟು ಅಲ್ಲಿಂದ ಬಂದು ಭಾಗವಹಿಸಿರುವುದನ್ನು ಕವಿ ಈ ಮಾತಿನಲ್ಲಿ ಹೇಳುತ್ತಿದ್ದಾನೆ. ಮೈಸೂರು ಮತ್ತು ಬಿಜಾಪುರದ ಸೈನ್ಯದ ನಡುವೆ ಘರ್ಷಣೆ ನಡೆಯುತ್ತಿರುವುದು ಇದು ೪ನೆಯ ಬಾರಿ. ಇದು ಕ್ರಿ.ಶ.೧೬೪೫ರಲ್ಲಿ ಸಂಭವಿಸಿರಬೇಕೆಂದು ಕಾಣುತ್ತದೆ. ನರಸಿಂಹಪುರದ ರಾಜ ಕಪ್ಪಕೊಟ್ಟು ಶರಣಗತ ನಾದ. ಆದರೆ ಪಿರಿಯಪಟ್ಟಣದ ರಾಜ ಕಪ್ಪ ಕೊಡಲಿಲ್ಲ. ಆದ್ದರಿಂದ ಪಿರಿಯಾಪಟ್ಟಣಕ್ಕೆ ಸಂಬಂಧಿಸಿದಂತೆ ಯುದ್ಧ ಪ್ರಾರಂಭಗೊಂಡಿತು. ಇದನ್ನು ಕವಿ ಪಿರಿಯಾಪಟ್ಟಣದ ಲಗ್ಗೆ ಎಂದೇ ಕರೆದಿದ್ದಾನೆ. ಕವಿ ಪಿರಿಯಾಪಟ್ಟಣದ ರಾಜನನ್ನು ನಂಜುಂಡರಾಜ ಎಂದು ಉಲ್ಲೇಖಿಸಿ ದ್ದಾನೆ. ಆದರೆ ರೈಸರು ಇವನನ್ನು 'ವೀರರಾಜ' ಎಂಬುದಾಗಿ ಹೆಸರಿಸಿ ರುದ್ರಗಣನ ಮಗನೆಂದು[೮೯] ತಿಳಿಸಿದ್ದಾರೆ.

ಪಿರಿಯಾಪಟ್ಟಣದ ಮುತ್ತಿಗೆಯಲ್ಲಿ ಮೈಸೂರಿನ ಸೈನ್ಯದ ನೇತೃತ್ವವನ್ನು ವಹಿಸಿದವನು ನಂಜರಾಜ ಎಂಬುವುದು ಕಾವ್ಯದಲ್ಲಿ ಸ್ಪಷ್ಟವಿದೆ. ಆದರೆ ರೈಸರು ಇವನನ್ನು ದಳವಾಯಿ ದೊಡ್ಡರಾಜ ಎಂದು ಗುರುತಿಸುತ್ತಾರೆ.[೬೦] ಇಲ್ಲಿಯೂ ಕವಿಯ ಪ್ರಾಮಾಣಿಕತೆಯನ್ನು ಪ್ರಶ್ನಿಸಲು ಸಾಧ್ಯವಾಗುವುದಿಲ್ಲ. ನಂಜರಾಜ ಮೊದಲು ಪಾಲುಪರೆಯನ್ನು ಹಿಡಿದುಕೊಂಡು ನಂತರ ಪಿರಿಯಾಪಟ್ಟಣವನ್ನು ಮುತ್ತಿದಂತೆ ಕಾಣುವುದು. ಈ ಕಾಳಗದಲ್ಲಿ ಮೈಸೂರಿನವರ ಪರವಾಗಿ ಚನ್ನರಾಯಪಟ್ಟಣದ ದೊಡ್ಡೇಂದ್ರ, ತರುಗೆರೆಯ ಹಂಪೇಂದ್ರ, ಹರದಪುರದ ದೊಡ್ಡೇಂದ್ರ, ಲಿಂಗೇಗೌಡ, ತಿಮ್ಮರಾಜೇಂದ್ರರು ಇದ್ದರು. ಹಾಗೆಯೇ ನಂಜುಂಡರಾಜನ ಪರವಾಗಿ ಸುಲ್ತಾನನ ಸೈನ್ಯವಿತ್ತು. ಇದರಲ್ಲಿ ರಣದುಲ್ಲಾಖಾನನ ಪ್ರಸ್ತಾಪ ಇಲ್ಲದಿರುವುದು ಎದ್ದುಕಾಣುತ್ತದೆ. ಮಹಮ್ಮದೀಯ ಮತ್ತು ಮರಾಠ ಸೇನಾನಾಯಕರಿಬ್ಬರೂ ಇದರಲ್ಲಿ ಭಾಗವಹಿಸಿದ್ದರೆಂದು ಸ್ಪಷ್ಟವಿದೆ. ಇಕ್ಕೇರಿಯಿಂದ ರಣದುಲ್ಲಾಖಾನನ ಸೈನ್ಯ ಬಂದಿತೆಂದು ಹೇಳುವುದನ್ನು ನೋಡಿದರೆ, ಇಕ್ಕೇರಿಯಲ್ಲಿ ವೀರಭದ್ರನಾಯಕರು ಇದರಲ್ಲಿ ಭಾಗವಹಿಸಿರುವಂತೆ ತೋರುವುದು. ಇವರೆಲ್ಲರೂ ಬೆಟ್ಟದಪುರದಲ್ಲಿ ಬೀಡುಬಿಟ್ಟು, ಯುದ್ಧ ಮಾಡಿದರೆಂದು ಕವಿ ತಿಳಿಸುವನು. ಆದರೆ ಇವರೆಲ್ಲರೂ ಯುದ್ಧದಲ್ಲಿ ಸೋತು ಪಲಾಯನ ಮಾಡಿದಂತೆ ತಿಳಿಸುವ ಕಾವ್ಯದ ವಿಚಾರ ಸರಿಯಾಗಿದೆ. ಏಕೆಂದರೆ ಅಂತಿಮವಾಗಿ ಮೈಸೂರು ರಾಜರ ಗೆಲುವನ್ನು ಇತಿಹಾಸ ಎತ್ತಿ ಹಿಡಿದಿದೆ. ಈ ಯುದ್ಧದ ಒಂದು ವಿಶೇಷವೆಂದರೆ ಹಗಲು ವೇಳೆಯಲ್ಲಿ ಕೋಟೆಗೆ ಲಗ್ಗೆ ಮಾಡಿರುವುದು. ಇದು ನಂಜರಾಜನ ಪರಾಕ್ರಮವನ್ನು ತೋರಿಸುತ್ತದೆ. ಯುದ್ಧದ ಪರಿಣಾಮವಾಗಿ ನಂಜುಂಡನ ಮಗ ಮಡಿದು, ನಂಜುಂಡ ಮತ್ತು ಅವನ ಒಡಹುಟ್ಟಿದವರು, ಮಕ್ಕಳು ಕೈಸೆರೆಯಾದರೆಂದು ಕಂಡುಬರುತ್ತದೆ. ಆದರೆ ಬಿ.ಎಲ್.ರೈಸರು, ಒಂದು ವರ್ಷ ಕಾಲ ನಡೆದ ಈ ಯುದ್ಧದಲ್ಲಿ ಪಿರಿಯಾಪಟ್ಟಣದ ರಾಜ ಹೋರಾಡಿ ಸತ್ತನೆಂದು[೬೧] ಹೇಳಿರುವರು. ಯುದ್ಧ ದೀರ್ಘಕಾಲ ನಡೆದುದ್ದನ್ನು ಕಾವ್ಯವು ಗುರುತಿಸಿದೆ. ರೈಸರು[೬೨] ಮತ್ತೊಂದು ಕಡೆ ಬರೆಯುತ್ತ, ಮೈಸೂರು ರಾಜನ ಪಿರಿಯಾಪಟ್ಟಣದ ಅಕ್ರಮಣದ ಕಾಲದಲ್ಲಿ ಅಲ್ಲಿನ ರಾಜ ಸತ್ತಿದ್ದರಿಂದ ಚಂಗಾಳ್ವ ವಂಶ ಕೊನೆಗೊಂಡಿತೆಂದು ಅಭಿಪ್ರಾಯಪಡುತ್ತಾರೆ. ಪಿರಿಯಪಟ್ಟಣದ ಈ ರಾಜನನ್ನು ಚಂಗಾಲ್ವರಾಯ ನೆಂದು ಕವಿ ಗುರುತಿಸಿದ್ದಾನೆ. ನಂಜುಂಡರಾಜ ಮತ್ತು ಅವನ ಕುಟುಂಬ ವರ್ಗದವರನ್ನು ಸೆರೆಹಿಡಿದ ಮೇಲೆ ಏನಾಯಿತೆಂದು ಕವಿ ಹೇಳದೇ ಮೌನವಹಿಸಿರುವುದರಿಂದ ರೈಸರು ಹೇಳಿರುವ ಅಸಾಧಾರಣ ಪರಿಸ್ಥಿತಿ ಉಂಟಾಗಿರಬೇಕು.

ಜನಪದ ವೀರಕಾವ್ಯ ಪಿರಿಯಾಪಟ್ಟಣದ ಕಾಳಗದ ಪ್ರಕಾರ ಚಂಗಾಳ್ವರ ಕೊನೆಯ ರಾಜ ವೀರರಾಜ. ಪಿರಿಯಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. ೧೬೮೯-

೧೬೪೪ ರವರೆಗೆ ರಾಜ್ಯಭಾರ ಮಾಡಿದ ಚಂಗಾಳ್ವ ವೀರರಾಜಯ್ಯನು ಮಡಿಕೇರಿಯನ್ನಾಳುತ್ತಿದ್ದ ಹಾಲೇರಿ ರಾಜರ ಬಂಧುವಾಗಿದ್ದ. ಇವನ ಕಾಲಕ್ಕಾಗಲೇ ಜೈನಧರ್ಮ ಸಂಪೂರ್ಣವಾಗಿ ಅವನತಿ ಹೊಂದಿದ್ದುದಲ್ಲದೆ, ಮಲ್ಲಿನಾಥ ಬಸದಿಯು ಮಲ್ಲಯ್ಯನ ದೇವಾಲಯವಾಗಿತ್ತು. ಚಂಗಾಳ್ವರಲ್ಲಿ ಕೆಲವರಾದರೂ ವೀರಶೈವ ಧರ್ಮಾವಲಂಬಿಗಳಾಗಿದ್ದರು.

ಚಾರಿತ್ರಿಕ ಕಾವ್ಯಗಳಲ್ಲೆಲ್ಲ ಪಿರಿಯಾಪಟ್ಟಣ ಕಾಳಗ ಮುಖ್ಯವಾದದ್ದು. ಜನಪದ ಕಾವ್ಯದಲ್ಲಿ ನಿರೂಪಿಸಲ್ಪಟ್ಟಿರುವ ಈ ಕಾಳಗಕ್ಕೆ ಸಂಬಂಧಿಸಿದಂತೆ ಕ.ರಾ.ಕೃ. ಸ.ಚ.ಮಹದೇವನಾಯಕ, ಜಿ.ಶಂ.ಪ. ಮತ್ತು ಡಿ. ಲಿಂಗಯ್ಯನವರು ಪುಸ್ತಕಗಳನ್ನು ಹೊರತಂದಿದ್ದಾರೆ. ಕ.ರಾ.ಕೃ ಮತ್ತು ಸ.ಚ. ಮಹದೇವನಾಯಕರ ಕೃತಿಗಳು ಚಾರಿತ್ರಿಕ ಘಟನೆಯ ಸಮಗ್ರತೆಯನ್ನು ನೀಡುವಲ್ಲಿ ಅಪೂರ್ಣವಾಗಿವೆ. ಜನಪದ ಕಾವ್ಯಗಳನ್ನು ಸಾಮಾನ್ಯವಾಗಿ ರಾಮನ ಸಂಬಂಧ ಕಾವ್ಯ, ವೀರಕಾವ್ಯ, ರಮ್ಯಕಾವ್ಯ ಹಾಗು ಚಾರಿತ್ರಿಕ ಕಾವ್ಯಗಳು ಎಂದು ನಾಲ್ಕು ಪ್ರಮುಖ ವರ್ಗಗಳಾಗಿ ವಿಂಗಡಿಸಲಾಗಿದೆ. ವೀರಕಾವ್ಯಗಳಲ್ಲಿ ವೀರ ಪರಾಕ್ರಮಗಳೇ ಹೆಚ್ಚು. ಚರಿತ್ರೆಯ ಘಟನೆಯೊಂದನ್ನು ಅವಲಂಬಿಸಿ ಬೆಳೆದುಕೊಂಡಿರುವುದೇ ಚಾರಿತ್ರಿಕ ಕಾವ್ಯ.[೯೩] ಜನಪದ ಚಾರಿತ್ರಿಕ ಕಾವ್ಯಗಳ ನಾಯಕರು ಬಹುಪಾಲು ಲಾವಣಿಗಳಲ್ಲಿ ಪಾಳೆಯಗಾರರೇ ಆಗಿದ್ದಾರೆ. ಕನ್ನಡದಲ್ಲಿ ಲಭ್ಯವಾಗಿರುವ ಐತಿಹಾಸಿಕ ಕಾವ್ಯಗಳೆಲ್ಲ ಬಹುಮಟ್ಟಿಗೆ ಪಾಳೆಯಗಾರರಿಗೆ ಸಂಬಂಧಪಡುತ್ತವೆ. ಜನಪದ ಲಾವಣಿಕಾರರ ಮೇಲೆ ವಿಶೇಷ ಪ್ರಭಾವ ಬೀರಲು ಚಕ್ರವರ್ತಿಗಳು ದೊಡ್ಡ ರಾಜರು ವಿಫಲರಾಗಬಹುದು. ಒಂದು ಪುಟ್ಟ ಪಾಳೆಯಪಟ್ಟನ್ನು ಕಟ್ಟಿ ದೊಡ್ಡ ರಾಜರನ್ನು ದಂಗುಬಡಿಸುವಂತೆ ಸಾಮರ್ಥ್ಯವನ್ನು ಮೆರೆದು ದುರಂತಕ್ಕೀಡಾದ ಪಾಳೆಯಗಾರರು, ಸಾಮಂತರು, ಜನಪದ ಕವಿಗಳ ಮನಸ್ಸನ್ನು ಆಕರ್ಷಿಸಿದ್ದಾರೆ. ಇವರು ದೊಡ್ಡ ರಾಜರಂತೆ ಅರಮನೆಗಳಲ್ಲಿ ವಾಸಿಸಿ ದೂರದ ನಗರದಲ್ಲಿದ್ದುಕೊಂಡು ಜನಸಾಮಾನ್ಯರ ಸಂಪರ್ಕವನ್ನು ಸಮಗ್ರವಾಗಿ ಕಡಿದುಕೊಂಡವರಲ್ಲ. ಅವರ ನಡುವೆ ಬಾಳಿ, ಬದುಕಿ ತಮ್ಮ ವ್ಯಕ್ತಿತ್ವದ ಪ್ರಭಾವದಿಂದ ಅವರ ಹೃದಯವನ್ನು ಗೆದ್ದವರು.[೯೪]

ಪಿರಿಯಪಟ್ಟಣ ಕಾಳಗ ಕಾವ್ಯದ ಕಥಾನಾಯಕ ವೀರರಾಜ. ಇವನು ಕೂಡ ಚಂಗಾಳ್ವ ಪಾಳೆಯಗಾರ ರಾಜವಂಶಕ್ಕೆ ಸೇರಿದವನು. ಕ್ರಿ.ಶ.೧೬೧೫ರಿಂದ ೧೬೪೪ರ ವರೆಗೆ ಪಿರಿಯಾಪಟ್ಟಣ ವನ್ನಾಳಿದ ಪರಾಕ್ರಮಿ, ಶತೃ ಭಯಂಕರ. ಮೈಸೂರಿನ ದೊರೆ ರಣಧೀರಕಂಠೀರವ ನರಸರಾಜ ನಿಗೂ, ವೀರರಾಜನಿಗೂ ಕ್ರಿ.ಶ.೧೬೪೪ರಲ್ಲಿ ನಡೆದ ಘೋರ ಯುದ್ಧದ ಕಾವ್ಯರೂಪವೇ ಪಿರಿಯಾಪಟ್ಟಣ ಕಾಳಗ. ಇದು ಯುದ್ದಕ್ಕೆ ಪ್ರೇರಕವಾದ ಸನ್ನಿವೇಶ, ದಳವಾಯಿಯಿಂದ ಯುದ್ಧ ಸಿದ್ಧತೆ, ಅಪಾರಸೇನೆ ಪಿರಿಯಾಪಟ್ಟಣದ ಕಡೆ ಹೊರಟ ವೈಖರಿ, ಕೋಟೆ ಮುತ್ತಿಗೆಯ

ಅದ್ಭುತ ವರ್ಣನೆಗಳು, ಐತಿಹಾಸಿಕ ಪಾತ್ರವೊಂದರಲ್ಲಿ ದೇವತೆಗಳ ಪಾತ್ರ, ಕೋಟೆಯನ್ನು ವಶಪಡಿಸಿಕೊಂಡ ಸೇನೆ ಉನ್ಮತ್ತವಾಗಿ ನಡೆಸಿದ ಮುಗ್ಧ ಜನರ ಭೀಕರ ಕೊಲೆ, ಮಡದಿ ಮಕ್ಕಳಿಂದ ವೀರರಾಜ ರಣರಂಗಕ್ಕೆ ಬೀಳ್ಕೊಂಡ ಕರುಳು ಹಿಂಡುವ ಸನ್ನಿವೇಶ, ತನ್ನ ಕೈಯಿಂದಲೇ ರಾಣಿಯರ ಕೊಲೆಯನ್ನು ನಡೆಸಿದ ರುದ್ರಭೀಕರ ಸನ್ನಿವೇಶ. ಮುಂದಿನ ಹೋರಾಟದ ಅಪೂರ್ವ ವರ್ಣನೆಗಳು.[೫] ಈ ಎಲ್ಲವೂ ಕೂಡಿಕೊಂಡು ಒಂದು ಅಪೂರ್ವ ದುರಂತ ಚಾರಿತ್ರಿಕ ವಸ್ತುವುಳ್ಳ ಕಲಾಕೃತಿಯಾಗಿದೆ. ರಣಧೀರ ಕಂಠೀರವ ನರಸರಾಜ ಒಡೆಯನು ಪಿರಿಯಾಪಟ್ಟಣಕ್ಕೆ ಮುತ್ತಿಗೆ ಹಾಕಿದಾಗ ಹಾಲೇರಿಯಲ್ಲಿ ಮುದ್ದುರಾಜನು ಆಳುತ್ತಿದ್ದನು. ಈ ಸಮಯದಲ್ಲಿ ಪಿರಿಯಾಪಟ್ಟಣದಲ್ಲಿ ನಂಜುಂಡ ಅರಸನು ವೃದ್ದನಾಗಿದ್ದನು.

ಅಡಿಟಿಪ್ಪಣಿಗಳು

೧. ರಾಜಶೇಖರ್ ಪಿ.ಕೆ., ೨೦೧೦: **ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್,** ಪು.೮(ಉಳಿದ ಆರು ತಾಲ್ಲೂಕುಗಳೆಂದರೆ ಹೆಚ್.ಡಿ. ಕೋಟೆ, ಹುಣಸೂರು, ಕೆ.ಆರ್.ನಗರ, ಮೈಸೂರು, ನಂಜನಗೂಡು ಮತ್ತು ಟಿ.ನರಸೀಪುರ)

೨. ಅದೇ ಪು.೧

೩. ಅದೇ ಪು.೪

೪. ರೈಸ್ ಬಿ.ಎಲ್., **ಮೈಸೂರು ಗ್ಯಾಸೆಟಿಯರ್, ಸಂಪುಟ-೧,** ಪು.೧೦

೫. ಉದಯಕುಮಾರ ಕೆ.ಸಿ. ೨೦೦೮: **ಎಂ.ಫಿಲ್, ನಿಬಂಧ,** ಪು.೧೬

೬. ರಾಜಶೇಖರ್ ಪಿ.ಕೆ. ೨೦೧೦: **ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್,** ಪು.೩.

೭. ರೈಸ್ ಬಿ.ಎಲ್., **ಮೈಸೂರು ಗ್ಯಾಸೆಟಿಯರ್, ಪೂರ್ವೋಕ್ತ,** ಪು.೧೦

೮. **ಮೈಸೂರು ಆರ್ಕಿಯಾಲಾಜಿಕಲ್ ವರದಿ, ೧೯೪೨,** ಪು.೩೪

೯. ಮೈಸೂರು ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೧-೧೨, ಪು.೧೧

೧೦. ರಾಜಶೇಖರ್ ಪಿ.ಕೆ. ೨೦೧೦: **ಪೂರ್ವೋಕ್ತ,** ಪು.೪

೧೧. ಎ.ಕ. ಸಂಪುಟ ಎಂಟು, ಶ್ರವಣಬೆಳಗೊಳ, ಶಾ.ಸ.೩೧.

೧೨. ತಿಪ್ಪೇರುದ್ರಸ್ವಾಮಿ ಹೆಚ್., ೨೦೧೦: **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಪು.೭೬.

೧೩. ಪಾಲಾಕ್ಷ, ೧೯೯೩: **ಕರ್ನಾಟಕದ ಇತಿಹಾಸ ಪರಿಚಯ,** ಪು.೪೪

೧೪. ಎ.ಕ. ಸಂಪುಟ ನಾಲ್ಕು, ೧೯೭೫: ಪಿ.ಪ.೪೯.

೧೫. ಅದೇ, ಪೀಠಿಕೆ, ಪು.೧

೧೬. ಸದಾಶಿವ ಕೆ., ೨೦೦೪: **ಪ್ರಾಚೀನ ಭಾರತದ ಇತಿಹಾಸ,** ಪು.೩೨೭

೧೭. ಎ.ಕ. ಸಂಪುಟ ನಾಲ್ಕು, ಪಿ.ಪ.೨೮

೧೮. ಅದೇ, ಪಿ.ಪ.೧೩೩

೧೯. ಅದೇ ಪಿ.ಪ.೯೨

೨೦. ಅದೇ, **ಪೀಠಿಕೆ** ಪು೧, ೭೮

೨೧. ರಾಜಶೇಖರ್ ಪಿ.ಕೆ., ೨೦೦೧: **ಶಿವಸಂಪದ,** ಪು.೮೭

೨೨. ಅದೇ, ಪು.೮೭,೮೮

೨೩. ಅದೇ ಪು.೮೮

೨೪. ಎ.ಕ. **ಪೂರ್ವೋಕ್ತ** ಪಿ.ಪ.೩.

೨೫. ಅದೇ, ಪಿ.ಪ.೩೨,

೨೬. ಅದೇ, ಪಿ.ಪ.೩೩,

೨೭. ಅದೇ, ಪಿ.ಪ.೧೨೩

೨೮. ಅದೇ, ಪಿ.ಪ.೬೯

೨೯. ಅದೇ, ಪಿ.ಪ.೮೮

೩೦. ಅದೇ ಪಿ.ಪ.೧೩೮

೩೧. ಅದೇ, ಪಿ.ಪ.೫೯

೩೨. ಎ.ಕ.ಸಂಪುಟ ಎಂಟು, ಹಾಸನ ೧೭೭

೩೩. ಅದೇ, ಅ.ಗೂ.೪೪

೩೪. ಅದೇ, ಅ.ಗೂ.೧೦೭

೩೫. ಎ.ಕ.ಸಂಪುಟ ನಾಲ್ಕು, ಪಿ.ಪ.೧೨೨

೩೬. ಅದೇ, ಪಿ.ಪ.೧೨೭

೩೭. ಅದೇ, ಪಿ.ಪ.೩೦

೩೮. ಅದೇ ಪಿ.ಪ.೯೪

೩೯. ಎ.ಕ.ಸಂಪುಟ ನಾಲ್ಕು, ಭಾಗ–೨, ಪರಿಚಯ.

೪೦. ಗೋಪಾಲರಾವ್ ಎಚ್.ಎಸ್, ೨೦೦೦: **ಚಂಗಾಳ್ವರು,** ಪು.೩

೪೧. ಅದೇ ಪು.೭

೪೨. ಎ.ಕ.ಸಂಪುಟ ನಾಲ್ಕು, ಕೃಷ್ಣರಾಜನಗರ, ೨೦

೪೩. ಅದೇ, ಕೃಷ್ಣರಾಜನಗರ, ೨೧

೪೪. ಗೋಪಾಲ ಬಿ.ಆರ್., ೧೯೮೨: **ಮೈನರ್ ಡೈನಸ್ಟೀಸ್ ಆಫ್ ಸೌತ್ ಇಂಡಿಯಾ,** ಪು. ೧೯೯–೧೭೦.

೪೫. ಎ.ಕ. ಸಂಪುಟ ನಾಲ್ಕು, ಹುಣಸೂರು ೩೫

೪೬. **ಕರ್ನಾಟಕ ತ್ರೋ ದಿ ಏಜಸ್, ಕರ್ನಾಟಕ ಸರ್ಕಾರ,** ೧೯೬೮: ಪು.೪೦೭.

೪೭. ಡೆರಿಟ್, ಜೆ.ಡಿ.ಎಂ, ೧೯೫೭: **ದಿ ಹೊಯ್ಸಳಾಸ್, ಆಕ್ಸ್‌ಫರ್ಡ್ ಯುನಿವರ್ಸಿಟಿ,** ಲಂಡನ್.

೪೮. ರಾಜಶೇಖರ್ ಪಿ.ಕೆ., ೨೦೦೧: **ಪಿರಿಯಾಪಟ್ಟಣ ಕಾಳಗ,** ಪು. xviii

೪೯. ಎ.ಕ. ಸಂಪುಟ ನಾಲ್ಕು, ಯಳಂದೂರು ಶಾಸನ ಸಂ.೧೬೭

೫೦. ದೇ.ಜ.ಗೌ., ೧೯೯೦: **ಸ್ಥಳನಾಮ ವ್ಯಾಸಂಗ,** ಪು.೧೧೯,

೫೧. ಎ.ಕ., ಕೃಷ್ಣರಾಜನಗರ, ಸಂ.೨೫

೫೨. ಎ.ಕ., ಪಿ.ಪ.ಸಂ.೧೪,೧೫.

೫೩. ಅದೇ, ಪಿ.ಪ.ಸಂ.೧೧೪

೫೪. **ಹಯವದನರಾವ್ ಸಿ. ಮೈಸೂರು ಗ್ಯಾಜೆಟಿಯರ್,** ಸಂಪುಟ ೫, ಪು.೬೪೪

೫೫. ರಾಜೇಗೌಡ ಹ.ಕ., **ಪೂರ್ವೋಕ್ತ,** ಪು.೫೩–೫೭

೫೬. ಎಂ.ಎ.ಆರ್, ೧೯೨೫, ಪು. ೧೪

೫೭. **ಮೈಸೂರು ಗ್ಯಾಜೆಟಿಯರ್,** ಸಂಪುಟ ೫, ೬೪೪.

೫೮. ಕೂರ್ಗ್ ನಂ.೪೬, **ಮೈಸೂರು ಗ್ಯಾಜೆಟಿಯರ್,** ಸಂಪುಟ ೨, ಭಾಗ ೨, ಪು.೮೯೫೨

೫೯. ಎ.ಕ. ಸಂಪುಟ ಐದು ಮೈ ೧೧೩–೧೧೪

೬೦. ಎ.ಕ. ಸಂಪುಟ ಮೂರು, ಟಿ.ನರಸಿಪುರ, ನಂ.೪೪

೬೧. ಎಂ.ಜಿ.೨, ಭಾಗ ೨, ಪು.೧೩೧೯, ಎ.ಕ.ಐದು, ನಂ.೭೬.

೬೨. ಎ.ಕ.ಸಂಪುಟ, ಅರಕಲಗೂಡು, ನಂ.೭೬.

೬೩. ಎ.ಕ.ಸಂಪುಟ, ರೈಸ್ ಹಾಸನ, ನಂ.೧೬೧,೧೬೨.

೬೪. ಎಂ.ಜಿ.ಸಂಪುಟ, ಪು.೬೪೪-೬೫೪.

೬೫. ಐ.ಬಿ.ಐ.ಡಿ. ಹಾಸನ, ೧೬೨.

೬೬. ಡೆರೆಟ್, ಜೆ.ಡಿ.ಎಂ.,ಓ.ಪಿ. ಸಿ.ಐ.ಪಿ. ಅಧ್ಯಾಯ ೩, ಭಾಗ ೨.

೬೭. ಎ.ಕ.ವಿ.ಪಿ.ಟಿ.೧, ರೈಸ್ ಬಿ.ಎಲ್. ಬೇಲೂರು, ನಂ.೧೭೮, ಎ.ಡಿ.೧೧೩೪.

೬೮. ಎ.ಕ.ಸಂಪುಟ, ರೈಸ್ ಬಿ.ಎಲ್. ಬೇಲೂರು, ನಂ. ೧೧೪ ಆಫ್ ಎ.ಡಿ. ೧೧೭೩, ಮತ್ತು ಹಯವದನ ರಾವ್ ಎಂ.ಜಿ., ಸಂಪುಟ ೨, ಭಾಗ ೨, ಪು.೧೩೫೬.

೬೯. ಎ.ಕ.ಸಂಪುಟ ನಾಲ್ಕು, ರೈಸ್ ಬಿ.ಎಲ್. ಹುಣಸೂರು, ನಂ.೨೦ ಆಫ್. ೧೧೭೩ ಎ.ಡಿ.

೭೦. ಎ.ಕ.ಸಂಪುಟ ಆರು, ರೈಸ್ ಬಿ.ಎಲ್., ಕಡೂರು, ನಂ. ೫೭ ಆಫ್. ೧೧೭೨ ಎ.ಡಿ.

೭೧. ಎ.ಕ.ಸಂಪುಟ ನಾಲ್ಕು, ಹುಣಸೂರು, ನಂ. ೩೦, ೧೧೮೬ ಎ.ಡಿ, ಗೋಪಾಲ್ ಬಿ.ಆರ್.,

೭೨. ಎ.ಕ.ಸಂಪುಟ ಐದು, ಕೃಷ್ಣರಾಜನಗರ, ೯೩.

೭೩. ರೈಸ್ ಬಿ.ಎಲ್., ಎ.ಕ., ೪, ಭಾಗ ೨, ಪರಿಚಯ.

೭೪. ಎ.ಕ.ಸಂಪುಟ ನಾಲ್ಕು, ಗೋಪಾಲ ಬಿ.ಆರ್, ಎಡಿಸನ್, ಎ.ಕ. ನಂ. ೧

೭೫. ಗೋಪಾಲ ಬಿ.ಆರ್., ೧೯೮೨: **ಮೈನರ್ ಡೈನಸ್ಟೀಸ್ ಆಫ್ ಸೌತ್ ಇಂಡಿಯಾ, ಕರ್ನಾಟಕ,** ಪು. ೧೭೪.

೭೬. ಗೋಪಾಲ ಬಿ.ಆರ್.(ಸಂ), **ಎ.ಕ.,ವ್ಯಾಲ್ಯೂಂ ೪, ಶ್ರವಣಬೆಳಗೋಳ,** ನಂ.೩೨೯.

೭೭. ವರದರಾಜರಾವ್ ಜಿ., ೧೯೬೬: **ಕುಮಾರರಾಮನ ಸಾಂಗತ್ಯಗಳು,** ಪು.೨೦

೭೮. ರಾಜಶೇಖರ್ ಪಿ.ಕೆ., **ಪೂರ್ವೋಕ್ತ,** ೨೦೦೧: ಪು.೮೫

೭೯. ಗೋಪಾಲ ಬಿ.ಆರ್.(ಸಂ), ಎ.ಕ., ಸಂಪುಟ ೪, ಪಿರಿಯಾಪಟ್ಟಣ, ನಂ. ೨೨ ಪು.೧೫೨೧.

೮೦. ಕೇಶವಭಟ್ಟ ಟಿ., ೧೯೬೯: ರಾಮವಿಜಯಕಾವ್ಯ, ಕಾವ್ಯದ ಪೀಠಕಾ ಸಂಧಿ ಪದ್ಯ ೭೧-೭೮

೮೧. ಹಯವದನ ರಾವ್ ಎಂ.ಜಿ, ಸಿ, ಓ.ಪಿ. ಸಿ.ಐ.ಆರ್, ಪಿರಿಯಾಪಟ್ಟಣ, ಪು.೮೦೦

೮೨. ರೈಸ್ ಬಿ.ಎಲ್., ಎ.ಕ, ಸಂಪುಟ ೪.

೮೩. ಗೋಪಾಲ ಬಿ.ಆರ್.(ಸಂ), ಎ.ಕ., ಸಂಪುಟ ೪, ಪಿರಿಯಾಪಟ್ಟಣ, ೧೨೧.

೮೪. ಎ.ಕ.ಸಂಪುಟ ಐದು, ಅರಕಲಗೂಡು, ನಂ.೪೪.

೮೫. ಹಯವದನರಾವ್ ಸಿ. ಎಂ.ಜಿ. ಸಂಪುಟ ೩, ಪು.೨೧೨೫.

೮೬. ಗೋಪಾಲ ಬಿ.ಆರ್.(ಸಂ), ಎ.ಕ., ಸಂಪುಟ ೪, ಪರಿಚಯ, ಪು.೨೫

೮೭. ರೈಸ್ ಬಿ.ಎಲ್. ಎ.ಕ.ಸಂಪುಟ ಐದು, ಭಾಗ-೨, ಹಾಸನ, ನಂ.೩೬ ಪು.೧೬೦೭.

೮೮. ಕೃಷ್ಣಯ್ಯ ಡಿ.ಎನ್, ೧೯೯೫: **ಕೊಡಗಿನ ಇತಿಹಾಸ,** ಪು.೬೬

೮೯. **ಮೈಸೂರು ಗ್ಯಾಜೆಟಿಯರ್,** ಸಂಪುಟ ೨, ಪು.೪೪

೯೦. ಐ.ಬಿ.ಐ.ಡಿ. ಪು.೨೩೭

೯೧. ಐ.ಬಿ.ಐ.ಡಿ. ಪು.೨೯೧

೯೨. **ಮೈಸೂರು ಆಂಡ್ ಕೂರ್ಗ ಫ್ರಾಮ್ ದಿ ಇನ್‌ಸ್ಕ್ರೀಪ್ಷನ್ಸ್,** ಪು.೧೩೩

೯೩. **ಕನ್ನಡ ವಿಷಯ ವಿಶ್ವಕೋಶ,** ೧೯೭೯: **ಕರ್ನಾಟಕ ಸಂಪುಟ,** ಪು.೬೪೫

೯೪. ಜೀಶಂಪ, ೧೯೭೯: **ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು,** ಪು.೩೦೪

೯೫. ಅದೇ, ಪು.೩೨೦.

ಅಧ್ಯಾಯ ಮೂರು

ಪ್ರಾಗಿತಿಹಾಸ ಕಾಲದ ನೆಲೆಗಳು

ಅಧ್ಯಾಯ ಮೂರು

ಪ್ರಾಗಿತಿಹಾಸ ಕಾಲದ ನೆಲೆಗಳು

ಮಾನವನು ಪ್ರಾಣಿ ಜಾತಿಯಿಂದ ವಿಕಾಸ ಹೊಂದಿ ಜೀವಿಸಲು ಆರಂಭಿಸಿದ ಕಾಲದಿಂದ ಶಿಲಾಯುಗದ ಸಂಸ್ಕೃತಿ ಪ್ರಾರಂಭವಾಗುತ್ತದೆ. ಪುರಾತನ ಕಾಲದಲ್ಲಿ ಪ್ರಾಣಿಯಂತೆ ಜೀವನವನ್ನಾರಂಭಿಸಿದ ಮಾನವ, ಇಂದು ಮಂಗಳ ಗ್ರಹದ ಮೇಲೆ ಸಂಶೋಧನೆ ಕೈಗೊಳ್ಳುವ ಹಂತಕ್ಕೇರಿರುವ ಆತನ ವಿಕಾಸದ ಇತಿಹಾಸ ಅತ್ಯಂತ ಕುತೂಹಲಕಾರಿಯಾದುದಾಗಿದೆ. ಮಾನವ ಇತಿಹಾಸದಲ್ಲಿ ಬರವಣಿಗೆಗಳು ಅಸ್ತಿತ್ವಕ್ಕೆ ಬರುವುದರ ಮೊದಲಿನ ಕಾಲವನ್ನು ಇತಿಹಾಸ ಪೂರ್ವಕಾಲ ಎಂದು ಕರೆಯುತ್ತೇವೆ. ಇತಿಹಾಸ ಪೂರ್ವಕಾಲವು ತನ್ನ ಜೀವಿತದ ಬಗ್ಗೆ ಯಾವ ದಾಖಲೆಯನ್ನು ಬಿಟ್ಟುಹೋಗದ ಜನಾಂಗಗಳಿಗೆ ಸಂಬಂಧಪಟ್ಟದ್ದಾಗಿದೆ. ಸಾಮಾನ್ಯವಾಗಿ ಶಿಲಾಯುಗದಿಂದ ಆರಂಭವಾಗುವ ಈ ಕಾಲ ಲಿಖಿತ ದಾಖಲೆಗಳು ಲಭ್ಯವಾಗುವ ಕಾಲದವರೆಗೆ ಮುಂದುವರೆಯುತ್ತದೆ. ಶಿಲಾಯುಗದ ನಂತರ ಬರುವ ಕಾಲವನ್ನು ಪ್ರೋಟೊ ಇತಿಹಾಸ ಎಂದು ಕರೆಯುವರು. ಈ ಕಾಲದಲ್ಲಿ ಬರವಣಿಗೆ ರೂಪುಗೊಂಡಿದ್ದರೂ ಓದಲು ಸಾಧ್ಯವಾಗಲಿಲ್ಲ. ಹರಪ್ಪ ನಾಗರಿಕತೆ ಪ್ರೋಟೊ ಇತಿಹಾಸಕ್ಕೆ ಉತ್ತಮ ಉದಾಹರಣೆಯಾಗಿದೆ. ಭಾರತದಲ್ಲಿ ದೊರೆತಿರುವ ಪ್ರಾಚ್ಯ ಅವಶೇಷಗಳು ಇತಿಹಾಸ ಪೂರ್ವಕಾಲದ ಮಾನವ ಸಂಸ್ಕೃತಿಯನ್ನು ತಿಳಿಯಲು ಪ್ರಮುಖ ಆಧಾರಗಳಾಗಿವೆ. ಅಂತಹ ಅವಶೇಷಗಳಲ್ಲಿ ಕಲ್ಲಿನಿಂದ ಮಾಡಿದ ಆಯುಧಗಳು ಮುಖ್ಯವಾದವು. ಆದ್ದರಿಂದ ಆ ಕಾಲದ ಮಾನವನ ಸಂಸ್ಕೃತಿಯನ್ನು ಶಿಲಾಯುಗದ ಸಂಸ್ಕೃತಿ ಎಂದು ಕರೆಯುತ್ತೇವೆ. ಕ್ರಿ.ಶ.೧೭೮೪ರಲ್ಲೆ ಬಂಗಾಳದಲ್ಲಿ ಭಾರತೀಯ ಪುರಾತನ ಅವಶೇಷಗಳ ಅಧ್ಯಯನ ಆರಂಭವಾಯಿತು. ವ್ಯವಸ್ಥಿತವಾದ ಸಂಶೋಧನೆಯು ಬ್ರಿಟಿಷ್ ಭೂಗರ್ಭ ಶಾಸ್ತ್ರಜ್ಞ ಮತ್ತು ಜಿಯೋಲಾಜಿಕಲ್ ಸರ್ವೆಯರ್ ಆದ ರಾಬರ್ಟ್ ಬ್ರೂಸ್‌ಫೂಟ್ ರವರಿಂದ ಆರಂಭ ವಾಯಿತು. ಅವರು ಕ್ರಿ.ಶ.೧೮೬೩ ರಲ್ಲಿ ಮದ್ರಾಸಿನ ಹತ್ತಿರದ ಪಲ್ಲವರಂ ಎಂಬಲ್ಲಿ ಹಳೆಯ ಶಿಲಾಯುಗದ ಮಾನವನ ಕೈಕೊಡಲಿಯನ್ನು ಗುರುತಿಸಿದರು. ಕ್ರಿ.ಶ.

೧೯೧೪ ರಲ್ಲಿ ಇಂತಹ ಆಯುಧಗಳ ಕುರಿತು ಗ್ರಂಥ ಪ್ರಕಟಿಸಿದರು. ಇಂತಹ ವ್ಯವಸ್ಥಿತವಾದ ಕೆಲಸ ಮೊದಲ ಬಾರಿ ನಡೆದ ಕಾರಣ ರಾಬರ್ಟ್ ಬ್ರೂಸ್‌ಫೂಟ್ ಅವರನ್ನು ಭಾರತದ ಪ್ರಾಗಿತಿಹಾಸದ ಪಿತಾಮಹ[೧] ಎಂದು ಕರೆಯಲಾಗಿದೆ.

ಭಾರತದಲ್ಲಿ ಆದಿಮಾನವನು ಪ್ರಾಗಿತಿಹಾಸ ಕಾಲದ ವಿವಿಧ ಕಾಲಘಟ್ಟಗಳಲ್ಲಿ ಜೀವಿಸಿದ್ದ ಉದಾಹರಣೆಗಳು ದೊರೆತಿವೆ. ಕರ್ನಾಟಕ ಇದಕ್ಕೆ ಹೊರತಾಗಿಲ್ಲ. ದಖನ್ ಪ್ರಸ್ಥಭೂಮಿಗೆ ಸೇರಿದ ಕರ್ನಾಟಕವು ಭೌಗೋಳಿಕವಾಗಿ ಆಯಕಟ್ಟಿನ ಭಾಗದಲ್ಲಿದೆ. ಇಲ್ಲಿನ ಪರಿಸರವು ಮಾನವನ ವಾಸಕ್ಕೆ ಅನುಕೂಲಕರವಾಗಿದ್ದರಿಂದ ಪ್ರಾಚೀನ ಕಾಲದಿಂದಲೂ ಜೀವನೋಪಾಯದ ಚಟುವಟಿಕೆಗಳು ಆರಂಭವಾಗಿರುವುದನ್ನು ಗುರುತಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆ ಹಾಗು ಕರ್ನಾಟಕ, ಮೈಸೂರು, ಕನ್ನಡ ವಿಶ್ವವಿದ್ಯಾಲಯಗಳ ಸಂಶೋಧಕ ವಿದ್ವಾಂಸರು ಕೆಲ ಸಂಘಸಂಸ್ಥೆಗಳ ಹವ್ಯಾಸಿ ಸಂಶೋಧಕರು ಮತ್ತು ವಿದ್ವಾಂಸರು ನಡೆಸಿದ ಉತ್ಖನನ, ಅನ್ವೇಷಣಾ ಕಾರ್ಯದಿಂದ ಕರ್ನಾಟಕದಲ್ಲಿ ಹಲವಾರು ಮಾನವನ ನೆಲೆಗಳು ಬೆಳಕಿಗೆ ಬಂದಿವೆ. ಮಾನವ ಅಕ್ಷರಜ್ಞಾನ ಕಂಡುಕೊಂಡ ನಂತರದ ಕಾಲವನ್ನು ಚಾರಿತ್ರಿಕ ಕಾಲ[೨] ಎನ್ನುತ್ತಾರೆ. ಆದಿಮಾನವನ ವಿಕಾಸವನ್ನು ಆತನು ಬಳಸಿದ ವಸ್ತು ಲಕ್ಷಣಗಳ ಆಧಾರದ ಮೇಲೆ ಎರಡು ಪ್ರಮುಖ ಹಂತಗಳಾಗಿ ವಿಂಗಡಿಸಬಹುದು. ಅವುಗಳೆಂದರೆ, ಶಿಲಾಯುಗ ಮತ್ತು ಲೋಹಯುಗ. ಭಾರತದಲ್ಲಿ ಶಿಲಾಯುಗದ ಮಾನವ ಸಂಸ್ಕೃತಿಯ ಬೆಳವಣಿಗೆಯನ್ನು ಆಧರಿಸಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು.

೧. ಹಳೆಯ ಶಿಲಾಯುಗ(ಸುಮಾರು ಕ್ರಿ.ಪೂ.೨.೫೦.೦೦೦-೧.೦೦.೦೦೦)

೨. ಮಧ್ಯ ಶಿಲಾಯುಗ(ಸುಮಾರು ಕ್ರಿ.ಪೂ.೯೦೦೦-೭೦೦೦)

೩. ನೂತನ ಶಿಲಾಯುಗ(ಸುಮಾರು ಕ್ರಿ.ಪೂ.೭೦೦೦-೨೧೦೦)

೧. ಹಳೆಯ ಶಿಲಾಯುಗ

ಹಳೆಯ ಶಿಲಾಯುಗವನ್ನು ಆಂಗ್ಲಭಾಷೆಯಲ್ಲಿ ಪೆಲಿಯೋಲಿಥಿಕ್ ಎಂದು ಕರೆಯುತ್ತಾರೆ. ಪೆಲಿಯೋಲಿಥಿಕ್ ಎಂಬ ಪದವನ್ನು ಗ್ರೀಕ್ ಪದಗಳಾದ ಪೆಲಿಯಾಸ್ ಮತ್ತು ಲಿಥೋಸ್‌ನಿಂದ ಆರಿಸಿಕೊಳ್ಳಲಾಗಿದೆ. ಪೆಲಿಯೋಸ್ ಎಂದರೆ ಹಳೆಯದು ಮತ್ತು ಲಿಥೋಸ್ ಎಂದರೆ ಶಿಲೆ[೩] ಎಂದರ್ಥವಾಗುತ್ತದೆ. ಒಟ್ಟಿನಲ್ಲಿ ಹಳೆಯ ಶಿಲೆ ಎಂದರ್ಥ. ಒರಟು ಕಲ್ಲಿನ ಉಪಕರಣಗಳು ಅತ್ಯಂತ ಪ್ರಾಚೀನ ಮಾನವರ ಜೀವಿತದ ಬಗ್ಗೆ ದೊರೆತಿರುವ ಏಕೈಕ ಸಾಕ್ಷ್ಯಾಧಾರಗಳಾಗಿವೆ. ಅವನು ಬಳಸುತ್ತಿದ್ದ ಆಯುಧಗಳಲ್ಲಿ ಸಾಮಾನ್ಯವಾಗಿ ಬೆಣಚುಕಲ್ಲನ್ನು ಉಪಯೋಗಿಸಿರುವುದರಿಂದ

'ಬೆಣಚು ಕಲ್ಲಿನ ಮಾನವ'[೪] ಎಂಬುದಾಗಿ ವಿದ್ವಾಂಸರು ಕರೆದಿದ್ದಾರೆ. ಆದಿಮಾನವನ ಮುಖ್ಯ ಆಯುಧಗಳೆಂದರೆ ಅಬೆವಿಲಿಯನ್, ಅಷೂಲಿಯನ್ ಮಾದರಿಯ ಕೈಕೊಡಲಿಗಳು. ಹಳೆಯ ಶಿಲಾಯುಗದ ಮಾನವನ ನೆಲೆಗಳು ಭಾರತದ ಅನೇಕ ಭಾಗಗಳಲ್ಲಿ ಕಂಡುಬಂದಿವೆ. ಅವುಗಳೆಂದರೆ ಕಾಶ್ಮೀರ, ಸೋಹನ್ ನದಿಕಣಿವೆ, ನರ್ಮದಾ, ಕೃಷ್ಣ ಮತ್ತು ತುಂಗಭದ್ರಾ ನದಿ ಕಣಿವೆಗಳು ಹಾಗು ಮಧ್ಯಪ್ರದೇಶದ ಬಿಮ್‌ಬೆಟ್ಕ, ಭೋಪಾಲ್, ಚೋಟಾನಾಗಪುರ, ತಮಿಳುನಾಡಿನ ತಿರುನೆಲ್‌ವೇಲಿ, ಕರ್ನೂಲ್ ಮೊದಲಾದ ಕಡೆಗಳಲ್ಲಿ ಕಂಡುಬಂದಿವೆ.[೫] ಈ ಯುಗದ ಮಾನವನು ಸ್ವಾಭಾವಿಕವಾಗಿ ನೀರು ದೊರಕುವ ಸ್ಥಳಗಳಲ್ಲಿ ವಾಸಿಸುತ್ತಿದ್ದ. ಗುಹೆಗಳಲ್ಲಿ ಹಾಗು ಮರದ ಪೊಟರೆಗಳಲ್ಲಿ ಜೀವಿಸುತ್ತಿದ್ದ. ಒಟ್ಟಾರೆ ಮಾನವ ಜೀವನ ವಿಧಾನವು ಪ್ರಾಣಿ ಜೀವನದಿಂದ ಸ್ವಲ್ಪಮಟ್ಟಿಗೆ ಹೊರಬಂದ ಅನಾಗರಿಕ ಜೀವನವಾಗಿತ್ತು. ಹಳೆಶಿಲಾಯುಗದ ಮಾನವನು ನೆಗ್ರಿಟೊ ಜನಾಂಗಕ್ಕೆ ಸೇರಿದ ಇಂದಿನ ಅಂಡಮಾನ್ ದ್ವೀಪದ ಜನಗಳಂತೆ ಕುಳ್ಳಗೆ, ಕಪ್ಪು ಚರ್ಮ, ಚಪ್ಪಟೆ ಮೂಗು, ಹೆಚ್ಚು ರೋಮಗಳನ್ನು ಹೊಂದಿದ ದೇಹ ರಚನೆಯನ್ನು ಹೊಂದಿದ್ದನು.

೨. ಮಧ್ಯಶಿಲಾಯುಗ

ಹಳೆ ಶಿಲಾಯುಗ ಮತ್ತು ಹೊಸ ಶಿಲಾಯುಗದ ನಡುವಿನ ಕಾಲ ಮಧ್ಯಶಿಲಾಯುಗ. ಈ ಯುಗವು ಎರಡು ವಿಶೇಷ ಲಕ್ಷಣಗಳಿಂದ ಕೂಡಿದೆ. ಮೊದಲನೆಯದಾಗಿ ಕಲ್ಲಿನ ಉಪಕರಣಗಳು ಬಹಳ ಸಣ್ಣದಾಗಿದ್ದವು. ಅವು ಒಂದು ಅಂಗುಲದಷ್ಟು ಮಾತ್ರ ಉದ್ದವಾಗಿದ್ದು, ತೀಕ್ಷ್ಣವಾಗಿದ್ದವು. ಆದ್ದರಿಂದ ಈ ಆಯುಧಗಳನ್ನು ಸೂಕ್ಷ್ಮ ಶಿಲಾಯುಧಗಳೆಂದು ಕರೆಯುವರು. ಎರಡನೆಯದಾಗಿ ಬೆಣಚು ಕಲ್ಲನ್ನು ಉಪಯೋಗಿಸದೆ ಚಾಲ್ಸಿಡೆನಿ ಮತ್ತು ಅಗೇಟ್ ರೀತಿಯ ಅರೆ ಪ್ರಶಸ್ತ ಶಿಲೆಗಳಿಂದ ಹಳೆಯ ಶಿಲಾಯುಗದ ತಯಾರಿಕೆಯದಕ್ಕಿಂತ ಭಿನ್ನ ವಿಧಾನಗಳಲ್ಲಿ ಆಯುಧಗಳನ್ನು ತಯಾರಿಸುತ್ತಿದ್ದರು.[೬]

ಬೆಂಗಳೂರು, ಬಳ್ಳಾರಿ, ಚಿತ್ರದುರ್ಗ, ಗುಲ್ಬರ್ಗ, ಬಿಜಾಪುರ, ತುಮಕೂರು ಜಿಲ್ಲೆಗಳಲ್ಲಿ ಮಧ್ಯಶಿಲಾಯುಗದ ಆಯುಧಗಳು ದೊರೆತಿವೆ. ಡಾ.ಶೇಷಾದ್ರಿ ಅವರು ತಾಳೀಕೋಟೆಯ ಹತ್ತಿರವಿರುವ ಸಾಲ್ವಡಗಿ ನೆಲೆಯಿಂದ ಈ ಸಂಸ್ಕೃತಿಗೆ ಸೇರಿದ ಆಯುಧಗಳನ್ನು ಸಂಗ್ರಹಿಸಿರುವರು. ಮೃದುವಾದ ಕಣಗಳಿಂದ ಕೂಡಿದ ಉತ್ತಮ ಜಾತಿಯ ಜಾಸ್ಪರ್, ಅಗೇಟ್, ಚರ್ಟ್ ಕಲ್ಲುಗಳ ಹೆರೆಯುವ ಚಕ್ಕೆ, ಮೊನೆಗಳು, ಅಲಗುಗಳು ಮತ್ತು ರಂಧ್ರ ಕೊರೆಯಲು ಉಪಯೋಗಿಸುವ ಸೂಜಿಕಲ್ಲುಗಳು ಈ ಸಂಸ್ಕೃತಿಯ ಮುಖ್ಯ ಆಯುಧಗಳಾಗಿವೆ.[೭] ಮಧ್ಯಶಿಲಾಯುಗದ ಕೊನೆಯ ವೇಳೆಗೆ ಪ್ರಾಣಿಗಳನ್ನು ಪಳಗಿಸಿ ಪಶುಸಂಗೋಪನೆ ಕಲೆಯನ್ನು ರೂಢಿಸಿಕೊಂಡ. ಈ ಯುಗದ

ಕೊನೆಯ ಹೊತ್ತಿಗೆ ಮಣ್ಣಿನಿಂದ ಮಡಕೆ ಮಾಡುವುದು ಹಾಗು ಶವ ಹೂಳುವುದನ್ನು ಕಲಿತ. ಈ ಯುಗದ ಮುಖ್ಯ ನೆಲೆಗಳೆಂದರೆ ಮಧ್ಯಭಾರತದ ಚೋಟಾನಾಗಪುರ, ದಕ್ಷಿಣ ಭಾರತದ ಕೃಷ್ಣಾ ನದಿ ಕಣಿವೆ ಮತ್ತು ಬಳ್ಳಾರಿ ಜಿಲ್ಲೆಯ ಸಂಗನಕಲ್ಲು, ಬ್ರಹ್ಮಗಿರಿ ಮತ್ತು ಗುಜರಾತಿನ ಲಾಂಗ್ನಾಜ್.[೮]

ಒಟ್ಟಿನಲ್ಲಿ ಈ ಯುಗದ ಮಾನವ ಬೇಟೆಗಾರನಾಗಿದ್ದ ಬೇಟೆಯಾಡಲು ಕಲ್ಲು, ಮೂಳೆ, ಜಿಂಕೆಯ ಕೊಂಬು ಹಾಗು ದಂತವನ್ನು ಬಳಸಿ ಆಯುಧ ಮಾಡಿಕೊಳ್ಳುತ್ತಿದ್ದನು. ಚಕ್ರವನ್ನು ಬಳಸದೆ ಕೈಯಿಂದ ಮಾಡಿದ ಮಡಕೆಗಳನ್ನು ಬಳಸುತ್ತಿದ್ದನು. ಆಹಾರಕ್ಕೆ ಎಮ್ಮೆ, ಆಕಳು, ಕುರಿ, ಹೋತ, ಹಂದಿ, ಮೊಲ, ನರಿ, ಮೀನು, ಸಾರಂಗ, ಆಮೆ ಪ್ರಾಣಿಗಳ ಮಾಂಸ ಬಳಸುತ್ತಿದ್ದನು. ಶವ ಸಂಸ್ಕಾರವನ್ನು ಅರಿತಿದ್ದನೆಂದು ಹೇಳಲಾಗಿದೆ. ಮಾನವನ ಮೂಳೆಗಳ ಬಳಿ ನಾಯಿಯ ಮೂಳೆಗಳು ಇರುವುದನ್ನು ಗಮನಿಸಿದರೆ, ಮಾನವನ ಚಟುವಟಿಕೆಗಳಲ್ಲಿ ಮಹತ್ತರ ಪಾತ್ರವನ್ನು ನಾಯಿ ವಹಿಸಿರಬಹುದು. ಆಹಾರ ಸಂಗ್ರಹಣೆಯ ಹಂತ, ಆಹಾರ ಉತ್ಪಾದನೆಯ ಹಂತವಾಗಿ ಬೆಳವಣಿಗೆಯಾಗಿದ್ದು ಈ ಯುಗದ ವಿಶೇಷ. ಹಾಗಾಗಿ ಈ ಯುಗವನ್ನು ಸ್ಥಿತ್ಯಂತರ ಶಿಲಾಯುಗ್ ಎಂದು ಸಹ ಕರೆಯಲಾಗಿದೆ.

೩. ನೂತನ ಶಿಲಾಯುಗ

ಆಂಗ್ಲ ಭಾಷೆಯಲ್ಲಿ ನಿಯೊಲಿಥಿಕ್ ಎನ್ನುವರು. ಇದು ಎರಡು ಗ್ರೀಕ್ ಪದಗಳಾದ ನಿಯೋಸ್ ಮತ್ತು ಲಿಥೋಸ್‌ಗಳ ಸಂಗಮವಾಗಿದೆ. ನಿಯೋಸ್ ಅಂದರೆ ಹೊಸ ಹಾಗು ಲಿಥೋಸ್ ಎಂದರೆ ಶಿಲೆ[೧೦] ಎಂದರ್ಥ. ಬಲೂಚಿಸ್ತಾನದ ಮೆಹರ್‌ಘರ್ ಈ ಯುಗದ ಮೊದಲ ನಿವೇಶನ. ವಾಯವ್ಯ ಕಾಶ್ಮೀರದಲ್ಲಿ ನವಶಿಲಾಯುಗದ ಸಂಸ್ಕೃತಿಯ ವಾಸದ ಗುಳಿಗಳು, ಪಿಂಗಾಣಿ ವಸ್ತುಗಳು, ಮೂಳೆ ಹಾಗು ಕಲ್ಲಿನ ಆಯುಧಗಳು ದೊರಕಿವೆ. ಶ್ರೀನಗರದ ವಾಯವ್ಯಕ್ಕೆ ೧೬ ಕಿ.ಮೀ. ದೂರದಲ್ಲಿರುವ ಬುರ್ಜಹೋಮ್ ನವಶಿಲಾಯುಗದ ಮುಖ್ಯ ನಿವೇಶನ. ಇಲ್ಲಿ ಮೀನುಗಾರಿಕೆ, ಬೇಟೆ, ಕೃಷಿ ಜೀವನೋಪಾಯದ ವೃತ್ತಿಗಳಾಗಿದ್ದವು. ಶ್ರೀನಗರಕ್ಕೆ ೪೫ ಕಿ.ಮೀ. ದೂರದ ಗುಫ್‌ಕ್ರಲ್(ಕುಂಬಾರನ ಗುಹೆ) ನಲ್ಲಿದ್ದ ಜನರಿಗೆ ಕೃಷಿ, ಪಶುಪಾಲನೆಗಳು ಮುಖ್ಯ ವೃತ್ತಿಗಳಾಗಿದ್ದವು. ಬುರ್ಜಹೋಮ್ ಜನರು ಒರಟಾದ ಬೂದು ಬಣ್ಣದ ಮಡಕೆ ಬಳಸುತ್ತಿದ್ದರು. ಒಡೆಯ ಸತ್ತಾಗ ಅವನ ಜೊತೆ ಸಾಕು ನಾಯಿಯನ್ನು ಹೂಳುತ್ತಿದ್ದರು.[೧೧] ನೂತನ ಶಿಲಾಯುಗದ ಜನರು ಕಲ್ಲಿನ ಉಪಕರಣಗಳನ್ನೇ ಉಪಯೋಗಿಸುತ್ತಿದ್ದರು. ಆದರೆ ಇವರಿಗೆ ಚಿನ್ನದ ಹೊರತು ಬೇರೆ ಲೋಹಗಳ ಪರಿಚಯವಿರಲಿಲ್ಲ. ಒರಟಾದ ಆಯುಧಗಳಿಗೆ ಬದಲಾಗಿ ಹೊಳಪುಳ್ಳ ಅತಿ ಸೂಕ್ಷ್ಮ ಹಾಗು ಹರಿತವಾದ

ಆಯುಧಗಳನ್ನು ತಯಾರಿಸಿದನು. ಬೆಣಚುಕಲ್ಲಿಗೆ ಬದಲಾಗಿ ಗಟ್ಟಿಯಾದ ಕಪ್ಪುಶಿಲೆಗಳಿಂದ ವಿವಿಧ ಆಕೃತಿಯ ಉಪಯುಕ್ತವಾದ ಹರಿತ ಹಾಗು ಹೊಳಪಿನಿಂದ ಕೂಡಿದ ಕೊಡಲಿ, ಕಲ್ಲಿನ ಸುತ್ತಿಗೆ, ಒನಕೆ, ಅರೆಯುವ ಸಾಧನ, ಮಣಿಗಳು ಮತ್ತು ಆಟದ ಸಾಮಾನುಗಳನ್ನು ತಯಾರಿಸುತ್ತಿದ್ದ. ಈ ನೂತನ ಶಿಲಾಯುಗದ ವಿಶೇಷವೆಂದರೆ ಮೂಳೆಗಳಿಂದ ಆಯುಧಗಳನ್ನು ತಯಾರಿಸುತ್ತಿದ್ದುದು.

ಆಹಾರ ಹುಡುಕಿಕೊಂಡು ಅಲೆಯುತ್ತಿದ್ದ ಮಾನವ ಈ ಯುಗದಲ್ಲಿ ಆಹಾರ ಧಾನ್ಯ ಬೆಳೆಯಲು ಆರಂಭಿಸಿದ. ತಾನು ಉಂಡು ತಿಂದು ಉಳಿದ ಧಾನ್ಯವನ್ನು ತನ್ನ ಸದಸ್ಯರಿಗೆ ಹಂಚಲು ಸಮರ್ಥನಾದನು. ಅಲೆಮಾರಿ ಜೀವನವನ್ನು ತೊರೆದು ಗ್ರಾಮೀಣ ಜೀವನ ನಡೆಸಲು ಆರಂಭಿಸಿದ. ಮನೆ ಕಟ್ಟಿ ಗೃಹೋಪಕರಣಗಳನ್ನು ತಯಾರಿಸಿದನು. ವ್ಯವಸಾಯ ಆರಂಭಿಸಿ ಪ್ರಾಣಿ ಸಾಕಲು ಪ್ರಾರಂಭಿಸಿದ. ಹೀಗೆ ಜೀವನಕ್ರಮದಲ್ಲಿ ಕ್ರಾಂತಿಯುಂಟಾಯಿತು. ಇಂತಹ ಮಹತ್ತರ ಬದಲಾವಣೆಗಳು ಸಂಭವಿಸಿದ್ದರಿಂದ ಆ ಘಟನೆಗಳನ್ನು ಪ್ರೊ. ಗಾರ್ಡನ್ ಚೈಲ್ಡ್ ನವಶಿಲಾಯುಗದ ಕ್ರಾಂತಿಯೆಂದು[೧೨] ವರ್ಣಿಸಿದ್ದಾನೆ. ವ್ಯವಸಾಯ, ಪ್ರಾಣಿ ಸಾಕಾಣಿಕೆ, ಬೆಂಕಿಯ ತಯಾರಿಕೆ, ಮನೆಗಳಲ್ಲಿ ವಾಸ, ಅರಿವೆಗಳ ಬಳಕೆ, ಮಣ್ಣಿನ ಆಭರಣಗಳ ತಯಾರಿಕೆ, ಹೆಣಿಗೆಯ ಬಳಕೆ, ಈ ಕಾಲದ ನಾಗರಿಕತೆಯ ಮುಖ್ಯ ಲಕ್ಷಣಗಳು.[೧೩] ಗುಹೆಗಳ ಗೋಡೆಗಳ ಮೇಲೆ ಚಿತ್ರಗಳನ್ನು ಬರೆದಿರುವುದು, ಕುಂಬಾರನ ಚಕ್ರದ ಬಳಕೆ, ನೇಯ್ಗೆ ಕುಶಲಕಲೆಗಳು ಈ ಕಾಲದ ನಾಗರಿಕತೆಯ ಪ್ರಮುಖ ಲಕ್ಷಣಗಳು. ಅನೇಕ ಮೂಢನಂಬಿಕೆಗಳೂ ಕೂಡ ಈ ಕಾಲದಲ್ಲಿ ಉದಯಿಸಿದವು.

ಉತ್ತರ ಕರ್ನಾಟಕ ಜಿಲ್ಲೆಗಳ ಬೆಟ್ಟಗುಡ್ಡಗಳಲ್ಲಿ ಈ ಜನರು ತಮ್ಮ ದನ ಕುರಿಗಳೊಡನೆ ವಾಸಿಸುತ್ತಿದ್ದರು. ಮೆಡೋಸ್‌ಟೇಲರ್, ನ್ಯೂಬೋಲ್ಡ್, ರಾಬರ್ಟ್ ಬ್ರೂಸ್‌ಪೋರ್ಟ್ ಲಿಯೋ ನಾರ್ಡ್‌ಮನ್, ಕೆ.ಎಂ.ಅಹಮದ್ ಮೊದಲಾದ ಪುರಾತತ್ವ ಶಾಸ್ತ್ರಜ್ಞರು ವಿವಿಧ ಪ್ರದೇಶಗಳಲ್ಲಿ ಸಂಶೋಧನೆ ನಡೆಸಿದ್ದಾರೆ. ಅನಂತರ ವ್ಹೀಲರ್ ಬ್ರಹ್ಮಗಿರಿಯಲ್ಲೂ(ಚಿತ್ರದುರ್ಗ), ಸುಬ್ಬರಾವ್ ಬಳ್ಳಾರಿ ಬಳಿ ಸಂಗನಕಲ್ಲಿನಲ್ಲೂ, ಥಾಪರ್ ಮಸ್ಕಿಯಲ್ಲೂ, ಆಲ್ಚಿನ್ ಪಿಕ್ಲಿಹಾಳ್‌ನಲ್ಲೂ(ರಾಯಚೂರು ಜಿಲ್ಲೆ), ಶೇಷಾದ್ರಿ ಅವರು ಟಿ.ನರಸೀಪುರದಲ್ಲೂ ಸಂಶೋಧನೆ ನಡೆಸಿ ಈ ಸಂಸ್ಕೃತಿಯ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ನವಶಿಲಾಯುಗದ ನಂತರ ಲೋಹಯುಗ ಆರಂಭ ವಾಯಿತು. ಉಪಕರಣಗಳನ್ನು ತಯಾರಿಸಲು ಮಾನವ ಬಳಸುತ್ತಿದ್ದ ವಸ್ತು, ತಂತ್ರ ಹಾಗು ಆಕೃತಿಗಳ ಆಧಾರದ ಮೇಲೆ ಈ ವರ್ಗೀಕರಣ ಮಾಡಲಾಗಿದೆ. ಉಪಕರಣ ತಯಾರಿಕೆಗೆ ತಾಮ್ರವೇ ಪ್ರಧಾನವಾಗಿದ್ದ ಕಾಲದ ಸಂಸ್ಕೃತಿಯನ್ನು ತಾಮ್ರಯುಗ ಎಂದು ಕರೆಯಲಾಗಿದೆ.

ಕಬ್ಬಿಣಯುಗ ಅಥವಾ ಬೃಹತ್‌ಶಿಲಾಯುಗ(ಸುಮಾರು ಕ್ರಿ.ಪೂ.೧೦೦೦)

ತಾಮ್ರ ಮತ್ತು ಕಂಚಿನ ಲೋಹಕ್ಕೆ ಬದಲಾಗಿ ಕಬ್ಬಿಣವನ್ನು ಉಪಯೋಗಿಸಲಾರಂಭಿಸಿದ್ದು ಮಾನವನ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲು. ದಕ್ಷಿಣ ಭಾರತದಲ್ಲಿ ನವಶಿಲಾಯುಗದ ಅಂತ್ಯದಿಂದ ಐತಿಹಾಸಿಕ ಕಾಲ ಆರಂಭವಾಗುವವರೆಗಿನ ಕಾಲವನ್ನು ಕಬ್ಬಿಣಯುಗ ಅಥವಾ ಬೃಹತ್‌ಶಿಲಾಯುಗವೆಂದು ಕರೆಯಲಾಗಿದೆ. ಆಯುಧೋಪಕರಣಗಳನ್ನು ತಯಾರಿಸಲು ಕಲ್ಲಿಗೆ ಬದಲಾಗಿ ಕಬ್ಬಿಣವನ್ನು ಬಳಸಲಾರಂಭಿಸಿದ್ದರಿಂದ ಕಬ್ಬಿಣಯುಗವೆಂದು, ಬೃಹತ್ ಶಿಲಾಗೋರಿಗಳು ದಕ್ಷಿಣಭಾರತದಲ್ಲಿ ಕಂಡುಬಂದಿದ್ದರಿಂದ ಬೃಹತ್ ಶಿಲಾಯುಗವೆಂತಲೂ ಕರೆಯುತ್ತಾರೆ. ಈ ರೀತಿ ಹೆಸರಿಸಿದ ವಿದ್ವಾಂಸರುಗಳೆಂದರೆ ಮೆಡೋಸ್ ಟೇಲರ್, ರಾಬರ್ಟ್ ಬ್ರೂಸ್‌ಫೂಟ್, ಎಂ.ಎಚ್.ಕೃಷ್ಣ ಹಾಗು ಮಾರ್ಟಿಮರ್ ವ್ಹೀಲರ್. ಈ ವಿದ್ವಾಂಸರುಗಳು ಕರ್ನಾಟಕದ ಮಸ್ಕಿ, ಹಳ್ಳೂರು, ಟಿ.ನರಸೀಪುರಗಳಲ್ಲಿ ಬೃಹದಾಕಾರದ ಕಲ್ಲಿನ ಗೋರಿಗಳನ್ನು ಪತ್ತೆ ಹಚ್ಚಿ ದಕ್ಷಿಣಭಾರತದಲ್ಲಿ ಬೃಹತ್ ಶಿಲಾಯುಗದ[೧೪] ಅಸ್ತಿತ್ವವನ್ನು ಖಚಿತಪಡಿಸಿದರು. ದಕ್ಷಿಣಭಾರತದಲ್ಲಿ ತಿನ್ನೆವೆಲ್ಲಿ ಜಿಲ್ಲೆಯ ಆದಿಚ್ಚಲ್ಲೂರಿನಲ್ಲಿ ಕಬ್ಬಿಣಯುಗದ ಅವಶೇಷಗಳು ಸಿಕ್ಕಿವೆ. ಇಲ್ಲಿ ಮಾನವನ ಅಸ್ಥಿಪಂಜರ, ಅಕ್ಕಿಯ ತವಡು, ಮೆರಗುಗೊಳಿಸಿದ ಮಡಕೆಗಳು, ಕಬ್ಬಿಣದ ಸಾಧನಗಳು, ಬಂಗಾರ ಮತ್ತು ಕಂಚಿನ ಆಭರಣಗಳು ದೊರೆತಿವೆ, ಚಂಗಲ್‌ಪೇಟೆ ಜಿಲ್ಲೆಯ ಪೆರಂಬೂರಿ ನಲ್ಲಿಯೂ ಸಹ ಮಡಕೆಗಳು, ಕಬ್ಬಿಣದ ಉಪಕರಣಗಳು, ಕಪ್ಪೆಚಿಪ್ಪಿನ ಆಭರಣಗಳು ದೊರಕಿವೆ. ತೆಲ್ಲಿ ಚೇರಿಯಲ್ಲೂ ಕಬ್ಬಿಣಯುಗದ ಕಲ್ಲಿನಲ್ಲಿ ಕೊರೆದ ಗುಹೆಗಳು ಹಾಗು ಅವಶೇಷಗಳು ದೊರೆತಿವೆ. ಬಾಣದ ಮೊನೆ, ಅರ್ಧಚಂದ್ರಾಕಾರದ ಆಯುಧಗಳು, ಕತ್ತಿ ಮತ್ತು ನೇಗಿಲು ಕೃಷಿ ಉಪಕರಣಗಳು ಕಬ್ಬಿಣವನ್ನು ಉಪಯೋಗಿಸಿಕೊಂಡು ನಿರ್ಮಿತವಾದವು.

ಇದುವರೆಗಿನ ಸಂಶೋಧನೆಯ ಪ್ರಕಾರ ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಬೃಹತ್ ಶಿಲಾಯುಗದ ಕಾಲ ಕ್ರಿ.ಪೂ. ೧೦೦೦ ದಷ್ಟು ಪ್ರಾಚೀನವಾದುದೆಂದು ಗ್ಯಾಸೆಟಿಯರ್ ಮೂಲದಿಂದ ತಿಳಿದುಬಂದಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ನಡೆದ ಕ್ಷೇತ್ರಾಧ್ಯಯನಗಳು ತಾಲ್ಲೂಕಿನ ಪ್ರಾಚೀನತೆಯನ್ನು ಕ್ರಿ.ಪೂ.೩೦೦೦ ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ದಿವೆ. ಬೃಹತ್‌ಶಿಲಾಯುಗಕ್ಕೂ ಪೂರ್ವದ ನೂತನಶಿಲಾಯುಗದ ನೆಲೆಗಳು ಕಂಡುಬಂದಿವೆ. ಈ ಸಂಶೋಧನೆಯನ್ನು ಕೈಗೊಂಡವರಲ್ಲಿ ಎ.ವಿ. ನರಸಿಂಹಮೂರ್ತಿ ಕೆ.ಕೆ. ಸುಬ್ಬಯ್ಯ ಮತ್ತು ಎನ್.ಎಸ್.ರಂಗರಾಜ್‌ರವರು ಮುಖ್ಯರಾಗಿದ್ದಾರೆ. ಇದುವರೆಗೆ ಕಂಡುಬಂದ ನೆಲೆಗಳಲ್ಲಿ ಬೃಹತ್‌ಶಿಲಾಯುಗದ ಸಮಾಧಿಗಳೇ ಅತಿ ಪ್ರಾಚೀನವಾಗಿವೆ. ಅದಕ್ಕೂ ಹಿಂದಿನ ಸೂಕ್ಷ್ಮ ಮತ್ತು ಹಳೆಯಶಿಲಾಯುಗದ ನೆಲೆಗಳು ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕಂಡುಬಂದಿರುವುದಿಲ್ಲ. ಬೃಹತ್‌ಶಿಲಾಯುಗದ ನೆಲೆಗಳು

ಕಂಡುಬಂದ ಸ್ಥಳಗಳೆಂದರೆ ಚನ್ನಕಲ್ಲು, ಚಿಕ್ಕನೇರಳೆ ಮತ್ತು ಕೊಪ್ಪ, ಚಾಕುರು, ಬಿಳಗುಂದ ಗ್ರಾಮಗಳಲ್ಲಿ ಶಿಲಾಗೋರಿಗಳು೧೫ ಇದ್ದ ವಿವರಗಳನ್ನು ತಿಳಿಯಬಹುದಾಗಿದೆ. ಅಲ್ಲದೆ ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸುಮಾರು ಇಪ್ಪತ್ತೆರಡು ಬೃಹತ್‌ಶಿಲಾಯುಗದ ಗೋರಿಗಳು ಬೆಳಕಿಗೆ ಬಂದಿವೆ. ಅವುಗಳೆಂದರೆ ಪುನಾಡನಹಳ್ಳಿ, ಹರದೂರು, ನಾಗನಹಳ್ಳಿ, ಅತ್ತಿಗೋಡು, ನಿಲವಾಡಿ, ತರಿಕಲ್ಲು, ಆಯಿತನಹಳ್ಳಿ, ಕಂದೆಗಾಲ, ಹರವೆಮಲ್ಲರಾಜಪಟ್ಟಣ, ದೊಡ್ಡಕಮರವಳ್ಳಿ, ಸೂಳೆಕೋಟೆ ಮತ್ತು ಚಾಮರಾಯನಕೋಟೆ. ಇಲ್ಲಿನ ಶಿಲಾಗೋರಿಗಳು ಕಲ್ಲುವೃತ್ತ ಮಾದರಿ ಗಳಾಗಿವೆ. ಇವುಗಳನ್ನು ಸ್ಥಳೀಯವಾಗಿ ಪಾಂಡವರ ಮನೆಗಳೆಂದು ಕರೆಯುವರು. ಇದರಿಂದ ನವಶಿಲಾಯುಗದ ಮುಂದುವರಿಕೆಯಾದ ಬೃಹತ್‌ಶಿಲಾಯುಗದ ಜನರು ಈ ಪ್ರದೇಶದಲ್ಲಿ ನೆಲಸಿದ್ದುದ್ದನ್ನು ದೃಢಪಡಿಸಬಹುದಾಗಿದೆ.

ಕರ್ನಾಟಕದಲ್ಲಿ ಬೃಹತ್‌ಶಿಲಾಸಮಾಧಿಗಳನ್ನು ಹತ್ತು ಮುಖ್ಯ ವಿಧಾನಗಳು ಮತ್ತು ಇಪ್ಪತ್ತಕ್ಕೂ ಹೆಚ್ಚು ಉಪವಿಧಾನಗಳಲ್ಲಿ ನಿರ್ಮಿಸಿರುವುದು ಕಂಡುಬಂದಿದೆ. ಅವುಗಳಲ್ಲಿ ಮುಖ್ಯವಾದವು ಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

೧. ಹಾದಿಕೋಣೆ ಗೋರಿಗಳು

೨. ಕಂಡಿಕೋಣೆ ಗೋರಿಗಳು

೩. ಆಯತಕೋಣೆ ಗೋರಿಗಳು

೪. ಕೊರೆದಕೋಣೆ ಗೋರಿಗಳು

೫. ತುಂಡುಕಲ್ಲು ದಿಣ್ಣೆಗಳು

೬. ಕಲ್ಲು ವೃತ್ತಗಳು

೭. ಕಾಲುಳ್ಳ ಆಯತ ಅಸ್ಥಿ ಮೃತ್ಪಾತ್ರೆಯುಳ್ಳ ಕಲ್ಲು ವೃತ್ತಗಳು

೮. ನಿಲವುಗಲ್ಲುಗಳು

೯. ಗುಡಾಣ ಅಸ್ತಿ ಮೃತ್ಪಾತ್ರೆ ಕುಣಿಗಳು

೧೦.ಶವಕುಣಿಗಳು

ಈ ಮೇಲ್ಕಂಡ ಬೃಹತ್ ಶಿಲಾಗೋರಿಗಳಲ್ಲಿ ಮೊದಲ ನಾಲ್ಕು ಬೃಹತ್ ಶಿಲಾಗೋರಿಗಳ ವೈಶಿಷ್ಟ್ಯವೆಂದರೆ ಕಲ್ಲುಕೋಣೆಗಳಿರುವುದು. ನಂತರದ ಐದರಲ್ಲಿ ಶವಕುಣಿಯೊಳಗೆ ಕಲ್ಲಿನಕೋಣೆ ಇರುವುದಿಲ್ಲ. ಕುಣಿಯ ಮೇಲೆ ಕೇವಲ ತುಂಡುಕಲ್ಲಿನ ರಾಶಿ ಅಥವಾ ಇದನ್ನು ಸುತ್ತುವರಿಯಲ್ಪಟ್ಟ ಗುಂಡುಕಲ್ಲು ಕಟ್ಟೆ ಅಥವಾ ನಿಲ್ಲಿಸಿದ ಹಾಗು ಅಗಲವಾದ ಕಲ್ಲುಚಪ್ಪಡಿ ಇರುತ್ತದೆ. ಕೊನೆಯದರಲ್ಲಿ ಯಾವ ಭಾಗವೂ ಕಲ್ಲಿನಲ್ಲಿರುವುದಿಲ್ಲ. ಆದರೆ ಇಂತಹ ಬೃಹತ್ ಶಿಲಾಗೋರಿಗಳಲ್ಲಿರುವ

ಮೃತ್ಪಾತ್ರೆಗಳು, ಕಬ್ಬಿಣದ ಸಾಮಾನುಗಳು ಮತ್ತು ಅಸ್ತಿ ಸಂಸ್ಕಾರದ ಕ್ರಮ ಉಳಿದ ಪ್ರಕಾರಗಳ ಶಿಲಾಗೋರಿಗಳಲ್ಲಿರುವ ರೀತಿ ಇರುತ್ತದೆ.[೧೬]

ಕಲ್ಲುಗೋರಿಗಳನ್ನು ಡಾ. ಮೋಗ್ಲಿಂಗ್ ಕ್ರಿ.ಶ.೧೮೫೬ರಲ್ಲಿ ಅರಮೇರಿ ಗ್ರಾಮದ(ವೀರ ರಾಜಪೇಟೆ ತಾಲ್ಲೂಕು) ಅಳಮಂಡ ಮನೆಯ ಬಳಿ ಮೊದಲು ಪತ್ತೆ ಹಚ್ಚಿದರು. ಕರ್ನಲ್ ಮೆಕೆಂಜಿ ವೀರರಾಜಪೇಟೆಯ ಪಶ್ಚಿಮ ಭಾಗದಲ್ಲಿ ಕ್ರಿ.ಶ.೧೮೬೬ರಲ್ಲಿ ಪತ್ತೆ ಹಚ್ಚಿದರು. ಕ್ಯಾಪ್ಟನ್‌ಕೋಲ್ ಕ್ರಿ.ಶ. ೧೮೯೯ರಲ್ಲಿ ನಾಲ್ಕು ಕಲ್ಲುಗೋರಿಗಳನ್ನು ಉತ್ಖನನ ಮಾಡಿದರು. ಇವು ಕುಶಾಲನಗರದ ಸಮೀಪದಲ್ಲಿವೆ.[೧೭] ಶಿಲೆಯ ನಾಲ್ಕು ಚಪ್ಪಡಿಗಳನ್ನು ನಿಲ್ಲಿಸಿ ಒಂದು ಕೊಠಡಿಯಂತೆ ಈ ಡಾಲ್‌ಮೆನ್‌ಗಳನ್ನು ರಚಿಸಲಾಗಿದೆ. ಇವುಗಳ ಮೇಲೆ ಒಂದು ಅಥವಾ ಎರಡು ಚಪ್ಪಡಿಗಳ ಮುಚ್ಚಿಗೆಯಿದ್ದು, ಅವು ಒಂದು ವಾಸದ ಮನೆಯಾಗಿದ್ದರಬಹುದೇ ಎಂಬ ಭ್ರಮೆಯನ್ನು ಹುಟ್ಟಿಸುತ್ತವೆ. ನೇರ ನಿಲ್ಲಿಸಿದ ಒಂದು ಚಪ್ಪಡಿಯಲ್ಲಿ ವೃತ್ತಾಕಾರದ ಕಿಟಕಿಯಂಥ ಒಂದು ತೆರಪು ಇರುತ್ತದೆ. ಕೆಲವೊಂದು ಕಡೆ ಈ ತೆರಪು ಪೂರ್ವಕ್ಕೆ, ಕೆಲವೊಂದರಲ್ಲಿ ಉತ್ತರಕ್ಕೆ ಇರುತ್ತದೆ. ಈ ಕಲ್ಲು ಮನೆಯ ನೆಲಕ್ಕೂ ಒಂದು ಚಪ್ಪಡಿ ಹಾಸಿದ್ದಾರೆ. ಕಲ್ಲುಗೋರಿಗಳಲ್ಲಿ ಮೃತನ ಮೂಳೆಗಳು ಮತ್ತು ಅವನು ಜೀವಂತವಿದ್ದಾಗ ದಿನನಿತ್ಯ ಬಳಸುತ್ತಿದ್ದ ವಸ್ತುಗಳನ್ನು ಇಡುತ್ತಿದ್ದರು. ಮೃತನಿಗೆ ಅವನ ಬಂಧುಗಳು ಕಾಲಕಾಲಕ್ಕೆ ಪೂಜೆ ಅಥವಾ ಗೌರವವನ್ನು ಈ ತೆರಪಿನಿಂದ ಸಲ್ಲಿಸುತ್ತಿದ್ದಿರಬೇಕು. ಈ ರಚನೆಯ ಸುತ್ತ ಬಂಡೆಗಳ ಬೇಲಿಯನ್ನು ರಚಿಸುತ್ತಿದ್ದರು. ಇಂಥ ವೃತ್ತಾಕಾರದ ಬೇಲಿಯಂಥ ಆವರಣಗಳು ವಿವಿಧ ಗಾತ್ರದಲ್ಲಿ ೧೪ ರಿಂದ ೪೦ ಅಡಿ (೪ರಿಂದ ೧೨ ಮೀ) ವ್ಯಾಸದ ವೃತ್ತಗಳ ಪ್ರಮಾಣದಲ್ಲಿ ಇರುವವೆಂದು[೧೮] ಹೇಳಿದ್ದಾರೆ.

ಭೂಮಿಯಲ್ಲಿ ಹೂತ 'ಸಿಸ್ಟ್' ಎಂದು ಕರೆಯಲಾಗುವ ಶವಸಂಪುಟವನ್ನು ಆಯತಾಕಾರ ದಲ್ಲಿ ಮಾಡಿ, ಅದರ ಸುತ್ತ ನೆಲದ ಮಟ್ಟದಲ್ಲಿ ಬಂಡೆಯ ಸಾಲುಗಲ್ಲುಗಳ ಆವರಣ ಮಾಡಿದ ಗೋರಿಗಳೂ ಇವೆ. ಕುಶಾಲನಗರ ಬಳಿ ಕ್ಯಾಪ್ಟನ್ ಕೋಲ್ ನಡೆಸಿದ ಉತ್ಖನನದಲ್ಲಿ ಇಂಥ ಒಂದು ಭೂಗತ ಕಲ್ಲುಗೋರಿಯು ಒಂಭತ್ತು ಅಡಿ ಉದ್ದ, ಐದೂವರೆ ಅಡಿ ಅಗಲ ಹಾಗು ನಾಲ್ಕು ಅಡಿ ಆಳವಾಗಿತ್ತು. ಇದರ ಸುತ್ತಲು ವೃತ್ತಾಕಾರದ ಆವರಣವು ೪೭ ಅಡಿಯ ವ್ಯಾಸವನ್ನು ಹೊಂದಿತ್ತು. ಇಲ್ಲಿನ ನಾಲ್ಕು ಗೋರಿಗಳಲ್ಲಿ ಕಪ್ಪು-ಕೆಂಪು ಮಡಿಕೆಗಳು, ಭಾರೀ ಗಾತ್ರದ ಮಣ್ಣಿನ ಪಾತ್ರೆಗಳು, ಮಣ್ಣಿನ ತಟ್ಟೆಗಳು, ಸುರಿಯಲು ಬಾಯಿನಳಿಕೆಗಳುಳ್ಳ ಪಾತ್ರೆಗಳು ಇದ್ದವು(ಕೆಲವು ಪಾತ್ರೆಗಳಿಗೆ ಇಂಥ ಮೂರು ಬಾಯಿನಳಿಕೆಗಳಿದ್ದು, ಈ ನಳಿಕೆಗಳು ೧೦ ರಿಂದ ೧೩ ಸೆಂ.ಮೀ. ಉದ್ದವಾಗಿವೆ. ಮಾನವರ ಮೂಳೆ ಒಂದರಲ್ಲಿ ಎರಡು ಹಲ್ಲುಗಳು ಇದ್ದ ಒಂದು ದವಡೆ ಎಲುಬು). ಕಬ್ಬಿಣದ ವಸ್ತುಗಳು, ಭತ್ತದ ಜಳ್ಳಿನಿಂದ ತುಂಬಿದ ಪಾತ್ರೆ, ಇವೆಲ್ಲ

ಇಲ್ಲಿನ ಸಮಾಧಿಗಳಲ್ಲಿ ದೊರೆತಿದ್ದು, ಒಂದು ಪಾತ್ರೆಯಲ್ಲಿ ರಾಗಿಯ ಕಾಳುಗಳು ದೊರೆತಿವೆ. ಕಾವೇರಿಯ ಬಲದಂಡೆಯ ಕೊಪ್ಪ ಗ್ರಾಮದಲ್ಲಿ ಒಂದು ಕಿ.ಮಿ.ಗೂ ದೂರದ ಪ್ರವೇಶವನ್ನು ವ್ಯಾಪಿಸಿ ೫೦೦ ಸ್ಮಾರಕ ಶಿಲಾವೃತ್ತಗಳನ್ನು ಗುರುತಿಸಿದವರು ಡಾ. ಕೆ.ಕೆ. ಸುಬ್ಬಯ್ಯ. ಈಗ ಗಿಡಗಂಟಿಗಳು ಬೆಳೆದು ಈ ಗೋರಿಗಳು ಕಾಣದಂತೆ ಆಗಿದ್ದರೂ ಅವುಗಳಲ್ಲಿ ಕೆಲವೊಂದು ಗೋರಿಗಳ ತಲೆಚಪ್ಪಡಿ ನೆಲಮಟ್ಟದಲ್ಲಿ ಕಾಣಿಸುವಂತಿದೆ ಎಂದಿದ್ದಾರೆ. ಕ್ರಿ.ಶ. ೧೮೬೯ರಲ್ಲಿ ಕ್ಯಾಪ್ಟನ್ ಕೋಲ್ ಇಲ್ಲಿನ ೧೭ ಸಮಾಧಿಗಳನ್ನು[೧೯] ತೆರೆದು ಪರಿಶೀಲಿಸಿದ್ದರು.

ಕರ್ನಾಟಕದಲ್ಲಿ ಪುರಾತತ್ವ ವಿದ್ವಾಂಸರು ಇಂದಿಗೂ ಬೃಹತ್ ಶಿಲಾಯುಗದ ಅನೇಕ ನೆಲೆಗಳನ್ನು ಕಂಡುಹಿಡಿದು ಸಂಶೋಧನೆ ನಡೆಸಿ ಲೇಖನಗಳನ್ನು ಪ್ರಕಟಿಸುತ್ತಿದ್ದಾರೆ. ವ್ಹೀಲರ್ ಹಾಗು ಎಂ.ಎಚ್.ಕೃಷ್ಣರವರು ನಡೆಸಿದ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಯ ಉತ್ಖನನಗಳಲ್ಲಿ ಹಾಗು ಪಿರಿಯಾಪಟ್ಟಣ ತಾಲ್ಲೂಕಿನ ಕೊಪ್ಪದಲ್ಲಿ ಕೆ.ಕೆ.ಸುಬ್ಬಯ್ಯ ನಡೆಸಿದ ಉತ್ಖನನ ಬೃಹತ್ ಶಿಲಾಯುಗದ ಸಂಶೋಧನೆ ಒಂದು ಹೊಸ ಆಯಾಮ ಪಡೆದುಕೊಂಡಿತು. ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಬೃಹತ್‌ಶಿಲಾಯುಗದ ಹಲವು ನೆಲೆಗಳು ಕಂಡುಬಂದಿವೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕೊಪ್ಪ ಗ್ರಾಮವನ್ನು ಬಿಟ್ಟರೆ ಬೇರೆ ಕಡೆ ಉತ್ಖನನಗಳು ನಡೆದಿಲ್ಲ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ನೆಲೆಗಳನ್ನು ಈ ಮುಂದೆ ವಿವರಿಸಲಾಗಿದೆ.

ಕೊಪ್ಪ

ಪಿರಿಯಾಪಟ್ಟಣ–ಕುಶಾಲನಗರ ರಾಜ್ಯ ಹೆದ್ದಾರಿ ಸಂಖ್ಯೆ ೮೮ ರಲ್ಲಿ ಕೊಪ್ಪ ಗ್ರಾಮವಿದೆ. ಇದು ಕಾವೇರಿ ನದಿ ದಂಡೆಯ ಮೇಲಿದೆ. ಅಲ್ಲದೆ ಪಿರಿಯಾಪಟ್ಟಣ ತಾಲ್ಲೂಕಿನ ಕೊನೆಯ ಮತ್ತು ಗಡಿ ಗ್ರಾಮ. ಮೈಸೂರಿನ ಪಶ್ಚಿಮಕ್ಕೆ ಸುಮಾರು ತೊಂಭತ್ತು ಕಿ.ಮೀ. ದೂರದಲ್ಲಿರುವ ಕೊಪ್ಪ ಹಾರನಹಳ್ಳಿ ಹೋಬಳಿಗೆ ಸೇರಿದೆ. ಇಲ್ಲಿ ಕಬ್ಬಿಣದ ವಿವಿಧ ಆಯುಧೋಪಕರಣ ಬಳಸುತ್ತಿದ್ದ ಜನಪದ ಸಂಸ್ಕೃತಿಯನ್ನು ಬೆಳಕಿಗೆ ತರಲಾಗಿದೆ. ಮೂರು ಕಾಲಿನ ಕೆಂಪುಬಣ್ಣದ ಜಾಡಿಗಳು, ಕಬ್ಬಿಣದ ಚಿಕ್ಕಚೂರಿ, ಖಡ್ಗ, ಬಾಣದ ಮೊನೆ, ಕೊಡಲಿ, ಮೊಳೆ, ಚಿಮಟಿಗೆ ಮುಂತಾದವು ಸಿಕ್ಕಿವೆ. ಇಲ್ಲಿ ಪತ್ತೆಯಾಗಿರುವ ಅವಶೇಷಗಳಲ್ಲಿ ನವಶಿಲಾಯುಗದ ಕೊಡಲಿ, ಪುಟ್ಟಪುಟ್ಟ ಅಗೇಟ್–ಸ್ಟಿಯಟೈಟ್, ಕಾರ್ನೆಲಿಯನ್ ಮಣಿಗಳು ಹಾಗು ಮಾನವನ ಅಸ್ಥಿಪಂಜರದ ಭಾಗಗಳು ಗಮನಾರ್ಹವಾದವು.[೨೦] ಬಹುಬಗೆಯ ಮಡಿಕೆ ಕುಡಿಕೆ ಬಳಸುತ್ತಿದ್ದು, ಕಪ್ಪು–ಕೆಂಪುಬಣ್ಣದ ಮಡಕೆ, ವಿವಿಧ ಆಕಾರದ ಬಟ್ಟಲು, ತಪ್ಪಲೆ, ಕೊಡ, ಉಂಗುರಾಕಾರದ ಅಡ್ಡಣಿಗೆ, ಬಾನಿ ಆ ಕಾಲದ ಜೀವನಶೈಲಿಯನ್ನು ಪ್ರತಿಬಿಂಬಿಸುವಂತವು. ಶಿಲಾವರ್ತುಲ, ಶಿಲಾತೊಟ್ಟಿಗಳಲ್ಲಿ ಅವಳಿಜವಳಿ ತೊಟ್ಟಿಗಳು ಪ್ರಮುಖವಾಗಿವೆ.


ಈ ಸ್ಥಳದಲ್ಲಿ ಕ್ರಿ.ಶ.೧೯೭೬-೭೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಎ.ವಿ.ನರಸಿಂಹಮೂರ್ತಿ ಮತ್ತು ಕೆ.ಕೆ.ಸುಬ್ಬಯ್ಯನವರ ನಿರ್ದೇಶನದಲ್ಲಿ ಉತ್ಖನನ ನಡೆಸಲಾಗಿದೆ. ಈ ನೆಲೆಯು ಕಾವೇರಿ ನದಿಯ ಬಲದಂಡೆಯ ಮೇಲಿದ್ದು ಬೃಹತ್‌ಶಿಲಾಯುಗದ ಸಂಸ್ಕೃತಿಗೆ ಸೇರಿದ್ದಾಗಿದೆ. ನೆಲೆಯು ಮೈಸೂರು ಮತ್ತು ಕೊಡಗು ಜಿಲ್ಲೆಯ ಗಡಿಭಾಗದಲ್ಲಿದೆ. ಇಲ್ಲಿ ಬಹಳ ಮುಖ್ಯವಾದಂತಹ ಬೃಹತ್‌ಶಿಲಾಸಮಾಧಿಗಳು ದೊರೆತಿವೆ. ಎರಡು ಶವಕೋಣೆಗಳುಳ್ಳ ಡಾಲ್ಮೆನ್‌ಗಳನ್ನು ಶೋಧಿಸಲಾಗಿದೆ. ಅದರಲ್ಲಿ ಒಂದು ದೊಡ್ಡ ಶವಕೋಣೆಯು ನಾಲ್ಕು ಭಾಗಗಳಾಗಿ ದೊರೆತಿದ್ದು, ಈ ನಾಲ್ಕರಲ್ಲಿ ಎರಡು ಶವಕೋಣೆಗಳು ಕೇಂದ್ರಿಯ ಶವಕೋಣೆಗಳಾಗಿವೆ. ಈಶಾನ್ಯ ಭಾಗದ ಶವಕೋಣೆಯಲ್ಲಿ ಎರಡು ಕಂಡಿಗಳಿವೆ. ಇದರಲ್ಲಿ ಪ್ರತಿ ಶವಕೋಣೆಗೂ ಮುಖಮಾಡಿರುವ ಕಂಡಿಗಳಿದ್ದು, ಅದರೊಂದಿಗೆ ಮಡಕೆಗಳು ಮತ್ತು ಕಬ್ಬಿಣದ ಆಯುಧಗಳೂ ಕಂಡುಬಂದಿವೆ. ಇದಲ್ಲದೆ ಉತ್ಖನನ ನೆಲೆಯನ್ನು ಶೋಧಿಸಲಾಗಿದ್ದು, ಇದರಲ್ಲಿ ಮತ್ತೆ ಎರಡು ಕೋಣೆಗಳುಳ್ಳ ಗೋಪುರ ಸಮಾಧಿ ಕಂಡುಬಂದಿದೆ. ಆದರೆ ಇಲ್ಲಿನ ವಿಶೇಷವೆಂದರೆ ಕೇಂದ್ರಿಯ ಶವಕೋಣೆಯು ಎರಡು ಭಾಗಗಳಾಗಿ ವಿಭಜಿಸಲಾಗಿದ್ದು, ಈ ಎರಡು ಕೋಣೆಗಳು ಇತರೆ ನಾಲ್ಕು ಶವಕೋಣೆಗಳ ಮಟ್ಟಕ್ಕಿಂತ ಕೆಳಗೆ ಕಂಡುಬಂದಿವೆ. ಇದನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ ಈ ಆರ್ಥೋಸ್ಟ್ಯಾಟ್ ರೀತಿಯದು. ಇದು ಕೇಂದ್ರಿಯ ಶವಕೋಣೆಯ ಮೇಲೆ ಕಂಡುಬಂದಿದೆ. ಮತ್ತು ಇದರ ಎತ್ತರವು ಕೇವಲ ಡಾಲ್ಮೆನ್ ಅರ್ಧದಷ್ಟಿದೆ. ಅಲ್ಲದೆ ಡಾಲ್ಮೆನ್ ಶವಕೋಣೆಯಲ್ಲಿ ಸ್ವಸ್ತಿಕ್ ಆಕೃತಿ ಹೊಂದಿರುವ ದುಂಡುಕಲ್ಲು ವೃತ್ತಗಳು ಇನ್ನಿತರೆ ಅವಶೇಷಗಳು ಕಂಡುಬಂದಿವೆ.[೨೧]

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಉತ್ಖನನಗಳು ಭೂಗರ್ಭದಿಂದ ಹೊರಗೆಡವಿದಂತೆ ಬೃಹತ್ ಶಿಲಾಗೋರಿ ಸಂಸ್ಕೃತಿಯ ಜನಪದರು ಹಲವು ಅಲಂಕಾರ ಸಾಧನಗಳನ್ನು ಬಳಸುತ್ತಿದ್ದರು. ಪೋಣಿಸಿದ ಸುಂದರ ಮಣಿಸರಗಳನ್ನು ಇಲ್ಲಿ ಹೆಸರಿಸಬಹುದು. ಕ್ರಿ.ಪೂ. ೬೦೦ ರಿಂದ ಕ್ರಿ.ಶ.ಒಂದನೆಯ ಶತಮಾನದಲ್ಲಿದ್ದ ಈ ಬೃಹತ್‌ಶಿಲಾಯುಗ ಸಂಸ್ಕೃತಿ ಅನಂತರದ ಸಂಸ್ಕೃತಿಗೆ ಬುನಾದಿಯಾಗಿದೆ.[೨೨] ತಾಲ್ಲೂಕಿನ ಬೆಣಗಾಲು ಗ್ರಾಮವು ಕಾವೇರಿ ನದಿಯ ಬಲದಂಡೆಯ ಮೇಲೆ ಪಿರಿಯಾಪಟ್ಟಣಕ್ಕೆ ಒಂಭತ್ತು ಮೈಲಿ ದೂರದಲ್ಲಿದೆ. ಇಲ್ಲಿ ಸುಮಾರು ೧೫೦ಕ್ಕೂ ಹೆಚ್ಚು ಕಲ್ಗೋರಿಗಳು ಗೋಚರಿಸಿವೆ. ಅದನ್ನು ಸ್ಥಳೀಯರು ಪಾಂಡವರ ಮನೆ ಎಂದು ಕರೆಯುತ್ತಾರೆ. ಇವು ಮೂರು ಸಾವಿರ ವರ್ಷಗಳಷ್ಟು ಹಿಂದಿನ ಬೃಹತ್‌ಶಿಲಾಸಂಸ್ಕೃತಿಯ ಮುಖ್ಯ ನೆಲೆಗಳೆಂದು ಎ.ವಿ. ನರಸಿಂಹಮೂರ್ತಿಯವರ ಅಭಿಪ್ರಾಯ.

ವೃತ್ತಾಕಾರದ ಉಂಡೆಕಲ್ಲುಗಳ ಜೋಡಣೆ, ೨೦ ಅಡಿ ಅಗಲ, ಆಳ ೫ ಅಡಿ, ಮತ್ತೆ ಕೆಲವು ೧೧ ಅಡಿ ವ್ಯಾಸ, ೬ ಅಡಿ ಆಳವನ್ನು ಹೊಂದಿರುವ ಹಾಗು ಕ್ಯಾಪ್‌ಸ್ಟೋನ್ (ಮೇಲೆ

ಮುಚ್ಚುವ ಕಲ್ಲಿನ ಹಲಗೆ ಇರುವ ಕಲ್ಲಿನ ಶವಪೆಟ್ಟಿಗೆ) ಇರುವ ಈ ಕಲ್ಗೋರಿ ಸಮಾಧಿ ಸಂಸ್ಕೃತಿಯ ಜನರು ದಕ್ಷಿಣ ಭಾರತಕ್ಕೆ ಮೊಟ್ಟಮೊದಲು ಕಬ್ಬಿಣದ ಬಳಕೆಯನ್ನು ಪರಿಚಯಿಸಿದರು. ಈ ಶವಪೆಟ್ಟಿಗೆಯಲ್ಲಿ ಮೃತರ ಮೂಳೆ ಹಾಗು ಅವರು ಬಳಸುತ್ತಿದ್ದ ಆಹಾರ ಮತ್ತು ನೀರು ತುಂಬಿದ ಮಡಿಕೆ, ಕುಡಿಕೆ, ಮಣೆ, ಕಬ್ಬಿಣದ ಆಯುಧ, ರಾಗಿಹೊಟ್ಟು ಇತ್ಯಾದಿ ಕಂಡುಬಂದಿವೆ. ಆದ್ದರಿಂದ ಪ್ರಾಗೈತಿಹಾಸಿಕ ಕಾಲದಲ್ಲಿನ ಜನರು ಶವಸಂಸ್ಕಾರ ಮಾಡುತ್ತಿದ್ದ ಪದ್ಧತಿ ತಿಳಿದುಬರುತ್ತದೆ. ಎರಡು ಶವಪೆಟ್ಟಿಗೆಯನ್ನು ಬಿಚ್ಚಿರುವುದು ಗಮನಾರ್ಹ. ವಿಶೇಷತೆಯೆಂದರೆ ಸ್ಥಳೀಕರು ಇವುಗಳನ್ನು ನೀರು ಸಂಗ್ರಹ ತೊಟ್ಟಿಯಾಗಿ ಬಳಸಿದ್ದಾರೆ. ಅದು ಆಯತಾಕಾರವಾಗಿದ್ದು ಪೋರ್ಟ್‌ಹೋಲ್ (ಸಮಾಧಿಯೊಳಗೆ ಆಹಾರ ಪದಾರ್ಥಗಳನ್ನು ಇಡಲು ಮಾಡಿರುವ ಸಣ್ಣ ಕಿಂಡಿ) ಹೊಂದಿದೆ. ನಾಲ್ಕು ಕಡೆಯೂ ಗ್ರಾನೈಟ್ ಶಿಲೆಯ ಹಲಗೆ ಜೋಡಿಸಿದ್ದು ಮೂರು ಅಡಿ ಅಗಲವಿದೆ. ತಳಭಾಗದಲ್ಲಿ ಹಾಸುಗಲ್ಲು ಇದ್ದು ಮೇಲ್ಭಾಗ ಮುಚ್ಚಲು ಒಂದು ಕಲ್ಲಿನ ಹಲಗೆ, ಹೀಗೆ ಎಲ್ಲವೂ ಸೇರಿ ಒಂದು ಪೆಟ್ಟಿಗೆ ಆಗಿದೆ. ಇದನ್ನೇ ಬೃಹತ್ ಶಿಲಾ ಶವಪೆಟ್ಟಿಗೆ ಎಂದು ಕರೆಯುತ್ತಾರೆ.

ಎರಡನೆಯ ಬಾರಿಗೆ ಕ್ರಿ.ಶ. ೧೯೮೧–೮೨ ರಲ್ಲಿ ಡಾ.ಕೆ.ಕೆ. ಸುಬ್ಬಯ್ಯನವರ ನಿರ್ದೇಶನದಲ್ಲಿ ಕಾವೇರಿನದಿಯ ಬಲದಂಡೆಯಲ್ಲಿರುವ ಕೊಪ್ಪ ಗ್ರಾಮದ ಆಗ್ನೇಯ ದಿಕ್ಕಿನಲ್ಲಿ ಬೃಹತ್ ಶಿಲಾಸಮಾಧಿಯ ಉತ್ಖನನ ನಡೆಯಿತು. ಈ ವೇಳೆಯಲ್ಲಿಯು ಸಹ ಮಡಕೆ, ಕುಡಿಕೆ, ಕಬ್ಬಿಣದ ಆಯುಧ, ಕತ್ತಿ, ಭರ್ಜಿ, ಮಣಿಗಳು, ರಾಗಿ ಮತ್ತು ಭತ್ತದ ಹೊಟ್ಟು ದೊರೆತಿವೆ.[೨೩] ಇಲ್ಲಿನ ಶಿಲಾಕೋಣೆಗಳನ್ನು ನಿರ್ಮಿಸುವಾಗ ಕಲ್ಲಿನ ಚಪ್ಪಡಿಗಳನ್ನು(ಆರ್ಥೋಸ್ಟ್ಯಾಟ್ಸ್) ಕೋಣೆಯೊಳಗೆ ಬೀಳದಂತೆ ಒಂದನ್ನು ಮತ್ತೊಂದು ತಡೆದು ನಿಲ್ಲಿಸುವಂತೆ ಗಾರೆ ಹಾಗು ಸಿಮೆಂಟನ್ನು ಬಳಸದೆ ಸ್ವಸ್ತಿಕ್ ಮಾದರಿಯಲ್ಲಿ ನಿರ್ಮಿಸಿರುವುದಾಗಿದೆ.



ಶಿಲಾತೊಟ್ಟಿಯ ನಕ್ಷೆ

ಇಂಥ ತೊಟ್ಟಿಗಳ ಸುತ್ತಲೂ, ಶಿಲಾವೃತ್ತಗಳನ್ನು ನಿರ್ಮಿಸಿ ಮಧ್ಯದಲ್ಲಿ ಶವಸಂಸ್ಕಾರ ಮಾಡುತ್ತಿದ್ದರು. ವಿವಿಧ ರೀತಿಯ ಶಿಲಾ ತೊಟ್ಟಿ ಅಥವಾ ಶಿಲಾ ಕೋಣೆಗಳನ್ನು ನಿರ್ಮಿಸುವುದು, ಕೆಲವು ಸಮಾಧಿಗಳ ಮೇಲೆ ನಿಲ್ಲಿಸಲು ಕಲ್ಲುಗಳನ್ನು ಮನುಷ್ಯನ ಆಕೃತಿಯ ಹಾಗೆ ತಯಾರಿಸಿ

ಅಥವಾ ಕಲ್ಲನ್ನು ಕತ್ತರಿಸಿ ನಿಲ್ಲಿಸಿರುವುದು ಈ ಸಂಸ್ಕೃತಿಯ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಉದಾಹರಣೆಯಾಗಿದೆ.[೨೪]

ಹೆಗ್ಗಡೆಹಳ್ಳಿ

ಹೆಗ್ಗಡೆಹಳ್ಳಿ ಉತ್ಖನನ ನೆಲೆಯು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು ಕುಶಾಲನಗರ ಹೋಬಳಿಯ ಕೂಡಿಗೆ ಸಮೀಪ ಕಾವೇರಿ ನದಿಗೆ ಹೊಂದಿಕೊಂಡಂತಿರುವ ಜೇನುಕಲ್ಲು ಬೆಟ್ಟದ ಭೂಪ್ರದೇಶದಲ್ಲಿದೆ. ಈ ನೆಲೆಯು ಕುಶಾಲನಗರದಿಂದ ಏಳು ಕಿ.ಮೀ. ದೂರದಲ್ಲಿರುವ ಸದ್ಗುರು ಅಪ್ಪಯ್ಯಸ್ವಾಮಿ ಪ್ರೌಢಶಾಲೆಯ ಪಕ್ಕದಲ್ಲಿದೆ. ಇದರ ಕಾಲಮಾನವು ಸರಿ ಸುಮಾರು ಕ್ರಿ.ಪೂ. ೧೨೦೦ ಮತ್ತು ಕ್ರಿ.ಶ.೨೦೦ ನಡುವಿನ ಕಾಲವೆಂದು ತಿಳಿದುಬಂದಿದೆ. ಮೊಗ್ಲಿಂಗ್‌ರವರು ಸೋಮವಾರಪೇಟೆ ತಾಲ್ಲೂಕಿನ ಮೋರಿ ಬೆಟ್ಟದಲ್ಲಿ ಸುಮಾರು ೫೦ ಡಾಲ್ಮೆನ್‌ಗಳನ್ನು ಅನ್ವೇಷಣೆ ಮಾಡಿದ್ದು, ಈ ಪ್ರದೇಶವು ಕೊಡಗಿನಲ್ಲೆ ಉತ್ತಮನೆಲೆಗಳ ಪ್ರದೇಶ ವೆಂದು ಹೇಳಲಾಗಿದೆ. ಈ ಬೃಹತ್ ಶಿಲಾಯುಗದ ನೆಲೆಗಳಲ್ಲಿ ಕಂಡಿಕೋಣೆಗೋರಿಗಳಿದ್ದು ಪೂರ್ವಾ ಭಿಮುಖವಾಗಿವೆ. ಅಲ್ಲದೆ ಅಪರೂಪಕ್ಕೆ ಪಶ್ಚಿಮ, ಉತ್ತರ ಮತ್ತು ದಕ್ಷಿಣದ ಕಡೆಗೂ ಕೂಡ ಬಂದಿದೆ. ಕುಶಾಲನಗರ ಸಮೀಪದ ರಾಮಸ್ವಾಮಿ ಕಣಿವೆಯಲ್ಲಿ ಕ್ಯಾಪ್ಟನ್ ಹೆಚ್.ಹೆಚ್. ಕೋಲ್‌ರವರು ಕ್ರಿ.ಶ. ೧೮೬೯ ರಲ್ಲಿ ನಾಲ್ಕು ಬೃಹತ್‌ಶಿಲಾಸಮಾಧಿಗಳನ್ನು ಉತ್ಖನನ ಮಾಡಿದ್ದಾರೆ. ಇದರಲ್ಲಿ ಒಂದು ೨.೭೦ ಮೀ ಉದ್ದವಿದ್ದು ಸ್ವಸ್ತಿಕಾಕಾರದಲ್ಲಿದೆ. ೧.೬೫ ಮೀಟರ್ ಅಗಲವಿದೆ. ೧.೨ ಮೀ ಆಳವಾಗಿದ್ದು ಈ ವೃತ್ತದೊಳಗೆ ೧೪, ೧೦ ಡಯಾ ಮೀಟರ್‌ನಷ್ಟು ಆಳದಲ್ಲಿ ಕಂಡುಬಂದಿದೆ. ಬೃಹತ್ ಶಿಲಾಸಮಾಧಿಗಳ ಉತ್ಖನನದಲ್ಲಿ ಬಟ್ಟಲುಗಳು ಉದ್ದವಾಗಿರುವ ದೊಡ್ಡ ಪಾತ್ರೆಗಳು ಲಭ್ಯವಾಗಿವೆ. ಜೊತೆಗೆ ಭತ್ತದ ಹೊಟ್ಟು ಒಂದರಲ್ಲಿ ಮತ್ತೊಂದರಲ್ಲಿ ರಾಗಿ ಅವಶೇಷಗಳು ಸಿಕ್ಕಿದ್ದು, ಅದರ ಪಕ್ಕದಲ್ಲಿ ಒಂದು ಮಾನವನ ದವಡೆಯಲ್ಲಿ ಎರಡು ಹಲ್ಲುಗಳಿರುವ ಬುರುಡೆ ಹಾಗು ಮೂಳೆಗಳು ದೊರೆತಿವೆ. ಇವುಗಳ ಜೊತೆಗೆ ಕಬ್ಬಿಣದ ಅವಶೇಷಗಳು ಸಹ ಕಂಡುಬಂದಿವೆ.[೨೫]

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಪ್ರಾಚೀನ ಜನವಸತಿ ಗ್ರಾಮಗಳಲ್ಲಿ ಮನಾಡಹಳ್ಳಿ ಒಂದು. ಪಿರಿಯಾಪಟ್ಟಣ, ಕುಶಾಲನಗರ ರಾಜ್ಯ ಹೆದ್ದಾರಿ ಸಂಖ್ಯೆ ೮೮ರಿಂದ ಪೂರ್ವಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿ ಈ ಗ್ರಾಮವಿದೆ. ಇಲ್ಲಿ ಕ್ಷೇತ್ರಕಾರ್ಯದ ವೇಳೆಯಲ್ಲಿ ಮೂರು ಬೃಹತ್‌ಶಿಲಾಸಮಾಧಿಗಳು ಕಂಡುಬಂದಿರುವವು. ಒಂದು ಬೃಹತ್ ಶಿಲಾಸಮಾಧಿ ಡಾ.ಬಿ.ಆರ್.ಅಂಬೇಡ್ಕರ್ ಕಾಲೋನಿಯ ಮುಂದೆ ಮತ್ತು ರಸ್ತೆಯ ಬಲಭಾಗದ ಗುಡ್ಡದ ಮೇಲೆ ಇರುವುದಾಗಿದೆ. ಈ ಪ್ರದೇಶದಲ್ಲಿ ಕಂಡುಬಂದಿರುವ ಬೃಹತ್‌ಶಿಲಾಸಮಾಧಿಯ ಬಗ್ಗೆ

ಅರಿವು ಸ್ಥಳೀಯ ಜನತೆಗೆ ಕಂಡುಬಂದಿರುವುದಿಲ್ಲ. ಗುಡ್ಡವನ್ನು ಸ್ಥಳೀಯರು ಕಲ್ಲುಗುಡ್ಡ ಹಾಗು ತಿಪ್ಪೇಗುಂಡಿಯೆಂಬ ಹೆಸರಿನಿಂದ ಕರೆಯುತ್ತಿರುವರು. ಸುಮಾರು ಇಪ್ಪತ್ತರಿಂದ ನಲವತ್ತು ಅಡಿ ಉದ್ದ ಮತ್ತು ಅಗಲ ವಿಸ್ತೀರ್ಣತೆಯಿಂದ ಹರಡಿಕೊಂಡಿರುವುದಾಗಿದೆ. ಈ ಬೃಹತ್ ಶಿಲಾಸಮಾಧಿಯು ವೃತ್ತ ಶಿಲಾಸಮಾಧಿಯಾಗಿರುವುದಾಗಿದೆ. ಉಂಡೆ ಅಥವಾ ವೃತ್ತಾಕಾರದ ಕಪ್ಪುಕಲ್ಲುಗಳಿಂದ ಕೂಡಿರುವುದು. ಬಂಡೆಗಲ್ಲುಗಳು, ಸಣ್ಣ ಸಣ್ಣ ಒರಟು ಕಲ್ಲುಗಳಿಂದ ಕೂಡಿದೆ. ಸತ್ತ ವ್ಯಕ್ತಿಯ ಶವಸಂಸ್ಕಾರಕ್ಕಾಗಿ ಅಲ್ಲಿಯೇ ದೊರೆಯುತ್ತಿದ್ದ ಸಣ್ಣ ಮತ್ತು ಬೃಹತ್ ಪ್ರಮಾಣದ ಕಲ್ಲುಗಳನ್ನು ಉಪಯೋಗಿಸಿ ವೃತ್ತಾಕಾರದ ಶಿಲಾಸಮಾಧಿ ನಿರ್ಮಿಸಲಾಗಿದೆ ಎಂದು ಅರಿಯಬಹುದು.

ಎರಡನೆಯ ಬೃಹತ್‌ಶಿಲಾಸಮಾಧಿ ಪಶು ಆಸ್ಪತ್ರೆಯ ಮುಂದೆ ಹಾಗು ಬೆಟ್ಟದಪುರ ರಸ್ತೆಯ ಎಡಭಾಗದಲ್ಲಿ ಹರಡಿಕೊಂಡಿದೆ. ಇದು ರಸ್ತೆಯಿಂದ ಸುಮಾರು ನಲವತ್ತು ಮೀಟರ್ ಅಂತರದಲ್ಲಿದೆ. ಈ ಸಮಾಧಿಯು ಸಹ ವೃತ್ತಾಕಾರವಾಗಿದೆ. ಇಲ್ಲಿ ಕಂಡುಬಂದಿರುವ ಸಮಾಧಿಯು ಐದು ಮೀಟರ್ ಅಂತರದಲ್ಲಿ ಹರಡಿಕೊಂಡಿದೆ. ಆದರೆ ಮೊದಲಿನ ಸಮಾಧಿಗಿಂತ ಚಿಕ್ಕದು. ಸಮಾಧಿಯ ಸುತ್ತ ಹರಡಿರುವ ಕಲ್ಲುಗಳು ಕೆಂಪು ಮಿಶ್ರಿತ ಕಪ್ಪು ಬಣ್ಣದಿಂದ ಕೂಡಿವೆ. ಈ ಸಮಾಧಿಯ ಸುತ್ತ ಸಣ್ಣ ಸಣ್ಣ ಕುರುಚಲು ಗಿಡಗಳು ಬೆಳೆದಿದ್ದು ಸ್ಥಳೀಯ ಜನರು ವ್ಯವಸಾಯದ ಉದ್ದೇಶಕ್ಕಾಗಿ ಒತ್ತುವರಿ ಮಾಡಿಕೊಂಡಿರುವರು. ಸತತವಾದ ಬಿಸಿಲು, ಮಳೆ, ಗಾಳಿಗಳ ಹೊಡೆತದಿಂದಾಗಿ ವೃತ್ತ ಸಮಾಧಿಗಳು ಅವನತಿಯ ಅಂಚಿನಲ್ಲಿವೆ.

ಮೂರನೆಯ ಬೃಹತ್‌ಶಿಲಾಸಮಾಧಿಯು ಗ್ರಾಮದ ಹೊಲದ ದಂಡೆಯ ಮೇಲೆ ಕಂಡುಬಂದಿದೆ. ಇದೊಂದು ದೊಡ್ಡ ಬೃಹತ್‌ಶಿಲಾಸಮಾಧಿಯಾಗಿದೆ. ದಾಖಲೆಯಲ್ಲಿ ಗೋಮಾಳ ಎಂಬ ಹೆಸರಿನಿಂದ ಕರೆಯುತ್ತಿರುವರು. ಏಕೆಂದರೆ ದನಕರುಗಳು ಹುಲ್ಲು ಮೇಯಲು ಹಾಗು ಪ್ರಾಣಿಗಳನ್ನು ಕಟ್ಟಿಹಾಕಿ ಮೇಯಿಸಲು ಯೋಗ್ಯವಾದ ಸ್ಥಳವಾಗಿದೆ. ಪತ್ತೆಯಾಗಿರುವ ಸಮಾಧಿ ಗಳೆಲ್ಲವು ವೃತ್ತ ಮಾದರಿಯಾಗಿರುವವು. ಇವುಗಳನ್ನು ನಿರ್ಮಿಸಲು ಕಪ್ಪು ಕೆಂಪು ಮಿಶ್ರಿತ ಕಲ್ಲುಗಳನ್ನು ಉಪಯೋಗಿಸಲಾಗಿದೆ. ಸಮಾಧಿಯ ಸುತ್ತ ಸಣ್ಣ ಪ್ರಮಾಣದಿಂದ ದೊಡ್ಡ ಪ್ರಮಾಣದವರೆಗೆ ಕಲ್ಲುಗಳನ್ನು ಗುಡ್ಡೆ ಹಾಕಿ ವೃತ್ತಾಕಾರದಲ್ಲಿ ಹರಡಿರುವುದು ಮತ್ತು ಕೆಲವು ಸಮಾಧಿಗಳಿಗೆ ಬೆಣಚು ಕಲ್ಲಿನ ಗುಡ್ಡೆಯ ಸುತ್ತಲೂ ದಪ್ಪನಾದ ಬಂಡೆಯ ಕಲ್ಲುಗಳನ್ನು ವೃತ್ತಾಕಾರವಾಗಿ ಜೋಡಿಸಿದ್ದಾರೆ. ಆದರೆ ಈ ಪರಿಸರದಲ್ಲಿ ಯಾವುದೇ ರೀತಿಯ ನಿಲುವುಗಲ್ಲುಗಳು ಕಂಡುಬರುವುದಿಲ್ಲ. ಅಧಿಕ ಪ್ರಮಾಣದಲ್ಲಿ ಕುರುಚಲು ಗಿಡಗಳು ಬೆಳೆದಿರುವವು. ಇದರಿಂದ ಪುನಾಡಹಳ್ಳಿ ಗ್ರಾಮವು ಪ್ರಾಚೀನ ಕಾಲದಲ್ಲಿಯೇ ಮಾನವ ನೆಲೆಸಿದ್ದ ಹಾಗು ಅವನ

ಸಮಾಧಿ ಸ್ಥಳವಾಗಿದೆ. ಆದರೆ ಕೆಲವು ನೆಲೆಗಳನ್ನು ವ್ಯವಸಾಯಕ್ಕೆ ಒತ್ತುವರಿ ಮಾಡಿ ಕೊಂಡಿರುವುದರಿಂದ ಕೆಲವೇ ದಿನಗಳಲ್ಲಿ ನಾಶಹೊಂದುವ ಪರಿಸ್ಥಿತಿಯಲ್ಲಿವೆ.

ಅತ್ತಿಗೋಡು

ಈ ಗ್ರಾಮವು ಬೆಟ್ಟದಪುರ-ಕಿತ್ತೂರು ರಸ್ತೆಯ ಮಧ್ಯಭಾಗದಲ್ಲಿದೆ. ಗ್ರಾಮದಿಂದ ಅರ್ಧ ಕಿ.ಮೀ.ದೂರದಲ್ಲಿ ಪಾಳುಬಿದ್ದ ಕಾಡು ಬಸವೇಶ್ವರ ದೇವಾಲಯವಿದೆ. ಈ ದೇವಾಲಯ ದಿಂದ ಕಾಲು ಕಿ.ಮೀ.ದೂರದಲ್ಲಿ ಒಂದು ಸಣ್ಣ ಪ್ರಮಾಣದ ಬೃಹತ್ ಶಿಲಾಸಮಾಧಿಗಳು ಕಂಡು ಬಂದಿವೆ. ಇವು ಗದ್ದೆಯ ಬಳಿ ಇದ್ದು, ಇದರ ಸಮೀಪದಲ್ಲಿಯೇ ಒಂದು ತೆಂಗಿನ ತೋಟ ವಿರುವುದು. ಇಲ್ಲಿ ಕಂಡುಬಂದಿರುವ ಶಿಲಾಸಮಾಧಿಗಳು ಬೃಹತ್ ಶಿಲಾಯುಗಕ್ಕೆ ಸೇರಿದವು ಗಳಾಗಿವೆ. ಸಮಾಧಿಯು ವೃತ್ತಾಕಾರವನ್ನು ಒಳಗೊಂಡಿದ್ದು, ಹರಡಿಕೊಂಡಂತೆ ಪತ್ತೆಯಾಗಿರುವವು. ಸುಮಾರು ಹತ್ತರಿಂದ ಇಪ್ಪತ್ತು ಅಡಿ ವಿಸ್ತೀರ್ಣತೆಯಿಂದ ಕೂಡಿರುವವು. ಇಲ್ಲಿ ಹರಡಿರುವ ಕಲ್ಲುಗಳು ಅಥವಾ ಸಮಾಧಿಯ ಸುತ್ತ ಇರುವ ಕಲ್ಲುಗಳು ಬೆಣಚುಕಲ್ಲುಗಳಿಂದ ಕೂಡಿರುವವು. ಇಲ್ಲಿರುವ ಒಂದು ಸಮಾಧಿಯು ವೃತ್ತಕಾರದಲ್ಲಿದ್ದು ಚಿಕ್ಕ ಪ್ರಮಾಣದಲ್ಲಿ ಇರುವುದಾಗಿದೆ. ಮತ್ತೊಂದು ಶಿಲಾಸಮಾಧಿಯು ಕಲ್ಲುಗಳನ್ನು ಹರಡಿದಂತೆ ಪತ್ತೆಯಾಗಿದೆ. ಈ ಸಮಾಧಿಗಳನ್ನು ನೋಡಿದಾಕ್ಷಣ ಪತ್ತೆ ಹಚ್ಚುವುದು ಕಷ್ಟಕರ. ಯಾಕೆಂದರೆ ಇದರ ಸುತ್ತಲು ಫಲವತ್ತಾದ ಭೂಮಿ ಇರುವುದರಿಂದ ಜನರು ಸಮಾಧಿಯನ್ನು ಸೇರಿದಂತೆ ಒತ್ತುವರಿ ಮಾಡಿಕೊಂಡು ವ್ಯವಸಾಯ ಮಾಡುತ್ತ ಬರುತ್ತಿರುವರು. ಮುಖ್ಯವಾಗಿ ಈ ಗ್ರಾಮದ ಕೆಲವು ದಲಿತ ಕುಟುಂಬಗಳು ದೈವಭಕ್ತಿಯಿಂದ ಈ ಬೃಹತ್‌ಶಿಲಾಸಮಾಧಿಯನ್ನು ಪೂಜಿಸಿಕೊಂಡು ಬರುತ್ತಿರುವರು. ಅಂದರೆ ಕೆಲವು ವಿಶೇಷ ದಿನಗಳಲ್ಲಿ ಮಾತ್ರ ಇದನ್ನು ಪೂಜಿಸುತ್ತಾರೆ. ಮಾಟಮಂತ್ರದಿಂದಾಗಿ ಆರೋಗ್ಯ ಕೆಟ್ಟಾಗ ಮನೆ ದೇವರಿಗೆ ಪೂಜೆ ಮಾಡುತ್ತಾರೆ. ಆಗ ಎಡೆಗಾಗಿ ಸಿದ್ಧಪಡಿಸಿದ್ದ ಅಡುಗೆಯನ್ನು ಮಾಟಮಂತ್ರಕ್ಕೆ ಒಳಗಾದ ವ್ಯಕ್ತಿಗೆ ನೀವಾಳಿಸಿ ದೃಷ್ಟಿ ತೆಗೆಯುತ್ತಾರೆ. ನಂತರ ಆ ಅಡುಗೆಯನ್ನು ತಂದಿಟ್ಟು ಪೂಜಿಸುವರು. ಇಂದು ಈ ಬೃಹತ್‌ಶಿಲಾಸಮಾಧಿ ಸುತ್ತ ಕುರುಚಲು ಗಿಡಗಳು ಬೆಳೆದಿದ್ದು, ಮಳೆಗಾಲದಲ್ಲಿ ಅಧಿಕ ಪ್ರಮಾಣದಲ್ಲಿ ಮಳೆಬಂದಾಗ ಮಳೆ ನೀರು ನಿಲ್ಲುವುದು. ಒಟ್ಟಿನಲ್ಲಿ ಪ್ರಾಚೀನ ಮಾನವನ ಸ್ಮಾರಕಗಳನ್ನು ಇಂದಿಗೂ ಒಂದಲ್ಲ ಒಂದು ರೀತಿಯಲ್ಲಿ ಭಯ, ಭಕ್ತಿ ಮತ್ತು ನಂಬಿಕೆಯಿಂದ ರಕ್ಷಿಸಿಕೊಂಡು ಬರುತ್ತಿದ್ದಾರೆ. ಇವರು ತಳಸಮುದಾಯದವರು ಎಂಬುದು ಗಮನಾರ್ಹ.

ಹರದೂರು

ಹರದೂರು ಗ್ರಾಮವು ಪಿರಿಯಾಪಟ್ಟಣ ತಾಲ್ಲೂಕಿನ ಒಂದು ಹಳ್ಳಿ ಮತ್ತು ಬೆಟ್ಟದಪುರ ಗ್ರಾಮ ಪಂಚಾಯಿತಿಗೆ ಒಳಪಟ್ಟ ಗ್ರಾಮ. ಈ ಗ್ರಾಮದಲ್ಲಿ ಮೂರು ಬೃಹತ್‌ಶಿಲಾಯುಗದ

ಸಮಾಧಿಗಳು ಕ್ಷೇತ್ರಕಾರ್ಯದ ವೇಳೆಯಲ್ಲಿ ಪತ್ತೆಯಾಗಿರುವವು. ಇವುಗಳು ಗ್ರಾಮದಿಂದ ಅನಿವಾಳು ರಸ್ತೆಯ ಎಡಭಾಗ ಅಥವಾ ಹರದೂರು ಗೇಟ್ ಸಮೀಪದಲ್ಲಿವೆ. ಎರಡು ಬೃಹತ್‌ಶಿಲಾಸಮಾಧಿಗಳು ರಸ್ತೆಯ ಸಮೀಪದಲ್ಲಿದ್ದು ಬೇಲಿಯ ಹತ್ತಿರದಲ್ಲಿವೆ. ಮತ್ತೊಂದು ಗ್ರಾಮದ ಪ್ರವೇಶಮಾರ್ಗದಲ್ಲಿ ಇರುವ ಕೆರೆಯ ಬಳಿ ಇದೆ. ಇದರಿಂದ ಇತಿಹಾಸ ಕಾಲಕ್ಕಿಂತಲೂ ಪ್ರಾಚೀನ ಬೃಹತ್‌ಶಿಲಾಯುಗದ ಚರಿತ್ರೆಯನ್ನು ಈ ಗ್ರಾಮ ಒಳಗೊಂಡಿದೆ. ಗ್ರಾಮದ ಕೆರೆಯ ಬಳಿ ಪತ್ತೆಯಾಗಿರುವ ಬೃಹತ್ ಶಿಲಾಸಮಾಧಿ ವೃತ್ತಾಕಾರವಾಗಿದ್ದು ಸಣ್ಣ ಮತ್ತು ದೊಡ್ಡಕಲ್ಲುಗಳಿಂದ ಕೂಡಿದೆ. ಸಮಾಧಿಯು ಸುಮಾರು ಹದಿನೈದರಿಂದ ಮೂವತ್ತು ಅಡಿ ವಿಸ್ತೀರ್ಣತೆಯಿಂದ ಹರಡಿಕೊಂಡಿದೆ. ಸಮಾಧಿಗೆ ಉಪಯೋಗಿಸಿರುವ ಕಲ್ಲುಗಳು ಬೆಣಚುಕಲ್ಲುಗಳಾಗಿದ್ದು ಉಂಡೆಯಾಕಾರದವು. ಮಳೆಗಾಲದಲ್ಲಿ ಮಳೆನೀರು ಎತ್ತರವಾದ ಪ್ರದೇಶದಿಂದ ಹರಿದುಬಂದು ತಗ್ಗಾದ ಈ ಕೆರೆಯಲ್ಲಿ ಶೇಖರಣೆಯಾಗುವುದು. ಇಂತಹ ವೇಳೆಯಲ್ಲಿ ಬೃಹತ್ ಶಿಲಾಸಮಾಧಿ ನೀರಿನಿಂದ ಮುಳುಗುತ್ತದೆ. ಈ ರೀತಿಯ ನಿರಂತರ ಪ್ರಕ್ರಿಯೆಯಿಂದ ಹಾಗು ಬಿಸಿಲು ಗಾಳಿಯಿಂದ ಬೃಹತ್ ಶಿಲಾಸಮಾಧಿಯು ಹಾಳಾಗುವ ಹಂತದಲ್ಲಿದೆ.

ಮತ್ತೆರಡು ಬೃಹತ್ ಶಿಲಾಸಮಾಧಿಗಳು ಹರದೂರಿನಿಂದ ಅನಿವಾಳು ರಸ್ತೆಯ ಎಡಭಾಗದ ಅಥವಾ ಹರದೂರು ಗೇಟ್ ಸಮೀಪದಲ್ಲಿವೆ. ಇಲ್ಲಿ ಪತ್ತೆಯಾಗಿರುವ ಎರಡು ಸಮಾಧಿಗಳು ರಸ್ತೆಯ ಸಮೀಪದಲ್ಲಿವೆ. ಈ ಬೃಹತ್‌ಶಿಲಾಸಮಾಧಿಯ ಸಮೀಪ ಬೇಲಿಗೆ ಹೊಂದಿಕೊಂಡಂತೆ ಬಿದಿರುಮೇಳೆ ಬೆಳೆದು ಹರಡಿಕೊಂಡಿದೆ. ಇಲ್ಲಿರುವ ಸಮಾಧಿಗಳು ಆಕಾರದಲ್ಲಿ ಚಿಕ್ಕದರಿಂದ ಹಿಡಿದು ದೊಡ್ಡ ಪ್ರಮಾಣದವರೆಗಿವೆ. ಇವುಗಳ ಉತ್ತರ ದಿಕ್ಕಿನಲ್ಲಿ ಮತ್ತೊಂದು ಚಿಕ್ಕಸಮಾಧಿ ಕಂಡುಬಂದಿದೆ. ಇಲ್ಲಿ ಪತ್ತೆಯಾಗಿರುವ ಎಲ್ಲಾ ಸಮಾಧಿಗಳು ವೃತ್ತಾಕಾರ ದಲ್ಲಿವೆ. ಸಮಾಧಿಯ ಸುತ್ತ ಚಿಕ್ಕ ಕಲ್ಲುಗಳಿಂದ ದೊಡ್ಡ ಉಂಡೆ ಕಲ್ಲು ಮತ್ತು ಬೆಣಚುಕಲ್ಲುಗಳಿಂದ ಸಮಾಧಿಗಳನ್ನು ನಿರ್ಮಿಸಲು ಉಪಯೋಗಿಸಿರುವರು. ಈ ಪ್ರದೇಶವು ಬೇಲಿಗೆ ಹೊಂದಿ ಕೊಂಡಂತೆ ಹೊಲದ ಪಾಳುಭೂಮಿಯಾಗಿದೆ. ಈ ಸಮಾಧಿ ಪ್ರಕೃತಿಯ ನಿರಂತರ ಬಿಸಿಲು ಹಾಗು ಮಳೆಗೆ ಸಿಕ್ಕಿ ಅವನತಿಯಾಗುತ್ತಿದೆ. ಹಾಗು ಸ್ಥಳೀಯ ರೈತರು ದನಗಳನ್ನು ಕಟ್ಟಿಹಾಕಿ ಹುಲ್ಲು ಮೇಯಿಸುತ್ತ ಬರುತ್ತಿರುವರು.

ನಾಗನಹಳ್ಳಿ

ಈ ಗ್ರಾಮವು ಬೆಟ್ಟದಪುರ-ಕಿತ್ತೂರು ರಸ್ತೆಯಲ್ಲಿದೆ. ಬೆಟ್ಟದಪುರ ಗ್ರಾಮದಿಂದ ಸುಮಾರು ನಾಲ್ಕು ಕಿ.ಮೀಟರ್ ಅಂತರದಲ್ಲಿದೆ. ನಾಗನಹಳ್ಳಿ ಗ್ರಾಮದಲ್ಲಿ ಕಂಡುಬಂದಿರುವ ಬೃಹತ್ ಶಿಲಾಸಮಾಧಿಯು ರಸ್ತೆಯ ಬಲಭಾಗದಲ್ಲಿ ಪತ್ತೆಯಾಗಿದೆ. ಬೃಹತ್‌ಶಿಲಾಸಮಾಧಿಯು ಚಿಕ್ಕಗುಡ್ಡದ

ರೀತಿಯಲ್ಲಿ ಕಂಡುಬಂದಿದೆ. ಪತ್ತೆಯಾಗಿರುವ ಬೃಹತ್‌ಶಿಲಾಸಮಾಧಿಯು ಗಾತ್ರದಲ್ಲಿ ಚಿಕ್ಕದು. ಸಣ್ಣಸಣ್ಣ ಗುಂಡು ಕಲ್ಲುಗಳನ್ನು ಉಪಯೋಗಿಸಿ ಬೃಹತ್ ಶಿಲಾಸಮಾಧಿಯನ್ನು ನಿರ್ಮಿಸಿರುವುದು ಕಂಡುಬಂದಿದೆ. ಸ್ಥಳೀಯ ರೈತರು ಭೂಮಿಯನ್ನು ಉಳುಮೆ ಮಾಡುವಾಗ ಬೇಡವಾದ ಹುಲ್ಲು ಮತ್ತು ಕುರುಚಲುಗಿಡಗಳನ್ನು ಗುಡ್ಡದ ಬಳಿ ತಂದುಹಾಕಿರುತ್ತಾರೆ. ಇದರಿಂದ ಈ ರೀತಿಯಲ್ಲಿ ಬೇಡವಾದ ವಸ್ತುಗಳನ್ನು ತಂದು ಬೃಹತ್ ಶಿಲಾಸಮಾಧಿಯ ಮೇಲೆ ಹಾಕುವುದರಿಂದ ಅವನತಿಯ ಅಂಚಿನಲ್ಲಿದೆ. ಶಿಲಾಸಮಾಧಿಯು ಐದರಿಂದ ಎಂಟು ಅಡಿ ವಿಸ್ತೀರ್ಣತೆಯಿಂದ ಹರಡಿಕೊಂಡಿದೆ. ಸಮಾಧಿಯನ್ನು ನಿರ್ಮಿಸಲು ಸ್ಥಳೀಯ ಬೆಣಚು ಕಲ್ಲುಗಳನ್ನು ಉಪಯೋಗಿ ಸಿರುವರು.

ನಿಲವಾಡಿ

ಈ ಗ್ರಾಮವು ಪ್ರಾಚೀನ ಕಾಲದಲ್ಲಿ ಮಾನವನ ನೆಲೆಯಾಗಿತ್ತು. ಒಂದು ಬೃಹತ್‌ಶಿಲಾಸಮಾಧಿ ಕ್ಷೇತ್ರಕಾರ್ಯದ ವೇಳೆಯಲ್ಲಿ ಪತ್ತೆಯಾಗಿರುವುದು. ಆವರ್ತಿ–ಬೆಟ್ಟದಪುರ ರಸ್ತೆಯ ಮಧ್ಯದಲ್ಲಿ ಈ ಗ್ರಾಮವಿದೆ. ಗ್ರಾಮದಿಂದ ಅರ್ಧ ಕಿ.ಮೀ. ದೂರದಲ್ಲಿ ಚಿಕ್ಕನೇರಳೆ ರಸ್ತೆಯ ಬಲಭಾಗದಲ್ಲಿರುವ ಬೃಹತ್ ಶಿಲಾಸಮಾಧಿಯ ಸಮೀಪ ಐನೂರು ಮೀಟರ್ ಅಂತರದಲ್ಲಿ ಕೆರೆ ಇದೆ. ಈ ಬೃಹತ್ ಶಿಲಾಸಮಾಧಿಯು ಸುಮಾರು ಐದರಿಂದ ಎಂಟು ಅಡಿ ವಿಸ್ತೀರ್ಣತೆಯಿಂದ ಹರಡಿ ಕೊಂಡಿದೆ. ಈ ಬೃಹತ್‌ಶಿಲಾಸಮಾಧಿಯನ್ನು ನಿರ್ಮಿಸಲು ಸ್ಥಳೀಯವಾಗಿ ದೊರೆಯುವ ಕಪ್ಪುಕಲ್ಲುಗಳನ್ನು ಉಪಯೋಗಿಸಿರುವರು. ಇವುಗಳು ವೃತ್ತಮಾದರಿಯ ಸಮಾಧಿಗಳಾಗಿದ್ದು, ಕುರುಚಲುಗಿಡಗಳು ಅಧಿಕ ಪ್ರಮಾಣದಲ್ಲಿ ಬೆಳೆದು ಹರಡಿಕೊಂಡಿವೆ. ಜೊತೆಗೆ ಈ ಭಾಗವು ಹಳ್ಳವಾಗಿದ್ದು, ನೀರು ಬಂದು ಒಂದೆಡೆ ಸಂಗ್ರಹವಾತ್ತದೆ. ಒಟ್ಟಿನಲ್ಲಿ ಇದೊಂದು ಬೃಹತ್ ಶಿಲಾಯುಗದ ನೆಲೆಯಾಗಿದ್ದು, ಇಲ್ಲಿರುವ ಕಲ್ಲುಗಳನ್ನು ಸ್ಥಳೀಯರು ಕಿತ್ತು ಬೇರೆಡೆಗೆ ವರ್ಗಾಯಿ ಸಿರುವ ಸಾಧ್ಯತೆಗಳಿವೆ. ಈ ಗ್ರಾಮವು ಐತಿಹಾಸಿಕವಾಗಿ ಚಂಗಾಳ್ವರ ಮನೆತನದ ಆಳ್ವಿಕೆಗೆ ಒಳಗಾಗಿದ್ದು, ಬೆಟ್ಟದಪುರದ ಮಲ್ಲಿಕಾರ್ಜುನ ದೇವರಿಗೆ ಈ ಗ್ರಾಮವನ್ನು ದಾನವನ್ನಾಗಿ ನೀಡಲಾಗಿತ್ತೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಬೃಹತ್‌ಶಿಲಾ ಸಮಾಧಿ ಸ್ಥಳವನ್ನು ರೈತರು ಒತ್ತುವರಿ ಮಾಡಿಕೊಂಡಿರು ವುದರಿಂದ ಸ್ಪಷ್ಟವಾಗಿ ನೆಲೆಯನ್ನು ಗುರುತಿಸುವುದು ಸ್ವಲ್ಪ ಕಷ್ಟಕರ.

ಆಯಿತನಹಳ್ಳಿ

ಪಿರಿಯಾಪಟ್ಟಣದಿಂದ ಸುಮಾರು ಹತ್ತು ಕಿಲೋಮೀಟರ್ ಅಂತರದಲ್ಲಿ ಈ ಗ್ರಾಮವಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಒಟ್ಟು ಐದು ಬೃಹತ್‌ಶಿಲಾಸಮಾಧಿಗಳು ಪತ್ತೆಯಾಗಿವೆ. ಈ

ಬೃಹತ್‌ಶಿಲಾಸಮಾಧಿಗಳು ಗ್ರಾಮದಿಂದ ಅರ್ಧ ಕಿಲೋಮೀಟರ್ ದೂರದಲ್ಲಿರುವ ಪೂರ್ವದಿಕ್ಕಿನ ಹೊಲದ ಬಳಿ ಕಂಡುಬಂದಿವೆ. ಈ ಸಮಾಧಿಗಳು ಹೊಲದ ಮಧ್ಯದಲ್ಲಿರುವ ಈಶ್ವರ ದೇವಾಲಯದ ಆಸುಪಾಸಿನಲ್ಲಿವೆ. ಈಶ್ವರ ದೇವಾಲಯದ ಎಡಬದಿಯಲ್ಲಿ ಆಯತಾಕಾರದ ಕಲ್ಲುಚಪ್ಪಡಿಯ ಎರಡು ಬೃಹತ್‌ಶಿಲಾಸಮಾಧಿಗಳು ಮತ್ತು ಈಶ್ವರ ದೇವಾಲಯದ ಮುಂದಿನ ಭಾಗದಲ್ಲಿ ಸುಮಾರು ನೂರು ಮೀಟರ್ ಅಂತರದಲ್ಲಿ ಒಂದು ಬೃಹತ್‌ಶಿಲಾಸಮಾಧಿ ಪತ್ತೆಯಾಗಿದೆ. ಮತ್ತೆರಡು ಬೃಹತ್ ಶಿಲಾಸಮಾಧಿಗಳು ಈಶ್ವರ ದೇವಾಲಯದ ಬಲಭಾಗದಲ್ಲಿ ಕಂಡುಬಂದಿವೆ. ಈ ಎರಡು ಶಿಲಾಗೋರಿಗಳು ವೃತ್ತಾಕಾರದ ಮಾದರಿಯ ಲಕ್ಷಣ ಒಳಗೊಂಡಿವೆ.

ಈಶ್ವರ ದೇವಾಲಯದ ಎಡಭಾಗದಲ್ಲಿ ಎರಡು ಬೃಹತ್ ಶಿಲಾಗೋರಿಗಳು ಪತ್ತೆಯಾಗಿವೆ. ಇವು ಆಯತಾಕಾರದ ಅಥವಾ ಚೌಕಾಕಾರ ಮಾದರಿಯಿಂದ ಕೂಡಿವೆ. ಈ ಎರಡು ಬೃಹತ್ ಶಿಲಾಸಮಾಧಿಗಳು ಒಂದು ಸಣ್ಣ ಗುಡ್ಡದ ಮೇಲೆ ಇರುವವು. ವಿಸ್ತಾರವಾಗಿ ಹರಡಿದ ಸಮತಟ್ಟಾದ ಭೂಮಿ ಮೇಲೆ ಸಣ್ಣ ಸಣ್ಣ ಒರಟು ಕಲ್ಲುಗಳಿಂದ ಕೂಡಿದ ಗುಡ್ಡ ಸುಮಾರು ಎರಡರಿಂದ ಮೂರು ಅಡಿ ಎತ್ತರವಿದೆ. ಕುರುಚಲು ಗಿಡ ಮತ್ತು ಮುಳ್ಳುಗಿಡಗಳಿಂದ ಆವೃತ್ತ ವಾಗಿವೆ. ಈ ಗೂಡುಗಳು ಶವಸಂಸ್ಕಾರಕ್ಕಾಗಿ ಅಲ್ಲಿಯೇ ದೊರೆಯುವ ಕಲ್ಲುಗಳಿಂದ ನಿರ್ಮಿಸ ಲಾದ ಸಣ್ಣ ನಿರ್ಮಾಣಗಳು ಎಂದು ಅರಿಯಬಹುದು. ಈ ಎರಡು ಸಮಾಧಿಯ ಗೂಡು ಸುಮಾರು ನಾಲ್ಕರಿಂದ ನಾಲ್ಕುವರೆ ಅಡಿ ಕ್ರಮವಾಗಿ ಅಗಲ ಮತ್ತು ಉದ್ದ ವಿಸ್ತೀರ್ಣತೆಯಿಂದ ಕೂಡಿವೆ. ಆಯತಾಕಾರದ ನಾಲ್ಕು ಮೂಲೆಯಲ್ಲಿ ಒರಟು ಕಲ್ಲುಗಳಿಂದ ಹಿಡಿದು ದೊಡ್ಡ ಗಾತ್ರದ ಕಲ್ಲು ಚಪ್ಪಡಿಗಳನ್ನು ಇಲ್ಲಿ ಬಳಸಲಾಗಿದೆ. ಗಾರೆ ಅಥವಾ ಮಣ್ಣನ್ನು ಉಪಯೋಗಿಸದೆ ಕಟ್ಟಡದಲ್ಲಿ ಚಪ್ಪಡಿಕಲ್ಲುಗಳನ್ನು ಒಂದರ ಪಕ್ಕ ಒಂದನ್ನು ಸೇರಿಸಿ ನಿರ್ಮಿಸಲಾಗಿದೆ. ಈ ಬೃಹತ್ ಶಿಲಾಸಮಾಧಿಯ ಮೇಲೆ ಮುಚ್ಚಲು ಸ್ಥಳೀಯವಾಗಿ ದೊರೆಯುವ ಒರಟು ಕಲ್ಲನ್ನು ಉಪಯೋಗಿಸಲಾಗಿದೆ. ಈ ಎರಡು ಬೃಹತ್‌ಶಿಲಾಸಮಾಧಿಗಳು ಪೂರ್ವದಿಕ್ಕಿನಲ್ಲಿದ್ದು, ಪೂರ್ವ ಭಾಗದ ಚಪ್ಪಡಿಕಲ್ಲು ಒಂದರಲ್ಲಿ ಬಿದ್ದು ಹೋಗಿರುವುದು. ಮತ್ತೊಂದರಲ್ಲಿ ಬೀಳುವ ಹಂತದಲ್ಲಿದೆ. ಗೂಡಿನ ಬಾಯನ್ನು ಒಂದು ಅಥವಾ ಎರಡು ಒರಟಾದ ಸ್ವಾಭಾವಿಕ ಚಪ್ಪಡಿಯ ರೀತಿಯ ಕಲ್ಲಿನಿಂದ ಮುಚ್ಚಲಾಗಿದೆ. ಕೆಲವು ಸಂದರ್ಭಗಳಲ್ಲಿ ಹೊರಮುಖದಲ್ಲಿ ಸ್ವಲ್ಪ ದಪ್ಪವಾದ ಬಂಡೆಗಳನ್ನಿಟ್ಟು ಗೋಡೆಗಳಿಗೆ ಒತ್ತಾಸರೆಗಳನ್ನು ನಿರ್ಮಿಸಿರುವುದು ಉಂಟು. ಸಮಾಧಿಯ ಮೇಲೆ ಮುಚ್ಚಿರುವ ಹಾಸುಕಲ್ಲುಚಪ್ಪಡಿಗಳು ಸುಮಾರು ಎರಡರಿಂದ ಮೂರು ಇಂಚುಗಳಷ್ಟು ದಪ್ಪದಿಂದ ಕೂಡಿವೆ. ಈ ಸಮಾಧಿಯ ಸುತ್ತ ಕುರುಚಲು ಗಿಡಗಳು ಬೆಳೆದಿದ್ದು ಇದರ ಸಮೀಪದಲ್ಲಿಯೇ ಒಂದು ಸಣ್ಣ ಪ್ರಮಾಣದ ಗಿಡಮರಗಳು ಬೆಳೆಯುತ್ತಿರುವವು. ಈ ಗುಡ್ಡಕ್ಕೆ

ಸೇರಿರುವ ಮಣ್ಣು ಜಾರಿ ಹೋಗುತ್ತಿರುವುದರಿಂದ ಪ್ರಾಚೀನ ಮಾನವನ ಬೃಹತ್‌ಶಿಲಾಗೋರಿಗಳಲ್ಲಿ ಒಂದು ಮಧ್ಯಮ ಸ್ಥಿತಿಯಲ್ಲಿದ್ದು ಮತ್ತೊಂದು ಅವಸಾನದ ಅಂಚಿನಲ್ಲಿರುವುದಾಗಿದೆ.

ಈಶ್ವರ ದೇವಾಲಯದ ಮುಂದೆ ಒಂದು ಬೃಹತ್‌ಶಿಲಾಸಮಾಧಿ ಕಂಡುಬಂದಿದೆ. ಇದು ಸಮತಟ್ಟಾದ ಭೂಮಿಯ ತಳಭಾಗದಲ್ಲಿರುವುದು. ಆಯತಾಕಾರ ಅಥವಾ ಚೌಕಾಕಾರ ಮಾದರಿಯ ಲಕ್ಷಣ ಹೊಂದಿದೆ. ಈ ಸಮಾಧಿಗೆ ಬಳಸಿರುವ ಕಲ್ಲು ಒರಟಾಗಿದ್ದು ಇದರ ಮೇಲ್ಭಾಗದಲ್ಲಿ ಮುಚ್ಚಿರುವ ಶಿಲಾಚಪ್ಪಡಿ ಸುಮಾರು ನಾಲ್ಕರಿಂದ ಐದು ಇಂಚು ದಪ್ಪವಿದೆ ಹಾಗು ನಾಲ್ಕೂವರೆಯಿಂದ ಐದು ಅಡಿಗಳಷ್ಟು ಅಗಲ ಮತ್ತು ಉದ್ದನೆಯ ವಿಸ್ತೀರ್ಣತೆಯಿಂದ ಕೂಡಿರುವುದು. ಈ ಬೃಹತ್‌ಶಿಲಾಸಮಾಧಿಗೆ ಮೂರು ದಿಕ್ಕಿನಲ್ಲಿಯೂ ಕಿಂಡಿಗಳಿವೆ. ಒಟ್ಟಿನಲ್ಲಿ ಇದೊಂದು ಉತ್ತಮ ಸ್ಥಿತಿಯಲ್ಲಿದ್ದು, ಬೃಹತ್‌ಶಿಲೆಯಿಂದ ಕೂಡಿದೆ.

ಈಶ್ವರ ದೇವಾಲಯದ ಬಲಭಾಗದಲ್ಲಿ ಮತ್ತೆರೆಡು ಬೃಹತ್‌ಶಿಲಾಗೋರಿಗಳು ಪತ್ತೆಯಾಗಿವೆ. ಈ ಸಮಾಧಿಯು ವೃತ್ತಾಕಾರದಿಂದ ಕೂಡಿದ ಕಪ್ಪುಮಿಶ್ರಿತ ಕಂದುಕಲ್ಲಿನಿಂದ ಕೂಡಿರುವವು. ಒಂದು ಸಮಾಧಿಯು ದೊಡ್ಡದಾಗಿದ್ದು, ಮತ್ತೊಂದು ಆಕಾರದಲ್ಲಿ ಚಿಕ್ಕದಾಗಿದೆ. ಈ ಎರಡು ಬೃಹತ್‌ಶಿಲಾಸಮಾಧಿಗಳು ಸುಮಾರು ಹದಿನೈದರಿಂದ ಮೂವತ್ತು ಮೀಟರ್ ವಿಸ್ತೀರ್ಣತೆಯಲ್ಲಿ ಹರಡಿಕೊಂಡಿವೆ ಮತ್ತು ಈ ಸಮಾಧಿಗೆ ಸಣ್ಣ ಸಣ್ಣ ಉಂಡೆಕಲ್ಲುಗಳು ದೊಡ್ಡ ಪ್ರಮಾಣದ ಕಲ್ಲುಗಳನ್ನು ಉಪಯೋಗಿಸಿರುವುದು ಕಂಡುಬರುತ್ತದೆ. ಇಲ್ಲಿಯ ಶಿಲಾಸಮಾಧಿ ವಿಸ್ತೀರ್ಣತೆಯಿಂದ ಕೂಡಿದಾದರೂ ಇಂದು ಕೃಷಿ ಕಾರಣದಿಂದ ಕಿರಿದಾಗುತ್ತಾ ಸಾಗುತ್ತಿದೆ. ಬೆಟ್ಟದಪುರದಿಂದ ವಾಯವ್ಯ ದಿಕ್ಕಿಗೆ ಎರಡೂವರೆ ಮೈಲಿ ಪಶ್ಚಿಮಕ್ಕೆ ಸೀತೆ ಬೆಟ್ಟವಿದೆ. ಈ ಬೆಟ್ಟದ ಬಳಿ ಸಹ ಬೃಹತ್‌ಶಿಲಾಸಮಾಧಿಗಳು ಕಂಡುಬಂದಿವೆ. ಈ ಬೃಹತ್‌ಶಿಲಾನೆಲೆಯ ಬಗ್ಗೆ ಕ್ರಿ.ಶ. ೧೯೪೩ರ ಎಂ.ಎ.ಆರ್. ವರದಿಯಲ್ಲಿ ಉಲ್ಲೇಖಗೊಂಡಿದೆ. ಒಟ್ಟಿನಲ್ಲಿ ಆಯತನಹಳ್ಳಿ ಗ್ರಾಮದಲ್ಲಿ ನೂತನವಾಗಿ ಪತ್ತೆಯಾಗಿರುವ ಬೃಹತ್‌ಶಿಲಾಸಮಾಧಿಗಳಿಂದ ಇತಿಹಾಸ ಪೂರ್ವ ಕಾಲದಿಂದಲೂ ಮಾನವ ನೆಲೆಸಿರುವುದಕ್ಕೆ ಕುರುಹುಗಳು ಕಂಡುಬರುತ್ತವೆ.

ಕಂದೇಗಾಲ

ಪಿರಿಯಾಪಟ್ಟಣ ತಾಲ್ಲೂಕಿನ ಕಂದೇಗಾಲ ಒಂದು ಪ್ರಾಚೀನ ಗ್ರಾಮ. ಹಿಂದೆ ಧಾನ್ಯದ ರೂಪದಲ್ಲಿ ಕಂದಾಯ ನೀಡುತ್ತಿದ್ದ ಊರು. ಚಂಗಾಳ್ವ ಅಥವಾ ರಾಜರುಗಳ ರಾಜ್ಯಾಡಳಿತ ಅವಧಿಯಲ್ಲಿ ಕಂದಾಯ ವಸೂಲಿ ಮಾಡುತ್ತಿದ್ದ ಸ್ಥಳ. ಕಂದಾಯ+ಗಾಲ ಕಂದೇಗಾಲವಾಗಿರುವುದಾಗಿದೆ. ಈ ಗ್ರಾಮದಲ್ಲಿ ಒಂದು ದೊಡ್ಡ ಕೆರೆ ಇದೆ. ಕೆರೆಯ ಕೊನೆಯ ದಂಡೆಯಲ್ಲಿ

ಕ್ಷೇತ್ರಕಾರ್ಯದ ವೇಳೆ ಎರಡು ಬೃಹತ್‌ಶಿಲಾಸಮಾಧಿ ಕಂಡುಬಂದಿರುವವು. ಒಂದು ಉತ್ತಮ ಸ್ಥಿತಿಯಲ್ಲಿದ್ದು ಮತ್ತೊಂದು ಅವನತಿಯ ಅಂಚಿನಲ್ಲಿದೆ. ಈ ಎರಡು ಬೃಹತ್‌ಶಿಲಾಸಮಾಧಿಗಳನ್ನು ಭಕ್ತಿಯಿಂದ ದೊಡ್ಡಮ್ಮ, ಚಿಕ್ಕಮ್ಮ ಎಂದು ಗ್ರಾಮದೇವತೆಯ ಹೆಸರಿನಿಂದ ಪೂಜಿಸಿಕೊಂಡು ಬರುತ್ತಿರುವವರು. ಮೂಲತಃ ಈ ಪ್ರದೇಶದಲ್ಲಿ ಇಂದು ಕಂಡುಬಂದಿರುವ ದೇವಾಲಯಗಳು ಪ್ರಾಚೀನ ಮಾನವನ ಶಿಲಾಗೋರಿಗಳಾಗಿವೆ. ಉತ್ತಮ ಸ್ಥಿತಿಯಿಂದ ಕೂಡಿರುವ ಶಿಲಾಗೋರಿಯು ಪೂರ್ವಾಭಿಮುಖವಾಗಿದ್ದು, ಮೂರು ದಿಕ್ಕಿನಿಂದಲೂ ಶಿಲಾಚಪ್ಪಡಿಗಳನ್ನು ಒಂದರ ಪಕ್ಕ ಮತ್ತೊಂದನ್ನು ನಿಲ್ಲಿಸಲಾಗಿದೆ. ಇವುಗಳ ದಪ್ಪ ಒಂದರಿಂದ ಒಂದೂವರೆ ಇಂಚುಗಳ ಗಾತ್ರದಿಂದ ಕೂಡಿರುವವು. ಹಾಗು ನಾಲ್ಕರಿಂದ ಐದು ಅಡಿ ಅಗಲ ಮತ್ತು ಉದ್ದ ವಿಸ್ತೀರ್ಣತೆಯಿಂದ ಕೂಡಿರುವವು. ಇವುಗಳ ಮೇಲೆ ಎರಡು ಕಲ್ಲು ಚಪ್ಪಡಿಗಳನ್ನು ಮುಚ್ಚಿರುವರು. ಇವುಗಳು ಒಂದರಿಂದ ಒಂದೂವರೆ ಇಂಚು ದಪ್ಪವಾಗಿದ್ದು, ನಾಲ್ಕರಿಂದ ಐದು ಅಡಿ ಉದ್ದ ವಿಸ್ತೀರ್ಣತೆ ಯಿಂದ ಕೂಡಿದೆ. ಈ ಶಿಲಾಗೋರಿಯಲ್ಲಿ ಯಾವುದೇ ವಿಗ್ರಹಗಳು ಇರುವುದಿಲ್ಲ. ಆದರೆ ಇತ್ತೀಚೆಗೆ ಕೆಲವು ಕಲ್ಲುಗಳನ್ನು ತಂದು ಗುಡಿಯಲ್ಲಿ ಇಟ್ಟು ಅರಿಶಿನ, ಕುಂಕುಮ ಬಳಿದಿರುವರು. ಸ್ಥಳೀಯರು ಬೃಹತ್ ಶಿಲಾಸಮಾಧಿಯಲ್ಲಿ ಇದ್ದ ಗುಂಡಿಯನ್ನು ಮಣ್ಣು ಹಾಕಿ ಮುಚ್ಚಿ ಸಮತಟ್ಟಾಗಿ ಮಾಡಿರುವರು. ಪ್ರಸ್ತುತ ದಿನಗಳಲ್ಲಿ ಬೃಹತ್ ಶಿಲಾಸಮಾಧಿಯ ಗುಡಿ ಚಿಕ್ಕದಾಗಿರುವುದರಿಂದ ಇದರ ಸಮೀಪದಲ್ಲಿಯೇ ನೂತನವಾಗಿ ಸ್ವಲ್ಪ ಪ್ರಮಾಣದಲ್ಲಿ ದೊಡ್ಡದಾದ ದೇವಾಲಯ ನಿರ್ಮಿಸಿರುವರು. ಪ್ರಸ್ತುತ ದಿನಗಳಲ್ಲಿ ವಾರ್ಷಿಕವಾಗಿ ನಡೆಯುವ ಗ್ರಾಮದೇವತೆಯ ಹಬ್ಬ ಮತ್ತು ಜಾತ್ರೆ ಉತ್ಸವವನ್ನು ನಡೆಸಿಕೊಂಡು ಬರುತ್ತಿರುವರು. ಈ ಬೃಹತ್ ಶಿಲಾಸಮಾಧಿಯಲ್ಲಿ ನಡೆಯುವ ಪೂಜಾ ವಿಧಿ ವಿಧಾನಗಳನ್ನು ಉನ್ನತ ಜಾತಿವರ್ಗದವರು ಮಾತ್ರ ನಿರ್ವಹಿಸಿಕೊಂಡು ಬರುತ್ತಿರುವರು. ಆದರೆ ಪೂಜಾಕಾರ್ಯಗಳಲ್ಲಿ ದಲಿತರಿಗೆ ಅವಕಾಶ ಇರುವುದಿಲ್ಲ.

ಉತ್ತಮ ಸ್ಥಿತಿಯಿಂದ ಕೂಡಿರುವ ಬೃಹತ್‌ಶಿಲಾಸಮಾಧಿಯ ಸಮೀಪ ಸುಮಾರು ೫೦ ಅಡಿ ಅಂತರ ದೂರದಲ್ಲಿ ಮತ್ತೆರಡು ಬೃಹತ್‌ಶಿಲಾಸಮಾಧಿಗಳು ಪತ್ತೆಯಾಗಿರುವವು. ಇವುಗಳಲ್ಲಿ ಒಂದು ಉತ್ತರದಿಕ್ಕಿಗೆ ಮುಖಮಾಡಿದ್ದು ಮತ್ತೊಂದು ಪೂರ್ವ ದಿಕ್ಕಿಗೆ ಮುಖ ಮಾಡಿರುವವು. ಇವುಗಳ ಮೂರು ದಿಕ್ಕಿಗೂ ಒಂದೊಂದು ಕಲ್ಲು ಚಪ್ಪಡಿಗಳನ್ನು ಇಟ್ಟು ಭೂಮಿಯ ಒಳಗೆ ನೆಟ್ಟಿರುವರು. ಇವುಗಳನ್ನು ಸೇರಿಸಲು ಯಾವುದೇ ರೀತಿಯ ಗಾರೆ ಅಥವಾ ಸೀಮೆಂಟ್‌ನ್ನು ಉಪಯೋಗಿಸದೆ ಒಂದರ ಮೇಲೆ ಮತ್ತೊಂದನ್ನು ಇರಿಸಿರುವರು. ಸಮಾಧಿಯ ಮೇಲೆ ಮುಚ್ಚಲು ಒಂದು ಕಲ್ಲು ಚಪ್ಪಡಿಯನ್ನು ಉಪಯೋಗಿಸಿರುವರು. ಈ ಪ್ರದೇಶದಲ್ಲಿ ಕಂಡು ಬಂದಿರುವ ಕಲ್ಲು ಚಪ್ಪಡಿಗಳು ಒಂದೂವರೆಯಿಂದ ಎರಡು ಇಂಚು ದಪ್ಪದಿಂದ ಕೂಡಿವೆ

ಹಾಗು ಸುಮಾರು ೨ ರಿಂದ ೩ ಅಡಿ ಅಗಲ ಮತ್ತು ವಿಸ್ತೀರ್ಣತೆಯಿಂದ ಕೂಡಿರುವವು. ಈ ಬೃಹತ್ ಶಿಲಾಸಮಾಧಿಗಳಲ್ಲಿ ಯಾವುದೇ ವಿಗ್ರಹಗಳು ಕಂಡುಬರುವುದಿಲ್ಲ. ಒಟ್ಟಿನಲ್ಲಿ ಈ ಬೃಹತ್ ಶಿಲಾಸಮಾಧಿಗಳು ಇಂದು ಅವನತಿಯ ಅಂಚಿನಲ್ಲಿವೆ.

ಹರವೆಮಲ್ಲರಾಜಪಟ್ಟಣ

ಈ ಗ್ರಾಮ ಪಿರಿಯಾಪಟ್ಟಣ–ಬೆಟ್ಟದಪುರ ರಸ್ತೆಯಲ್ಲಿದ್ದು ನಾಲ್ಕು ಕಿ.ಮೀ. ಅಂತರದಲ್ಲಿದೆ. ಹರವೆಮಲ್ಲರಾಜ ಎಂಬ ಪದವು ವ್ಯಕ್ತಿನಾಮಪದದಿಂದ ಕೂಡಿದೆ. ಪಿರಿಯಾಪಟ್ಟಣದ ಅರಸರ ಸಾಮಂತ ದೊರೆ ಮಲ್ಲರಾಜ ಇದ್ದ ಸ್ಥಳ ಹಾಗು ಈತನೇ ಈ ಗ್ರಾಮದಲ್ಲಿ ಒಂದು ಪಟ್ಟಣ ಮತ್ತು ಕೋಟೆ ಕಟ್ಟಿಸಿರುವ ಐತಿಹ್ಯವಿದೆ. ಆದರೆ ಆ ವಿಷಯ ಪುಷ್ಟಿಕರಿಸುವ ಯಾವುದೇ ಅವಶೇಷಗಳು ಕಂಡುಬರುವುದಿಲ್ಲ. ಇತಿಹಾಸ ಕಾಲಕ್ಕೆ ಸಂಬಂಧಿಸಿದಂತೆ ಒಂದು ಸಣ್ಣ ದೇವಾಲಯ, ವೀರಭದ್ರನ ಮೂರ್ತಿಶಿಲ್ಪ, ಸೂರ್ಯಶಿಲ್ಪ ಹಾಗು ಸುಮಾರು ೪ ಅಡಿ ಎತ್ತರದ ನಾಗಶಿಲ್ಪ ಮತ್ತು ನಂದಿಮೂರ್ತಿಶಿಲ್ಪ ಪತ್ತೆಯಾಗಿವೆ. ಈ ಎಲ್ಲಾ ಅವಶೇಷಗಳು ಅವನತಿಯ ಅಂಚಿನಲ್ಲಿದ್ದು ನಾಗಶಿಲ್ಪ ಮಾತ್ರ ದೊಡ್ಡದಾದ ಸುಮಾರು ೫ ಅಡಿ ಎತ್ತರದ ಕಲ್ಲಿನ ಮೇಲೆ ಕೊರೆಯಲಾಗಿದೆ. ನಾಗಶಿಲ್ಪವು ಉತ್ತಮ ಸ್ಥಿತಿಯಲ್ಲಿದ್ದು, ಆಕರ್ಷಣೆಯ ಶಿಲ್ಪ ಹಾಗು ಭಯ ಭಕ್ತಿಯ ಪ್ರತೀಕವಾಗಿದೆ. ಇದರ ಹತ್ತಿರದಲ್ಲಿಯೇ ಒಂದು ಹುತ್ತವಿರುವುದು.

ಈ ಮೇಲಿನ ಅವಶೇಷಗಳ ನಡುವೆ ಹೊಲದ ಮಧ್ಯದಲ್ಲಿ ಒಂದು ದೇವಾಲಯವಿದೆ. ಇದರ ಸಮೀಪದಲ್ಲಿಯೇ ದೊಡ್ಡದಾದ ಮರ ಹಾಗು ಗಿಡಗಂಟಿಗಳನ್ನು ಒಳಗೊಂಡ ಗುಡ್ಡವಿದೆ. ಗುಡ್ಡದ ಸಮೀಪದಲ್ಲಿಯೇ ಸಮತಟ್ಟಾದ ಭೂಮಿಯ ಮೇಲೆ ಪ್ರಾಚೀನ ದೇವಾಲಯವಿದೆ. ದೇವಾಲಯದಲ್ಲಿ ಯಾವುದೇ ರೀತಿಯ ಗರ್ಭಗೃಹ, ನವರಂಗ ಭಾಗಗಳು ಇರುವುದಿಲ್ಲ. ಆದರೆ ದೇವಾಲಯ ಒಳಭಾಗದಲ್ಲಿ ನಾಲ್ಕು ಕಂಬಗಳು ಮಧ್ಯದಲ್ಲಿರುವವು. ಈ ಕಂಬಗಳು ಸುಮಾರು ಐದು ಅಡಿ ಎತ್ತರವಾಗಿದ್ದು, ಆಯತಾಕಾರದ ಲಕ್ಷಣಗಳಿಂದ ಕೂಡಿವೆ. ಗರ್ಭಗೃಹದ ಸ್ಥಳದಲ್ಲಿ ಯಾವುದೇ ರೀತಿಯ ದೇವರ ವಿಗ್ರಹಗಳು ಇರುವುದಿಲ್ಲ. ಆದರೆ ವಿಶೇಷವಾಗಿ ಕಲ್ಲಿನಿಂದ ಕೂಡಿದ ಸಣ್ಣ ಸಣ್ಣ ಆಯುಧಗಳಿಂದ ದೊಡ್ಡ ಗಾತ್ರದ ಆಯುಧಗಳ ಮಾದರಿಯಲ್ಲಿರುವವು. ಇವುಗಳು ನೂತನ ಶಿಲಾಯುಧಗಳಂತಿವೆ. ಇಲ್ಲಿ ಕಂಡುಬಂದಿರುವ ಆಯುಧಗಳು ಒಂದು ಕಡೆ ಚೂಪಾಗಿದ್ದು ಮತ್ತೊಂದು ಭಾಗದಲ್ಲಿ ಉಂಡೆಯ ಆಕಾರವನ್ನು ಹೊಂದಿವೆ. ಈ ನೆಲೆಯಲ್ಲಿ ನಂದಿ ವಿಗ್ರಹಗಳು ಮತ್ತು ನೂತನ ಶಿಲಾಯುಧವನ್ನು ಹೋಲುವ ಆಯುಧಗಳ ಸಂಗ್ರಹವೇ ಅಧಿಕವಾಗಿವೆ. ಆದ್ದರಿಂದ ಈ ನೆಲೆಯನ್ನು ನೂತನ ಶಿಲಾಯುಧಗಳ ಸಂಗ್ರಹವೆಂದು ಕರೆಯಬಹುದು. ಆದರೆ ಸ್ಥಳೀಯರು ಈ ಸಂಗ್ರಹದ ಆಯುಧಗಳನ್ನು

ಶಿವನ ಲಿಂಗಗಳೆಂದು ತಿಳಿದು ಪೂಜಿಸಿಕೊಂಡು ಬರುತ್ತಿರುವರು ಮತ್ತು ಈ ಸ್ಥಳವನ್ನು ಇಂದು ನೂರೊಂದಯ್ಯನ ಲಿಂಗಗಳೆಂದು ಕರೆಯುತ್ತಿರುವರು. ಜನಪದ ತಜ್ಞರಾದ ಪಿ.ಕೆ. ರಾಜಶೇಖರ್‌ರವರೂ ಸಹ ತಮ್ಮ ಸಂಪಾದಿತ ಕೃತಿಯಾದ ಶಿವಸಂಪದದಲ್ಲಿ ನೂರೊಂದಯ್ಯನ ಲಿಂಗಗಳೆಂದೆ ಉಲ್ಲೇಖಿಸಿರುವರು. ದೇವಾಲಯದ ಗೋಡೆಯು ಚಪ್ಪಡಿ ಕಲ್ಲಿನಿಂದ ಕೂಡಿದ್ದು, ಒಂದರ ಪಕ್ಕ ಮತ್ತೊಂದನ್ನು ಸೇರಿಸಿ ನಿರ್ಮಿಸಲಾಗಿದೆ. ಈ ಗೋಡೆಯ ಮೇಲೆ ಕಂಡುಬಂದಿರುವ ಉಬ್ಬುಶಿಲ್ಪಗಳೆಂದರೆ ನಾಗ ಮತ್ತು ಮತ್ಸ್ಯ. ಇನ್ನುಳಿದಂತೆ ಸರಳತೆಯಿಂದ ಕೂಡಿದೆ. ದೇವಾಲಯವು ಪೂರ್ವಾಭಿಮುಖವಾಗಿದೆ.

ಚನ್ನಕಲ್ಲು ಕಾವಲು

ಆವರ್ತಿಯಿಂದ ಬೆಟ್ಟದಪುರ ರಸ್ತೆಯಲ್ಲಿ ಸುಮಾರು ಒಂದು ಕಿ.ಮೀ.ದೂರದಲ್ಲಿ ಚನ್ನಕಲ್ಲು ಕಾವಲು ಗ್ರಾಮವಿದೆ. ಗ್ರಾಮಕ್ಕೆ ಹೋಗುವ ಸ್ವಲ್ಪ ದೂರದ ಎಡಭಾಗದಲ್ಲಿ ಒಂದು ಪಾಳು ಭೂಮಿಯಿದೆ. ಇಲ್ಲಿ ನಾಲ್ಕು ಬೃಹತ್‌ಶಿಲಾಸಮಾಧಿಗಳು ಹರಡಿಕೊಂಡಿವೆ. ಅಲ್ಲಲ್ಲಿ ಹರಡಿದ ಸಣ್ಣ ಸಣ್ಣ ಒರಟುಕಲ್ಲುಗಳಿಂದ ಕೂಡಿದ ಈ ನೆಲೆ ಸುಮಾರು ಐವತ್ತು ಅಡಿ ವಿಸ್ತೀರ್ಣದಲ್ಲಿ ಹರಡಿಕೊಂಡಿರುವುದಾಗಿದೆ. ಕುರುಚಲು ಗಿಡಗಳಿಂದ ಆವೃತವಾದ ಸಮತಟ್ಟು ನೆಲೆಯಾಗಿದೆ.

ಈ ಪರಿಸರ ಪ್ರಾಚೀನ ಮಾನವ ನೆಲೆಸಲು ಯೋಗ್ಯ ಸ್ಥಳವಾಗಿದ್ದು ಅದರ ಕುರುಹುಗಳು ಅಲ್ಪಪ್ರಮಾಣದಲ್ಲಿ ಇಂದಿಗೂ ಕೂಡ ಕಂಡುಬರುತ್ತಿವೆ. ಈ ನೆಲೆಯ ಸಮೀಪದಲ್ಲಿಯೇ ಒಂದು ಕಲ್ಲುಗಣಿ ಇರುವುದು. ಇಂದಿಗೂ ನಿರಂತರವಾಗಿ ಗಣಿಗಾರಿಕೆ ನಡೆಯುತ್ತಿದೆ. ನೆಲೆಯ ಸುತ್ತ ಹರಡಿರುವ ಬೃಹತ್‌ಶಿಲಾಸಮಾಧಿಗಳನ್ನು ಪತ್ತೆ ಹಚ್ಚುವುದು ಕಷ್ಟಕರ. ಸಣ್ಣ ಸಣ್ಣ ನೆಲೆಗಳಿಂದ ದೊಡ್ಡ ಗಾತ್ರದ ನೆಲೆಯವರೆಗೆ ವಿಶಾಲವಾಗಿ ಹರಡಿಕೊಂಡಿರುವುದು. ಈ ಬೃಹತ್ ಶಿಲಾಸಮಾಧಿಯ ಸುತ್ತ ನೆಟ್ಟಿರುವ ಕಲ್ಲುಗಳಲ್ಲಿ ಸಣ್ಣ ಒರಟುಕಲ್ಲುಗಳಿಂದ ಹಿಡಿದು ದೊಡ್ಡಗಾತ್ರದ ಕಲ್ಲುಗಳನ್ನು ಬಳಸಿರುವರು. ಈ ಕಲ್ಲುಗಳನ್ನು ಒಂದರ ಪಕ್ಕ ಮತ್ತೊಂದನ್ನು ವೃತ್ತಾಕಾರವಾಗಿ ನೆಟ್ಟಿರುವರು. ಇಂದು ಈ ಪಾಳುಭೂಮಿಯಲ್ಲಿ ದನ-ಕರುಗಳನ್ನು ಕಟ್ಟಿಹಾಕಿ ಹುಲ್ಲು ಮೇಯಿಸುತ್ತಿರುವರು. ಜೊತೆಗೆ ಬೃಹತ್‌ಶಿಲಾಸಮಾಧಿಗೆ ಹೊಂದಿಕೊಂಡಂತೆ ಇರುವ ರೈತರು ವ್ಯವಸಾಯದ ಉದ್ದೇಶಕ್ಕಾಗಿ ಒತ್ತುವರಿ ಮಾಡಿಕೊಳ್ಳುತ್ತಿರುವರು. ಪರಿಣಾಮವಾಗಿ ಈ ಬೃಹತ್‌ಶಿಲಾನೆಲೆಯ ಕಲ್ಲುಗಳನ್ನು ತೆಗೆಯುವುದರಿಂದ ಅವಶೇಷದ ಕುರುಹುಗಳು ಮರೆಯಾಗುತ್ತಿವೆ. ಕೆ.ಬಿ.ಶಿವತಾರಕ್‌ರವರು ತಮ್ಮ ಕೃತಿಯಾದ ಕರ್ನಾಟಕದ ಪುರಾತತ್ವ ನೆಲೆಗಳಲ್ಲಿ ಈ ಬೃಹತ್ ಶಿಲಾಸಮಾಧಿಗಳ ಬಗ್ಗೆ ಉಲ್ಲೇಖ ಮಾಡಿರುವರು. ಆದರೆ ಆ ನೆಲೆ ಎಲ್ಲಿ ಹೇಗೆ ಎಂಬುವುದರ ಬಗ್ಗೆ ಮಾಹಿತಿ ಇರುವುದಿಲ್ಲ. ಒಟ್ಟಿನಲ್ಲಿ ಇತಿಹಾಸಪೂರ್ವ ಕಾಲದಲ್ಲಿಯೇ ನೆಲೆಸಿದ ಈ

ಗ್ರಾಮದಲ್ಲಿ ಅದರ ಕುರುಹುವಾಗಿ ಮರಣ ನಂತರ ಶವಸಂಸ್ಕಾರಕ್ಕಾಗಿ ಅಲ್ಲಿಯೇ ದೊರೆಯುವ ಕಲ್ಲುಗಳಿಂದ ನಿರ್ಮಿಸಲಾದ ವೃತ್ತಸಮಾಧಿಗಳಿವೆ.

ಬೆಣಗಾಲು

ತಾಲ್ಲೂಕಿನ ಗ್ರಾಮಗಳಲ್ಲಿ ಬೆಣಗಾಲು ಒಂದು ಪ್ರಾಚೀನ ಗ್ರಾಮ. ಆವರ್ತಿಯಿಂದ ಬೆಟ್ಟದಪುರ ರಸ್ತೆಯಲ್ಲಿದೆ. ಇಲ್ಲಿ ಬೃಹತ್‌ಶಿಲಾಯುಗ ಸಂಸ್ಕೃತಿಗೆ ಸೇರಿದ ಸಮಾಧಿಗಳು ಪತ್ತೆಯಾಗಿವೆ. ಬೃಹತ್ ಶಿಲಾಯುಗ ಜನರ ಯೋಗ್ಯವಾದ ನೆಲೆ ಇದಾಗಿತ್ತೆಂಬುದಕ್ಕೆ ಸಾಕಷ್ಟು ಕುರುಹುಗಳು ದೊರಕಿವೆ. ಇಲ್ಲಿನ ಸಮಾಧಿಗಳು ಕೆಲವು ನಿಧಿ ಶೋಧಕರ ದಾಳಿಗೆ ಗುರಿಯಾಗಿದ್ದು ಕಣಜಗಳಂತೆ ಗೋಚರವಾಗುತ್ತಿವೆ. ನೆಲೆಯ ಬಗ್ಗೆ ಕೆ.ಬಿ. ಶಿವತಾರಕ್‌ರವರ ಕರ್ನಾಟಕದ ಪುರಾತತ್ವ ನೆಲೆಗಳು ಎಂಬ ಕೃತಿಯಲ್ಲಿ ಉಲ್ಲೇಖವಿದೆ. ಶಿಲಾಸಮಾಧಿಗಳು ಬೆಣಗಾಲು ಗ್ರಾಮದ ನೀರಿನ ಟ್ಯಾಂಕ್ ಬಳಿ ಮತ್ತು ರಸ್ತೆಯ ಎರಡು ದಂಡೆಯಲ್ಲಿ ಹರಡಿಕೊಂಡಿವೆ. ನೀರಿನ ಟ್ಯಾಂಕ್ ಬಳಿ ಒಂದು ಗುಡ್ಡವಿದೆ. ವಿಸ್ತಾರವಾಗಿ ಈ ಎರಡು ದಂಡೆಯಲ್ಲಿ ಹರಡಿದ ಕಲ್ಲುಬಂಡೆಗಳು, ಸಣ್ಣ ಸಣ್ಣ ಒರಟುಕಲ್ಲುಗಳಿಂದ ಕೂಡಿ ಪಾಳುಬಿದ್ದಿದೆ. ವೃತ್ತಾಕಾರದ ಬೃಹತ್ ಶಿಲಾಸಮಾಧಿಗಳು ಹಾಗು ಒಂದು ಆಯತಾಕಾರ ಅಥವಾ ಪೆಟ್ಟಿಗೆಯಾಕಾರದ ಬೃಹತ್ ಶಿಲಾಸಮಾಧಿಗಳು ಕಂಡುಬಂದಿವೆ. ಈ ಸಮಾಧಿಯಲ್ಲಿ ನಾಲ್ಕು ದಿಕ್ಕಿನಿಂದಲೂ ಕಲ್ಲು ಚಪ್ಪಡಿಗಳನ್ನು ಒಂದರ ಪಕ್ಕ ಮತ್ತೊಂದನ್ನು ಜೋಡಿಸಿ ನಿಲ್ಲಿಸಲಾಗಿದೆ. ಕಲ್ಲುಚಪ್ಪಡಿಗಳನ್ನು ನಿಲ್ಲಿಸಲು ಯಾವುದೇ ರೀತಿಯ ಗಾರೆ ಮತ್ತಿತರ ವಸ್ತುಗಳನ್ನು ಬಳಸದೆ ಕಲ್ಲುಚಪ್ಪಡಿಗಳನ್ನೇ ಒಂದರ ಮೂಲೆಯಲ್ಲಿ ಕೊಂಡಿಯಾಗಿ ಸೇರಿಸಿ ನಿಲ್ಲಿಸಿರುವುದನ್ನು ಕಾಣಬಹುದು. ಹಾಗು ಆಹಾರ ವಸ್ತುಗಳನ್ನು ಹಾಕಲು ಒಂದು ಕಿಂಡಿ ಕೊರೆದಿರುವುದನ್ನು ಕಾಣಬಹುದು. ಪ್ರತಿ ಶಿಲಾಚಪ್ಪಡಿಯು ನಾಲ್ಕು ಅಡಿ ಎತ್ತರ ಹಾಗು ಎರಡರಿಂದ ಎರಡೂವರೆ ಅಡಿ ಅಗಲ ವಿಸ್ತೀರ್ಣತೆಯಿಂದ ಕೂಡಿದೆ. ಗ್ರಾನೈಟ್ ಶಿಲೆಯಿಂದ ಈ ಚಪ್ಪಡಿಗಳು ಕೂಡಿವೆ. ವೃತ್ತಸಮಾಧಿಗಳು ಇಲ್ಲಿಯೇ ಹರಡಿದ್ದು ಸಣ್ಣ ಸಣ್ಣ ಕಲ್ಲುಗಳಿಂದ ಹಿಡಿದು ದೊಡ್ಡ ಗಾತ್ರದ ಕಲ್ಲುಗಳನ್ನು ಹೊಂದಿದೆ. ಈ ವೃತ್ತಮಾದರಿಯ ಸಮಾಧಿಗಳನ್ನು ನಿರ್ಮಿಸಲು ಉಪಯೋಗಿಸಿದ ಬಹುತೇಕ ಕಲ್ಲುಗಳು ಕಪ್ಪು-ಕಂದು ಬಣ್ಣದಿಂದ ಕೂಡಿವೆ. ಈ ಸಮಾಧಿಗಳ ಸುತ್ತ ಕುರುಚಲು ಗಿಡಗಳು ಬೆಳೆದಿದೆ.

ಸುಂಡವಾಳು

ಪಿರಿಯಾಪಟ್ಟಣ ತಾಲ್ಲೂಕಿನ ಬೃಹತ್ ಶಿಲಾಸಮಾಧಿ ನಿವೇಶನಗಳ ಪೈಕಿ ಸುಂಡವಾಳು ಒಂದು. ಇದು ಪಿರಿಯಾಪಟ್ಟಣದಿಂದ ಪೂರ್ವಕ್ಕೆ ಸುಮಾರು ಏಳು ಕಿ.ಮೀ. ದೂರದಲ್ಲಿದೆ. ಗ್ರಾಮದ ಕೇಂದ್ರಭಾಗದಲ್ಲಿ ಬಸವೇಶ್ವರ ದೇವಾಲಯವಿದೆ. ಇದರ ಮುಂದೆ ಗುಡಿಯಿದೆ. ಈ

ಗುಡಿ ಇತಿಹಾಸಪೂರ್ವ ಕಾಲದ ಬೃಹತ್‌ಶಿಲಾಸಮಾಧಿಯಾಗಿದ್ದು, ಸ್ಥಳೀಯರಿಂದ ಪೂಜಿಸಲ್ಪಡುತ್ತಿರುವುದು. ಪಶ್ಚಿಮಕ್ಕೆ ಮುಖ ಮಾಡಿರುವುದು. ಮೂರು ದಿಕ್ಕಿನಿಂದಲೂ ತೆಳುವಾದ ಕಲ್ಲು ಚಪ್ಪಡಿಗಳನ್ನು ಒಳಗೊಂಡು ಪೆಟ್ಟಿಗೆ ಆಕಾರ ಹೊಂದಿದೆ. ಇದರ ಮೇಲೆ ಮುಚ್ಚಲು ಒಂದು ತೆಳುವಾದ ಕಲ್ಲುಚಪ್ಪಡಿಯನ್ನು ಉಪಯೋಗಿಸಿರುವರು. ಈ ಚಪ್ಪಡಿಗಳನ್ನು ಒಂದರ ಪಕ್ಕ ಮತ್ತೊಂದನ್ನು ಸೇರಿಸಲು ಯಾವುದೇ ರೀತಿಯ ಗಾರೆ ಉಪಯೋಗಿಸಿರುವುದು ಕಂಡುಬರುವುದಿಲ್ಲ. ಪ್ರತಿ ಕಲ್ಲುಚಪ್ಪಡಿಗಳು ಎರಡೂವರೆಯಿಂದ ಮೂರು ಅಡಿ ಉದ್ದ ಮತ್ತು ಅಗಲ ವಿಸ್ತೀರ್ಣತೆಯಿಂದ ಕೂಡಿವೆ. ಇದರ ಒಳಭಾಗದಲ್ಲಿ ಒಂದು ಕಲ್ಲು ಇಡಲಾಗಿದೆ. ಇದು ನೂತನ ಶಿಲಾಯುಗದ ಆಯುಧದಂತೆ ಕಂಡುಬರುತ್ತದೆ.

ದೊಡ್ಡಹೊಸೂರು

ದೊಡ್ಡಹೊಸೂರು ಒಂದು ಪ್ರಾಚೀನ ಗ್ರಾಮ. ಈ ಗ್ರಾಮ ಬೌದ್ಧಧರ್ಮದ ಟಿಬೇಟಿಯನ್ ಜನಾಂಗದವರಿಗೆ ಆಶ್ರಯ ನೀಡಿರುವ ಗೋಲ್ಡನ್ ಕ್ಯಾಂಪಿನಿಂದ ಸುಮಾರು ಆರು ಕಿ.ಮೀ. ದೂರದ ಅಂತರದಲ್ಲಿದೆ. ಪಶ್ಚಿಮ ದಿಕ್ಕಿಗಿರುವ ಈ ಗ್ರಾಮದಲ್ಲಿ ಒಂದು ದೊಡ್ಡಮ್ಮನ ದೇವಾಲಯ ವಿದೆ. ಇದು ಸಹ ಗಿಡಮರಗಳಿಂದ ಆವೃತವಾಗಿರುವುದು. ಹೆಚ್ಚಾಗಿ ಬಿಲ್ಪತ್ರೆ ಮರಗಳಿವೆ. ಈ ಭಾಗದಲ್ಲಿ ಒಂದು ಬೃಹತ್‌ಶಿಲಾಸಮಾಧಿ ಪತ್ತೆಯಾಗಿದ್ದು, ಆಯತಾಕಾರದಲ್ಲಿ ಗುಡಿಯ ಆಕಾರವನ್ನು ಹೊಂದಿದೆ. ಮೂರು ದಿಕ್ಕಿನಲ್ಲಿ ಚಪ್ಪಡಿಕಲ್ಲಿನಿಂದ ನಿರ್ಮಿಸಿದ ಗೋಡೆಗಳಿವೆ. ಈ ಚಪ್ಪಡಿಕಲ್ಲುಗಳನ್ನು ಭೂಮಿಯ ಒಳಗೆ ಹೂತು ನಿಲ್ಲಿಸಲಾಗಿದೆ. ಹಾಗು ಇದರ ಮೇಲೆ ಮುಚ್ಚಳಿಕೆಯಾಗಿ ಎರಡು ಕಲ್ಲು ಚಪ್ಪಡಿಗಳನ್ನು ಇರಿಸಲಾಗಿದೆ. ಈ ಶಿಲೆಗಳು ಒಂದರಿಂದ ಒಂದೂವರೆ ಇಂಚುಗಳಷ್ಟು ದಪ್ಪದಿಂದ ಕೂಡಿವೆ. ಹಾಗು ಮೂರರಿಂದ ಮೂರುವರೆ ಅಡಿ ಉದ್ದ ಮತ್ತು ಅಗಲ ವಿಸ್ತೀರ್ಣತೆಯಿಂದ ಕೂಡಿವೆ. ಕೆಲವು ವರ್ಷಗಳ ಹಿಂದೆ ಉತ್ತಮ ಸ್ಥಿತಿಯಲ್ಲಿದ್ದು ಇಂದು ಅವನತಿಯ ಅಂಚಿನಲ್ಲಿದೆ. ಈ ಪರಿಸರವು ಫಲವತ್ತಾದ ಭೂಮಿಯಾಗಿರುವುದರಿಂದ ಮರ ಗಿಡಗಳನ್ನು ಸ್ಥಳೀಯರು ಕಡಿದು ಉಳುಮೆಗೆ ಒತ್ತುವರಿಯಾಗಿ ಬಳಸಿಕೊಳ್ಳುತ್ತಿದ್ದಾರೆ.

ದೊಡ್ಡಕಮರವಳ್ಳಿ

ಕುಶಾಲನಗರದಿಂದ ಕಣಗಾಲು ರಸ್ತೆಯಲ್ಲಿ ಹತ್ತು ಕಿ.ಮೀ.ದೂರದಲ್ಲಿ ದೊಡ್ಡಕಮರವಳ್ಳಿ ಗ್ರಾಮವಿದೆ. ಇದು ಕಾವೇರಿ ನದಿ ಬಲದಂಡೆಯ ಮೇಲಿದೆ. ಈ ಗ್ರಾಮ ಇತಿಹಾಸಪೂರ್ವ ಹಾಗು ಇತಿಹಾಸಕಾಲಕ್ಕೆ ಸೇರಿದ ಅವಶೇಷಗಳನ್ನು ಹೊಂದಿದೆ. ಬಸವೇಶ್ವರ ಮತ್ತು ಲಕ್ಷ್ಮೀ ದೇವಾಲಯವಿದ್ದು, ಸಣ್ಣ ಗುಡ್ಡಗಳ ಮೇಲೆ ಈ ಗ್ರಾಮ ವಿಶಾಲವಾಗಿ ಹರಡಿಕೊಂಡಿದೆ.

ಗ್ರಾಮದ ಕೇಂದ್ರಭಾಗ ಲಕ್ಷ್ಮೀದೇವಾಲಯದ ಹಿಂಬದಿಯಲ್ಲಿ ಹರಡಿದ ಹಾಸು ಬಂಡೆಗಳು, ಬಂಡೆಗಲ್ಲುಗಳು, ಸಣ್ಣ ಸಣ್ಣ ಒರಟು ಕಲ್ಲುಗಳಿಂದ ಕೂಡಿದೆ. ಈ ಭಾಗದಲ್ಲಿ ಕಪ್ಪು ಒರಟುಕಲ್ಲಿನಿಂದ ಕೂಡಿದ ವೃತ್ತಾಕಾರದ ಸಣ್ಣ ಸಣ್ಣ ಬೃಹತ್ ಶಿಲಾಸಮಾಧಿಗಳು ಪತ್ತೆಯಾಗಿರುವವು. ಈ ನೆಲೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಮಾತ್ರ ಕಂಡುಬರುತ್ತವೆ. ಇಂದು ಈ ಪ್ರದೇಶವನ್ನು ದನಗಳನ್ನು ಕಟ್ಟಿಹಾಕಲು ಹಾಗು ಹುಲ್ಲು ಗುಡ್ಡೆ ಹಾಕಲು ಉಪಯೋಗಿಸಿಕೊಳ್ಳಲಾಗುತ್ತಿದೆ. ಹಾಗು ಇದರ ಸುತ್ತ ಕಳ್ಳಿಗಿಡಗಳು ಒಳಗೊಂಡಂತೆ ಕುರುಚಲು ಗಿಡಗಳು ಬೆಳೆದಿರುವವು. ಈ ನೆಲೆಯನ್ನು ವಸತಿ ನೆಲೆಯಾಗಿ ಪರಿವರ್ತಿಸಲು ಕಾರ್ಯ ಕೈಗೊಂಡಿರುವರು ಎಂಬ ಮಾಹಿತಿ ಇದೆ.

ಅಂಬೇಡ್ಕರ್ ಕಾಲೋನಿಯ ಮಧ್ಯದಲ್ಲಿ ಒಂದು ಬೃಹತ್‌ಶಿಲಾ ನೆಲೆ ಪತ್ತೆಯಾಗಿದೆ. ಹಿಂದೆ ಈ ಬೃಹತ್ ಶಿಲಾಯುಗದ ಸಮಾಧಿಯನ್ನು ಮಾರಮ್ಮನ ಗುಡಿ ಎಂದು ಪೂಜಿಸಿಕೊಂಡು ಬರುತ್ತಿದ್ದರು. ಆದರೆ ಇಂದು ಅಂತಹ ಪೂಜೆಗಳು ನಡೆಯುತ್ತಿಲ್ಲ. ಈ ಬೃಹತ್‌ಶಿಲಾ ಸಮಾಧಿಯು ಪೂರ್ವ ದಿಕ್ಕಿಗಿದ್ದು, ಸುತ್ತಲೂ ಮೂರು ಬೃಹತ್ ಒರಟುಕಲ್ಲಿನಿಂದ ನಿರ್ಮಿಸಿರುವವರು. ಮೂರು ದಿಕ್ಕಿನಲ್ಲಿಯೂ ದೊಡ್ಡ ಗಾತ್ರದ ಕಲ್ಲು ಚಪ್ಪಡಿಗಳನ್ನು ಗೋಡೆಯಾಗಿ ಭೂಮಿಗೆ ಹೂತು ನಿಲ್ಲಿಸಿರುವರು. ಈ ಮೂರು ಕಲ್ಲುಗಳನ್ನು ಒಂದರ ಪಕ್ಕ ಮತ್ತೊಂದನ್ನು ಜೋಡಿಸಿದ್ದು ಗಾರೆ ಅಥವಾ ಮಣ್ಣನ್ನು ಉಪಯೋಗಿಸದೆ ಒಣ ಕಲ್ಲುಗಳನ್ನು ಸೇರಿಸಿ ನಿರ್ಮಿಸಲಾಗಿದೆ. ಭೂಮಿಗೆ ಹೂತು ನಿಲ್ಲಿಸಿರುವ ಚಪ್ಪಡಿಗಳ ಭದ್ರತೆಯ ದೃಷ್ಟಿಯಿಂದ ಹಿಂಭಾಗದಲ್ಲಿ ಬೃಹತ್ ಕಲ್ಲುಗಳನ್ನು ನಿಲ್ಲಿಸಿರುವರು. ಬೃಹತ್‌ಶಿಲಾಸಮಾಧಿಯ ಮೇಲೆ ಮುಚ್ಚಲು ಒಂದು ಬೃಹತ್ ಗಾತ್ರದ ಚಪ್ಪಡಿಶಿಲೆಯನ್ನು ಉಪಯೋಗಿಸಿರುವರು. ಈ ಚಪ್ಪಡಿಶಿಲೆಗಳು ಒಂದರಿಂದ ಎರಡು ಇಂಚುಗಳಷ್ಟು ದಪ್ಪವಾಗಿದೆ ಹಾಗು ಮೂರರಿಂದ ನಾಲ್ಕು ಅಡಿ ಅಗಲ ಮತ್ತು ಉದ್ದ ವಿಸ್ತೀರ್ಣತೆಯಿಂದ ಕೂಡಿವೆ. ಈ ಬೃಹತ್‌ಶಿಲಾಸಮಾಧಿ ಇಂದಿಗೂ ಉತ್ತಮ ಸ್ಥಿತಿಯಲ್ಲಿರುವುದು.

ಒಟ್ಟಿನಲ್ಲಿ ಬೃಹತ್‌ಶಿಲಾಯುಗ ಸಂಸ್ಕೃತಿಯ ಕಾಲಮಾನಕ್ಕಾಗಲೇ ಮಾನವನು ನಿರ್ದಿಷ್ಟ ಸ್ಥಳಗಳಲ್ಲಿ ನೆಲೆ ನಿಂತಿರುವುದು ತಿಳಿಯುತ್ತದೆ. ಭೂಮಿಯ ಬಹುಭಾಗವನ್ನು ಅವನು ಬಳಸಿಕೊಂಡಿರುವುದು ಕಂಡುಬರುತ್ತದೆ. ಪ್ರಾಣಿಗಳ ಬಳಕೆ ಹಾಗು ತನ್ನ ಅವಶ್ಯಕತೆಗನುಗುಣವಾಗಿ ಸುಧಾರಿತ ಎಲ್ಲಾ ಜ್ಞಾನಗಳ ಬಳಕೆಯ ಜೀವನಕ್ರಮವನ್ನು ನಡೆಸಿರುವುದು ತಿಳಿಯುತ್ತದೆ. ತನಗೆ ಉಪಯುಕ್ತವಾದ ಶಿಲಾಪ್ರಭೇದವನ್ನಷ್ಟೇ ಬಳಸಿ ತಾಂತ್ರಿಕ ವೈವಿಧ್ಯವನ್ನು ಪ್ರದರ್ಶಿಸಿರುವುದು ತಿಳಿಯುತ್ತದೆ. ತನ್ನ ನಿರ್ಮಿತಿಗೆ ಅವಶ್ಯಕವಾದ ಕಲ್ಲಿನ ಚಪ್ಪಡಿಗಳನ್ನು ತೆಗೆಯುವ ತಾಂತ್ರಿಕತೆಯನ್ನು ಬಳಸಿರುವುದು ಹಾಗು ನಿರ್ದಿಷ್ಟ ರೀತಿಯಲ್ಲಿ ನಿರೂಪಿಸಿರುವುದು ಗಮನಾರ್ಹ ಅಂಶ.

ದಕ್ಷಿಣಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಎರಡು ಸಹಸ್ರಮಾನಗಳ ಹಿಂದೆ ಪ್ರಚಲಿತದಲ್ಲಿದ್ದ ಬೃಹತ್‌ಶಿಲಾಸಮಾಧಿ ಸಂಸ್ಕೃತಿಯ ಗೋರಿಗಳ ನೆನಪು ಮರುಕಳಿಸುತ್ತದೆ. ಅದರಲ್ಲೂ ವಿಶೇಷ ರೀತಿಯದೆಂದು ಹೇಳಿರುವ, ಚಪ್ಪಡಿಕಲ್ಲಿನಿಂದ ನಿರ್ಮಿತವಾದ, ಪೆಟ್ಟಿಗೆಯಾಕಾರದ ಗೂಡಂತೂ ಬೃಹತ್ ಶಿಲಾಸಮಾಧಿಯ ಚಪ್ಪಡಿ ಕಲ್ಲಿನ ಕೋಣೆಯಂತೆಯೇ ನಿರ್ಮಿತವಾಗಿದೆ. ಚಪ್ಪಡಿಯು ಹೊರಕ್ಕೆ ಬೀಳದಂತೆ ಸುತ್ತಲೂ ಒರಟು ಕಲ್ಲುಗಳನ್ನು ಸೇರಿಸಿರುವುದು ಬೃಹತ್‌ಶಿಲಾಸಮಾಧಿಯ ತಂತ್ರಜ್ಞಾನ ಮತ್ತು ಶವಸಂಸ್ಕಾರ ಪದ್ಧತಿ ಗಮನಾರ್ಹವಾಗಿರುವುದು. ಪಿರಿಯಾಪಟ್ಟಣ ತಾಲ್ಲೂಕು ಪರಿಸರವು ಇತಿಹಾಸಪೂರ್ವ ಕಾಲದಿಂದ ಇಂದಿನವರೆಗಿನ ವಿವಿಧ ಸಾಂಸ್ಕೃತಿಕ ಹಂತಗಳಿಗಿರುವ ಸಾಮ್ಯತೆ ಹಾಗು ಭಿನ್ನತೆಗಳನ್ನು ಒಳಗೊಂಡಿದೆ. ಅದೇ ರೀತಿ ಈ ಪ್ರದೇಶದಲ್ಲಿ ಉತ್ಖನನದ ಅವಶ್ಯಕತೆಯೂ ಇದೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಇದುವರೆಗೆ ಯಾವುದೇ ಒಂದು ಸ್ಪಷ್ಟ ಚಿತ್ರಣವನ್ನು ತಿಳಿಯಲಾಗದಿದ್ದಂತಹ ಸನ್ನಿವೇಶದಲ್ಲಿ ಪ್ರಸ್ತುತ ಶೋಧನೆಯಿಂದಾಗಿ ಹೆಚ್ಚಿನ ಸಂಖ್ಯೆಯ ನೆಲೆಗಳು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಪಿರಿಯಾಪಟ್ಟಣ ತಾಲ್ಲೂಕು ಪರಿಸರವು ಪ್ರಾಚೀನ ಕಾಲದಿಂದಲೂ ಮಾನವನ ವಾಸ್ತವ್ಯದ ನೆಲೆಯಾಗಿತ್ತೆಂದು ತಿಳಿದು ಬರುತ್ತದೆ.

ಪಿರಿಯಾಪಟ್ಟಣ ತಾಲ್ಲೂಕಿನ ನೆಲೆಗಳ ವಿವರ

ಕ್ರ. ಸಂ	ಗ್ರಾಮದ ಹೆಸರು	ಹಳೆಯ ಶಿಲಾಯುಗ	ಸೂಕ್ಷ್ಮ ಶಿಲಾಯುಗ	ನವ/ತಾಮ್ರ ಶಿಲಾಯುಗ	ಬೃಹತ್ ಶಿಲಾಯುಗ	ಆದಿ ಇತಿಹಾಸ ಕಾಲ
೧.	ಕೊಪ್ಪ	–	–	√	√	–
೨.	ಚಾಕೂರು	–	–	–	√	–
೩.	ಚಿಕ್ಕನೇರಳೆ	–	–	–	√	–
೪.	ಚನ್ನಕಲ್ಲು ಕಾವಲು	–	–	–	√	–
೫.	ಬಿಳಗುಂದ	–	–	–	√	–
೬.	ತರಿಕಲ್ಲು	–	–	–	√	–
೭.	ಆಯರಹಳ್ಳಿ	–	–	–	√	–
೮.	ಬೆಣಗಾಲು	–	–	–	√	–
೯.	ಚಾಮರಾಯನಕೋಟೆ	–	–	–	√	–
೧೦.	ಕಣಗಾಲು	–	–	–	√	–

ಕ್ರ. ಸಂ	ಗ್ರಾಮದ ಹೆಸರು	ಹಳೆಯ ಶಿಲಾಯುಗ	ಸೂಕ್ಷ್ಮ ಶಿಲಾಯುಗ	ನವ/ತಾಮ್ರ ಶಿಲಾಯುಗ	ಬೃಹತ್ ಶಿಲಾಯುಗ	ಆದಿ ಇತಿಹಾಸ ಕಾಲ
೧೧.	ಬೆಟ್ಟದಪುರ	–	–	–	√	–
೧೨.	ಪಿರಿಯಾಪಟ್ಟಣ	–	–	–	√	–
೧೩.	ಪುನಾಡಹಳ್ಳಿ	–	–	–	√	–
೧೪.	ಅತ್ತಿಗೋಡು	–	–	–	√	–
೧೫.	ಹರದೂರು	–	–	–	√	–
೧೬.	ನಾಗನಹಳ್ಳಿ	–	–	–	√	–
೧೭.	ನಿಲವಾಡಿ	–	–	–	√	–
೧೮.	ಆಯಿತನಹಳ್ಳಿ	–	–	–	√	–
೧೯.	ಕಂದೇಗಾಲ	–	–	–	√	–
೨೦.	ಹರವೆಮಲ್ಲರಾಜ ಪಟ್ಟಣ	–	–	√	√	
೨೧.	ಸೂಳೆಕೋಟೆ	–	–	–	√	–
೨೨.	ಸುಂಡವಾಳು	–	–	–	√	–
೨೩.	ಹಳಗನಹಳ್ಳಿ	–	–	–	√	–
೨೪.	ದೊಡ್ಡಹೊಸೂರು	–	–	–	√	–
೨೫.	ದೊಡ್ಡಕಮರವಳ್ಳಿ	–	–	–	√	–
೨೬.	ಬೂದಿತಿಟ್ಟು	–	–	–	√	–
೨೭.	ಮನಗನಹಳ್ಳಿ	–	–	–	√	–

ಅಡಿಟಿಪ್ಪಣಿಗಳು

೧. ಸುರೇಶ್ ರೈ ಕೆ., ೨೦೧೦: **ಪ್ರಾಚೀನ ಭಾರತ,** ಪು.೬೪

೨. ಶ್ರೀನಿವಾಸ್ ಎಲ್., ೨೦೧೦: **ಹಂಪಿ ಪರಿಸರದ ಆದಿಮಾನವನ ನೆಲೆಗಳು,** ಪು.೧೭.

೩. ಸುರೇಶ್ ರೈ ಕೆ., ೨೦೧೦: **ಪೂರ್ವೋಕ್ತ,** ಪು.೬೫.

೪. ಸದಾಶಿವ ಕೆ., ೨೦೦೪: **ಪ್ರಾಚೀನ ಭಾರತದ ಇತಿಹಾಸ,** ಪು.೪೪.

೫. ಅದೇ, ಪು.೪೫.

೬. ಅದೇ.

೭. ಮುದ್ದಾಚಾರಿ ಬಿ., ೧೯೮೭: **ಕರ್ನಾಟಕದ ಚರಿತ್ರೆ ಮತ್ತು ಸಂಸ್ಕೃತಿ,** ಪು.೨೮

೮. ಸದಾಶಿವ ಕೆ., ೨೦೦೪: **ಪೂರ್ವೋಕ್ತ,** ಪು.೪೬.

೯. ಚಂದ್ರಶೇಖರಪ್ಪ ಟಿ.ಜಿ., ೨೦೦೬: **ಪ್ರಾಚೀನ ಭಾರತದ ಇತಿಹಾಸ,** ಪು.೧೨

೧೦. ಸುರೇಶ್ ರೈ ಕೆ., ೨೦೧೦: **ಪೂರ್ವೋಕ್ತ,** ಪು.೬೮.

೧೧. ಅದೇ, ಪು.೭೦.

೧೨. ಮುದ್ದಾಚಾರಿ ಬಿ., ೧೯೮೭: **ಪೂರ್ವೋಕ್ತ,** ಪು.೩೦.

೧೩ ರಂಗಸ್ವಾಮಿ, ೧೯೯೨: **ಭಾರತದ ಇತಿಹಾಸ,** ಪು.೧೬.

೧೪. ಚಂದ್ರಶೇಖರಪ್ಪ ಟಿ.ಜಿ., ೨೦೦೬: **ಪೂರ್ವೋಕ್ತ,** ಪು.೧೫.

೧೫. ಶಿವತಾರಕ್ ಕೆ.ಬಿ., ೨೦೦೧: **ಕರ್ನಾಟಕದ ಪುರಾತತ್ವ ನೆಲೆಗಳು,** ಪು.೫೮೧,

೧೬. ಕೃಷ್ಣಪ್ಪ ಎನ್., ೧೯೯೯: **ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ,** ಪು.೭೩

೧೭. ಕೋಲ್, ೧೮೬೯: **ಮೆಮೊರ್‍ಯಾಂಡಮ್ ಆನ್ ದಿ ಕ್ರೊಮ್‌ಲೆಕ್ಸ್ ಫೌಂಡ್ ಇನ್ ಕೂರ್ಗ್; ಪ್ರೋಸಿಡಿಂಗ್ಸ್ ಆಫ್ ದಿ. ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್,** ಪು.೫೪-೯

೧೮. ಸುಬ್ಬಯ್ಯ ಕೆ.ಕೆ., ೧೯೭೮: **ಆರ್ಕಿಯಾಲಜಿ ಆಫ್ ಕೂರ್ಗ್,** ಪು.೨೮

೧೯. ಸೂರ್ಯನಾಥ ಯು.ಕಾಮತ್, ೧೯೯೨: **ಕೊಡಗು ಜಿಲ್ಲೆ ಗ್ಯಾಸೆಟಿಯರ್,** ಪು.೨೮೫

೨೦. ಕೃಷ್ಣಪ್ಪ ಎನ್., ೧೯೯೯, **ಪೂರ್ವೋಕ್ತ,** ಪು.೭೬

೨೧. ರಾಜಶೇಖರ್ ಪಿ.ಕೆ., ೨೦೧೦: **ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್,** ಪು.೧೨.

೨೨. ರಾಜಶೇಖರ್ ಪಿ.ಕೆ., ೨೦೦೧: **ಶಿವಸಂಪದ,** ಪು.೬೮

೨೩. ರಾಜಶೇಖರ್ ಪಿ.ಕೆ., ೨೦೧೦: **ಪೂರ್ವೋಕ್ತ,** ಪು.೧೩,೧೪

೨೪. ರಮೇಶ ನಾಯಕ(ಸಂ), ೨೦೦೭: **ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ,** ಪು.೧೮

೨೫. ಕೃಷ್ಣಪ್ಪ ಎನ್., ೧೯೯೯: **ಪೂರ್ವೋಕ್ತ,** ಪು.೭೬, ೭೭

ಅಧ್ಯಾಯ ನಾಲ್ಕು

ಐತಿಹ್ಯ ಮತ್ತು ಸ್ಥಳನಾಮಗಳು

ಅಧ್ಯಾಯ ನಾಲ್ಕು

ಐತಿಹ್ಯ ಮತ್ತು ಸ್ಥಳನಾಮಗಳು

ಚರಿತ್ರೆ ಅಧ್ಯಯನದ ಮಟ್ಟಿಗೆ ಐತಿಹ್ಯ ಮತ್ತು ಸ್ಥಳನಾಮಗಳು ಪ್ರಮುಖ ಸ್ಥಾನ ಪಡೆದಿವೆ. ಸ್ಥಳೀಯ ಎಂದರೆ ಒಂದು ಸ್ಥಳ, ಹಳ್ಳಿ, ಗ್ರಾಮ. ಹೀಗೆ ನಗರ ಪಟ್ಟಣಗಳಿಗಿಂತ ಕೆಳಮಟ್ಟದ ಭೌಗೋಳಿಕ ಜೀವನ ವ್ಯವಸ್ಥೆಯನ್ನು ಸಂಕೇತಿಸುವುದಾಗಿದೆ. ಇತಿಹಾಸ ಮಾನವ ಜನಾಂಗದ ಕತೆಯಲ್ಲದೆ, ವಿಶ್ವ, ದೇಶ, ರಾಜ್ಯಗಳ ರಾಷ್ಟ್ರೀಯ ಕಲ್ಪನೆ ಹಾಗೂ ಪ್ರಜ್ಞೆಯಿಂದ ಪ್ರತ್ಯೇಕ ಸ್ಥಳೀಯತೆ ಹೊಂದಿರುತ್ತದೆ. 'ಐತಿಹ್ಯ'(ಲೆಜೆಂಡ್) ಪದ ಲ್ಯಾಟಿನ್[೧] ಮೂಲದ್ದು. ಜನಪದರು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಪೌರಾಣಿಕ ಅಥವಾ ಇತಿಹಾಸದ ಘಟನೆಗಳನ್ನು ತಮ್ಮದೇ ಶೈಲಿಯಲ್ಲಿ ಗುರುತಿಸುವುದಕ್ಕೆ ಐತಿಹ್ಯ ಎನ್ನುತ್ತಾರೆ. ಪರಂಪರೆಯಿಂದ ಬಂದ ಐತಿಹ್ಯಗಳು ವರ್ತಮಾನ ಮತ್ತು ಭವಿಷ್ಯತ್ತಿಗೆ ಮುಂದುವರೆಯುತ್ತವೆ. ಐತಿಹ್ಯಗಳಲ್ಲಿ ಸ್ಥಳೀಯ ವಿವರಣಾತ್ಮಕ ಮತ್ತು ಚಾರಿತ್ರಿಕ ಐತಿಹ್ಯಗಳೆಂಬ ವಿಧಗಳಿವೆ. ವ್ಯಕ್ತಿ, ಸ್ಥಳ ಮತ್ತು ಘಟನಾ ಐತಿಹ್ಯಗಳು ಚರಿತ್ರೆಗೆ ಹತ್ತಿರವಾಗಿರುತ್ತವೆ. ಸ್ಥಳೀಯವಾಗಿ ದೊರೆಯುವ ಐತಿಹ್ಯಗಳಿಂದ ಚರಿತ್ರೆ ಅಧ್ಯಯನದ ತೊಡಕುಗಳನ್ನು ನಿವಾರಿಸಿಕೊಳ್ಳಬಹುದಾಗಿದೆ. ಇತ್ತೀಚೆಗೆ ಐತಿಹ್ಯಗಳ ಬಳಕೆ ಮತ್ತು ಉಪಯುಕ್ತತೆಯಿಂದಾಗಿ ಮೌಖಿಕ ಚರಿತ್ರೆಯ ಬಗೆಗೆ ಹೆಚ್ಚಿನ ಒಲವು ಪ್ರಕಟವಾಗುತ್ತಿದೆ.

ಭಾರತೀಯ ಸಂಸ್ಕೃತಿಯಲ್ಲಿ ನಂಬಿಕೆ, ಸಂಪ್ರದಾಯ, ಆಚರಣೆಗಳು ಮತ್ತು ದೈವಿಕತೆ ಹಾಸುಹೊಕ್ಕಾಗಿರುವುದನ್ನು ಕಾಣುತ್ತೇವೆ. ಪ್ರತಿಯೊಂದು ಪ್ರದೇಶದಲ್ಲಿ ಅನೇಕ ಐತಿಹ್ಯಗಳನ್ನೊಳಗೊಂಡ ಕಥೆಗಳು ಕಂಡುಬರುವುದು ಸರ್ವೇಸಾಮಾನ್ಯ. ಜನಪದರು ಒಂದೊಂದು ಕಲ್ಲಿಗೂ ಒಂದೊಂದು ಕಥೆ ಹೆಣೆದಿದ್ದಾರೆ. ಇಂತಹ ಐತಿಹ್ಯಗಳು ಇತಿಹಾಸದ ವಿಕೃತಗೊಂಡ ಮುರಿದ ಚೂರುಗಳಾಗಿ ಚರಿತ್ರೆಯ ನಿರ್ಮಾಣಕ್ಕೆ ಸಹಾಯಕವಾಗುತ್ತವೆ. ಹೀಗಾಗಿ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಐತಿಹ್ಯಗಳು ಐತಿಹಾಸಿಕ ಮಹತ್ವ ಪಡೆಯುತ್ತವೆ. ಇತಿಹಾಸದ ಅಧ್ಯಯನದಲ್ಲಿ ಐತಿಹ್ಯಗಳು ಮೈಲುಗಲ್ಲುಗಳಾಗಿವೆ. ಒಬ್ಬ ಚರಿತ್ರೆಕಾರ ಸಂದಿಗ್ಧ ಸ್ಥಿತಿಯಲ್ಲಿದ್ದಾಗ ಐತಿಹ್ಯಗಳು

ಒಂದೊಂದು ಸಲ ಸ್ಪಷ್ಟವಿಲ್ಲದಿದ್ದರೂ ಅಸ್ಪಷ್ಟ ಬೆಳಕು ಚೆಲ್ಲಿ ಸಂಶೋಧನೆಗೆ ನೆರವಾಗುತ್ತವೆ.[೨] ಜನರು ಭೌತಿಕ ಆಧಾರಗಳನ್ನು ಆಧರಿಸಿ ಕಲ್ಪಿತ ಕಥೆಗಳನ್ನು ಹೆಣೆದು ತಾವು ಹೇಳುತ್ತಿರುವುದು ಸತ್ಯವೆಂದು ನಂಬಿ ಅದನ್ನೇ ಬಿಂಬಿಸುತ್ತಾರೆ. ಇಂತವುಗಳನ್ನು ನಾವು ಐತಿಹ್ಯಗಳೆಂದು ಕರೆಯುತ್ತೇವೆ. ಐತಿಹ್ಯಗಳು ಪ್ರಾಚೀನವಾದ ಚಾರಿತ್ರಿಕ ಘಟನೆಗಳ ಪಳೆಯುಳಿಕೆ ಎಂಬಂತೆ ತೋರಿದರೂ ಅವೆಲ್ಲವೂ ಸತ್ಯಾಂಶಗಳಿಂದ ಕೂಡಿದವುಗಳಲ್ಲ. ಅವು ಚಾರಿತ್ರಿಕ, ಪೌರಾಣಿಕ ಹಾಗೂ ಕಾಲ್ಪನಿಕ ಅಂಶಗಳಿಂದ ಕೂಡಿ ಆಕರ್ಷಕವಾಗಿರುತ್ತವೆ. ಅವುಗಳಲ್ಲಿ ಚಾರಿತ್ರಿಕ ಹಾಗೂ ಕಲ್ಪಿತ ಅಂಶಗಳನ್ನು ಸೂಕ್ಷ್ಮವಾಗಿ ಬೇರ್ಪಡಿಸಿ ಚಾರಿತ್ರಿಕ ಸತ್ಯವನ್ನು ಗುರುತಿಸುವುದು ಒಂದಾದರೆ, ನಂಬಿಕೊಂಡಿರುವ ಚಾರಿತ್ರಿಕ, ಪೌರಾಣಿಕ ಹಾಗೂ ಕಾಲ್ಪನಿಕತೆಗಳನ್ನೊಳಗೊಂಡ ಐತಿಹ್ಯಗಳೇ ಸತ್ಯ ಇತಿಹಾಸವೆಂದು ನಂಬಿಕೊಂಡಿರುವುದು ಮತ್ತೊಂದಾಗಿದೆ. ಹೀಗಾಗಿ ಮೊದಲನೆಯದು ಶಿಷ್ಟ ಇತಿಹಾಸವಾದರೆ, ಎರಡನೆಯದು ಮೌಖಿಕ ಇತಿಹಾಸವಾಗಿದೆ.[೩] ಪೌರಾಣಿಕ ವ್ಯಕ್ತಿಗಳೆನಿಸಿದ ರಾಮ, ಸೀತೆ, ಆಂಜನೇಯ, ಅರ್ಜುನ, ಭೀಮ, ಧರ್ಮರಾಯ, ಕುಂತಿ, ಪರಶುರಾಮ ಮುಂತಾದವರಿಗೆ ಸಂಬಂಧಿಸಿದಂತೆ ಹುಟ್ಟಿಕೊಂಡಿರುವ ಐತಿಹ್ಯಗಳು ಕರ್ನಾಟಕದಾದ್ಯಂತವೂ ಕಂಡುಬರುತ್ತವೆ. ಇವರು ಕರ್ನಾಟಕದ ಯಾವೊಂದು ಸ್ಥಳವನ್ನು ಸಂದರ್ಶಿಸದೆ, ಸ್ಪರ್ಶಿಸದೆ ಬಿಟ್ಟಿಲ್ಲವೆಂಬಂತೆ ಎಲ್ಲೆಡೆಯೂ ತಂಗಿ ಹೋದ ಗುರುತನ್ನು ಸೂಚಿಸುವ ಕಥೆಗಳನ್ನು ಕಟ್ಟಿ ಹೇಳುವುದುಂಟು.[೪]

ಐತಿಹ್ಯಗಳನ್ನು ವಸ್ತುವಿನ ದೃಷ್ಟಿಯಿಂದ ಪ್ರಧಾನವಾಗಿ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ಎಂದು ಮೂರು ಬಗೆಯಲ್ಲಿ ವಿಂಗಡಿಸಬಹುದು. ಒಂದೊಂದು ವಸ್ತುವಿಗೆ ಸಂಬಂಧಿಸಿದಂತೆ ಹುಟ್ಟಿಕೊಂಡಿರುವ ಕಥೆಗಳು ಸಂಪೂರ್ಣವಾಗಿ ಆಧಾರರಹಿತವಾದುವುಗಳಾಗಿರದೆ ವಾಸ್ತವಿಕಾಂಶದ ಜೊತೆಗೆ ಕಾಲ್ಪನಿಕಾಂಶಗಳಿಂದ ಕೂಡಿದ್ದು ಆಕರ್ಷಕವಾಗಿರುತ್ತವೆ. ಐತಿಹ್ಯಗಳನ್ನು ಸ್ಥಳೀಯ ಹಾಗೂ ಸಂಚಾರಿ ಎಂದು ವಿಂಗಡಿಸಬಹುದು. ಸ್ಥಳೀಯ ಐತಿಹ್ಯಗಳು ಗೊತ್ತಾದ ಸ್ಥಳವೊಂದಕ್ಕೆ ಸೀಮಿತವಾಗಿದ್ದು, ನಿರ್ದಿಷ್ಟ ಸ್ಥಳವೊಂದರ ವೈಶಿಷ್ಟ್ಯಗಳನ್ನು ಬಣ್ಣಿಸುತ್ತವೆ. ಅಲ್ಲದೆ, ಅಂಥ ಸ್ಥಳವೊಂದರ ಸಂಪ್ರದಾಯ ಕಾಯ್ದುಕೊಂಡು ಬರುವ ಕಥೆ ಹೊಂದಿರುತ್ತವೆ.

ರಾವಣ ಬಲವಂತವಾಗಿ ಸೀತೆಯನ್ನು ಆಕಾಶ ಮಾರ್ಗದಲ್ಲಿ ಕದ್ದೊಯ್ಯುವಾಗ ಆಕೆಯ ಸೀರೆಯ ಸೆರಗು ಜಾರಿ ಬೆಟ್ಟದ ತುದಿಯನ್ನು ಸವರಿಕೊಂಡು ಹೋಯಿತು. ಆ ಗುರುತು ಈಗಲೂ ಹಾಗೆಯೇ ಉಳಿದಿದೆ ಎಂಬ ಐತಿಹ್ಯ ತುಮಕೂರು ಜಿಲ್ಲೆಯ ಸಿದ್ಧಗಂಗಾ ಕ್ಷೇತ್ರದ ಬಳಿಯಿರುವ ರಾಮದೇವರ ಬೆಟ್ಟದ ತುದಿಯಲ್ಲಿ ಕಾಣುವ ಸೆರಗಿನಾಕಾರದ ಪಟ್ಟಿ ಈಗಲೂ ಉಳಿದುಬಂದಿದೆ. ಹಂಪೆಯ ಬಳಿ ಬಂಡೆಯೊಂದರ ಮೇಲೆ ಸೀರೆಯನ್ನು ಒಣಗಿ ಹಾಸಿದಂತೆ ಕಾಣುವ ಜಾಗವೊಂದಕ್ಕೆ, ಸೀತಾದೇವಿ ಮಡಿಯುಟ್ಟು ಒಣಗಲು ಹಾಕಿದ ಸೀರೆಯ ಗುರುತು ಎಂಬ ಐತಿಹ್ಯವಿದೆ. ರಾಮಾದಿಗಳು ವನವಾಸದಲ್ಲಿ ತೊಡಗಿ ಸಂಚರಿಸುತ್ತ, ಮೇಲುಕೋಟೆ

ಬೆಟ್ಟದ ದಕ್ಷಿಣ ತುದಿಗೆ ಬಂದರೆಂದೂ ಅಲ್ಲಿಗೆ ಬರುವಷ್ಟರಲ್ಲಿ ಸೀತಾದೇವಿ ಬಾಯಾರಿಕೆಯಿಂದ ಬಳಲಿದಳು. ಲಕ್ಷ್ಮಣ ಆಗ ಬಂಡೆಯೊಂದರ ಮೇಲೆ ಬಾಣ ಪ್ರಯೋಗ ಮಾಡಿ ನೀರು ಬರಿಸಿದನೆಂದೂ ಬಾಣಾಘಾತಕ್ಕೆ ಪಕ್ಕದ ಬಂಡೆಯೂ ಬಾಯಿ ಬಿಟ್ಟಿತೆಂದೂ ನಂಬುವವರಿದ್ದಾರೆ. ಇಂದಿಗೂ ಪವಿತ್ರ ಸ್ಥಳವೆಂದು ಭಾವಿಸಿ ಜನ ಸಂದರ್ಶಿಸುವುದುಂಟು. ಸಮುದ್ರಕ್ಕೆ ಸೇತುವೆ ಕಟ್ಟಲು ಕಲ್ಲು ಬಂಡೆಗಳನ್ನು ಸಾಗಿಸುತ್ತಿದ್ದಾಗ ಆಂಜನೇಯನ ಕೈಯಿಂದ ಜಾರಿದ ಕಲ್ಲು ಎಂದು ತೋರಿಸುವ ಬಂಡೆಯೊಂದು ಹಾಸನ ಜಿಲ್ಲೆಯ ಸಾಲಿಗ್ರಾಮದ ಸಮೀಪದಲ್ಲಿದೆ. ಇದನ್ನು ಆಂಜನೇಯನ ಕಲ್ಲೆಂದೇ ಜನ ಕರೆಯುತ್ತಾರೆ. ಹೊಸಬರ ಕಣ್ಣಿಗೆ ಕಲ್ಲಾಗಿ ಕಾಣುವ ವಸ್ತು ಜನಪದರ ಕಣ್ಣಿಗೆ ಯಾವುದೋ ಮಹತ್ಕಥೆಯನ್ನು ಸಾರುವ, ಮಹಾನ್‌ವ್ಯಕ್ತಿಯ ಅಪೂರ್ವ ಸಾಹಸ ಕಥೆಯನ್ನು ಬಣ್ಣಿಸುವ, ನೀತಿಯನ್ನೊ ಸತ್ಯವನ್ನೊ ಸಾರುವ ಸಜೀವ ವಸ್ತು ಗಳಾಗಿರುತ್ತವೆ.[೫]

ಸಾಮಾಜಿಕ ಐತಿಹ್ಯಗಳು ಅತ್ಯಂತ ಆಕರ್ಷಕವಾಗಿರುತ್ತವೆ.[೬] ಸತ್ಯ, ಧರ್ಮ, ನ್ಯಾಯ, ನೀತಿ, ತ್ಯಾಗ ಮೊದಲಾದವುಗಳ ಮಹಿಮೆಯನ್ನು ವಿಶೇಷವಾಗಿ ಬೋಧಿಸುವಂತಿರುವ ಒಂದೊಂದು ವಸ್ತು ಒಂದೊಂದು ನೆಲೆಯನ್ನೂ ತೋರಿಸಿ ಅದಕ್ಕೆ ಸಂಬಂಧಿಸಿದಂತೆ ಹೇಳುವ ಕಥೆಗಳು ನಮ್ಮ ಕುತೂಹಲವನ್ನು ಕೆರಳಿಸುತ್ತವೆ. ಯದುಗಿರಿಯ ಬಳಿಯಿರುವ ಅಕ್ಕ ತಂಗಿಯರ ಕೊಳಗಳ ನೀರು, ಒಂದರಲ್ಲಿ ಸಿಹಿಯಾಗಿಯೂ ಮತ್ತೊಂದರಲ್ಲಿ ಉಪ್ಪಾಗಿಯೂ ಇರುವುದಕ್ಕೆ ಅವರು ಕೊಡುವ ಕಾರಣ ನೀತಿಬೋಧಕವಾದುದು. ಅಕ್ಕ ಪ್ರೀತಿಯಿಂದ ಜನೋಪಕಾರ ದೃಷ್ಟಿಯಿಂದ, ಎಷ್ಟೇ ಹಣ ಖರ್ಚಾದರೂ ಲೆಕ್ಕಿಸದೆ ಕೊಳವನ್ನು ಕಟ್ಟಿಸಿದಳು, ಹಾಗಾಗಿ ಅದರಲ್ಲಿ ಸಿಹಿನೀರು ಬಂದಿತ್ತು. ಆದರೆ ಅದರ ಪಕ್ಕದಲ್ಲಿಯೇ ತಂಗಿ ಅಕ್ಕನ ಮೇಲಿನ ಪೈಪೋಟಿಯಿಂದ, ಅಷ್ಟೇ ಹಣ ಸುರಿದು ಕೊಳ ಕಟ್ಟಿಸಿ ಎಷ್ಟೊಂದು ಹಣ ಖರ್ಚಾಯಿತು ಎಂದು ಲೆಕ್ಕ ಹಾಕಿದ್ದರಿಂದ ಉಪ್ಪುನೀರಾಯಿತೆಂದೂ ಹೇಳುತ್ತಾರೆ. ಮಾಡುವ ಕೆಲಸದಲ್ಲಿ ನಿಷ್ಠೆ, ಮನಃ ಶುದ್ಧಿ ಇರಬೇಕೆಂಬುದನ್ನು ಈ ಕಥೆ ಹೇಳುತ್ತದೆ. ಕಟ್ಟಿದ ಕೆರೆ, ಕಟ್ಟೆ, ಕೋಟೆಗಳು ಸ್ಥಿರವಾಗಿ ನಿಲ್ಲಲು ತಮ್ಮನ್ನು ತಾವೇ ಬಲಿ ಕೊಟ್ಟುಕೊಂಡ ಪ್ರಸಂಗಗಳು ದೊರೆಯುತ್ತವೆ. ಕೆರೆಗೆ ಹಾರ ಎಂಬ ಜನಪದ ಕಥೆಯನ್ನು ಇಲ್ಲಿ ನೆನೆಯಬಹುದು. ಸೋಮವಾರಪೇಟೆ ಮತ್ತು ನಾಗಮಂಗಲದ ಬಳಿಯಿರುವ ಸೂಳೇಕೆರೆಗೆ ಸಂಬಂಧಿಸಿದಂತೆ ಹೇಳುವ ಒಂದು ಕಥೆ ಕೂಡ ರೋಮಾಂಚಕರ. ರಾಜನೊಬ್ಬ ಕಟ್ಟಿಸುತ್ತಿದ್ದ ಕೆರೆಯ ಏರಿ ಎಷ್ಟು ಪ್ರಯತ್ನಪಟ್ಟರೂ ನಿಲ್ಲದಿದ್ದಾಗ, ಕೊನೆಗೆ ರಾಜನ ಸೂಳೆ ತಾನೇ ಬಲಿಯಾಗಿ ಕೆರೆಯನ್ನು ಉಳಿಸಿದಳಂತೆ. ಸ್ಥಳೀಯ ಐತಿಹ್ಯವಾಗಲಿ, ಸಂಚಾರಿ ಐತಿಹ್ಯವಾಗಲಿ ವಿಶ್ವವ್ಯಾಪ್ತಿಯಾದುದು. ಅಲ್ಲಲ್ಲಿಯ ನಂಬಿಕೆ, ಧಾರ್ಮಿಕ ಶ್ರದ್ಧೆ, ಸಂಪ್ರದಾಯಗಳ ಪ್ರಾಬಲ್ಯಗಳಿಗನುಗುಣವಾಗಿ ಇವುಗಳ ಪ್ರಮಾಣವನ್ನು

ಕಾಣಬಹುದು. ಇಂಥ ಐತಿಹ್ಯಗಳ ವಾಸ್ತವಿಕಾಂಶ ಏನೇ ಇರಲಿ ಅವು ನಮ್ಮ ಗಮನ ಸೆಳೆಯುವುದು ಅವುಗಳ ಅದ್ಭುತ ಕಲ್ಪನಾ ಸಾಮರ್ಥ್ಯದಿಂದ ಎನ್ನಬಹುದು.

ಪಿರಿಯಾಪಟ್ಟಣದ ಮೊದಲ ಹೆಸರು ಸಿಂಹಪಟ್ಟಣ(ಸಿಂಗಪಟ್ಟಣ). ಈ ಪಟ್ಟಣಕ್ಕೆ ಒಂದು ಐತಿಹ್ಯವಿದೆ. ಚಂಗಾಳ್ವ ಅರಸನೊಬ್ಬನು ಚೋಳರ ಕೋಪಕ್ಕೆ ತುತ್ತಾದಾಗ, ಸೈನಿಕರು ಅವನನ್ನು ಬಂಧಿಸಿ ಚೋಳರಾಜನು ಬೀಡು ಬಿಟ್ಟಿದ್ದ ಸ್ಥಳಕ್ಕೆ ಎಳೆದೊಯ್ಯುತ್ತಿದ್ದಾಗ, ಮಾರ್ಗಾಯಾಸವನ್ನು ಪರಿಹರಿಸಿಕೊಳ್ಳಲು ಎಲ್ಲರೂ ಒಂದೆಡೆ ತಂಗಿದ್ದರು. ಚಂಗಾಳ್ವ ಅರಸನಿಗೆ ಜೋಂಪು ಹತ್ತಿದಂತಾಗಿ ಮೊಣಕೈಯನ್ನು ತಲೆಗೆ ಆಸರೆಯಿಟ್ಟುಕೊಂಡು ಹಾಗೆಯೇ ನೆಲದಲ್ಲಿ ಒರಗಿಕೊಂಡಾಗ ಅವನಿಗೊಂದು ದಿವ್ಯ ಸ್ವಪ್ನವಾಯಿತು. ಆ ಕನಸಿನಲ್ಲಿ ಮಸಣಿಕಮ್ಮ ದೇವತೆ ಕಾಣಿಸಿಕೊಂಡು ನಾನು ಈ ಸ್ಥಳದಲ್ಲಿ ನೆಲೆಗೊಂಡಿರುವೆ. ನೀನು ನನ್ನನ್ನು ನಂಬಿ ನನಗೊಂದು ದೇವಾಲಯವನ್ನು ಕಟ್ಟಿಸಿ ನನ್ನನ್ನು ನಿನ್ನ ಮನೆದೇವತೆಯನ್ನಾಗಿ ಸ್ವೀಕರಿಸುವುದಾದರೆ ನಿನ್ನನ್ನು ಈ ಬಂಧನದಿಂದ ಪಾರುಮಾಡುತ್ತೇನೆ ಎಂದಂತಾಯಿತು. ಚಂಗಾಳ್ವನು ಥಟ್ಟನೆ ಎಚ್ಚರಗೊಂಡು ಶತ್ರುಗಳಿಗೆ ತಿಳಿಯದ ಹಾಗೆ ದೇವತೆಯ ಆದೇಶದಂತೆ ನಡೆದುಕೊಳ್ಳುವುದಾಗಿ ಹರಕೆಯನ್ನು ಕಟ್ಟಿಕೊಂಡನು. ಹಾಗೆ ಹರಕೆಯನ್ನು ಕಟ್ಟಿಕೊಂಡ ಕೂಡಲೇ ಒಂದು ಮಾಯಾಸಿಂಹವು ಕಾಣಿಸಿಕೊಂಡು ಸೈನಿಕರ ಮೇಲೆರಗಿತು. ಈ ಅನಿರೀಕ್ಷಿತ ಆಘಾತದಿಂದ ಸೈನಿಕರು ದಿಕ್ಕಪಾಲಾಗಿ ಓಡಿಹೋದರು. ಚಂಗಾಳ್ವನು ವಿಸ್ಮಯದಿಂದ ನೋಡನೋಡುತ್ತಿದ್ದಂತೆಯೇ ಸಿಂಹವು ಅದೃಶ್ಯವಾಯಿತು. ಚಂಗಾಳ್ವನು ದೇವಿಯ ಕೃಪೆಯನ್ನು ಭಕ್ತಿಯಿಂದ ಸ್ಮರಿಸುತ್ತಾ ಸಿಂಹವು ಬಂದು ತನ್ನನ್ನು ರಕ್ಷಿಸಿದ ಸ್ಥಳದಲ್ಲಿ ಒಂದು ಕೋಟೆಯನ್ನು ಕಟ್ಟಬೇಕೆಂದು ನಿರ್ಧರಿಸಿದನು. ಅವನ ನಿರ್ಧಾರ ಕಾರ್ಯಗತವಾಗಿ ಆ ಕೋಟೆ ಊರನ್ನು ಸಿಂಹಪಟ್ಟಣವೆಂದು ಕರೆದನು. ಕ್ರಮೇಣ ಸಿಂಹಪಟ್ಟಣ ಸಿಂಗಪಟ್ಟಣವಾಯಿತು.[೭] ಮತ್ತೊಂದು ಐತಿಹ್ಯದ ಪ್ರಕಾರ ಚಂಗಾಳ್ವ ನಂಜುಂಡರಸನೆಂಬ ದೊರೆಯು ಕುದುರೆಯ ಮೇಲೆ ಕುಳಿತು ಸಿಂಗಪಟ್ಟಣದ ಮೂಲಕ ಹನಗೋಡಿಗೆ ಹೋಗುತ್ತಿದ್ದಾಗ, ಗರಿಕೆಯನ್ನು ತಿನ್ನುತ್ತಿದ್ದ ಮೊಲಗಳು, ಕುದುರೆಯನ್ನು ಅಟ್ಟಿಸಿಕೊಂಡು ಬಂದು ಅದರ ಕಾಲನ್ನು ಕಚ್ಚಿ ನಿಲ್ಲಿಸಿದ್ದನ್ನು ಕಂಡ ದೊರೆಯು ಇದು ಗಂಡುಭೂಮಿಯೆಂದು ತಿಳಿದು ಅಲ್ಲಿ ಮಣ್ಣಿನ ಕೋಟೆ ಕಟ್ಟಿಸಿದನಂತೆ.[೮]

ಕಣಗಾಲು ಕಣ್ವ ಋಷಿಗಳ ಆಶ್ರಮವಿದ್ದ ಸ್ಥಳ. ಹತ್ತಿರದ ರಾಮನಾಥಪುರದ ಕಾವೇರಿ ನದಿಯ ಮಧ್ಯಭಾಗದಲ್ಲಿರುವ ಗಾಯತ್ರಿ ಶಿಲೆ ವಿಶ್ವಾಮಿತ್ರ ಋಷಿ ತಪಸ್ಸು ಮಾಡಿದ ಸ್ಥಳ. ಮೇನಕೆ ಸಮಾಗಮದಿಂದ ಹುಟ್ಟಿದ ಹೆಣ್ಣು ಮಗುವನ್ನು ಕಣ್ವ ಋಷಿಗಳು ತಂದು ಸಾಕಿ ಸಲಹಿದ ಪ್ರದೇಶವೇ ಇಂದಿನ ಕಣಗಲು ಎಂಬ ಐತಿಹ್ಯವಿದೆ.[೯] ಪಾರ್ವತಿ-ಪರಮೇಶ್ವರ ವಿಹಾರಾರ್ಥವಾಗಿ ಬರುತ್ತಿರುವಾಗ ಪಾರ್ವತಿಗೆ ಬೆಟ್ಟದಪುರದ ಬಳಿ ಬಾಯಾರಿಕೆಯಾಯಿತಂತೆ.

ಆಗ ಈಶ್ವರ ತ್ರಿಶೂಲದಿಂದ ಈಚಲು ಮರದ ಗರಿಗಳ ಬುಡಕ್ಕೆ ಚುಚ್ಚಿ ಅಲ್ಲಿ ಹೊರಹೊಮ್ಮಿದ ಹಾಲನ್ನು ಪಾರ್ವತಿಗೆ ಕುಡಿಸಿದನಂತೆ. ಹೀಗೆ ಈಶ್ವರ ಪಾರ್ವತಿಗೆ ನೀರನ್ನು ಕುಡಿಸಿದ ಸ್ಥಳವೇ ಈಚೂರಂತೆ.[೧೦] ಶ್ರೀರಾಮ, ಲಕ್ಷ್ಮಣ, ಸೀತೆಯರು ವನವಾಸ ನಿಮಿತ್ತ ದಕ್ಷಿಣ ಭಾರತದಲ್ಲೆಲ್ಲಾ ಸಂಚರಿಸಿ ಚುಂಚನಕಟ್ಟೆಗೆ ಬಂದು ಕೆಲಕಾಲ ತಂಗಿದ್ದರು. ಈ ವಿಷಯ ತಿಳಿದ ಕೆಲವು ಜನರು ರಾಮನನ್ನು ತಮ್ಮ ಊರಿಗೂ ಬರುವಂತೆ ಪ್ರಾರ್ಥಿಸಿದರಂತೆ. ಜನತೆಯ ಕೋರಿಕೆ ಈಡೇರಿಸುವ ಉದ್ದೇಶದಿಂದ ಶ್ರೀರಾಮ ಅವರ ಊರಿಗೆ ಬಂದನು. ರಾಮನನ್ನು ನೋಡಲು ಆ ಸ್ಥಳಕ್ಕೆ ಸುತ್ತಲಿನ ಹಳ್ಳಿಯ ಜನರೆಲ್ಲರೂ ಬಂದರು. ರಾಮ ಬಂದ ಊರು ಪವಿತ್ರವಾಯಿತು. ರಾಮ ಬಂದಿದ್ದ ಊರು ರಾಮಬಂದೂರಾಗಿ ಈಗ ರಾವಂದೂರಾಗಿದೆ.[೧೧] ಒಂದು ಸಲ ಲಕ್ಷ್ಮಣನು ನೇರಳೆ ಹಣ್ಣುಗಳನ್ನು ಉದುರಿಸಲೆಂದು ಮರವೇರಿ ಕೊಂಬೆಯೊಂದನ್ನು ಜೋರಾಗಿ ಅಲ್ಲಾಡಿಸಿದಾಗ ಜೇನುಗೂಡಿನಿಂದ ಜೇನುಹುಳುಗಳು ಮೇಲೆದ್ದಾಗ ಬಿದ್ದ ಹಣ್ಣನ್ನು ತೆಗೆದುಕೊಳ್ಳುತ್ತಿದ್ದಾ ಅತ್ತಿಗೆಯನ್ನು ಕಚ್ಚಬಹುದೆಂಬ ಆತಂಕದಿಂದ ಅತ್ತಿಗೆ ಓಡು ಅತ್ತಿಗೆ ಓಡು ಎಂದು ಲಕ್ಷ್ಮಣನು ಕೂಗಿದನು ಆ ಸ್ಥಳವೇ ಅತ್ತಿಗೋಡು[೧೨] ಆಗಿದೆ.

ರಾಮ, ಲಕ್ಷ್ಮಣ ಮತ್ತು ಸೀತೆ ವನವಾಸದಲ್ಲಿದ್ದಾಗ ದಶರಥ ತೀರಿಕೊಂಡ. ಈ ಸುದ್ದಿ ತಿಳಿದು ದುಃಖಗೊಂಡ ಸಂದರ್ಭದಲ್ಲಿ ಕೊಡಗಿನ ಭಾಗದ ಕೆಲವು ಹಿರಿಯರು ಬಂದು ಅವರಿಗೆ ಸಮಾಧಾನ ಹೇಳಿ ಸತ್ತ ತಂದೆಗೆ ತಿಥಿ ಮಾಡಲು ಮತಿ ತೋರಿದರಂತೆ. ಮುಂದೆ ಈ ಸ್ಥಳ ತಿತಿಮತಿಯೆಂದು ಹೆಸರಾಯಿತು. ತಿಥಿಗೆ ಬೇಕೆಂದು ಬಿದಿರಕ್ಕಿ ಸಂಗ್ರಹಿಸಿದ ಲಕ್ಷ್ಮಣ ಬಿದಿರಕ್ಕಿಯನ್ನು ಮರೆತು ಬಂದ ಊರು ಮರೆತೂರಾಯಿತಂತೆ. ತಿಥಿ ಮಾಡಿದ ಶ್ರೀರಾಮನು ತಂದೆಯ ಹೆಸರಿನಲ್ಲಿ ದಶರಥೇಶ್ವರ ಲಿಂಗವನ್ನು ಈ ಬೆಟ್ಟದ ಮೇಲೆ ಪ್ರತಿಷ್ಠಾಪಿಸಿ ಗುಡಿ ಕಟ್ಟಿಸಿದನಂತೆ. ಪೂಜಾ ಸಮಯದಲ್ಲಿ ದಶರಥೇಶ್ವರಲಿಂಗ ಒಳಗಿನಿಂದ ಮಾತನಾಡುತ್ತಿದ್ದನಂತೆ. ಹೀಗಿರುವಾಗ ಒಂದು ದಿನ ಸೀತೆ ತಾನು ಕಂಡ ಆಶ್ಚರ್ಯಕರವಾದ ಚಿನ್ನದ ಜಿಂಕೆಯನ್ನು ತರಲು ರಾಮನನ್ನು ಕಳುಹಿಸಿದಳು. ರಾಮನಿಗೆ ಸಹಾಯಾರ್ಥವಾಗಿ ಲಕ್ಷ್ಮಣ ಅವನ ಹಿಂದೆ ಹೋದನು. ಆ ಸಂದರ್ಭದಲ್ಲಿ ರಾವಣನು ತಪಸ್ವಿಯ ವೇಷದಲ್ಲಿ ಬಂದು ಭಿಕ್ಷೆ ಕೊಡುವಂತೆ ಸೀತೆಯನ್ನು ಪೀಡಿಸಿದ. ದಶರಥೇಶ್ವರ ಲಿಂಗವು ಹೋಗಬೇಡ ಹೋಗಬೇಡ ಎಂಬ ತಿಳುವಳಿಕೆ ಮಾತು ಹೇಳುತ್ತಿದ್ದರೂ ತಪಸ್ವಿಯ ಆಗ್ರಹಕ್ಕೆ ತುತ್ತಾಗಬಾರದೆಂದು ಭಿಕ್ಷೆ ನೀಡಲು ಹೋದ ಸೀತೆ ರಾವಣನ ಕೈಗೆ ಸಿಕ್ಕಿಬಿದ್ದಳು. ಆ ಕೂಡಲೇ ಅವಳು ಭಯಗೊಂಡು ಮಾವನನ್ನು ಸಹಾಯಕ್ಕೆ ಕರೆದಳು. ಆದರೆ ತನ್ನ ಮಾತನ್ನು ಧಿಕ್ಕರಿಸಿ ಹೋದ ಅವಳಿಗೆ ಮಾವನಿಂದ ಮರುತ್ತರ ಬರಲೇ ಇಲ್ಲ. ಹೀಗೆ ಸೀತಾಪಹರಣವಾದ ಸ್ಥಳವೇ ಮಾವುಕಲ್ಲಯ್ಯನ ಬೆಟ್ಟ ಎಂದು ಹೇಳುತ್ತಾರೆ. ಇಂದಿಗೂ ಇಲ್ಲಿ ಸೀತೆಯ ಮಡು, ಸೀತೆಯ ಸೆರಗು ಎಂಬ ಸ್ಥಳಗಳಿವೆ.

ಮಾವ ಮಾತಾಡದೆ ಕಲ್ಲಾದ ಕಾರಣ ದಶರಥೇಶ್ವರನಿಗೆ ಮಾವುಕಲ್ಲಯ್ಯ ಎಂದು ಹೆಸರಾಯಿತಂತೆ. ಕುಂತಿಯು ಈ ನೆಲದ ಮಗಳಾದ್ದರಿಂದ ಅವರೆಗಿಡ ಹೂವಾಗಿ ಚೊಟ್ಟಾಗಿ ಫಲ ಬಿಡುವ ದೀಪಾವಳಿಯ ಕಾರ್ತಿಕಮಾಸದಲ್ಲಿ ಕುಂತಿ ಪೂಜೆ ಮಾಡುವ ನಂಬಿಕೆ ಅಥವಾ ಪದ್ಧತಿ ರೂಢಿಯಲ್ಲಿದೆ.[೧೩]

ಶಿವಭಕ್ತ ಚೋಳರಾಜ ಸತ್ಯಧರ್ಮ ನ್ಯಾಯನೀತಿಗಳಿಂದ ರಾಜ್ಯವಾಳುತ್ತಿದ್ದ. ಅವನ ಆಸ್ಥಾನಕ್ಕೆ ಬಂದ ಬ್ರಾಹ್ಮಣಯತಿಯ ಬಳಿ ಲೋಹಗಳನ್ನು ಚಿನ್ನವಾಗಿ ಮಾರ್ಪಡಿಸುವ ವಿದ್ಯೆ ಅವನಲ್ಲಿತ್ತು. ಅವನು ಕಾಶಿಗೆ ಹೋಗಿ ಬರುವವರೆಗೆ ರಕ್ಷಿಸಿಡಲು ಚೋಳರಾಜನಿಗೆ ಕೊಟ್ಟ. ಚೋಳರಾಜನು ಆ ವಿದ್ಯೆಯನ್ನು ತನ್ನದಾಗಿ ಮಾಡಿಕೊಳ್ಳಬೇಕೆಂದು ಅತಿಯಾಸೆ ಪಟ್ಟು, ಸಿದ್ದಿರಸದ ಪಾತ್ರೆ ಕೇಳಲು ಬಂದ ಬ್ರಾಹ್ಮಣಯತಿಯ ತಲೆ ಕತ್ತರಿಸಿದ. ಆಗ ಆ ಬ್ರಾಹ್ಮಣನು ಪಿಶಾಚಿಯಾಗಿ ಚೋಳನ ಹೆಗಲಿಗಂಟಿಕೊಂಡು, ಕೊಡುತ್ತಿದ್ದ ಬಾಧೆಯನ್ನು ತಾಳಲಾರದೆ ಚೋಳರಾಜನು ಮಾನಸಿಕ ನೋವಿನಿಂದ ನರಳುತ್ತಿದ್ದ. ಅದರಿಂದ ತಪ್ಪಿಸಿಕೊಳ್ಳಲು ಉಪಾಯ ಕೇಳಿದಾಗ ಲಕ್ಷ ಶಿವಲಿಂಗ ಪ್ರತಿಷ್ಠಾಪಿಸಿ ಶಿವದೇವಾಲಯ ಕಟ್ಟಿಸಿದರೆ, ಪಿಶಾಚಿಯ ಕಾಟದಿಂದ ಮುಕ್ತನಾಗಬಹುದೆಂಬ ಸಲಹೆ ಇದ್ದಿತ್ತು. ಈ ಸಲಹೆಯಂತೆ ಚೋಳರಾಜ ಹೋದ ಕಡೆಯಲ್ಲೆಲ್ಲಾ ಗುಡಿ ಕಟ್ಟಿಸಿ ಲಿಂಗ ಪ್ರತಿಷ್ಠಾಪನೆ ಮಾಡುತ್ತಿದ್ದ. ರಾಜನು ದೇವಾಲಯದೊಳಕ್ಕೆ ಹೋಗುವಾಗ ಪಿಶಾಚಿ ಅವನ ಬೆನ್ನು ಬಿಟ್ಟು ಹೊರಗೆ ಕುಳಿತು ಕಾಯುತ್ತಿತ್ತು. ಅವನು ಪೂಜೆ ಮುಗಿಸಿ ಹೊರಕ್ಕೆ ಬಂದೊಡನೆ ಮತ್ತೆ ಹೆಗಲೇರುತ್ತಿತ್ತು. ಆದರೆ ತನ್ನ ಭಕ್ತನ ಕಷ್ಟವನ್ನು ನೋಡಲಾರದ ಶಿವ ಕನಸಿನಲ್ಲಿ ಕಾಣಿಸಿಕೊಂಡು ಗುಡಿಯ ಪ್ರವೇಶಕ್ಕೆ ಒಂದು ದ್ವಾರ, ನಿರ್ಗಮನಕ್ಕೆ ಒಂದು ಪ್ರತ್ಯೇಕ ದ್ವಾರ ಕಟ್ಟಿಸಲು ಹೇಳಿದ. ಅದರಂತೆ ದೇವಾಲಯ ಕಟ್ಟಿಸಿದ ರಾಜನು ಪೂರ್ವಾಭಿಮುಖವಾಗಿರುವ ದ್ವಾರದಿಂದ ಪ್ರವೇಶಿಸಿ, ದಕ್ಷಿಣಾಭಿಮುಖವಾಗಿರುವ ದ್ವಾರದಿಂದ ನಿರ್ಗಮಿಸಿದ. ಇತ್ತ ರಾಜ ಬರುವನೆಂದು ಕಾದು ಕಾದು ಸುಸ್ತಾದ ಪಿಶಾಚಿ ಅವನನ್ನು ಹುಡುಕಿಕೊಂಡು ಹೋಯಿತಂತೆ. ಹೀಗೆ ಚೋಳರಾಜನ ಕಷ್ಟಕ್ಕೆ ವೈದ್ಯನಾದ ಈಶ್ವರನೇ ಪಿರಿಯಾಪಟ್ಟಣದ ಕೋಟೆಯಲ್ಲಿರುವ ವೈದ್ಯೇಶ್ವರ, ವೈದ್ಯೇಶ್ವರನ ಕೃಪೆಗೆ ಪಾತ್ರನಾದ ಕರಿಕಾಲ ಚೋಳನು ಕಟ್ಟಿಸಿದ ಕೆರೆಯೇ ಇಂದಿನ ದೊಡ್ಡ ಕೆರೆ ಎಂದು ಹೇಳುವರು.[೧೪]

ಉತ್ತರ ದಿಕ್ಕಿನಿಂದ ದಕ್ಷಿಣದ ಕಡೆಗೆ ಬಂದ ಮಲೆಯ ಮಾದೇಶ್ವರ ಪಿರಿಯಾಪಟ್ಟಣ ತಾಲ್ಲೂಕಿನ ತಮ್ಮಡಿಹಳ್ಳಿ, ಅತ್ತಿಗೋಡು, ಪಿರಿಯಾಪಟ್ಟಣ, ಮುಂತಾದ ಕಡೆಗಳಲ್ಲಿ ಕೆಲಕಾಲ ತಂಗಿದ್ದಂತೆ ತಿಳಿದುಬರುತ್ತದೆ. ಪಿರಿಯಾಪಟ್ಟಣದ ಈರೇಗೌಡನು ಮಾದೇಶ್ವರನ ಹೆಸರಿನಲ್ಲಿ ಬಿಟ್ಟಿದ್ದ ಬಸವನನ್ನು ಕೊಂದು ನೂರೊಂದು ಪಾಲು ಮಾಡಿ, ಕೈಕಾಲು ತೊಳೆದುಕೊಂಡು ಬರಲು ಹತ್ತಿರದ ಹಳ್ಳದ ಕಡೆಗೆ ಹೊರಟರಂತೆ. ಈ ವಿಷಯ ಮಾದೇಶ್ವರನಿಗೆ ಅರಿವಾಗಿ

ಕೋಪದಿಂದ ದಿಟ್ಟಿಸಿದಾಗ ಬಸವನನ್ನು ಕೊಂದವನು ತಲೆಕೆಳಗಾಗಿ ಕಲ್ಲಾಗಿ ಹೋದ. ಬಸವನ ನೂರೊಂದು ಪಾಲು ಮಾಂಸದ ಚೂರುಗಳೆಲ್ಲ ನೂರೊಂದು ಲಿಂಗಗಳಾದವಂತೆ. ಹೀಗೆ ಮಾದೇಶ್ವರನು ಪಿರಿಯಾಪಟ್ಟಣದಲ್ಲಿ ನೂರೊಂದಯ್ಯ[೧೫] ಎಂಬ ಹೆಸರು ಪಡೆದಿರುವನು. ಇಂದಿಗೂ ಕಾರ್ತಿಕ ಮಾಸದಲ್ಲಿ ಜಾತ್ರೆ ಉತ್ಸವ ನಡೆಯುತ್ತಿದೆ. ಆದರೆ ಕ್ಷೇತ್ರಕಾರ್ಯದ ವೇಳೆಯಲ್ಲಿ ಕಂಡುಬಂದ ನೂತನ ಶಿಲಾಯುಗದ ನೆಲೆ ಎಂದು ಪತ್ತೆ ಮಾಡಲಾಗಿದೆ.

ಭದ್ರಬಾಹು ಕ್ಷಾಮಪೀಡಿತವಾದ ಉತ್ತರ ಭಾರತ ಬಿಟ್ಟು ಎಂಟು ಸಹಸ್ರ ಶಿಷ್ಯರೊಂದಿಗೆ ದಕ್ಷಿಣದತ್ತ ಹೊರಟು ಪುನ್ನಾಟರಾಜ್ಯಕ್ಕೆ ಬಂದ. ಈ ರಾಜ್ಯದ ರಾಜಧಾನಿ ಕೀರ್ತಿಪುರ. ಇದು ಇಂದಿನ ಹೆಗ್ಗಡದೇವನಕೋಟೆ ತಾಲ್ಲೂಕಿನ ಕಿತ್ತೂರು ಎಂದು ಗುರುತಿಸಲಾಗಿದೆ. ಹೀಗೆ ಕ್ರಿ.ಪೂ.ದಿಂದಲೇ ಪ್ರಾರಂಭವಾದ ಈ ಪ್ರದೇಶದ ಚಾರಿತ್ರಿಕ ಪ್ರಾಚಿನತೆಯನ್ನು ಕ್ರಿ.ಶ. ೪ನೆಯ ಶತಮಾನದಿಂದ ಕಾಣಬಹುದಾಗಿದೆ. ತಲಕಾಡಿನ ಗಂಗರು ಕ್ರಿ.ಶ. ೩೫೦ರಿಂದ ೧೦೫೦ರವರೆಗೆ ಈ ಪ್ರದೇಶವನ್ನು ಆಳಿದರೆಂಬುದುದಾಗಿದೆ. ಗಂಗರು ಮೂಲತಃ ಜೈನರೇ ಆಗಿದ್ದು ರಾಜ್ಯ ಸ್ಥಾಪನೆಗೆ ಸಿಂಹನಂದಿ ಜೈನಮುನಿ ಪ್ರೇರಕರಾಗಿದ್ದರು.[೧೬] ಪಿರಿಯಾಪಟ್ಟಣ ತಾಲ್ಲೂಕಿನ ಆನೆವಾಳುವಿನಲ್ಲಿ ಅನಂತನಾಥಸ್ವಾಮಿ ಬಸದಿ ಪಾಳು ಬಿದ್ದಿದೆ. ಪಾಳು ಬಸದಿಯ ಜಿನಬಿಂಬದ ಹಿಂಭಾಗದಲ್ಲಿ ಪ್ರಮಾದೀಚ ಫಾಲ್ಗುಣ ಶು.ದಶಮಿ ಭಾನುವಾರ ಅನಂತನ ಪ್ರತಿಮೆ ಎಂದಿರುವುದರಿಂದ ಇದು ಬಿಂಬಪ್ರತಿಷ್ಠೆಯಾದ ದಿನವಿರಬಹುದು. ಆನೆವಾಳದ ಚಿಕ್ಕಣ್ಣಗೌಡನ ಮಗ ಹೊನ್ನಣಗೌಡನು ಬಸದಿ ಕಟ್ಟಿಸಿದ ಎಂದಿದೆ. ಇದು ಸಾಧಾರಣ ಮಾರ್ಗಶಿರ ಶು.ಪಂಚಮಿ. ಇವನೇ ಬ್ರಹ್ಮದೇವನ ಪದ್ಮಾವತಿದೇವಿಯ ಗುಡಿಗಳನ್ನು ತನ್ನ ಮಗ ಬೊಮ್ಮಣ್ಣಗೌಡನಿಗೆ ಪುಣ್ಯವಾಗಲೆಂದು ಕಟ್ಟಿಸಿದನಂತೆ. ಇದು ಸುಮಾರು ಹದಿನೈದನೆಯ ಶತಮಾನದೆಂದು ಐತಿಹ್ಯವಿದೆ.[೧೭]

ಗಂಗರಸ ಎಂಬ ಪಾಳೆಗಾರ ಬೆಟ್ಟದ ತಪ್ಪಲಿಗೆ ಬಂದಾಗ ಅಲ್ಲಿ ಒಂದು ಮೊಲ ಆತನ ಮೇಲೆ ತಿರುಗಿ ಬಿದ್ದಿತು. ಅದರಿಂದ ಆಶ್ಚರ್ಯಚಕಿತನಾಗಿ ಇದು ಗಂಡುಭೂಮಿ ಎಂದು ತಿಳಿದು, ಅದನ್ನೇ ತನ್ನ ಮುಂದಿನ ರಾಜಧಾನಿಯನ್ನಾಗಿ ಮಾಡಿಕೊಂಡು ಆ ಊರಿಗೆ ಬೆಟ್ಟದಪುರ ಎಂದು ನಾಮಕರಣ ಮಾಡಿದನೆಂದು ಐತಿಹ್ಯವಿದೆ.[೧೮] ನಾಗಮಂಗಲ ತಾಲ್ಲೂಕಿನ ಲಾಳನ ಕೆರೆಯ ಶಂಭವರಾಯನ ವಂಶವು ಚಂಗಾಳ್ವರ ಒಂದು ಶಾಖೆಯೇ ಆಗಿದೆ. ಈ ವಂಶದವನೇ ಆದ ಚೆಂಬುರಾಯ ಪಿರಿಯಾಪಟ್ಟಣ ತಾಲ್ಲೂಕಿನ ಚಾಮರಾಯನಕೋಟೆ, ಸೂಳೆಕೋಟೆ, ಇಂದಿನ ಸುಶೀಲೆಕೋಟೆ, ಕೋಮಲಾಪುರ ಗ್ರಾಮಗಳ ಸ್ಥಾಪಕನೆಂಬ ಐತಿಹ್ಯವಿದೆ.[೧೯]

ಬೆಟ್ಟದಪುರ ಬೆಟ್ಟದ ಬಗ್ಗೆ ಒಂದು ಐತಿಹ್ಯವಿದೆ.[೨೦] ಇದರ ಪ್ರಕಾರ ಮಲ್ಲಯ್ಯ ಎಂಬ ರೈತ ರಾಗಿ ಬೆಳೆದು ಒಂದು ಗುಡ್ಡೆ ಹಾಕಿದ್ದ. ಆ ಸಮಯದಲ್ಲಿ ಇಲಿಯೊಂದು ಗುಡ್ಡ

ಹೊಕ್ಕಿತ್ತು. ಮಲ್ಲಯ್ಯ ಇಲಿ ಓಡಿಸಲು ಗುಡ್ಡ ಕಿತ್ತು ಮತ್ತೊಂದು ಕಡೆ ಸಾಗಿಸುತ್ತಾ ಹೋದಂತೆ ಇಲಿಯು ರೈತನಿಗೆ ಸಿಗಲೇ ಇಲ್ಲ. ಇದರಿಂದ ಭೂಮಿಯ ಮಣ್ಣನ್ನು ಮತ್ತು ರಾಗಿಯ ತೆನೆಯನ್ನು ರಾಶಿ ಹಾಕುತ್ತಾ ಹೋದ. ಅಂತಿಮವಾಗಿ ಇಲಿ ಹೊಡೆಯುವಲ್ಲಿ ಮಲ್ಲಯ್ಯ ವಿಫಲನಾದ. ಈ ರಾಶಿಯೇ ಬೆಟ್ಟವಾಯಿತೆಂದು ಹೇಳುವರು. ಮಲ್ಲಯ್ಯ ಊರಿನ ಅರಸನ (ಯಜಮಾನರ) ಗೋವುಗಳನ್ನು ದಿನನಿತ್ಯ ಬೆಟ್ಟಕ್ಕೆ ಹೊಡೆದುಕೊಂಡು ಹೋಗಿ ಮೇಯಿಸಿ ಗೋವುಗಳನ್ನು ಮನೆಗೆ ಹಿಂತಿರುಗಿಸಿ ದಿನನಿತ್ಯ ಕಾರ್ಯ ಮುಗಿಸಿಕೊಂಡು ಬರುತ್ತಿದ್ದ. ಕೆಲವು ದಿನಗಳ ನಂತರ 'ಹಳ್ಳಿಕಾರ್' ಹಸುವೊಂದು ಕರು ಹಾಕಿತು. ಆದರೆ ಮನೆಯಲ್ಲಿ ಹಾಲು ಕೊಡದೆ ಬೆಟ್ಟದ ತುದಿಯಲ್ಲಿ ಹುತ್ತದ ಮೇಲೆ ಹಾಲನ್ನು ಸುರಿಸುತ್ತಿತ್ತಂತೆ. ಕೆಲವು ದಿನಗಳ ಕಾಲ ಇದೇ ರೀತಿ ನಡೆಯುತ್ತಿದ್ದು, ಇದನ್ನು ಮಲ್ಲಯ್ಯ ಆಶ್ಚರ್ಯದಿಂದ ನೋಡಿ ಇದೊಂದು ಶಿವಲೀಲೆ ಎಂದೇ ನಂಬಿದ. ಸಂಜೆ ಮಲ್ಲಯ್ಯ ಹಸುಗಳನ್ನು ಅರಸನ ಮನೆಗೆ ಹೊಡೆದು ಕಟ್ಟಿ ಹಾಕಿ ಮನೆಗೆ ಬರುತ್ತಿದ್ದ. ಎಲ್ಲಾ ಹಸುಗಳು ಹಾಲು ಕೊಟ್ಟರೆ ಒಂದು ಹಸು ಅರಸನ ಮನೆಯಲ್ಲಿ ಹಾಲನ್ನು ಕೊಡುತ್ತಿರಲಿಲ್ಲ. ಇದರಿಂದ ಅರಸನು ಕೋಪಗೊಂಡು ಮಲ್ಲಯ್ಯನನ್ನು ಶಿಕ್ಷೆಗೆ ಒಳಪಡಿಸಿದ. ನಂತರ ಅರಸನೇ ಒಂದು ದಿನ ಗೋವಿನೊಂದಿಗೆ ಬೆಟ್ಟಕ್ಕೆ ತನ್ನ ಗಂಡು ಕೊಡಲಿಯೊಂದಿಗೆ ತೆರಳಿದ. ಆ ಸಮಯದಲ್ಲಿ ಹಸು ಹುತ್ತಕ್ಕೆ ಹಾಲನ್ನು ಸುರಿಸುತ್ತಿತಂತೆ. ಇದನ್ನು ನೋಡಿದ ಅರಸ ಬೇಸರದಿಂದ ಹಸುವಿನ ಎದೆಗೆ ಗಂಡುಕೊಡಲಿಯಿಂದ ಹೊಡೆದನು. ಹಸುವಿನ ರಕ್ತ ಹರಿದು ಅಲ್ಲಿಯೇ ಶಿವಲಿಂಗ ಉದಯವಾಯಿತೆಂದು ಜನತೆಯ ನಂಬಿಕೆ. ಇದರಿಂದ ಅರಸ ತನ್ನ ಸೇವಕನ ಭಕ್ತಿಯನ್ನು ಗೌರವಿಸಿ ಅವನಿಗೆ ಉನ್ನತ ಸ್ಥಾನ ನೀಡಿದನೆಂದು ಹೇಳುವರು. ಸೇವಕನ ಗೌರವಾರ್ಥವಾಗಿ ಬೆಟ್ಟಕ್ಕೆ ಮಲ್ಲಯ್ಯನ ಬೆಟ್ಟವೆಂದು ಹೆಸರು ಬಂದಿತೆಂದು ಐತಿಹ್ಯವಿದೆ. ಇದಕ್ಕೆ ಅನುಗುಣವಾಗಿ ಇಂದಿಗೂ ತುಂಗದ ಸ್ಥಳದಲ್ಲಿ ಅರಸರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವರು. ಆದರೆ ಇಂದು ಬಹುತೇಕ ಅರಸರು ವಲಸೆ ಹೋಗಿರುವರು.

ಪ್ರತಿವರ್ಷ ಫೆಬ್ರವರಿ ತಿಂಗಳಿನಲ್ಲಿ ಮಲ್ಲಿಕಾರ್ಜುನ ಜಾತ್ರೆ ಅಥವಾ ಗಿರಿಜಾ ಕಲ್ಯಾಣ ಉತ್ಸವ ಜರುಗುವುದೆಂದು ಜನಪದ ಐತಿಹ್ಯವಿದೆ. ಇದರ ಪ್ರಕಾರ ಶಿವನಿಗೂ ಮತ್ತು ಗಿರಿಜೆಗೂ ಕಲ್ಯಾಣ ನಡೆಯುವುದೆಂಬ ನಂಬಿಕೆ ಸ್ಥಳೀಯ ಜನತೆಯಲ್ಲಿರುವುದು. ಗಿರಿಜಾ ಕಲ್ಯಾಣದ ನಂತರ ಸ್ಥಳೀಯರು ಕನ್ಯೆಗೆ ವರನನ್ನು ಹುಡುಕುವ[೨೧] ಕಾರ್ಯದಲ್ಲಿ ನಿರತರಾಗುವರೆಂಬ ಅಭಿಪ್ರಾಯವಿದೆ.

ಪಿರಿಯಾಪಟ್ಟಣ ತಾಲ್ಲೂಕು ಪ್ರದೇಶಗಳಲ್ಲಿ ಕಂಡುಬಂದಿರುವ ದೇವಾಲಯಗಳ ಬಗ್ಗೆ ಒಂದು ಐತಿಹ್ಯವಿದೆ. ಇಲ್ಲಿಯ ದೇವಾಲಯಗಳು ಚೋಳರ ಕಾಲದಲ್ಲಿ ನಿರ್ಮಾಣಗೊಂಡಿರುವವು. ಚೋಳ ಅಂದರೆ ಗಟ್ಟಿಯುಳ್ಳವರು ಹಾಗೂ ಶಕ್ತಿಶಾಲಿಯ ಜನತೆ ಎಂದು ಇದಕ್ಕೆ ಅನುಗುಣವಾಗಿ

ದೊಡ್ಡ ಬಂಡೆಗಳನ್ನು ಹೊಡೆದು ದೇವಾಲಯ ನಿರ್ಮಿಸಿರುವರು ಎಂಬ ಭಾವನೆ ಸ್ಥಳೀಯ ಜನತೆಯಲ್ಲಿದೆ. ಬೆಟ್ಟದಪುರಕ್ಕೆ ರಾಮಾಯಣ ಕಾಲದಲ್ಲಿ ರಾಮ, ಲಕ್ಷ್ಮಣ, ಸೀತೆ, ರಾವಣ ಮತ್ತು ಹನುಮಂತ ಬಂದಿದ್ದರೆಂಬ ಐತಿಹ್ಯವಿದೆ.[೨೨] ಮತ್ತೊಂದು ಐತಿಹ್ಯದ ಪ್ರಕಾರ ಇದೇ ಬೆಟ್ಟಕ್ಕೆ ಯಡಿಯೂರು ಸಿದ್ಧಲಿಂಗೇಶ್ವರ ಸ್ವಾಮಿ ಭೇಟಿ ನೀಡಿರುವ ಮತ್ತು ಇಲ್ಲಿಯೇ ತಪಸ್ಸನ್ನು ಆಚರಿಸಿ ನಂತರ ಯಡಿಯೂರಿಗೆ ಪ್ರಯಾಣ ಬೆಳೆಸಿರುವರು. ಅಂದು ಸಿದ್ಧಲಿಂಗೇಶ್ವರ ಸ್ವಾಮಿ ತಪಸ್ಸು ಮಾಡಿದ ಸ್ಥಳವೇ ಇಂದು ಬೆಟ್ಟದಪುರ ಮಠವೆಂದು ಹೇಳುವರು.[೨೩] ಇದರ ಗರ್ಭಗೃಹದಲ್ಲಿ ಯಡಿಯೂರು ಸಿದ್ಧಲಿಂಗೇಶ್ವರ ಸ್ವಾಮಿಯ ಮೂರ್ತಿಯಿದೆ.

ಹಾರನಹಳ್ಳಿ ಹೋಬಳಿಯಲ್ಲಿರುವ ಗ್ರಾಮ ಅಂಬ್ಲಾರೆ. ಈ ಗ್ರಾಮದ ಜನತೆ ಮೈಸೂರು ಸೈನ್ಯ ಗ್ರಾಮಕ್ಕೆ ಬರುತ್ತಿರುವುದನ್ನು ಕಂಡು ಅವರನ್ನು ಸೋಲಿಸಲು ಒಂದು ಉಪಾಯ ಯೋಚಿಸಿದರಂತೆ. ಅದರಂತೆ ಅಲ್ಲಿಯೇ ಇದ್ದ ಅರೆ(ಬಂಡೆ)ಯ ಮೇಲೆ ಅಂಬಲಿ ಸುರಿದರು. ಇದನ್ನು ತಿಳಿಯದ ಮೈಸೂರು ಸೈನ್ಯ ಬಂಡೆಯ ಮೇಲೆ ಕಾಲಿಟ್ಟು ಜಾರಿ ಬೀಳುತ್ತಿದ್ದರಂತೆ. ಬಿದ್ದವರನ್ನೆಲ್ಲ ಅಂಬ್ಲಾರೆಯವರು ಕತ್ತರಿಸಿ ಹಾಕುತ್ತಿದ್ದರು. ಗ್ರಾಮದವರ ತಂತ್ರ ಕೊನೆಯ ತನಕ ಯಶಸ್ವಿಯಾಗದೆ ಮೈಸೂರು ಸೈನ್ಯಕ್ಕೆ ಗ್ರಾಮ ಬಲಿಯಾಯಿತು. ಒಟ್ಟಿನಲ್ಲಿ ಅಂಬಲಿ ಅರೆಯಿಂದ ಶತ್ರುಗಳನ್ನು ನಾಶ ಮಾಡಿದ ಕಾರಣ ಊರಿಗೆ ಅಂಬ್ಲಾರೆ ಹೆಸರು ಬಂದಿದೆಯೆಂದು ಅಭಿಪ್ರಾಯವಿದೆ.[೨೪] ಮತ್ತೊಂದು ಐತಿಹ್ಯದ ಪ್ರಕಾರ ಗ್ರಾಮದ ಮುಸ್ಲಿಮರಿಗೂ ಮತ್ತು ಗೌಡರಿಗೂ ದ್ವೇಷ ಇತ್ತಂತೆ. ಇದರಿಂದ ಗೌಡರು ಮುಸ್ಲಿಮರಿಗೆ ಬುದ್ಧಿ ಕಲಿಸಬೇಕೆಂದು ಯೋಚಿಸಿ ದ್ವೇಷವನ್ನು ತೀರಿಸಿಕೊಳ್ಳಲು ಉಪಾಯ ಮಾಡಿದರು. ರಾಗಿ, ಆಲದ ಅಂಟು, ಹಲಸಿನ ಅಂಟು, ಕಳ್ಳಿ ಹಾಲು, ಹುಣಸೆ ಬೀಜದ ನೀರು ಮೊದಲಾದ ಅಂಟು ಪದಾರ್ಥಗಳನ್ನು ಬೆರೆಸಿ ಅಂಬಲಿಯನ್ನು ಮಾಡಿ ದೊಡ್ಡ ಅರೆ ಮೇಲೆ ಸುರಿದರು. ಸ್ನೇಹ ನಟಿಸುತಿದ್ದ ಮುಸ್ಲಿಮ್‌ರನ್ನು ಔಪಚಾರಿಕವಾಗಿ ಕರೆದು ಆ ಬಂಡೆಯ ಮೇಲೆ ಕೂರಿಸುತ್ತಿದ್ದರು. ಕುಳಿತವರು ಅಲ್ಲೇ ಬಂಡೆಗೆ ಅಂಟಿಕೊಂಡಿರುತ್ತಿದ್ದರು. ಆಗ ಇವರು ಮುಸ್ಲಿಮರ ತಲೆ ಹೊಡೆದು ಕೊಲ್ಲುತ್ತಿದ್ದರಂತೆ. ಅಂಬಲಿ ಅರೆಯಿಂದ ಶತ್ರುಗಳನ್ನು ನಾಶ ಮಾಡಿದ ಕಾರಣ ಆ ಊರಿಗೆ ಅಂಬ್ಲಾರೆ[೨೫] ಹೆಸರಾಯಿತು.

ರಾವಂದೂರು ಹೋಬಳಿಯಲ್ಲಿರುವ ಗ್ರಾಮ ಆರೇನಹಳ್ಳಿ. ಹಿಂದೆ ಈ ಊರಿನಲ್ಲಿ ಮುಸ್ಲಿಂ ನಾಟಿ ವೈದ್ಯನೊಬ್ಬ 'ಔಷಧಿ' ಕೊಡುತ್ತಿದ್ದ. ಅವನ ಕೈಗುಣದ ಖ್ಯಾತಿ ಸುತ್ತಮುತ್ತಲ ಗ್ರಾಮಕ್ಕೆ ಹರಡಿತ್ತು. ಎಲ್ಲಾ ಕಡೆಯಿಂದ ರೋಗಿಗಳು ಬಂದು ಔಷಧಿ ಪಡೆದುಹೋಗುತ್ತಿದ್ದರು. ಈ ರೋಗಿಗಳನ್ನು ಅವನು ಉರ್ದು ಮಿಶ್ರಿತ ಕನ್ನಡ ಭಾಷೆಯಲ್ಲಿ ಮಾತನಾಡುತ್ತಿದ್ದ.

ಯಾರೊಬ್ಬರನ್ನು ಮಾತನಾಡಿಸುವಾಗಲೂ 'ಅರೇ ಏನು?' ಅರೇ ಏನು? ಎಂದು ಪ್ರಾರಂಭಿಸುತ್ತಿದ್ದ. ಬರುತ್ತಿದ್ದ ಹಳ್ಳಿಗರೆಲ್ಲ ಆ ಮುಸ್ಲಿಂ ವೈದ್ಯನ ಹೆಸರನ್ನು ಕರೆಯುವುದರ ಬದಲು 'ಅರೇ ಏನಯ್ಯ ಪಂಡಿತರು' ಎಂದು ಕರೆಯುತ್ತಿದ್ದರು. ಅದು ಅರೇನಯ್ಯವಾಗಿ ಅರೇನಯ್ಯನಹಳ್ಳಿ ಆರೇನಹಳ್ಳಿಯಾಯಿತಂತೆ.[೨೬]

ಐತಿಹಾಸಿಕವಾಗಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಕಿತ್ತೂರು ಒಂದು ಗ್ರಾಮ. ಇಲ್ಲಿ ಕೋಟೆಯ ಅವಶೇಷಗಳು, ಒಡೆದು ಬಿದ್ದಿರುವ ಶಾಸನಗಳು, ಹಳೆಯ ಕಾಲದ ದೇವಾಲಯಗಳೆಲ್ಲವೂ ಇದ್ದು, ಕಿತ್ತೂರನ್ನು ಇತಿಹಾಸ ಪ್ರಸಿದ್ಧ ಸ್ಥಳವೆಂದು ಹೇಳುತ್ತವೆ. ಹಿಂದೆ ಸೀಗೆಮೆಳೆಯ ಬುಡದಲ್ಲಿದ್ದ ದೇವರನ್ನು ಮೂಳನಾಯಕನೆಂಬ ಪಾಳೆಯಗಾರನ ತಾಯಿ ಕಿತ್ತೊಗೆದ್ದರಿಂದ ಈ ಊರಿಗೆ ಕಿತ್ತೂರೆಂದು ಆ ದೇವತೆಗೆ ಕಿತ್ತೂರಮ್ಮನೆಂದು ಹೆಸರು ಬಂತೆಂದು ಕೆಲವರ ಹೇಳಿಕೆ. ಈ ಹೇಳಿಕೆ ಅಲ್ಲಗಳೆದ ಮತ್ತೊಬ್ಬ ಐತಿಹ್ಯಕಾರ ಕಿತ್ತೂರಿಗೆ ಸೇರಿದ ಹದಿನೆಂಟು ಕೊಪ್ಪಲುಗಳು ಮೊದಲಿಗೆ ಇರಲಿಲ್ಲ. ಊರಿನಲ್ಲಿ ಕೋಟೆ ಇತ್ತು. ಶತ್ರುಗಳು ಕೋಟೆ ಪ್ರವೇಶಿಸಬಹುದೆಂದು ರಾತ್ರಿಯ ವೇಳೆ ಕೋಟೆ ಬಾಗಿಲುಗಳನ್ನು ಮುಚ್ಚಿಬಿಡುತ್ತಿದ್ದರು. ವ್ಯವಸಾಯಗಾರರು ತಮ್ಮ ಜಮೀನುಗಳಿಗೆ ಹೋಗಿ ಹಿಂದಿರುಗಿ ಬರುವ ಹೊತ್ತಿಗಾಗಲೇ ಕೋಟೆಯ ಬಾಗಿಲು ಮುಚ್ಚಿರುತ್ತಿತ್ತು. ಹೀಗಾಗಿ ಅವರು ರಾತ್ರಿಯಿಡೀ ಕೋಟೆಯ ಹೊರಗೇ ಉಳಿಯಬೇಕಾಗುತ್ತಿತ್ತು. ಇದರಿಂದ ರೋಸಿಹೋದ ಅವರು ತಮ್ಮ ತಮ್ಮ ಮನೆಗಳನ್ನು ಕಿತ್ತುಕೊಂಡು ಹೋಗಿ ಅವರವರ ಜಮೀನುಗಳಲ್ಲಿ ನೆಲೆಸಿದರು. ಹೀಗೆ ಅವರು ಹದಿನೆಂಟು ಸ್ಥಳಗಳಲ್ಲಿ ನೆಲೆಯೂರಿದರು. ಅವು ಕೆಂಪೇಗೌಡನಕೊಪ್ಪಲು, ಮೂಡಲಕೊಪ್ಪಲು, ಕಳ್ಳಿಕೊಪ್ಪಲು, ದೊಡ್ಡೇಗೌಡನ ಕೊಪ್ಪಲು ಇತ್ಯಾದಿ ಹದಿನೆಂಟು ಕೊಪ್ಪಲುಗಳಾದವು. ಹೀಗೆ ರೈತರು ಮನೆಗಳನ್ನು ಕಿತ್ತುಕೊಂಡು ಹೋಗಿದ್ದರಿಂದ ಕಿತ್ತೂರು ಗ್ರಾಮವಾಯಿತಂತೆ.[೨೭]

ಕಿರುನೆಲ್ಲಿ ಗ್ರಾಮ ಕಂಪಲಾಪುರ ಹೋಬಳಿಯಲ್ಲಿರುವುದು. ಹಿಂದೆ ಈ ಊರಿನಲ್ಲಿ ಒಂದು ಬ್ರಾಹ್ಮಣ ಕುಟುಂಬವಿತ್ತು. ಅವರಲ್ಲಿ ಒಬ್ಬ ಬ್ರಾಹ್ಮಣ ಸಂತಾನವಿಲ್ಲದೆ ತನ್ನ ಕುಲ ನಶಿಸಿಹೋಗುತಿದೆಯಲ್ಲ ಎಂದು ಚಿಂತಿಸತೊಡಗಿದ. ಆಗ ಲೋಕೋಪಕಾರವಾದ ಕಾರ್ಯಗಳಲ್ಲಿ ನಿರತನಾದರೆ ಮಕ್ಕಳಾಗುವುದೆಂಬ ಹಂಬಲದಿಂದ ಅವನು ಒಂದು ಕೆರೆಯನ್ನು ತೋಡಿಸಿದನಂತೆ. ಆದರೆ ಆ ಕೆರೆಯ ಏರಿಯಲ್ಲಿ ನೆಲ್ಲಿಕಾಯಿಗಳಷ್ಟು ಗಾತ್ರದ ತೂತುಗಳಾಗಿ ನೀರೆಲ್ಲಾ ಸೋರಿಹೋಗುತ್ತಿತ್ತು. ಇದರಿಂದ ಚಿಂತಾಕ್ರಾಂತನಾದ ಅವನು ಜೋಯಿಸರನ್ನು ಕರೆಸಿ ಶಾಸ್ತ್ರ ಕೇಳಿದಾಗ, ಈ ಊರಿನ ಹೆಣ್ಣುಮಗಳೊಬ್ಬಳು ನೆರೆದು ಬಹಳ ವರ್ಷಗಳಾದರೂ ಅವಳಿಗೆ ಮದುವೆಯಾಗದೆ ಇದ್ದುದರಿಂದ ಅವಳ ಎದೆತಾಪದಿಂದ ಕೆರೆ ಏರಿಯಲ್ಲಿ ಕಿರುನೆಲ್ಲಿಕಾಯಿ

ಗಾತ್ರದ ತೂತುಗಳಾಗಿ ನೀರೆಲ್ಲ ಪೋಲಾಗುತ್ತಿದೆಯೆಂದು ಹೇಳಿದನು. ಆಗ ಆ ಬ್ರಾಹ್ಮಣನು ಹುಡುಗಿ ಯಾರೆಂದು ಪತ್ತೆ ಹಚ್ಚಿ ಮದುವೆ ಮಾಡಿಸಿದನು. ಆಗ ಕೆರೆಯ ಏರಿ ಭದ್ರವಾಗಿ ನಿಂತಿತು. ಆದರೆ ಕಿರುನೆಲ್ಲಿ ಗಾತ್ರದ ತೂತುಗಳಾಗಿದ್ದ ಕೆರೆ ಏರಿದೆಸೆಯಿಂದ ಆ ಊರಿಗೆ ಕಿರುನೆಲ್ಲಿ ಎಂದು ಹೆಸರು ಬಂದಿದೆಯೆಂದು ಅಭಿಪ್ರಾಯವಿದೆ.[೨೮] ಈ ತಾಲ್ಲೂಕಿನ ಗಡಿಭಾಗ ಕುಶಾಲನಗರ. ಹೈದರಾಲಿಗೆ ಟಿಪ್ಪು ಹುಟ್ಟಿದ ಸಂತೋಷದ ವಿಷಯ ಈ ಗ್ರಾಮದಲ್ಲಿದ್ದಾಗ ತಿಳಿಯಿತಂತೆ. ಸಂತೋಷ, ಕುಶಾಲವಾದ ಕಾರಣ ಈ ಊರಿಗೆ ಕುಶಾಲನಗರವೆಂದಾಯಿತಂತೆ. ಹಾಗೆಯೇ ಕೊಡಗಿನ ಮೊದಲನೇ ಚೀಫ್ ಕಮೀಷನರಾದ ಜನರಲ್ ಫ್ರೇಸರ್‌ನ ಸ್ಮರಣಾರ್ಥವಾಗಿಯೂ ಇದನ್ನು ಹಿಂದೆ ಫ್ರೇಸರ್ ಪೇಟೆ ಎಂದು ಕರೆದರೆಂಬ ಐತಿಹ್ಯವಿದೆ.[೨೯]

ಚಂಗಾಳ್ವ ರಾಜನು ದೊಡ್ಡಬೇಲಾಳು ಮಾರ್ಗವಾಗಿ ಬರುತ್ತಿರುವಾಗ ಆಯಾಸ ಪರಿಹಾರಕ್ಕಾಗಿ ಮರದ ನೆರಳಿನಲ್ಲಿ ತಂಗಿದನು. ಇದನ್ನು ತಿಳಿದ ಸುತ್ತಲಿನ ಹಳ್ಳಿಯವರೆಲ್ಲಾ ಬಂದು ತಮ್ಮ ಗೌರವವನ್ನು ಅರ್ಪಿಸಿದರು. ಆದರೆ ಒಂದು ಗ್ರಾಮದವರು ರಾಜನ ದಾಹ ಪರಿಹಾರಕ್ಕಾಗಿ ದೊಡ್ಡ ಬೇಲದ ಹಣ್ಣುಗಳಿಂದ ಪಾನಕ ಮಾಡಿ ತಂದುಕೊಟ್ಟರು. ಆಗ ರಾಜನು ಪಾನಕ ಯಾವ ಹಣ್ಣಿನದು? ಎಂದು ಕೇಳಿದ. ಅದಕ್ಕವರು ಬೇಲದ ಹಣ್ಣಿನ ಪಾನಕ ಎಂದರು. ಕುಡಿದ ರಾಜನು ಹಾಳು ಬೇಲದ ಹಣ್ಣಿನ ಪಾನಕವೇ ಎಂದು ಅಸಹ್ಯ ಪಟ್ಟುಕೊಂಡು ಆ ಬೇಲದ ಹಣ್ಣುಗಳಿರುವ ಹಳ್ಳಿಗೆ ಬೇಲದಹಾಳು ಎಂದು ಕರೆದ. ಅಂದಿನಿಂದ ಗ್ರಾಮಕ್ಕೆ ಬೇಲದಹಾಳು ಎಂದು ಹೆಸರಾಯಿತಂತೆ. ಬೇಲದಹಾಳಿನ ಎರಡು ಗ್ರಾಮಗಳಿಗೆ ದೊಡ್ಡಬೇಲಾಳು ಮತ್ತು ಚಿಕ್ಕಬೇಲಾಳು ಎಂದು ಹೆಸರಾಯಿತು.[೩೦]

ನಾಯಿಂದಿರಹಳ್ಳಿ ಪಿರಿಯಾಪಟ್ಟಣ ಹತ್ತಿರದಲ್ಲಿರುವ ಒಂದು ಗ್ರಾಮ. ಚಳಿಗಾಲದ ದಿನ ಹಳ್ಳಿಯ ಕೆಲವರು ಬೆಂಕಿ ಹಾಕಿಕೊಂಡು ಚಳಿಕಾಯುತ್ತಾ ಕುಳಿತಿದ್ದರು. ಪಕ್ಕದಲ್ಲಿ ಒಂದು ಸಣ್ಣ ಹುಲ್ಲಿನ ರಾಶಿ ಇದ್ದಿತ್ತು. ಇದ್ದಕ್ಕಿದ್ದಂತೆ ಯಾವುದೋ ಪ್ರಾಣಿ ಹುಲ್ಲಿನ ರಾಶಿಯೊಳಕ್ಕೆ ನುಗ್ಗಿದಂತಾಯಿತು. ಬೆಂಕಿ ಕಾಯುತ್ತಿದ್ದವರಿಗೆ ಮೊಲವಿರಬೇಕೆಂದು ತಿಳಿದು ಹುಲ್ಲಿನ ರಾಶಿಯಿಂದ ಹೊರತರಲು ಶ್ರಮಿಸಿ ವಿಫಲರಾದರು. ಕೊನೆಗೆ ಮೊಲ ಅಲ್ಲೇ ಸಾಯಲಿ ಎಂದು ಹುಲ್ಲು ರಾಶಿಗೆ ಬೆಂಕಿ ಹಾಕಿಬಿಟ್ಟರಂತೆ. ಅದು ತಪ್ಪಿಸಿಕೊಂಡು ಹೋಗದಂತೆ ಎಲ್ಲರೂ ದೊಣ್ಣೆ ಹಿಡಿದು ಗುಡ್ಡೆ ಸುತ್ತಲೂ ನಿಂತರು. ಆ ಪ್ರಾಣಿ ಪಾರಾಗಲು ದಾರಿಯೇ ಇಲ್ಲದೆ ಅಲ್ಲಿಯೇ ಸತ್ತಿತ್ತು. ಹುಲ್ಲು ಮೆದೆಯಲ್ಲಿ ಸುಟ್ಟು ಬಿದ್ದಿದ್ದ ಪ್ರಾಣಿಯನ್ನು ತಂದು ಎಲ್ಲರೂ ಪಾಲು ಹಾಕಿಕೊಂಡರು. ಅಡಿಗೆಯೂ ಆಯಿತು, ಊಟವೂ ಆಯಿತು. ಎಂಜಲು ಮೂಳೆಗಳನ್ನು ಹಾಕಲು ಅವರ ನಾಯಿಯನ್ನು ಕುರ್ರೋ ಕುರ್ರೊ ಎಂದು ಕರೆದರು. ಇಷ್ಟು ದಿನ ಊಟದ

ಸಮಯಕ್ಕೆ ಹಾಜರಾಗುತ್ತಿದ್ದ ನಾಯಿ ಊಟ ಮುಗಿದರೂ ನಾಪತ್ತೆಯಾಗಿತ್ತು. ಆಗ ಅವರೆಲ್ಲರಿಗೂ ತಿಳಿಯಿತು. ತಾವು ತಿಂದ ಪ್ರಾಣಿ ಯಾವುದು ಎಂದು! ಈ ವಿಷಯ ಒಬ್ಬರ ಕಿವಿಯಿಂದ ಮತ್ತೊಬ್ಬರ ಕಿವಿಗೆ ಸಾಗಿ ಸುತ್ತಮುತ್ತಲಿನ ಹಳ್ಳಿಗಳಿಗೆಲ್ಲ ನಾಯಿ ತಿಂದವರು ಎಂದು ತಿಳಿಯಿತು. ಅವರೆಲ್ಲ ಆ ಹಳ್ಳಿಯನ್ನು ನಾಯಿ ತಿಂದವರ ಹಳ್ಳಿ ಎಂದು ಕರೆಯುತ್ತಿದ್ದರು. ನಾಯ್ತಿಂದವರ ಹಳ್ಳಿ ನಾಯಿಂದರಹಳ್ಳಿಯಾಯಿತು.[೩೧]

ಕಂಪಲಾಪುರ, ಬಸಲಾಪುರ[೩೨] ಪಿರಿಯಾಪಟ್ಟಣ ತಾಲ್ಲೂಕಿನ ಎರಡು ಗ್ರಾಮಗಳು. ಈ ಎರಡು ಗ್ರಾಮಗಳೂ ದೊಡ್ಡ ಕೆರೆಯೊಂದರ ಎರಡು ದಡಗಳಲ್ಲಿವೆ. ಈ ಊರುಗಳ ಹೆಸರುಗಳು ಕಂಪಿಲ ಮತ್ತು ಬಸಲ ಎಂಬ ಅಣ್ಣತಮ್ಮಂದಿರ ಹೆಸರುಗಳಿಂದ ಬಂದಿತೆಂಬ ಐತಿಹ್ಯವಿದೆ. ಹಿಂದೆ ಈ ಊರಿನಲ್ಲಿ ಹೆಣ್ಣು ಮಗಳು ವೇಶ್ಯಾವೃತ್ತಿಯಿಂದ ಜೀವನ ಸಾಗಿಸುತ್ತಿದ್ದಳು. ಅವಳಿಗೆ ಹುಟ್ಟಿದ ಮಕ್ಕಳೆಲ್ಲ ಗಂಡು ಮಕ್ಕಳು. ಅವರಲ್ಲಿ ಕಂಪಿಲ ಹಿರಿಯ ಮಗ, ಬಸಲ ಎರಡನೇ ಮಗ. ಎಲ್ಲ ಮಕ್ಕಳನ್ನು ಕಷ್ಟಪಟ್ಟು ಸಾಕಿ ಸಲಹಿದಳು. ಎಲ್ಲ ಮಕ್ಕಳು ಬೆಳೆದು ಕೈಗೆ ಬಂದರು. ಈ ಮಕ್ಕಳಿಗೆ ಲೋಕಜ್ಞಾನ ತಿಳಿದ ಮೇಲೆ ತಾವು ವೇಶ್ಯೆಯ ಮಕ್ಕಳೆಂದೂ ತಮ್ಮ ಹೊಟ್ಟೆ ಬಟ್ಟೆಗಾಗಿ ತಾಯಿ ವೇಶ್ಯಾವೃತ್ತಿ ಅವಲಂಬಿಸಿರುವಳೆಂದು ಹಿರಿಯ ಮಕ್ಕಳಾದ ಕಂಪಿಲ ಮತ್ತು ಬಸಲರು ನೊಂದುಕೊಂಡರು. ಇನ್ನು ಮುಂದೆ ತಮ್ಮ ತಾಯಿ ವೇಶ್ಯಾವೃತ್ತಿ ನಡೆಸುವುದು ಬೇಡ. ತಾವೇ ದುಡಿದು ಸಂಪಾದಿಸಿ ತಾಯಿಯನ್ನು ಸಾಕೋಣ ಎಂದು ತೀರ್ಮಾನಿಸಿದರು. ತಮ್ಮ ನಿರ್ಧಾರವನ್ನು ತಾಯಿಗೆ ತಿಳಿಸಿದಾಗ ಉಳಿದ ಮಕ್ಕಳು ಅಣ್ಣಂದಿರ ಅಭಿಪ್ರಾಯವನ್ನು ವಿರೋಧಿಸಿದರು. ತಾಯಿಗೆ ಇಂಥಾ ಕೆಲಸ ಮಾಡು, ಇಂಥಾ ಕೆಲಸ ಮಾಡಬೇಡ ಎಂದು ಆಜ್ಞೆ ಮಾಡಲು ನಾವು ಯಾರು? ನಮ್ಮಷ್ಟಕ್ಕೆ ನಾವು ಸುಮ್ಮನಿದ್ದರಾಗದೆ ಎಂಬುದು ಕಿರಿಯರ ವಾದ. ಹೀಗೆ ಕಿರಿಯರಿಗೂ ಹಿರಿಯರಿಗೂ ಮಾತು ಬೆಳೆದು ವಿವಾದಕ್ಕೆ ಇಳಿಯಿತು.

ಹೀಗೆ ಅಣ್ಣ ತಮ್ಮಂದಿರ ಜಗಳ ಪಿರಿಯಾಪಟ್ಟಣದ ಅರಸನಿಗೆ ಮುಟ್ಟಿತ್ತು. ಅರಸನು ಅಣ್ಣತಮ್ಮಂದಿರನ್ನು ಕರೆಸಿ ವಿಚಾರಿಸಿದನು. ಎರಡು ಪಕ್ಷದವರೂ ತಮ್ಮ ತಮ್ಮ ವಾದವನ್ನು ಅರಸನ ಮುಂದೆ ಮಂಡಿಸಿದರು. ಇಬ್ಬರ ವಾದವು ಸರಿಯಾಗಿತ್ತು. ಹಿಂದಿನಿಂದ ವೇಶ್ಯಾವೃತ್ತಿ ಮಾಡಿಕೊಂಡು ಬಂದ ತಾಯಿ ತಾನೇ ತಾನಾಗಿ ಆ ವೃತ್ತಿಯನ್ನು ಬಿಡದೆ ಬಲಾತ್ಕಾರವಾಗಿ ಬೇಡವೆಂದು ಆಜ್ಞೆ ಮಾಡುವುದು ಪಾಪಕಾರ್ಯ ಎಂಬುದು ಒಂದು ದೃಷ್ಟಿ. ಏಕೆಂದರೆ ಅವರವರ ವೃತ್ತಿಯನ್ನು ಅವರವರು ನಡೆಸಿಕೊಂಡು ಹೋಗುವುದು ಅವರವರ ಧರ್ಮ. ಆದರೆ ಮಕ್ಕಳ ಹೊಟ್ಟೆಪಾಡಿಗಾಗಿ ಅದರಲ್ಲೂ ಬೆಳೆದು ನಿಂತ ಗಂಡು ಮಕ್ಕಳ ಹೊಟ್ಟೆಪಾಡಿಗಾಗಿ

ತಾಯಿ ವೇಶ್ಯಾವೃತ್ತಿಯನ್ನವಲಂಬಿಸಬೇಕೆ? ರಾಜನು ಸರಿಯಾದ ತೀರ್ಪನ್ನು ಕೊಡಲಾರದೆ ಹೆಣಗಾಡಿದನು. ಕಡೆಗೊಂದು ತೀರ್ಮಾನಕ್ಕೆ ಬಂದು ಹೀಗೆ ಹೇಳಿದ. "ನೋಡ್ರಪ್ಪಾ, ಒಂದೇ ರಾತ್ರಿಯಲ್ಲಿ ಬಂದೋಬಸ್ತಾದ ಕೆರೆ ಕಟ್ಟಿಸಿ, ಬರದ ಮಳೆ ಬರಿಸಿ, ಹೊಳೆತುಂಬಿ ಹರಿದಂಗೆ ನೀರು ಹರಿಸಿದೋರ ಮಾತನ್ನು ನಿಮ್ಮ ತಾಯಿ ಕೇಳಬೇಕು" ಎಂದನು.

ರಾಜನ ಮಾತಿಗೆ ಎರಡು ಪಕ್ಷದವರು ಒಪ್ಪಿದರು. ಕೆರೆ ತೋಡಲು ಸಿದ್ಧರಾಗಿ ನಿಂತರು. ಉಳಿದ ಚಿಕ್ಕವರು ಒಂದೆಡೆ ಅಗೆಯತೊಡಗಿದರು. ಸ್ವಲ್ಪ ಹೊತ್ತಿನಲ್ಲೇ ಭಾರಿ ಮಳೆ ಬಂತು. ಮಳೆ ಬಂತೆಂದು ಚಿಕ್ಕವರೆಲ್ಲರೂ ಮರದ ಕೆಳಗೆ ಆಶ್ರಯ ಪಡೆದರು. ಆದರೆ ಕಂಪಿಲ ಬಸಲರು ಮಳೆಯನ್ನು ಲೆಕ್ಕಿಸದೆ ಕತ್ತಲಾದರೂ ಗಮನಿಸದೆ ರಾತ್ರಿಯಿಡೀ ಕೆರೆ ತೋಡುತ್ತಲೇ ಇದ್ದರು. ಬೆಳಗಾಯಿತು. ಕಂಪಿಲ ಬಸಲರ ತಾಯಿ ಉಪ್ಪರಿಗೆಯ ಮೇಲೆ ನಿಂತು ನೋಡುತ್ತಾಳೆ. ಹೆಗ್ಗೆರೆಯೊಂದು ಸಿದ್ಧವಾಗಿದೆ. ತುಂಬಿ ಹರಿಯುತ್ತಿರುವ ಕೆರೆ ನೋಡಿ ಅವಳ ಜೀವವೇ ಹರಿದು ಹೋದಂತಾಯಿತು. ಗೆದ್ದ ಮಕ್ಕಳು ಬದುಕಬಲ್ಲರು. ಸೋತಮಕ್ಕಳ ಗತಿಯೇನು ಎಂದು ಚಿಂತಿಸುತ್ತಿದ್ದ ಅವಳ ತಲೆ ಸುತ್ತಿದಂತಾಯಿತು. ಕಷ್ಟದಿಂದ ಕೆಳಗಿಳಿದು ಹೆಗ್ಗೆರೆಯ ಬಳಿಗೆ ಹೆಜ್ಜೆಯಿಡುತ್ತಾ ಬಂದಳು. ಅವಳು ಕೋಡಿಯ ಬಳಿಗೆ ಬಂದಾಗ ಹೆಗ್ಗೆರೆ ಉಕ್ಕಿ ಹರಿಯಿತು. ದೊಡ್ಡ ಪ್ರವಾಹದ ತೊರೆ ತೆಕ್ಕೆಯಲ್ಲಿ ಕಂಪಿಲ ಬಸಲರ ತಾಯಿ ಕರಗಿಹೋದಳು. ತಾಯಿಯನ್ನು ಕಳೆದುಕೊಂಡ ಅತೀವ ಯಾತನೆಯಿಂದ ನೋಂದಿದ್ದ ಕಂಪಿಲ ಬಸಲರನ್ನು ಪಿರಿಯಾಪಟ್ಟಣದ ಅರಸ ಸಂತೈಸಿ ಅವರನ್ನು ಸತ್ಯಶೀಲರೆಂದು ಸ್ತುತಿಸಿ ಅವರಿಬ್ಬರ ಹೆಸರಿನಲ್ಲೂ ಎರಡು ಊರುಗಳನ್ನು ಕಟ್ಟಿಸಿ, ಅದಕ್ಕೆ ಕಂಪಲಾಪುರ ಮತ್ತು ಬಸಲಾಪುರ ಎಂದು ನಾಮಕರಣ ಮಾಡಿಸಿದ.

ಚಪ್ಪರದಹಳ್ಳಿ ಪಿರಿಯಾಪಟ್ಟಣ ತಾಲ್ಲೂಕಿನ ಒಂದು ಹಳ್ಳಿ.[೩೩] ವಲಸೆ ಬಂದ ಮುದುಕಿ ತನ್ನ ಮಗನ ಜೊತೆ ಗುಡಿಸಲನ್ನು ಕಟ್ಟಿಕೊಂಡಳು. ಅವಳು ಬರುವಾಗ ಅನೇಕ ಬಗೆಯ ಕಾಳುಗಳನ್ನು ತಂದಿದ್ದಳು. ಮಗನಿಗೆ ಹೇಳಿ ಆ ಕಾಳುಗಳನ್ನು ನೆಡಿಸಿದಳು. ಹುಟ್ಟಿದ ಸಸಿಗಳು ಬೆಳೆಯ ತೊಡಗಿದವು. ಅಷ್ಟರಲ್ಲಿ ಮುದುಕಿಯ ಗುಡಿಸಿಲಿನ ಸುತ್ತಮುತ್ತ ವಲಸೆ ಬಂದ ಮತ್ತೆ ಕೆಲವರು ಗುಡಿಸಲು ಕಟ್ಟಿಕೊಂಡರು. ಇತರೆ ಗುಡಿಸಲಿನವರೆಲ್ಲ ಸೌದೆ ತರಲು ಕಾಡಿಗೆ ಹೊರಟರು. ಇದನ್ನು ಕಂಡ ಮುದುಕಿಯ ಮಗ, 'ಅಮ್ಮ ಈ ಗಿಡ ಒಂದೇ ಸಮನೆ ಹಬ್ಬುತ್ತಿದೆ, ಅದಕ್ಕೆ ನಾವು ಚಪ್ಪರ ಹಾಕಿದರೆ ಅದರ ಬೆಳವಣಿಗೆಗೆ ಸಹಾಯವಾದೀತು. ಆದ್ದರಿಂದ ನಾವು ಅವರೊಡನೆ ಕಾಡಿಗೆ ಹೋಗಿ ಚಪ್ಪರಕ್ಕೆ ಬೇಕಾದ ಕವೆಗಳನ್ನು ತರಲೆ' ಎಂದಾಗ ಮುದುಕಿ ಸಮ್ಮತಿಸಿದಳು. 'ಚಪ್ಪರ' ಎಂಬ ಶಬ್ದ ಅವರಿಗೆ ಮದುವೆಯ ನೆನಪು

ಮಾಡಿಕೊಟ್ಟಿತು. ಈ ಹುಡುಗ ತನ್ನ ಮದುವೆಗೆ ತಾನೇ ಚಪ್ಪರ ಹಾಕಿಕೊಳ್ಳುವ ಸ್ಥಿತಿ ಬಂದಿದೆಯಲ್ಲ. ಅಯ್ಯೋ ಪಾಪ ನಾವು ಸಹಾಯ ಮಾಡಿದರೆ ತಪ್ಪೇನು ಎಂದುಕೊಂಡು ಎಲ್ಲರೂ ಕವೆಗಳನ್ನು ಕಡಿದು ಗಾಡಿಗೆ ತುಂಬಿಕೊಂಡು ಅವನು ತೋರಿದ ದಾರಿಯಲ್ಲಿ ಬಂದರೆ ಅದು ಅವರು ಉಳಿದಿದ್ದ ಊರೇ. ಅವರೆಲ್ಲರಿಗೂ ತಮ್ಮ ಊರಿಗೆ ಹೆಸರಿಲ್ಲದಿರುವುದು ಗೊತ್ತೇ ಇತ್ತು. ಮದುವೆಯ ಮಂಗಳ ಮುಹೂರ್ತದಲ್ಲೇ ತಮ್ಮ ಊರಿಗೆ ಒಂದು ಹೆಸರನ್ನು ಕರೆಯಬೇಕೆಂದು ಅವರೆಲ್ಲಾ ಚರ್ಚಿಸಿಕೊಳ್ಳುತ್ತಿದ್ದರು. ಸ್ವಲ್ಪ ಹೊತ್ತಿನಲ್ಲೆ ಒಂದು ಚಪ್ಪರ ಸಿದ್ಧವಾಯಿತು. ಯಾವುದೋ ಊರಿಗೆ ಹೋಗುತ್ತಿದ್ದ ಪುರೋಹಿತನೊಬ್ಬ ಮದುವೆ ಚಪ್ಪರವನ್ನು ಕಂಡು ದಾನ ಸ್ವೀಕಾರಾಕಾಂಕ್ಷಿಯಾಗಿ ಅಲ್ಲಿಗೆ ಬಂದನು. ಪುರೋಹಿತರು ಬಂದರೂ ಮದುವೆ ಗಂಡು ಶೃಂಗಾರ ಮಾಡಿಕೊಳ್ಳದೆ ಸುಮ್ಮನಿರುವನಲ್ಲ ಎಂಬುದು ಈ ಜನರ ಆತಂಕ. ಅವರು ಚಪ್ಪರದ ಶೃಂಗಾರವನ್ನು ನೋಡಿ ಹುಡುಗನಿಗೆ ಆಶ್ಚರ್ಯವಾಯಿತು. ಜೋಯಿಸರೂ ಒಂದು ಕಡೆ ಕುಳಿತಿದ್ದರು. ಅವರು ಈ ಜನರನ್ನು ಕುರಿತು, 'ಈ ಊರಿಗೆ ಏನಪ್ಪ ಹೆಸರು?' ಎಂದು ಕೇಳಿದರು. 'ನಮ್ಮೂರಿಗೆ ಹೆಸರಿಲ್ಲ ಸ್ವಾಮಿ, ನೀವಾದರೂ ಒಂದು ಹೆಸರು ಕಟ್ಟಿಬಿಡಿ' ಎಂದ. "ಮದುವೆಯಲ್ಲ ಮುಗಿಯಲಿ ಆಮೇಲೆ ನೋಡೋಣ!" ಜೋಯಿಸರ ಮಾತಿನಿಂದ ಊರಜನರ ಸಮಸ್ಯೆಯ ಪರಿಹಾರವಾದಂತಾಗಿ ನೆಮ್ಮದಿಯಿಂದ ನಿಟ್ಟುಸಿರುಬಿಟ್ಟರು. ಆದರೂ ಮದುವೆ ಮನೆಯಾದರೂ ಏನೊಂದು ಗದ್ದಲ ಗಡಿಬಿಡಿ ಇಲ್ಲವಲ್ಲ ಎಂದು ಅಸಮಾಧಾನದಿಂದ ಜನರೆಲ್ಲ ಮುದುಕಿಯನ್ನು ಕರೆದು ವಿಚಾರಿಸಿದಾಗ ಅವರಿಗೆ ನಿರಾಶೆಯಾಯಿತು. ಈ ಮದುವೆ ಕಾರ್ಯ ನಿಲ್ಲಬಾರದೆಂದು ಆ ಜನರು ಈ ಮುದ್ದು ಹುಡುಗನಿಗೆ ಯಾರು ತಾನೆ ಹೆಣ್ಣು ಕೊಡಲಾರರು ಎಂದು ಮಾತಾಡುತ್ತಿರುವಾಗ ಅವರಲ್ಲೇ ಒಬ್ಬ ತನ್ನ ಮಗಳನ್ನು ಧಾರೆ ಎರೆದು ಕೊಡಲು ಒಪ್ಪಿದನು. ಮದುವೆಯೂ ಮುಗಿಯಿತು. ಮಂಗಳಕಾರ್ಯ ನಡೆಯುತ್ತಿರುವಾಗಲೇ ಒಂದು ಹೆಸರು ತಮ್ಮ ಊರಿಗೆ ಬಂದಿತಲ್ಲ ಎಂದು ಆ ಜನರು ಹಿಗ್ಗಿದರು. ಆ ಹುಡುಗನ ಮದುವೆಯೂ ಆಯಿತು. ಊರಿಗೆ ಚಪ್ಪರದಹಳ್ಳಿ ಹೆಸರೂ ಬಂದಿತು.

ಗ್ರಾಮದಲ್ಲಿ ಹೆಗ್ಗಡೆಯೊಬ್ಬನ ಮನೆಯಲ್ಲಿ ಅತ್ತೆ ಸೊಸೆಯರಿಗೆ ಹತ್ತಿದ ಜಗಳ ಮುಗಿಯುತ್ತಿರಲಿಲ್ಲ. ಒಂದು ದಿನ ಸೊಸೆ ರಾಗಿಯನ್ನು ಬೀಸಿ ಹಿಟ್ಟನ್ನು ಒಲೆ ಮುಂದಿಟ್ಟು ಅತ್ತೆ ಅಡಿಗೆ ಮಾಡಲೆಂದು ನೀರು ತರುವ ನೆಪಮಾಡಿ ಹೊರಹೋದಳು. ಅತ್ತೆ ಸೊಸೆಯ ಕೈಯಲ್ಲೇ ಅಡಿಗೆ ಮಾಡಿಸದಿದ್ದರೆ ತಾನು ಅತ್ತೆಯೇ ಅಲ್ಲ ಎಂದು ಹಟ ತೊಟ್ಟಳು. ಇಬ್ಬರ ಜಗಳಕ್ಕೆ ಮೂರನೆಯವರಿಗೆ ಲಾಭ ಎಂಬಂತೆ ಅತ್ತೆ ಸೊಸೆಯರ ಜಗಳದಿಂದ ಸುಂಡಕ್ಕೆ (ಇಲಿ) ಸದವಕಾಶ ಸಿಕ್ಕಿ ಮೊರದಲ್ಲಿದ್ದ ರಾಗಿ ಹಿಟ್ಟನ್ನೆಲ್ಲಾ ತನ್ನ ಹೊಟ್ಟೆಗೆ ಹಾಕಿಕೊಂಡಿತು. ಹೊಲಕ್ಕೆ ಹೋಗಿದ್ದ ಅಪ್ಪ-ಮಕ್ಕಳು ಮನೆಗೆ ಬಂದರು. ಅವರಿಗೆ ಎಲ್ಲಾ ವಿಷಯವೂ

ತಿಳಿಯಿತು. ಹಿಟ್ಟನ್ನೊತ್ತಿರಿಗಿಲ್ಲ, ಹಸಿ ಹಿಟ್ಟು ಇರಲಿಲ್ಲ. ಇದರಿಂದ ಸುಂಡ(ಇಲಿ) ಹಸಿ ಹಿಟ್ಟನ್ನು ತಿಂದಿದ್ದರಿಂದ ಗ್ರಾಮಕ್ಕೆ ಸುಂಡವಾಳು[೩೪] ಹೆಸರು ಬಂದಿತೆಂದು ಐತಿಹ್ಯವಿದೆ.

ಶೆಟ್ಟಿ ವ್ಯಾಪಾರದಲ್ಲಿ ಒಂದಕ್ಕೆರಡರಂತೆ ಲಾಭ ಹೊಡೆಯುತ್ತಿದ್ದ. ಒಮ್ಮೆ ಆ ಊರಿಗೆ ಪ್ಲೇಗು ಬಂತು. ಒಬ್ಬ ತರುಣ ರೋಗಿಗಳಿಗೆ ಬಹಳ ನೆರವಾಗುತ್ತಿದ್ದ. ಅವರಿಗೆ ಬೇಕಾದ ಆಹಾರ ಪದಾರ್ಥಗಳನ್ನು ಶೆಟ್ಟಿಯ ಅಂಗಡಿಯಲ್ಲಿ ಕೊಳ್ಳುತ್ತಿದ್ದನು. ಹೆಚ್ಚು ಲಾಭವನ್ನು ಗಳಿಸಲು ಇದೇ ಸಮಯವೆಂದುಕೊಂಡ ಶೆಟ್ಟಿ, ಒಂದಕ್ಕೆರಡರಂತೆ ಬೆಲೆ ಹೆಚ್ಚಿಸಿದನು. ರೋಗಿಗಳ ಆರೈಕೆಗಾಗಿ ಆ ತರುಣನು ತನ್ನೆಲ್ಲ ಆಸ್ತಿಪಾಸ್ತಿಗಳನ್ನೆಲ್ಲ ಶೆಟ್ಟಿಗೆ ಮಾರಿಕೊಂಡು ಅದೂ ಸಾಲದೆ ಶೆಟ್ಟಿಯಲ್ಲಿ ಸಾಲ ಕೇಳಿದ. ಆದರೆ ಈ ತರುಣನ ಬೇಡಿಕೆಯನ್ನು ಶೆಟ್ಟಿ ನಿರಾಕರಿಸಿದ. ಶೆಟ್ಟಿಗೆ ಒಬ್ಬನೇ ಒಬ್ಬ ಮಗನಿದ್ದ. ಅವನಿಗೂ ಪ್ಲೇಗಿನ ಲಕ್ಷಣ ಕಾಣಿಸಿಕೊಂಡಿತು. ಇದರಿಂದ ಶೆಟ್ಟಿಯೂ ಊರು ಬಿಡಬೇಕಾಗಿ ಬಂತು. ಅವನು ಊರಿಂದ ಹೊರಗೆ ಹೋಗಲು ಅವನ ವಸ್ತುಗಳು ಸಾಗಿಸಲು ಯಾರು ಸಹಕರಿಸಲಿಲ್ಲ. ಇದರಿಂದ ಶೆಟ್ಟಿಗೆ ಬಹಳ ದುಃಖವಾಯಿತು. ಅಲ್ಲದೆ ಅಪರಾಧದ ಅರಿವೂ ಮೂಡಿತ್ತು. ಕೊನೆಗೆ ಶೆಟ್ಟಿ ಆ ಯುವಕನ ಬಳಿ ಬಂದು ನೆರವನ್ನು ಕೋರಿದನು. ಅದಕ್ಕೆ ಆ ಯುವಕ ಒಪ್ಪಿದ. ಶೆಟ್ಟಿಯಿಂದ ಉಪಕೃತರಾದ ಸಂಗ ಜನಾಂಗದವರು ಶೆಟ್ಟಿಯ ಹೆಸರಿನಲ್ಲಿ ತಮ್ಮ ಊರಿಗೆ ಸಂಗರ ಶೆಟ್ಟಿಹಳ್ಳಿ[೩೫] ಎಂದೂ ಶೆಟ್ಟಿ ಇದ್ದ ಸ್ಥಳಕ್ಕೆ ಶೆಟ್ಟಿಹಳ್ಳಿ ಎಂದೂ ಕರೆದರು.

ಪಿರಿಯಾಪಟ್ಟಣ ಬೆಟ್ಟದಪುರ ಮಾರ್ಗದಲ್ಲಿ ಸಿಗುವ ಒಂದು ಹಳ್ಳಿ ಹಿಟ್ಟಿನಹೆಬ್ಬಾಗಿಲು.[೩೬] ಇತಿಹಾಸ ಪ್ರಸಿದ್ಧವಾದ ಸ್ಥಳವೆಂಬುದನ್ನು ಅಲ್ಲಿ ದೊರೆತಿರುವ ಶಿಲಾಶಾಸನ ಮತ್ತು ತಾಮ್ರ ಶಾಸನಗಳಿಂದ ತಿಳಿಯಬಹುದಾಗಿದೆ. ಇದು ಚಂಗಾಳ್ವರ ಆಡಳಿತಕ್ಕೆ ಸೇರಿದ್ದ ಒಂದು ಗ್ರಾಮ. ಚಂಗಾಳ್ವರ ಕೊನೆಯ ಅರಸನಾದ ವೀರರಾಜನಿಗೂ ಮತ್ತು ಮೈಸೂರು ಅರಸ ರಣಧೀರ ಕಂಠೀರವ ನರಸಿಂಹರಾಜ ಒಡೆಯನಿಗೂ ಕಾಳಗ ನಡೆಯಿತು. ಚಂಗಾಳ್ವರನ್ನು ಸುಲಭವಾಗಿ ಸೋಲಿಸಲು ಸಾಧ್ಯವಿಲ್ಲವೆಂದು ಮೈಸೂರಿನ ದಳವಾಯಿಗೆ ಅರ್ಥವಾಯಿತು. ಆಗ ಅವನು ರಾತ್ರಿ ಹೊತ್ತಿನಲ್ಲಿ ಕಳ್ಳನಂತೆ ಹಳ್ಳಿಗಳಿಗೆ ನುಗ್ಗಿ ಸೂರೆ ಮಾಡಲು ತನ್ನ ಸೈನ್ಯಕ್ಕೆ ಅಪ್ಪಣೆ ಕೊಟ್ಟನು. ರಾತ್ರಿ ವೇಳೆಯಲ್ಲಿ ಗಡಿಕಾವಲಿನಲ್ಲಿದ್ದ ವೀರರಾಜನ ಸೈನಿಕರು ತಮ್ಮ ತಮ್ಮ ಬಿಡಾರಗಳಲ್ಲಿ ಅಡಿಗೆ ಮಾಡುತ್ತಿದ್ದರು. ಸದ್ದುಗದ್ದಲ ಮಾಡದೆ ಕಳ್ಳಹೆಜ್ಜೆಗಳಲ್ಲಿ ಬಂದ ಮೈಸೂರು ಸೈನ್ಯ ಇವರ ಮೇಲೆರಗಿತು. ಆಗ ಚಂಗಾಳ್ವರ ಸೈನ್ಯ ತಾವು ತಿರುಗುತ್ತಿದ್ದ ಹಿಟ್ಟಿನ ದೊಣ್ಣೆ, ಹಿಟ್ಟಿನ ಕಡೆಗೋಲು ಮತ್ತು ಹಿಟ್ಟಿನ ಮುದ್ದೆಗಳಿಂದ ಶತ್ರುಗಳಿಗೆ ಅಪ್ಪಳಿಸಿದರು. ಇದರಿಂದ ಹೆಬ್ಬಾಗಿಲಿನಿಂದ ಒಳಕ್ಕೆ ಪ್ರವೇಶಿಸಲಾರದ ಮೈಸೂರು ಸೈನ್ಯ ದಿಕ್ಕಾಪಾಲಾಗಿ ಓಡಿ ಹೋಯಿತು.

ಹೆಬ್ಬಾಗಿಲಿನಲ್ಲೇ ಹಿಟ್ಟಿನಿಂದ ಹೊಡೆದು ಸೈನ್ಯವನ್ನು ತಡೆದುದರಿಂದ ಆ ಊರಿಗೆ ಹಿಟ್ಟಿನ ಹೆಬ್ಬಾಗಿಲು ಎಂದು ಹೆಸರಾಯಿತೆಂದು ಸ್ಥಳೀಯರ ಅಭಿಪ್ರಾಯ. ಇಂದು ಹಿಟ್ನೆಹೆಬ್ಬಾಗಿಲಾಗಿದೆ.

ಸ್ಥಳನಾಮಗಳು

ಅಲೆಮಾರಿ ಜೀವನದಿಂದ ಆರಂಭವಾದ ಮಾನವರ ಬದುಕು ಕ್ರಮೇಣ ಒಂದೆಡೆ ನಿಲ್ಲುವಂತಾಯಿತು. ಅಲೆಮಾರಿ ಸಮುದಾಯಗಳು ಭೌಗೋಳಿಕ ಪರಿಸರದ ಗವಿ, ಬಂಡೆಯಗೂಡು, ಬೆಟ್ಟದ ಅಂಚಿನಲ್ಲಿ ತಂಗುತ್ತಿದ್ದರು. ತರುವಾಯ ನಾಗರಿಕರಾದರು. ಕೆಲವು ಹಂತಗಳಲ್ಲಿ ಅಲೆಮಾರಿತನ ಬಿಟ್ಟು ಒಂದು ಕಡೆ ನೆಲೆಸಲು ಆರಂಭಿಸಿದರು. ಈ ನೆಲೆಸುವಿಕೆ ಗುಂಪಿನ ಮಾದರಿಯಲ್ಲಿತ್ತು. ಮುಂದೆ ಹಲವು ಗುಂಪುಗಳು ಒಟ್ಟಿಗೆ ಬದುಕುವುದನ್ನು ಆರಂಭಿಸಿದವು. ಈ ಹಂತವನ್ನು ಸಮುದಾಯ ನೆಲೆಸುವಿಕೆಯ ಗ್ರಾಮ ಕಲ್ಪನೆಯ ಪೂರ್ವ ಸ್ಥಿತಿಯೆಂದು ತಿಳಿಯಬಹುದು. ಅದರಂತೆ ಆಯಾ ಭೌಗೋಳಿಕ ಪರಿಸರದಲ್ಲಿ ವಾಸಿಸುವ ನೆಲೆಗಳು ಆರಂಭವಾದವು. ನೆಲೆಗಳಿಗೆ ಗುರುತು ಹೇಳುವ ಹೆಸರಿನ ಅಗತ್ಯವಿದ್ದಿತ್ತು. ಈ ಅಗತ್ಯವೇ ನೆಲೆಗಳಿಗೆ ಹೆಸರಿಸುವ, ಗ್ರಾಮ, ಸ್ಥಳನಾಮಗಳ ಆರಂಭವಾದುದರ ಕುರುಹು ಎನ್ನಬಹುದು.

ಮಾನವ ತನ್ನ ಅಲೆಮಾರಿ ಜೀವನವನ್ನು ಕೈಬಿಟ್ಟು ಪ್ರಕೃತಿಯನ್ನು ಪಳಗಿಸಿ ತನ್ನ ಜೀವನಕ್ಕೆ ಒಗ್ಗಿಸಿಕೊಳ್ಳುವುದು ಸಾಧ್ಯ ಎಂಬುದನ್ನು ಯಾವಾಗ ಮನಗಂಡನೋ ಆಗ ಊರು ಹಳ್ಳಿಗಳ ಉಗಮವಾಯಿತು ಎನ್ನಬಹುದು. ಸಂಕೇತವಾಗಿ ಸ್ಥಳಕ್ಕೆ ಒಂದು ಹೆಸರಿತ್ತ. ಆ ಸ್ಥಳ ಅವನ ಕುರುಹಾಗಿ ಹೆಸರು ತಳೆಯಿತು. ಕ್ರಮೇಣ ಅಲ್ಲಿ ಜನ ವಸತಿ ಇರಲಿ ಇಲ್ಲದಿರಲಿ ಜನಾಂಗದ ಸ್ಮೃತಿಯನ್ನು ಹೊತ್ತ ಗುರುತು ಹಾಗೆಯೇ ಬಳಕೆಯಾಗುತ್ತಿತ್ತು. ಹಲವು ಜನಾಂಗಗಳ ಸ್ಮೃತಿ ಮತ್ತು ಅಭಿಮಾನಗಳನ್ನು ಶಾಶ್ವತವಾಗಿ ಬೆಸೆಯುವ ಸಂಸ್ಕೃತಿಯ ಕೊಂಡಿಯೇ ಸ್ಥಳನಾಮ.[೩೭] ಒಂದು ಪ್ರದೇಶದ ಸಾಂಸ್ಕೃತಿಕ ಇತಿಹಾಸದ ಅಧ್ಯಯನದಲ್ಲಿ ಅವಶ್ಯಕವಾಗಿ ಗಮನಿಸಬೇಕಾದ ಅಂಶಗಳಲ್ಲಿ ಸ್ಥಳನಾಮವು ಒಂದು. ಬದಲಾದ ಭೌಗೋಳಿಕ ಸ್ವರೂಪದ ಚರಿತ್ರೆಗೆ ಇದು ಸುಳುಹುವನ್ನು ಕೊಡಬಲ್ಲದು. ಅಲ್ಲದೇ ಐತಿಹಾಸಿಕ ಘಟನೆಗೆ ಪುಷ್ಟಿಯನ್ನು ನೀಡಬಲ್ಲದು.[೩೮] ಆದ್ದರಿಂದ ಸ್ಥಳನಾಮಗಳನ್ನು ಇಂದಿಗೂ ಚರಿತ್ರೆಯ ಪ್ರಧಾನ ಆಕರವೆನಿಸಿದ ಶಾಸನಗಳಷ್ಟೇ ಅಥವಾ ಅವುಗಳಿಗಿಂತ ಹೆಚ್ಚು ವಿಶ್ವಾಸನೀಯವಾಗಿ ಮತ್ತು ಚಾರಿತ್ರಿಕ ಆಕರ ಒದಗಿಸುವ ಸಾಕ್ಷ್ಯಾಧಾರಗಳ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚುವ ಸಾಧನಗಳಾಗಿ ಬಳಸಿಕೊಳ್ಳಲಾಗುತ್ತಿದೆ.[೩೯] ಹೀಗೆ ಒಂದು ಪ್ರದೇಶದ ಇತಿಹಾಸದ ರಚನೆಯಲ್ಲಿ ಅಲ್ಲಿನ ಸ್ಥಳನಾಮ ಅತ್ಯಂತ ಮಹತ್ವದಾಗಿದ್ದು ಸ್ಥಳೀಯ ಐತಿಹಾಸಿಕ ಹಿನ್ನೆಲೆಯನ್ನು ಕುರಿತು ಹೇಳುತ್ತದೆ.

ದೇಶದ ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ಗ್ರಾಮಗಳ ಪಾತ್ರ ಬಹುದೊಡ್ಡದು. ವಿಶೇಷ ಘಟನಾತ್ಮಕ ಹಿನ್ನೆಲೆಯಲ್ಲಿ ರಚನೆಗೊಂಡ ಪ್ರತಿ ಗ್ರಾಮವು ಇತಿಹಾಸ ರಚನೆಯಲ್ಲಿ ಪಾತ್ರಗೊಳ್ಳುತ್ತದೆ. ಈ ಕಾರಣದಿಂದ ಗ್ರಾಮನಾಮಗಳ ಅಧ್ಯಯನ ಬಹು ಅವಶ್ಯಕ. ದೇಶ, ಧರ್ಮ, ಭಾಷೆ, ಬಣ್ಣ ಯಾವುದೇ ಇರಲಿ, ಅಪರಿಚಿತ ಇಲ್ಲವೇ ಪರಿಚಿತರ ನಡುವೆ ಮಾತುಕತೆ ಪ್ರಾರಂಭವಾಗುವ ಒಂದು ಸರಳ ಹಾಗೂ ಸಾಮಾನ್ಯ ಪ್ರಶ್ನೆಯಿಂದ. ಅದೇನೆಂದರೆ ನಿಮ್ಮ ಹೆಸರೇನು ಎಂಬ ಪ್ರಶ್ನೆ. ಆ ಪ್ರಶ್ನೆಗೆ ಉತ್ತರ ದೊರಕಿದ ಕೂಡಲೇ ಮೊದಲನೆಯ ಪ್ರಶ್ನೆಯ ಅವಿಭಾಜ್ಯ ಎಂಬಂತೆ ಕೇಳಿಬರುವ ಮರುಪ್ರಶ್ನೆ ನಿಮ್ಮ ಊರು ಯಾವುದು? ಪರಸ್ಪರರ ನಡುವೆ ಈ ಪ್ರಶ್ನೆಗಳಿಗೆ ಉತ್ತರ ದೊರಕಿದ ನಂತರವೇ ಉಳಿದೆಲ್ಲ ಸಾಮಾಜಿಕ ವ್ಯವಹಾರಗಳು ಪ್ರಾರಂಭಗೊಳ್ಳುತ್ತವೆ. ಅಂದರೆ ವ್ಯಕ್ತಿಯ ಹೆಸರು ಮತ್ತು ನೆಲೆನಿಂತ ಊರು ಇವುಗಳು ಮುಂದಿನ ವ್ಯವಹಾರಗಳಿಗೆ ಅಡಿಪಾಯವಾಗುತ್ತವೆ. ಮುಂದೊಂದು ದಿನ ಈ ಎರಡು ಸಾಮಾನ್ಯ ಪ್ರಶ್ನೆಗಳಿಂದ ಪ್ರಾರಂಭವಾದ ಸಾಮಾಜಿಕ ಸಂಬಂಧ ಗಾಢವಾಗಿ ಬೆಳೆಯುತ್ತದೆ. ಆದುದರಿಂದ ವ್ಯಕ್ತಿನಾಮಗಳು ಮತ್ತು ಸ್ಥಳನಾಮಗಳು ಮಾನವ ಜೀವನದ ವಿಕಾಸದಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ.[೪೦]

ಸ್ಥಳನಾಮಗಳ ವಿವಿಧ ಘಟಕಗಳನ್ನು ವಿಶ್ಲೇಷಿಸಿದರೆ ಅನೇಕ ಹೊಸ ಹೊಸ ವಿಚಾರಗಳು ಬೆಳಕಿಗೆ ಬರುತ್ತವೆ. ಅದು ಮಾನವನ ಹುಟ್ಟು, ಬೆಳವಣಿಗೆ, ಸಂಸ್ಕೃತಿ, ನಾಗರಿಕತೆಯ ಹೊಸದೃಷ್ಟಿ ಮತ್ತು ಜೀವಂತ ಪಳೆಯುಳಿಕೆಗಳ ಮಹತ್ವವನ್ನು ಖಚಿತಪಡಿಸುತ್ತದೆ. ಪ್ರಾಗಿತಿಹಾಸಿಕ ಯುಗದಲ್ಲಿ ಮಾನವ ಬೇಟೆಯಿಂದ ಜೀವನ ನಿರ್ವಹಿಸುತ್ತಿದ್ದಾಗ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುತ್ತಿದ್ದುದರಿಂದ ವ್ಯವಸ್ಥಿತವಾದ ಗ್ರಾಮಗಳಿರುವ ಸಾಧ್ಯತೆ ಇರಲಿಲ್ಲ. ವ್ಯವಸಾಯ ಮತ್ತು ಪಶುಪಾಲನೆ ಬಳಕೆಗೆ ಬಂದು ಶಿಲಾಯುಗದ(ಕ್ರಿ.ಪೂ. ೨೫೦೦)ಲ್ಲಿ ಹಲವು ಗ್ರಾಮ ನೆಲೆಗಳು ಕಂಡುಬಂದಿವೆ. ರಾಯಚೂರು ಜಿಲ್ಲೆಯ ಪಿಕ್ಲಿಹಾಳು, ಬಳ್ಳಾರಿಯ ತೆಕ್ಕಲಕೋಟೆ, ಸಂಗನಕಲ್ಲು, ಧಾರವಾಡ ಜಿಲ್ಲೆಯ ಹಳ್ಳೂರು, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಮೈಸೂರು ಜಿಲ್ಲೆಯ ಟಿ. ನರಸೀಪುರ ಮತ್ತು ಹೆಮ್ಮಿಗೆ ಹಾಗೂ ಗುಲ್ಬರ್ಗಾ ಜಿಲ್ಲೆಯ ಸನ್ನತಿ. ಇಲ್ಲಿ ನಡೆದಿರುವ ಉತ್ಖನನಗಳಿಂದ ಗ್ರಾಮ ಸ್ವರೂಪದ ಮಾಹಿತಿಗಳು ದೊರಕಿವೆ.[೪೧] ಸ್ಥಳನಾಮದ ಅಧ್ಯಯನವೆಂದರೆ ಮಾನವನ ಶಿಲಾಯುಗದ ಜನಜೀವನವನ್ನು ತಿಳಿಯುವುದೇ ಆಗಿರುತ್ತದೆ. ಒಂದು ಸ್ಥಳನಾಮದ ಓಂದೆ ನಾಡಿನ ಕಲೆ, ಜನಜೀವನ, ಸಂಸ್ಕೃತಿ, ವೃತ್ತಿ, ಕಸುಬು, ಧರ್ಮ, ಈ ನಾಡನ್ನು ಆಳಿದ ಪ್ರಭುಗಳು ಹಾಗೂ ಇವರ ಅಧೀನವಾಗಿ ಆಡಳಿತ ನಡೆಸುತ್ತಿದ್ದ ಚಿಕ್ಕ ಸಂಸ್ಥಾನಗಳ ಪ್ರಮುಖ ವಿಚಾರಗಳು ತಿಳಿದುಬರುತ್ತವೆ.

ಕೃಷಿ ಕ್ಷೇತ್ರದಿಂದ ಹಿಡಿದು ಆಧುನಿಕ ವಿಜ್ಞಾನದ ಪ್ರಗತಿಯವರೆಗಿನ ಎಲ್ಲಾ ಹಂತಗಳು ಗ್ರಾಮಗಳಿಂದಲೇ ಜನ್ಮ ತಳೆದಂಥವು. ಹಳ್ಳಿ, ನಗರ, ನದಿ, ಪರ್ವತಗಳು ಸ್ವತಂತ್ರವಾದ ವ್ಯಕ್ತಿತ್ವ ಹಾಗೂ ಸ್ಥಾನಮಾನ ಪಡೆದಿವೆಯೆಂಬುದು ಸರ್ವ ಸತ್ಯದ ಸಂಗತಿ. ಶಿಲಾಯುಗ ಕಾಲದಿಂದ ಮಾನವ ಕಾಡು, ಮೇಡು, ಗುಹೆಗಳಲ್ಲಿ ವಾಸಿಸುತ್ತಿದ್ದು ನಾಗರಿಕನಾದಂತೆ ಗುಡಿಸಲು, ಮನೆ, ಮಠಗಳನ್ನು ನಿರ್ಮಾಣ ಮಾಡಲು ಪ್ರಾರಂಭಿಸಿದ. ಹೀಗೆ ಸೃಷ್ಟಿಯಾದ ನಾಗರಿಕ ಬದುಕು ಕ್ರಮೇಣ ಹೊಸ ತಿರುವನ್ನು ಪಡೆಯಿತು. ಕಾಲ ಸಾಗಿದಂತೆಲ್ಲ ಸಮಾಜ, ಪರಿಸರ, ಭಾಷೆ, ಚರಿತ್ರೆ, ಮನೋಧರ್ಮ ಬದಲಾಗುತ್ತಾ ಬಂದಿದೆ. ಸಮಾಜದಲ್ಲಿನ ವ್ಯಕ್ತಿಜೀವನ ಸಾಂಪ್ರದಾಯಿಕವಾಗಿ ಹಲವಾರು ಕಟ್ಟುಪಾಡುಗಳಿಗೆ ಒಳಪಟ್ಟಿರುತ್ತದೆ. ಪರಿಸರದಲ್ಲಿ ದೊರೆಯುವ ವಸ್ತುಗಳ ಸನ್ನಿವೇಶಗಳ ಬಳಕೆಯಿಂದ ಅವನ ನಾಗರಿಕ ಬದುಕು ಎಲ್ಲಾ ಹಂತಗಳಲ್ಲೂ ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಂಡು ಮುಂದುವರೆದಿದೆ ಎಂದು ಹೇಳಬಹುದು.

ಸ್ಥಳನಾಮ ಅಧ್ಯಯನದ ಉದ್ದೇಶ

ಸ್ಥಳೀಯ ಚರಿತ್ರೆ ಅಧ್ಯಯನದ ಆಕರಗಳಲ್ಲಿ ಸ್ಥಳನಾಮಗಳು ಪ್ರಮುಖವಾಗಿವೆ. ಪ್ರತಿಯೊಂದು ಸ್ಥಳ, ವ್ಯಕ್ತಿ ಮತ್ತು ಸಂಸ್ಥೆಗಳಿಗೆ ಹೆಸರಿಲ್ಲದೆ ಕಲ್ಪಿಸಿಕೊಳ್ಳುವುದು ಅಸಾಧ್ಯ. ನಿರ್ದಿಷ್ಟ ಹೆಸರು ಪಡೆಯಬೇಕಾದರೆ ಮಾನವನ ಉದ್ದೇಶ ಹೆಸರಿನಲ್ಲಿ ಅಡಗಿರುತ್ತಿತ್ತು. ಈ ನಿಟ್ಟಿನಲ್ಲಿ ಪಿರಿಯಾಪಟ್ಟಣ ತಾಲ್ಲೂಕು ಪರಿಸರವು ಭೌಗೋಳಿಕವಾಗಿ ಮತ್ತು ಸಾಂಸ್ಕೃತಿಕವಾಗಿ ತನ್ನದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ. ಆದ್ದರಿಂದ ಈ ಪರಿಸರದಲ್ಲಿ ಕಂಡುಬಂದಿರುವ ಸ್ಥಳನಾಮಗಳನ್ನು ಕುರಿತು ಅಧ್ಯಯನ ಮಾಡುವ ಪ್ರಮುಖ ಉದ್ದೇಶವಾಗಿದೆ. ವಿಭಿನ್ನ ಸಂಸ್ಕೃತಿಯಲ್ಲಿ ವೈವಿಧ್ಯತೆ ಇರುವುದು ಕಂಡುಬರುತ್ತದೆ. ಇಂತಹ ವೈವಿಧ್ಯತೆ ವಿವಿಧ ಸ್ಥಳಗಳಿಗೆ ಸೀಮಿತವಾಗಿರುತ್ತದೆ. ಇವುಗಳ ವೈವಿಧ್ಯತೆ, ಏಕತೆಯನ್ನು ಗುರುತಿಸಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಪ್ರಮುಖ ಐತಿಹಾಸಿಕ ಸ್ಥಳನಾಮಗಳ ಅಧ್ಯಯನ ಅತ್ಯವಶ್ಯಕವೆಂದು ತೋರುತ್ತದೆ.

ಶಾಸ್ತ್ರೀಯವಾಗಿ ನಡೆಯಬೇಕಾದ ಅಧ್ಯಯನಗಳ ಪೈಕಿ ಸ್ಥಳನಾಮ ಅಧ್ಯಯನವೂ ಒಂದು. ಮಾನವನ ಹುಟ್ಟು ಮತ್ತು ಅವನು ವಾಸಿಸುತ್ತಿದ್ದ ಸ್ಥಳಗಳ ಉಗಮ, ಚರಿತ್ರೆ, ಜನಜೀವನ ಸಂಸ್ಕೃತಿ, ನಾಗರಿಕತೆ, ಪಳೆಯುಳಿಕೆ ಮುಂತಾದವುಗಳ ಬಗ್ಗೆ ಅರಿಯಲು ಸ್ಥಳನಾಮಗಳ ಅಧ್ಯಯನದಿಂದ ಸಾಧ್ಯವಾಗುತ್ತದೆ. ಶಿಲಾಯುಗದ ಕಾಲದಿಂದಲೂ ಮಾನವ ಮುಂದುವರಿಯುತ್ತಾ ನಾಗರಿಕನಾದಂತೆ, ಕಾಡು, ಗುಹೆಗಳಲ್ಲಿ ವಾಸಿಸುವುದನ್ನು ಬಿಟ್ಟು, ನೆರಳಿಗೋಸ್ಕರ ಗುಡಿಸಲು, ಮನೆ, ಮಠಗಳನ್ನು ನಿರ್ಮಾಣ ಮಾಡಲು ಪ್ರಾರಂಭಿಸಿದನು. ಹೀಗೆ ಸೃಷ್ಟಿಯಾದ ಅವನ ನಾಗರಿಕ ಬದುಕು ಕಾಲಕ್ರಮೇಣ ಹೊಸ ತಿರುವನ್ನು ಪಡೆಯಿತು. ಗತಕಾಲದಲ್ಲಿ ನಡೆದ

ಘಟನೆ, ಭೌಗೋಳಿಕ ವಿವರಣೆ ಯುದ್ಧದ ಪರಿಣಾಮ, ವೀರರು ಜಯಿಸಿದ ಯುದ್ಧ, ಹಾಗೂ ಆರ್ಥಿಕ ಅಭಿವೃದ್ಧಿ ಮತ್ತು ವಿಜ್ಞಾನದ ಮುನ್ನಡೆ, ಒಂದು ನಾಡಿನ ಕೀರ್ತಿಯನ್ನು ಸ್ಥಳನಾಮಗಳ ಅಧ್ಯಯನದಿಂದ ತಿಳಿಯಬಹುದಾಗಿದೆ. ಒಟ್ಟಿನಲ್ಲಿ ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ಭೌಗೋಳಿಕ, ಐತಿಹಾಸಿಕ, ಸಾಂಸ್ಕೃತಿಕ, ಆಡಳಿತ ಹಾಗೂ ಜಾನಪದ ನೆಲೆಯಲ್ಲಿ ನಿರ್ಮಾಣಗೊಂಡಿರುವ ಸ್ಥಳನಾಮಗಳನ್ನು ಕುರಿತು ಅಧ್ಯಯನ ಮಾಡುವ ಪ್ರಮುಖ ಉದ್ದೇಶವಾಗಿದೆ.

ಸ್ಥಳನಾಮ ಅಧ್ಯಯನದ ಮಹತ್ವ

ಹೆಸರುಗಳಿಲ್ಲದ ಊರು, ವ್ಯಕ್ತಿ ಹಾಗೂ ವಸ್ತುವನ್ನೋ ಊಹಿಸಿಕೊಳ್ಳುವುದು ಅಸಾಧ್ಯ. ಜಗತ್ತು ಎಂಬುದು ಭಾಷೆಯ ಹುಟ್ಟಿನೊಡನೆ ಪ್ರಾಮುಖ್ಯತೆ ಪಡೆಯಿತು. ಮನುಷ್ಯ ಒಂದೆಡೆ ನೆಲೆನಿಂತು ಭಾಷೆ ಕಲಿಯುತ್ತಾ ತನ್ನ ಅನುಭವ, ಆಲೋಚನೆ, ವಿಷಯ ಸಂಗತಿ, ವಸ್ತು ಮೊದಲಾದವುಗಳಿಗೆ ಹೆಸರು ಕೊಡಲು ಹೊರಟಾಗ ನಾಮನಿರ್ಮಾಣ ಕಾರ್ಯ ಪ್ರಾರಂಭಗೊಂಡಿತು. ಹೀಗೆ ಹೆಸರಿನ ಮಹತ್ವ ತಿಳಿಯಲು ಮಾಡುವ ವೈಜ್ಞಾನಿಕ ಅಧ್ಯಯನವನ್ನು ನಾಮವಿಜ್ಞಾನ ಎನ್ನಲಾಗುವುದು. ಆಂಗ್ಲಭಾಷೆಯಲ್ಲಿ ಸ್ಥಳನಾಮದ ಶಾಸ್ತ್ರಕ್ಕೆ ಟೊಮೊನೊಮಿ ಎನ್ನುವರು. ಇದು ಮೂಲತಃ ಗ್ರೀಕ್ ಭಾಷೆಯ ಟೋಪೊಸ್ ಮತ್ತು ನೋಮೋಸ್ ಪದಗಳಿಂದ ಬಂದಿದೆ. ಟೋಪೊಸ್ ಅಂದರೆ ಸ್ಥಳ, ನೋಮೋಸ್ ಎಂದರೆ ಅಧ್ಯಯನ ಎಂದರ್ಥ. ಅಂದರೆ ಸ್ಥಳನಾಮದ ಅಧ್ಯಯನವೆಂದಾಗುತ್ತದೆ. ಆದ್ದರಿಂದ ಸ್ಥಳನಾಮಗಳನ್ನು ಕುರಿತು ಅಧ್ಯಯನ ಮಾಡುವ ಸಾಮಾಜಿಕ ವಿಜ್ಞಾನವೆಂದೇ ಕರೆಯಬಹುದು. ಗ್ರಾಮದ ಹಿನ್ನೆಲೆ, ಸಾಮ್ರಾಜ್ಯ ಸ್ಥಾಪನೆಯ ವಿಷಯ, ರಾಜ್ಯಾಡಳಿತ ಹಾಗೂ ಜನಹಿತ ಕಲ್ಯಾಣ ನೆರವೇರಿದ ಬಗ್ಗೆ ಸ್ಥಳನಾಮದ ಅಧ್ಯಯನದಿಂದ. ಅವುಗಳಲ್ಲಿ ನಾಡು, ವಿಷಯ, ರಾಷ್ಟ್ರ ಮತ್ತು ಗ್ರಾಮಗಳು ಪ್ರಮುಖವಾಗಿವೆ. ಚರಿತ್ರೆಯನ್ನು ನೋಡಿದರೆ ಅತ್ಯಂತ ಚಿಕ್ಕ ಘಟಕ ಹಳ್ಳಿ. ಹಳ್ಳಿಯು ಊರಿನ ಯಜಮಾನ, ಗೌಡ ಮತ್ತು ಪಟೇಲನ ಆಡಳಿತಕ್ಕೆ ಒಳಪಟ್ಟಿತು. ಗ್ರಾಮದಲ್ಲಿನ ಸಮಸ್ಯೆ ಹೋಗಲಾಡಿಸಲು ಪಟೇಲ, ಶ್ಯಾನುಬೋಗ, ಕಾರಣಿಕ ಇರುತ್ತಿದ್ದರು. ಇಲ್ಲಿ ಪಂಚಾಯ್ತಿ ಕಟ್ಟೆಯಂತಹ ಸ್ಥಳದಲ್ಲಿ ಕುಳಿತು ಆಸ್ತಿವಿವಾದ, ಜಗಳ, ಕುಂದುಕೊರತೆಗಳನ್ನು ನಿವಾರಿಸುತ್ತಿದ್ದರು. ಹಾಗಾಗಿ ವ್ಯಕ್ತಿಗತವಾಗಿ ಸ್ಥಳದ ಹೆಸರಿನ ರೂಪವಾಗಿ ಸ್ಥಳನಾಮಗಳು ನಿರ್ಮಾಣಗೊಂಡಿವೆ. ಮನುಷ್ಯ ತನ್ನ ಆಹಾರೋತ್ಪಾದನೆಗಾಗಿ ನದಿಯ ನೀರು, ತೋಟ, ಕೆರೆ, ಬಾವಿಗಳನ್ನು ನಿರ್ಮಿಸಿಕೊಂಡಿರುವುದು ಕಂಡುಬರುತ್ತದೆ. ಈ ಹಿನ್ನೆಲೆ ಕೂಡ ಸ್ಥಳನಾಮದ ಸೃಷ್ಟಿಗೆ ಕಾರಣವಾಗಿದೆ.

ಚಕ್ರವರ್ತಿ, ಪಾಳೆಯಗಾರರು, ಚರಿತ್ರೆಯಲ್ಲಿ ಸ್ಥಾನ ಪಡೆದಿರುವಂತೆ, ಊರಾಳಿದ ಗೌಡ, ಪಟೇಲ, ನಾಡಿಗಾಗಿ ಉದಾತ್ತ ಕಾಣಿಕೆ ನೀಡಿದ ಶ್ರೀಸಾಮಾನ್ಯರ ಬದುಕು ಚರಿತ್ರೆಯಲ್ಲಿ ಹೇಗೆ ಸೇರಿಹೋಗಿದೆಯೆಂಬ ವಿವರಗಳನ್ನು ಗ್ರಾಮನಾಮಗಳ ಅಧ್ಯಯನದಿಂದ ತಿಳಿಯಬಹುದಾಗಿದೆ. ಗ್ರಾಮನಾಮಗಳು ಚರಿತ್ರೆ ಜೊತೆಗೆ ಭೂಗೋಳಶಾಸ್ತ್ರ, ಮಾನವಶಾಸ್ತ್ರ, ಪುರಾತತ್ವಶಾಸ್ತ್ರ, ಸಸ್ಯಶಾಸ್ತ್ರ, ಖಗೋಳಶಾಸ್ತ್ರ, ಭಾಷಾಶಾಸ್ತ್ರ, ಜಾನಪದದಂತಹ ಹಲವು ಶಾಸ್ತ್ರ ಶಾಖೆಗಳನ್ನೊಳಗೊಂಡಿದೆ. ಗ್ರಾಮನಾಮಗಳ ಅಧ್ಯಯನದಿಂದ ಮಾನವರ ಬದುಕು, ಜೀವನ ಪದ್ಧತಿ, ಅವರ ವಾಸ್ತವ್ಯ, ವೃತ್ತಿ, ಜನರ ವಲಸೆ, ಯುದ್ಧ, ಯುದ್ಧದ ಪರಿಣಾಮ, ಬರಗಾಲ, ರೋಗರುಜಿನಗಳು, ಜನರ ಕಸುಬು, ಅವರ ಸಾಂಸ್ಕೃತಿಕ ವಿಷಯಗಳು ತಿಳಿದುಬರುತ್ತವೆ. ಮತ್ತು ಗ್ರಾಮನಾಮಗಳ ಅಧ್ಯಯನದಿಂದ ಒಂದು ಪ್ರಾದೇಶಿಕ ಭಾಷೆಯ ಮೇಲೆ ಬೇರೊಂದು ಪ್ರದೇಶದ ಭಾಷೆಯು ಹೇಗೆ ಪ್ರಭಾವ ಬೀರಿದೆ ಎಂಬುದು ಭಾಷಿಕ ಅಧ್ಯಯನದಿಂದ ತಿಳಿದುಬರುತ್ತದೆ. ಪರಿಸರವಾಚಿ ಶಬ್ದಗಳಾದ ಬೆಟ್ಟ, ಗುಡ್ಡ, ಹಳ್ಳ, ಘಟ್ಟ, ಕೋಡಿ, ಕೆರೆಕಟ್ಟೆ, ಅರೆ, ಮಂಟಿ ಊರು ಸ್ಥಳನಾಮಗಳ ರಚನೆ ವೈವಿಧ್ಯಮಯವಾಗಿರುತ್ತದೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರವು ವ್ಯಕ್ತಿಗತ ನಾಮದಿಂದಾಗಿ ಪ್ರಮುಖ ಪಾತ್ರ ನಿರ್ವಹಿಸಿದೆ. ವ್ಯಕ್ತಿಗತವಾದ ಸ್ಥಳನಾಮಗಳೇ ಈ ಪರಿಸರದಲ್ಲಿ ಮಹತ್ವ ಪಡೆದಿವೆ. ಐತಿಹಾಸಿಕ, ಪುರಾಣ, ಐತಿಹ್ಯ, ವ್ಯಕ್ತಿಗತ ಹಾಗೂ ಜನಾಂಗದ ಆಧಾರದ ಮೇಲೆ ಆಡಳಿತಾತ್ಮಕ, ಧಾರ್ಮಿಕ ವಿಧಿವಿಧಾನಗಳು ಮತ್ತು ವಾಣಿಜ್ಯಾತ್ಮಕವಾಗಿ ಕಂಡುಬಂದಿರುವ ಸ್ಥಳನಾಮಗಳೇ ಪ್ರಮುಖವಾಗಿವೆ.

ಸ್ಥಳನಾಮಗಳ ಅಧ್ಯಯನದ ಮಹತ್ವ ಅಪರಿಮಿತ. ಒಬ್ಬೊಬ್ಬ ವ್ಯಕ್ತಿಗೂ ತನ್ನದೇ ಆದ ವ್ಯಕ್ತಿತ್ವವಿರುವಂತೆ ಒಂದೊಂದು ಊರಿಗೂ ತನ್ನದೇ ಆದ ವ್ಯಕ್ತಿತ್ವವಿರುತ್ತದೆ. ಅದರದೆ ಆದ ಸಾಂಸ್ಕೃತಿಕ ಚಾರಿತ್ರಿಕ ಲಕ್ಷಣಗಳಿರುತ್ತವೆ. ಪ್ರಾಚೀನ ಜನರ ಸೃಜನಶೀಲತೆ, ಜೀವನ ವಿಧಾನ, ಮನೋಧರ್ಮ, ಸಂಸ್ಕೃತಿ, ಅಭಿರುಚಿ, ಆಕಾಂಕ್ಷೆ, ರೂಢಿ ಸಂಪ್ರದಾಯಗಳನ್ನು ಅರಿಯಲು ಗ್ರಾಮನಾಮಗಳ ಅಧ್ಯಯನದಿಂದ ಮಾತ್ರ ಸಾಧ್ಯ. ಸ್ಥಳನಾಮಗಳು ಹೆಸರಿನಂತೆಯೇ ಸಾಮಾನ್ಯವಾಗಿದ್ದರೂ ಅದರಲ್ಲಿ ಮಹತ್ವದ ಸಂಗತಿಗಳು ಅಡಗಿದೆ. ಅಜ್ಞಾನದ ವಿಷಯಗಳು ಬೆಳಕಿಗೆ ಬರುತ್ತವೆ ಎಂಬ ಸಂಗತಿ ಸ್ಥಳನಾಮದ ಅಧ್ಯಯನವನ್ನು ನೋಡಿದಾಗ ತಿಳಿಯುತ್ತದೆ. ಸ್ಥಳನಾಮಗಳು ಹೇಗೆ ಹುಟ್ಟಿದವು, ಹೇಗೆ ಬೆಳೆದವು, ಅವು ಹೇಗೆ ನಾಗರಿಕ ಮಾನವನಿಂದ ರೂಪ ಪಡೆದವು ಎಂಬುದನ್ನು ಅಧ್ಯಯನದಿಂದ ತಿಳಿಯಲು ಮಾತ್ರ ಸಾಧ್ಯ. ಒಂದು ಸ್ಥಳನಾಮದಲ್ಲಿ ಅಡಗಿರುವ ಪುರಾತನ ನಾಗರಿಕತೆ ಸಂಸ್ಕೃತಿಗಳನ್ನು ನೋಡಿದಾಗ ಅಲ್ಲಿ ಅಡಗಿರುವ ಕಥೆಗಳು ಮತ್ತು ಸಾಹಸಗಳು ಗೋಚರಿಸುತ್ತವೆ. ಪ್ರಾಚೀನ ಸ್ಥಳನಾಮಗಳು ಬಹುಪಾಲು ಅರ್ಥಗರ್ಭಿತವಾಗಿವೆ. ಅಲ್ಲದೆ ದೇವಾಲಯ, ಕೆರೆ ಕಟ್ಟೆಗಳು ಅಲ್ಲಿನ ಮಹಿಮೆಯನ್ನು

ತಿಳಿಸುತ್ತವೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಸ್ಥಳನಾಮದ ಐತಿಹ್ಯ ಮತ್ತು ಉಗಮವನ್ನು ಜನಪದರ ಹಾಡಿನಲ್ಲಿ, ಲಾವಣಿಗಳಲ್ಲಿ ಮೂಡಿಬಂದಿರುವ ಕಥೆಯನ್ನು ಮತ್ತು ಐತಿಹಾಸಿಕ ಹಿನ್ನೆಲೆಯಿಂದ ಅಧ್ಯಯನ ಮಾಡಬಹುದು. ಒಟ್ಟಿನಲ್ಲಿ ಸ್ಥಳನಾಮಗಳ ಉಗಮ ಮತ್ತು ವಿಕಾಸವನ್ನು ನೋಡಿದಾಗ ಊರು ಕಟ್ಟಿ ನೆಲಸಿದ ವೀರರು ತಮ್ಮ ಕೊಡುಗೆಗಳಾಗಿ ಸ್ಮಾರಕಗಳನ್ನು ನಿರ್ಮಾಣ ಮಾಡಿ ಇತಿಹಾಸದಲ್ಲಿ ಪ್ರಮುಖರಾಗಿದ್ದಾರೆ. ಈ ನಿಟ್ಟಿನಲ್ಲಿ ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಸ್ಥಳನಾಮ ಉಗಮದಲ್ಲಿ ಸಾಮಾಜಿಕ ಸ್ಥಿತಿಗತಿ, ಆರ್ಥಿಕ ರಚನೆ, ಧಾರ್ಮಿಕ ಬದುಕಿನ ಪ್ರಾಮುಖ್ಯತೆಯನ್ನು ಕಾಣಬಹುದು.

ಮಾನವನ ಬದುಕು ಸದಾ ಪ್ರಕೃತಿಯೊಂದಿಗೆ ಬೆಸೆದುಕೊಂಡಿದೆ. ಕಾಲಾನಂತರದಲ್ಲಿ ಅವನ ವಲಸೆ ಪ್ರವೃತ್ತಿಗೆ ಪ್ರೇರಣೆಯಾಗಿರಬೇಕು. ಮನುಕುಲ ಒಂದೆಡೆ ನೆಲೆ ನಿಲ್ಲಲು ಕಾಡು, ಕಣಿವೆ, ಬೆಟ್ಟ-ಗುಡ್ಡ, ದಿಬ್ಬ, ದಿಣ್ಣೆ, ಕಲ್ಲು, ಬಂಡೆ, ನದಿ, ಹಳ್ಳ, ಕೊಳ್ಳ, ಗುಂಡಿ, ಹೊಳೆ ತೀರಗಳೇ ಅವರ ಪೂರ್ವಾಶ್ರಮದ ನೆಲೆಗಳ ಕುರುಹುಗಳಾದವು. ಪಂಚಭೂತಗಳಾದ ವಾಯು, ಅಗ್ನಿ, ಜಲ, ಆಕಾಶ, ಭೂಮಿಗಳೇ ಅವನ ಆರಾಧ್ಯ ದೈವಗಳಾದವು. ಹೀಗೆ ಪ್ರಾಕೃತಿಕ ಪರಿಸರದ ಅವಿನಾಭಾವ ಸಂಬಂಧದೊಂದಿಗೆ ಬೆರೆತ ಮಾನವ ತನ್ನ ಅಸ್ತಿತ್ವವನ್ನು ಉಳಿಸಿ, ಬೆಳೆಸಲು ಭೂಮಿಯ ಮೇಲೊಂದು ನೆಲೆ ನಿರ್ಮಾಣ ಮಾಡಿ ಬದುಕುಳಿಯಲು ಆಲೋಚಿಸಿದ. ಅನಾಗರಿಕ ಜೀವನದಲ್ಲೇ ಮುಂದುವರೆಯುತ್ತಿದ್ದ ಆದಿಮಾನವನಿಗೆ ಕಾಲಾ ನಂತರದಲ್ಲಿ ಅವನ ಬೌದ್ಧಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಬೇಟೆಗಾರಿಕೆ, ದನಕಾಯುವಿಕೆ ಮತ್ತು ಕೃಷಿಯ ಮಹತ್ವ ತಿಳಿದು ತನ್ನ ವ್ಯಾವಹಾರಿಕ ಜೀವನಕ್ಕಾಗಿ ಮುಂದಾದ.[೪೨] ಸ್ಥಳನಾಮಗಳ ಹುಟ್ಟು ನಿನ್ನೆ ಮೊನ್ನೆಯದಲ್ಲ. ಅವು ಮಾನವನಷ್ಟೆ ಹಳೆಯ ಹಾಗೂ ಪುರಾತನ ಜೀವನ ಸೃಷ್ಟಿಯ ಪಳೆಯುಳಿಕೆಗಳು. ಮಾನವನ ದೈನಂದಿನ ಬದುಕು ಬಹಳ ಗಂಭೀರವಾದಂತೆಲ್ಲಾ ಪ್ರಾಕೃತಿಕ, ಐತಿಹಾಸಿಕ, ಸಾಮಾಜಿಕ, ಧಾರ್ಮಿಕ ಮತ್ತು ಜಾನಪದೀಯ ಅಂಶಗಳ ಮೂಲಕ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ಸ್ಥಳನಾಮಗಳು ಹುಟ್ಟಿಕೊಂಡವು. ಈ ಹಿನ್ನೆಲೆ ಆಧರಿಸಿ ಜನ್ಮ ತಾಳಿದ ವಾಸ್ತವ್ಯಗಳಾದ ಊರು, ಕೇರಿ, ಬೀದಿ, ಗುಡಿ, ಕೋಡಿ, ಕೆರೆ, ಕಟ್ಟೆ, ಕೋಟೆ, ಕೊತ್ತಲು, ನದಿ, ತಟಾಕ, ಬಾವಿ, ರಸ್ತೆ, ವೃತ್ತ, ಸಮುದ್ರ, ಸಾಗರ, ಗ್ರಾಮ ಇತ್ಯಾದಿಗಳು ಸ್ಥಳನಾಮದ ಅಂತ್ಯ ಪ್ರತ್ಯಯಗಳಾಗಿ ಶಾಶ್ವತತೆಯ ನೆಲೆಯಲ್ಲಿ ಅವು ಚಲಾವಣೆಗೆ ಬಂದವು.[೪೩]

ಸ್ಥಳನಾಮಗಳ ಉಗಮದಲ್ಲಿ ವ್ಯಕ್ತಿನಾಮವೂ ಕೂಡ ವೈಶಿಷ್ಟ್ಯತೆಯನ್ನು ಪಡೆದುಕೊಂಡಿವೆ. ಪ್ರಾಚೀನ ಕಾಲದ ಕೃತಿಯಾದ ರಾಮಾಯಣದಲ್ಲಿ ಕಂಡುಬರುವ ರಾಮ, ಸೀತೆ, ಲಕ್ಷ್ಮಣ, ಹನುಮಂತ, ಮಹಾಭಾರತದ ಕುಂತೀ, ಭೀಮ, ನಕುಲ, ಅರ್ಜುನ, ಧರ್ಮರಾಯ, ಶಕುನಿ ಮುಂತಾದವರ ಹೆಸರುಗಳೂ ಕೂಡ ಪ್ರಚಾರದಲ್ಲಿವೆ. ಹಾಗೆಯೇ ಇತ್ತೀಚೆಗೆ ಸಾಹಿತಿಗಳ,

ಕಲಾವಿದರ, ಸಂಗೀತಗಾರರ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪ್ರಮುಖ ವೀರರ ಹೆಸರುಗಳ ಹಿನ್ನೆಲೆಯಲ್ಲಿಯೂ ಕೂಡ ಸ್ಥಳನಾಮಗಳು ಉಗಮಗೊಂಡವು. ಹಾಗೆಯೇ ಧಾರ್ಮಿಕ ಹಿನ್ನೆಲೆಯಲ್ಲಿ ಹಿಂದೂ, ಜೈನ, ಬೌದ್ಧ, ಕ್ರೈಸ್ತ, ಮುಸ್ಲಿಂ ವ್ಯಕ್ತಿಗಳ ಹೆಸರುಗಳು ಸ್ಥಳನಾಮಗಳ ಉದಯಕ್ಕೆ ಕಾರಣವಾಗಿವೆ.[೪೪]

ಕರ್ನಾಟಕದಲ್ಲಿ ಸ್ಥಳನಾಮಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಹೆಚ್ಚು ಸಂಶೋಧನಾ ಗ್ರಂಥಗಳು ಹೊರಬಂದಿಲ್ಲ. ಈ ಹಿನ್ನೆಲೆಯಲ್ಲಿ ಕ್ರಿ.ಶ. ೧೯೪೭ರಲ್ಲಿ ಸ್ಥಳನಾಮಗಳ ಪೂರ್ವ ಪರಂಪರೆಯನ್ನು ಚಿತ್ರಿಸಿರುವ ಶಂಬಾ ಜೋಶಿಯವರ ಎಡೆಗಳು ಹೇಳುವ ಕಂನಾಡ ಕತೆ, ೧೯೭೭ರಲ್ಲಿ ಕೆಮ್ತೂರು ರಘುಪತಿಭಟ್ಟ ಅವರ ಹೆಸರಿನಲ್ಲೇನಿದೆ, ತುಳುನಾಡಿನ ಸ್ಥಳನಾಮಗಳು, ೧೯೮೧ರಲ್ಲಿ "ದಿ ಸ್ಟಡೀ ಆಫ್ ವಿಲೇಜ್ ನೇಮ್ಸ್ ಆಫ್ ಮೈಸೂರ್ ಡಿಸ್ಟ್ರಿಕ್" ಡಾ.ಎಂ.ಚಿದಾನಂದ ಮೂರ್ತಿಯವರ 'ವಾಗರ್ಥ', ಕ್ರಿ.ಶ. ೧೯೮೭ರಲ್ಲಿ ವಿ.ಗೋಪಾಲಕೃಷ್ಣರವರ 'ಸ್ಥಳನಾಮ ಅಧ್ಯಯನಗಳು', ಡಾ. ಎಂ.ಎಂ.ಕಲಬುರ್ಗಿಯವರ 'ಮಾರ್ಗ' ಸಂಪುಟ ಎರಡು, ೧೯೯೦ರಲ್ಲಿ ಸ್ಥಳನಾಮಗಳ ಉಗಮ, ಇತಿಹಾಸ ಪ್ರಭಾವ ಮತ್ತು ವರ್ಗೀಕರಣವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿರುವ ದೇ.ಜವರೇಗೌಡರ 'ಸ್ಥಳನಾಮ ವ್ಯಾಸಂಗ', ಕ್ರಿ.ಶ. ೧೯೧೫ರಲ್ಲಿ ಸಿ.ಹಯವದನರಾವ್ ಅವರ 'ದಿ ಪ್ಲೇಸ್ ನೇಮ್ಸ್ ಆಫ್ ಮೈಸೂರ್ ಸ್ಟೇಟ್' ಕ್ರಿ.ಶ. ೧೯೬೧ರಲ್ಲಿ ಆರ್.ಸಿ.ಹಿರೇಮಠರವರ 'ಪ್ಲೇಸ್ ನೇಮ್ಸ್ ಇನ್ ಕರ್ನಾಟಕ' ಕ್ರಿ.ಶ.೧೯೬೬ರಲ್ಲಿ ಪ್ರಕಟವಾದ ಡಾ.ವಿಶ್ವನಾಥ್ ಅವರ 'ಸಕಲೇಶಪುರ ಪರಿಸರದ ಸ್ಥಳನಾಮಗಳು' ಪ್ರಮುಖವಾದವು.

ಸ್ಥಳನಾಮಗಳ ವರ್ಗೀಕರಣ

ಊರುಗಳ ಹೆಸರುಗಳು ಪುನರಾವರ್ತನೆಯಾಗುವುದುಂಟು. ಚನ್ನಪಟ್ಟಣ, ಹೊಸಹಳ್ಳಿ, ಅಂಕನಹಳ್ಳಿ, ಹೊಸೂರು. ಈ ಹೆಸರಿನ ಊರುಗಳು ಹಲವಾರಿವೆ. ಆದರೂ ಅವುಗಳ ಉಗಮ ವಿಕಾಸ ಹಿನ್ನೆಲೆಯಲ್ಲಿ ವರ್ಗೀಕರಣ ಮಾಡಲು ಕಷ್ಟವಾಗಲಾರದು. ನಾಮಗಳ ಪ್ರಥಮ ಘಟಕಗಳು ಹಲವು. ವರ್ಗೀಕರಣ ಸುಲಭ ಹಾಗೂ ಸರಳವೆಂದು ಶಂಬಾ ಜೋಶಿಯವರು ಎರಡು ವರ್ಗಗಳಾಗಿ ವಿಂಗಡಿಸಿದ್ದಾರೆ.[೪೫] ವಸತಿ ಸ್ವರೂಪ ವ್ಯವಸ್ಥೆಗಳನ್ನು ಸೂಚಿಸುವ ಹೆಸರುಗಳನ್ನು ವಸತಿನಾಮಗಳೆಂದೂ, ಭೌಗೋಳಿಕ ಸನ್ನಿವೇಶಗಳನ್ನು ನಿರ್ದೇಶಿಸು ವಂಥವುಗಳನ್ನು ಭೌಗೋಳಿಕನಾಮಗಳೆಂದೂ ಆ ವರ್ಗಗಳಿಗೆ ನಾಮಕರಣ ಮಾಡಬಹುದಾಗಿದೆ. ಪಟ್ಟಿ, ಪಾಡು, ನೆಲೆ, ಖೇಡ, ಊರು, ಪೇಟೆ, ಪಟ್ಟಣ ಮೊದಲನೆಯ ವರ್ಗದಲ್ಲಿಯೂ, ಮರಡಿ, ಮಾಳ, ಗುಡ್ಡ, ಗಿರಿ, ಬಂಡಿ, ಕೊಂಬು, ಗುಂದ, ಕೊಪ್ಪ, ಮಡು, ಹಳ್ಳ ಮೊದಲಾದವನ್ನು ಎರಡನೆಯ ವರ್ಗದಲ್ಲಿಯೂ ಅವರು ಸೇರಿಸುತ್ತಾರೆ. ಜನ ಒಲೆಯೂಡಿ ನೆಲೆ ನಿಂತ ನಂತರ

ಮೊದಲನೆಯ ವರ್ಗದ ಹೆಸರು ರೂಢಿಗೆ ಬಂದರೆ, ಜನ ಊರು ಕಟ್ಟುವುದಕ್ಕೆ ಮುಂಚೆಯೇ ಎರಡನೆಯ ವರ್ಗದ ಹೆಸರುಗಳು ಉಗಮಕ್ಕೆ ಪೂರಕವಾದ ಅಂಶಗಳನ್ನು ಈ ಎರಡು ಪ್ರಕಾರಗಳಾಗಿ ವರ್ಗೀಕರಿಸಬಹುದು.[೪೬] ಅವುಗಳೆಂದರೆ ಪ್ರಾಕೃತಿಕ ಕಾರಣಗಳು ಮತ್ತು ಸಾಂಸ್ಕೃತಿಕ ಕಾರಣಗಳು.

ಪ್ರಾಕೃತಿಕ ಕಾರಣಗಳು

ಪ್ರಕೃತಿದತ್ತವಾಗಿ ತನಗೆ ತಾನೇ ರೂಪುಗೊಂಡಿರುವ ಅನೇಕ ಅವಶೇಷಗಳು ಸ್ಥಳನಾಮಗಳ ಉಗಮಕ್ಕೆ ಕಾರಣವಾಗಿವೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಪ್ರಾಕೃತಿಕ ಸ್ಥಳನಾಮಗಳು ಕಂಡುಬರುತ್ತವೆ. ಅವುಗಳನ್ನು ಜಲವಾಚಕ, ಶಿಲಾವಾಚಕ, ಭೂವಾಚಕ, ಪ್ರಾಣಿ–ಪಕ್ಷಿವಾಚಾಕ, ಸಸ್ಯವಾಚಕ, ದಿಕ್ಕುವಾಚಕ ಎಂಬುದಾಗಿ ಅಧ್ಯಯನ ಮಾಡಬಹುದಾಗಿದೆ.

ಸಾಂಸ್ಕೃತಿಕ ಕಾರಣಗಳು

ಭೂಮಿಯ ಮೇಲೆ ಮಾನವ ನೆಲೆ ಎಂದು ನಿಶ್ಚಿತವಾಯಿತೋ, ಅಂದೇ ವ್ಯಕ್ತಿ ಬದುಕಿಗೆ ಪೂರಕವಾದ ಭೌಗೋಳಿಕ ಅಂಶಗಳು ಹೆಚ್ಚು ಪ್ರಚಾರಕ್ಕೆ ಬಂದವು. ಈ ಹಿನ್ನೆಲೆಯಲ್ಲಿ ಮಾನವ ಅಭಿವೃದ್ಧಿಯಾಗಿ ಸಾಂಸ್ಕೃತಿಕ ವಲಯ ಕೂಡ ವಿಕಾಸವಾಯಿತು. ರಾಜ, ಮಹಾರಾಜ, ಸಂಸ್ಥಾನಾಧಿಪತಿಗಳು, ಪಾಳೆಯಪಟ್ಟುಗಳು, ಸಾಮಂತರು, ಪ್ರಾಂತ್ಯ, ನಾಡು, ದೇಶ, ಖಂಡ ಮತ್ತು ಉಪಖಂಡಗಳು ಅಸ್ತಿತ್ವಕ್ಕೆ ಬಂದವು. ಆಡಳಿತ ವ್ಯವಸ್ಥೆಯು ಮಾನವನ ಅತಿಸಣ್ಣ ನೆಲೆಯಾದ ಗ್ರಾಮ ಹಳ್ಳಿಯಿಂದ ಹಿಡಿದು ನಾಡು, ದೇಶದಂತಹ ಅತಿದೊಡ್ಡ ನೆಲೆಯವರೆಗೂ ವಿಸ್ತರಿಸಿತು. ಗ್ರಾಮ ಹಳ್ಳಿಗಳ ಉಸ್ತುವಾರಿಯನ್ನು ನೋಡುವುದಕ್ಕಾಗಿ ಪಟೇಲ, ದೇಶಿಶೆಟ್ಟಿ, ಗೌಡ ಇದ್ದರೆ, ರಾಜ್ಯ, ಸಾಮ್ರಾಜ್ಯ, ಪ್ರಾಂತ್ಯದ ಅಧಿಕಾರ ರಾಜ, ಯುವರಾಜ, ಪ್ರಭುಗಳ ವಶದಲ್ಲಿತ್ತು. ಅಲ್ಲದೆ ಪ್ರಾಂತ್ಯದ ಜವಾಬ್ದಾರಿಯುತವಾದ ಆಡಳಿತ ನಿರ್ವಹಣೆಯಲ್ಲಿ ಮಹಾಮಂತ್ರಿ, ಸೇನಾಧಿಪತಿ, ದಂಡನಾಯಕ, ಆಡಳಿತಾಧಿಕಾರಿ, ಸಂಧಿವಿಗ್ರಹಿ, ಪಶುಪತಿಗಳಿರುತ್ತಿದ್ದರು. ಈ ಒಂದು ಆಡಳಿತದ ತಂತ್ರಗಾರಿಕೆಯಲ್ಲಿ ಸಾಮ್ರಾಜ್ಯದ ಪ್ರಭುವಾದವನು ಪ್ರತಿಯೊಬ್ಬರಿಗೂ ಅವರ ಯೋಗ್ಯತೆಗೆ ಅನುಗುಣವಾಗಿ ಕೆಲವು ಗ್ರಾಮ, ನಾಡು, ಪ್ರಾಂತ್ಯಗಳನ್ನು ಅವರ ಹೆಸರಿನಲ್ಲಿ ಬಿಟ್ಟುಕೊಡುತ್ತಿದ್ದನು. ಅವು ಕಾಲಕ್ರಮೇಣ, ಅವರ ಹೆಸರಿನಲ್ಲಿ ಚಲಾವಣೆಗೆ ಬಂದವು. ಹಾಗೆಯೇ ಯುದ್ಧ ಮತ್ತು ಸಾಹಸ ಕೆಲಸ ಕಾರ್ಯಗಳಲ್ಲಿ ಮಡಿದವರಿಗೆ ದೇವಸ್ಥಾನದ ಪೂಜೆ ವಿಧಿವಿಧಾನಗಳಲ್ಲಿ ಭಾಗಿಯಾದ ಬ್ರಾಹ್ಮಣರಿಗೆ ಬಿಟ್ಟ ಗ್ರಾಮಗಳು ಅವರ ಹೆಸರಿನಲ್ಲಿ ಜನ್ಮ ತಾಳಿದವು. ಅಲ್ಲದೆ ಸಮಾಜದಲ್ಲಿ ತಲತಲಾಂತರದಿಂದ ತಮ್ಮ ಕಸುಬಿನ ಕಾಯಕವನ್ನೇ ಮುಂದುವರೆಸಿಕೊಂಡು ಬಂದವರ ಹೆಸರಿನಲ್ಲಿ ವಾಸ್ತವ್ಯದ ನೆಲೆಗಳು ಅಸ್ತಿತ್ವಕ್ಕೆ

ಬಂದವು. ಒಟ್ಟಿನಲ್ಲಿ ಮಾನವನ ಸಾಂಸ್ಕೃತಿಕ ವಿಕಸನದ ಸಂದರ್ಭದಲ್ಲಿ ಇಂಥ ಹತ್ತಾರು ಅಂಶಗಳು ಅವನ ಬದುಕಿನ ನೆಲೆಗಳಿಗೆ ಪೂರಕವಾಗಿವೆ.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಒಟ್ಟು ೨೦೨ ಗ್ರಾಮಗಳಿವೆ. ಅವುಗಳನ್ನು ೪ ಹೋಬಳಿಗಳಲ್ಲಿ ವಿಂಗಡಿಸಲಾಗಿದೆ ಮತ್ತು ೨೬ ಗ್ರಾಮ ಪಂಚಾಯಿತಿಗಳು. ಒಂದು ಪಟ್ಟಣ ಪಂಚಾಯಿತಿಯಿದೆ.[೪೭] ಈ ಗ್ರಾಮಗಳನ್ನು ಪ್ರಾದೇಶಿಕವಾಗಿ ಗಮನಿಸಿದಾಗ ಕೆಲವು ಸ್ಥಳನಾಮಗಳಲ್ಲಿ ಯಾವುದೇ ರೀತಿಯ ಜನಾಂಗ, ಪ್ರಾಣಿಗಳು ವಾಸವಾಗಿರುವುದು ಗಮನಕ್ಕೆ ಬರುವುದಿಲ್ಲ. ಆದರೆ ಆ ಪ್ರದೇಶದಲ್ಲಿ ಹಿಂದೆ ಮಾನವನು ಜೀವನ ನಡೆಸಿರುವುದಕ್ಕೆ ಕೆಲವು ಕುರುಹುಗಳು, ಶಾಸನಗಳ ಉಲ್ಲೇಖಗಳು ದೊರೆಯುತ್ತವೆ. ಆದುದರಿಂದ ಪಿರಿಯಾಪಟ್ಟಣ ತಾಲ್ಲೂಕಿನ ಎಲ್ಲಾ ಗ್ರಾಮಗಳನ್ನು ಎರಡು ರೀತಿಯಲ್ಲಿ ನೋಡಬಹುದು. ಒಂದು ಬೇಚರಾಕ್ ಗ್ರಾಮಗಳು ಮತ್ತು ಜನವಸತಿ ಗ್ರಾಮಗಳು. ಇವುಗಳಲ್ಲಿ ಜನವಸತಿ ಗ್ರಾಮಗಳು ೧೯೭ ಮತ್ತು ಜನವಸತಿ ಇಲ್ಲದ ಗ್ರಾಮಗಳು ಐದು.

ಜನರು ವಾಸ ಮಾಡದೇ ಇರುವ ಗ್ರಾಮಗಳನ್ನು ಬೇಚರಾಕ್ ಗ್ರಾಮಗಳೆನ್ನುವರು. ಅವು ಹಿಂದೊಮ್ಮೆ ಜನನಿಬಿಡ ತಾಣಗಳಾಗಿದ್ದು, ಕಾಲಾನಂತರದಲ್ಲಿ ಅಲ್ಲಿನ ಜನರು ಶತ್ರುಗಳ ಕಾಟ, ನೀರು, ಆಹಾರದ ಕೊರತೆ ಅಥವಾ ಪ್ರಕೃತಿ ವಿಕೋಪ ಮುಂತಾದ ಕಾರಣಗಳಿಂದಾಗಿ ಬೇರೆಡೆಗೆ ಹೋಗಿ ನೆಲೆಸಿದ್ದರಿಂದ ನಿರ್ವಸತಿ ತಾಣಗಳಾಗಿದ್ದವು. ಆದರೆ ಸರ್ಕಾರಿ ದಾಖಲೆಗಳಲ್ಲಿ ಇಂದಿಗೂ ಆ ಗ್ರಾಮಗಳು ಉಲ್ಲೇಖಗೊಂಡಿವೆ. ಅವುಗಳ ಗ್ರಾಮತಾಣ ಹಾಗೂ ಭೂವಿವರಗಳು ಗಡಿಭಾಗಗಳು ಅದೇ ಹೆಸರಿನಲ್ಲಿವೆ. ಜನರು ಇಂದು ವಾಸಿಸುತ್ತಿರುವ ತಾಣಗಳೇ ವಸತಿ ಗ್ರಾಮಗಳಾಗಿವೆ. ಈ ಗ್ರಾಮಗಳ ಅಸ್ತಿತ್ವ, ಹೆಸರಿನ ರಹಸ್ಯ, ಭೌಗೋಳಿಕ ಹಿನ್ನೆಲೆ, ಸ್ಥಿತಿಗತಿ, ಸವಲತ್ತುಗಳು ಅಲ್ಲಿನ ಗ್ರಾಮ ನಿವಾಸಿಗಳು, ಗ್ರಾಮದೇವತೆಗಳು, ಅವರ ಆಚರಣೆ, ಜೀವನದ ವಿಧಿವಿಧಾನಗಳು ಇತ್ಯಾದಿ ಹಲವು ಅಂಶಗಳ ಬಗ್ಗೆ ಮಾಹಿತಿ ದೊರೆಯುತ್ತದೆ.

ಪ್ರಾಕೃತಿಕ ಸ್ಥಳನಾಮಗಳು

ಪ್ರಕೃತಿದತ್ತವಾಗಿ ನಿರ್ಮಿತವಾದ, ಬೆಟ್ಟ-ಗುಡ್ಡ ಮಲೆ, ಕೋಡು, ಕಲ್ಲು, ತಿಟ್ಟು, ಕಾಡು, ದಿಣ್ಣೆ, ಹಳ್ಳ, ಕಂದರ, ನದಿ, ಕಾಲುವೆ, ಗುಂಡಿ, ಕೊಳ, ಕೆರೆ, ಮರ, ಗಿಡ, ಬಳ್ಳಿ, ಪೊದೆಗಳ ಪ್ರತ್ಯಯಗಳು ಸೇರಿ ಸ್ಥಳನಾಮಗಳಾಗುತ್ತವೆ. ಇಂಥವನ್ನು ಪ್ರಾಕೃತಿಕ ಸ್ಥಳನಾಮಗಳೆಂದು ಕರೆಯಬಹುದು. ಈ ಪ್ರಾಕೃತಿಕ ಸ್ಥಳನಾಮಗಳನ್ನು ಜಲವಾಚಿ, ಭೂವಾಚಿ, ಸಸ್ಯವಾಚಿ, ಪ್ರಾಣಿ-ಪಕ್ಷಿವಾಚಿ, ಶಿಲಾವಾಚಿ, ಸ್ಥಳವಾಚಿ, ಗಡಿಸೂಚಿ, ದಿಕ್ಸೂಚಿ, ಪ್ರಮಾಣವಾಚಿ, ಅರಣ್ಯವಾಚಿ, ಕೀಟವಾಚಿಗಳಲ್ಲಿ ಕಾಣಬಹುದು.

ಭೂವಾಚಕಗಳು

ಕೆಲವು ನಿರ್ದಿಷ್ಟ ಭೂಸ್ವರೂಪಗಳನ್ನು ತಿಳಿಸುವಂಥ ಸ್ಥಳನಾಮ ಘಟಕಗಳು ತಿಳಿಸುತ್ತವೆ. ಅವು ಕಲ್ಲು, ಕೋಟೆ, ಕೋಡು, ಗುಡ್ಡ, ಗುಪ್ಪೆ, ದಡ, ತಿಟ್ಟು, ಬೆಟ್ಟ, ಮಲೆ, ಮುರುಟಿ, ತುಂಗ, ಬಯಲು, ಮುಂತಾದವುಗಳನ್ನು ಗುರ್ತಿಸಬಹುದು. ಭೂವಾಚಕ ಹೆಸರುಗಳನ್ನು ಹೊಂದಿರುವ ಕೆಲವು ಸ್ಥಳನಾಮಗಳನ್ನು ಈ ರೀತಿ ನೋಡಬಹುದು.

ಬೆಟ್ಟ	:	ಬೆಟ್ಟದಪುರ
ತುಂಗ	:	ಬೆಟ್ಟದತುಂಗ
ಬಯಲು	:	ಬೈಲುಕುಪ್ಪೆ
ತಿಟ್ಟು	:	ಬೂದಿತಿಟ್ಟು
ಕೋಟೆ	:	ಚಾಮರಾಯನ ಕೋಟೆ
ಕೋಡು	:	ಅತ್ತಿಗೋಡು
ಕಲ್ಲು	:	ತರಿಕಲ್ಲು

ಜಲವಾಚಕ

ಮಾನವ ಸಂಸ್ಕೃತಿಯ ವಿಕಾಸದ ಹಂತದಲ್ಲಿ ಜಲಕ್ಕೆ ಪ್ರಮುಖ ಸ್ಥಾನವಿದೆ. ಜಗತ್ತಿನ ಬಹುತೇಕ ನಾಗರಿಕತೆಗಳೆಲ್ಲವೂ ನದಿಯ ದಂಡೆಯ ಮೇಲೆ ಆರಂಭವಾಗಿದೆ. ಸದಾ ಸಂಚಾರಿಯಾಗಿದ್ದ ಆದಿಮಾನವ ಒಂದು ಕಡೆ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು ಜಲದಮೂಲ ಬೇಕಾಗಿತ್ತು. ಈ ತರಹದ ಕಾರಣಗಳಿಂದಾಗಿ ಅಂದಿನ ಮಾನವರು ಕಾಡನ್ನು ತೊರೆದು ನೀರಿನ ಸಮೀಪ ತಮ್ಮ ನೆಲೆಗಳನ್ನು ಕಟ್ಟಿಕೊಂಡರು. ಅವು ಸಮುದ್ರ, ಹೊಳೆ, ಕೆರೆ, ಕಟ್ಟೆ, ಕಾಲುವೆ, ಬಾವಿ, ಹಳ್ಳ ಮುಂತಾದವು. ಇವು ಸಾಮಾನ್ಯವಾಗಿ ಸ್ಥಳನಾಮಗಳ ಪೂರ್ವ, ಮಧ್ಯ ಮತ್ತು ಅಂತ್ಯ ಪ್ರತ್ಯಯಗಳಾಗಿ ಕಂಡುಬರುತ್ತದೆ. ಅಂತಹ ಕೆಲವು ಜಲವಾಚಕ ಸ್ಥಳನಾಮಗಳಲ್ಲಿ ಮೇಲೂರು, ಗಳಗನಕೆರೆ, ದೊರೆಕೆರೆ, ಕಲ್ಕರೆ, ಕೆರೆಮೇಗಲಕೊಪ್ಪಲು, ಕಿರನಲ್ಲಿ, ಕೆರೆದೊಳೆ, ಬಾಳೆಕಟ್ಟೆ, ಕೆಸರಕೆರೆ, ಕಣಗಾಲು, ಎರೆಕಟ್ಟೆಮಳ.

ಪ್ರಾಣಿ–ಪಕ್ಷಿ ವಾಚಕಗಳು

ಪ್ರಾಣಿ ಮತ್ತು ಪಕ್ಷಿ ಮೂಲಗಳಿಂದಲೂ ಊರುಗಳಿಗೆ ಹೆಸರು ಬಂದಿದೆ. ಅವು ಸಾಕುಪ್ರಾಣಿಗಳಾಗಿರಬಹುದು ಅಥವಾ ಕಾಡುಪ್ರಾಣಿ, ಪಕ್ಷಿಗಳಾಗಿರಬಹುದು ಅಥವಾ ಕುಟುಂಬ ಲಾಂಛನಗಳಾದ ಮುದ್ದು ಪ್ರಾಣಿಗಳ ಹೆಸರುಗಳಿಂದ ಊರುಗಳನ್ನು ಕರೆಯುವುದು ಹಿಂದಿನಿಂದ

ಬಂದ ರೂಢಿಯಾಗಿರುವುದಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಅನಿವಾಳು, ನವಿಲುಕೋಡಿ ಕಾವಲು, ನಾಗರಘಟ್ಟ, ನಾಗನಹಳ್ಳಿ, ನಂದಿಪುರ, ಕೊಣಸೂರು, ಪಿ.ಬಸವನಹಳ್ಳಿ, ಕೋಗಿಲೂರು, ಆಸ್ವಾಳು, ಆನೆಚೌಕೂರು, ಕೋಗಿಲವಾಡಿ, ಜಿ.ಬಸವನಹಳ್ಳಿ, ನಂದಿನಾಥಪುರ, ಹಂದಿಗುಡ್ಡಕಾವಲು, ನವಿಲೂರು, ಹಸುವಿನಕಾವಲು, ಕರಡಿಪುರ.

ಸಸ್ಯ ವಾಚಕಗಳು

ಯಾವ ಸ್ಥಳಗಳಲ್ಲಿ ನಿರ್ದಿಷ್ಟ ಜಾತಿಯ ಮರ, ಗಿಡ, ಬಳ್ಳಿ, ಮೆಳೆ, ಹುಲ್ಲು, ಸೊಪ್ಪು, ಹೂವು, ಹಣ್ಣು ಇತ್ಯಾದಿಗಳು ಹೆಚ್ಚಾಗಿ ಬೆಳೆಯುತ್ತವೆಯೋ ಅದಕ್ಕೆ ಅನುಗುಣವಾಗಿ ಸ್ಥಳನಾಮಗಳು ಹುಟ್ಟಿಕೊಂಡಿರುವುದನ್ನು ಕಾಣಬಹುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಗೊಬ್ಬಳಿಕಾವಲು, ಹುಣಸೇಕೂಪ್ಪಲು, ಸುರಗಳ್ಳಿ, ಅತ್ತಿಗ್ಗೋಡು, ಕಳ್ಳಿಕೊಪ್ಪಲು, ಮರದೂರು, ಅರಳಿಮರದ ಕೊಪ್ಪಲು, ಗಳಗನಕೆರೆ, ಈಚೂರು, ಸೀಗೆಕೊರೆಕಾವಲು, ಸೆಣಬಿನಕುಪ್ಪೆ, ನೇರಳೆಕುಪ್ಪೆ, ಜವನೀಕುಪ್ಪೆ, ಮುತ್ತೂರು, ಬಾಳೆಕಟ್ಟೆ, ಹುಣಸವಾಡಿ, ಮರೂರು, ಚಿಕ್ಕನೇರಳೆ, ದೊಡ್ಡನೇರಳೆ, ಚಪ್ಪರದಹಳ್ಳಿ.

ದಿಕ್ಸೂಚಿಗಳು

ಕೆಲವು ಸ್ಥಳನಾಮಗಳು ದಿಕ್ಕನ್ನು ಸೂಚಿಸುವ ಪ್ರಮುಖ ಸ್ಥಳನಾಮಗಳಾಗಿವೆ. ಇಲ್ಲಿ ಕಂಡುಬರುವ ಪ್ರಮುಖ ಹಳ್ಳಿಗಳೆಂದರೆ, ಹಳ್ಳಿಗಳ ಪೂರ್ವಭಾಗದ ಸ್ಥಳನಾಮಗಳನ್ನು ಮೂಡಲಸೀಮೆ ಎಂದು, ಪಶ್ಚಿಮ ದಿಕ್ಕಿನಲ್ಲಿ ಕಂಡುಬರುವ ಹಳ್ಳಿಗಳನ್ನು ಪಡುವಲಸೀಮೆ ಎಂದು ಕರೆಯುವರು. ಹಾಗಾಗಿ ಸ್ಥಳನಾಮಗಳನ್ನು ಗುರುತಿಸಲು ದಿಕ್ಸೂಚಿ ಪ್ರಧಾನ ಪಾತ್ರವನ್ನು ವಹಿಸುತ್ತವೆ. ಉದಾ: ಮೂಡಲಕೊಪ್ಪಲು ಗ್ರಾಮವನ್ನು ಹೆಸರಿಸಬಹುದು.

ಶಿಲಾವಾಚಕಗಳು

ಪ್ರಾಚೀನ ಕಾಲದ ಮಾನವ ಬೆಟ್ಟಗುಡ್ಡ, ಗುಹೆ ಮತ್ತು ಕಲ್ಲಿನ ಪೊಟರೆಗಳಲ್ಲಿ ವಾಸಿಸುತ್ತಾ ತನ್ನನ್ನು ಕಾಡುಪ್ರಾಣಿಗಳಿಂದ, ಮಳೆ ಗಾಳಿ ಮತ್ತು ಚಳಿಯಿಂದ ರಕ್ಷಣೆ ಪಡೆಯುತ್ತಿದ್ದನು. ಅಂತಹ ಶಿಲೆಗಳಿಂದ ರಚನೆಯಾದ ಊರುಗಳೆಂದರೆ ಕೂರ್ಗಲ್ಲು, ಕಲ್ಕರೆ, ಚನ್ನಕಲ್‌ಕಾವಲು, ಮಂಟಿಕೊಪ್ಪಲು.

ಪ್ರಮಾಣವಾಚಕ

ಒಂದೇ ಪ್ರದೇಶದಲ್ಲಿ ಅಧಿಕ ಜನಸಂಖ್ಯೆ ವಾಸಿಸುತ್ತಿರುವ ನೆಲೆಗಳನ್ನು ಗಮನಿಸಬಹುದು. ಆ ಪ್ರದೇಶವು ಕೆಲವೊಮ್ಮೆ ನೆಲೆಸಲು ಚಿಕ್ಕದಾದ ಪ್ರದೇಶ ಅಥವಾ ಸ್ಥಳವಾಗಿರುವುದು. ಇದರಿಂದ ತಮ್ಮ ಅವಶ್ಯಕತೆಗಳಿಗೆ ಅನುಗುಣವಾಗಿ ಮತ್ತು ಪ್ರಮಾಣಕ್ಕೆ ಅನುಗುಣವಾಗಿ

ಹಲವು ಹಳ್ಳಿಗಳು ಉಗಮಗೊಂಡಿರುವವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ದೊಡ್ಡಹೊಸೂರು, ಚಿಕ್ಕಹೊಸೂರು, ಚಿಕ್ಕನೇರಳೆ, ದೊಡ್ಡನೇರಳೆ, ಚಿಕ್ಕಮಳಲಿ, ದೊಡ್ಡವಡ್ಡರಕೇರಿ, ಚಿಕ್ಕಹೊನ್ನೂರು, ದೊಡ್ಡಹೊನ್ನೂರು, ದೊಡ್ಡಹರವೆ, ದೊಡ್ಡಕಮರವಳ್ಳಿ, ಚಿಕ್ಕಕಮರವಳ್ಳಿ.

ಅರಣ್ಯವಾಚಕ

ಸಣ್ಣ ಪ್ರಮಾಣದ ಅಥವಾ ದೊಡ್ಡ ಪ್ರಮಾಣದ ಅರಣ್ಯಗಳು ಕಾಡುಗಳಿಂದಲೂ ಊರುಗಳು ಉಗಮಗೊಂಡಿರುವುದನ್ನು ತಾಲ್ಲೂಕಿನಲ್ಲಿ ಕಾಣಬಹುದು. ಆನೆ ಚೌಕೂರು, ಫಾರೆಸ್ಟ್ ದೊಡ್ಡಹರವೆ ಫಾರೆಸ್ಟ್.

ಕೀಟವಾಚಕ

ದಟ್ಟವಾದ ಅರಣ್ಯ, ಗಿಡಮರಗಳು ಬೆಳೆದಿರುವ ಪ್ರದೇಶವಾದ ಪಿರಿಯಾಪಟ್ಟಣವು ಅರೆಮಲೆನಾಡು ಪ್ರದೇಶವಾಗಿರುವುದರಿಂದ ನಿಸರ್ಗದತ್ತವಾದ ಕಾಡುಪ್ರದೇಶವು ಇದೆ. ಹೀಗಾಗಿ ಹಲವು ಪ್ರಭೇದದ ಕೀಟಗಳ ಆವಾಸಸ್ಥಾನವಾಗಿದೆ. ಇಲ್ಲಿ ಕಂಡುಬರುವ ಕೀಟಗಳಿಂದಲೇ ಆ ಊರಿಗೆ ಅದರ ಹೆಸರು ಬಂದಿರುವುದಾಗಿದೆ. ಉದಾಹರಣೆಗೆ ಚಿಟ್ಟೆನಹಳ್ಳಿ ಗ್ರಾಮವನ್ನು ಹೆಸರಿಸಬಹುದು.

ಸಾಂಸ್ಕೃತಿಕ ಸ್ಥಳನಾಮಗಳು

ಸ್ಥಳನಾಮಗಳ ವರ್ಗೀಕರಣದಲ್ಲಿ ಪ್ರಾಕೃತಿಕ ಅಂಶಗಳನ್ನೊಳಗೊಂಡ ಘಟಕಗಳು ಮೂಲಭೂತವಾಗಿರುತ್ತವೆ. ಆದರೆ ಸಾಂಸ್ಕೃತಿಕ ವಿಭಾಗದಲ್ಲಿ ಐತಿಹಾಸಿಕ ವೀರರು, ರಾಜರು, ದಂಡನಾಯಕರು, ಸೇನಾಧಿಪತಿ, ಸಾಮಾನ್ಯ ವ್ಯಕ್ತಿಗಳು ತಮ್ಮ ಹೆಸರಿನಲ್ಲಿ ಕೆಲವು ಊರುಗಳನ್ನು ದಾನ, ದತ್ತಿ, ಬಳುವಳಿಯಾಗಿ ಕೊಟ್ಟಿರುತ್ತಾರೆ ಹಾಗೂ ವಿವಿಧ ಧರ್ಮ, ಜಾತಿ ಕುಲಕಸುಬಿನ ಜನರು ಹೆಚ್ಚಾಗಿ ವಾಸಿಸುತ್ತಿದ್ದು ಅವರುಗಳು ಸಾಂಸ್ಕೃತಿಕವಾದ ಕೊಡುಗೆಗಳನ್ನು ನೀಡಿದ್ದಾರೆ. ಆ ಕಾರಣಗಳಿಂದಲೂ ಸ್ಥಳನಾಮಗಳಿಗೆ ಹೆಸರು ಬಂದಿರುವ ಸಾಧ್ಯತೆ ಇರುತ್ತದೆ.[೪೮] ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬರುವ ಪ್ರಮುಖ ಸ್ಥಳನಾಮಗಳು ವ್ಯಕ್ತಿಗತನಾಮದಿಂದಾಗಿ ಪ್ರಮುಖ ಪಾತ್ರವನ್ನು ನಿರ್ವಹಿಸಿ ಹೆಚ್ಚು ಪ್ರಸಿದ್ಧಿಯನ್ನು ಪಡೆದಿವೆ.

೧. ಐತಿಹಾಸಿಕ ಹಿನ್ನೆಲೆಯ ಸ್ಥಳನಾಮಗಳು

೨. ಪುರಾಣ ಐತಿಹ್ಯವಿರುವ ಸ್ಥಳನಾಮಗಳು

೩. ವ್ಯಕ್ತಿಗತ ಹೆಸರುಗಳ ಸ್ಥಳನಾಮಗಳು

೪. ಜನಾಂಗದ ಆಧಾರದ ಮೇಲೆ ಬಂದಿರುವ ಸ್ಥಳನಾಮಗಳು

೫. ರಾಜಕೀಯ ಪ್ರಸಿದ್ಧ ಹೊಂದಿರುವ ಸ್ಥಳನಾಮಗಳು

೬. ಧಾರ್ಮಿಕ ವಿಧಿವಿಧಾನಗಳಿಂದ ಬಂದಿರುವ ಸ್ಥಳನಾಮಗಳು

೭. ವಾಣಿಜ್ಯ ಚಟುವಟಿಕೆಯ ತಾಣವಾದ ಸ್ಥಳನಾಮಗಳು

ಪೌರಾಣಿಕ ವಾಚಕ

ಪುರಾಣ ಎಂದರೆ ಹಿಂದಿನದು, ಹಳೆಯ ಕಥೆ ಎನ್ನಲಾಗುವುದು. ಒಂದು ಕಾಲಕ್ಕೆ ಪುರಾಣಗಳು ಜಾನಪದೀಯವಾಗಿದ್ದವು. ಮಾನವನ ಆದಿಮ ಬದುಕಿನೊಂದಿಗೆ ಪುರಾಣಗಳು ಹುಟ್ಟಿಬಂದವು. ಒಂದು ಸ್ಥಳದ ಬಗ್ಗೆ ಚರಿತ್ರೆ ಕೆದಕಿದಾಗ ಮೊದಲು ಅದರ ಬಗೆಗೆ ಪುರಾಣ ಕಲ್ಪನೆಗಳು ಸುಳಿಯುತ್ತವೆ.[೪೯] ಅಂತಹ ಪುರಾಣವಾಚಕ ನಾಮಗಳೆಂದರೆ ರಾಮಭದ್ರನಕೊಪ್ಪಲು, ರಾವಂದೂರು, ಹರವೆಮಲ್ಲರಾಜಪಟ್ಟಣ. ರಾಮನಾಥತುಂಗ, ಸನ್ಯಾಸಿಪುರ, ಕಂಪಾಲಪುರ ಇತ್ಯಾದಿ.

ದೈವವಾಚಕಗಳು

ವಿವಿಧ ಬಗೆಯ ಧರ್ಮಗಳ ಮತ್ತು ಆ ಧರ್ಮದ ಪ್ರತೀಕವಾದ ಆರಾಧ್ಯದೈವಗಳು ನೆಲೆಗೊಂಡಿರುವ ಸ್ಥಳಗಳಿಗೆ ಸಂಬಂಧಿಸಿದ ಸ್ಥಳನಾಮಗಳು ಕಂಡುಬರುತ್ತವೆ. ಅವುಗಳಲ್ಲಿ ಪೂಜಾರಯ್ಯನಕೊಪ್ಪಲು, ಕಿತ್ತೂರು, ಮಠದ ಕೊಪ್ಪಲು, ಅಮ್ಮನಗುಡಿಕೊಪ್ಪಲು, ನಂದಿನಾಥಪುರ, ಮಲ್ಲಿನಾಥಪುರ, ತಿರುಮಲಾಪುರ, ಕೃಷ್ಣಪುರ, ಹನುಮಂತನಪುರ ಮತ್ತು ಚೆನ್ನಕೇಶವಪುರ ಇತ್ಯಾದಿ.

ತೆರಿಗೆವಾಚಕ

ರಾಜಮಹಾರಾಜರು ಆರ್ಥಿಕವಾಗಿ ಮುಂದುವರಿದ ಸ್ಥಳಗಳಲ್ಲಿ ವಿಶೇಷವಾಗಿ ತೆರಿಗೆಯನ್ನು ವಸೂಲಿ ಮಾಡುತ್ತಿದ್ದ ಸ್ಥಳಗಳು. ಆರ್ಥಿಕವಾಗಿ ಮುಂದುವರೆದ ಸ್ಥಳಗಳಿಗೆ ತನ್ನದೇ ಆದ ಛಾಪು ತೋರಿಸಿದ ಸ್ಥಳನಾಮಗಳು. ಅವುಗಳೆಂದರೆ ಕಂದೇಗಾಲ, ಕಂದೇಗಾಲಪಾಳ್ಯ, ಸುಂಕದಹಳ್ಳಿ ಮೊದಲಾದವುಗಳು.

ಬೇಸಾಯವಾಚಕ

ಭಾರತ ಹಳ್ಳಿಗಳ ದೇಶ. ಪ್ರಾಚೀನ ಭಾರತದಿಂದ ಇಂದಿನ ಆಧುನಿಕ ಗ್ರಾಮೀಣ ಪ್ರದೇಶದ ಜನತೆಯ ಪ್ರಮುಖ ವೃತ್ತಿ ವ್ಯವಸಾಯ. ಆದ್ದರಿಂದ ಹಳ್ಳಿಗಳಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ಯಾವುದಾದರೂ ಕೃಷಿ ಅವಲಂಬಿಸುವುದು ಅನಿವಾರ್ಯ. ವ್ಯವಸಾಯ ಪದ್ಧತಿ ಪ್ರಾಮುಖ್ಯತೆ ಪಡೆದಿದ್ದರಿಂದ ಅವುಗಳನ್ನು ಶಾಶ್ವತಗೊಳಿಸುವ ಹೆಸರುಗಳು ಮುಂದೆ

ಸ್ಥಳನಾಮವಾಗಿರುವುದನ್ನು ಕಾಣಬಹುದು. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬರುವ ಪ್ರಮುಖ ನಾಮಗಳೆಂದರೆ ಬೀಸನಕುಪ್ಪೆ, ಸೆಣಬಿನಕುಪ್ಪೆ, ಹಸುವಿನಕಾವಲು, ರಾಗಿ ಆಲದಮರದ ಕೊಪ್ಪಲು, ಹಿಟ್ನಹಳ್ಳಿ, ಹಲಸೂರು, ಹಿಟ್ನೆಹೆಬ್ಬಾಗಿಲು ಮೊದಲಾದವುಗಳು.

ವ್ಯಕ್ತಿವಾಚಕ

ಸಾಮಾನ್ಯವಾಗಿ ಕೆಲವು ಊರುಗಳಿಗೆ ವ್ಯಕ್ತಿಯ ಹೆಸರುಗಳು ಬಂದಿರುತ್ತವೆ. ಇವನು ಊರಿನ ಮುಖಂಡ, ಯಜಮಾನ, ಛೇರ್ಮನ್, ಪಟೇಲ, ಶ್ಯಾನುಬೋಗನಾಗಿರುತ್ತಾನೆ. ಮತ್ತು ಅಲ್ಲಿನ ಸರ್ವತೋಮುಖ ಬೆಳವಣಿಗೆಗೆ ಕಾರಣನಾಗಿದ್ದು, ಕಾಲಕ್ರಮೇಣ ಆ ವ್ಯಕ್ತಿಯ ಹೆಸರೇ ಊರ ಹೆಸರುಗಳಾಗಿರುವುದನ್ನು ಕಾಣಬಹುದು. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬರುವ ಪ್ರಮುಖ ಸ್ಥಳಗಳು ವ್ಯಕ್ತಿಗತ ನಾಮದಿಂದಾಗಿ ಪ್ರಮುಖ ಪಾತ್ರವನ್ನು ನಿರ್ವಹಿಸಿ ಹೆಚ್ಚು ಪ್ರಸಿದ್ಧಿಯನ್ನು ಪಡೆದಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ. ಕಣಗಾಲು, ಕೆ.ಬಸವನಹಳ್ಳಿ, ಮನುಗನಹಳ್ಳಿ, ರಾಜನಬಿಳುಗಲಿ, ಸುಬ್ಬಯ್ಯನ ಕೊಪ್ಪಲು, ರಾಮಯ್ಯನಕೊಪ್ಪಲು, ತಂದ್ರೆಗುಡಿಕೊಪ್ಪಲು, ಚಿಕ್ಕೇಗೌಡನಕೊಪ್ಪಲು, ಮಾಳೇಗೌಡನಕೊಪ್ಪಲು, ಹುಚ್ಚೇಗೌಡನಕೊಪ್ಪಲು, ಸಂಗರಶೆಟ್ಟಿಹಳ್ಳಿ, ಗುರುವಯ್ಯನಕೊಪ್ಪಲು, ಮಲ್ಲೇಗೌಡನಕೊಪ್ಪಲು, ಭುವನಹಳ್ಳಿ, ಹರವೆಮಲ್ಲ ರಾಜಪಟ್ಟಣ, ತಾತನಹಳ್ಳಿ, ರಾಜಾಪುರ, ಅಂಕನಹಳ್ಳಿ, ಚೌಡೇನಹಳ್ಳಿ, ಪಿರಿಯಾಪಟ್ಟಣ, ಅಲ್ಪನಾಯಕನಹಳ್ಳಿ, ಗಂಗನಕುಪ್ಪೆ, ಶಾನುಭೋಗನಹಳ್ಳಿ, ಪಂಚವಳ್ಳಿ, ಬೂವನಹಳ್ಳಿ, ಮಲ್ಲಿನಾಥಪುರ ಮೊದಲಾದವುಗಳು.

ಜಾತಿ/ಜನಾಂಗವಾಚಕ

ಪ್ರಾಚೀನ ಕಾಲದಲ್ಲಿ ವ್ಯಕ್ತಿ ತನ್ನ ಜೀವನ ನಿರ್ವಹಣೆಗಾಗಿ ಯಾವುದಾದರೊಂದು ಕಾಯಕ ಕೈಗೊಳ್ಳುತ್ತಿದ್ದ. ಆ ಕಾಯಕ ವಂಶಪಾರಂಪರೆಯಾಗಿ ಹಲವು ತಲೆಮಾರಿನವರೆಗೆ ಮುಂದುವರೆದುಕೊಂಡು ಬರುತ್ತಿತ್ತು. ಮುಂದಿನ ದಿನಗಳಲ್ಲಿ ಆ ಕಾಯಕವೇ ಜಾತಿ ಅಥವಾ ಜನಾಂಗವಾಚಿಯಾಗಿರುವುದನ್ನು ಕಾಣಬಹುದು. ಪ್ರಾಚೀನತೆಯಿಂದ ಆಧುನಿಕತೆಯೆಡೆಗೆ ಕಾಲಿಟ್ಟಿರುವ ಪ್ರಾಚೀನ ನೆನಪುಗಳನ್ನು ಮರೆಯುವಂತಿಲ್ಲ. ಅಂತಹ ನಾಮಗಳಲ್ಲಿ ಪ್ರಮುಖವಾದವುಗಳೆಂದರೆ ತೆಲುಗಿನಕುಪ್ಪೆ, ದೊಡ್ಡವಡ್ಡರಕೇರಿ, ಬ್ಯಾಡರಬಿಳಗುಲಿ, ಮಂಟಿಕೊಪ್ಪಲು, ವಡ್ಡರಕೊಪ್ಪಲು, ಕುಂಬಾರಕೊಪ್ಪಲು, ಉಪ್ಪಾರಗೇರಿ, ಐಲಾಪುರ ಇತ್ಯಾದಿ.

ಸ್ಥಳನಾಮಗಳ ವಿಶ್ಲೇಷಣೆ

ಸ್ಥಳನಾಮ ಸಂಶೋಧನೆಗೆ ಹಾಗೂ ಅದರ ವೈಜ್ಞಾನಿಕ ಪ್ರಗತಿಗೆ ಮೊದಲು ಚಾಲನೆ ದೊರೆತದ್ದು ಯುರೋಪ್ ಅಮೇರಿಕ ದೇಶಗಳಲ್ಲಿ ಸ್ಪಷ್ಟ. ಆದರೆ ಆ ಎರಡು ಖಂಡಗಳಲ್ಲಿ

ಕೈಗೊಂಡ ಸಂಶೋಧನಾ ವಿಧಾನಗಳಲ್ಲಿ ಹಾಗೂ ಅವು ನೀಡಿದ ಒತ್ತುಗಳಲ್ಲಿ ವ್ಯತ್ಯಾಸ ವಿದ್ದುವೆಂಬುದು ನಿಜ. ಪ್ರಾಚೀನ ಇತಿಹಾಸದ ಪುನರ್ ನಿರ್ಮಾಣವನ್ನು ಗಮನದಲ್ಲಿಟ್ಟುಕೊಂಡು ಯುರೋಪಿನ ತಜ್ಞರು ಸಂಶೋಧನೆ ನಡೆಸಿದರು. ಹಳೆಯ ದಾಖಲೆಗಳು ಪೂರ್ಣವಾಗಿ ದೊರೆಯದಿದ್ದುದರಿಂದ ಅವರು ಭೂಗೋಳ, ಜನಾಂಗ, ವಿಜ್ಞಾನಗಳ ಆಧಾರದ ಮೇಲೆ ಸ್ಥಳನಾಮಗಳ ಉತ್ಪತ್ತಿಯನ್ನು ಸಾಧಿಸಲು ಪ್ರಯತ್ನಿಸಿದರು. ಅಮೇರಿಕದ ಇತಿಹಾಸಕ್ಕೆ ಪ್ರಾಚೀನತೆ ಇಲ್ಲದಿದ್ದರೂ ಆಧುನಿಕವಾಗಿ ಲಭ್ಯವಿರುವ ಚಾರಿತ್ರಿಕ ದಾಖಲೆಗಳ ಸಹಾಯದಿಂದ ಚರಿತ್ರೆಯನ್ನು ಕಟ್ಟಿಕೊಳ್ಳುವ ವಿಧಾನಕ್ಕೆ ಶರಣುಹೋದರು.[೫೦] ಭಾರತೀಯ ಸ್ಥಳನಾಮಗಳ ಇತಿಹಾಸ ನಿರ್ಣಯಕ್ಕೆ ಶಾಸನಗಳು ಅತ್ಯಮೂಲ್ಯ ದಾಖಲೆಗಳಾಗಿವೆ. ಆದರೂ ಭರತಖಂಡದಲ್ಲಿ ಅವುಗಳನ್ನು ಕುರಿತ ವೈಜ್ಞಾನಿಕ ಸಂಶೋಧನೆ ಪ್ರಾರಂಭವಾದದ್ದೇ ಪಾಶ್ಚಾತ್ಯ ವಿದ್ವಾಂಸರ ಸಂಪರ್ಕ ಆದ ನಂತರ ಇದಕ್ಕೆ ಅನುಗುಣವಾಗಿ ಸಂಶೋಧನಾ ಅಧ್ಯಯನಕ್ಕೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಕ್ರಿ.ಶ. ೧೯೭೮ರಲ್ಲಿ ಭಾರತೀಯ ಸ್ಥಳನಾಮ ಸಂಸ್ಥೆ ಮೈಸೂರಿನಲಿ[೫೧] ಜನ್ಮ ತಾಳಿದೆ.

ಸ್ಥಳನಾಮಗಳ ಕುರಿತು ಭದ್ರವಾದ ಬುನಾದಿ ನಿರ್ಮಿಸಿದ ಕೀರ್ತಿ ಎಚ್.ಡಿ.ಸಂಕಾಲಿಯಾ ಅವರಿಗೆ ಸಲ್ಲಬೇಕು. ಸ್ಥಳನಾಮಗಳ ಪೂರ್ವಾಪರ ಪ್ರತ್ಯಯಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ಧಾರ್ಮಿಕ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಅವುಗಳನ್ನು ವಿಶ್ಲೇಷಿಸುವುದರ ಜೊತೆಗೆ ಜನಾಂಗೀಯ, ಭೌಗೋಳಿಕ ಹಂಚಿಕೆಯ ವಿವರಣೆ ಸಾಧ್ಯವೆಂಬುದನ್ನು ತೋರಿಸಿಕೊಟ್ಟರು. ಜತೆಗೆ ಆಯಾಯ ಕಾಲದ ಭಾಷೆಯ ಸ್ಥಿತಿಗತಿಗಳನ್ನು ನಿರ್ಣಯಿಸುವಲ್ಲಿ, ರಾಜಕೀಯ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಗುರುತಿಸುವಲ್ಲಿ ಅವುಗಳ ಅಧ್ಯಯನದಿಂದ ಅನುಕುಲವಾಗುತ್ತವೆಂದು ತಿಳಿಸಿದರು. ಈ ವೇಳೆಯಲ್ಲಿ ಹಲವು ತರುಣ ಸಂಶೋಧಕರಿಗೆ ಮಾರ್ಗದರ್ಶನ ನೀಡಿ ತತ್ಸಂಬಂಧವಾದ ಅಧ್ಯಯನಕ್ಕೆ ಕಾರಣರಾದರು.[೫೨]

ಕರ್ನಾಟಕದಲ್ಲಿ ಸ್ಥಳನಾಮಗಳ ಮೇಲೆ ಮೊಟ್ಟಮೊದಲು ಬಹುಪ್ರಮಾಣದಲ್ಲಿ ಕ್ಷಕಿರಣ ಹರಿಸಿದವರೆಂದರೆ ಶಂಬಾ ಜೋಶಿಯವರು. ಅವರು ಕಂನಾಡಕತೆಯಲ್ಲಿ ಸ್ಥಳನಾಮಗಳ ಅಧ್ಯಯನದ ಪರಿಣಾಮವಾಗಿ ಮೂಡಿದ ತತ್ವಗಳನ್ನು ಪ್ರತಿಪಾದಿಸಿದರಲ್ಲದೆ, ಅವುಗಳ ಹಿನ್ನೆಲೆಯಲ್ಲಿ ಇತಿಹಾಸ, ಪುರಾಣ, ಧರ್ಮ, ಜನಾಂಗ ಮತ್ತು ಸಂಸ್ಕೃತಿಗಳ ಮೇಲೆ ಮಹತ್ವಪೂರ್ಣವಾದ ಬೆಳಕು ಚೆಲ್ಲಿರುವರು.[೫೩] ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಪ್ರಾಗಿತಿಹಾಸ ಜನವಸತಿ ಇದ್ದ ಪ್ರಾಚೀನ ಕುರುಹುಗಳು ಗೋಚರಿಸುತ್ತವೆ. ಚಾರಿತ್ರಿಕ ಕಾಲಘಟ್ಟದಲ್ಲಿ ಕರ್ನಾಟಕದ ಬಹುತೇಕ ರಾಜಮನೆತನಗಳು, ಮಾಂಡಲೀಕರು, ಅಧೀನ ಅರಸುಮನೆತನಗಳು ಹಾಗೂ ಪ್ರಾಚೀನ ಕುರುಹುಗಳನ್ನು ಗುರುತಿಸಬಹುದು. ಇಲ್ಲಿನ ಹೆಚ್ಚಿನ ಸ್ಥಳನಾಮಗಳು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಿಷ್ಪತ್ತಿಗೊಂಡಿರುವುದು ಕಂಡುಬರುತ್ತವೆ. ಒಟ್ಟಿನಲ್ಲಿ ಪಿರಿಯಾಪಟ್ಟಣ ತಾಲ್ಲೂಕು

ಪರಿಸರದ ಕೆಲವು ಪ್ರಮುಖ ಸ್ಥಳನಾಮಗಳನ್ನು ಇಲ್ಲಿ ದೊರೆತಿರುವ ಆಧಾರಗಳ ಅನ್ವಯ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಚಾಮರಾಯನಕೋಟೆ

ಪಿರಿಯಾಪಟ್ಟಣ ತಾಲ್ಲೂಕಿನ ಐತಿಹಾಸಿಕ ಸ್ಥಳನಾಮಗಳಲ್ಲಿ ಚಾಮರಾಯನಕೋಟೆ ಪ್ರಮುಖವಾಗಿದೆ. ಇದು ಪಿರಿಯಾಪಟ್ಟಣದಿಂದ ೩೦ ಕಿ.ಮೀ ದೂರದಲ್ಲಿದೆ. ಗ್ರಾಮವು ಕಾವೇರಿ ನದಿ ಬಲದಂಡೆಯ ಮೇಲಿರುವುದು. ಚಂಗಾಳ್ವರ ಸಾಮಂತ ಪ್ರಭುವಾಗಿದ್ದ ಚಾಮರಾಯ ನಿಂದ ನಿರ್ಮಿತವಾಗಿದ್ದು ಇಂದು ಆತನು ನಿರ್ಮಿಸಿದ ಕೋಟೆ ಸಂಪೂರ್ಣವಾಗಿ ನಾಶಗೊಂಡಿದೆ. ಆದರೆ ಸ್ಥಳೀಯ ಜನತೆ ಕೋಟೆ ಇದ್ದ ಜಾಗವನ್ನು ಮಾತ್ರ ತೋರಿಸುವರು. ಗ್ರಾಮದ ಕೇಂದ್ರ ಭಾಗದಲ್ಲಿರುವ ಬಸವನಗುಡಿಯ ಮುಂದೆ ಒಂದು ವೀರಗಲ್ಲು ಶಾಸನವಿದೆ. ಈ ಶಾಸನದಲ್ಲಿ[೫೪] ಚೆಂಬುರಾಯನ ಕೋಟೆ ಎಂದಿದೆ. ಈ ಪ್ರದೇಶದ ವೀರನಾದ ಈತನನ್ನು ಮುಂದೆ ಜನ ಸಾಮಾನ್ಯರು ಅವನ ನೆನಪಿನಾರ್ಥವಾಗಿ ಚಾಮರಾಯನಕೋಟೆ ಎಂಬ ಹೆಸರಿನಿಂದ ಕರೆದಿರುವರು. ಪ್ರಾಚೀನ ಚೆಂಬರಾಯನಕೋಟೆ> ಚೆನಬರಾಯನ ಕೋಟೆ> ಚನಮರಾಯನ ಕೋಟೆ ಇಂದು ಚಾಮರಾಯನ ಕೋಟೆಯಾಗಿದೆ.

ಶಾನುಭೋಗನಹಳ್ಳಿ

ಕಣಗಾಲು ದೊಡ್ಡಕಮರವಳ್ಳಿ ಗ್ರಾಮಗಳ ಮಧ್ಯಭಾಗದಲ್ಲಿ ಶಾನುಭೋಗನಹಳ್ಳಿ ಇದೆ. ಚಂಗಾಳ್ವರ ಕಾಲದಲ್ಲಿ ಗ್ರಾಮಾಡಳಿತಧಿಕಾರಿಯಾಗಿದ್ದ ಹಾಗೂ ಕಂದಾಯಾಧಿಕಾರಿಯಾಗಿದ್ದವನು ಶಾನುಭೋಗ. ಶಾನುಭೋಗನಿದ್ದ ಸ್ಥಳ ಇಂದು ಶಾನುಭೋಗಹಳ್ಳಿಯಾಗಿದೆ. ಸಾಹಣಿ ಸೈನ್ಯದ ಮೇಲ್ವಿಚಾರಕ. ಸಾಹಣಿ ಕುದುರೆಗಳನ್ನು ಪಳಗಿಸುವವನು. ಸಾಹಣಿ ಸೇನಾಬೋದನಿದ್ದ ಸ್ಥಳ. ಸಾಣೇನಹಳ್ಳಿ>ಶಾನುಭೋಗನಹಳ್ಳಿ. ಪ್ರತಿಯೊಂದು ಗ್ರಾಮದಲ್ಲಿಯೂ ಹಿಂದೆ ಗ್ರಾಮದ ಮುಖಂಡರಾಗಿ ಪಟೇಲ, ಶ್ಯಾನುಭೋಗ, ಶಿರಸ್ತಿದಾರ ಇರುತ್ತಿದ್ದರು. ಶಾನುಭೋಗನಹಳ್ಳಿ ವಕಾರ ಹೋಗಿ, ಗಕಾರ ಬಂದು ಶಾನುಭೋಗನಹಳ್ಳಿಯಾಗಿದೆ ಎಂದು ಡಾ.ವಿಶ್ವನಾಥ ಗುರುತಿಸುವರು.[೫೫] ಇದರಿಂದ ಶಾನುಭೋಗನಿದ್ದ ಸ್ಥಳ>ಶಾನುಭೋಗನಹಳ್ಳಿಯಾಗಿರುವುದಾಗಿದೆ.

ರಾವಂದೂರು

ಪಿರಿಯಾಪಟ್ಟಣದಿಂದ ಸುಮಾರು ೧೫ ಕಿ.ಮೀ ದೂರದಲ್ಲಿರುವ ರಾವಂದೂರು ಗ್ರಾಮವು ಐತಿಹಾಸಿಕವಾಗಿಯೂ ಹಾಗೂ ಜಾನಪದೀಯವಾಗಿಯೂ ಹೆಸರುವಾಸಿಯಾಗಿದೆ. ಈ ಗ್ರಾಮದಲ್ಲಿ ಇರುವ ಎರಡು ಶಾಸನಗಳಲ್ಲಿ ಸ್ಥಳನಾಮದ ಉಲ್ಲೇಖವಿಲ್ಲ. ಆದರೆ ಒಂದು ಐತಿಹ್ಯವಿದ್ದ ಜಾನಪದ ನಂಬಿಕೆಯ ಪ್ರಕಾರ ಶ್ರೀರಾಮ ಈ ಊರಿಗೂ ಬಂದಿದ್ದ. ಅದರಿಂದಾಗಿ

ಅದು ರಾಮ+ಬಂದ+ಊರು ರಾವಂದೂರಾಗಿದೆ. ರಾಮ ಪದ 'ಮ', 'ವ', 'ಆಗಿ', 'ಬ', ಲೋಪವಾಗಿದೆಯೆಂದು[೫೬] ಇಲ್ಲಿ ವ್ಯಾಖ್ಯಾನ ಮಾಡಲಾಗಿದೆ. ಈ ರಾಮ ಪದ ರಾಮಾಯಣದ ರಾಮನಿಗನ್ವಯಿಸುವುದಿಲ್ಲವೆಂದೂ, ವೀರಶೈವರ ಐವರು ಆಚಾರ್ಯರಲ್ಲಿ ಒಬ್ಬರಾದ ರಾಮಾರಾಧ್ಯನಿಗೆ ಇದು ಅನ್ವಯವಾಗುತ್ತದೆಂದೂ ಸ್ಥಳೀಯ ವೀರಶೈವರು ವಾದಿಸುತ್ತಾರೆ. ವಿಜಯನಗರದ ಪ್ರೌಢದೇವರಾಯನ ಸಮಕಾಲೀನನಾದ ಲಕ್ಕಣದಂಡೇಶ ತನ್ನ ಶಿವತತ್ವ ಚಿಂತಾಮಣಿಯಲ್ಲಿ[೫೭] ಈ ಸ್ಥಳವನ್ನು ಹೆಸರಿಸುತ್ತಾನೆ. ಅದರಲ್ಲಿ ರಾವಂದೂರಿನ ರೂಪ ರಾವಂದೂರ್ ಎಂದಿದೆ.

ಪಿರಿಯಾಪಟ್ಟಣ

ಮೈಸೂರಿನಿಂದ ವಾಯವ್ಯಕ್ಕೆ ಸುಮಾರು ೭೦ ಕಿ.ಮೀ. ದೂರದಲ್ಲಿರುವ ಐತಿಹಾಸಿಕ ಸ್ಥಳವೇ ಪಿರಿಯಾಪಟ್ಟಣ. ಇಂದು ಪಟ್ಟಣ ಪಂಚಾಯಿತಿ ಮತ್ತು ತಾಲ್ಲೂಕಿನ ಆಡಳಿತ ಕೇಂದ್ರವಾಗಿರುವುದು. ಕರ್ನಾಟಕದ ಮಧ್ಯಕಾಲೀನ ಇತಿಹಾಸದಲ್ಲಿ ಚಂಗಾಳ್ವ ಮನೆತನದ ರಾಜಧಾನಿಯಾಗಿ ನಂತರದ ದಿನಗಳಲ್ಲಿ ಮೈಸೂರು ಒಡೆಯ ಮನೆತನಕ್ಕೆ ಸೇರಿದ್ದಾಗಿದೆ. ಈ ಪ್ರಾಚೀನ ಪಟ್ಟಣದ ಮೂಲ ಹೆಸರು ಸಿಂಹಪಟ್ಟಣ. ಕದಂಬರ ರಾಜ ಮೃಗೇಶವರ್ಮ ಸ್ಥಾಪಿಸಿದ ಗ್ರಾಮವಾಗಿದೆ. ಮೃಗೇಶ ಎಂದರೆ ಸಿಂಹ ಎಂದಾರ್ಥವಾಗುತ್ತದೆ.[೫೮] ಜನಪದ ವೀರಕಾವ್ಯ ಪಿರಿಯಾಪಟ್ಟಣ ಕಾಳಗದಲ್ಲಿ ಪಿರಿಯಾಪಟ್ಟಣ ರಾಜ್ಯವನ್ನು ಗಂಡುಭೂಮಿ[೫೯] ಎಂದು ಹೆಸರಿಸಲಾಗಿದೆ. ಮುಂದಿನ ದಿನಗಳಲ್ಲಿ ನಂಜುಂಡರಸನು ಕೊಡಗಿನ ನಂಜರಾಯ ಪಟ್ಟಣದಲ್ಲಿರುವಾಗಲೇ ಪಿರಿಯಾಪಟ್ಟಣದಲ್ಲಿ ಮಣ್ಣಿನ ಕೋಟೆ ಕಟ್ಟಿಸಿದನು. ಈ ನಡುವೆ ಒಂದು ಐತಿಹ್ಯದ ಪ್ರಕಾರ ನಂಜುಂಡರಸನು ಹನಗೋಡಿಗೆ ಹೋಗುತ್ತಿದ್ದಾಗ ದಾರಿಯಲ್ಲಿ ಮೊಲವೊಂದು ಕುದುರೆಯ ಪಾದವನ್ನು ಕಚ್ಚಿ ನಿಲ್ಲಿಸಿದ್ದನ್ನು ಕಂಡು ಆಶ್ಚರ್ಯಗೊಂಡು ಅಲ್ಲಿಯೇ ಪಟ್ಟಣವನ್ನು ಕಟ್ಟಲು ದೃಢಮನಸ್ಸು ಮಾಡಿದನು. ಅದರಂತೆ ಅಲ್ಲಿ ಊರನ್ನು ಸ್ಥಾಪಿಸಿ ಕೋಟೆ ಕಟ್ಟಿದ. ಈ ಸ್ಥಳಕ್ಕೆ ಹಿಂದೆ ಸಿಂಗಪಟ್ಟಣವೆಂದು ಹೆಸರಿದ್ದು ಕರಿಕಾಲ ಚೋಳನು ಅಲ್ಲಿ ಒಂದು ಕೆರೆಯನ್ನು ಮತ್ತು ಶಿವದೇವಾಲಯವನ್ನು[೬೦] ನಿರ್ಮಿಸಿದನೆಂದು ಹೇಳಲಾಗಿದೆ. ಇಂದು ಪಿರಿಯಾಪಟ್ಟಣದ ಚೆನ್ನಿಗರಾಯ ದೇವಾಲಯದ ಪ್ರದೇಶದ್ವಾರದಲ್ಲಿ ಒಂದು ಶಾಸನವಿದೆ. ಈ ಶಾಸನ ಕ್ರಿ.ಶ.೧೫೮೯ರ ಕಾಲಕ್ಕೆ ಸೇರಿದ್ದಾಗಿದೆ. ಇದರಲ್ಲಿ ಶ್ರೀಕಂಠರಾಜಯ್ಯನವರ ಪುತ್ರನಾದ ಮಹಾಮಾಂಡಳಿಕ, ಮಂಡಳೇಶ್ವರನು ಮತ್ತು ಕುಲೋತ್ತುಂಗ ಚಂಗಾಳ್ವರೆಂಬ ಬಿರುದನ್ನು ಹೊಂದಿದ ಪೆರಿಯಾರಾಜದೇವ ಮಹಾರಸನು ಈ ಪಟ್ಟಣವನ್ನು ಜೀರ್ಣೋದ್ಧಾರ ಮಾಡಿ, ತನ್ನ ಹೆಸರಾದ ಪೆರಿಯಾ ರಾಜಪಟ್ಟಣವೆಂದು ಮರುನಾಮಕರಣ[೬೧] ಮಾಡಿಸಿರುವನು. ಪೆರಿಯ+ರಾಜ+ದೇವ > ಪಿರಿಯರಾಜ+ಪಟ್ಟಣ> ಪಿರಿಯಾಪಟ್ಟಣವಾಗಿ ಚಲಾವಣೆಯಲ್ಲಿರುವುದಾಗಿದೆ.

ಕಿತ್ತೂರು

ಪಿರಿಯಾಪಟ್ಟಣದಿಂದ ಉತ್ತರ ದಿಕ್ಕಿಗೆ ಸುಮಾರು ೨೭ ಕಿ.ಮೀ ದೂರದಲ್ಲಿರುವ ಗ್ರಾಮ ಕಿತ್ತೂರು. ಈ ಗ್ರಾಮವು ಐತಿಹಾಸಿಕವಾಗಿ ಹಾಗೂ ಜಾನಪದೀಯವಾಗಿಯೂ ಪ್ರಾಮುಖ್ಯ ಪಡೆದಿದೆ. ಹಿಂದೆ ಈ ಕಿತ್ತೂರನ್ನು ಸತ್ಯರಾಜೇಂದ್ರ ಚೋಳ ಆಳುತ್ತಿದ್ದನು. ಪಿರಿಯಾಪಟ್ಟಣದ ದೊರೆಗಳ ಪ್ರತಿನಿಧಿಯಾಗಿ ಕಿತ್ತೂರನ್ನು ಆಳುತ್ತಿದ್ದ ಸಾಮಂತ ದೊರೆ. ಸತ್ಯರಾಜನ ಕೋಟೆಗೆ ಸತ್ಯದ ದೇವತೆ ಕೀರ್ತಿದೇವಿ ಕಾವಲಾಗಿದ್ದಳು ಎಂಬ ನಂಬಿಕೆ ಇದೆ. ಕೀರ್ತಿಪುರದ ಕೀರ್ತಿಯನ್ನು ಕೂಗಳ್ಳಿಮರ ಅಥವಾ ಅರಳಿಮರ ಕೂಗಿ ಹೇಳುತ್ತಿತ್ತು. ಶತ್ರುಗಳ ಬರುವಿಕೆಯನ್ನು ಕಂಡಕೂಡಲೇ ಕೂಗಿಕೊಳ್ಳುತ್ತಿತ್ತು ಎಂಬ ಐತಿಹ್ಯವಿದೆ.[೬೨] ಇಂದು ಕಿತ್ತೂರೆಂದು ಹೇಳುತ್ತಿರುವ ಊರನ್ನು ಕಟ್ಟಿದವನು ಮಾಳನಾಯಕ.[೬೩] ಕಿತ್ತೂರಿನ ಕೋಟೆಯ ಸಮೀಪದಲ್ಲಿ ಕೆರೆಯೊಂದನ್ನು ತೋಡಿಸಿ ಕೆರೆಯ ದಡದಲ್ಲಿ ದೇವಾಲಯವನ್ನು ಕಟ್ಟಿಸಿ ಅಲ್ಲಿ ಸೀಗೆಮೆಳೆಯಿಂದ ಕಿತ್ತುತಂದಿದ್ದ ದೇವಿ ವಿಗ್ರಹವನ್ನು ಪ್ರತಿಷ್ಠಾಪಿಸಿದನು. ಹೀಗೆ ಕಿತ್ತೂರಿದ್ದ ಅಮ್ಮ–ಕಿತ್ತೂರಮ್ಮ, ಅಲ್ಲಿನ ಕೆರೆಗೆ ಕಿತ್ತೂರಮ್ಮನ ಕೆರೆ ಎಂದು ಕರೆಯುತ್ತಿರುವರು.

ಗುಡ್ಡೇನಹಳ್ಳಿ

ಕೊಪ್ಪ ಗ್ರಾಮದಿಂದ ದಕ್ಷಿಣಕ್ಕೆ ೨ ಕಿ.ಮೀ. ದೂರದಲ್ಲಿರುವ ಗ್ರಾಮ ಗುಡ್ಡೇನಹಳ್ಳಿ. ಗುಡ್ಡೆಗಳ ನಡುವೆ ಜನವಸತಿ ನಿರ್ಮಾಣ ಮಾಡಿಕೊಂಡು ವಾಸಿಸುತ್ತಿದ್ದ ಕುರುಹಾಗಿ ಈ ಸ್ಥಳನಾಮವನ್ನು ಗುರ್ತಿಸಬಹುದು. ಇದರ ತಳ ಭಾಗದಲ್ಲಿ ಕಾವೇರಿ ನದಿಯ ಕೊಳ್ಳ ಹರಿಯುತ್ತಿದೆ. ಈ ಗ್ರಾಮದ ಸುತ್ತ ಮುತ್ತ ಸಣ್ಣ ಸಣ್ಣ ಬೆಟ್ಟ–ಗುಡ್ಡಗಳು ಇರುವವು. ಗುಡ್ಡ+ದ+ಹಳ್ಳಿ–ಗುಡ್ಡದ ಸಮೀಪವಿರುವ ಹಳ್ಳಿ, ಗುಡ್ಡ+ದ+ಹಳ್ಳಿ–>ಗುಡ್ಡೆ+ನ+ಹಳ್ಳಿಯಾಗಿದೆ. ಈ ಊರಿನಲ್ಲಿ ಗುಡ್ಡಯ್ಯ[೬೪] ಎಂಬ ಹಿರಿಯ ವ್ಯಕ್ತಿ ವಾಸಿಸುತ್ತಿದ್ದನು. ಹಾಗಾಗಿ ಈ ಸ್ಥಳ ಗುಡ್ಡಯ್ಯನ ಹಳ್ಳಿಯಾಗಿದೆ ಎಂದು ತಿಳಿದುಬರುತ್ತದೆ. ಗುಡ್ಡಯ್ಯನಹಳ್ಳಿ>ಗುಡ್ಡೇನಹಳ್ಳಿಯಾಗಿದೆ.

ಹಂಡಿತವಳ್ಳಿ

ಪಿರಿಯಾಪಟ್ಟಣದಿಂದ ಸುಮಾರು ೭ ಕಿ.ಮೀ ದೂರದಲ್ಲಿರುವ ಗ್ರಾಮವೇ ಹಂಡಿತವಳ್ಳಿ. ಹಿಂದೆ ಜೈನ ಸಂಸ್ಕೃತಿಯ ಕೇಂದ್ರವಾಗಿತ್ತು. ಚಂಗಾಳ್ವರ ಕಾಲದಲ್ಲಿ ಜೈನ ವಿದ್ವಾಂಸರು ಅಧಿಕ ಸಂಖ್ಯೆಯಲ್ಲಿ ಇಲ್ಲಿ ನೆಲಸಿದ್ದರೆಂದು ಅರಮನೆ ವೈದ್ಯನಾದ ಬೊಮ್ಮರಸ ಪಂಡಿತನ ಸ್ಮರಣಾರ್ಥವಾಗಿ ಅವನ ಹೆಸರನ್ನು ಈ ಊರಿಗೆ ಇಡಲಾಗಿದೆ. ಪಂಡಿತ+ನ+ಹಳ್ಳಿ>ಪಂಡಿತವಳ್ಳಿ ಹಂಡಿತವಳ್ಳಿ[೬೫] ಯಾಗಿರುವುದಾಗಿದೆ ಎಂದು ತಿಳಿಸಿರುವರು.

ಪಿರಿಯಾಪಟ್ಟಣ ತಾಲ್ಲೂಕಿನ ಗ್ರಾಮವಾರು ಪಟ್ಟಿ

೧. ಕಣಗಾಲು

೨. ಗರಿಗುಡ್ಡ ಕಾವಲು

೩. ಹೆಗ್ಗತ್ತೂರು

೪. ಕೆ. ಬಸವನಹಳ್ಳಿ

೫. ಮನುಗನಹಳ್ಳಿ

೬. ಗೂಬ್ಬಳಿ ಕಾವಲು

೭. ಐಚನಹಳ್ಳಿ

೮. ಗುಡಿಭದ್ರನ ಹೊಸಳ್ಳಿ

೯. ಅಡಗೂರು

೧೦. ಕಂಭೀಪುರ

೧೧. ಹಲಗನಹಳ್ಳಿ

ರಂಗೇಗೌಡನ ಕೊಪ್ಪಲು(ದಾ.)

೧೨. ರಾಶಿಮಂಟಿ ಕಾವಲು

೧೩. ರಾಜನ ಬಿಳುಗುಲಿ

ಸುಬ್ಬಯ್ಯನಕೊಪ್ಪಲು(ದಾ.)

ಪಾಕವಾಡಕೊಪ್ಪಲು(ದಾ.)

ಮೂಡಲಕೊಪ್ಪಲು(ದಾ.)

೧೪. ಹುಣಸೆಕೊಪ್ಪಲು

೧೫. ಸುರಗಳ್ಳಿ

ರಾಮಯ್ಯನಕೊಪ್ಪಲು(ದಾ.)

ಕರಡಿಪುರ(ದಾ.)

೧೬. ಬೆಟ್ಟದಪುರ

೧೭. ಹರದೂರು

೧೮. ಆನಿವಾಳು

೧೯. ಕೌಲನಹಳ್ಳಿ

೨೦. ಅತ್ತಿಗೋಡು

ತಂದ್ರೆಗುಡಿ ಕೊಪ್ಪಲು(ದಾ.)

ಕಳ್ಳಿ ಕೊಪ್ಪಲು, ಕಗ್ಗಲಿ ಕೊಪ್ಪಲು

ಮಠದಕೊಪ್ಪಲು

ಮಹದೇಶ್ವರ ಮಠದಕೊಪ್ಪಲು(ದಾ)

ಚಿಕ್ಕೇಗೌಡನಕೊಪ್ಪಲು

೨೧. ಕೊತ್ತವಳ್ಳಿ

ಕಳ್ಳಿಕೊಪ್ಪಲು(ದಾ.)

ಕಗ್ಗಲಿಕೊಪ್ಪಲು(ದಾ.)

ಕೊತ್ತವಳ್ಳಿಕೊಪ್ಪಲು(ದಾ.)

ಮಾಳೇಗೌಡನಕೊಪ್ಪಲು(ದಾ.)

ವಡ್ಡರಹಳ್ಳಿ(ದಾ.)

ಹುಚ್ಚೇಗೌಡನಕೊಪ್ಪಲು(ದಾ.)

೨೨. ಸಂಗರಶೆಟ್ಟಳ್ಳಿ

೨೩. ನವಿಲುಕೋಡಿ ಕಾವಲು

೨೪. ಹರೀನಹಳ್ಳಿ

೨೫. ಕಿತ್ತೂರು

ಮೂಡಲಕೊಪ್ಪಲು(ದಾಖಲೆ)

ಪೂಜಾರಿಕೊಪ್ಪಲು(ದಾ.)

ಪುಟ್ಟಸಿದ್ದಯ್ಯನ ಕೊಪ್ಪಲು

ಗುರುವಯ್ಯನಕೊಪ್ಪಲು

ಸಿಂಗ್ರಿಗೌಡನಕೊಪ್ಪಲು

ಬೆಟ್ಟೇಗೌಡನಕೊಪ್ಪಲು

ಬೋಳಾರಿ ಗೌಡನಕೊಪ್ಪಲು (ದಾ.)

ಕಲ್ಯಾಣಿಗೌಡನಕೊಪ್ಪಲು

ರಾಮಭದ್ರನಕೊಪ್ಪಲು (ದಾ.)

ಗೌಡನ ಕೊಪ್ಪಲು

ಕಿತ್ತೂರು ದೊಡ್ಡೇಗೌಡನಕೊಪ್ಪಲು(ದಾ)

ಕಿತ್ತೂರು ಕೆಂಪೇಗೌಡನಕೊಪ್ಪಲು(ದಾ)

೨೬. ಮರದೂರು

ಅರಳಿಮರದಕೊಪ್ಪಲು(ದಾ.)

ಮರಿಗೌಡನಕೊಪ್ಪಲು(ದಾ)

ಮೂಡಲಕೊಪ್ಪಲು(ದಾ)

೨೭. ಮೇಲೂರು

೨೮. ಹಂಡಿತವಳ್ಳಿ

೨೯. ಕೆಲ್ಲೂರು

೩೦. ನಾಗರಘಟ್ಟ

೩೧. ಕೋಡಿಹಳ್ಳಿ ಪೂರ್ಣ

೩೨. ತಮ್ಮಡಹಳ್ಳಿ

ಬೋರೆಕೊಪ್ಪಲು(ದಾ)

ಗುರುವಯ್ಯನಕೊಪ್ಪಲು(ದಾ)

೩೩. ಹೊನ್ನೇನಹಳ್ಳಿ

ಮಠದಕೊಪ್ಪಲು

ಮಲ್ಲೇಗೌಡನಕೊಪ್ಪಲು(ದಾ)

ಬೋರೆಗೌಡನಕೊಪ್ಪಲು(ದಾ)

೩೪. ಗಳಗನಕೆರೆ

ಹೊಸಕೊಪ್ಪಲು(ದಾ.)

ಕಾಳೇಗೌಡನಕೊಪ್ಪಲು(ದಾ)

೩೫. ರಾವಂದೂರು

ಆರ್.ಡಿ.ಕೊಪ್ಪಲು(ದಾ)

ಎಸ್.ಕೊಪ್ಪಲು(ದಾ)

ತೊಳಕಲ್ ಕಾಲೋನಿ(ದಾ)

೩೬. ಹರಳಹಳ್ಳಿ

೩೭. ಎನ್.ಶೆಟ್ಟಳ್ಳಿ

೩೮. ಕೆಳಗನಹಳ್ಳಿ

ಹೊಸಕೊಪ್ಪಲು(ದಾ)

ಕೆ.ದೊಡ್ಡಕೊಪ್ಪಲು(ದಾ.)

ಹಗ್ಗಡಿಕೊಪ್ಪಲು(ದಾ.)

೩೯. ಭೋಗನಹಳ್ಳಿ

೪೦. ನಿಲಂಗಾಲ

೪೧. ಬಾವಲಾಳು

೪೨. ಬೆಟ್ಟದತುಂಗ

ಕೆಳಗಿನಕೊಪ್ಪಲು (ದಾ)

ಮೇಗಳಕೊಪ್ಪಲು (ದಾ)

ದೊಡ್ಡೇಗೌಡನಕೊಪ್ಪಲು (ದಾ)

೪೩. ನಾಗನಹಳ್ಳಿ

ನಾಗನಹಳ್ಳಿಪಾಳ್ಯ (ದಾ)

ದೊಡ್ಡೇಗೌಡನಕೊಪ್ಪಲು (ದಾ)

೪೪. ಚಿಕ್ಕಮಳಲಿ

೪೫. ಹಿರೇಮಳಲಿ

೪೬. ಕುಡುಕೂರು

ಮೂಡಲಕೊಪ್ಪಲು

೪೭. ಬಾರ್ಸೆ

ಬಾರ್ಸೆಕೊಪ್ಪಲು

ಕದರೇಗೌಡನಕೊಪ್ಪಲು(ದಾ)

ಗಂಗೇಗೌಡನಕೊಪ್ಪಲು(ದಾ)

೪೮. ಬೆಟ್ಟದಕಾವಲು

೪೯. ನಂದೀಪುರ

೫೦. ಭುವನಹಳ್ಳಿ

೫೧. ಕೋಣಸೂರು	೭೯. ಎ.ಬಿ.ಕಾವಲಿ
೫೨. ಬೆಕ್ಕರೆ	೭೦. ಹಿಟ್ನಹಳ್ಳಿ
೫೩. ಜೋಗನಹಳ್ಳಿ	೭೧. ಸೀಗೂರು
ಸಾಲುಕೊಪ್ಪಲು(ದಾ)	ಸೀಗೂರುಕೊಪ್ಪಲು (ದಾಖಲೆ)
೫೪. ಈಚೂರು	೭೨. ಬಿಲ್ಲಹಳ್ಳಿ
೫೫. ಕೂರ್ಗಲ್	೭೩. ಮೆಲ್ಲಹಳ್ಳಿ
ಕೂರ್ಗಲ್ ಕಾಲೋನಿ(ದಾ)	೭೪. ಹರವೆಮಲ್ಲರಾಜಪಟ್ಟಣ
ಕೂರ್ಗಲ್‌ಕೊಪ್ಪಲು(ದಾ)	೭೫. ಆಯಿತನಹಳ್ಳಿ
ಚಿಕ್ಕೇಗೌಡನಕೊಪ್ಪಲು(ದಾ)	೭೬. ರಾಮನಾಥತುಂಗ
೫೬. ಕೋಮಲಾಪುರ	ಅಮ್ಮನಗುಡಿಕೊಪ್ಪಲು (ದಾ)
೫೭. ಸೀಗೆಕೊರೆಕಾವಲು	ಹೊಸಕೊಪ್ಪಲು (ದಾ)
ಕಂತೆಕೊಪ್ಪಲು(ದಾ)	೭೭. ದೊರೆಕೆರೆ
೫೮. ಕೆ.ಹರಳಹಳ್ಳಿ	೭೮. ಚಿಕ್ಕವಡ್ಡರಕೇರಿ
೫೯. ಪಿ.ಬಸವನಹಳ್ಳಿ	೭೯. ದೊಡ್ಡವಡ್ಡರಕೇರಿ
ಗಾಂಧಿನಗರ(ದಾ)	೮೦. ಅಸ್ವಾಳು
೬೦. ಎಂ.ಹೊಸಹಳ್ಳಿ	೮೧. ಸುಂಡವಾಳು
೬೧. ಬೀಸನಕುಪ್ಪೆ	ಕಗ್ಗುಂಡಿ
೬೨. ಕೋಗಿಲೂರು	ಸನ್ಯಾಸಿಪುರ
೬೩. ಕಾನೂರು	೮೨. ದೊಡ್ಡಬ್ಯಾಲಾಳು
ಕೆ.ಹೊಸಹಳ್ಳಿ	ವಿ.ಜಿ. ಕೊಪ್ಪಲು (ದಾ)
ಬೆಟ್ಟೇಗೌಡನಕೊಪ್ಪಲು	೮೩. ಚಿಕ್ಕಬ್ಯಾಲಾಳು
೬೪. ತೆಲುಗಿನಕುಪ್ಪೆ	೮೪. ಮಾಕನಹಳ್ಳಿ
೬೫. ಸೆಣಬಿನಕುಪ್ಪೆ	ಮಾಕನಹಳ್ಳಿ ಪಾಳ್ಯ
೬೬. ನೇರಳೆಕುಪ್ಪೆ	೮೫. ಜವನೀಕುಪ್ಪೆ
ನೇರಳಕುಪ್ಪೆ ಕೊಪ್ಪಲು	೮೬. ಅರೇನಹಳ್ಳಿ
೬೭. ಹಿಟ್ನೆಹೆಬ್ಬಾಗಿಲು	೮೭. ಬಸಲಾಪುರ
೬೮. ಮಂಚದೇವನಹಳ್ಳಿ	೮೮. ಕಲ್ಕೆರೆ

೮೯. ಮಾಕೋಡು

ಕೆರೆಮೇಗಲಕೊಪ್ಪಲು(ದಾ)

ಹೆಗ್ಗಡಿಕೊಪ್ಪಲು(ದಾ)

ಗಂಗೂರು(ದಾ)

ಮಂಟಿಕೊಪ್ಪಲು(ದಾ)

ಸೀಗಡಿಕಟ್ಟೆ

೯೦. ಆರ್.ಹೊಸಹಳ್ಳಿ

೯೧ ಮಲಗನಕೆರೆ

೯೨. ಎಂ.ಶೆಟ್ಟಹಳ್ಳಿ

ಎಂ.ಶೆಟ್ಟಹಳ್ಳಿ ಕೊಪ್ಪಲು(ದಾ)

೯೩. ಕಂಪಲಾಪುರ

೯೪. ಬೋರೆಹೊಸಹಳ್ಳಿ(ದಾಖಲೆ)

ಹೊನ್ನೇಕೊಪ್ಪಲು(ದಾ)

೯೫. ಕಿರನಲ್ಲಿ

೯೬. ಹರಿಲಾಪುರ

೯೭. ಬೆಕ್ಯಾ

೯೮. ಪಂಚವಳ್ಳಿ

ಕೊಕ್ಕರೆಹೊಸಹಳ್ಳಿ (ದಾ)

೯೯. ಇಟ್ಟಳ್ಳಿ

ಇಟ್ಟಳ್ಳಿ ಕೊಪ್ಪಲು (ದಾ)

೧೦೦. ಸತ್ಯಾಗಾಲ

೧೦೧. ಸತ್ಯಾಗಾಲ ಕಾವಲು

೧೦೨. ಹಲಸೂರು

೧೦೩. ಉತ್ತೇನಹಳ್ಳಿ

೧೦೪. ಮುದ್ದನಹಳ್ಳಿ

೧೦೫. ಕಚುವಿನಹಳ್ಳಿ ಜಂಗಲ್

೧೦೬. ಚೌಕೂರು

೧೦೭. ಆಳಲೂರು

೧೦೮. ತಾತನಹಳ್ಳಿ

೧೦೯. ಅಬ್ಬೂರು

೧೧೦. ಮಾಲಂಗಿ

೧೧೧. ಮಾಲಂಗಿ ಗೋಮಾಳ

೧೧೨. ಅಬ್ಬಳತಿ

೧೧೩. ಮುಮ್ಮಡಿ ಕಾವಲು

೧೧೪. ಐಚನಹಳ್ಳಿ

೧೧೫. ರಾಚಾಪುರ

೧೧೬. ಅಂಕನಹಳ್ಳಿ

ಪಾರೆಕೊಪ್ಪಲು(ದಾ)

ಜವರಿಕೊಪ್ಪಲು(ದಾ)

ಅಂಕನಹಳ್ಳಿಕೊಪ್ಪಲು

೧೧೭. ಹಬಟೂರು

೧೧೮. ಆನೆಚೌಕೂರು ಫಾರೆಸ್ಟ್

೧೧೯. ಲಕ್ಷ್ಮೀಪುರ

ಹೊಸೂರು ಕೆರೆಮಾಳ

೧೨೦. ಮುತ್ತೂರು

೧೨೧. ಮುತ್ತೂರು ಕಾಲೋನಿ(ರಾಜೀವ್ ಗ್ರಾಮ)

೧೨೨. ಕಾಳೇತಿಮ್ಮನಹಳ್ಳಿ

೧೨೩. ಕೋಗಿಲವಾಡಿ

೧೨೪. ಸುಳಗೋಡು

೧೨೫. ಚೌತಿ

೧೨೬. ಲಿಂಗಾಪುರ

೧೨೭. ಲಿಂಗಾಪುರ ಫಾರೆಸ್ಟ್

೧೨೮. ಆಯರಬೀಡು

೧೨೯. ಚಿಟ್ಟೇನಹಳ್ಳಿ

೧೩೦. ಚೌಡೇನಹಳ್ಳಿ

೧೩೧. ಚನ್ನೇನಹಳ್ಳಿ

ಚನ್ನೇನಹಳ್ಳಿಕೊಪ್ಪಲು

೧೩೨. ಮಾಗಳಿ

೧೩೩. ಹಳೇಪೇಟೆ ಕಂಠಾಪುರ

೧೩೪. ಹೆಮ್ಮಿಗೆ

೧೩೫. ಕೆ.ಜಿ.ಕೋಡಿಹಳ್ಳಿ

೧೩೬. ಕಂದೇಗಾಲ

ಕಂದೇಗಾಲ ಪಾಳ್ಯ

೧೩೭. ಬೆಳತೂರು

ಬಾಳೆಕಟ್ಟೆ

೧೩೮. ನಾರಳಾಪುರ

೧೩೯. ತಿಮಕಾಪುರ

೧೪೦. ಜಿ.ಬಸವನಹಳ್ಳಿ

೧೪೧. ಹುಣಸವಾಡಿ

ನಂದಿನಾಥಪುರ(ದಾಖಲೆ)

೧೪೨. ಕುಂದನಹಳ್ಳಿ

೧೪೩. ಭೂತನಹಳ್ಳಿ

೧೪೪. ಕಾಮನಹಳ್ಳಿ

೧೪೫. ಮಲ್ಲಿನಾಥಪುರ

೧೪೬. ಬೆಮ್ಮತ್ತಿ

೧೪೭. ಕಿರಂಗೂರು

೧೪೮. ಐಲಾಪುರ

೧೪೯. ಪೂನಾಡಹಳ್ಳಿ

ಪೂನಾಡಹಳ್ಳಿ ಗೋಮಾಳ(ದಾ)

ಭಾರತಿನಗರ

೧೫೦. ಚರಪುರ

೧೫೧. ಆಲನಹಳ್ಳಿ

ಮೂಡಲಕೊಪ್ಪಲು

೧೫೨. ಕೊರ್ಲಹೊಸಹಳ್ಳಿ

೧೫೩. ಬೈಲಕುಪ್ಪೆ

೧೫೪. ಹಂದಿಗುಡ್ಡಕಾವಲು

೧೫೫. ಲಕ್ಷ್ಮಿಪುರ

೧೫೬. ಗೊಲ್ಲರಹೊಸಹಳ್ಳಿ

೧೫೭. ಮಂಚದೇವನಹಳ್ಳಿ

೧೫೮. ತಿರುಮಲಾಪುರ

ಚಿಕ್ಕಹೊನ್ನೂರು

೧೫೯. ಗುಳೇದಗುಡ್ಡ ಜಂಗಲ್

೧೬೦. ನವಿಲೂರು

೧೬೧. ದೊಡ್ಡಹೊನ್ನೂರು

೧೬೨. ದೊಡ್ಡಹೊನ್ನೂರು ಕಾವಲು

೧೬೩. ಮುತ್ತಗೂರು

೧೬೪. ದೊಡ್ಡಹರವೆ

೧೬೫. ದೊಡ್ಡಹರವೆ ಫಾರೆಸ್ಟ್

೧೬೬. ಬಸವನ ಏಣಿ

೧೬೭. ಕೈಲಾಸಪುರ

೧೬೮. ಕೊಪ್ಪ

೧೬೯. ಗುಡ್ಡೇನಹಳ್ಳಿ

೧೭೦. ದೊಡ್ಡಹೊಸೂರು

ಮರೂರು(ದಾಖಲೆ)

೧೭೧. ಗಿರಗೂರು

ಚಿಕ್ಕಹೊಸೂರು(ದಾ)

೧೭೨. ಲಿಂಗಾಪುರ(ರಾಣಿಗೇಟ್)

೧೭೩. ಅರಳಿಕುಮಾರಿ(ರಾಣಿಗೇಟ್)

೧೭೪. ಆವರ್ತಿ

೧೭೫. ಚಿಕ್ಕನೇರಳೆ

೧೭೬. ದೊಡ್ಡನೇರಳೆ

೧೭೭. ತರೀಕಲ್ಲು

ತರಿಕಲ್ಲು ಕಾಲೋನಿ

೧೭೮. ವಡೇರಹೊಸಹಳ್ಳಿ

೧೭೯. ಬ್ಯಾಡರಬೀಳುಗುಲಿ

ತಿಮ್ಮೆಗೌಡನಕೊಪ್ಪಲು(ದಾ)

ಮಂಟಿಬಿಳಗುಲಿ(ದಾ)

೧೮೦. ಹಸುವಿನಕಾವಲು

ಕುಳ್ಳಯ್ಯನಕೊಪ್ಪಲು(ದಾ)

ರಾಗಿಆಲದಮರದ ಕೊಪ್ಪಲು(ದಾ).

೧೮೧. ದೇಪುರ

೧೮೨. ಬಿಳಗುಂದ

ಚನ್ನಕಲ್(ದಾ)

೧೮೩. ಕೆಸರಕೆರೆ

೧೮೪. ನಿಲವಾಡಿ

೧೮೫. ಚಪ್ಪರದಹಳ್ಳಿ

೧೮೬. ಹಳಿಯೂರು

ಕುಮಾರಿಕೊಪ್ಪಲು

೧೮೭. ಗಂಗನಕುಪ್ಪೆ

೧೮೮. ವಡ್ಡರಬೈಲಕುಪ್ಪೆ

೧೮೯. ಅಂಬಲಾರೆ

೧೯೦. ಹಾರನಹಳ್ಳಿ

೧೯೧. ಗೊರಹಳ್ಳಿ

(ಅಲ್ಪನಾಯಕನಹಳ್ಳಿ)(ದಾ)

೧೯೨. ಚನ್ನಕಲ್‌ಕಾವಲು

ಲಕ್ಷ್ಮೀಪುರ(ದಾ)

ಮುಸ್ಲಿಂ ಬ್ಲಾಕ್

ಆನಂದನಗರ

ಚನ್ನಕೇಶವಪುರ(ದಾ)

ಎರೆಕಟ್ಟೆ ಮಾಳ(ದಾ)

೧೯೩. ಬೆಣಗಾಲು

೧೯೪. ಸುಂಕದಹಳ್ಳಿ

೧೯೫. ಮರಡಿಯೂರು

೧೯೬. ದೊಡ್ಡಕಮರವಳ್ಳಿ

೧೯೭. ಚಿಕ್ಕಕಮರವಳ್ಳಿ

ಮಂಟಿಕೊಪ್ಪಲು

೧೯೮. ಶ್ಯಾನುಭೋಗನಹಳ್ಳಿ

೧೯೯. ದಿಂಡಗಾಡು

೨೦೦. ಮುತ್ತಿನಮುಳಸೋಗೆ

೨೦೧. ಸೂಳೆಕೋಟೆ

೨೦೨. ಚಾಮರಾಯನಕೋಟೆ

ಹೊನ್ನಾಪುರ ಭಾಗಶಃ

ಅಡಿಟಿಪ್ಪಣಿ

೧. ಲಕ್ಷ್ಮಣ್ ತೆಲಗಾವಿ, ೨೦೦೩: **ಸ್ಥಳೀಯ ಚರಿತ್ರೆ: ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ,** ಪು.೨೭

೨. ಬಾಲಸುಬ್ರಮಣ್ಯ(ಸಂ), ೨೦೦೪: **ಕುರುಗೋಡು: ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ ೧,** ಪು.೧೪೪.

೩. ವಾಸುದೇವ ಬಡಿಗೇರ(ಸಂ), ೨೦೦೮: **ಹಾನಗಲ್ಲು: ಸ್ಥಳೀಯ ಚರಿತ್ರೆ ಪುರಾತತ್ವ ಮಾಲೆ ೨,** ಪು.೧೩೨.

೪. **ಕನ್ನಡ ವಿಷಯ ವಿಶ್ವಕೋಶ,** ೧೯೭೫: ಪು.೧೭೨.

೫. ಅದೇ. ಪು.೧೭೨

೬. ಅದೇ. ಪು.೧೭೨

೭. ರಾಜಶೇಖರ್ ಪಿ.ಕೆ., ೨೦೧೦: **ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್,** ಪು.೨.

೮. ಅದೇ, ಪು.೩

೯. ಅದೇ, ಪು.೧೦

೧೦. ಅದೇ, ಪು ೧೦

೧೧. ರಾಜಶೇಖರ್ ಪಿ.ಕೆ., ೨೦೦೦: **ಊರ ಹೆಸರಿನ ಕಥೆಗಳು,** ಪು:೯೪

೧೨. ರಾಜಶೇಖರ್ ಪಿ.ಕೆ., ೨೦೧೦: **ಪೂರ್ವೋಕ್ತ,** ಪು.೧೦

೧೩. ಅದೇ, ಪು.೧೧

೧೪. ಅದೇ, ಪು.೧೨

೧೫. ಅದೇ, ಪು.೧೨

೧೬. ಕೆಂಪಣ್ಣವರ ಪಿ.ಜಿ, ಟಿ.ಆರ್. ಜೋಡಟ್ಟಿ(ಸಂ), ೧೯೯೦: **ಜೈನ ಕ್ಷೇತ್ರಗಳ ಐತಿಹ್ಯ,** ಪು.೧೫೨,

೧೭. ಅದೇ, ಪು.೧೫೫,

೧೮. ರಾಜಶೇಖರ್ ಪಿ.ಕೆ.(ಸಂ), ೨೦೦೯: **ಬೆಟ್ಟದಪುರದಲ್ಲಿ ಬಸವಶಿಲ್ಪ,** ಪು.೨೧.

೧೯. ರಾಜಶೇಖರ್ ಪಿ.ಕೆ., ೨೦೦೧: **ಪಿರಿಯಾಪಟ್ಟಣ ಕಾಳಗ,** ಪು.೩೫

೨೦. ಉದಯಕುಮಾರ ಕೆ.ಸಿ., ೨೦೦೮: **ಬೆಟ್ಟದಪುರ ಪರಿಸರದ ಪುರಾತತ್ವ ಅಧ್ಯಯನ,** ಪು.೩೪

೨೧. ಮಾಹಿತಿಯನ್ನು ನೀಡಿದವರು ಚಲುವಮ್ಮ ೭೦ ವರ್ಷ, ಅಂಬೇಡ್ಕರ್ ಕಾಲೋನಿ, ದೊಡ್ಡಕ ಮರವಳ್ಳಿ.

೨೨. ಉದಯಕುಮಾರ ಕೆ.ಸಿ., ೨೦೦೮: **ಪೂರ್ವೋಕ್ತ,** ಪು.೩೫

೨೩. ಮಾಹಿತಿ ನೀಡಿದವರು ಗುದ್ದಮಲ್ಲಿಕಾರ್ಜುನ, ೪೦ ವರ್ಷ, ಮಠಾಧಿಕಾರಿ, ಬೆಟ್ಟದಪುರ.

೨೪. ಬಸವರಾಜಪ್ಪ ೬೫ ವರ್ಷ, ವ್ಯವಸಾಯ, ಅಂಬ್ಲಾರೆ

೨೫. ರಾಜಶೇಖರ್ ಪಿ.ಕೆ., ೨೦೦೦: **ಪೂರ್ವೋಕ್ತ,** ಪು.೧.

೨೬. ಅದೇ, ಪು.೭

೨೭. ಅದೇ, ಪು.೧೮

೨೮. ಅದೇ, ಪು.೧೯

೨೯. ಅದೇ ಪು.೨೦

೩೦. ಅದೇ ಪು.೪೯

೩೧. ಅದೇ, ಪು.೫೭

೩೨. ಅದೇ, ಪು.೧೩

೩೩. ಅದೇ, ಪು.೩೭

೩೪. ಅದೇ, ಪು.೧೦೨

೩೫. ಅದೇ, ಪು.೧೧೦

೩೬. ಅದೇ, ಪು.೧೨೧

೩೭. ರಘುಪತಿ ಕೆಮ್ತೂರು, ೧೯೮೭: **ಸ್ಥಳನಾಮಾಧ್ಯಯನದ ಇತ್ತೀಚಿನ ಒಲವುಗಳು : ಒಂದು ಸ್ಥೂಲ ಚಿತ್ರ,** ಪು.೪೦೮.

೩೮. ವಾಸುದೇವ ಬಡಿಗೇರ(ಸಂ), ೨೦೦೮: **ಪೂರ್ವೋಕ್ತ,** ಪು.೨೬.

೩೯. ರಘುಪತಿ ಕೆಮ್ತೂರು, ೧೯೮೭: **ಪೂರ್ವೋಕ್ತ,** ಪು.೪೦೮.

೪೦. ಸೋಮಶೇಖರ್ ಎಸ್.ವೈ., ೨೦೧೦: **ಜಗಲೂರು,** ಪು.೧೫.

೪೧. ಅದೇ, ಪು.೩

೪೨. ನಂಜಯ್ಯ ಹೊಂಗನೂರು ಎಂ., ೨೦೦೯: **ಸ್ಥಳನಾಮಗಳು,** ಪು.೮.

೪೩. ಅದೇ, ಪು.೯.

೪೪. ಶಂಕರಯ್ಯ ಎಸ್.ಕೆ., ೨೦೦೯: **ಮದ್ದೂರು ತಾಲ್ಲೂಕು ಸ್ಥಳನಾಮಗಳು ಒಂದು ಅಧ್ಯಯನ,** ಪು.೨೧.

೪೫. ಅದೇ, ಪು.೬೪

೪೬. ನಂಜಯ್ಯ ಹೊಂಗನೂರು ಎಂ., ೨೦೦೯: **ಪೂರ್ವೋಕ್ತ,** ಪು.೯.

೪೭. **ಮೈಸೂರು ಜಿಲ್ಲಾ ಅಂಕಿ ಅಂಶಗಳ ನೋಟ,** ೨೦೧೧: ಪು.೪೧. (ನಾಲ್ಕು ಹೋಬಳಿಗಳೆಂದರೆ ಪಿರಿಯಾಪಟ್ಟಣ/ಕಸಬಾ, ಹಾರನಹಳ್ಳಿ, ರಾವಂದೂರು, ಬೆಟ್ಟದಪುರ)

೪೮. ನಂಜಯ್ಯ ಹೊಂಗನೂರು ಎಂ., ೨೦೦೯: **ಪೂರ್ವೋಕ್ತ,** ಪು.೩೯.

೪೯. ಲಕ್ಷ್ಮಣ್ ತೆಲಗಾವಿ(ಸಂ), ೨೦೦೩: **ಪೂರ್ವೋಕ್ತ,** ಪು.೨೭.

೫೦. ದೇ.ಜ.ಗೌ., ೧೯೯೦: **ಸ್ಥಳನಾಮ ವ್ಯಾಸಂಗ,** ಪು.೩೫

೫೧. ಅದೇ, ಪು.೩೬.

೫೨. ಅದೇ, ಪು.೩೭.

೫೩. ಅದೇ, ಪು.೩೯.

೫೪. ಎ.ಕ., ಸಂಪುಟ ನಾಲ್ಕು, ಪು.೫೧೭.

೫೫. ವಿಶ್ವನಾಥ, ೨೦೦೦: **ಗ್ರಾಮ ನಾಮಗಳ ಸಾಂಸ್ಕೃತಿಕ ಪರಿವೇಷ್,** ಪು.೨೦೩.

೫೬. ಕೃಷ್ಣಪ್ಪ ಎಸ್., ೨೦೦೭: **ಪಿರಿಯಾಪಟ್ಟಣ ತಾಲ್ಲೂಕು ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನ,** ಪು.೧೭೬.

೫೭. ದೇ.ಜ.ಗೌ., ೧೯೯೦: **ಪೂರ್ವೋಕ್ತ,** ಪು.೧೧೪.

೫೮. ರಾಜಶೇಖರ್ ಪಿ.ಕೆ., ೨೦೦೧, **ಪಿರಿಯಾಪಟ್ಟಣ ಕಾಳಗ,** ಪು.xxxvi

೫೯. ಅದೇ, ಪು.೫೮

೬೦. ಹಯವದನರಾವ್ ಸಿ., ಮೈಸೂರು ಗ್ಯಾಸೆಟಿಯರ್, ಸಂಪುಟ ೨, **ಪಿರಿಯಾಪಟ್ಟಣ,** ಪು.೮೦೦

೬೧. ಎ.ಕ., ಸಂಪುಟ ನಾಲ್ಕು, ಪು.೮೪೨.

೬೨. ರಾಜಶೇಖರ್ ಪಿ.ಕೆ., ೨೦೦೧: **ಶಿವಸಂಪದ,** ಪು.೫೯೨-೫೯೩

೬೩. ಅದೇ, ಪು.೫೯೧.

೬೪. ಕೃಷ್ಣಪ್ಪ ಎಸ್., ೨೦೦೭: **ಪೂರ್ವೋಕ್ತ**

೬೫. ದಕ್ಷಿಣಮೂರ್ತಿ ನಿವೃತ್ತ ಶಿಕ್ಷಕರು, ಪಿರಿಯಾಪಟ್ಟಣ ಕೋಟೆ ಬೀದಿ,

ಅಧ್ಯಾಯ ಐದು

ವಾಸ್ತುಶಿಲ್ಪ

ಅಧ್ಯಾಯ ಐದು

ವಾಸ್ತುಶಿಲ್ಪ

ವಾಸ್ತುವೆಂದರೆ ಮರ, ಕಲ್ಲು, ಇಟ್ಟಿಗೆ, ಗಾರೆ ಮತ್ತು ಮಣ್ಣನ್ನು ಬಳಸಿ ನಿರ್ಮಿಸಿದ ಕಟ್ಟಡ. ಈ ವಸ್ತುಗಳೆನ್ನೆಲ್ಲ ಒಟ್ಟಿಗೆ ಬಳಸಿರಬಹುದು ಇಲ್ಲವೇ ಬಿಡಿಬಿಡಿಯಾಗಿ ಜೋಡಿಸಿ ನಿರ್ಮಿಸಿರಬಹುದು. ಮೇಲೆ ಹೇಳಿದ ವಸ್ತುಗಳನ್ನು ಬಳಸಿ ನಿರ್ಮಿಸಿದ ಕೋಟೆ, ಅರಮನೆ, ಕೆರೆ, ಕಟ್ಟೆ, ದೇವಾಲಯಗಳು ವಾಸ್ತುಶಿಲ್ಪವಾದರೆ, ಅವುಗಳಲ್ಲಿ ಮನುಷ್ಯ, ಪ್ರಾಣಿ, ಪಕ್ಷಿ ರೂಪಗಳನ್ನು ಕೆತ್ತಿದ್ದಲ್ಲಿ ಮೂರ್ತಿಶಿಲ್ಪ ಎನ್ನಿಸಿಕೊಳ್ಳುತ್ತದೆ. ಅರವತ್ತನಾಲ್ಕು ಕಲೆಗಳಲ್ಲಿ ಶಿಲ್ಪಕಲೆ ಒಂದು. ದೇವತಾ ಇಲ್ಲವೆ ಮಹಾತ್ಮರ ಮೂರ್ತಿಗಳಿಗೋಸ್ಕರ ಮಾಡಿದ ಹಾಗೂ ಮನುಷ್ಯರು ವಾಸಿಸುವ ಸ್ಥಳ ಅಥವಾ ವಸತಿಯೇ ವಾಸ್ತು[೧] ಎನಿಸುತ್ತದೆ. ವಸ್ತುವಿನಿಂದ ರಚನೆಗೊಂಡ, ವಾಸ್ತುಯೋಗ್ಯವಾದ ನಿವೇಶನದ ಮೇಲೆ ರಚಿಸಲಾದ ಎಲ್ಲ ರಚನೆಗಳನ್ನು ವಾಸ್ತುರಚನೆ ಎನ್ನಬಹುದು. ವಾಸ್ತು ರಚನೆಯೊಂದು ಒಳಗೊಂಡಿರುವ ವಿವಿಧ ವಸ್ತುಗಳು ಹಾಗೂ ಅವುಗಳ ಮೇಲಿನ ಅಲಂಕರಣೆ ಮತ್ತು ಶಿಲ್ಪಗಳನ್ನು ವಾಸ್ತುಕಲೆ[೨] ಎನ್ನಲಾಗಿದೆ. ಭಾರತೀಯ ವಾಸ್ತುಕಲೆಯು ಇತರೆ ಕಲೆಗಳಂತೆಯೇ ಆಯಾ ಕಾಲದ ಮತ್ತು ಆಯಾ ಜನಾಂಗದ ಆಂತರಿಕ, ಆಕಾಂಕ್ಷೆ, ಅನುಭವಗಳಿಗೆ ಕನ್ನಡಿ ಹಿಡಿಯಬಲ್ಲದು.

ಪರ್ವತ, ನದಿತೀರ ಮತ್ತು ಉದ್ಯಾನವನಗಳಲ್ಲಿ ದೇವತೆಗಳು ವಿಹರಿಸುವರೆಂಬ ನಂಬಿಕೆಯಿಂದ ಈ ಸ್ಥಳಗಳಲ್ಲಿ ದೇವಾಲಯಗಳನ್ನು ನಿರ್ಮಿಸುವುದು[೩] ಸಾಮಾನ್ಯ. ಅಲ್ಲದೆ ಊರಿನ ಪೂರ್ವ ಅಥವಾ ಪಶ್ಚಿಮದಲ್ಲಿ ವಿಷ್ಣುವಿನ, ಈಶಾನ್ಯದಲ್ಲಿ ಶಿವ, ಉತ್ತರದಲ್ಲಿ ಸ್ಕಂದ, ನೈರುತ್ಯದಲ್ಲಿ ಗಣಪತಿ ದೇವಾಲಯಗಳನ್ನು ನಿರ್ಮಿಸಬೇಕೆಂದು ವಾಸ್ತುಗ್ರಂಥಗಳಲ್ಲಿ ಹೇಳಿದೆ. ದೇವಾಲಯಗಳನ್ನು ಮರ, ಇಟ್ಟಿಗೆ, ಅಥವಾ ಕಲ್ಲಿನಿಂದ ಕಟ್ಟಬಹುದು. ಆದರೆ ಕಲ್ಲಿನ ದೇವಾಲಯಗಳು ಶ್ರೇಷ್ಠವೆಂಬ ನಂಬಿಕೆ ಇದೆ, ಅಲ್ಲದೆ ಅವು ಶಾಶ್ವತವಾಗಿಯೂ ಉಳಿಯುವಂತಹವು. ಆದ್ದರಿಂದ ಕಾಲಾನುಕ್ರಮದಲ್ಲಿ ಮರ, ಇಟ್ಟಿಗೆಗಳಿಗಿಂತ ಕಲ್ಲಿನ ದೇವಾಲಯ

ರಚನೆಗೆ ಹೆಚ್ಚು ಪ್ರಮುಖ್ಯತೆ ನೀಡಲಾಯಿತು. ಇದರಿಂದ ಅಂಥ ದೇವಾಲಯಗಳು ಇಂದಿಗೂ ಉಳಿದು ಬಂದು ಪ್ರಾಚೀನ ಪರಂಪರೆ ಸ್ಮಾರಕಗಳಾಗಿವೆ.

ಗರುಡ ಪುರಾಣವು ಗ್ರಾಮ, ನಗರ, ಕೋಟೆ, ಪಟ್ಟಣ ಮತ್ತು ಮಠಗಳು ಸಹ ವಾಸ್ತುಗಳೆಂದು ಹೇಳಿದೆ.[೪] ಮಯಮತ ಗ್ರಂಥವು ವಾಸ್ತು ಪದವನ್ನು ಎರಡು ಹಂತಗಳಲ್ಲಿ ವಿವರಿಸಿದೆ.[೫] ಮರ್ತ್ಯರು ಮತ್ತು ಅಮರ್ತ್ಯರು ವಾಸಿಸುವ ಸ್ಥಳಕ್ಕೆ ವಾಸ್ತು ಎಂದು ಹೆಸರು. ಅಂದರೆ ವಸ್ತುವನ್ನು ಆಶ್ರಯಿಸಿದ್ದುದು ವಾಸ್ತು ಎಂದು ಗುರುತಿಸಬಹುದು. ವಿಶ್ವಕರ್ಮ ವಾಸ್ತುಶಾಸ್ತ್ರವು ಆಲಯಗಳನ್ನು ಕಟ್ಟಲು ಬಳಸಿದ ಇಟ್ಟಿಗೆ, ಕಲ್ಲು, ಮರ ಹಾಗೂ ಕಬ್ಬಿಣಗಳನ್ನು ಸಹ ವಾಸ್ತುಗಳೆಂದು ತಿಳಿಸಿದೆ.[೬] ಪ್ರಾಸಾದ, ಹರ್ಮ್ಯ, ಸೌಧ ವಸ್ತುವನ್ನು ಆಶ್ರಯಿಸಿದ್ದರಿಂದ ವಾಸ್ತು ಎಂದೆನಿಸುತ್ತದೆ. ಆದ್ದರಿಂದ ವಸತಿಯೋಗ್ಯ ಭೂಮಿ ಮತ್ತು ಆ ಭೂಮಿಯ ಮೇಲೆ ನಿಂತ ಕಟ್ಟಡ ಎರಡನ್ನು ಒಳಗೊಳ್ಳುತ್ತದೆ. ಶುಕ್ರನೀತಿ ಗ್ರಂಥವು ದೇವಾಲಯ ಅರಮನೆ ಅಥವಾ ರಾಜಗೃಹಗಳ ರಚನೆ, ದೇವತಾಮೂರ್ತಿಗಳ ರಚನೆ, ಸಾರ್ವಜನಿಕ ಉಪಯೋಗಿ ಗೃಹಗಳು, ಭಾವಿ, ಪುಷ್ಕರಣೆಗಳನ್ನು ಶಿಲ್ಪಶಾಸ್ತ್ರದಡಿ ಗುರುತಿಸಲಾಗುತ್ತದೆ.[೭] ಆದರೆ ಮುಂದೆ ಈ ಪದದ ವ್ಯಾಪ್ತಿ ಪರಿಮಿತಿಗೊಂಡು ವಾಸ್ತುಶಿಲ್ಪ ಎಂದರೆ ಕಟ್ಟಡಗಳ ನಿರ್ಮಾಣ ಮತ್ತು ಶಿಲ್ಪ ಎಂದರೆ ಮೂರ್ತಿಗಳ ನಿರ್ಮಾಣ ಎಂಬ ಅರ್ಥ ಬೆಳೆದುಬಂದಿತು.[೮] ಗುಹೆಗಳಲ್ಲಿ ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದ ಆದಿಮಾನವ, ವಾಸಕ್ಕೆ ಅನುಕೂಲವಾದ ಕಟ್ಟಡ ಕಟ್ಟಿಕೊಳ್ಳುವುದನ್ನು ಕಲಿತಾಗ ನಾಗರಿಕತೆಯ ಜೀವನದಲ್ಲಿ ಬಹುದೊಡ್ಡ ಹೆಜ್ಜೆಯನ್ನು ಆತ ಇಟ್ಟಂತಾಯಿತು. ಕ್ರಮೇಣ ಅವನ ಅನುಭವ ಬೆಳೆದಂತೆ, ಕಟ್ಟಡಗಳ ನಿರ್ಮಾಣದಲ್ಲಿ ಕೇವಲ ಉಪಯುಕ್ತತೆಯ ಜೊತೆಗೆ ಸೌಂದರ್ಯ ದೃಷ್ಟಿಯೂ ಬೆಳೆಯತೊಡಗಿತು. ಜಗತ್ತಿನ ಅತಿ ಪ್ರಾಚೀನ ನಾಗರಿಕತೆಗಳಾದ ಈಜಿಪ್ಟ್, ಗ್ರೀಕ್, ರೋಮ್ ಮತ್ತು ಸಿಂಧು ನಾಗರಿಕತೆಗಳಲ್ಲಿ ಬೆಳೆದುಬಂದ ಕಟ್ಟಡಗಳ ನಿರ್ಮಾಣದ ಕಥೆಯನ್ನು ನೋಡಲು ಪ್ರಯತ್ನಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಆದರೆ ಇಲ್ಲಿ ಗಮನಿಸಬಹುದಾದ ಅಂಶವೆಂದರೆ, ಕಲೆಗಳಂತೆಯೇ ವಾಸ್ತುಶಿಲ್ಪವೂ ಆಯಾ ಕಾಲದ ಮತ್ತು ಆಯಾ ಜನಾಂಗದ ಆಂತರಿಕ ಆಕಾಂಕ್ಷೆ ಅನುಭವಗಳಿಗೆ ಕನ್ನಡಿಯನ್ನು ಹಿಡಿಯಬಲ್ಲ ವಾಸ್ತುಶಿಲ್ಪ ನಾಗರಿಕತೆಯನ್ನು ರೂಪಿಸುವ ಮಾತೃಕೆ ಎಂದು ಹೇಳಬಹುದು.

ಭಾರತದ ಅತಿ ಪ್ರಾಚೀನ ಕಟ್ಟಡಗಳೆಂದರೆ ಮಹೆಂಜೋದಾರೋ, ಹರಪ್ಪಗಳ ಅವಶೇಷಗಳು. ಸಿಂಧೂ ಸಂಸ್ಕೃತಿಯ ಕಟ್ಟಡಗಳಲ್ಲಿ ಸುಟ್ಟ ಇಟ್ಟಿಗೆಗಳನ್ನೇ ಬಳಸಿರುವುದು ಕಾಣುತ್ತದೆ. ಮಣ್ಣು ಗಾರೆಯನ್ನುಪಯೋಗಿಸಿ ಇಟ್ಟಿಗೆಗಳಿಂದ ಕಟ್ಟಡಗಳನ್ನು ಕಟ್ಟುವುದರಲ್ಲಿ ಅಲ್ಲಿನ ಜನ ಪರಿಣಿತರಾಗಿದ್ದರೆಂಬುದಕ್ಕೆ ಈಗ ದೂರಕಿರುವ ಕಟ್ಟಡಗಳ ಅವಶೇಷಗಳೇ ಸಾಕ್ಷಿಗಳಾಗಿವೆ. ಭದ್ರವಾದ ತಳಹದಿಯನ್ನು ಹಾಕಿ ಎರಡು ಮೂರು ಅಂತಸ್ತುಗಳವರೆಗೆ ಕಟ್ಟಡಗಳನ್ನು

ಏರಿಸುತ್ತಿದ್ದರು. ಮೇಲಂತಸ್ತುಗಳ ನಿರ್ಮಾಣದಲ್ಲಿ ಹೆಚ್ಚಾಗಿ ಮರವನ್ನು ಉಪಯೋಗಿಸಲಾಗುತ್ತಿತ್ತು. ಮೇಲ್ಛಾವಣಿಗಳು ಮಟ್ಟಸಮವಾಗಿರುತ್ತಿದ್ದವು. ಸಾಮಾನ್ಯವಾಗಿ ಕಲ್ಲಿನ ಕಂಬಗಳನ್ನು ಅಡ್ಡ ತೊಲೆಗಳನ್ನಾಗಿ[೧೦] ಉಪಯೋಗಿಸುತ್ತಿದ್ದರು. ಈ ದೃಷ್ಟಿಯಿಂದ ಅಶೋಕನ ಕಾಲ ಬಹಳ ಮುಖ್ಯವಾದುದು, ಅಲ್ಲಿಯವರೆಗೆ ಅಂದರೆ ಕ್ರಿ.ಪೂ. ೩ನೆಯ ಶತಮಾನದವರಗೆ ಭರತ ಖಂಡದ ವಾಸ್ತುಶಿಲ್ಪದ ಚರಿತ್ರೆ ಅಸ್ಪಷ್ಟವೆಂದೇ ಹೇಳಬೇಕು. ಅಶೋಕನ ಕಾಲದಲ್ಲಿ ಬೌದ್ಧ ಧರ್ಮ, ರಾಜ ಧರ್ಮವಾದುದಲ್ಲದೆ ರಾಜ್ಯಧರ್ಮವೂ ಆಯಿತು. ರಾಜಕೀಯ ಮತ್ತು ಧಾರ್ಮಿಕ ರಂಗದಲ್ಲಿ ಆದ ಬದಲಾವಣೆಯ ಪ್ರಭಾವ ಜನಜೀವನದ ಮೇಲೂ ಹಾಗೂ ಕಲೆಗಳ ಮೇಲೂ ಪ್ರಭಾವ ಬೀರಿತು. ವಾಸ್ತುಶಿಲ್ಪದ ಮೇಲೆ ಬೌದ್ಧಧರ್ಮ[೧೧] ಬೀರಿದ ಪ್ರಭಾವವನ್ನು ಮುಖ್ಯವಾಗಿ ಹೀಗೆ ಹೇಳಬಹುದು

೧. ಕಲ್ಲುಗಳ ಮೇಲೆ ಕೊರೆಯಿಸಿದ ಶಾಸನಗಳು
೨. ಸ್ತೂಪಗಳ ನಿರ್ಮಾಣ
೩. ಶಿಲಾಸ್ತಂಭಗಳು
೪. ಕಲ್ಲನ್ನು ಕೊರೆದು ಮಾಡಿದ ಗುಹೆಗಳು.

ಇವು ವಾಸ್ತುಶಿಲ್ಪದ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದವು. ಅದರಲ್ಲಿಯೂ ಮುಖ್ಯವಾಗಿ ರಚನೆ ಮಹತ್ವದಿಂದ ಸ್ತೂಪಗಳು, ಕಲ್ಲನ್ನು ಕೊರೆಯುವ ಹೊಸ ತಂತ್ರದ ದೃಷ್ಟಿಯಿಂದ ಗುಹೆಗಳು ಆ ಕಾಲದ ಕಟ್ಟಡ ನಿರ್ಮಾಣದ ಮೇಲೆ ಕ್ರಾಂತಿಕಾರಕ ಬದಲಾವಣೆಯನ್ನು ಉಂಟು ಮಾಡಿದವು. ಬೌದ್ಧ ಸನ್ಯಾಸಿಗಳ ವಾಸಕ್ಕಾಗಿ ಮೊದಲು ಚಿಕ್ಕಗುಹೆಗಳನ್ನು ಕೊರೆಯುವ ಕ್ರಮ ಪ್ರಾರಂಭವಾಯಿತು. ಅನಂತರ ಗುಹೆಯಲ್ಲಿ ಬುದ್ಧನ ವಿಗ್ರಹವನ್ನಿಡುವ ಎರಡು ಕಡೆಗಳಲ್ಲಿಯೂ ಪ್ರವೇಶದ್ವಾರದಂತೆ ಕಂಬಗಳನ್ನು ಬಿಟ್ಟು ಕೊರೆಯುವ ಕ್ರಮ ರೂಡಿಗೆ ಬಂದಿತು. ಇದರ ಮುಂದಿನ ಬೆಳವಣಿಗೆ ಕಂಬಗಳು ಸೇರಿದಂತೆ ಕಮಾನುಗಳನ್ನು ಕೆತ್ತಿ ಮೇಲ್ಛಾವಣಿಯನ್ನು ನಿರ್ಮಿಸುವ ಕ್ರಮ. ಇದು ಪ್ರಾಚೀನ ಬೌದ್ಧ ಗುಹೆಗಳ ಬೆಳವಣಿಗೆಯಲ್ಲಿ ಕಂಡುಬರುವ ಸ್ಥೂಲಚಿತ್ರ. ಸನ್ಯಾಸಿಗಳ ಸಂಖ್ಯೆ ಹೆಚ್ಚುತ್ತಾ ಹೋದಂತೆ ಅವರ ವಾಸಕ್ಕಾಗಿ ಇಟ್ಟಿಗೆಗಳಿಂದ ಕಟ್ಟಡ ಕಟ್ಟತೊಡಗಿದರು. ಇವುಗಳೇ ಚೈತ್ಯಾಲಯಗಳು. ಚೈತ್ಯಾಲಯ ಸ್ತೂಪಗಳನ್ನು ಒಳಗೊಂಡವು. ಸ್ತೂಪಗಳೆಂದರೆ[೧೨] ಬುದ್ಧನ ಪವಿತ್ರ ಅವಶೇಷಗಳನ್ನಿಟ್ಟು ಅವುಗಳ ರಕ್ಷಣೆಗಾಗಿ ಕಟ್ಟಿದ ಕಟ್ಟಡ. ಇವು ವಾತಾವರಣಕ್ಕೆ ಸಿಕ್ಕಿ ಹಾಳಾಗದಂತೆ ಬಹಳ ಕಾಲ ಉಳಿಯಬೇಕಾಗಿದ್ದುದರಿಂದ ಇಟ್ಟಿಗೆಗಿಂತ ಹೆಚ್ಚು ಕಾಲ ನಿಲ್ಲಬಲ್ಲ ಹೊಸ ಮಾಧ್ಯಮವನ್ನು ಹುಡುಕತೊಡಗಿದರು. ಅದರ ಫಲವಾಗಿ ಕಲ್ಲು ಕಟ್ಟಡಗಳನ್ನು ಕಟ್ಟುವ ಸಾಧನವಾಗಿ ಪರಿಣಮಿಸಿತು. ಕಲ್ಲಿನಿಂದ ನಿರ್ಮಿತವಾದ ಕಟ್ಟಡ ಮತ್ತು ವಿಸ್ತಾರವಾಗಿ ಕೊರೆದು ನಿರ್ಮಿಸಿದ ಚೈತ್ಯಾಲಯ, ವಿಹಾರಗಳು ರೂಪುಗೊಳ್ಳತೊಡಗಿದವು.

ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣ ಕಾರ್ಯ ವೇಗವಾಗಿ ಸಾಗಿದ್ದು ಬಾದಾಮಿ ಚಾಲುಕ್ಯರ ಕಾಲದಿಂದ, ಈ ಕಾಲದ ದೇವಾಲಯಗಳು ಹೆಚ್ಚಾಗಿ ಶಿಲೆಯಿಂದ ಕಟ್ಟಲ್ಪಟ್ಟವು. ಅಲ್ಲದೆ ಹಿಂದೆ ಇದ್ದ ಇಟ್ಟಿಗೆಯಿಂದ ನಿರ್ಮಿಸಲಾದ ಕಟ್ಟಡದ ಭಾಗಗಳು ದೊರೆತ್ತಿದ್ದು, ಅವು ಕರ್ನಾಟಕ ವಾಸ್ತುಶಿಲ್ಪದ ಪ್ರಾಚೀನ ನಿರ್ಮಿತಿಗಳಿಗೆ ಉದಾಹರಣೆಗಳಾಗಿವೆ.[೧೩] ಇವರ ಕಾಲದಲ್ಲಿ ಗುಹಾದೇವಾಲಯಗಳ ನಿರ್ಮಾಣ ವಿಶೇಷವಾಗಿದ್ದು ಬಾದಾಮಿಯ ಶೈವ, ಜೈನ, ಹಾಗೂ ವೈಷ್ಣವ ಧರ್ಮಗಳಿಗೆ ಸಂಬಂಧಿಸಿದ ಶಿಲೆಯಲ್ಲಿ ಕೊರೆದು ಮಾಡಿದ ಗುಹಾದೇವಾಲಯಗಳಿಗೆ ಹೆಸರಾಗಿವೆ. ಐಹೊಳೆಯು ಇವರ ಮತ್ತೊಂದು ವಾಸ್ತು ಕೇಂದ್ರವಾಗಿದ್ದು ದೇವಾಲಯಗಳ ತೊಟ್ಟಿಲು ಅಥವಾ ದೇವಾಲಯಗಳ ಪ್ರಯೋಗಶಾಲೆ ಎಂದು ಹೆಸರಾಗಿದೆ. ಹಾಗೆಯೇ ಪಟ್ಟದಕಲ್ಲಿನ ದೇವಾಲಯಗಳು ಸಹ ರಚನಾ ಕ್ರಮದಲ್ಲಿ ಪ್ರಬುದ್ಧ ಸ್ಥಿತಿಯನ್ನು ಹೊಂದಿದ್ದು ಷಡ್ವರ್ಗ ದೇವಾಲಯಗಳೆನಿಸಿವೆ. ದೇವಾಲಯದ ಮುಖ್ಯಭಾಗ, ಅಂಗಗಳು, ಗರ್ಭಗುಡಿಯ ಮೇಲೆ ವಿವಿಧ ರೀತಿಯ ಶಿಖರ ಅಥವಾ ಮೇಲ್ಕಟ್ಟಡಗಳು ರೂಪುಗೊಂಡಿರುವುದು ಇವರ ಕಾಲದಲ್ಲಿ. ಈ ಶೈಲಿಯನ್ನು ರಾಷ್ಟ್ರಕೂಟ, ಗಂಗ, ನೊಳಂಬ, ವಿಜಯನಗರ ಅರಸರ ಕಾಲದ ದೇವಾಲಯಗಳಲ್ಲೂ ಕಾಣಬಹುದು. ಮುಂದೆ ಕರ್ನಾಟಕದಾದ್ಯಂತ ಅಧಿಕ ಸಂಖ್ಯೆಯ ದೇವಾಲಯಗಳು ನಿರ್ಮಾಣಗೊಂಡು ಆಯಾಯ ರಾಜವಂಶದ ದೇವಾಲಯಗಳು ಒಂದೊಂದು ಪ್ರದೇಶದಲ್ಲಿ ಕೇಂದ್ರಿಕೃತಗೊಂಡಂತೆಯೇ, ಬೇರೆ ಬೇರೆ ಪ್ರದೇಶಗಳಲ್ಲಿ ಬಿಡಿ ಬಿಡಿಯಾಗಿಯೂ ನಿರ್ಮಾಣಗೊಂಡವು. ಅಂದರೆ ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳು ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳಲ್ಲಿ ಕೇಂದ್ರೀಕೃತಗೊಂಡರೆ, ಬೇಲೂರು, ಹಳೇಬೀಡು, ಸೋಮನಾಥಪುರ, ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೊಯ್ಸಳರ ದೇವಾಲಯಗಳು ನೆಲೆಗೊಂಡವು. ಹಾಗೆಯೇ ಹಂಪಿಯಲ್ಲಿ ವಿಜಯನಗರ ಕಾಲದ ದೇವಾಲಯಗಳು ಕೇಂದ್ರೀಕೃತಗೊಂಡಿವೆ. ಅಲ್ಲದೆ, ಇತರೆ ಪ್ರದೇಶಗಳಲ್ಲಿ ನಿರ್ಮಾಣವಾಗಿದ್ದರೂ, ಒಂದು ಕಾಲದ ದೇವಾಲಯಗಳ ರಚನಾ ಶೈಲಿ ಇಲ್ಲವೆ, ಆಯಾ ರಾಜವಂಶದ ಪ್ರತೀಕವಾಗಿ ರಾಜಧಾನಿ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ನಿರ್ಮಾಣಗೊಂಡಿರುವುದು ಕಂಡುಬರುತ್ತದೆ. ಆದ್ದರಿಂದ ಒಂದು ಕಾಲದ ದೇವಾಲಯಗಳ ಶೈಲಿಯನ್ನು ಅರಿಯುವಲ್ಲಿ ಆ ಕೇಂದ್ರಸ್ಥಾನಗಳು ಪ್ರಮುಖ ಪಾತ್ರವಹಿಸುತ್ತವೆ.

ಜನತೆ ತನಗಾಗಿ ಕಟ್ಟಿಕೊಂಡ ಮನೆ ಗೃಹವಾಸ್ತುಶಿಲ್ಪವೆನಿಸಿದರೆ, ತನ್ನ ದೇವರಿಗಾಗಿ ಕಟ್ಟಿದ್ದು ಧಾರ್ಮಿಕ ವಾಸ್ತುಶಿಲ್ಪ ಅಥವಾ ದೇವಾಲಯ ವಾಸ್ತುಶಿಲ್ಪವೆನಿಸಿತು. ಈ ಧಾರ್ಮಿಕ ಪಂಥಗಳಿಗನುಗುಣವಾಗಿ ಪೂಜಾಸ್ಥಳವು ಬೇರೆ ಬೇರೆ ಹೆಸರಿನಲ್ಲಿ ಕರೆಯಲ್ಪಟ್ಟಿತು. ಅಂದರೆ ಹಿಂದೂಗಳು ದೇವಾಲಯವೆಂದು, ಜೈನರು ಬಸದಿ, ಹಾಗೂ ಬೌದ್ಧರು ಚೈತ್ಯ ವಿಹಾರಗಳೆಂದು

ಕರೆದರು. ಈ ರೀತಿಯಾಗಿ ದೇವಾಲಯ ವಾಸ್ತುಶಿಲ್ಪ ಬೆಳವಣಿಗೆಯಾದರೆ, ತಮ್ಮ ಶತ್ರುಗಳನ್ನು ಎದುರಿಸಲು ಸುಸಜ್ಜಿತವಾದ ಸೈನ್ಯದ ಅವಶ್ಯಕತೆಯಿದ್ದಿತ್ತು. ಸೈನಿಕರ ತರಬೇತಿಗಾಗಿ ನಿರ್ಮಾಣ ಗೊಂಡ ರಚನೆಗಳನ್ನು ಸೈನಿಕ ವಾಸ್ತುಶಿಲ್ಪ ಎಂದು ಕರೆದರೆ, ಶತ್ರುಗಳಿಂದ ರಕ್ಷಣೆಗಾಗಿ ನಿರ್ಮಾಣಗೊಂಡ ಕೋಟೆಕೊತ್ತಲಗಳು ರಕ್ಷಣಾ ವಾಸ್ತುಶಿಲ್ಪವೆನಿಸಿತು.[೧೪]

ಪಿರಿಯಾಪಟ್ಟಣ ತಾಲ್ಲೂಕು ಪರಿಸರವನ್ನು ಆಳಿದ, ಚಾಲುಕ್ಯ, ಚಂಗಾಳ್ವ, ಗಂಗ, ಹೊಯ್ಸಳ, ವಿಜಯನಗರ ಮತ್ತು ಮೈಸೂರು ಒಡೆಯರ ವಾಸ್ತು ಸ್ಮಾರಕಗಳನ್ನು ಪ್ರಮುಖವಾಗಿ ಲೌಕಿಕ ಮತ್ತು ಧಾರ್ಮಿಕ ವಾಸ್ತುಶಿಲ್ಪಗಳೆಂದು ವಿಂಗಡಿಸಬಹುದು. ಲೌಕಿಕ ವಾಸ್ತುಶಿಲ್ಪದಲ್ಲಿ ಅರಮನೆ, ಗರಡಿಮನೆ, ಕೋಟೆ, ಬುರುಜು, ಬತೇರಿ, ಪುಷ್ಕರಣಿಗಳು ಹಾಗೂ ಧಾರ್ಮಿಕ ವಾಸ್ತುಶಿಲ್ಪದಲ್ಲಿ ದೇವಾಲಯ, ಮಠ, ಕೆರೆ ಕಟ್ಟೆಗಳು ಕಂಡುಬರುತ್ತವೆ. ಇವುಗಳಲ್ಲಿ ದೇವಾಲಯಗಳೇ ಪ್ರಧಾನವಾಗಿದ್ದು ಪ್ರಸ್ತುತ ಅಧ್ಯಯನದ ವಿಷಯವಾಗಿದೆ. ಉಳಿದವುಗಳನ್ನು ಸಂಕ್ಷಿಪ್ತವಾಗಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಚಂಗಾಳ್ವರ ದೇವಾಲಯಗಳನ್ನು ಕುರಿತು ಚರ್ಚಿಸುವ ಮೊದಲು ವಿಜಯನಗರ ವಾಸ್ತುಶೈಲಿಯ ಕೆಲವು ಲಕ್ಷಣಗಳನ್ನು ಗಮನಿಸುವುದು ಸೂಕ್ತ ಹಾಗೂ ಅನಿವಾರ್ಯವೂ ಆಗಿದೆ. ಕಾರಣ ಪಿರಿಯಾಪಟ್ಟಣವನ್ನಾಳಿದ ಚಂಗಾಳ್ವ ಮತ್ತಿತ್ತರ ಕಲೆ ಮತ್ತು ವಾಸ್ತುಶಿಲ್ಪದ ಶೈಲಿ ವಿಜಯನಗರ ಶೈಲಿಯ ಸಾಮಿಪ್ಯತೆಯನ್ನು ಹೊಂದಿದೆ. ಮಧ್ಯಕಾಲೀನ ದಕ್ಷಿಣಭಾರತದಲ್ಲಿ ಆಳ್ವಿಕೆ ನಡೆಸಿದ ವಿಜಯನಗರ ಸಾಮ್ರಾಜ್ಯ ತನ್ನ ಕಲೆ ಮತ್ತು ವಾಸ್ತುಶಿಲ್ಪದ ವೈಶಿಷ್ಟ್ಯತೆಯಿಂದ ಅತ್ಯಂತ ಮಹತ್ವದ ಸ್ಥಾನ ಪಡೆದಿದೆ. ಇವರು ದೇವಾಲಯ ನಿರ್ಮಾಣಕ್ಕೆ ಹೆಚ್ಚು ಆದ್ಯತೆ ಹಾಗೂ ಪ್ರೋತ್ಸಾಹ ನೀಡಿದ್ದು, ಬೃಹತ್ ದೇವಾಲಯಗಳ ನಿರ್ಮಾಣಕ್ಕೆ ಕಾರಣೀಭೂತರಾಗಿದ್ದಾರೆ. ಹಾಗಾಗಿ ಇವರ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯ ಕೆಲವು ಲಕ್ಷಣಗಳು ಗಮನಾರ್ಹವಾದವುಗಳು. ಅವುಗಳೆಂದರೆ ಸ್ಥಳೀಯವಾಗಿ ದೊರೆಯುತ್ತಿದ್ದ ಗ್ರ್ಯಾನೈಟ್ ಕಲ್ಲಿನ ಬಳಕೆ, ದೇವಾಲಯಗಳ ತಲವಿನ್ಯಾಸದಲ್ಲಿ ಹೆಚ್ಚು ವಿಸ್ತಾರಗೊಂಡಿದ್ದು, ಸಾಮಾನ್ಯವಾಗಿ ಗರ್ಭಗೃಹ, ಅರ್ಧಮಂಟಪ, ನವರಂಗ, ಮುಖಮಂಟಪ, ದೇವಾಲಯದ ಸುತ್ತಲೂ ನಿರ್ದಿಷ್ಟಪಡಿಸಿದ ದಿಕ್ಕಿನಲ್ಲಿ ಪರಿವಾರದೇವತೆಗಳ ಗುಡಿಗಳಿರುವುದು ವಿಶಾಲವಾದ ಪ್ರಕಾರ, ಒಂದಕ್ಕಿಂತ ಹೆಚ್ಚು ಪ್ರಕಾರಗಳ ವಾಹನಮಂಟಪ, ರಂಗಮಂಟಪ, ಉಯ್ಯಾಲೆ ಮಂಟಪಗಳನ್ನು ಕಾಣಬಹುದು.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ವಾಸ್ತುಕಲೆಯ ಲಕ್ಷಣಗಳು

ದ್ರಾವಿಡ ಶೈಲಿಯ ಎಲ್ಲ ಮುಖ್ಯ ಲಕ್ಷಣಗಳನ್ನು ಮೈಗೂಡಿಸಿಕೊಂಡು ಪಲ್ಲವರ ದೇವಾಲಯಗಳು ನಿರ್ಮಾಣವಾದವು. ಈ ದೇವಾಲಯಗಳು ಒಂದೂ ಧಾರ್ಮಿಕ ಪೂಜಾ

ಸಂಸ್ಕಾರಗಳ, ವಿಧಿ ವಿಧಾನಗಳ ಆಚರಣೆಗೆ ಎಲ್ಲಾ ರೀತಿಯಲ್ಲೂ ಅನುಕೂಲವಾಗುವಂತೆ ವಿನ್ಯಾಸಗೊಳಿಸಲಾಗಿದ್ದಿತು. ಆದ್ದರಿಂದ ಪಲ್ಲವ ಶೈಲಿಯನ್ನು ಮುಂದುವರಿಸಿದ ಚೋಳರು ನಂತರ ಚೋಳರ ಸಾಮಂತರಾದ ಚಂಗಾಳ್ವರು, ಗಂಗರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರು ಒಡೆಯರ ವಾಸ್ತು ಶೈಲಿಯನ್ನು ಅನುಸರಿಸಿಕೊಂಡು ಈ ಪರಿಸರದಲ್ಲಿ ದೇವಾಲಯ ವಾಸ್ತುಶಿಲ್ಪ ಬೆಳೆದಿದೆ. ಕ್ಷೇತ್ರ ಕಾರ್ಯದ ವೇಳೆಯಲ್ಲಿ ಗಮನಿಸಿದಂತೆ, ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ದೇವಾಲಯಗಳನ್ನು ಗುರುತಿಸಲು ಇರುವ ಪ್ರಮುಖ ಲಕ್ಷಣಗಳು ಈ ರೀತಿಯಲ್ಲಿವೆ: ಯಾವುದೇ ದೇವಾಲಯದ ಅಗಲ ಮತ್ತು ಉದ್ದ ಕಡಿಮೆಯಾಗಿದ್ದು ಚಿಕ್ಕದಾಗಿರುವುದು. ಚಿಕ್ಕದಾದ ಗರ್ಭಗೃಹ ಮತ್ತು ತೆರೆದ ಅಂತರಾಳವನ್ನು ಹೊಂದಿರುವುದು. ದೇವಾಲಯದ ಎತ್ತರವು ಕಡಿಮೆಯಾಗಿರುವುದರಿಂದ ಸಹಜವಾಗಿ ಬಾಗಿಲಿನ ಎತ್ತರ ಕಡಿಮೆ ಇರುವುದು. ಈ ದೇವಾಲಯಗಳ ಪ್ರಾಚೀನತೆಯನ್ನು ಗುರುತಿಸುವಲ್ಲಿ, ಚೋಳರು ಪ್ರತಿಷ್ಠಾಪನೆ ಮಾಡಿರುವರೆಂದು ಗುರುತಿಸುವುದು ಮತ್ತು ಕಡಿಮೆ ಅಲಂಕಾರ ಹೊಂದಿರುವುದು. ಅಲ್ಲದೆ, ದೇವಾಲಯಗಳ ಬಳಿ ಶಾಸನಗಳು ಅಥವಾ ವೀರಗಲ್ಲುಗಳು ಕಾಣಬರುತ್ತವೆ. ಶಿವ ದೇವಾಲಯಗಳಾದಲ್ಲಿ ಈಶ್ವರ, ಮಲ್ಲಿಕಾರ್ಜುನಸ್ವಾಮಿ, ಕೊಳ್ಳಿಮಲ್ಲಪ್ಪ, ಸೋಮೇಶ್ವರ, ಅರ್ಕೇಶ್ವರ, ರಾಮೇಶ್ವರ ಹೆಸರುಗಳಿಂದ ಪರಿಚಿತವಿರುತ್ತವೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ದೇವಾಲಯಗಳನ್ನು ಅವುಗಳ ರಚನೆಯ ಆಧಾರದ ಮೇಲೆ ಈ ರೀತಿ ಗಮನಿಸಬಹುದು.

ನಿರ್ಮಾಣ ಸಾಮಾಗ್ರಿ

ಕಲಾ ಪ್ರಪಂಚಕ್ಕೆ ಭಾರತೀಯರು ಪ್ರಾಚೀನ ಕಾಲದಿಂದಲೂ ಪ್ರೋತ್ಸಾಹ ನೀಡುತ್ತಾ ಬಂದಿರುವರು. ಅದರಲ್ಲೂ ಮುಖ್ಯವಾಗಿ ಭಾರತದ ಪ್ರಥಮ ರಾಷ್ಟ್ರೀಯ ಸಾಮ್ರಾಜ್ಯವಾದ ಮೌರ್ಯರು ಬಹು ದೊಡ್ಡ ಕಾಣಿಕೆಯನ್ನು ನೀಡಿದ್ದಾರೆ. ಪ್ರಾಚೀನ ಕಾಲದಿಂದ ಇಂದಿನವರೆಗೆ ಹಂತ ಹಂತವಾಗಿ ವಿವಿಧ ವಸ್ತು ಸಾಮಾಗ್ರಿಗಳಿಂದ ವಾಸ್ತುಸ್ಮಾರಕಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಸಿಂಧೂ ನಾಗರಿಕತೆಯಲ್ಲಿಯೇ ಇಟ್ಟಿಗೆಯನ್ನು ಚೆನ್ನಾಗಿ ತಯಾರಿಸಲಾಗುತ್ತಿತ್ತು. ಆ ಇಟ್ಟಿಗೆಗಳನ್ನು ಗೋಡೆ, ನೆಲ, ರಸ್ತೆ, ಚರಂಡಿ ನಿರ್ಮಾಣದಲ್ಲಿ ಬಳಸುತ್ತಿದ್ದರು. ಇಟ್ಟಿಗೆಯನ್ನು ತಯಾರಿಸಿ ಸುಡುವುದು ಅವರಿಗೆ ಗೊತ್ತಿತ್ತು. ಗಂಗಾ ಮತು ಸಿಂಧೂ ನದಿಗಳ ಹರಿವಿನಲ್ಲಿ ದೊರೆಯುವ ಮಣ್ಣು, ಪಾತ್ರೆ ಮತ್ತು ಇಟ್ಟಿಗೆಗಳ ನಿರ್ಮಾಣಕ್ಕೆ ತುಂಬಾ ಚೆನ್ನಾಗಿರುತ್ತಿತ್ತು. ಇಂದೂ ಕೂಡ ಈ ಮಣ್ಣನ್ನು ಇಟ್ಟಿಗೆಗಳ ತಯಾರಿಕೆಗೆ ಬಳಸಲಾಗುತ್ತಿದೆ. ಇಟ್ಟಿಗೆಯನ್ನು ತಯಾರಿಸಿ ಕಟ್ಟಡ ರಚನೆಯಲ್ಲಿ ಬಳಸುವುದನ್ನು ಮನುಷ್ಯ ಕಂಡುಕೊಂಡಿರುವುದು ಅವನ ಸಾಧನೆಗಳಲ್ಲಿ ಒಂದು. ಇದು ಅತ್ಯಂತ ಪ್ರಯೋಜನಕಾರಿಯಾಗಿದೆ. ಇಟ್ಟಿಗೆ ತಯಾರಿಸುವುದರಿಂದ

ಗೋಡೆ ಕಟ್ಟುವುದು, ಕಲ್ಲಿಗೆ ಸೂಕ್ತವಾದ ಆಕಾರ ಕೊಟ್ಟು ಗೋಡೆ ನಿರ್ಮಿಸುವುದಕ್ಕಿಂತಲೂ ಹೆಚ್ಚು ಸುಲಭವಾದುದ್ದು. ಈ ಇಟ್ಟಿಗೆಗಳು ದೇವಾಲಯಗಳ ತಳಪಾಯದಿಂದ ಗೋಪುರಗಳ ನಿರ್ಮಾಣದವರೆಗೂ ಬಹುಮುಖ್ಯ ಪಾತ್ರವಹಿಸುತ್ತವೆ. ಇಟ್ಟಿಗೆಯನ್ನು ಸಂಸ್ಕೃತದಲ್ಲಿ ಇಷ್ಟಕ ಎನ್ನುತ್ತಾರೆ.

ವಾಸ್ತುನಿರ್ಮಾಣದಲ್ಲಿ ಮರ ಪ್ರಮುಖವಾದುದ್ದು ಮತ್ತು ಸುಲಭವಾಗಿ ದೊರೆಯುವಂತದ್ದು. ಮರಗಳು ವಿವಿಧ ಬಗೆಯಲ್ಲಿವೆ. ಮರದ ಗುಣಲಕ್ಷಣ ವೃಕ್ಷದ ಬಗೆಯಿಂದ ನಿರ್ಣಯವಾಗಿರುತ್ತದೆ. ಮರಗಳ ಬಗ್ಗೆ ಭಾರತೀಯ ಶಿಲ್ಪಿಗೆ ಬಹುಪ್ರಾಚೀನ ಕಾಲದಿಂದಲೂ ತಿಳಿದಿತ್ತು ಮತ್ತು ಅವುಗಳ ವಿಶೇಷ ಪ್ರಯೋಜನೆಗಳನ್ನು ಅರಿತಿದ್ದ. ದೃಢವಾದ ಮತ್ತು ಬಲವಾದ ಮರದಿಂದ ರಥ, ಗಾಡಿ ಮತ್ತು ಮರದ ಕಂಬಗಳನ್ನು ತಯಾರಿಸುತ್ತಿದ್ದ. ಇಂತಹ ಮರಗಳಿಂದ ಉನ್ನತ ಮಟ್ಟದ ಅರಮನೆಗಳನ್ನು ನಿರ್ಮಿಸಿದ್ದನ್ನು ಇತಿಹಾಸದಿಂದ ಕಾಣಬಹುದು. ಆದರೆ ಮರಗಳಿಂದ ನಿರ್ಮಾಣಗೊಂಡ ಭವನಗಳಾಗಲಿ, ಅರಮನೆಗಳಾಗಲಿ ಇಂದು ಇಲ್ಲ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ನೋಡಿದಾಗ ಮರದಿಂದ ನಿರ್ಮಾಣಗೊಂಡ ಅರಮನೆಗಳಾಗಲಿ ಅಥವಾ ಇತರ ಯಾವುದೇ ನಿರ್ಮಾಣದ ಅವಶೇಷಗಳನ್ನು ಇಂದು ಕಾಣಲು ಸಾಧ್ಯವಿಲ್ಲ. ಆದರೆ ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯದ ಒಳಭಾಗದಲ್ಲಿ ಮರದ ಬಾಗಿಲೊಂದು ಉತ್ತಮವಾಗಿದ್ದು, ಬೀಟೆ ಮರದಿಂದ ನಿರ್ಮಾಣಗೊಂಡಿದೆ ಹಾಗೂ ಕಲಾತ್ಮಕವಾಗಿದೆ. ನಾಲ್ಕು ಅಡಿ ಎತ್ತರ, ಎರಡು ಅಡಿ ಅಗಲ ವಿಸ್ತೀರ್ಣತೆಯ ಇದು ಕಪ್ಪು ಬಣ್ಣದಿಂದ ಕೂಡಿದೆ. ವಿವಿಧ ರೀತಿಯ ಬಳ್ಳಿ ಮತ್ತು ಪುಷ್ಪಗಳಿಂದ ಅಲಂಕೃತಗೊಂಡಿದ್ದು ನೋಡುಗರನ್ನು ತನ್ನತ್ತ ಸೆಳೆಯುವಲ್ಲಿ ಸಫಲವಾಗಿದೆ. ಗರ್ಭಗೃಹದ ಮುಂದೆ ಅಂತರಾಳದ ಬಳಿ ಅಳವಡಿಸಲಾಗಿದ್ದು, ಇದರ ಚಿಲಕ ಮಾತ್ರ ಸ್ಟೀಲ್‌ನಿಂದ ಕೂಡಿದೆ.

ವಾಸ್ತುಸ್ಮಾರಕಗಳ ನಿರ್ಮಾಣದಲ್ಲಿ ಇತರೆ ವಸ್ತುಸಾಮಾಗ್ರಿಗಳಿಗಿಂತ ಶಿಲೆ ಅಥವಾ ಕಲ್ಲು ಪ್ರಮುಖವಾದುದ್ದು. ಇವುಗಳು ಮಳೆ, ಗಾಳಿ, ಬಿಸಿಲು, ಚಳಿಗಾಲಕ್ಕೆ ಹೊಂದಿಕೊಂಡು ಸಾವಿರಾರು ವರ್ಷಗಳ ಕಾಲ ಮುಂದುವರೆದು ಅಂದಿನ ಸಂಸ್ಕೃತಿಯನ್ನು ತಿಳಿಯಲು ಬಹುಮುಖ್ಯವಾದ ವಸ್ತುವಾಗಿದೆ. ಕಲ್ಲು ದೊರೆಯುವ ಎರಡು ಮುಖ್ಯ ಸ್ಥಳಗಳೆಂದರೆ ಮೊದಲಿನದು ಬೆಟ್ಟ, ಎರಡನೆಯದು ಭೂಮಿ. ಭೂಮಿಯ ಒಳಗೆ ದೊರೆಯುವ ಕಲ್ಲಿಗಿಂತಲೂ ಬೆಟ್ಟದ ಮೇಲೆ ದೊರೆಯುವ ಕಲ್ಲು ಒಳ್ಳೆಯದು. ಏಕೆಂದರೆ ಭೂಮಿಯಿಂದ ಕಲ್ಲನ್ನು ತೆಗೆದ ನಂತರ ಅದು ಗಾಳಿ, ಮಳೆ, ಬಿಸಿಲು ಮತ್ತು ವಾತಾವರಣದ ವೈಪರೀತ್ಯಗಳಿಗೆ ತುತ್ತಾಗಿ ದುರ್ಬಲವಾಗುತ್ತದೆ. ಬೆಟ್ಟ, ಸಮುದ್ರ ಅಥವಾ ನದಿತೀರ, ತೀರ್ಥಕ್ಷೇತ್ರ ಅಥವಾ ಕಾಡು,

ಅರಣ್ಯದ ಬಳಿ ಅಥವಾ ದೇವಾಲಯದ ಬಳಿ ದೊರೆಯುವ ಕಲ್ಲು ಕಟ್ಟಡ ರಚನೆಗೆ ದೃಢವಾಗಿರುತ್ತದೆ. ಶಿಲೆಗಳು ಮುಖ್ಯವಾಗಿ ನಾಲ್ಕು ಬಣ್ಣಗಳಲ್ಲಿರುತ್ತವೆ. ಅವುಗಳೆಂದರೆ, ಬಿಳುಪು, ಕೆಂಪು, ಹಳದಿ ಮತ್ತು ಕಪ್ಪು. ಇವುಗಳಲ್ಲಿ ಬಹುತೇಕವಾಗಿ ದೇವರ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲು ಕಪ್ಪುಕಲ್ಲು ಅಥವಾ ಕೃಷ್ಣ ಶಿಲೆಯನ್ನು ಉಪಯೋಗಿಸಿರುವುದನ್ನು ಕಾಣಬಹುದು. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ಬಹುತೇಕ ಎಲ್ಲಾ ವಿಗ್ರಹಗಳು ಕಪ್ಪುಕಲ್ಲಿನಿಂದ ಕೂಡಿರುವವು. ಅಶೋಕ ಚಕ್ರವರ್ತಿಯು ದೇಶದಾದ್ಯಂತ ಸ್ತೂಪ, ಶಿಲಾಸ್ತಂಭ, ಸಂಘಾರಾಮ, ಅರಮನೆ ಮತ್ತು ಕಲ್ಲನ್ನು ಕೊರೆದು ಮಾಡಿದ ಗುಹಾದೇವಾಲಯಗಳನ್ನು ನಿರ್ಮಿಸಿದನು. ಇವುಗಳಲ್ಲಿ ಬಹುತೇಕವು ನಾಶವಾಗಿದ್ದು ದೊರೆತಿರುವವು ಅಲ್ಪ. ಇದಕ್ಕೆ ಕಾರಣ ಅವುಗಳ ನಿರ್ಮಾಣದಲ್ಲಿ ಬಳಸಿದ್ದ ಸಾಮಾಗ್ರಿ, ಪ್ರಧಾನವಾಗಿ ಮರ ಮತ್ತು ಮಣ್ಣಿನ ಇಟ್ಟಿಗೆ ಬಳಸಲಾಗಿದೆ. ಹಾಗಾಗಿ ಅವು ಪ್ರಕೃತಿಯ ಏರಿಳಿತಗಳಿಗೆ ಒಳಗಾಗಿ ಕಣ್ಮರೆಯಾಗಿವೆ. ನಿರ್ಮಾಣ ಕಾರ್ಯದಲ್ಲಿ ಶಿಲೆಯನ್ನು ಮೊದಲಿಗೆ ಬಳಕೆಯಲ್ಲಿ ತಂದವನು ಅಶೋಕ. ಹಾಗಾಗಿ ಅಶೋಕ ಚಕ್ರವರ್ತಿಗಿಂತಲೂ ಮುಂಚಿನ ನಿರ್ಮಾಣ ಹಾಗೂ ಕಲೆ ಮತ್ತು ವಾಸ್ತುಶಿಲ್ಪ ಸ್ಮಾರಕಗಳು ಲಭ್ಯವಿರುವುದಿಲ್ಲ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ಬಹುತೇಕ ಎಲ್ಲಾ ದೇವಾಲಯ, ಜೈನಬಸದಿ, ಮಂಟಪಗಳು, ಶಿಲೆಯಿಂದ ಅಥವಾ ಕಲ್ಲಿನಿಂದಲೇ ನಿರ್ಮಾಣ ಗೊಂಡಿರುವುದು. ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ಅತ್ಯಂತ ಪ್ರಾಚೀನ ದೇವಾಲಯವೆಂದರೆ ಬೆಟ್ಟದಪುರ ಗ್ರಾಮದಲ್ಲಿರುವ ಅನ್ನದಾನಿಮಲ್ಲಿಕಾರ್ಜುನ ದೇವಾಲಯ. ಇದು ಮೂಲತ: ಜೈನ ದೇವಾಲಯವಾಗಿತೆಂದು ಅಲ್ಲಿ ಕಂಡುಬಂದಿರುವ ವಾಸ್ತುಸ್ಮಾರಕಗಳಿಂದ ನಿರ್ಧರಿಸಬಹುದು. ಮೂಲ ದೇವಾಲಯವು ಚಿಕ್ಕದಾಗಿದ್ದು ನಂತರ ಆಳ್ವಿಕೆ ಮಾಡಿದ ಗಂಗ, ಹೊಯ್ಸಳ ಮತ್ತು ವಿಜಯನಗರ ಅರಸರ ಕಾಲದಲ್ಲಿ ವಿಸ್ತಾರವಾಗಿ ಹರಡಿಕೊಂಡಿದೆ. ಜೈನ ಬಸದಿಗಳು ಸರಳವಾಗಿದ್ದು ಅಧಿಕ ಪ್ರಮಾಣದಲ್ಲಿ ಯಾವುದೇ ಶಿಲ್ಪಗಳ ಕೆತ್ತನೆ, ಕಲಾತ್ಮಕ ಉಬ್ಬುಶಿಲ್ಪಗಳ ರಚನೆ ಇಲ್ಲದೇ ಸರಳ ರೀತಿಯಲ್ಲಿ ಇರುವವು. ಈ ದೇವಾಲಯವು ಶಿಲೆಯಿಂದ ನಿರ್ಮಾಣಗೊಂಡಿರುವುದು. ಇದಕ್ಕೆ ಅನುಗುಣವಾಗಿ ಮೌಖಿಕವಾಗಿ ದೊರೆಯುವ ಆಧಾರಗಳಿಂದ ಅನ್ನದಾನಿಮಲ್ಲಿಕಾರ್ಜುನ ಬೆಟ್ಟವನ್ನು ಪ್ರಾಚೀನ ಕಾಲದಲ್ಲಿ ಜೈನ ತೀರ್ಥಂಕರ ಬೆಟ್ಟವೆಂದು, ಈ ಪರಿಸರವನ್ನು ಆಳ್ವಿಕೆ ಮಾಡಿದ ಪ್ರಾರಂಭದ ಅರಸ ಚಂಗಲರಾಯನು ಜೈನ ಅರಸನಾಗಿದ್ದನೆಂದು ಇತಿಹಾಸದಿಂದ ತಿಳಿದುಬರುತ್ತದೆ. ಈತ ಜೈನ ಧರ್ಮಧ ನಿಷ್ಠ ಅನುಯಾಯಿ. ನಂತರ ಸ್ಥಳೀಯರನ್ನು ಸೋಲಿಸಿ ಅರಮನೆ, ಕೋಟೆ ಕಟ್ಟಿದನೆಂದು ಐತಿಹ್ಯವಿದೆ. ಆದರೆ ಇಂದು ಅಂಥಹ ಯಾವುದೇ ಸ್ಮಾರಕಗಳು ಕಂಡುಬರುವುದಿಲ್ಲ. ಹನ್ನೆರಡನೆಯ

ಶತಮಾನದ ನಂತರ ಈ ಜೈನ ಕ್ಷೇತ್ರ ಶೈವ ಕ್ಷೇತ್ರವಾಗಿರುವುದು. ಪರಿಣಾಮವಾಗಿ ಅಧಿಕ ಪ್ರಮಾಣದಲ್ಲಿ ಶೈವ ಗುಡಿ, ನಂದಿ ಶಿಲ್ಪ ಮತ್ತು ಶೈವ ಮಂಟಪಗಳು ಕಂಡುಬಂದಿವೆ.

ಐಲಾಪುರದಲ್ಲಿ ನಂದಿಬಸವೇಶ್ವರ ದೇವಾಲಯವಿದೆ. ಇದೊಂದು ಶೈವ ಪ್ರಮುಖ ದೇವಾಲಯ. ಈ ದೇವಾಲಯದ ಭಿತ್ತಿಯನ್ನು ಶಿಲೆಯಿಂದ ನಿರ್ಮಿಸಿರುವರು. ನಂತರ ಗರ್ಭಗೃಹದ ಮೇಲೆ ಇರುವ ಗೋಪುರವನ್ನು ಗಾರೆ, ಇಟ್ಟಿಗೆಯಿಂದ ನಿರ್ಮಿಸಿರುವರು. ನಿರ್ಮಾಣ ರಚನೆಯಲ್ಲಿ ಕಂಡುಬಂದಿರುವ ವಸ್ತುಗಳಾದ ಶಿಲೆ, ಇಟ್ಟಿಗೆಗಳನ್ನು ಸ್ಥಳೀಯವಾಗಿ ದೊರೆತಿರುವ ವಸ್ತುಗಳನ್ನು ಉಪಯೋಗಿಸಿ ಕಟ್ಟಿರುವರು. ದೊಡ್ಡನೇರ್ಲೆ ಗ್ರಾಮದ ಈಶ್ವರ ದೇವಾಲಯದ ನಿರ್ಮಾಣದಲ್ಲಿ ಪ್ರಮುಖವಾಗಿ ಶಿಲೆಯನ್ನು ಭಿತ್ತಿ, ಅಡಿಪಾಯಗಳಿಗೆ ಉಪಯೋಗಿಸಿರುವರು. ನಂತರದ ರಚನೆಯಲ್ಲಿ ಅಂದರೆ ಗರ್ಭಗುಡಿಯ ಗೋಪುರವನ್ನು ನಿರ್ಮಿಸಲಿಕ್ಕೆ ಇಟ್ಟಿಗೆಯನ್ನು ಬಳಸಿರುವುದನ್ನು ಕಾಣಬಹುದು. ಆದರೆ ಈ ದೇವಾಲಯ ಮುಂದಿನ ದಿನಗಳಲ್ಲಿ ಮತ್ತಷ್ಟು ಅವನತಿಗೊಳ್ಳುವ ಸಾಧ್ಯತೆಯಿದೆ. ಕುಡುಕೂರು ಗ್ರಾಮದಲ್ಲಿರುವ ಬಸವೇಶ್ವರ ದೇವಾಲಯ ನಿರ್ಮಾಣಕ್ಕೆ ಬಳಸಿರುವ ಶಿಲೆಗಳನ್ನು ಸ್ಥಳೀಯವಾಗಿ ದೊರೆಯುತ್ತಿದ್ದ ಬೆಟ್ಟದಪುರ ಅಥವಾ ಕುಡುಕೂರು ಗ್ರಾಮದಿಂದ ತೆಗೆದುಕೊಳ್ಳಲಾಗಿದೆ. ಶಿಲೆಯು ಸ್ವಲ್ಪ ಪ್ರಮಾಣದಲ್ಲಿ ಕೆಂಪು ಬಣ್ಣವನ್ನು ಹೊಂದಿದೆ. ಹಿಟ್ನಹೆಬ್ಬಾಗಿಲು ಗ್ರಾಮದಲ್ಲಿರುವ ಚನ್ನಕೇಶವ ದೇವಾಲಯ ಕದಂಬರ ಕಾಲವನ್ನು ಸೂಚಿಸುತ್ತಿದೆ. ಈ ದೇವಾಲಯ ವಿಸ್ತೀರ್ಣವು ದೊಡ್ಡದ್ದು ಮತ್ತು ಪ್ರಮುಖ ವೈಷ್ಣವ ಕೇಂದ್ರವಾಗಿತೆಂದು ಕಂಡುಬರುತ್ತದೆ. ನಿರ್ಮಾಣ ರಚನೆಯಲ್ಲಿ ಅಲ್ಪಪ್ರಮಾಣದ ಕೆಂಪು ಮಿಶ್ರಿತ ಶಿಲೆಯನ್ನು ಉಪಯೋಗಿಸಿರುವರು. ಈ ಶಿಲೆಯು ಗಟ್ಟಿಶಿಲೆಯಾಗಿದ್ದು ಸ್ಥಳೀಯವಾಗಿ ಲಭ್ಯವಾಗಿದೆ. ಗರ್ಭಗೃಹದ ಮೇಲೆ ಕಂಡುಬಂದಿರುವ ಮೂಲ ಗೋಪುರವು ಅವನತಿಗೊಂಡಿದ್ದು ನಂತರದ ದಿನಗಳಲ್ಲಿ ಜೀರ್ಣೋದ್ಧಾರ ಕಾರ್ಯ ನಡೆದಿರುವುದರಿಂದ ಪ್ರಾಚೀನ ರೂಪವನ್ನು ಗುರುತಿಸಲು ಸಾದ್ಯವಿಲ್ಲ. ಆ ಜಾಗದಲ್ಲಿ ಇಂದು ಸೀಮೆಂಟಿನಿಂದ ರಚಿತವಾದ ಗೋಪುರವನ್ನು ಕಾಣುತ್ತೇವೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರವು ಯಾವುದೇ ಒಂದು ರಾಜಮನೆತನಕ್ಕೆ ಒಳಗಾಗದೆ ಹಲವು ರಾಜಮನೆತನಗಳ ಆಳ್ವಿಕೆಯ ನಿಯಂತ್ರಣಕ್ಕೆ ಸೇರಿತ್ತೆಂದು ಇಲ್ಲಿ ದೊರೆತಿರುವ ಆಧಾರಗಳಿಂದ ಅರಿಯಬಹುದು. ಇಲ್ಲಿ ಆಳ್ವಿಕೆ ಮಾಡಿದ ಅರಸರು, ಸಾಮಂತ ಮನೆತನಗಳ ರಾಜರುಗಳು ಉತ್ತಮವಾಗಿ ಆಡಳಿತ ನಡೆಸಿ, ದೇವಾಲಯ ಕೆರೆ–ಕಟ್ಟೆ ನಿರ್ಮಾಣ ಮಾಡಿರುವುದನ್ನು ಇಲ್ಲಿ ಕಂಡುಬಂದಿರುವ ಸ್ಮಾರಕಗಳಿಂದ ತಿಳಿಯಬಹುದು. ಇಂತಹ ಸ್ಮಾರಕಗಳನ್ನು ನಿರ್ಮಾಣ ಮಾಡುವ ವೇಳೆಯಲ್ಲಿ ಹೊರಗಿನಿಂದ ಯಾವುದೇ ವಸ್ತುಗಳನ್ನು

ತರದ ಸ್ಥಳೀಯವಾಗಿ ದೊರೆಯುವ ಮರ, ಇಟ್ಟಿಗೆ ಶಿಲೆಗಳಿಂದ ನಿರ್ಮಿಸಿರುವರು. ಈ ಪರಿಸರವು ಅರೆಮಲೆನಾಡು ಪ್ರದೇಶವಾಗಿರುವುದಿಂದ ಬೆಟ್ಟಗುಡ್ಡಗಳಲ್ಲಿ ವಿಪುಲವಾಗಿ ದೊರೆಯುವ ಕಣ ಶಿಲೆ ಅಥವಾ ಗ್ರಾನೈಟ್ ಶಿಲೆಯನ್ನು ಬಳಸಿದ್ದಾರೆ. ಇಲ್ಲಿಯ ದೇವಾಲಯಗಳು ಸಾಮಾನ್ಯವಾಗಿ ಅದಿಷ್ಠಾನ, ಭಿತ್ತಿ, ಕಂಬ, ಬಾಗಿಲು, ಮಂಟಪ, ದೀಪಸ್ತಂಭ ಹಾಗೂ ಉಯ್ಯಾಲೆ ಕಂಬಗಳನ್ನು ಶಿಲೆಯಲ್ಲಿ ನಿರ್ಮಿಸಲಾಗಿದೆ. ದೇವಾಲಯಗಳ ಶಿಖರ, ಮುಖಮಂಟಪ, ಹಾಗೂ ಸಭಾ ಮಂಟಪಗಳ ಅಂಚಿನಲ್ಲಿ ನಿರ್ಮಿಸಲಾಗಿರುವ ದೇವಕೋಷ್ಟಕಗಳು, ಅವುಗಳಲ್ಲಿರುವ ಶಿಲ್ಪಗಳು ಶಾಲ, ಹಾರ, ಕೂಟ, ಹಾಗೂ ದ್ವಾರಗೋಪುರಗಳನ್ನು ಇಟ್ಟಿಗೆ, ಸಣ್ಣ ಸಣ್ಣ ಕಲ್ಲಿನ ತುಂಡುಗಳು ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಐಲಾಪುರದ ನಂದಿಬಸವೇಶ್ವರ ದೇವಾಲಯ, ದೊಡ್ಡನೆರ್ಲೆಯ ಈಶ್ವರ ದೇವಾಲಯ ಹಾಗೂ ಕುಡುಕೂರಿನ ಬಸವೇಶ್ವರ ದೇವಾಲಯ, ಹಿಟ್ನೆಹೆಬ್ಬಾಗಿಲು ಚನ್ನಕೇಶವ ದೇವಾಲಯವನ್ನು ಗಮನಿಸಬಹುದು.

ತಲವಿನ್ಯಾಸ

ವಾಸ್ತುಶಿಲ್ಪ ನಿರ್ಮಾಣದಲ್ಲಿ ತಲವಿನ್ಯಾಸ ಪ್ರಮುಖವಾದುದ್ದು. ತಲವಿನ್ಯಾಸವನ್ನು ವಾಸ್ತುತಂತ್ರಜ್ಞನು ನಿರೂಪಿಸುವನು. ತಲವಿನ್ಯಾಸ ಅಥವಾ ಸ್ಥಳವಿನ್ಯಾಸವು ದೇವಾಲಯ ಅಥವಾ ಸ್ಮಾರಕ ಗಟ್ಟಿಯಾಗಿ ನಿಲ್ಲಲು ಮಾಡಿದ ತಾಂತ್ರಿಕ ಭೂ ಪರೀಕ್ಷೆ ಎಂದೇ ಹೇಳಬಹುದು. ತಲವಿನ್ಯಾಸದಲ್ಲಿ ದೇವಾಲಯದ ವಿವಿಧ ಸ್ಮಾರಕಗಳು ಎಷ್ಟು ವಿಸ್ತೀರ್ಣತೆಯಿಂದ ಕೂಡಿರಬೇಕು ಹಾಗು ಯಾವ ಪ್ರಮಾಣದಲ್ಲಿರಬೇಕು ಎಂಬುವುದರ ಮೇಲೆ ನಿರ್ಧರಿತವಾಗುತ್ತದೆ. ದೇವಾಲಯದ ತಲವಿನ್ಯಾಸದಲ್ಲಿ ಮುಖ್ಯವಾಗಿ ದೇವರ ವಿಗ್ರಹ ಪ್ರತಿಷ್ಠಾಪಿಸುವ ಸ್ಥಳ. ಅದರ ಮುಂದಿರುವ ಅಂತರಾಳ, ನವರಂಗಮಂಟಪ ಅಥವಾ ರಂಗಮಂಟಪ, ತೆರೆದಮಂಟಪ. ಇವುಗಳ ಅಗಲ, ಉದ್ದ ಅಂಶಗಳನ್ನು ತಿಳಿಸುವುದೇ ಸ್ಥಳವಿನ್ಯಾಸವಾಗಿದೆ.

ಇದರ ಮುಂದಿನ ಭಾಗ ಮಹಾದ್ವಾರ, ಮಹಾಮಂಟಪ ಅಂಶಗಳನ್ನು ಸ್ಮಾರಕ ನಿರ್ಮಾಣ ಕಾರ್ಯದ ಪೂರ್ವದಲ್ಲಿ ನಕ್ಷೆ ಹಾಕಿಕೊಂಡು ತಯಾರಿಸುವ ಯೋಜನಾಬದ್ಧ ಕಾರ್ಯ. ದೇವಾಲಯ ನಿರ್ಮಾಣ ಸ್ಥಳವು ಇತರ ಸ್ಥಳಗಳಿಗಿಂತ ಎತ್ತರವಾಗಿದ್ದು ಬೆಟ್ಟಗುಡ್ಡಗಳ ಮೇಲೆಯೇ ಅಧಿಕವಾಗಿ ನಿರ್ಮಾಣಗೊಂಡಿರುವುದು. ಉದಾಹರಣೆಗೆ ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯದ ಗರ್ಭಗೃಹದ ತಲವಿನ್ಯಾಸವು ಮೂರು ಅಡಿ ಅಗಲ ಮತ್ತು ಉದ್ದ ವಿಸ್ತೀರ್ಣತೆ ಹೊಂದಿದ್ದು ಚಿಕ್ಕಗರ್ಭಗೃಹವಾಗಿದೆ. ನಂತರ ಅದರ ಮುಂದಿನ ಸುಖನಾಸಿಯು ವಿಸ್ತೀರ್ಣದ ದೃಷ್ಟಿಯಿಂದ ದೊಡ್ಡದಾಗಿಲ್ಲದೆ ಚಿಕ್ಕದಾಗಿರುವುದು. ನಂತರದ ಕಾಲದಲ್ಲಿ ವಿಸ್ತಾರ ಹೊಂದಿರುವ ನವರಂಗ ಮಂಟಪ ವಿಶಾಲವಾಗಿರುವುದು. ರಂಗಮಂಟಪದಲ್ಲಿ

ರಾಜಪರಿವಾರದವರು, ಅಧಿಕಾರಿ, ಸಮಾಜದ ಮುಖಂಡರು, ಸಭೆ, ಸಮಾರಂಭ, ಚರ್ಚೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಲು ಮತ್ತು ಚರ್ಚಿಸಲು ಸಾಮಾನ್ಯವಾಗಿ ವಿಶಾಲವಾಗಿ ನಿರ್ಮಿಸಿರುವರು. ಇದು ದೇವಾಲಯದ ಇತರೆ ಭಾಗಗಳಿಗಿಂತ ವಿಸ್ತಾರ ವಾಗಿರುವುದು. ಪಿರಿಯಾಪಟ್ಟಣದ ಒಳಕೋಟೆಯ ಭಾಗದಲ್ಲಿ ಈಶ್ವರ ದೇವಾಲಯವಿದೆ. ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗುಡಿಯ ಸ್ಥಳವು ದೇವಾಲಯದ ವಿಸ್ತೀರ್ಣತೆಯನ್ನು ಗಮನಿಸಿದಾಗ ಅತ್ಯಂತ ಚಿಕ್ಕದು ಎಂದೇ ಹೇಳಬಹುದು. ಇದರ ಗರ್ಭಗೃಹವು ಮೂರು ಅಡಿ ಉದ್ದ ಮತ್ತು ಅಗಲ ವಿಸ್ತೀರ್ಣತೆಯನ್ನು ಹೊಂದಿರುವುದು. ತಲವಿನ್ಯಾಸದಲ್ಲಿ ಗರ್ಭಗೃಹದ ಗುಡಿಯು ದೇವಾಲಯ ಇತರ ಭಾಗಗಳಿಗಿಂತ ಅಲ್ಪಪ್ರಮಾಣದಲ್ಲಿ ಎತ್ತರದಲ್ಲಿರುತ್ತದೆ. ಬಹುಶಃ ದೇವಾಲಯಕ್ಕೆ ಬರುವ ಭಕ್ತರಿಗೆ ದೇವರ ದರ್ಶನವಾಗಲೆಂದು ಎತ್ತರ ಪೀಠದ ಮೇಲೆ ದೇವರ ವಿಗ್ರಹಗಳನ್ನು ಪ್ರತಿಷ್ಠಾಪಿಸಿರುವರು. ಇದಕ್ಕೆ ಪ್ರತಿಯಾಗಿ ನವರಂಗಮಂಟಪ ಕೆಳಗಿದ್ದರೆ, ಮುಂದಿನ ತೆರೆದ ಮಂಟಪ ಮತ್ತಷ್ಟು ತಳಭಾಗದಲ್ಲಿ ಇರುವುದನ್ನು ಕಾಣಬಹುದು. ಇದಕ್ಕೆ ಉದಾಹರಣೆಯಾಗಿ ಪಿರಿಯಾಪಟ್ಟಣದ ಹೊರಕೋಟೆಯ ಭಾಗದಲ್ಲಿರುವ ಚನ್ನಕೇಶವ ದೇವಾಲಯ ಕಾಣಬಹುದು.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬರುವ ದೇವಾಲಯಗಳು ಕದಂಬರಿಂದ ರಚಿತಗೊಂಡು ಇತರೆ ರಾಜಮನೆತನದವರ ಆಳ್ವಿಕೆಯ ಅವಧಿಯಲ್ಲಿ ವಿಸ್ತರಿಸಲ್ಪಟ್ಟಿರುವವು. ಈ ಪ್ರದೇಶವನ್ನು ಆಳಿದ ಚಂಗಾಳ್ವರಿಗೆ ಪ್ರತ್ಯೇಕವಾದ ವಾಸ್ತುಶೈಲಿ ಇಲ್ಲವೆಂದು ಹೇಳಬಹುದು. ದ್ರಾವಿಡ ಶೈಲಿಯನ್ನೇ ಇವರು ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಅಳವಡಿಸಿಕೊಂಡಿರುವರು. ಒಟ್ಟಿನಲ್ಲಿ ತಲವಿನ್ಯಾಸದಲ್ಲಿ ಚಿಕ್ಕದಾದ ಗರ್ಭಗೃಹ, ತೆರೆದ ಸುಖನಾಸಿ, ಸಣ್ಣ ಪ್ರಮಾಣದ ನವರಂಗ, ಚೌಕಾಕಾರದ ಪೀಠದ ಮೇಲೆ ಗುಂಡಾಗಿರುವ ತೆಳುಕಂಬಗಳು, ಅವುಗಳ ತುದಿಯಲ್ಲಿ ಕಲಾಕೃತಿ, ನವರಂಗದ ಮಧ್ಯೆ ದೊಡ್ಡ ಅಂಕಣ, ಅದರ ಮೇಲೆ ಮಧ್ಯದಲ್ಲಿ ಅಷ್ಟದಿಕ್ಪಾಲಕರ ಮಧ್ಯೆ ನಂದಿಶಿಲ್ಪಗಳು, ಜಿನಮೂರ್ತಿಗಳು, ದ್ರಾವಿಡ ಶೈಲಿಯ ಕಲ್ಲಿನ ಇಟ್ಟಿಗೆ ಮತ್ತು ಗಾರೆಯ ವಿಮಾನ, ಇವು ಪಿರಿಯಾಪಟ್ಟಣವನ್ನು ಆಳಿದ ಚಂಗಾಳ್ವರ ದೇವಾಲಯಗಳ ಪ್ರಮುಖ ಲಕ್ಷಣಗಳು.

ಈ ಪರಿಸರದಲ್ಲಿ ಬೃಹತ್ ಪ್ರಮಾಣದ ಅಥವಾ ವಿಶಾಲವಾದ ತಲವಿನ್ಯಾಸದ ದೇವಾಲಯಗಳು ಕಂಡುಬರುವುದಿಲ್ಲ. ಮಧ್ಯಮ ಮತ್ತು ಚಿಕ್ಕ ದೇವಾಲಯಗಳೇ ಅಧಿಕವಾಗಿರುವವು. ಪಿರಿಯಾಪಟ್ಟಣದ ಚೆನ್ನಕೇಶವ ದೇವಾಲಯ, ಈಶ್ವರ ದೇವಾಲಯ, ಚಿಕ್ಕಹೊನ್ನೂರಿನ ರಂಗನಾಥ ದೇವಾಲಯ, ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯ, ಕಾಳಿ ದೇವಾಲಯ,

ಕೊಣಸೂರಿನ ಶಾಂತಿನಾಥ ಬಸದಿ, ಬೂವನಹಳ್ಳಿಯ ಚಂದ್ರನಾಥತೀರ್ಥಂಕರ ಬಸದಿ, ಆನೆವಾಳು ಗ್ರಾಮದ ಆನಂತನಾಥ ಬಸದಿ, ಕಂಪಲಾಪುರದ ಕರಕಂತೇಶ್ವರ ದೇವಾಲಯ. ಈ ದೇವಾಲಯಗಳ ಗರ್ಭಗೃಹ, ಅಂತರಾಳ, ಸಭಾಮಂಟಪ, ರಂಗಮಂಟಪ, ಅದಕ್ಕೆ ಮಹಾದ್ವಾರ ಮಂಟಪ, ಮುಂದೆ ದೀಪಸ್ತಂಭ ಹಾಗೂ ಉಯ್ಯಾಲೆಸ್ತಂಭಗಳನ್ನು ಒಳಗೊಂಡ ತಲವಿನ್ಯಾಸ ವಿಸ್ತೃತವೆನಿಸುತ್ತದೆ. ಕೆಲವು ದೇವಾಲಯಗಳು ಈ ಲಕ್ಷಣಗಳಲ್ಲಿ ಕೆಲವೊಂದು ಭಾಗಗಳನ್ನು ಹೊಂದಿರದೇ ಇದ್ದರೂ, ಅವುಗಳ ತಲವಿನ್ಯಾಸ ವಿಸ್ತೃತವಾಗಿಯೇ ಇರುತ್ತದೆ. ಇನ್ನು ಹೆಚ್ಚಿನ ದೇವಾಲಯಗಳ ತಲವಿನ್ಯಾಸವು ಚಿಕ್ಕಪ್ರಮಾಣದಲ್ಲಿರುತ್ತದೆ.

ಅಧಿಷ್ಠಾನ

ದೇವಾಲಯದ ಗೋಡೆ ಕೆಳಭಾಗದಲ್ಲಿ ಇರುವ ಭಾಗವೇ ಅಧಿಷ್ಠಾನ. ದೇವಾಲಯಕ್ಕೆ ಸಂಪೂರ್ಣ ಆಧಾರ ಅಧಿಷ್ಠಾನವಾಗಿರುತ್ತದೆ. ಮಸೂರಕ, ವಸ್ತ್ರಧಾರ, ಧರಾತಲಾ ಅಧಿಷ್ಠಾನಕ್ಕಿರುವ ಪರ್ಯಾಯ ಪದಗಳು. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ದೇವಾಲಯಗಳನ್ನು ಅಧಿಷ್ಠಾನ ರಹಿತ ದೇವಾಲಯ ಮತ್ತು ಅಧಿಷ್ಠಾನ ಸಹಿತ ದೇವಾಲಯಗಳೆಂದು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಈ ಎರಡೂ ರೀತಿಯ ರಚನೆಗಳು ಒಂದರಿಂದ ಇನ್ನೊಂದು ಭಿನ್ನವಾಗಿರುವುದನ್ನು ಹೊರನೋಟಕ್ಕೆ ಕಾಣಬಹುದು. ಅಧಿಷ್ಠಾನ ಸಹಿತ ದೇವಾಲಯಗಳಲ್ಲಿ ದೇವಾಲಯದ ಬೆಳವಣಿಗೆ ಮತ್ತು ಎತ್ತರಕ್ಕೆ ತಕ್ಕಂತೆ, ಮೇಲಿನ ಭಾರವನ್ನು ಹೊರಲು ಅವಶ್ಯಕವಾದ ತಳಪಾಯವನ್ನು ಕಾಣುತ್ತೇವೆ. ಆದರೆ ಅಧಿಷ್ಠಾನ ರಹಿತ ದೇವಾಲಯಗಳಲ್ಲಿ ಇವು ಕಾಣದಿರುವುದೇ ವಿಶೇಷ. ಮೇಲಿನ ಎರಡು ರೀತಿಯವಲ್ಲದೆ ಇನ್ನೊಂದು ಬಗೆಯ ದೇವಾಲಯಗಳಾದ ಇಟ್ಟಿಗೆಯ ದೇವಾಲಯಗಳಿದ್ದು, ಅವುಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸದೆ ಅಧಿಷ್ಠಾನ ಸಹಿತ ದೇವಾಲಯಗಳ ವರ್ಗದಲ್ಲೇ ಸೇರಿಸಬಹುದು. ಅಧಿಷ್ಠಾನ ರಹಿತ ದೇವಾಲಯಗಳು ಅಧಿಷ್ಠಾನ ಸಹಿತ ದೇವಾಲಯಗಳನ್ನೇ ಅನುಸರಿಸಿವೆ. ಗರ್ಭಗೃಹ, ಚಿಕ್ಕಅಂತರಾಳ, ನವರಂಗಗಳನ್ನು ಹೊಂದಿವೆ. ಕೆಲವೊಮ್ಮೆ ಈ ಭಾಗಗಳು ಇಲ್ಲದೆ ಒಂದೇ ಅಂಕಣದ ಮಂಟಪಗಳಿರುವುದೂ ಕಂಡುಬಂದಿವೆ.

ಅಧಿಷ್ಠಾನ ಪ್ರಧಾನ ದೇವಾಲಯಗಳನ್ನು ನೀತಿ ನಿಯಮಗಳಿಗೆ ಹೊಂದಾಣಿಕೆಯಾಗಿ ಕಟ್ಟಲಾಗಿರುವುದರಿಂದ ಅವು ತಮ್ಮದೇ ಆದ ಕೆಲವು ವಿಶೇಷ ಲಕ್ಷಣಗಳನ್ನು ಹೊಂದಿರುತ್ತವೆ. ಜೊತೆಗೆ ವಾಸ್ತುಗ್ರಂಥಗಳು ಕಾಲದಿಂದ ಕಾಲಕ್ಕೆ ಹೊಸತನ್ನು ಸೇರಿಸಿಕೊಂಡಿರುವುದರಿಂದ ಗ್ರಂಥಗಳನ್ನು ಅನುಸರಿಸಿ ಕಟ್ಟಿರುವ ದೇವಾಲಯಗಳೂ ಬಗೆ ಬಗೆಯಾಗಿರುತ್ತವೆ. ಕಾಲ ಬದಲಾವಣೆಯಾದಂತೆ ರಾಜನ ಅಥವಾ ಅಧಿಕಾರಿಯ ಸಂಪತ್ತು ದೇವಾಲಯಗಳ ರಚನೆಯಲ್ಲಿ

ಪ್ರಧಾನ ಪಾತ್ರವನ್ನು ವಹಿಸಿದ ಮೇಲೆ ದೇವಾಲಯದ ವಾಸ್ತುವಿನಲ್ಲಿ ಮಹತ್ತರ ಬದಲಾವಣೆಗಳಾಗಿರುತ್ತವೆ. ಅಧಿಷ್ಠಾನ ಬಲವಾಗಿರಬೇಕಾಗಿರುವುದರಿಂದ ವಿಶೇಷ ಕ್ರಮವನ್ನು ಕೈಗೊಳ್ಳುತ್ತಿದ್ದರು. ಭೂಮಿಯ ಒಳಗೆ ಒರಟು ಕಲ್ಲುಗಳನ್ನಿಟ್ಟು ಭೂಕುಸಿತವನ್ನು ತಪ್ಪಿಸಿ ಭೂಮಟ್ಟದ ಹಂತದಿಂದ ಮೇಲೆ ತಳಪಾಯವನ್ನು ನಿರ್ಮಿಸಿರುತ್ತಾರೆ. ಅಧಿಷ್ಠಾನವು ಏಕತಲ ಅಧಿಷ್ಠಾನದಂತೆ ಪ್ರಾರಂಭವಾದರೂ ಮೇಲಕ್ಕೆ ಹೋದಂತೆ ಕೆಲವು ಸೇರ್ಪಡೆಗಳನ್ನು ಮಾಡಿಕೊಳ್ಳುತ್ತಿತ್ತು. ಜಗತಿ, ಕುಮುದ, ಗಳ, ಕಂಪ ಹಾಗೂ ಪಟ್ಟಿಯನ್ನು ಹೊಂದಿರುತ್ತದೆ. ಈ ಪಟ್ಟಿಯ ಮೇಲಿನಿಂದ ಭಿತ್ತಿ ಪ್ರಾರಂಭವಾಗುತ್ತದೆ. ಕೆಲವು ದೇವಾಲಯಗಳ ಭಿತ್ತಿಯಲ್ಲಿ ಕೋಷ್ಠಕ ಅಥವಾ ಗೂಡುಗಳನ್ನು ರಚಿಸಿ ಪರಿವಾರ ದೇವತೆಗಳನ್ನು ಸ್ಥಾಪಿಸಿರುವುದನ್ನು ಕಾಣಬಹುದು. ಆದರೆ ಕೋಷ್ಠಕಗಳನ್ನು ಬಿಡಿಸಿರುವ ಉದಾಹರಣೆಗಳು ಕಡಿಮೆ. ಕೊನೆಯ ತಳದ ವೇದಿಯಲ್ಲಿ ವಾಹನಗಳಾದ ಗಜ, ಸಿಂಹ ಅಥವಾ ನಂದಿಯ ಸ್ಥಾಪನೆಯಾಗಿರುತ್ತದೆ. ಈ ಸ್ಥಳದಲ್ಲಿ ಓಡಾಡಲು ಸ್ವಲ್ಪ ಸ್ಥಳವಿರುತ್ತದೆ. ಮೂಲದೇವತೆಯ ರೂಪಗಳು ಅಥವಾ ಪರಿವಾರ ಶಿಲ್ಪಗಳ ಪ್ರತಿಷ್ಠೆ ಕೂಡ ಈ ಭಾಗದಲ್ಲಿ ಆಗಿ ಇವಕ್ಕೆ ಮಹಾನಾಸಿಯ ಗೂಡು ಮೇಲೆ ಬಂದಿರುತ್ತದೆ. ವೇದಿಯ ಮೇಲೆ ಗ್ರೀವ ಬಂದು ಇದರ ಮೇಲೆ ಸ್ತೂಪಿ ಬರುತ್ತದೆ. ಸ್ತೂಪಿಯು ವೃತ್ತಾಕಾರ, ಚೌಕಾಕರ ಅಥವಾ ಅಷ್ಟ ಮೂಲೆಯಾಕಾರದಲ್ಲಿರಬಹುದು, ಗುಮ್ಮಟದ ಮೇಲೆ ಮಹಾಪದ್ಮ ಬಂದು ಅದರ ನಡುವೆ ಕಲ್ಲಿನ ಕಳಸವಿರುತ್ತದೆ.

ಅಧಿಷ್ಠಾನ ಪ್ರಧಾನ ದೇವಾಲಯಗಳಲ್ಲಿ ಸರಳ ಮತ್ತು ಸಂಕೀರ್ಣ ಎಂದು ಎರಡು ವಿಧ. ಸರಳ ಅಧಿಷ್ಠಾನಗಳು ನಾಲ್ಕು ಕಡೆಯೂ ಸರಳರೇಖೆಯಂತೆ ನೇರವಾಗಿದ್ದು ಜಗತಿ, ತ್ರಿಪಟ್ಟಕುಮುದ, ಗಳ, ಪಟ್ಟಿ ಇರುತ್ತದೆ. ಉಳಿದ ಸಂಕೀರ್ಣ ಅಧಿಷ್ಠಾನಗಳಲ್ಲಿ ತಳಪಾಯ ಚೌಕಾಕಾರವಾಗಿದ್ದರೂ ಹೆಚ್ಚಿನ ಅಲಂಕಾರ ಮಾಡುವ ಉದ್ದೇಶದಿಂದ ಕರ್ಣ, ಪ್ರತಿಭದ್ರ, ಭದ್ರ, ಭಾಗಗಳನ್ನು ತಂದು ಅಧಿಷ್ಠಾನದಲ್ಲಿಯೂ ಉಬ್ಬುತಗ್ಗುಗಳನ್ನು ನಿರ್ಮಿಸಿದೆ. ಸರಳ ಅಧಿಷ್ಠಾನದ ಭಾಗಗಳ ಜೊತೆಗೆ ಕಪೋತ ಬಂಧ, ಪ್ರತಿಮುಖ ಭಾಗಗಳು ಬಂದಿರುತ್ತವೆ.

ಚಂಗಾಳ್ವರ ಕೆಲವು ದೇವಾಲಯಗಳಲ್ಲಿ ಕಾಣಬರುವುದು ಸರಳ ಪಾದಬಂಧ ಅಧಿಷ್ಠಾನ, ಇದರಲ್ಲಿ ಜಗತಿ, ತ್ರಿಪಟ್ಟಕುಮುದ, ಎತ್ತರವಾದ ಗಳ ಮತ್ತು ಅದರಲ್ಲಿ ಗಳಪಾದ ಮತ್ತು ಪಟ್ಟಿ ಬಂದಿರುತ್ತದೆ. ಇಂತಹ ಅಧಿಷ್ಠಾನಗಳನ್ನು ಹಿಟ್ನಹೆಬ್ಬಾಗಿಲಿನ ಜನಾರ್ಧನ ದೇವಾಲಯ, ಪಿರಿಯಾಪಟ್ಟಣದ ಚನ್ನಕೇಶವ ದೇವಾಲಯ, ಐಲಾಪುರದ ನಂದಿ ಬಸವೇಶ್ವರ ದೇವಾಲಯ, ಜಾರ್ಸೆಯ ಬಸವೇಶ್ವರ ದೇವಾಲಯಗಳನ್ನು ಕಾಣಬಹುದು. ಹೀಗಾಗಿ ವೇದಿಯ ಮೇಲೆ ರಚಿತವಾಗಿದ್ದು ಪಾದಬಂಧವೇ ಇಲ್ಲಿ ಇತ್ತೆಂದು ತಿಳಿಯುತ್ತದೆ. ಭಿತ್ತಿಯ ಉಬ್ಬುಕಂಬಗಳಿಗೆ

ನೇರವಾಗಿ ಗಳದ ಭಾಗದಲ್ಲಿ ಗಳ ಪಾದಗಳು ಬಂದಿರುತ್ತವೆ. ಗಳದ ಮೇಲಿನ ಪಟ್ಟಿಯು ತ್ರಿಪಟ್ಟ ಕುಮುದದ ನೇರಕ್ಕೆ ಚಾಚಿದ್ದು ಕೆಲವೊಮ್ಮೆ ವೃತ್ತಾಕಾರದ ಚಂದ್ರಮಂಡಲ ಅಲಂಕಾರವನ್ನು ಹೊಂದಿವೆ. ಒಟ್ಟಿನಲ್ಲಿ ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ದೇವಾಲಯಗಳ ಅಧಿಷ್ಠಾನಗಳನ್ನು ಗಮನಿಸಿದಾಗ ಇವು ತಮ್ಮ ಸಮಕಾಲೀನರಾದ ಚಾಲುಕ್ಯರಿಂದಾಗಲಿ, ಚೋಳರಿಂದಾಗಲಿ, ಪೂರ್ಣ ಪ್ರಭಾವಿತರಾಗದೇ ಇಲ್ಲಿಯೇ ಇದ್ದಿರಬಹುದಾದ ವಾಸ್ತು ಪ್ರಕಾರವನ್ನು ಬಳಸಿರುವುದು ಕಂಡುಬರುತ್ತದೆ.

ಅಧಿಷ್ಠಾನದ ತಲವಿನ್ಯಾಸವು ಚೌಕ ಅಥವಾ ಆಯತಾಕಾರವಾಗಿರುವುದು. ಈ ಪರಿಸರದ ದೇವಾಲಯಗಳು ಹೆಚ್ಚಿನ ಅಲಂಕರಣೆ ಹೊಂದದೆ ಸರಳವಾಗಿವೆ ಮತ್ತು ಇಲ್ಲಿ ಕಂಡುಬರುವ ದೇವಾಲಯಗಳ ಬಹುತೇಕ ಅಧಿಷ್ಠಾನಗಳು ಮಣ್ಣಿನಿಂದ ಮುಚ್ಚಿಕೊಂಡಿರುವವು. ಉದಾಹರಣೆಗೆ ಪಿರಿಯಾಪಟ್ಟಣದ ಚನ್ನಕೇಶವ ದೇವಾಲಯ, ಹಿಟ್ನೆಹೆಬ್ಬಾಗಿಲು ಗ್ರಾಮದಲ್ಲಿರುವ ಚೆನ್ನಕೇಶವ ದೇವಾಲಯ, ಮಹಾಬಲೇಶ್ವರ ದೇವಾಲಯ, ಮೇಲೂರಿನ ಈಶ್ವರ ದೇವಾಲಯ. ಆದರೆ ಅಧಿಷ್ಠಾನ ಎತ್ತರವಾಗಿರುವ ಭೂವನಹಳ್ಳಿಯ ಚಂದ್ರನಾಥಬಸದಿ, ಆನೆವಾಳು ಗ್ರಾಮದ ಆದಿನಾಥ ಬಸದಿ ಇಂದಿಗೂ ಉತ್ತಮವಾಗಿದ್ದು ಸಂಪೂರ್ಣವಾಗಿ ಕಲ್ಲಿನಿಂದ ನಿರ್ಮಿತಿಗೊಂಡಿರುವವು. ಕಿತ್ತೂರು ಗ್ರಾಮದಲ್ಲಿರುವ ವಿಜಯನಗರ ಕಾಲದ ಆಂಜನೇಯ ದೇವಾಲಯದ ಅಧಿಷ್ಠಾನದಲ್ಲಿ ಮಾತ್ರ ಇಡೀ ದೇವಾಲಯವನ್ನೆ ಹೊತ್ತು ನಿಂತಿರುವ ಗಜಶಾಖೆ ಅಥವಾ ಗಜದಳ ಸಾಲುಗಳನ್ನು ಗಮನಿಸಬಹುದು. ಇವುಗಳನ್ನು ಬಿಟ್ಟರೆ ಬಹುತೇಕ ದೇವಾಲಯಗಳ ಅಧಿಷ್ಠಾನ ಸರಳ ರೀತಿಯಿಂದ ಕೂಡಿರುವವು.

ಭಿತ್ತಿ

ಅಧಿಷ್ಠಾನದ ನಂತರ ಅದರ ಮೇಲೆ ಬರುವ ಭಾಗವೇ ಭಿತ್ತಿ ಅಥವಾ ಗೋಡೆ. ಶಿಲಾ ನಿರ್ಮಿತವಾದ ದೇವಾಲಯಗಳಲ್ಲಿ ಅನೇಕವು ಇಂದಿಗೂ ಸುಸ್ಥಿತಿಯಲ್ಲಿದ್ದು, ಉಳಿದ ಮಿಶ್ರಧಾತುಗಳಿಂದ ಮತ್ತು ಇಟ್ಟಿಗೆಗಳಿಂದ ನಿರ್ಮಿತವಾದ ದೇವಾಲಯಗಳು ಬಹುಮಟ್ಟಿಗೆ ನಾಶವಾಗಿರುವುದರಿಂದ ಅಥವಾ ಉಳಿದಿದ್ದರೂ ಅವುಗಳು ಸಂಖ್ಯೆಯಲ್ಲಿ ಕಡಿಮೆ ಇರುವವು. ಇದ್ದರೂ ಕಾಲಾಂತರದಲ್ಲಿ ಮಾರ್ಪಾಟು ಹೊಂದಿರುವ ಸಾಧ್ಯತೆಯಿರುವುದರಿಂದ ಅವುಗಳ ಮೂಲರೂಪ ಹೀಗೆ ಇತ್ತೆಂದು ಹೇಳಲು ಬರುವಂತಿಲ್ಲ. ಮೇಲೂರು, ಮರದೂರು ಮೊದಲಾದ ಕಡೆ ಇಟ್ಟಿಗೆಯ ರಚನೆಗಳು ಇದ್ದು ಮತ್ತು ಇರುವ ಗುರುತುಗಳು ಸ್ಪಷ್ಟವಾಗಿ ಕಾಣಬರುತ್ತವೆ. ಕಲ್ಲಿನ ರಚನೆಗಿಂತ ಇಟ್ಟಿಗೆಯ ರಚನೆಗಳು ನಾಶವಾಗುವುದರಿಂದಲೂ, ಮಳೆಗಾಳಿಗಳ ಹೊಡೆತದಿಂದಲೂ, ಮುಖ್ಯವಾಗಿ ದೇವಾಲಯದ ಮೇಲೆ ಬೆಳೆಯಬಹುದಾದ ಕುರುಚಲು

ಗಿಡಗಳ ಕಾರಣದಿಂದ ಬೇಗ ನಾಶವಾಗಿವೆ. ಈಗ ದೊಡ್ಡನೆರ್ಲೆಯ ಈಶ್ವರ ದೇವಾಲಯವನ್ನು ಬಿಟ್ಟು ಯಾವ ದೇವಾಲಯವು ಉತ್ತಮ ಸ್ಥಿತಿಯಲ್ಲಿ ಉಳಿದಿಲ್ಲ. ಇದು ಸಹ ಅವನತಿಯ ಅಂಚಿನಲ್ಲಿದೆ.

ಮೇಲಿನ ಕೆಲವು ದೇವಾಲಯಗಳ ಭಿತ್ತಿ ಕಲ್ಲಿನವೇ ಆಗಿವೆ. ಕಲ್ಲಿನ ಭಿತ್ತಿಯು ಅಧಿಷ್ಠಾನವನ್ನು ಅನುಸರಿಸಿದ ರಚನೆಗಳಾಗಿವೆ. ಅಧಿಷ್ಠಾನವು ಹೇಗೆ ಮೂಲೆಗಳನ್ನು ಮತ್ತು ಉಬ್ಬುಗಳನ್ನು ಹೊಂದಿರುತ್ತದೆಯೋ ಅದೇ ರೀತಿಯಲ್ಲಿ ಭಿತ್ತಿಯೂ ಮೇಲಕ್ಕೆ ಬಂದಿರುತ್ತದೆ. ಸರಳವಾದ ರಚನೆಯುಳ್ಳ ದೇವಾಲಯಗಳಲ್ಲಿ ಉಬ್ಬು ಕಂಬಗಳನ್ನು ಬಿಡಿಸಿರುತ್ತಾರೆ. ಸಾಮಾನ್ಯವಾಗಿ ದಪ್ಪವಾದ ಚಪ್ಪಡಿಗಳನ್ನು ಜೋಡಿಸಿ ಅನಂತರ ಈ ಉಬ್ಬು ಕಂಬಗಳನ್ನು ಕಡೆದಿರಬೇಕು, ಇಲ್ಲವೆ ಅರೆಬರೆಯಾಗಿ ಉಬ್ಬು ಕಂಬಗಳನ್ನು ಚಪ್ಪಡಿಯಲ್ಲಿ ಬಿಡಿಸಿ ದೇವಾಲಯದ ಭಾಗಗಳಿಗೆ ಜೋಡಿಸಿದ ನಂತರ ಪೂರ್ಣವಾಗಿ ಕೆತ್ತುತ್ತಿದ್ದಿರಬೇಕು. ದಪ್ಪ ಚಪ್ಪಡಿಗಳನ್ನು ಜೋಡಿಸಿರುವುದರಿಂದ ಮಧ್ಯ ಜಾಗವೂ ಇರುವುದಿಲ್ಲ. ಚಪ್ಪಡಿಗಳ ಮಧ್ಯೆ ಒಳ ಕಂಬಗಳನ್ನು ಸೇರಿಸಿದ್ದು ದೇವಾಲಯದ ಭಾರವನ್ನು ಕಂಬಗಳು ಹೊರುವಂತೆ ರೂಪಿಸಲಾಗಿದೆ. ಇದಲ್ಲದೆ ಕಂಬಗಳು ದೇವಾಲಯದ ಒಳ ಭಾಗದಲ್ಲಿ ಅರ್ಧ ಕಾಣುವಂತೆ ಬಿಡಿಸಿರುತ್ತಾರೆ. ಕಂಬಗಳಲ್ಲಿ ಗೋಡೆಯ ಒಳಗೆ ಸೇರಿರುವ ಭಾಗವನ್ನು ಅಂದಗೊಳಿಸದೆ ಹೊರಭಾಗವನ್ನು ವಿನ್ಯಾಸಗೊಳಿಸಿರುತ್ತಾರೆ. ಸಂಗಂಶೆಟ್ಟಿಹಳ್ಳಿಯ ಕೊಳ್ಳಿಮಲ್ಲಪ್ಪ ದೇವಾಲಯದ ಕಂಬಗಳಲ್ಲಿ ಸಿಲಿಂಡರಿನ ಭಾಗದಿಂದ ಕೆಳಗೆ ಮಾಲಾಲಂಕಾರವನ್ನು ಬಿಡಿಸಿರುತ್ತಾರೆ. ಇಂತಹ ಅಲಂಕಾರವನ್ನು ಬಾರ್ಸೆ ಗ್ರಾಮದ ಈಶ್ವರ ದೇವಾಲಯಗಳಲ್ಲಿ ಕಾಣಬಹುದು.

ದೇವಾಲಯದ ಗೋಡೆಗೆ ಭಿತ್ತಿ ಎಂದು ಕರೆಯುವರು. ದೇವಾಲಯ ರಕ್ಷಣೆಗಾಗಿ ಕಟ್ಟಿರುವ ಭಾಗಗಳಲ್ಲಿ ಭಿತ್ತಿಯೂ ಪ್ರಮುಖವಾಗಿದೆ. ಇದು ಅಧಿಷ್ಠಾನ ಮತ್ತು ಪ್ರಸ್ತರದ ನಡುವೆ ಇರುವುದು. ಭಿತ್ತಿಯನ್ನು ಸ್ಥೂಲವಾಗಿ ಅದರ ರಚನೆಗೆ ಬಳಸಿರುವ ವಸ್ತುಗಳ ಆಧಾರದ ಮೇಲೆ ಅದನ್ನು ಫಲಕಕುಡ್ಯ, ಜಾಲಕಕುಡ್ಯ ಅಥವಾ ರಂಧ್ರಗಳಿಂದ ಕೂಡಿದ ಗೋಡೆ ಅಥವಾ ಇಟ್ಟಿಗೆಗಳಿಂದ ಮಾಡಿದ ಭಿತ್ತಿ, ಅಥವಾ ಕಲ್ಲಿನಿಂದ ಮಾಡಿದ ಭಿತ್ತಿ ಎಂದು ವಿವಿಧ ಹೆಸರುಗಳಿಂದ ಕರೆಯುವರು. ಭಿತ್ತಿಯ ವಿನ್ಯಾಸವು ಅಧಿಷ್ಠಾನದ ವಿನ್ಯಾಸವನ್ನು ಅನುಸರಿಸುತ್ತದೆ. ಆದ್ದರಿಂದ ಅಧಿಷ್ಠಾನಕ್ಕನುಗುಣವಾಗಿ ಆಯತ, ಚೌಕ, ವೃತ್ತ, ಗಜವೃಷ್ಠಾಕಾರವನ್ನು ಹೊಂದಿರುವುದು. ಬೆಟ್ಟದಪುರದಲ್ಲಿರುವ ಅನ್ನದಾನಿಮಲ್ಲಿಕಾರ್ಜುನ ದೇವಾಲಯ, ಚಿಕ್ಕಹೊನ್ನೂರಿನ ರಂಗನಾಥ ದೇವಾಲಯ, ಕೆಸುವಿನಕೆರೆ ಗ್ರಾಮದ ಶಿವ ದೇವಾಲಯ, ಪಿರಿಯಾಪಟ್ಟಣದ ಮತ್ತ್ಯ ಆಂಜನೆಯ ದೇವಾಲಯ, ಮಸಣಿಕಮ್ಮ ದೇವಾಲಯ, ಕನ್ನಂಬಾಡಿಯಮ್ಮ ದೇವಾಲಯಗಳ

ಭಿತ್ತಿಯಲ್ಲಿ ಯಾವುದೇ ಧಾರ್ಮಿಕ ಅಥವಾ ಸಾಮಾಜಿಕ ಶಿಲ್ಪಗಳ ಕೆತ್ತನೆ ಕಂಡುಬರದೇ ಸರಳವಾಗಿರುವವು. ಇಲ್ಲಿಯ ಭಿತ್ತಿಗಳನ್ನು ಕಣಶಿಲೆ ಅಥವಾ ಗ್ರಾನೈಟ್ ಶಿಲೆಗಳಿಂದ ಕೆತ್ತಿ ಒಂದರ ಮೇಲೊಂದರಂತೆ ಕೂರಿಸಲಾಗಿದೆ. ಇಲ್ಲಿಯ ಭಿತ್ತಿಗಳು ಮೂರರಿಂದ ೫ ಅಡಿ ಎತ್ತರ ಹಾಗೂ ಎರಡರಿಂದ ಮೂರು ಅಡಿ ಅಗಲವಾಗಿರುವವು. ದೇವಾಲಯಗಳ ಭಿತ್ತಿಯಲ್ಲಿ ಅಲ್ಪ ಪ್ರಮಾಣದ ನಾಗಶಿಲ್ಪ, ಆಮೆ, ಮಿಥುನ ಶಿಲ್ಪಗಳನ್ನು ಬಿಟ್ಟರೆ ಯಾವುದೇ ರೀತಿಯ ಉಬ್ಬುಶಿಲ್ಪಗಳ ಕೆತ್ತನೆ ಕಂಡುಬರುವುದಿಲ್ಲ.

ದೇವಕೋಷ್ಠ

ಪರಿವಾರ ದೇವತೆಗಳಿಗಾಗಿ ಪ್ರತ್ಯೇಕ ಮಂಟಪಗಳನ್ನು ರಚಿಸಿರುವ ಉದಾಹರಣೆಗಳು ಕಡಿಮೆಯೆಂದೇ ಹೇಳಬಹುದು. ಬಸದಿಗಳಲ್ಲಿ ಈ ಬಗೆಯ ಪರಿವಾರ ದೇವತೆಗಳು ಬರದೆ ತೀರ್ಥಂಕರರು ಮಾತ್ರ ಬರುತ್ತಾರೆ. ಆದರೆ ಅವರಿಗೆ ಪ್ರತ್ಯೇಕವಾದ ಮಂಟಪಗಳಿರುವುದಿಲ್ಲ. ಬಸದಿಯಲ್ಲಿಯೇ ಒಂದೆಡೆ ಸ್ಥಳವನ್ನು ಕಲ್ಪಿಸಿರುತ್ತಾರೆ. ಆನೆವಾಳು ಗ್ರಾಮದ ಅನಂತನಾಥ ಬಸದಿಯಲ್ಲಿ ಒಂದು ಕಡೆಯ ಭಿತ್ತಿಯಲ್ಲಿ ದೇವತಾ ಶಿಲ್ಪಗಳನ್ನು ನಿರ್ಮಿಸಲಾಗಿದೆ. ಕೆಲವು ದೇವಾಲಯಗಳನ್ನು ಬಿಟ್ಟರೆ ಉಳಿದಂತೆ ಪರಿವಾರ ದೇವತೆಗಳನ್ನು ಅಂತರಾಳ ಅಥವಾ ನವರಂಗದಲ್ಲಿಯೇ ಇಟ್ಟಿರುತ್ತಾರೆ. ಮೇಲೂರಿನ ಈಶ್ವರ ದೇವಾಲಯ, ಹರದೂರಿನ ಸೋಮೇಶ್ವರ ದೇವಾಲಯ, ಪಿರಿಯಾಪಟ್ಟಣದ ಮಸಣಿಕಮ್ಮ ದೇವಾಲಯದ ಹೊರ ಗೋಡೆಯಲ್ಲಿ ಗೂಡುಗಳಿದ್ದು ಅವುಗಳಲ್ಲಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿರುವರು. ಅಲ್ಲಿದ್ದ ಮೂರ್ತಿಗಳು ಈಗ ಕಾಣುತ್ತಿಲ್ಲ. ಉಳಿದವುಗಳಲ್ಲಿ ಸ್ಪಷ್ಟವಾಗಿ ದೇವಾಲಯದ ಒಳಗೆ ನವರಂಗದಲ್ಲಿ ಪ್ರತಿಷ್ಠಾಪಿಸಿದ್ದರು. ದೇವಾಲಯದ ಗೋಡೆಗಳಲ್ಲಿ ಗೂಡುಗಳನ್ನು ಮಾಡಿದಾಗ ಗೂಡುಗಳ ಎರಡೂ ಬದಿಯಲ್ಲಿ ಅರೆಗಂಭಗಳನ್ನು ರಚಿಸಿ ಆ ಕಂಬಗಳ ಮೇಲೆ ಪಟ್ಟಿಕೆಗಳನ್ನಿಟಿರುತ್ತಾರೆ. ಬೆಟ್ಟದ ತುಂಗದ ಈಶ್ವರ ದೇವಾಲಯದಲ್ಲಿ ಇಂತಹ ಪಟ್ಟಿಕೆಗಳು ಬಂದಿದ್ದು ಯಾವ ಅಲಂಕಾರವೂ ಇಲ್ಲ. ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯದಲ್ಲಿನ ಗೂಡುಗಳಲ್ಲಿ ಎರಡು ಮಾತ್ರ ಉಳಿದಿದ್ದು ಒಂದರ ಮೇಲೆ ಶಾಲಾ ಭಾಗವನ್ನು ಬಿಡಿಸಿದೆ. ಇನ್ನೊಂದರ ಮೇಲೆ ವಲಭಿ, ಕಪೋತಗಳನ್ನು ಬಿಡಿಸಿದೆ. ನಂತರ ಅದರ ಮೇಲೆ ಚಿಕ್ಕದಾದ ಶಾಲಾಕೋಷ್ಠವನ್ನು ಬಿಡಿಸಿದೆ. ಈ ಭಾಗಕ್ಕೂ ಮೇಲೆ ಸಿಂಹವಕ್ತ್ರ ಬಿಡಿಸಿ, ಎರಡೂ ಕಡೆ ಹೂ ಬಳ್ಳಿಗಳನ್ನು ಬಿಡಿಸಿದೆ. ಇನ್ನೊಂದರಲ್ಲಿ ಗೂಡಿನ ಮೇಲೆ ಒಂದು ಸಾಲು ಪುಷ್ಪಗಳ, ಸಿಂಹಗಳ ಅಲಂಕಾರ ರಚಿಸಲು ಪ್ರಯತ್ನಿಸಿದ್ದು ಅದರ ಮೇಲೆ ಎಂಟು ದಳದ ಕಮಲ ಬಿಡಿಸಿದೆ. ಇದರ ಮೇಲೆ ಸಿಂಹವಕ್ತ್ರವಿದ್ದು ಎಂಟು ದಳದ ಹೂವಿನ ಎರಡೂ ಕಡೆಗೆ ಮಕರಗಳ ಅಲಂಕಾರವನ್ನು

ಬಿಡಿಸಿದೆ. ದೇವಾಲಯದಲ್ಲಿ ಬೆಳಕಿನ ಜಾಲಗಳಲ್ಲಿ ಕೋಷ್ಠ ಶಿಲ್ಪಗಳನ್ನು ಬಿಡಿಸಿರುತ್ತಾರೆ. ಅಧಿಷ್ಠಾನ ರಹಿತ ದೇವಾಲಯಗಳಲ್ಲಿ ಈ ಭಾಗ ಬರಲು ಸಾಧ್ಯ ಇಲ್ಲ.

ಕಪೋತ

ದೇವಾಲಯ ವಾಸ್ತುಶಿಲ್ಪಗಳಲ್ಲಿ ಕಪೋತ ಒಂದು ಪ್ರಮುಖವಾದದ್ದು. ದೇವಾಲಯದ ಅಲಂಕರಣೆ ಮತ್ತು ಸೌಂದರ್ಯದ ದೃಷ್ಟಿಯಿಂದ ಇದನ್ನು ಅಳವಡಿಸಿರುವರು. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬರುವ ಎಲ್ಲಾ ದೇವಾಲಯಗಳಲ್ಲಿಯೂ ಕಪೋತ ಕಂಡುಬರುವುದಿಲ್ಲ. ಆದರೆ ಅಧಿಷ್ಠಾನವಿರುವ ಕೆಲವು ದೇವಾಲಯಗಳಲ್ಲಿ ಕಾಣಬಹುದು. ಬಾರ್ಸೆ ಗ್ರಾಮದಲ್ಲಿರುವ ಬಸವೇಶ್ವರ ದೇವಾಲಯ, ಕೆಸುವಿನ ಕೆರೆಯ ಶಿವದೇವಾಲಯ ಹಾಗೂ ನಂದಿನಾಥಪುರದ ಬಸವೇಶ್ವರ ದೇವಾಲಯ, ಪಿರಿಯಾಪಟ್ಟಣದ ಈಶ್ವರ ದೇವಾಲಯಗಳಲ್ಲಿ ಕಾಣಬಹುದು. ಇಲ್ಲಿರುವ ದೇವಾಲಯಗಳಲ್ಲಿ ಕಪೋತವು ಪಟ್ಟಿಕೆಯ ಭಾಗದ ಮೇಲೆ ಮೇಲಿಂದ ಕೆಳಕ್ಕೆ ಬಾಗಿದ ಭಾಗವಾಗಿದ್ದು ಬೋಳಾಗಿರುತ್ತದೆ. ಕಪೋತವು ಪಾರಿವಾಳದ ಆಕಾರದಲ್ಲಿರುವುದು. ಆದರೆ ಹೆಚ್ಚಿನ ರೀತಿಯಲ್ಲಿ ಅಲಂಕರಣೆಯಿಂದ ಕೂಡಿರುವುದಿಲ್ಲ. ಕಪೋತವು ಪಟ್ಟಿಕೆ ಭಾಗದ ಮೇಲಿನಿಂದ ಕೆಳಕ್ಕೆ ಬಾಗಿದ ಭಾಗವಾಗಿದ್ದು ಇದು ದಪ್ಪವಾಗಿ ಬೋಳಾಗಿರುತ್ತದೆ. ಇಂತಹ ಬೋಳು ಭಾಗವನ್ನು ತುಂಬಿದಂತೆ ಕಾಣಲು ಕೆಲವೊಮ್ಮೆ ವಲ್ಲೀಮಾಲೆಗಳಿಂದ, ಚಂದ್ರಮಂಡಲಗಳಿಂದ ಅಲಂಕಾರಗೊಳಿಸಿರುತ್ತಾರೆ. ಭಿತ್ತಿಯಿಂದ ಉಬ್ಬು ಕಂಬಗಳು ಬೋದಿಗೆಯವರೆಗೆ ಕಾಣಿಸಿಕೊಂಡು ನಿಂತರೂ, ಕಂಬಗಳ ಭಾಗವೆಂಬಂತೆ ಅವುಗಳಿಗೆ ನೇರವಾಗಿ ಕಪೋತ ಭಾಗದಲ್ಲಿ ನಾಸಿಗಳು ಕಾಣಿಸಿಕೊಳ್ಳುತ್ತವೆ.

ಕಪೋತ ಪಂಜರಗಳು ಕಪೋತಕ್ಕೆ ಸಮಾನಾಂತರವಾಗಿ ಪ್ರಾರಂಭವಾಗಿ ಕಪೋತದ ಕ್ಷುದ್ರನಾಸಿಗಳಿಗಿಂತ ದೊಡ್ಡದಾಗಿ, ಕಪೋತದ ಭಾಗಕ್ಕಿಂತ ಸ್ವಲ್ಪ ಮೇಲಿನವರೆಗೆ ಬೆಳೆದಿರುತ್ತದೆ. ಸಂಗರಶೆಟ್ಟಿಹಳ್ಳಿ ಗ್ರಾಮದ ಕೊಳ್ಳಿಮಲ್ಲಪ್ಪ ದೇವಾಲಯದಲ್ಲಿ ಇಂತಹ ಎತ್ತರದ ವಿಗ್ರಹಗಳನ್ನು ಕಾಣಬಹುದು. ಕಪೋತದಲ್ಲಿ ಬರುವ ಈ ಕ್ಷುದ್ರನಾಸಿಯಿಂದ ಮತ್ತು ಕಪೋತ ಪಂಜರಗಳಿಂದ ದೇವಾಲಯವು ಆಕರ್ಷಕವಾಗಿ ಕಾಣುತ್ತದೆ. ಕಪೋತದಲ್ಲಿ ನಾಸಿಗಳೇ ಅಲ್ಲದೆ ಮೂಲೆಗಳಲ್ಲಿ ಲತಾಮಂಡಲ ಅಥವಾ ಬಳ್ಳಿಗಳ ಅಲಂಕಾರವನ್ನು ಕೆತ್ತಿರುತ್ತಾರೆ.

ಶಿಖರ

ದೇವಾಲಯದ ಭಾಗಗಳಲ್ಲಿ ಶಿಖರವು ಪ್ರಮುಖವಾಗಿದೆ. ಗ್ರೀವ ಮತ್ತು ಸ್ತೂಪಿಯ ನಡುವೆ ಬಹುಪಾಲು ಗುಮ್ಮಟದ ಅಕಾರದಲ್ಲಿರುವುದೇ ಶಿಖರ. ಇದು ವಿವಿಧ ವಿನ್ಯಾಸಗಳಿಂದ ಕೂಡಿ ದೇವಾಲಯಕ್ಕೆ ಶೋಭೆಯನ್ನು ತರುವಲ್ಲಿ ಇದರ ಪಾತ್ರ ಮುಖ್ಯ. ಶಿಖರವು ಮೂಲ

ದೇವಾಲಯದ ತಳವಿನ್ಯಾಸವನ್ನು ಅನುಸರಿಸಿ ರಚಿತವಾಗಿರಬಹುದು, ಇಲ್ಲವೇ ಬೇರೆ ವಿನ್ಯಾಸದಲ್ಲಿರಬಹುದು. ಏಕತಳ ದೇವಾಲಯಗಳಲ್ಲಿ ಕೇವಲ ಮಟ್ಟಸ ಛಾವಣಿಯನ್ನು ಹೊಂದಿದ್ದು ಕಪೋತದ ಮೇಲಿನ ಭಾಗವಾದ ಪ್ರತಿಮುಖಕ್ಕೆ ಕೊನೆಯಾಗುತ್ತದೆ. ಇಂತಹ ಮಟ್ಟಸ ಛಾವಣಿ ದೇವಾಲಯಗಳನ್ನು ಮುಂಡಮಾಲಾ ಎಂದು ಕರೆಯುತ್ತಾರೆ. ಮುಂಡಮಾಲಾ ದೇವಾಲಯ ಭಾಗಗಳಿಗೆ ಕೆಲವೊಮ್ಮೆ ವೇದಿ ನಿರ್ಮಿಸಿ ಶಿಖರವನ್ನು ನಿರ್ಮಿಸಿರುವುದೂ ಉಂಟು. ಬಹುತಲ ದೇವಾಲಯಗಳಲ್ಲಿ ಶಿಖರವಿರಲೇಬೇಕು. ಇಲ್ಲಿಯ ಶಿಖರಗಳು ಸಾಮಾನ್ಯವಾಗಿ ಚೌಕಾಕಾರದ ಶಿಖರವಿರುವ ತಲವಿನ್ಯಾಸವನ್ನು ಹೊಂದಿವೆ. ಒಂದು ದೇವಾಲಯದ ಶೈಲಿಯನ್ನು ನಿರ್ಧರಿಸುವಲ್ಲಿ ಶಿಖರದ ಆಕಾರವೇ ಪ್ರಧಾನ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ಗರ್ಭಗೃಹಗಳ ಶಿಖರಗಳನ್ನು ಸಾಮಾನ್ಯವಾಗಿ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಈ ಶಿಖರಗಳು ದ್ರಾವಿಡ ಮಾದರಿಯಲ್ಲಿದ್ದು, ಗರ್ಭಗೃಹದ ಉದ್ದಗಲಕ್ಕೂ ವ್ಯಾಪಿಸಿರುತ್ತವೆ. ದ್ರಾವಿಡ ಮಾದರಿಯಲ್ಲಿ ಏಕತಲ ಮಾದರಿಯ ಶಿಖರಗಳೇ ಹೆಚ್ಚು. ಇಂತಹ ಶಿಖರಗಳನ್ನು ಕಿತ್ತೂರಿನ ಈಶ್ವರ ದೇವಾಲಯ, ನಾರಾಯಣಸ್ವಾಮಿ ದೇವಾಲಯ, ಮರದೂರಿನ ಈಶ್ವರ ದೇವಾಲಯ, ಐಲಾಪುರದ ನಂದಿ ಬಸವೇಶ್ವರ ದೇವಾಲಯ, ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನ ದೇವಾಲಯ, ಹರದೂರು ಗ್ರಾಮದ ಈಶ್ವರ ದೇವಾಲಯ, ಸೋಮೇಶ್ವರ ದೇವಾಲಯಗಳಲ್ಲಿ ಕಾಣಬಹುದು. ಸಾಮಾನ್ಯವಾಗಿ ಶಿಖರಗಳ ಮೇಲೆ ಯಾವುದೇ ಗಾರೆ ಶಿಲ್ಪಗಳು ಕಂಡುಬುರುವುದಿಲ್ಲ. ಆದರೆ ಅಪರೂಪವಾಗಿ ಕುಡುಕೂರಿನ ಬಸವೇಶ್ವರ ದೇವಾಲಯ, ಐಲಾಪುರದ ನಂದಿಬಸವೇಶ್ವರ, ದೊಡ್ಡನೆರ್ಲೆಯ ಈಶ್ವರ ದೇವಾಲಯಗಳಲ್ಲಿ ಕಾಣಬಹುದು. ಶಿಖರಗಳ ನಾಲ್ಕು ದಿಕ್ಕಿಗೂ ಶೈವ ದೇವಾಲಯವಾದರೆ ನಂದಿ, ಲಿಂಗ ಶಿಲ್ಪಗಳನ್ನು ಕಾಣಬಹುದು.

ಕಳಸ ದೇವಾಲಯದ ಊರ್ಧ್ವಮುಖದಲ್ಲಿನ ಕೊನೆಯ ಭಾಗ. ಈ ಭಾಗವನ್ನು ಸ್ತೂಪಿಯೆಂದೂ ಕರೆಯುತ್ತಾರೆ. ಇದು ಶಾಸ್ತ್ರ ರೀತ್ಯಾ ಬಹುಮುಖ್ಯ ಭಾಗ ಆಗಿದೆ. ದೇವಾಲಯದ ಎಲ್ಲಾ ಭಾಗಗಳು ರಚಿತವಾದ ಮೇಲೆ ಕಳಸ ಸ್ಥಾಪನೆಯಾಗುವುದು ಬಹು ಮುಖ್ಯ ಕಾರ್ಯ. ಗಂಗರ ಶಾಸನಗಳಲ್ಲಿಯೂ ಕಾರ್ಯವನ್ನು 'ಕಳಸಮಿಟ್ಟರ್' ಎಂದೇ ಕರೆದಿದೆ. ಇಡೀ ಕಳಶವನ್ನು ಕಲ್ಲಿನಲ್ಲಿ ಶಿಖರದ ಮಹಾಪದ್ಮದ ಮಧ್ಯಭಾಗದಲ್ಲಿ ಮಾಡಿರುವ ಗುಳಿಯಲ್ಲಿ ಸ್ಥಾಪಿಸಲು ಅನುಕೂಲವಾಗುವಂತೆ ರೂಪಿಸಿರುತ್ತಾರೆ.

ಗರ್ಭಗೃಹ

ದೇವಾಲಯದ ರಚನೆಯಲ್ಲಿ ಪ್ರಮುಖ ಭಾಗ ಗರ್ಭಗೃಹ. ದೇವಾಲಯವನ್ನು ಯಾವ ದೇವರಿಗಾಗಿ ನಿರ್ಮಿಸಿದ್ದಾರೆ ಎಂಬುದನ್ನು ತಿಳಿಯಲು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿರುವ

ಮೂರ್ತಿಯಿಂದ ಮಾತ್ರ ಸಾಧ್ಯ. ಅಂದರೆ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿರುವ ದೇವರ ಮೂರ್ತಿಶಿಲ್ಪ ಹೆಸರಿನಿಂದಲೇ ಆ ದೇವಾಲಯವನ್ನು ಕರೆಯುವರು. ಗರ್ಭಗೃಹದ ಆಕಾರವನ್ನು ಅನುಸರಿಸುವುದರ ಮೂಲಕ ದೇವಾಲಯವು ಯಾವ ರೀತಿಯಾಗಿ ರಚನೆಗೊಂಡಿದೆ ಎಂಬುದನ್ನು ತಿಳಿಯಲಾಗುವುದು. ಈ ಗರ್ಭಗೃಹವು ತನ್ನ ಮೇಲಿನ ರಚನೆಯನ್ನು ಅನುಸರಿಸಿ ಅಂದರೆ ಶಿಖರಗಳನ್ನು ಲಕ್ಷ್ಯದಲ್ಲಿಟ್ಟು ಅದರ ಎತ್ತರಕ್ಕೆ ತಕ್ಕಂತೆ ಅನೇಕ ಭಾಗಗಳನ್ನು ಹೊಂದಿರುತ್ತವೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ದೇವಾಲಯಗಳಲ್ಲಿ ಸಮಾಧಿ ರಚನೆಗಳನ್ನು ಅನುಕರಿಸಿ ಕಟ್ಟಿರುವ ಅಧಿಷ್ಠಾನ ರಹಿತ ದೇವಾಲಯಗಳಲ್ಲಿ ಗರ್ಭಗೃಹದ ರಚನೆ ನಾಲ್ಕು ಅಥವಾ ಐದು ಚಪ್ಪಡಿಗಳನ್ನು ಬಳಸಿ ರಚಿತವಾಗಿದ್ದರೆ, ಅಧಿಷ್ಠಾನ ಸಹಿತ ದೇವಾಲಯಗಳಲ್ಲಿ ಗರ್ಭಗೃಹವು ಅಧಿಷ್ಠಾನದಿಂದ ಹಿಡಿದು ಶಿಖರದವರೆಗೆ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಹಾರ, ಗ್ರೀವ, ಶಿಖರ, ಕಳಶ ಭಾಗಗಳನ್ನು ಹೊಂದಿರುತ್ತವೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ದೇವಾಲಯಗಳಲ್ಲಿ ಗರ್ಭಗೃಹ ಸಾಮಾನ್ಯವಾಗಿ ಚೌಕಾಕಾರದಲ್ಲಿರುತ್ತದೆ. ಸಪ್ತಮಾತೃಕೆಯರ ದೇವಾಲಯವಿದ್ದರೆ ಗರ್ಭಗೃಹ ಆಯತಾಕಾರದಲ್ಲಿರುತ್ತದೆ. ಇಂತಹ ಕಡೆ ಗರ್ಭಗೃಹದ ಮಧ್ಯದಲ್ಲಿ ಎರಡು ಕಂಬಗಳನ್ನು ನಿಲ್ಲಿಸಿ ಅಡ್ಡತೊಲೆಯೊಂದನ್ನು ಇಟ್ಟು ದೇವಾಲಯ ಆಯತಾಕಾರದಲ್ಲಿ ರಚಿತವಾಗುವಂತೆ ಮಾಡಿರುತ್ತಾರೆ. ಸಾಮಾನ್ಯವಾಗಿ ದೇವಾಲಯಗಳನ್ನು ಚೌಕಾಕಾರವಾಗಿ, ಆಯತಾಕಾರವಾಗಿ ಮತ್ತು ಗಜಪೃಷ್ಠಾಕಾರವಾಗಿ ನಿರ್ಮಿಸಿರುವುದನ್ನು ನೋಡಬಹುದು. ದೇವಾಲಯಗಳನ್ನು ಸಾಮಾನ್ಯವಾಗಿ ಪೂರ್ವ ಮತ್ತು ಉತ್ತರ ದಿಕ್ಕುಗಳ ಅಭಿಮುಖವಾಗಿ ನಿರ್ಮಿಸಿರುವುದು ಕಂಡುಬರುತ್ತದೆ. ಕಿತ್ತೂರಿನ ಸೋಮೇಶ್ವರ ದೇವಾಲಯ, ನಾರಾಯಣಸ್ವಾಮಿ ದೇವಾಲಯ, ಕಿತ್ತೂರಮ್ಮ ದೇವಾಲಯ, ಮರದೂರು ಗ್ರಾಮದ ಈಶ್ವರ ದೇವಾಲಯ, ಐಲಾಪುರದ ನಂದಿಬಸವೇಶ್ವರ ದೇವಾಲಯ ಪ್ರಮುಖವಾಗಿವೆ.

ಅದೇ ರೀತಿ ಕಡಿಮೆ ಸಂಖ್ಯೆಯಲ್ಲಿ ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಿಗೆ ಅಭಿಮುಖವಾಗಿ ನಿರ್ಮಿಸಲ್ಪಟ್ಟ ದೇವಾಲಯಗಳು ಕಂಡುಬರುತ್ತವೆ. ಉದಾಹರಣೆಗೆ ಪಿರಿಯಾಪಟ್ಟಣದ ಚನ್ನಕೇಶವ ದೇವಾಲಯ. ಈಶ್ವರ ದೇವಾಲಯ, ಮಸಣಿಕಮ್ಮ ದೇವಾಲಯ, ಹಿಟ್ನೆಹೆಬ್ಬಾಗಿಲಿನ ಚನ್ನಕೇಶವ ದೇವಾಲಯ, ಈ ಪರಿಸರದಲ್ಲಿರುವ ಯಾವುದೇ ದೇವಾಲಯಗಳಿಗೆ ಒಳಭಾಗದಲ್ಲಿ ಪ್ರದಕ್ಷಿಣೆ ಪಥವಿಲ್ಲದಿರುವುದು. ಈ ರೀತಿಯ ಲಕ್ಷಣ ಸಾಮಾನ್ಯವಾಗಿ ಬಹುತೇಕ ದೇವಾಲಯಗಳಲ್ಲಿ ಕಂಡುಬರುತ್ತದೆ. ಆದರೆ ಆನೆವಾಳುವಿನಲ್ಲಿರುವ ಆದಿನಾಥ ಬಸದಿ ಇದಕ್ಕೆ ಹೊರತಾಗಿದ್ದು ಗರ್ಭಗೃಹದ ಸುತ್ತ ಒಳಭಾಗದಲ್ಲಿಯೇ ಪ್ರದಕ್ಷಿಣೆ ಪಥವಿರುವುದು. ಇದನ್ನು ಬಿಟ್ಟರೆ ಯಾವ ದೇವಾಲಯಗಳ ಒಳಭಾಗದಲ್ಲಿ ಪ್ರದಕ್ಷಿಣೆ ಪಥವಿರುವುದಿಲ್ಲ.

ಬೆಟ್ಟದಪುರ ಅನ್ನದಾನಿಮಲ್ಲಿಕಾರ್ಜುನ ದೇವಾಲಯ ವಿಸ್ತೀರ್ಣದ ದೃಷ್ಟಿಯಿಂದ ವಿಶಾಲವಾಗಿದೆ. ಆದರೆ ಈ ದೇವಾಲಯದ ಗರ್ಭಗೃಹ ಇತರೆ ಭಾಗಗಳಿಗಿಂತ ಚಿಕ್ಕದಾಗಿರುವುದು ಮತ್ತು ಗರ್ಭಗುಡಿಯಲ್ಲಿ ಎರಡೂವರೆ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹವು ಚೌಕಕಾರವಾಗಿದ್ದು ಭುವನೇಶ್ವರಿ ಹೊಂದಿದೆ. ಇದರ ಮೇಲೆ ದ್ರಾವಿಡ ಶೈಲಿಯ ಗೋಪುರವನ್ನು ಹೊಂದಿದೆ. ಅನ್ನದಾನಿಮಲ್ಲಿಕಾರ್ಜುನ ದೇವಾಲಯವು ಪ್ರಾರಂಭದಲ್ಲಿ ಗಂಗರಿಂದ ನಿರ್ಮಾಣಗೊಳ್ಳಲು ಪ್ರಾರಂಭಿಸಿ ನಂತರದ ದಿನಗಳಲ್ಲಿ ಹೊಯ್ಸಳ, ವಿಜಯನಗರ ಹಾಗೂ ಚಂಗಾಳ್ವರಿಂದ ವಿಸ್ತರಿಸಲ್ಪಟ್ಟಿದೆ. ಇಲ್ಲಿಯ ಗರ್ಭಗೃಹ ಚೋಳ ಮಾದರಿಯ ಲಕ್ಷಣ ಹೊಂದಿದ್ದು, ಮುಂದೆ ಹೊಯ್ಸಳ ಲಕ್ಷಣವನ್ನು ಪಡೆದುಕೊಂಡಿದೆ. ಗರ್ಭಗೃಹದ ಎಡಭಾಗವೂ ವಿಜಯನಗರ ಶೈಲಿಯ ಲಕ್ಷಣ ಹೊಂದಿದ್ದು ನಂತರದ ದಿನಗಳಲ್ಲಿ ಹೊಸದಾಗಿ ಸೇರಿಸಲ್ಪಟ್ಟಿದೆ. ಚಿಕ್ಕಹೊನ್ನೂರು ಗ್ರಾಮದ ರಂಗನಾಥ ದೇವಾಲಯದ ಗರ್ಭಗುಡಿಯಲ್ಲಿ ರಂಗನಾಥನು ನಿಂತಿರುವ ವಿಗ್ರಹವಿದ್ದು, ಇದರ ಎಡ ಪಾರ್ಶ್ವದ ಗರ್ಭಗುಡಿಯಲ್ಲಿ ಪದ್ಮಾವತಿ ಮೂರ್ತಿಶಿಲ್ಪವಿರುವುದು. ಗರ್ಭಗುಡಿಯ ಮೇಲೆ ಪುಷ್ಪಾಲಂಕಾರ ಭುವನೇಶ್ವರಿ ಹೊಂದಿದೆ. ಆದರೆ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಶೈವ ದೇವಾಲಯಗಳಲ್ಲಿ ಮರದೂರಿನ ಈಶ್ವರ ದೇವಾಲಯ ಪ್ರಮುಖವಾಗಿದೆ. ಇಲ್ಲಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು ೨೭ ಇಂಚು ಎತ್ತರ, ೩೩ ಇಂಚು ಅಗಲ ಹೊಂದಿದೆ. ಶಿವಲಿಂಗ ಚಪ್ಪಟೆಯಾಕಾರದ ಪೀಠದ ಮೇಲಿದ್ದು ಕಪ್ಪು ಶಿಲೆಯಿಂದ ಕೂಡಿರುವುದು. ಇದರ ಮೇಲಿನ ಭಾಗವೂ ಸರಳವಾಗಿದೆ. ಒಟ್ಟಿನಲ್ಲಿ ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ಬಹುತೇಕ ಎಲ್ಲಾ ದೇವಾಲಯಗಳ ಗರ್ಭಗೃಹವು ಏಕಕೂಟ ಗರ್ಭಗುಡಿ ಹೊಂದಿರುವವು. ಮತ್ತು ದೇವಾಲಯಗಳ ಇತರೆ ಭಾಗಗಳಿಗಿಂತ ಗರ್ಭಗುಡಿ ಚಿಕ್ಕದಾಗಿರು ವುದಾಗಿದೆ. ಕೆಲವು ದೇವಾಲಯಗಳ ಗರ್ಭಗೃಹಕ್ಕೆ ಬಾಗಿಲು ಇದ್ದರೆ, ಬಹುತೇಕ ದೇವಾಲಯ ಗಳಿಗೆ ಬಾಗಿಲು ಇಲ್ಲದೆ ದೇವಾಲಯದ ಮುಖ್ಯ ಬಾಗಿಲೇ ಮುಖ್ಯವಾಗಿರುವುದು.

ಅಂತರಾಳ ಅಥವಾ ಸುಖನಾಸಿ

ದೇವಾಲಯದ ರಚನಾ ಭಾಗಗಳಲ್ಲಿ ಅಂತರಾಳ ಒಂದು. ದೇವಾಲಯದ ಗರ್ಭಗೃಹಕ್ಕೂ ನವರಂಗಕ್ಕೂ ಮಧ್ಯೆ ಸಣ್ಣ ತೆರೆದ ಕೋಣೆ ಇರುತ್ತದೆ. ಇದನ್ನು ಬಳಕೆಯಲ್ಲಿ ಅಂತರಾಳ ಮಂಟಪವೆಂದು ಕರೆಯುತ್ತೇವೆ. ಅನೇಕ ದೇವಾಲಯಗಳಲ್ಲಿ ಅದರಲ್ಲೂ ಮುಖ್ಯವಾಗಿ ಹೊಯ್ಸಳರ ದೇವಾಲಯಗಳಲ್ಲಿ ಈ ಭಾಗವನ್ನು ಸುಕನಾಸಿ ಎಂದು ಕರೆದಿರುತ್ತಾರೆ. ಅಂತರಾಳವು ಅಧಿಷ್ಠಾನ ರಹಿತ ಮತ್ತು ಸಹಿತ ದೇವಾಲಯಗಳೆರಡರಲ್ಲಿಯೂ ಕಂಡುಬರುತ್ತದೆ. ಇದು ಅಗಲ ಮತ್ತು ಉದ್ದದಲ್ಲಿ ಕಡಿಮೆಯಿದ್ದು, ಇದಕ್ಕೂ ನವರಂಗಕ್ಕೂ ಮಧ್ಯೆ ಬಾಗಿಲು ಇರುವುದಿಲ್ಲ. ಕೆಲವು

ದೇವಾಲಯಗಳಲ್ಲಿ ಮೇಲಿನ ಭಾರವನ್ನು ಹೊರಲು ಅನುವಾಗುವಂತೆ ಎರಡು ಕಂಬಗಳನ್ನು ನಿಲ್ಲಿಸಿರುವುದನ್ನು ಕಾಣುತ್ತೇವೆ. ಐಲಾಪುರದ ಬಸವೇಶ್ವರ ದೇವಾಲಯ ಮತ್ತು ಇತರೆ ಕೆಲವು ಈಶ್ವರ ದೇವಾಲಯಗಳಲ್ಲಿ ನಂದಿಯನ್ನು ಪ್ರತಿಷ್ಠಾಪಿಸಿರುತ್ತಾರೆ. ದೇವಾಲಯಗಳಲ್ಲಿ ನವರಂಗ ಅಂತರಾಳ ಮಧ್ಯೆ ತಡೆ ಇರುವುದಿಲ್ಲ. ಹೀಗಾಗಿ ಬಾಗಿಲಿಡುವ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. ನವರಂಗಕ್ಕೂ ಅಂತರಾಳಕ್ಕೂ ಮಧ್ಯೆ ಬರುವ ಕಂಬಗಳು ದೇವಾಲಯದಲ್ಲಿರುವ ನವರಂಗ ಕಂಬಗಳನ್ನೇ ಹೋಲಿದರೂ ನವರಂಗದ ಕಂಬಗಳಿಗಿಂತ ಸಣ್ಣಗಿರುತ್ತವೆ ಮತ್ತು ಅಲಂಕಾರವಿರು ವುದಿಲ್ಲ. ಕೆಲವು ದೇವಾಲಯಗಳಲ್ಲಿ ನವರಂಗಕ್ಕೂ ಅಂತರಾಳಕ್ಕೂ ಮಧ್ಯೆ ಬಾಗಿಲನ್ನು ಇಟ್ಟು ಎರಡನ್ನೂ ಬೇರೆ ಮಾಡಿರುವುದುಂಟು. ಶಿರಂಗಾಲದ ಉಮಾಮಹೇಶ್ವರ, ಬೆಟ್ಟದಪುರದ ಬಸವೇಶ್ವರ, ಬೆಟ್ಟತುಂಗದ ವೀರಭದ್ರ ದೇವಾಲಯಗಳಲ್ಲಿ ಈ ಬಗೆಯ ರಚನೆಯನ್ನು ಕಾಣುತ್ತೇವೆ. ಆದರೆ ಎಲ್ಲ ದೇವಾಲಯಗಳಲ್ಲೂ ಅಂತರಾಳ ಇರಲೇಬೇಕು ಎಂಬ ನಿಯಮವಿಲ್ಲ. ಅವಶ್ಯವಿದ್ದಲ್ಲಿ ಮಾತ್ರ ಇಂತಹ ರಚನೆ ಕಂಡುಬರುತ್ತದೆ. ಅಂತರಾಳದ ಮೇಲ್ಕಟ್ಟಡದಲ್ಲಿ ಸುಕನಾಸ ಇರುವುದರಿಂದ ಇದಕ್ಕೆ ಸುಕನಾಸಿ ಎಂದೂ ಸಹ ಕರೆಯುವರು. ಗರ್ಭಗೃಹದಲ್ಲಿರುವ ಮೂಲ ದೇವರಿಗೆ ಸಂಬಂಧಿಸಿದ ವಿಗ್ರಹಗಳು ಅಂತರಾಳದಲ್ಲಿ ಇರುತ್ತವೆ. ಕೆಲವು ದೇವಾಲಯಗಳ ಅಂತರಾಳದಲ್ಲಿ ದ್ವಾರವಿದ್ದರೆ ಇನ್ನು ಕೆಲವು ದೇವಾಲಯಗಳ ಅಂತರಾಳದಲ್ಲಿ ದ್ವಾರ ಇರುವುದಿಲ್ಲ. ಉದಾಹರಣೆಗೆ ರಾವಂದೂರಿನ ಅರ್ಜುನೇಶ್ವರ, ಕಂಪಲಾಪುರದ ಕರಕಂತೇಶ್ವರ ದೇವಾಲಯಗಳಲ್ಲಿ ಚಿಕ್ಕ ಅಂತರಾಳವಿದ್ದರೆ, ಕುಡುಕೂರಿನ ಬಸವೇಶ್ವರ ದೇವಾಲಯ, ಬಾರ್ಸೆ ಗ್ರಾಮದ ಬಸವೇಶ್ವರ ದೇವಾಲಯಗಳಲ್ಲಿ ಗರ್ಭಗೃಹ, ತೆರೆದಮಂಟಪಗಳನ್ನು ಕಾಣಬಹುದು. ಈ ಪರಿಸರದಲ್ಲಿ ಹನ್ನೆರಡನೆಯ ಶತಮಾನದ ನಂತರ ಶೈವದೇವಾಲಯ, ಶೈವಮಂಟಪಗಳು ಅಧಿಕವಾಗಿ ನಿರ್ಮಾಣಗೊಂಡಿರುವವು. ಈ ವೇಳೆಯಲ್ಲಿ ರಚನೆಗೊಂಡ ಮಂಟಪ, ದೇವಾಲಯ ಮತ್ತು ಗುಡಿಗಳಲ್ಲಿ ಕೇವಲ ಗರ್ಭಗೃಹ ಮತ್ತು ತೆರೆದ ಮಂಟಪಗಳನ್ನು ಅಧಿಕ ಪ್ರಮಾಣದಲ್ಲಿ ಕಾಣಬಹುದು.

ನವರಂಗ ಮಂಟಪ

ಗರ್ಭಗೃಹ, ಅರ್ಧಮಂಟಪ ಅಥವಾ ಅಂತರಾಳದ ನಂತರ ಬರುವುದೇ ನವರಂಗ ಮಂಟಪ. ಇದನ್ನು ಮಹಾಮಂಟಪ ಎಂದು ಸಹ ಕರೆಯುವರು. ಸಾಮಾನ್ಯವಾಗಿ ಇದು ವಿಶಾಲವಾದ ವಿಸ್ತೀರ್ಣವನ್ನು ಹೊಂದಿರುತ್ತದೆ. ಇಲ್ಲಿ ಸಂಗೀತ, ನೃತ್ಯಗಳನ್ನು ಏರ್ಪಡಿಸುತ್ತಿದ್ದರು. ಇದರಿಂದಾಗಿ ಇದಕ್ಕೆ ನೃತ್ಯಮಂಟಪ ಎಂದೂ ಕರೆಯುವರು. ಇಂತಹ ರಂಗಮಂಟಪವು ಈ ಪರಿಸರದಲ್ಲಿ ಕಂಡುಬರುವ ಶೈವ, ವೈಷ್ಣವ ಹಾಗೂ ಜೈನಬಸದಿಗಳಲ್ಲಿಯು ಸಹ ಕಂಡುಬಂದಿವೆ.

ಈ ಮಹಾಮಂಟಪವು ಚೌಕಾಕಾರ ಮತ್ತು ಆಯತಾಕಾರದಲ್ಲಿರುವುದು ಸಾಮಾನ್ಯ. ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳು ಬಂದಿದ್ದು, ಅವುಗಳ ಮೇಲೆ ಉದ್ದ ಮತ್ತು ಅಡ್ಡ ತೊಲೆಗಳು ಬಂದಿರುವುದರಿಂದ ಒಂಭತ್ತು ಸಮಭಾಗಗಳಾಗಿ ವಿಂಗಡಣೆಯಾಗಿರುತ್ತದೆ. ಹೀಗಾಗಿ ಇದಕ್ಕೆ ನವರಂಗವೆಂಬ ಹೆಸರು ರೂಢಿಗೆ ಬಂದಿರಬೇಕು. ನವರಂಗದಲ್ಲಿ ಮಧ್ಯದ ನಾಲ್ಕು ಕಂಬಗಳು ಪ್ರಧಾನವಾಗಿ ಕಂಡರೂ ವಾಸ್ತವವಾಗಿ ಸುತ್ತು ಗೋಡೆಯಲ್ಲಿನ ಹನ್ನೆರಡು ಕಂಬಗಳು ಅರ್ಧ ಮಾತ್ರ ಹೊರಗೆ ಕಾಣುವಂತಿದ್ದು, ಈ ಅರ್ಧಭಾಗವು ನವರಂಗದ ಕಂಬಗಳ ರೂಪಸಾಮ್ಯವನ್ನು ಹೊಂದಿರುತ್ತವೆ. ಉಳಿದ ಅರ್ಧ ಗೋಡೆಯೊಳಗೆ ಇದ್ದು ದೇವಾಲಯದ ಛಾವಣಿಯ ಭಾರವನ್ನು ಹೊರಲು ಶಕ್ಯವಾಗಿರುತ್ತವೆ. ಕೆಲವು ದೇವಾಲಯಗಳಲ್ಲಿ ಬಿಡಿ ಶಿಲ್ಪಗಳು ನವರಂಗ ದೊಳಗೆ ಇವೆ. ಬೆಟ್ಟದಪುರ ಅನ್ನದಾನಿಮಲ್ಲಿಕಾರ್ಜುನ, ಕಂಪಲಾಪುರದ ಕರಕಂಟೇಶ್ವರ, ಮೇಲೂರಿನ ಈಶ್ವರ, ರಾವಂದೂರಿನ ಅರ್ಜುನೇಶ್ವರ ದೇವಾಲಯಗಳಲ್ಲಿ ಕಾಣಬಹುದು. ಇಡೀ ದೇವಾಲಯದಲ್ಲಿ ಅಲಂಕಾರವನ್ನು ತರಬೇಕಾದಲ್ಲಿ ಶಿಲ್ಪಿಗೆ ಅವಕಾಶ ದೊರೆಯುವುದು ನವರಂಗ ಭಾಗದಲ್ಲಿಯೇ. ಇಂತಹ ಸನ್ನಿವೇಶವನ್ನು ಶಿಲ್ಪಿ ಆದಷ್ಟು ಬಳಸಿಕೊಂಡು ನವರಂಗದಲ್ಲಿ ಬರುವ ಕಂಬಗಳು, ಒಳ ಉಬ್ಬು ಕಂಬಗಳು ಮತ್ತು ಮುಚ್ಚೆಗೆ ಭಾಗಗಳನ್ನು ಆದಷ್ಟು ಅಲಂಕಾರಗೊಳಿಸಿ ಆಕರ್ಷಕವಾಗಿ ಮಾಡಿರುತ್ತಾನೆ. ಚಂಗಾಳ್ವರು ತಮ್ಮ ಕಲೆಯನ್ನು ಆಕರ್ಷಕವಾಗಿ ಮಾಡಲು ಬಳಸಿಕೊಂಡ ಸ್ಥಳ ನವರಂಗ. ನವರಂಗಗಳನ್ನು ಅಲಂಕಾರ ರಹಿತವಾದವು ಮತ್ತು ಅಲಂಕಾರ ಸಹಿತವಾದವು ಎಂದು ಎರಡು ವರ್ಗಗಳಾಗಿ ವಿಂಗಡಿಸಬಹುದು. ಅಲಂಕಾರ ರಹಿತವಾದ ನವರಂಗದಲ್ಲಿ ನಾಲ್ಕು ಕಂಬಗಳಿದ್ದು ನವರಂಗದ ಮಧ್ಯೆ ವೇದಿಕೆ ಇರುವುದಿಲ್ಲ. ಮುಚ್ಚಿಗೆಯಲ್ಲಿ ಕಮಲದಳಗಳ ಅಲಂಕಾರವಿರುತ್ತದೆ. ಕಿತ್ತೂರಿನ ಈಶ್ವರ ದೇವಾಲಯ, ನಾರಾಯಣ ದೇವಾಲಯ, ಬೆಟ್ಟದಪುರದ ಮಲ್ಲಿಕಾರ್ಜುನ ದೇವಾಲಯಗಳಾಗಿವೆ. ಅಲಂಕಾರ ಸಹಿತ ದೇವಾಲಯಗಳಲ್ಲಿ ಪಿರಿಯಾಪಟ್ಟಣ ಮಸಣಿಕಮ್ಮ, ಕೆಸುವಿನಕೆರೆ ಬಸವೇಶ್ವರ, ಬಾರ್ಸೆಯ ಬಸವೇಶ್ವರ ದೇವಾಲಯಗಳಾಗಿವೆ.

ಪಿರಿಯಾಪಟ್ಟಣದ ಮಸಣಿಕಮ್ಮ ದೇವಾಲಯದ ರಂಗಮಂಟಪ ಸರಳತೆಯಿಂದ ಕೂಡಿದೆ. ಇಲ್ಲಿಯ ನವರಂಗ ಮಂಟಪದಲ್ಲಿ ನಾಲ್ಕು ಸ್ವತಂತ್ರ ಕಂಬಗಳು ಇರುವವು. ಬಹುಶಃ ಗರ್ಭಗೃಹ, ಅಂತರಾಳ, ಚೋಳರ ಕಾಲದಲ್ಲಿ ರಚಿತಗೊಂಡಿದೆ. ಆದರೆ ರಂಗಮಂಟಪ ಮತ್ತು ಕಂಬಗಳು ವಿಜಯನಗರೋತ್ತರ ಕಾಲದಲ್ಲಿ ನಿರ್ಮಾಣಗೊಂಡಿರಬಹುದು. ಇಲ್ಲಿಯ ಪ್ರತಿಕಂಬಗಳು ಆರು ಅಡಿ ಎತ್ತರದಿಂದ ಕೂಡಿವೆ ಮತ್ತು ಸೂಕ್ಷ್ಮ ಕೆತ್ತನೆಯ ಅಲಂಕಾರದಿಂದ ರೂಪಿತವಾಗಿವೆ. ಕಂಬದ ತಳಭಾಗದಲ್ಲಿ ಚೌಕಾಕಾರ ಹೊಂದಿದ್ದು ಮೇಲಿನ ಭಾಗ ಕಲಾತ್ಮಕವಾಗಿ

ರೂಪಿತಗೊಂಡಿದೆ. ಹದಿನೆಂಟು ಮುಖ, ಪುಷ್ಪ ಹಾಗೂ ಲತಾಬಳ್ಳಿಗಳಿಂದ ನಿರ್ಮಾಣಗೊಂಡಿದ್ದು, ಇದರ ಮೇಲೆ ಸಿಲಿಂಡರಿನ ಆಕಾರ ಹಾಗೂ ಪುಷ್ಪಬೋಧಿಗೆಯನ್ನು ಕಾಣಬಹುದು. ಕಂಬಗಳ ಮೇಲೆ ಪುರುಷನು ಡಮರುಗವನ್ನು ಬಾರಿಸುತ್ತಿರುವ, ಗಜ, ಮೀನು, ನರ್ತಿಸುತ್ತಿರುವ ಕನ್ಯೆಯರ ಉಬ್ಬುಶಿಲ್ಪ, ಬಿಲ್ಲು ಬಾಣವನ್ನು ಹಿಡಿದು ಬೇಟೆಯಾಡುತ್ತಿರುವ ದೃಶ್ಯ ಕಾಣಬಹುದು. ಬೆಟ್ಟದಪುರ ವೀರಭದ್ರ ದೇವಾಲಯದ ರಂಗಮಂಟಪವು ಗರ್ಭಗೃಹ ಮತ್ತು ಅಂತರಾಳ ಮಂಟಪಗಳೆರಡಕ್ಕಿಂತಲೂ ವಿಶಾಲವಾಗಿದೆ. ನವರಂಗದ ವೈಶಾಲಕ್ಕೆ ತಕ್ಕಂತೆ ಇದರ ಮಧ್ಯ, ಎಡ ಮತ್ತು ಬಲಭಾಗವನ್ನು ಒಳಗೊಂಡಂತೆ ಹದಿನಾಲ್ಕು ಸ್ತಂಭಗಳಿವೆ. ನವರಂಗವು ಭಿತ್ತಿಯನ್ನು ಒಳಗೊಂಡಂತೆ ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಕಂಡುಬರದೆ ಸರಳತೆಯಿಂದ ಇರುವುದು.

ಕೊಣಸೂರು ಗ್ರಾಮದಲ್ಲಿ ಕ್ರಿ.ಶ.೧೬ನೆಯ ಶತಮಾನದ ಒಂದು ಜೈನ ಬಸದಿ ಇದೆ. ಇದು ಶಾಂತಿನಾಥ ಬಸದಿಯಾಗಿದ್ದು, ನವರಂಗದಲ್ಲಿ ನಾಲ್ಕು ಸ್ತಂಭಗಳು ಪೀಠದ ಮೇಲೆ ನಿಂತಿವೆ. ಸ್ತಂಭಗಳು ಎಪ್ಪತ್ತು ಇಂಚು ಉದ್ದ, ಐವತ್ತೈದು ಇಂಚು ದಪ್ಪ ಹೊಂದಿ ತಳಭಾಗದಲ್ಲಿ ಚೌಕಕಾರ ಹೊಂದಿ ವೃತ್ತವನ್ನು ಒಳಗೊಂಡಿದೆ. ಇದನ್ನು ಬಿಟ್ಟರೆ ಇಲ್ಲಿಯ ನವರಂಗದಲ್ಲಿ ಯಾವುದೇ ಮೂರ್ತಿಶಿಲ್ಪಗಳು ಕಂಡುಬರದೆ ಸರಳತೆಯಿಂದ ಕೂಡಿವೆ. ಪಿರಿಯಾಪಟ್ಟಣದ ಈಶ್ವರ ದೇವಾಲಯದ ರಂಗಮಂಟಪವು ಇತರೆ ದೇವಾಲಯಗಳ ರಂಗಮಂಟಪಕ್ಕಿಂತ ಅಲಂಕರಣೆಯಿಂದ ಕೂಡಿದೆ. ಇಲ್ಲಿಯ ರಂಗಮಂಟಪದಲ್ಲಿ ನಾಲ್ಕು ಸ್ವತಂತ್ರವಾದ ಕಂಬಗಳಿವೆ. ನೋಡಲು ಸುಂದರವಾಗಿದ್ದು ಹದಿನೆಂಟು ಮುಖಗಳನ್ನು ಮತ್ತು ಸೂಕ್ಷ್ಮವಾದ ಅಲಂಕರಣೆಯಿಂದ ಕೂಡಿವೆ. ಇಲ್ಲಿಯ ಪ್ರತಿಕಂಬಗಳು ಹತ್ತು ಅಡಿ ಎತ್ತರ ಹಾಗೂ ಮೇಲಿನ ಭಾಗದಲ್ಲಿ ಬೋಧಿಗೆಯನ್ನು ಹೊಂದಿದೆ. ಕಂಬಗಳು ವಿಜಯನಗರ ವಾಸ್ತುಶೈಲಿಯಲ್ಲಿವೆ. ಕಂಬಗಳಲ್ಲಿ ತಾಂಡವಮೂರ್ತಿ, ನರಸಿಂಹ, ನಂದಿ, ಮುನಿ, ಶಿವಮಾರ್ತಾಂಡ ನರ್ತನ ಹಾಗೂ ನರಸಿಂಹ ನರ್ತನದ ಉಬ್ಬುಶಿಲ್ಪಗಳಿವೆ. ಪ್ರವೇಶದ್ವಾರದ ಲಲಾಟ ಬಿಂಬದ ಮೇಲೆ ನಂದಿ, ಶಿವಲಿಂಗದ ಉಬ್ಬುಶಿಲ್ಪದ ಕೆತ್ತನೆ ಕಂಡುಬರುವುದು. ಕಿತ್ತೂರಿನ ಸೋಮೇಶ್ವರ ದೇವಾಲಯ, ಪಿರಿಯಾಪಟ್ಟಣದ ಮಸಣಿಕಮ್ಮ ದೇವಾಲಯ ಮತ್ತು ಪಿರಿಯಾಪಟ್ಟಣದ ಕೇಶವ ದೇವಾಲಯದ ನವರಂಗದ ಕಂಬಗಳಲ್ಲಿ ಮಾತ್ರ ಹೊಯ್ಸಳ ಶೈಲಿಯ ಸುಂದರ ಸೂಕ್ಷ್ಮ ಕುಸುರಿ ಅಲಂಕರಣ, ಹೊಳಪು ಕಾಣಬರುತ್ತದೆ. ಉಳಿದಂತೆ ಸಂಪೂರ್ಣವಾಗಿ ದೇವಾಲಯ ಗ್ರಾನೈಟ್ ಕಲ್ಲಿನದು. ಈ ಕಠಿಣ ಶಿಲೆಯಲ್ಲಿ ಸೂಕ್ಷ್ಮವಾದ ಕುಸುರಿ ಕೆತ್ತನೆಗಳು ಅಸಾಧ್ಯ. ಆದುದರಿಂದ ದೇವಾಲಯದ ವಾಸ್ತು ಅಲಂಕರಣವನ್ನು ಹೊಯ್ಸಳ-ದ್ರಾವಿಡ ಶೈಲಿಯಲ್ಲಿ ನಿರ್ಮಿಸಿ ಮುಖ್ಯವಾದ ಕಡೆಗಳಲೆಲ್ಲಾ ಶಿಲ್ಪಿಗಳು ತಮ್ಮ ಹೊಯ್ಸಳ ಛಾಪನ್ನು ಮೂಡಿಸಿದ್ದಾರೆ.

ನವರಂಗದ ಮಧ್ಯಭಾಗದಲ್ಲಿ ವೇದಿಕೆ ಇದ್ದು ಸುತ್ತಲಿನ ನಾಲ್ಕು ಮೂಲೆಗಳಲ್ಲಿ ನಾಲ್ಕು ಕಂಬಗಳಿರುತ್ತವೆ. ಸ್ತಂಭಗಳ ರಚನೆಯನ್ನು ಅನುಸರಿಸಿ ಮೇಲೆ ಚೌಕಟ್ಟನ್ನು ರಚಿಸಿದಾಗ ಅಂಕಣಗಳು ರಚನೆಗೊಳ್ಳುತ್ತವೆ. ಈ ಮಹಾಮಂಟಪದ ಒಳಗೋಡೆಗಳ ಮೇಲೆ ದೇವಕೋಷ್ಠಗಳ ರಚನೆ ಇರುತ್ತದೆ. ಅದರಲ್ಲಿ ಸಪ್ತಮಾತೃಕೆ, ಸರಸ್ವತಿ, ಗಣಪತಿ ಮೂರ್ತಿಗಳಿರುತ್ತವೆ. ನವರಂಗದ ಭುವನೇಶ್ವರಿಯು ಅರಳಿದ ಕಮಲದಿಂದ ಕೂಡಿರುತ್ತದೆ. ಇಲ್ಲಿರುವ ಕಂಬಗಳು ಮತ್ತು ಒಳಗೋಡೆಗಳು ವಿವಿಧ ರೀತಿಯಲ್ಲಿ ಅಲಂಕೃತಗೊಂಡಿರುವುದನ್ನು ಕಾಣಬಹುದು. ಹೀಗೆ ದೇವಾಲಯದ ಭಾಗಗಳಲ್ಲಿ ನವರಂಗವೇ ಪ್ರಮುಖ ಭಾಗವಾಗಿದ್ದು ವಿಶಾಲವಾಗಿರುತ್ತದೆ. ಸಾಮಾನ್ಯವಾಗಿ ಸಭಾಮಂಟಪದ ಮುಂಭಾಗದಲ್ಲಿ ಮುಖಮಂಟಪಗಳಿರುತ್ತವೆ. ಆದರೆ ವಿಜಯನಗರದ ಅರಸರು ತಾವು ನಿರ್ಮಿಸಿದ ದೇವಾಲಯಗಳಲ್ಲಿ ಸಭಾಮಂಟಪದ ಮುಂಭಾಗ ದಲ್ಲಿ ವಿಶಾಲವಾದ ಮಹಾಮಂಟಪವನ್ನು ಅಳವಡಿಸಿರುವರು. ಅದು ಪ್ರಧಾನ ದೇವಾಲಯದ ಎಲ್ಲಾ ವಾಸ್ತುಭಾಗಗಳಿಗಿಂತ ಅತ್ಯಂತ ಬೃಹತ ಪ್ರಮಾಣದಲ್ಲಿರುತ್ತದೆ. ಇಂತಹ ಮಂಟಪಗಳನ್ನು ಪಿರಿಯಾಪಟ್ಟಣದ ಚನ್ನಕೇಶವ ದೇವಾಲಯ, ಬೆಟ್ಟದಪುರದ ಸಿಡಿಲುಮಲ್ಲಿಕಾರ್ಜುನ ದೇವಾಲಯಗಳಲ್ಲಿ ಕಾಣಬಹುದು.

ಮುಖಮಂಟಪ

ದೇವಾಲಯದ ಮೆಟ್ಟಿಲುಗಳನ್ನು ಹತ್ತಿದ ಕೂಡಲೇ ಬರುವುದೇ ಮುಖಮಂಟಪ. ಇದನ್ನು ಅಗ್ರಮಂಟಪವೆಂದು ಕರೆಯುವರು. ಸಾಮಾನ್ಯವಾಗಿ ಮುಖಮಂಟಪವು ತೆರೆದ ಮಂಟಪವಾಗಿದ್ದು, ನಾಲ್ಕು ಕಂಬಗಳಿಂದ ಕೂಡಿರುತ್ತದೆ. ಇವುಗಳು ಅಲಂಕಾರಯುತವಾಗಿರುತ್ತವೆ. ಮುಖಮಂಟಪದಲ್ಲಿ ಭಕ್ತಾದಿಗಳು ಕೂರಲು ಕಲ್ಲಿನ ಆಸನಗಳಿದ್ದು, ಅವುಗಳಿಗೆ ಕಕ್ಷಾಸನ ಎಂದು ಕರೆಯುವರು. ಈ ಕಕ್ಷಾಸನದ ಹೊರಮುಖದಲ್ಲಿ ರತ್ನಪಟ, ಪೂರ್ಣಘಟ ಮತ್ತು ಪುಷ್ಪಪಟ್ಟಿಗಳನ್ನು ಬಿಡಿಸಲಾಗಿರುತ್ತದೆ. ಮುಖಮಂಟಪದ ಮೇಲ್ಛಾವಣಿಯಲ್ಲಿ ವಿಶೇಷ ರೀತಿಯ ವಾಸ್ತು ರಚನೆಗಳನ್ನು ಕಾಣಬಹುದು. ಮಂಟಪದ ಮೇಲಿನ ಮುಂಭಾಗವನ್ನು ವಿವಿಧ ರೀತಿಯಲ್ಲಿ ಅಲಂಕರಿಸಿರುವುದು ಕಂಡುಬರುತ್ತದೆ. ಕೆಲವು ದೇವಾಲಯಗಳಲ್ಲಿ ಮುಖಮಂಟಪವು ದ್ವಾರಯುಕ್ತವಾಗಿರುತ್ತದೆ. ಇಲ್ಲಿ ಕಂಬಗಳ ಮೇಲೆ ಮತ್ತು ಒಳಗೋಡೆಯ ಮೇಲೆ ವಿವಿಧ ರೀತಿಯಲ್ಲಿ ಅಲಂಕರಣೆ ಮಾಡಿರುವುದು ಕಂಡುಬರುತ್ತದೆ. ಉದಾಹರಣೆಗೆ ಕೆಸುವಿನಕೆರೆ ಗ್ರಾಮದ ಬಸವೇಶ್ವರ ದೇವಾಲಯ, ಆನೆವಾಳು ಗ್ರಾಮದ ಆದಿನಾಥ ಬಸದಿ, ಭುವನಹಳ್ಳಿಯ ಚಂದ್ರನಾಥತೀರ್ಥಂಕರ ಬಸದಿ, ಬಾರ್ಸೆ ಗ್ರಾಮದಲ್ಲಿರುವ ಬಸವೇಶ್ವರ ದೇವಾಲಯಗಳು, ಬೆಟ್ಟದಪುರದ ವೀರಭದ್ರ ದೇವಾಲಯ, ಪಾಳುಬಿದ್ದ ಶೈವ ದೇವಾಲಯ, ಈಶ್ವರ ದೇವಾಲಯ, ಕುಡುಕೂರು ಗ್ರಾಮದ ಬಸವೇಶ್ವರ ದೇವಾಲಯಗಳು ಮುಖ್ಯವಾಗಿವೆ. ಆನೆವಾಳು ಗ್ರಾಮದ

ಆದಿನಾಥ ಬಸದಿಯ ಮುಖಮಂಟಪವು ಆಯಾತಾಕಾರದಲ್ಲಿದೆ. ಈ ಭಾಗದಲ್ಲಿ ನಾಲ್ಕು ಕಂಬಗಳಿದ್ದು, ಸರಳ ರೀತಿಯಿಂದ ಕೂಡಿರುವವು. ಕಂಬಗಳ ಪೀಠದಲ್ಲಿ ಪುಷ್ಪಾಕಾರದ ಉಬ್ಬುಶಿಲ್ಪಗಳನ್ನು ಬಿಟ್ಟರೆ ಯಾವುದೇ ರೀತಿಯ ಕೆತ್ತನೆ ಇರದೇ ಸರಳ ರೀತಿಯಿಂದ ಕೂಡಿರುವವು. ಕೆಸುವಿನಕೆರೆ ಮತ್ತು ಕುಡುಕೂರು ಗ್ರಾಮದ ಈಶ್ವರ ಮತ್ತು ಬಸವೇಶ್ವರ ದೇವಾಲಯಗಳ ಮುಖಮಂಟಪವು ಸ್ವಲ್ಪ ಅಲಂಕರಣೆಯಿಂದ ಶೈವ ಉಬ್ಬುಶಿಲ್ಪಗಳು ಮತ್ತು ಲತಾಬಳ್ಳಿಗಳಿಂದ ಅಲಂಕೃತಗೊಂಡಿರುವವು. ಈ ದೇವಾಲಯಗಳ ಮೆಟ್ಟಿಲುಗಳ ಅಕ್ಕಪಕ್ಕದಲ್ಲಿ ಗಜಾಕಾರದ ಸೊಂಡಿಲಿನ ಕೈಪಿಡಿಗಳನ್ನು ಕಾಣಬಹುದು. ಇವುಗಳನ್ನು ಬಿಟ್ಟರೆ ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬರುವ ದೇವಾಲಯಗಳ ಮುಖಮಂಟಪಗಳು ಸರಳ ರೀತಿಯಿಂದ ಕೂಡಿರುವುದನ್ನು ಕಾಣಬಹುದು. ಆದರೆ ಪಿರಿಯಾಪಟ್ಟಣದ ಹೊರಕೋಟೆಯಲ್ಲಿರುವ ಚನ್ನಕೇಶವ ದೇವಾಲಯದಲ್ಲಿ ಮುಖಮಂಟಪವು ಗಜಲಕ್ಷ್ಮೀ ಮತ್ತು ಲತಾಬಳ್ಳಿಯಿಂದ ಅಲಂಕೃತಗೊಂಡು ಮೂಲತಃ ಉತ್ತಮಮಟ್ಟದಿಂದ ಕೂಡಿತ್ತು. ಆದರೆ ಇಂದು ಆ ಮುಖಮಂಟಪವು ಬಹುತೇಕವಾಗಿ ಬಿದ್ದುಹೋಗಿದ್ದು, ಭಗ್ನಗೊಂಡ ಭಾಗಶಃ ಮುಖಮಂಟಪವನ್ನು ಗಮನಿಸಬಹುದು. ಈ ಭಾಗವು ಸಹ ಕೆಲವೇ ದಿನಗಳಲ್ಲಿ ಬಿದ್ದುಹೋಗುವ ಹಂತದಲ್ಲಿದೆ.

ದ್ವಾರಬಂಧ

ದ್ವಾರಬಂಧ ದೇವಾಲಯಗಳ ಪ್ರಮುಖ ವಾಸ್ತುಭಾಗ. ಸಾಮಾನ್ಯವಾಗಿ ಗರ್ಭಗೃಹ, ನವರಂಗ, ಮಹಾರಂಗಮಂಟಪ ಮತ್ತು ದ್ವಾರಮಂಟಪಗಳು ದ್ವಾರಬಂಧವನ್ನು ಹೊಂದಿರುತ್ತವೆ. ದೇವಾಲಯದ ದ್ವಾರಗಳು ದ್ವಾರಶಾಖಾಗಳಿಂದ ಕೂಡಿದ್ದು, ದ್ವಾರದ ಸೌಂದರ್ಯವನ್ನು ತರುವಲ್ಲಿ ಪ್ರಮುಖ ಪಾತ್ರವಹಿಸಿವೆ. ಸಾಮಾನ್ಯವಾಗಿ ಒಂದರಿಂದ ಒಂಬತ್ತು ಶಾಖೆಗಳಿಂದ ಅಲಂಕರಿಸಲ್ಪಟ್ಟಿರುತ್ತವೆ. ದ್ವಾರದ ಮೇಲಿರುವ ದ್ವಾರಶಾಖಾಗಳ ಸಂಖ್ಯೆಯ ಮೇಲೆ ದ್ವಾರಶಾಖಾ ವನ್ನು ನಿರ್ಧರಿಸಲಾಗುವುದು. ಉದಾಹರಣೆಗೆ ತ್ರಿಶಾಖಾ, ಪಂಚಶಾಖಾ, ದ್ವಾರಶಾಖಾಗಳು ವಿವಿಧ ರೀತಿಯಲ್ಲಿ ಅಲಂಕೃತಗೊಂಡಿದ್ದು, ಅವುಗಳ ಆಧಾರದ ಮೇಲೆ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುವುದು.

ದ್ವಾರದ ಒಳಭಾಗದ ಆರಂಭದಲ್ಲಿರುವ ದ್ವಾರಶಾಖಾವನ್ನು ಅಂತರ್ಶಾಖಾ ಎಂದು ಕರೆಯುವರು. ಇದು ಕಮಲದ ದಳಗಳಿಂದ ಅಲಂಕೃತವಾಗಿರುತ್ತದೆ. ಅದೇ ರೀತಿಯಾಗಿ ದ್ವಾರದ ಹೊರಭಾಗದ ಶಾಖಾವನ್ನು ಬಹಿರ್ಶಾಖಾ ಎಂದು ಕರೆಯಲಾಗುತ್ತದೆ. ಇದು ಸಹ ಕಮಲದ ದಳಗಳಿಂದ ಅಲಂಕೃತಗೊಂಡಿರುತ್ತದೆ. ದ್ವಾರಶಾಖೆಗಳ ಕೆಳಭಾಗದಲ್ಲಿ ಸಮತಟ್ಟಾದ ಫಲಕದಂತಿರುವ ಭಾಗವಿದ್ದು, ಇಲ್ಲಿ ದ್ವಾರಪಾಲಕರು, ಶಂಕನಿಧಿ, ಪದ್ಮನಿಧಿ, ಕಳಸ, ಗಂಗೆ, ಯಮುನೆ ಶಿಲ್ಪಗಳನ್ನು ಬಿಡಿಸಿರುವುದು ಕಂಡುಬರುತ್ತದೆ. ದ್ವಾರಪಾಲಕರು ದ್ವಾರಶಾಖೆಯ

ಕೆಳಭಾಗದಲ್ಲಿ ಅಕ್ಕಪಕ್ಕಕ್ಕೆ ದೇವರ ರಕ್ಷಣೆಗಾಗಿ ಆಯುಧಗಳನ್ನು ಹಿಡಿದು ನಿಂತಿರುವ ಶಿಲ್ಪಗಳು ಕೆಲವು ದೇವಾಲಯಗಳಲ್ಲಿ ಕಂಡುಬರುತ್ತವೆ. ಉದಾಹರಣೆಗೆ ಪಿರಿಯಾಪಟ್ಟಣದ ಚನ್ನಕೇಶವ ದೇವಾಲಯ, ಬಾರ್ಸೆ ಗ್ರಾಮದ ಬಸವೇಶ್ವರ, ಕೆಸುವಿನಕೆರೆ ಗ್ರಾಮದ ಬಸವೇಶ್ವರ ದೇವಾಲಯಗಳಲ್ಲಿ ಈ ಮೇಲಿನ ಉಬ್ಬುಶಿಲ್ಪಗಳನ್ನು ಕಾಣಬಹುದು. ದ್ವಾರಗಳ ಎಡ-ಬಲಕ್ಕೆ ಸಂಪತ್ತಿನ ಸಂಕೇತಗಳಾದ ಶಂಕನಿಧಿ, ಪದ್ಮನಿಧಿಗಳನ್ನು ಬಿಡಿಸಿರುತ್ತಾರೆ. ಮಲ್ಲಹಳ್ಳಿಯ ಬಸವೇಶ್ವರ, ತರಿಕಲ್ಲಿನ ಬಸವೇಶ್ವರ, ಪಿರಿಯಾಪಟ್ಟಣದ ಈಶ್ವರ, ಬೆಟ್ಟದಪುರ ವೀರಭದ್ರ, ಜಿ.ಬಸವನಹಳ್ಳಿಯ ಗಂಗಾಧರೇಶ್ವರ. ಶೈವ ದೇವಾಲಯಗಳಲ್ಲಿ ಶೈವ ದ್ವಾರಪಾಲಕರು ನಿಂತಿರುವರು. ಈ ಶೈವ ದ್ವಾರಪಾಲಕರು ಶೈವ ಸಂಕೇತಗಳಾದ ನಂದಿ, ತ್ರಿಶೂಲ, ಡಮರುಗ, ಲಿಂಗ, ಫಲ ಪುಷ್ಪ ಆಯುಧಗಳನ್ನು ಹಿಡಿದು ನಿಂತಿರುವರು. ಹಾಗೆಯೇ ವೈಷ್ಣವ ದೇವಾಲಯಗಳಾದ ಪಿರಿಯಾ ಪಟ್ಟಣದ ಚನ್ನಕೇಶವ, ಹಿಟ್ನೆಹೆಬ್ಬಾಗಿಲಿನ ಕೇಶವ, ಚಿಕ್ಕಹೊನ್ನೂರಿನ ರಂಗನಾಥ ದೇವಾಲಯದ ದ್ವಾರಪಾಲಕರು ವೈಷ್ಣವ ಆಯುಧಗಳಾದ ಶಂಖ ಮತ್ತು ಗದೆಗಳನ್ನು ಹೊಂದಿದ್ದಾರೆ. ಹೀಗೆ ದ್ವಾರಗಳು ದ್ವಾರಶಾಖಾಗಳಿಂದ ಮತ್ತು ಶಿಲ್ಪಗಳಿಂದ ಅಲಂಕೃತಗೊಂಡಿರುವುದನ್ನು ದೇವಾಲಯ ಗಳಲ್ಲಿ ಕಾಣಬಹುದಾಗಿದೆ.

ಭುವನೇಶ್ವರಿ

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕಂಡುಬಂದಿರುವ ಶಿಲಾದೇವಾಲಯಗಳಲ್ಲಿ ಭುವನೇಶ್ವರಿ ರಚನೆಯನ್ನು ಕಾಣುತ್ತೇವೆ. ದೇವಾಲಯ ಅಥವಾ ಜೈನ ಬಸದಿಗಳಲ್ಲಿ ಗರ್ಭಗೃಹ ಮತ್ತು ನವರಂಗ ಮಂಟಪಗಳಲ್ಲಿ ಇಲ್ಲವೆ ಸಭಾಮಂಟಪಗಳಲ್ಲಿ ಮಾತ್ರ ಭುವನೇಶ್ವರಿಗಳ ಅಲಂಕರಣೆ ಇರುತ್ತದೆ. ದೇವಾಲಯದ ಮಹಾಮಂಟಪದ ಭುವನೇಶ್ವರಿ ವಿವಿಧ ರೀತಿಯಲ್ಲಿ ಅಲಂಕೃತ ಗೊಂಡಿರುತ್ತದೆ. ಒಂದೇ ಮಂಟಪದಲ್ಲಿ ಒಂದಕ್ಕಿಂತ ಹೆಚ್ಚು ಅಂಕಣಗಳಿದ್ದಾಗ, ಅವುಗಳನ್ನು ಬೇರೆ ಬೇರೆ ರೀತಿಯಲ್ಲಿ ಅಲಂಕರಿಸಲಾಗಿರುತ್ತದೆ. ಸಾಮಾನ್ಯವಾಗಿ ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ಪಿರಿಯಾಪಟ್ಟಣದ ಕೇಶವ ದೇವಾಲಯ, ಬೆಟ್ಟದ ತುಂಗದ ಅರ್ಕೇಶ್ವರ ದೇವಾಲಯ, ಬೆಟ್ಟದಪುರದ ವೀರಭದ್ರ ದೇವಾಲಯ, ಹಿಟ್ನೆಹೆಬ್ಬಾಗಿಲಿನ ಕೇಶವ ದೇವಾಲಯ, ಕೆಸುವಿನ ಕೆರೆಯ ಈಶ್ವರ ದೇವಾಲಯಗಳಲ್ಲಿ ಭುವನೇಶ್ವರಿಯನ್ನು ಕಾಣುತ್ತೇವೆ. ಭುವನೇಶ್ವರಿಯಲ್ಲಿ ಅರಳಿದ ಕಮಲದ ಅಲಂಕಾರವು ಹೆಚ್ಚಾಗಿ ಕಂಡುಬರುತ್ತದೆ. ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯ ಮತ್ತು ಪಿರಿಯಾಪಟ್ಟಣದ ಈಶ್ವರ ದೇವಾಲಯದಲ್ಲಿ ಗುಮ್ಮಟಾಕಾರದ ಭುವನೇಶ್ವರಿ ಇದೆ. ಇದರ ಮಧ್ಯದಲ್ಲಿ ಇಳಿಬಿದ್ದ ಮೊಗ್ಗು, ಸುತ್ತಲು ಪದ್ಮದಳಗಳಿದ್ದು ಆಕರ್ಷಕವಾಗಿದೆ. ಪ್ರಾಚೀನ ಪರಂಪರೆಯಂತೆ ಭುವನೇಶ್ವರಿಯಲ್ಲಿ ಕೆಲವು ಶಿಲ್ಪಗಳನ್ನು ಕಾಣಬಹುದು.

ಕೊಣಸೂರು, ಅನಿವಾಳು ಹಾಗೂ ಬೆಟ್ಟದತುಂಗಗಳಲ್ಲಿ ಜೈನ ಬಸದಿಗಳಿವೆ. ಈ ಬಸದಿಗಳಲ್ಲಿ ಅರಳಿದ ಕಮಲದ ಅಲಂಕಾರದ ಬದಲಿಗೆ ಮೊಗ್ಗು ಅಥವಾ ಕಾಯಿ ಇರುವ ಶಿಲ್ಪಗಳನ್ನು ಕಾಣಬಹುದು. ಇವುಗಳನ್ನು ಬಿಟ್ಟರೆ ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಕಂಡುಬರದೆ ಸರಳವಾಗಿರುವವು. ಆದರೆ ಬೆಟ್ಟದ ತುಂಗದ ಆದಿನಾಥ ಬಸದಿಯ ಭುವನೇಶ್ವರಿ ಇತರೆ ಬಸದಿಗಳಿಗಿಂತ ಸ್ವಲ್ಪ ಭಿನ್ನವಾಗಿದೆ. ಈ ಬಸದಿಯ ನವರಂಗದ ಭುವನೇಶ್ವರಿಯಲ್ಲಿನ ಉಬ್ಬುಕೆತ್ತನೆಯಲ್ಲಿ ದಂಪತಿ ಸಮೇತರಾಗಿ ತಮ್ಮ ವಾಹನಗಳ ಮೇಲೆ ಕುಳಿತಿರುವ ಶಿಲ್ಪಗಳನ್ನು ಕಾಣಬಹುದು. ಈ ಭುವನೇಶ್ವರಿಯಲ್ಲಿ ಜಿಂಕೆ, ಮುನಿ ಮತ್ತು ಕೋತಿಯ ಉಬ್ಬುಶಿಲ್ಪಗಳನ್ನು ಕಾಣಬಹುದು. ದೇವಾಲಯದ ಮೂಲನಕ್ಷೆ, ಕಟ್ಟಿರುವ ಶೈಲಿ, ಬಳಸಿರುವ ಗ್ರಾನೈಟ್‌ಶಿಲೆಯ ಕಂಬಗಳಲ್ಲಿ ಹೆಚ್ಚು ಅಲಂಕಾರಯುಕ್ತ ಕೆತ್ತನೆಗಳಿಲ್ಲದಿರುವುದು, ದೇವಾಲಯದ ಅಳತೆ, ಭುವನೇಶ್ವರಿಗಳ ಸರಳತೆ ಇತ್ಯಾದಿಗಳ ಆಧಾರದ ಮೇಲೆ ದೇವಾಲಯವನ್ನು ಚಂಗಾಳ್ವರ ಪ್ರಾರಂಭದ ಕಾಲದ್ದೆಂದು ಹೇಳಬಹುದು. ವಿಸ್ತೀರ್ಣದ ದೃಷ್ಟಿಯಿಂದ ವಿಶಾಲವಾಗಿದ್ದು, ಈ ಹಿಂದೆ ಇದ್ದ ಮೂಲ ಜಿನ ಮೂರ್ತಿ ಬದಲು ವೀರಭದ್ರ ಶಿಲ್ಪವಿರಿಸಿರುವರು. ಹೊಯ್ಸಳರ ಕಲಾಸ್ಮಾರಕಗಳಾದ ಬೇಲೂರಿನ ಚೆನ್ನಕೇಶವ ದೇವಾಲಯ, ಮತ್ತು ಹಳೆಬೀಡಿನ ಹೊಯ್ಸಳೇಶ್ವರ ದೇವಾಲಯಗಳ ಭುವನೇಶ್ವರಿ ರಚನೆಯಲ್ಲಿ ಶಿಲ್ಪಿಗಳ ಕೌಶಲ್ಯವನ್ನು ಮೆಚ್ಚುವಂತಹದು. ಆದರೆ ಅಂಥ ಭುವನೇಶ್ವರಿಗಳು ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬರುವುದಿಲ್ಲ. ಏಕೆಂದರೆ ಹೊಯ್ಸಳರ ಬಹುತೇಕ ದೇವಾಲಯಗಳು ಮೃದುವಾದ ಬಳಪದ ಕಲ್ಲಿನಿಂದ ನಿರ್ಮಾಣಗೊಂಡಿರುವವು. ಇಂತಹ ಮೃದುವಾದ ಕಲ್ಲುಗಳು ಕಲಾತ್ಮಕವಾಗಿ ಕೆತ್ತಲು ಸಹಾಯಕವಾಗಿದ್ದವು. ಆದರೆ ಪಿರಿಯಾಪಟ್ಟಣ ಪರಿಸರದಲ್ಲಿ ಹೊಯ್ಸಳರು ಆಳ್ವಿಕೆ ಮಾಡಿದ್ದರೂ ಸಂಪೂರ್ಣವಾಗಿ ದೇವಾಲಯ ನಿರ್ಮಿಸಿರುವುದು ಕಂಡುಬಂದಿಲ್ಲ. ಅಲ್ಲದೆ ಸ್ಥಳೀಯ ಗ್ರಾನೈಟ್ ಕಲ್ಲುಗಳನ್ನು ದೇವಾಲಯ ನಿರ್ಮಿಸಲು ಉಪಯೋಗಿಸಿರುವರು. ಈ ಗ್ರಾನೈಟ್ ಕಲ್ಲುಗಳ ಮೇಲೆ ಕಲಾತ್ಮಕ ಕೆತ್ತನೆ ರೂಪಿಸಲು ಸುಲಭವಲ್ಲ.

ಕಂಬಗಳು

ದೇವಾಲಯವು ಸಂಪೂರ್ಣವಾಗಿ ನಿಂತಿರುವುದೇ ಕಂಬಗಳ ಮೇಲೆ. ದೇವಾಲಯದ ಭದ್ರತೆಯು ಕಂಬಗಳನ್ನೆ ಅವಲಂಬಿಸಿದ್ದರಿಂದ ದೇವಾಲಯ ರಚನೆಯಲ್ಲಿ ಕಂಬಗಳು ಬಹುಮುಖ್ಯ. ಪ್ರತಿಯೊಂದು ದೇವಾಲಯವು ಅನೇಕ ಕಂಬಗಳಿಂದ ರಚನೆಯಾಗಿರುತ್ತದೆ. ಇವುಗಳನ್ನು ಕಲಾತ್ಮಕಗೊಳಿಸಿ ಸ್ಮಾರಕಗಳ ಪ್ರಮುಖ ವಾಸ್ತುಭಾಗವನ್ನಾಗಿ ಬಿಂಬಿಸಿರುವ ಸಂಗತಿ ಎಲ್ಲಾ ಪ್ರಾಚೀನ ದೇವಾಲಯಗಳಿಂದ ತಿಳಿದುಬರುತ್ತದೆ. ಪ್ರಾರಂಭ ಕಾಲದಲ್ಲಿ ನೇರ, ಸರಳವಾಗಿದ್ದ

ಕಂಬಗಳು ಕ್ರಮೇಣ ಅತ್ಯಂತ ಕಲಾತ್ಮಕವಾಗಿ ರಚನೆಯಾಗಿರುತ್ತವೆ. ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳರ ಕಾಲದ ಕಂಬಗಳು ತಮ್ಮ ವಿನ್ಯಾಸ, ಶೈಲಿ ಮತ್ತು ಕಲಾತ್ಮಕ ಅಂಶಗಳಿಂದಾಗಿ ಪ್ರಸಿದ್ಧವಾಗಿವೆ. ವಿಜಯನಗರ ಕಾಲದ ಕಂಬಗಳು ಭವ್ಯತೆ ಮತ್ತು ವೈಭವವನ್ನು ಪ್ರತಿಬಿಂಬಿಸುತ್ತವೆ. ಈ ಪರಂಪರೆಯನ್ನು ಅನುಸರಿಸಿ ಅವರ ಸಾಮಂತ ಅರಸರು ವಾಸ್ತುಸ್ಮಾರಕ ಕಟ್ಟಡಗಳನ್ನು, ಕಂಬಗಳನ್ನು ನಿರ್ಮಿಸಿರುವರು.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ದೇವಾಲಯಗಳನ್ನು ಗಮನಿಸಿದಾಗ ಕಂಬಗಳನ್ನು ಗೋಡೆಯ ಒಳಗಿನ ಕಂಬಗಳು ಅಥವಾ ಅರೆಗಂಬಗಳು ಮತ್ತು ಗೋಡೆಯ ಹೊರಗಿನ ಕಂಬಗಳು ಅಥವಾ ಪೂರ್ಣಗಂಬಗಳೆಂದು ಎರಡು ರೀತಿಯಾಗಿ ವಿಂಗಡಿಸಬಹುದು. ಗೋಡೆಯ ಒಳಗಿನ ಕಂಬಗಳು ಸಂಪೂರ್ಣವಾಗಿ ಗೋಡೆಯಿಂದ ಆವೃತವಾಗಿದ್ದಲ್ಲಿ ಅವುಗಳಿಗೆ ಯಾವ ಅಲಂಕಾರವು ಇಲ್ಲದೆ ಕೇವಲ ಭಾರಹೊರುವ ಉದ್ದೇಶವನ್ನು ಮಾತ್ರ ಹೊಂದಿರುತ್ತವೆ. ಹೊರನೋಟಕ್ಕೆ ಕಂಬಗಳಿರುವುದು ತಿಳಿಯುವುದಿಲ್ಲ. ಕೆಲವೊಮ್ಮೆ ಗೋಡೆಯಲ್ಲಿನ ಕಂಬಗಳು ದೇವಾಲಯದ ಒಳಭಾಗದಲ್ಲಿ ಅರ್ಧ ಮಾತ್ರ ಕಾಣುವಂತೆ ಇರುತ್ತದೆ. ಇಂತಹ ಸನ್ನಿವೇಶಗಳಲ್ಲಿ ಹೊರಕ್ಕೆ ಕಾಣುವ ಅರ್ಧಕಂಬ ಭಾಗವನ್ನು ನವರಂಗದಲ್ಲಿದ್ದಿರಬಹುದಾದ ಕಂಬಗಳಂತೆ ಬಿಡಿಸಿರುತ್ತಾರೆ. ಇದರ ಮೇಲೆ ಬರುವ ಬೋದಿಗೆಯೂ ನವರಂಗದ ಬೋದಿಗೆಯ ಅನುಕರಣ ವಾಗಿರುತ್ತದೆ. ಗೋಡೆಯನ್ನು ಬಿಟ್ಟು ನವರಂಗ, ಅಂತರಾಳ, ಮುಖಮಂಟಪಗಳ ಕಂಬಗಳು ಸ್ವತಂತ್ರವಾಗಿ ಕಂಡುಬರುತ್ತವೆ. ಇವುಗಳ ಕೆತ್ತನೆ ನಾಲ್ಕು ಮುಖಗಳಲ್ಲೂ ಪೂರ್ಣವಾಗಿರುತ್ತದೆ.

ಎಲ್ಲಾ ದೇವಾಲಯಗಳಲ್ಲೂ ಏಕ ಪ್ರಕಾರದ ಕಂಬಗಳಿಲ್ಲದಿರಲು ಕಾರಣ ಆಯಾ ರಾಜವಂಶಗಳ ಪ್ರಭಾವ, ಬಳಸಿದ ಮಾಧ್ಯಮ, ಪ್ರಾದೇಶಿಕ ಪ್ರಭಾವಗಳು ಕಾರಣವಾಗಿವೆ. ಈ ದೇವಾಲಯಗಳ ನವರಂಗ ಕಂಬಗಳನ್ನು ಗಮನಿಸಿದಾಗ ಮುಖ್ಯವಾಗಿ ಮೂರು ಭಾಗವಾಗಿ ವಿಂಗಡಿಸಬಹುದಾಗಿದ್ದು, ಚೌಕಾಕಾರದಲ್ಲಿ ಕೆತ್ತಿರುವ ಕಂಬಗಳು, ಅಷ್ಟಕೋನ ಮೂಲೆಯುಳ್ಳ ಕಂಬಗಳು ಮತ್ತು ಗುಂಡಗಿರುವ ಕಂಬಗಳೆಂದು ವಿಂಗಡಿಸಬಹುದು.

ಚೌಕಾಕಾರದ ಕಂಬಗಳು

ಈ ಬಗೆಯ ಕಂಬಗಳಲ್ಲಿ ಎರಡು ಒಳ ಪ್ರಭೇದಗಳನ್ನು ಕಾಣುತ್ತೇವೆ. ಕಂಬಗಳು ಕ್ರಮವಾಗಿ ನಾಲ್ಕು ಹಂತಗಳಲ್ಲಿ ನಾಲ್ಕು ಮೂಲೆ, ಎಂಟು ಮೂಲೆ, ನಾಲ್ಕು ಮೂಲೆ, ಎಂಟು ಮೂಲೆಯಿಂದ ಕೂಡಿರುವುದು. ಇಂತಹ ಕಂಬಗಳಲ್ಲಿ ಯಾವುದೇ ಬಗೆಯ ಅಲಂಕರಣ ವಿರುವುದಿಲ್ಲ. ಕೇವಲ ದೇವಾಲಯದ ಮೇಲ್ಛಾವಣಿಯ ತೂಕವನ್ನು ಹೊರಲು ಶಕ್ತವಾಗಿರುವಂತೆ ಮತ್ತು ನವರಂಗವನ್ನು ವಿಸ್ತರಿಸುವ ಉದ್ದೇಶ ಮಾತ್ರ ಅಡಕವಾಗಿರುತ್ತದೆ. ಕಂಬಗಳು ಕುಳ್ಳಾಗಿದ್ದು ಸುಮಾರು ನಾಲ್ಕು-ನಾಲ್ಕೂವರೆ ಅಡಿ ಎತ್ತರವಿರುತ್ತದೆ. ಇಂತಹ ಕಂಬಗಳ ಬೋದಿಗೆಯೂ

ಸರಳವಾಗಿದ್ದು ಎರಡು ಮುಖಗಳು ಮಾತ್ರ ಇರುತ್ತವೆ. ಈ ಕಂಬಗಳ ಎರಡೂ ಕಡೆ ಸರಳ ರೇಖೆಗಳಂತೆ ನವರಂಗದ ಒಂದು ಬದಿಯಿಂದ ಇನ್ನೊಂದು ಬದಿಗೆ ತೊಲೆಗಳ ರೀತಿ ಜೋಡಣೆ ಮಾಡಲಾಗಿದೆ.

ಇದರಲ್ಲಿ ಒಳಪ್ರಭೇದವಿದ್ದು ಕೆಳಭಾಗ ಚೌಕಾಕಾರದಿಂದ ಕೂಡಿದ್ದು ಕಂಬದ ನಡುವಿನಲ್ಲಿ ಅಷ್ಟ ಮೂಲೆ ಪಡೆದು, ಅದರ ಮೇಲೆ ಚೌಕಾಕಾರದ ದಪ್ಪ ರಚನೆಯನ್ನು ಪಡೆದಿರುತ್ತದೆ. ಮೇಲೆ ಮತ್ತೆ ಸಣ್ಣದಾಗಿ ಕುಂಬಾಕಾರವನ್ನು ಪಡೆಯುತ್ತವೆ. ಮಧ್ಯೆ ಬಂದಿರುವ ಚೌಕಾಕಾರದ ಭಾಗವು ಉಳಿದ ಭಾಗಗಳಿಗಿಂತ ಮುಂಚಾಚಿರುತ್ತದೆ.

ಎರಡನೇ ವರ್ಗದ ಕಂಬಗಳು ಪಾದದಿಂದ ಬೋದಿಗೆಯವರೆಗೆ ಎಂಟು ಮುಖಗಳನ್ನು ಹೊಂದಿರುತ್ತವೆ. ಈ ಕಂಬಗಳು ಗುಂಡಗಿನ ಕಂಬಗಳಂತೆ ಶಲಾಕ, ಕೊಡ, ಮುಚ್ಚಳದ ಭಾಗಗಳನ್ನು ಹೊಂದಿದ್ದರೂ ಎಂಟು ಮುಖದಲ್ಲಿರುವುದು ಇವುಗಳ ವೈಶಿಷ್ಟ್ಯ. ಈ ಬಗೆಯ ಕಂಬಗಳ ಮಧ್ಯಭಾಗದಲ್ಲಿ ಅಥವಾ ತಳಭಾಗದಲ್ಲಿ ಅಲಂಕಾರ ಶಿಲ್ಪಗಳಿರುವುದುಂಟು. ಕಂಬದ ಮಾಲಾಲಂಕಾರದ ಕಡೆಯಲ್ಲಿ ಸಿಂಹವಕ್ತ್ರಗಳು ಬಂದಿದ್ದು, ಅವುಗಳಿಂದ ಇಳಿಬಿದ್ದ ಮಾಲೆಗಳು ಸರಳವಾಗಿರುವುದುಂಟು.

ಮೂರನೇ ರೀತಿಯ ಕಂಬಗಳ ತಳಭಾಗ ಚತುರಸ್ರವಾಗಿದ್ದು ಅನಂತರದ ಭಾಗ ವೃತ್ತಾಕಾರವಾಗಿರುತ್ತದೆ. ಮೇಲೆ ಹೋದಂತೆ ಕೊಡದಾಕೃತಿಗೆ ತಿರುಗಿ ಮೇಲೆ ಮುಚ್ಚಳವನ್ನು ಪಡೆದಿರುತ್ತದೆ. ಮುಚ್ಚಳದ ನಂತರ ಬೋದಿಗೆ ಬರುತ್ತದೆ. ಕೆಲವೊಮ್ಮೆ ಮುಚ್ಚಳದ ಮೇಲೆ ಪದ್ಮ ಫಲಕವಿದ್ದು ಅದು ಸಾಕಷ್ಟು ಅಗಲವಿರುವುದೂ ಉಂಟು. ಕಂಬಗಳ ಪಾದಭಾಗದಲ್ಲಿ ಯಾವುದೇ ಬಗೆಯ ಕೆತ್ತನೆಗಳಿರುವುದಿಲ್ಲ. ಇದರ ಮೇಲೆ ಮೂರು ಅಥವಾ ನಾಲ್ಕು ಇಂಚಿನಷ್ಟು ಭಾಗ ಎಂಟು ಮೂಲೆಯಲ್ಲಿರುತ್ತದೆ. ಅನಂತರ ವೃತ್ತಾಕಾರಕ್ಕೆ ತಿರುಗಿ ವೃತ್ತಾಕಾರವು ಮೇಲಕ್ಕೆ ಹೋದಂತೆ ಗಾತ್ರದಲ್ಲಿ ಸ್ವಲ್ಪ ಚಿಕ್ಕದಾಗುತ್ತಾ ಮುಂದೆ ಎಡೆಕಟ್ಟುಗಳು ಕಾಣಿಸಿಕೊಳ್ಳುತ್ತವೆ. ಎಡೆಕಟ್ಟಗಳ ಮೇಲ್ಭಾಗ ಸಾಮಾನ್ಯವಾಗಿ ಕೊಡ ಅಥವಾ ಕುಂಭದ ಆಕಾರದಲ್ಲಿರುತ್ತದೆ. ಕೆಲವು ಕಡೆ ಕುಂಭದ ಭಾಗದಲ್ಲಿ ನಾಲ್ಕು ಮೂಲೆಗಳಲ್ಲಿ ಬಳ್ಳಿಗಳ ಅಲಂಕಾರವನ್ನು ಬಿಡಿಸಿರುತ್ತಾರೆ. ಮುಚ್ಚಳವು ವೃತ್ತಾಕಾರವಾಗಿರಲಿ ಅಥವಾ ಅಷ್ಟಕೋನಾಕಾರವಾಗಿರಲಿ ಕೆಲವು ಕಡೆಗಳಲ್ಲಿ ಬಳ್ಳಿಯ ಅಲಂಕಾರ ಬಂದಿರುವುದುಂಟು. ಬೆಟ್ಟದಪುರ, ಬೆಟ್ಟದತುಂಗ, ಪಿರಿಯಾಪಟ್ಟಣ, ರಾವಂದೂರುಗಳಲ್ಲಿ ಮುಚ್ಚಳದ ಭಾಗಗಳು ಸುಂದರವಾಗಿವೆ. ಈ ಭಾಗದ ಮೇಲೆ ಕಂಠ ಬಂದಿದ್ದು ಅದರ ಮೇಲೆ ಬೋದಿಗೆ ಬಂದಿರುತ್ತದೆ. ಸಾಮಾನ್ಯವಾಗಿ ಕಂಬಗಳು ಚತುರಸ್ರವಾಗಿ, ವೃತ್ತಾಕಾರವಾಗಿರುವವು. ಇವುಗಳ ಕೆಳಗೆ ಪೀಠವಿದ್ದು ಅರ್ಧ ಅಡಿ ಎತ್ತರವಾಗಿರುತ್ತವೆ.

ಪೀಠಗಳು ಸರಳ ಅಥವಾ ಅಲಂಕರಣದಿಂದ ಕೂಡಿರುವವು. ಕಂಬಗಳ ಭಾಗವಾದ ಮುಚ್ಚಳ ಮತ್ತು ಪದ್ಮಫಲಕದ ನಂತರ ಕಂಠ ಬರುತ್ತದೆ. ಈ ಕಂಠದ ಮೇಲೆ ಬೋದಿಗೆ ಬರುತ್ತದೆ. ಇಲ್ಲಿನ ಕೆಲವು ದೇವಾಲಯಗಳಲ್ಲಿ ಮುಖ್ಯವಾಗಿ ಎರಡು ರೀತಿಯ ಬೋದಿಗೆಗಳು ಕಾಣಬರುತ್ತವೆ. ಒಂದನೆಯದು ತರಂಗ ಬೋದಿಗೆ, ಎರಡನೆಯದು ಸರಳ ಬೋದಿಗೆ.

ತರಂಗ ಬೋದಿಗೆಯ ತಳ ಭಾಗ ಚಿಕ್ಕದಾಗಿದ್ದು ಮೇಲಕ್ಕೆ ಹೋದಂತೆ ಮುಂಚಾಚಿರುತ್ತದೆ. ಇಳಿಜಾರಾಗಿ ಮುಂಚಾಚಿರುವ ಭಾಗದಲ್ಲಿ ಸುರಳಿಗಳನ್ನು ಅಥವಾ ತರಂಗಗಳನ್ನು ಬಿಡಿಸಿರುವುದರಿಂದ ಇವನ್ನು ತರಂಗಬೋದಿಗೆಗಳೆಂದು ಗುರುತಿಸುತ್ತೇವೆ. ಕೆಲವೊಮ್ಮೆ ಈ ತರಂಗಗಳನ್ನು ಛೇದಿಸಿದಂತೆ ಮಧ್ಯಬಂಧ ಪಟ್ಟಿ ಬಂದಿರುತ್ತದೆ. ಕೆಲವೆಡೆ ಮಧ್ಯೆಬಂಧದಲ್ಲಿ ಲತಾಲಂಕಾರವನ್ನು ಬಿಡಿಸಿರುತ್ತಾರೆ. ಈ ಬಗೆಯ ಬೋದಿಗೆಗಳನ್ನು ಪಿರಿಯಾಪಟ್ಟಣದ ಈಶ್ವರ ದೇವಾಲಯ, ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯಗಳಲ್ಲಿ ಕಾಣಬಹುದು.

ಸರಳ ಬೋದಿಗೆ ತರಂಗ ಬೋದಿಗೆಗಿಂತ ಭಿನ್ನವಾಗಿರುತ್ತದೆ. ಅಂದರೆ ತಳಭಾಗದಿಂದ ಮೇಲಕ್ಕೆ ಇಳಿಜಾರಾಗಿ ಮುಂಚಾಚಿದ್ದು ಅನಂತರ ಮೇಲಕ್ಕೆ ನೇರವಾಗಿ ಸಾಗುತ್ತದೆ. ಕೆಲವು ಸರಳಬೋದಿಗೆಗಳಲ್ಲಿ ತರಂಗ ಬೋದಿಗೆಗಳಲ್ಲಿರುವಂತೆ ಪಟ್ಟಿ ಬಂದಿದ್ದರೂ ಅವುಗಳಲ್ಲಿ ಅಲಂಕಾರವಿರುವುದಿಲ್ಲ. ತರಂಗ ಬೋದಿಗೆಗಳಿಗಿಂತ ಸರಳ ಬೋದಿಗೆಗಳೇ ಅತ್ಯಂತ ಜನಪ್ರಿಯವಾಗಿದ್ದುವೆಂಬುದನ್ನು ಅವುಗಳ ಬಳಕೆಯಿಂದ ಅರಿಯಬಹುದು. ಚತುರಸ್ರಾಕಾರ, ಅಷ್ಟಸ್ರಾಕಾರ ಕಂಬಗಳನ್ನು ಬಳಸಿರುವ ಕಡೆಗಳಲ್ಲೆಲ್ಲಾ ಈ ಬಗೆಯ ಬೋದಿಗೆಯೇ ಕಂಡುಬರುತ್ತದೆ. ಉಳಿದ ಗುಂಡಗಿನ ಕಂಬಗಳನ್ನು ಬಳಸಿರುವೆಡೆ ಅಲ್ಲಲ್ಲಿ ಈ ಬಗೆಯ ಬೋದಿಗೆಗಳನ್ನೇ ಬಳಸಿರುತ್ತಾರೆ. ಬೆಟ್ಟತುಂಗದ ವೀರಭದ್ರ ದೇವಾಲಯ, ಪಿರಿಯಾಪಟ್ಟಣದ ಚನ್ನಕೇಶವ, ಬೆಟ್ಟತುಂಗದ ಈಶ್ವರ ದೇವಾಲಯ, ಮೇಲೂರಿನ ಈಶ್ವರ ದೇವಾಲಯಗಳಲ್ಲಿ ಕಾಣಬಹುದು.

ಬೆಟ್ಟದತುಂಗ ಗ್ರಾಮದಲ್ಲಿರುವ ವೀರಭದ್ರ ದೇವಾಲಯವು ಮೂಲತಃ ಜೈನ ಬಸದಿ. ಇಂದು ಮೂಲ ಜೈನ ವಿಗ್ರಹವಿರದೆ ಅಲ್ಲಿ ವೀರಭದ್ರ ಮೂರ್ತಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಕಂಬಗಳು ತೊಲೆಯನ್ನು ಹೊತ್ತಿಕೊಂಡಂತೆ ಮೇಲ್ಛಾವಣಿಯನ್ನು ಹೊತ್ತಿವೆ. ನವರಂಗದಲ್ಲಿ ಎರಡು ಸ್ತಂಭಗಳು ಮಾತ್ರ ಪೀಠದ ಮೇಲೆ ನಿಂತಿದ್ದು, ಚೌಕಾಕಾರ ಒಳಗೊಂಡಂತೆ ಎಂಟು ಕೋನ ಅಥವಾ ಮುಖಗಳು ಇದ್ದು, ಬೋದಿಗೆಯನ್ನು ಹೊಂದಿದ್ದು ತೊಲೆಯನ್ನು ಹೊಂದಿವೆ. ನವರಂಗ, ಸಭಾಮಂಟಪಗಳಲ್ಲಿ ಸ್ತಂಭಗಳು ಸ್ವಲ್ಪ ಪ್ರಮಾಣದಲ್ಲಿ ಭಿನ್ನವಾಗಿವೆ. ಇಲ್ಲಿಯ ಕಂಬಗಳು ಚೌಕಾಕಾರದ ಪೀಠದ ಮೇಲೆ ನಿಂತಿವೆ. ತಳಭಾಗ ಚೌಕಾಕಾರವಾಗಿದ್ದು ಇದರ ಮೇಲ್ಭಾಗದಲ್ಲಿ ಹದಿನಾಲ್ಕು ಕೋನಗಳಿವೆ. ಇದರ ಮೇಲೆ ವೃತ್ತ, ನಂತರ ಬೋಧಿಗೆಯನ್ನು

ಹೊಂದಿದ್ದು ತೊಲೆಯನ್ನು ಹೊತ್ತು ನಿಂತಿವೆ. ಇಲ್ಲಿಯ ಕಂಬಗಳ ಮೇಲೆ ಯಾವುದೇ ರೀತಿಯ ಕೆತ್ತನೆ ಇರುವುದಿಲ್ಲ. ಆದರೆ ನವರಂಗ ಮಂಟಪದ ತೊಲೆಯ ಮೇಲೆ ವಿವಿಧ ರೀತಿಯ ಉಬ್ಬುಶಿಲ್ಪಗಳಿರುವವು. ಅವುಗಳಲ್ಲಿ ಆನೆ, ಟಗರು, ಹಸು, ಜಿಂಕೆ ಮತ್ತು ಆನೆಯ ಮೇಲೆ ಮಹಿಳೆಯು ಕುಳಿತಿರುವ ಉಬ್ಬುಶಿಲ್ಪವಿದೆ. ಇವನ್ನು ಬಿಟ್ಟರೆ ಶೈವ ದೇವಾಲಯಗಳಲ್ಲಿ ಶಿವಲಿಂಗ, ಶಿವನವಾಹನವಾದ ನಂದಿ, ಹಸು, ಶಿಲ್ಪಗಳನ್ನು ಕಾಣಬಹುದು.

ಪ್ರವೇಶ ದ್ವಾರಗಳು

ನವರಂಗದ ಪ್ರವೇಶ ದ್ವಾರಗಳೂ ಸಹ ಅನೇಕ ದೇವಾಲಯಗಳಲ್ಲಿ ಗರ್ಭಗೃಹದ ನೇರಕ್ಕೆ ಗರ್ಭಗೃಹ ಪೂರ್ವಾಭಿಮುಖವಾಗಿದ್ದರೆ ನವರಂಗಕ್ಕೆ ಪ್ರವೇಶಿಸುವ ದ್ವಾರವು ದಕ್ಷಿಣಾಭಿಮುಖವಾಗಿರುತ್ತಿತ್ತು. ಕೆಲವು ದೇವಾಲಯಗಳಲ್ಲಿ ಗರ್ಭಗೃಹಕ್ಕೆ ನೇರವಾಗಿ ಇರುತ್ತಿತ್ತು. ಬಹುತೇಕ ದೇವಾಲಯಗಳಲ್ಲಿ ಎರಡು ಬಾಗಿಲುಗಳು ಇರುತ್ತಿದ್ದವು. ಒಂದು ಹೊರಗಿನಿಂದ ನವರಂಗಕ್ಕೆ ಪ್ರವೇಶಿಸುವ ಬಾಗಿಲು. ಎರಡನೆಯದು ಅಂತರಾಳದಿಂದ ಗರ್ಭಗೃಹಕ್ಕೆ ಪ್ರವೇಶಿಸುವ ಬಾಗಿಲು. ಹೀಗಾಗಿ ಒಳಗಿನ ಅಂದರೆ ಅಂತರಾಳದಿಂದ ಗರ್ಭಗೃಹಕ್ಕೆ ಪ್ರವೇಶಿಸುವ ಬಾಗಿಲು ಕತ್ತಲಲ್ಲಿರುತ್ತಿದ್ದುದರಿಂದ ಹೆಚ್ಚಿನ ಅಲಂಕಾರ ಮಾಡಿರುತ್ತಿರಲಿಲ್ಲ. ಆದರೆ ಬೀದಿ ಕಡೆ ಮುಖ ಮಾಡಿದ್ದ ನವರಂಗದ ಬಾಗಿಲನ್ನು ಮಾತ್ರ ಹೆಚ್ಚಿಗೆ ಅಲಂಕರಣ ಗೊಳಿಸಿರುತ್ತಿದ್ದರು. ಈ ಬಗೆಯ ಅಲಂಕಾರ ಎಲ್ಲಾ ದೇವಾಲಯಗಳಲ್ಲಿ ಕಾಣದಿದ್ದರೂ ಕೆಲವು ದೇವಾಲಯಗಳಲ್ಲಿ ಕಾಣಬರುತ್ತದೆ. ಇದುವರೆವಿಗೆ ಗಮನಿಸಿರುವ ಮತ್ತು ಪರೀಕ್ಷಿಸಿರುವ ಪಿರಿಯಾಪಟ್ಟಣ ತಾಲ್ಲೂಕಿನ ದೇವಾಲಯಗಳ ಬಾಗಿಲುಗಳ ವೈಶಿಷ್ಟ್ಯವೆಂದರೆ ಬಾಗಿಲುಗಳು ಸಾಮಾನ್ಯವಾಗಿ ಕಿರಿದಾಗಿರುತ್ತವೆ. ಕೆಲವು ದೇವಾಲಯಗಳಲ್ಲಿ ಇವು ಸುಮಾರು ಮೂರೂವರೆ ಅಡಿ ಎತ್ತರ ಮತ್ತು ಎರಡೂವರೆ ಅಡಿ ಅಗಲವಿರುತ್ತವೆ.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕಂಡುಬರುವ ದೇವಾಲಯಗಳ ಬಾಗಿಲವಾಡಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ ಅಲಂಕಾರ ರಹಿತವಾದವು ಮತ್ತು ಅಲಂಕಾರ ಸಹಿತವಾದವು. ಅಲಂಕಾರ ರಹಿತ ದೇವಾಲಯಗಳಲ್ಲಿನ ಬಾಗಿಲವಾಡದಲ್ಲಿ ಎರಡು ತೊಲೆಗಳನ್ನು ತಳಭಾಗದ ಅಡ್ಡತೊಲೆ ಅಥವಾ ಹೊಸ್ತಿಲ ಕಲ್ಲಿನ ಮೇಲೆ ಮೇಲ್ಮುಖವಾಗಿ ನಿಲುವಿನಲ್ಲಿ ನಿಲ್ಲಿಸಿ ಇವುಗಳ ಮೇಲೆ ಅಡ್ಡಲಾಗಿ ಒಂದು ಕಲ್ಲನ್ನು ಇಟ್ಟಿರುತ್ತಾರೆ. ಈ ಅಡ್ಡಗಲ್ಲನ್ನು ರೂಢಿಯಲ್ಲಿ ದ್ವಾರಬಂಧವೆಂದು ಕರೆಯುತ್ತಾರೆ. ನಿಲುವಿನಲ್ಲಿ ನಿಲ್ಲಿಸಿದ ಕಂಬಗಳಲ್ಲಿ ಯಾವುದೇ ರೀತಿಯ ಅಲಂಕಾರ ಕಾಣುವುದಿಲ್ಲ. ಅವು ಸಮತಲವಾಗಿರುತ್ತವೆ. ಈ ಉದ್ದದ ನಿಲುವುಗಳ ಮೇಲೆ ನಿಂತಿರುವ ಅಡ್ಡತೊಲೆಯಾದ ದ್ವಾರಬಂಧದಲ್ಲಿ ಗಜಲಕ್ಷ್ಮೀ ಉಬ್ಬು

ಶಿಲ್ಪವಿರುತ್ತದೆ. ಅಲಂಕಾರಿಕ ಬಾಗಿಲವಾಡಗಳು ಸುಂದರವಾಗಿದ್ದು ದೇವಾಲಯದ ರಚನೆಗೆ ನೀಡಿರುವಷ್ಟು ಗಮನವನ್ನೇ ಬಾಗಿಲವಾಡಗಳ ರಚನೆಗೂ ನೀಡಿರುತ್ತಾರೆ. ಅಲಂಕರಣ ಗಳನ್ನು ಸರಳ ಮತ್ತು ಸಂಕೀರ್ಣ ಎಂದು ಎರಡು ರೀತಿಯಲ್ಲಿ ವಿಂಗಡಿಸಬಹುದು. ಸರಳ ಬಾಗಿಲವಾಡಗಳಲ್ಲಿ ದ್ವಾರದ ನಿಲುವಿನ ಕೆಳಭಾಗದಲ್ಲಿ ಪೂರ್ಣಕುಂಭದ ಶಿಲ್ಪವನ್ನು ಬಿಡಿಸಿದ್ದು ಅದರ ಮೇಲಿನಿಂದ ಬಳ್ಳಿಯ ಅಲಂಕಾರವನ್ನು ಎರಡೂ ಕಡೆ ಬಿಡಿಸಿರುತ್ತಾರೆ. ಮೇಲೆ ದ್ವಾರಬಂಧದ ಮಧ್ಯದಲ್ಲಿ ಎರಡೂ ಕಡೆಯಿಂದ ಹಬ್ಬಿ ಬಂದ ಬಳ್ಳಿಗಳು ಸಂಧಿಸುತ್ತವೆ.

ಸಾಮಾನ್ಯವಾಗಿ ಈ ಭಾಗಗಳು ಮೇಲಕ್ಕೇರುತ್ತಾ ಹೋದಂತೆ ಮೂಲ ದೇವಾಲಯದ ಸ್ತಂಭಗಳ ರಚನಾ ಭಾಗಗಳನ್ನು ಅನುಕರಿಸಿರುತ್ತವೆ. ಅವುಗಳಲ್ಲಿ ಸ್ತಂಭ ಶಾಖೆಯ ಶಲಾಕ, ಘಟ, ಫಲಕ, ಕಂಠ ಮತ್ತು ಬೋದಿಗೆಯನ್ನು ಹೊಂದಿದ್ದು ಅವುಗಳ ಮೇಲೆ ದ್ವಾರಬಂಧ ಬರುತ್ತದೆ. ದ್ವಾರಬಂಧದ ಮೇಲೆ ವಲಭಿ ಭಾಗವಿದ್ದು ಇಲ್ಲಿ ಹಂಸಗಳ ಅಲಂಕಾರವನ್ನು ಬಿಡಿಸಿರುತ್ತಾರೆ. ವಲಭಿ ಮೇಲೆ ಕಪೋತವಿದ್ದು ಇದರ ನಿಲುವುಗಳಲ್ಲಿ ಬಂದಿರುವ ಸ್ತಂಭ ಶಾಖೆಗಳ ನೇರಕ್ಕೆ ಕ್ಷುದ್ರನಾಸಿಗಳು ಬಂದಿರುತ್ತವೆ. ಕಪೋತದ ಮಧ್ಯಭಾಗದಲ್ಲಿ ಮತ್ತು ಅಂತ್ಯಗಳಲ್ಲಿ ಇಳಿಬಳ್ಳಿಗಳ ಅಲಂಕಾರವನ್ನು ತಂದಿರುತ್ತಾರೆ. ಕೆಲವು ದೇವಾಲಯಗಳಲ್ಲಿ ಮಾತ್ರ ಇಂತಹ ಅಲಂಕಾರಗಳಿದ್ದು ಉಳಿದವುಗಳಲ್ಲಿ ದ್ವಾರಬಂಧ ಮುಗಿದ ಕೂಡಲೇ ದ್ವಾರದ ಅಲಂಕಾರ ಮುಗಿಯುತ್ತದೆ. ಲಲಾಟದಲ್ಲಿ ಗಜಲಕ್ಷ್ಮೀ ಕಾಣುವುದು ಅಪರೂಪ.

ದೀಪಸ್ತಂಭ

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ದೇವಾಲಯಗಳು ಸಾಮಾನ್ಯ ರಚನೆಗಳಾದ್ದರಿಂದ ದೇವಾಲಯಗಳ ಮುಂದೆ ಸ್ತಂಭಗಳು ಸ್ಥಾಪನೆಯಾಗಿರುವುದು ಕಡಿಮೆ. ಜೈನ ಬಸದಿಗಳ ಮುಂದೆ ಸ್ತಂಭವನ್ನು ನಿಲ್ಲಿಸಿರುವುದು ಸಾಮಾನ್ಯವಾಗಿ ಕಂಡುಬಂದಿರುವ ಸಂಗತಿಯಾಗಿದೆ. ಈ ಸ್ತಂಭಗಳಲ್ಲಿ ಕೆಲವು ಯಾವುದೇ ರೀತಿಯ ಪೀಠವನ್ನು ಹೊಂದಿರದೆ ಸಮತಲವಾದ ನೆಲದ ಮೇಲೆ ನಿಲ್ಲಿಸಿರುವುದನ್ನು ಕಾಣುತ್ತೇವೆ. ಸ್ತಂಭಗಳು ಸಾಮಾನ್ಯವಾಗಿ ಕಣಶಿಲೆಯಿಂದ ನಿರ್ಮಿತವಾಗಿರುತ್ತವೆ. ಜೈನ ಬಸದಿಯ ಮುಂದೆ ಕಾಣುವ ಸ್ತಂಭಗಳನ್ನು ಎರಡು ಗುಂಪುಗಳಾಗಿ ವಿದ್ವಾಂಸರು ವಿಂಗಡಿಸಿರುತ್ತಾರೆ. ಅವು ಬ್ರಹ್ಮದೇವಸ್ತಂಭ ಮತ್ತು ಮಾನಸ್ತಂಭವೆಂದು ಡಾ. ಷೇಕ್‌ಅಲಿಯವರ ಅಭಿಪ್ರಾಯ. ಬ್ರಹ್ಮದೇವ ಸ್ತಂಭಗಳಲ್ಲಿ ಬ್ರಾಹ್ಮಣ ದೇವತೆಗಳಿದ್ದರೆ, ಮಾನಸ್ತಂಭದಲ್ಲಿ ಜಿನಶಿಲ್ಪಗಳಿರುತ್ತವೆ. ಆದರೆ ಬ್ರಹ್ಮಸ್ತಂಭವು ಜೈನರದ್ದೇ ಆಗಿದ್ದು ಅದರ ಮೇಲೆ ಯಕ್ಷನ ಬಿಂಬವನ್ನು ಇಟ್ಟಿರುತ್ತಾರೆ. ಷೇಕ್‌ಅಲಿಯವರು ಭಾವಿಸುವಂತೆ ಅಲ್ಲಿ ವೈದಿಕ ಬ್ರಹ್ಮನಾಗಿರುವುದಿಲ್ಲ. ಬಸದಿಯ ಮುಂದೆ ಇರುವ ಸ್ತಂಭಗಳ ಬಗ್ಗೆ ಡಾ.ಎಂ.ಚಿದಾನಂದಮೂರ್ತಿಯವರು ಬರೆಯುತ್ತಾ

ಬಸದಿಯ ಮುಂದೆ ಬಹು ಚಿಕ್ಕ ಮಂಟಪವಿರುವ ದೊಡ್ಡ ಕಂಬಕ್ಕೆ ಮಾನಸ್ತಂಭವೆಂದು, ಬೃಹತ್ ವಿಗ್ರಹಗಳ ಮುಂದಿನ ಸರಳಸ್ತಂಭಗಳಿಗೆ ಬ್ರಹ್ಮಸ್ತಂಭಗಳೆಂದು ಹೇಳಿರುತ್ತಾರೆ.

ಪ್ರಾಕಾರದ ಹೊರಗೆ ಇಲ್ಲವೇ ಒಳಗೆ ಪುಟ್ಟ ಜಗಲಿಗಳ ಮೇಲೆ ಎತ್ತರವಾದ ದೀಪಸ್ತಂಭ ಇರುವುದು. ಇಲ್ಲವೇ ಗರುಡಸ್ತಂಭಗಳು ಕಂಡುಬರುತ್ತವೆ. ದೀಪಸ್ತಂಭಗಳ ಮೇಲೆ ಲೋಹದ ಪ್ರಣತಿ ಅಥವಾ ಹಣತೆಗಳಿರುತ್ತವೆ. ಗರುಡಸ್ತಂಭಗಳ ತುದಿಯಲ್ಲಿ ಗರುಡನ ಶಿಲ್ಪಗಳಿದ್ದು ಬಹಳಷ್ಟು ಕಡೆ ನಾಶವಾಗಿವೆ. ಈ ದೀಪಸ್ತಂಭ ಅಥವಾ ಗರುಡಸ್ತಂಭಗಳು ಏಕಶಿಲೆಯ ಬೃಹತ್ ನಿರ್ಮಾಣಗಳು. ಇವುಗಳ ರಚನೆಗೆ ಈ ಪರಿಸರದಲ್ಲಿ ಆಳ್ವಿಕೆ ಮಾಡಿದ ಅರಸರುಗಳು ಹೆಚ್ಚು ಉತ್ಸಾಹವನ್ನು ತೋರಿಸದಿರುವುದನ್ನು ಕಾಣಬಹುದು. ದೊರೆತಿರುವ ದೀಪಸ್ತಂಭಗಳ ನಿರ್ಮಾಣದ ತಾಂತ್ರಿಕ ಕೌಶಲ್ಯ ಅನಾವರಣಗೊಂಡಿದೆ. ದೊರೆಗಳ ಉತ್ಸಾಹ ಮತ್ತು ಶಿಲ್ಪಿಗಳ ಕೌಶಲ್ಯ ಸೇರಿಕೊಂಡು ಇಂತಹ ಬೃಹತ್ ವಾಸ್ತು ರಚನೆಯಾಗಿರುವುದನ್ನು ಗುರುತಿಸಬಹುದು.

ಪಿರಿಯಾಪಟ್ಟಣ ಕೇಶವ ದೇವಾಲಯದ ಮುಂಭಾಗದಲ್ಲಿ ಒಂದು ಏಕಶಿಲಾಸ್ತಂಭವಿದೆ. ಈ ದೀಪ ಸ್ತಂಭದ ಕೆಳಭಾಗದಲ್ಲಿ ಸುಮಾರು ಐದು ಅಡಿ ಎತ್ತರದ ಪೀಠವಿದೆ. ಸ್ಥಂಭದ ಕೆಳಭಾಗದಲ್ಲಿ ಒಂದು ಕಡೆ ಸಮಭಂಗಿಯಲ್ಲಿ ಭಕ್ತಿಯಿಂದ ನಿಂತಿರುವ ಹನುಮಂತನ ಉಬ್ಬುಶಿಲ್ಪ ಮತ್ತೊಂದು ಕಡೆ ಭಕ್ತ(ಪೆರಿಯರಾಜ) ನಮಿಸುತ್ತಿರುವ ಉಬ್ಬುಶಿಲ್ಪವನ್ನು ಕಾಣಬಹುದು. ಈ ಶಿಲ್ಪಗಳೆಲ್ಲವು ಉಬ್ಬುಕೆತ್ತನೆಯ ಶಿಲ್ಪಗಳಾಗಿದ್ದು ವಿಜಯನಗರ ಕಾಲದ ಗುಣಲಕ್ಷಣಗಳನ್ನು ಹೊಂದಿವೆ. ಈ ಸ್ಥಂಭವನ್ನು ಪೆರಿಯರಾಜನ ಆಳ್ವಿಕೆಯ ಕಾಲದಲ್ಲಿ ಸ್ಥಾಪಿಸಲಾಗಿದೆ ಎಂದು ಹೇಳಬಹುದು. ಬೆಟ್ಟತುಂಗದ ಜಿನಬಸದಿಯ ಮುಂದೆ ಒಂದು ದೀಪ ಸ್ತಂಭವಿದೆ. ಇದು ಸುಮಾರು ಇಪ್ಪತ್ತು ಅಡಿ ಎತ್ತರದಿಂದ ಕೂಡಿದೆ. ಕಂಬದ ತಳಭಾಗ ದಲ್ಲಿ ಶೈವ ಉಬ್ಬು ಶಿಲ್ಪಗಳಿವೆ. ಇವುಗಳನ್ನು ಬಿಟ್ಟರೆ ಬೇರೆ ಯಾವುದೇ ರೀತಿಯ ಶಿಲ್ಪಗಳು ಕಂಡುಬರುವುದಿಲ್ಲ. ಈ ಸ್ತಂಭವನ್ನು ಮೈಸೂರು ರಾಜ ಒಡೆಯರ ಆಳ್ವಿಕೆಯ ಅವಧಿಯಲ್ಲಿ ಸ್ಥಾಪಿಸಲಾಗಿದೆ. ಶ್ರೀವೈಷ್ಣವ ಮತದ ಆಗಮನದೊಂದಿಗೆ ಸ್ತಂಭಗಳು ಹೆಚ್ಚಿದ್ದು ವ್ಯಾಪಕವಾಗಿ ಬಳಸಿದಂತೆ ಕಾಣುತ್ತದೆ. ಅವರನ್ನು ಅನುಸರಿಸಿ ರಚಿಸಿದ ಅನೇಕ ವೀರಶೈವ ದೇವಾಲಯಗಳಲ್ಲಿ ದೀಪದ ಸ್ತಂಭಗಳೆಂದು ಹೆಸರನ್ನು ಪಡೆಯುತ್ತವೆ. ಈಗ ಗರುಡಗಂಬ, ನಂದಿಕಂಬ, ದೀಪದ ಕಂಬವೆಂದು ಗುರುತಿಸಲಾಗುತ್ತದೆ.

ದೇವಾಲಯದಲ್ಲಿ ಮುಖಮಂಟಪದ ಮುಂದೆ ಗರ್ಭಗೃಹಕ್ಕೆ ನೇರವಾಗಿ ಬಲಿಪೀಠವನ್ನು ನಿರ್ಮಿಸಿರುತ್ತಾರೆ. ಸಾಮಾನ್ಯವಾಗಿ ದೇವರಿಗೆ ಮತ್ತು ಪರಿವಾರ ದೇವತೆಗಳಿಗೆ ನೈವೇದ್ಯ ಪದಾರ್ಥಗಳನ್ನು ಇಡಲು ಬಳಸುವ ಪೀಠವೇ ಬಲಿಪೀಠವಾಗಿದೆ. ಒಂದು ದೇವಾಲಯದಲ್ಲಿ

ನಿಶ್ಚಿತ ಸ್ಥಾನಗಳಲ್ಲಿ ಅನೇಕ ಬಲಿಪೀಠಗಳಿರುವುದು ಕಂಡುಬರುತ್ತದೆ. ದೇವಾಲಯದ ಗರ್ಭಗೃಹದ ಮುಂದೆ ಇರುವ ಬಲಿಪೀಠವು ಪ್ರಧಾನ ಬಲಿಪೀಠವಾಗಿದೆ. ಇದು ವಿವಿಧ ರೀತಿಯಲ್ಲಿ ಅಲಂಕೃತಗೊಂಡಿದ್ದು, ಮೇಲಿನ ಭಾಗದಲ್ಲಿ ಕಮಲದ ರಚನೆಯನ್ನು ಕಾಣುತ್ತೇವೆ. ಉದಾಹರಣೆಗೆ, ಪಿರಿಯಾಪಟ್ಟಣದ ಈಶ್ವರ ದೇವಾಲಯ, ಮಸಣಿಕಮ್ಮ ದೇವಾಲಯ, ಕಿತ್ತೂರಿನ ಈಶ್ವರ ದೇವಾಲಯ, ನಾರಾಯಣ ಸ್ವಾಮಿ ದೇವಾಲಯ, ಕೊಣಸೂರಿನ ಶಾಂತಿನಾಥ ಬಸದಿ. ದೇವಾಲಯದ ಮುಂದೆ ವಿಶೇಷ ದಿನಗಳಲ್ಲಿ ದೀಪ ಹಚ್ಚಲು ಒಂದು ಸ್ತಂಭವನ್ನು ನಿಲ್ಲಿಸಿರುತ್ತಾರೆ. ಆ ಸ್ತಂಭಕ್ಕೆ ದೀಪಸ್ತಂಭ ಎಂದು ಕರೆಯುವರು. ಇವುಗಳು ಮೂರರಿಂದ ಹದಿನೈದು ಅಡಿಗಳವರೆಗೆ ಎತ್ತರವಾಗಿರುತ್ತವೆ. ಹರದೂರು ಸೋಮೇಶ್ವರ ದೇವಾಲಯ, ಮಲ್ಲಿಕಾರ್ಜುನ ದೇವಾಲಯ, ಬೆಟ್ಟದಪುರದ ಮಲ್ಲಿಕಾರ್ಜುನ ದೇವಾಲಯ, ಕಿತ್ತೂರಿನ ಈಶ್ವರ ದೇವಾಲಯ, ಪಿರಿಯಾಪಟ್ಟಣದ ಈಶ್ವರ ದೇವಾಲಯ, ಹಿಟ್ನಹೆಬ್ಬಾಗಿಲಿನ ಮಹಾಬಲೇಶ್ವರ, ಕುಡುಕೂರಿನ ಬಸವೇಶ್ವರ ದೇವಾಲಯಗಳಲ್ಲಿ ದೀಪಸ್ತಂಭಗಳನ್ನು ಕಾಣಬಹುದು. ಕಂಬಗಳ ಮೇಲೆ ಶೈವ ಸಂಕೇತಗಳಾದ ಲಿಂಗ, ನಂದಿ, ಹಸು, ತ್ರಿಶೂಲ ಉಬ್ಬುಶಿಲ್ಪಗಳ ಕೆತ್ತನೆ ಇರುವುದು. ಕಂಬಗಳಿಂದ ಯಾವ ಪ್ರಕಾರಕ್ಕೆ ಈ ದೇವಾಲಯಗಳು ಸೇರಿವೆ ಎಂದು ಗುರುತಿಸಬಹುದು

ಧ್ವಜವನ್ನು ಕಟ್ಟಲು ನಿರ್ಮಿಸಿರುವ ಸ್ತಂಭವೇ ಧ್ವಜಸ್ತಂಬ. ಗರ್ಭಗೃಹ ಮತ್ತು ಬಲಿಪೀಠದ ನಡುವೆ ಈ ಸ್ತಂಭ ಇರುವುದು. ಸ್ತಂಭವು ಶೈವವಾಗಿದ್ದರೆ, ಲಿಂಗ, ನಂದಿ ಲಾಂಛನಗಳು ಇರುತ್ತವೆ. ಹಾಗೆಯೇ ವೈಷ್ಣವ ದೇವಾಲಯದ ಕಂಬದಲ್ಲಿ ಶಂಕ, ಚಕ್ರ, ಗರುಡ ಶಿಲ್ಪಗಳ ಲಾಂಛನಗಳಿರುತ್ತವೆ. ಸಾಮಾನ್ಯವಾಗಿ ವಿಶೇಷ ಸಂದರ್ಭಗಳಲ್ಲಿ ಮಾತ್ರ ಧ್ವಜ ಸ್ತಂಭವನ್ನು ನಿಲ್ಲಿಸುವರು. ವೈಷ್ಣವ ದೇವಾಲಯಗಳ ಮುಂದೆ ಕಂಡುಬರುವ ಕಂಬಗಳನ್ನು ವೈಷ್ಣವ ಕಂಬವೆಂದು ಅಥವಾ ಗರುಡ ಕಂಬವೆಂದು ಕರೆಯುವರು. ಈ ದೇವಾಲಯಗಳ ಮುಂದೆ ಇರುವ ಕಂಬಗಳು ಸುಮಾರು ೪ ರಿಂದ ೧೫ ಅಡಿಗಳ ಎತ್ತರವರೆಗೆ ಉದ್ದ ಇರುವವು. ಪಿರಿಯಾಪಟ್ಟಣದ ಚೆನ್ನಕೇಶವ ದೇವಾಲಯದ ಮುಂದೆ ಇರುವ ಸ್ತಂಭದಲ್ಲಿ ಆಂಜನೇಯ ಮತ್ತು ಭಕ್ತನ ಉಬ್ಬುಶಿಲ್ಪವಿರುವುದು. ಈ ಸ್ತಂಭವು ಇಂದು ಬಿದ್ದುಹೋಗಿದ್ದು ಅವನತಿಯ ಹಾದಿಯಲ್ಲಿದೆ. ಚಿಕ್ಕಹೊನ್ನೂರಿನ ರಂಗನಾಥ ದೇವಾಲಯದ ಮುಂದೆ ಇರುವ ಕಂಬವು ಎತ್ತರದಲ್ಲಿ ಚಿಕ್ಕದಾಗಿದೆ. ಆದರೆ ಕಿತ್ತೂರಿನ ನಾರಾಯಣ ದೇವಾಲಯದ ಮುಂದೆ ಇರುವ ಕಂಬವು ಸುಮಾರು ೧೫ ಅಡಿ ಎತ್ತರವಾಗಿದ್ದು ಪೀಠದ ಮೇಲೆ ನಿಂತಿದೆ. ಈ ಕಂಬದ ಮೇಲೆ ಯಾವುದೇ ರೀತಿಯ ಕೆತ್ತನೆ ಇರುವುದಿಲ್ಲ. ಕುಡುಕೂರು ಬಸವೇಶ್ವರ ದೇವಾಲಯ, ಬಾರ್ಸೆಯ ಬಸವೇಶ್ವರ ದೇವಾಲಯ ಹಾಗೂ ಬೆಟ್ಟತುಂಗದ ಜೈನ ಬಸದಿಯ ಮುಂದೆ ಇರುವ ಕಂಬಗಳ ಮೇಲೆ ಶೈವ, ವೈಷ್ಣವ ಉಬ್ಬುಶಿಲ್ಪಗಳಿರುವವು. ಬೆಟ್ಟತುಂಗದ ಜೈನ ಬಸದಿ

ಇಂದು ವೀರಭದ್ರ ದೇವಾಲಯವಾಗಿದೆ. ಈ ದೇವಾಲಯದ ಮುಂದೆ ಇರುವ ಕಂಬವು ಸುಮಾರು ೨೦ ಅಡಿ ಎತ್ತರವಾಗಿದೆ ಮತ್ತು ಕಂಬದ ಒಂದು ಬದಿಯಲ್ಲಿ ಶ್ರೀನಿವಾಸನ ಅಲಂಕೃತ ಉಬ್ಬುಶಿಲ್ಪವಿದೆ. ಈ ಕಂಬವು ಕಣಶಿಲೆಯಿಂದ ಕೂಡಿದ್ದು, ಮೈಸೂರು ಒಡೆಯರ ಶೈಲಿಯ ಲಕ್ಷಣ ಹೊಂದಿದೆ.

ಒಟ್ಟಿನಲ್ಲಿ ಶೈವ, ವೈಷ್ಣವ ಕಂಬಗಳನ್ನು ದೇವಾಲಯದ ಮುಂದೆ ಪ್ರತಿಷ್ಠಾಪಿಸಿದ್ದರೂ ಇಂದು ಕೆಲವೇ ದೇವಾಲಯಗಳಲ್ಲಿ ಇರುವುದನ್ನು ಕಾಣಬಹುದು. ಜೊತೆಗೆ ಇವುಗಳು ಬಲಿ ಪೀಠವೆಂದು ಹೆಸರು ಪಡೆದಿದ್ದು ಪ್ರಾಚೀನ ಧಾರ್ಮಿಕ ಸ್ಮಾರಕಗಳಾಗಿವೆ.

ಉಯ್ಯಾಲೆಸ್ತಂಭ

ಉಯ್ಯಾಲೆ ಸ್ತಂಭಗಳು ಪ್ರಾಚೀನ ದೇವಾಲಯದ ಸ್ಮಾರಕಗಳಾಗಿವೆ. ಇವುಗಳು ವಿಶೇಷ ನಿರ್ಮಿತಿಗಳಾಗಿವೆ. ಗಾತ್ರ ಮತ್ತು ಎತ್ತರದಲ್ಲಿ ಬೃಹತ್ ಆಗಿರುವ ಎರಡು ಕಂಬಗಳನ್ನು ನಿಲ್ಲಿಸಿ ಇಂತಹ ಉಯ್ಯಾಲೆ ಕಂಬಗಳನ್ನು ನಿಲ್ಲಿಸಲಾಗಿದೆ. ಕೆಲವು ದೇವಾಲಯಗಳು ಚಿಕ್ಕ ಪ್ರಮಾಣ ದಲ್ಲಿದ್ದರೂ ಅವುಗಳ ಉಯ್ಯಾಲೆ ಕಂಬಗಳು ಮಾತ್ರ ಬೃಹತ್ ಪ್ರಮಾಣದಲ್ಲಿರುವುದು, ಸ್ಥಳೀಯ ಅರಸರುಗಳು ಅವುಗಳಿಗೆ ನೀಡಿದ್ದ ಮಹತ್ವ ವ್ಯಕ್ತವಾಗುತ್ತದೆ. ಪ್ರಾಯಶಃ ಕರ್ನಾಟಕದ ವಾಸ್ತುಶಿಲ್ಪ ಪರಂಪರೆಯಲ್ಲಿ ಇಂತಹ ಉಯ್ಯಾಲೆ ಕಂಬಗಳು ವಿಸ್ತೃತ ಸ್ವರೂಪವನ್ನು ಪಡೆದಿರು ವುದನ್ನು ಗುರುತಿಸಬಹುದು. ಹಾಗಾಗಿ ಉಯ್ಯಾಲೆ ಸ್ತಂಭಗಳು ವಾಸ್ತುಶಿಲ್ಪ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆಗಳಾಗಿವೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಕೆಲವು ದೇವಾಲಯಗಳಲ್ಲಿ ಮಾತ್ರ ಉಯ್ಯಾಲೆ ಕಂಬಗಳನ್ನು ಗಮನಿಸಬಹುದು. ಸಾಮಾನ್ಯವಾಗಿ ಇವು ದೇವಾಲಯದ ಹೊರಭಾಗದಲ್ಲಿ ದೇವಾಲಯ ದಿಂದ ಅನತಿ ದೂರದಲ್ಲಿರುತ್ತವೆ. ಬೃಹದಾಕಾರದ ಏಕಶಿಲೆಯ ಎರಡು ಕಂಬಗಳನ್ನು ಪರಸ್ಪರ ಸುಮಾರು ಐದು ಮೀಟರ್ ಸಮಾನಾಂತರದಲ್ಲಿ ನಿಲ್ಲಿಸಲಾಗಿದೆ. ಈ ಎರಡೂ ಕಂಬಗಳ ತುದಿಯಲ್ಲಿ ಒಂದರ ಮೇಲೊಂದರಂತೆ ಇರುವ ಎರಡು ಅಡ್ಡ ತೊಲೆಗಳಿಂದ ಸೇರಿಸಲಾಗಿರುತ್ತದೆ. ಈ ಅಡ್ಡ ತೊಲೆಗಳ ನಡುವೆ ಸ್ವಲ್ಪ ಅಂತರವಿರುತ್ತದೆ. ಈ ರೀತಿಯ ಉಯ್ಯಾಲೆ ಕಂಬಗಳನ್ನು ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯ, ಉತ್ಸವ ಮಲ್ಲಿಕಾರ್ಜುನ ದೇವಾಲಯ, ಕಿತ್ತೂರಿನ ಕಿತ್ತೂರಮ್ಮ ದೇವಾಲಯಗಳಲ್ಲಿ ನೋಡಬಹುದು. ಮೇಲಿನ ಅಡ್ಡತೊಲೆಯಲ್ಲಿ ಮರದ ರಾಟೆಯನ್ನು ಅಳವಡಿಸಲಾಗಿರುತ್ತದೆ. ವಿಶೇಷ ಸಂದರ್ಭಗಳಲ್ಲಿ ದೇವರ ಉತ್ಸವ ಮೂರ್ತಿಯ ಉಯ್ಯಾಲೆಗಾಗಿ ಈ ಕಂಬಗಳನ್ನು ಪ್ರತಿಷ್ಠಾಪಿಸಲಾಗಿರುತ್ತದೆ.

ಕಿತ್ತೂರು ಗ್ರಾಮದಲ್ಲಿ ಕಿತ್ತೂರಮ್ಮನ ದೇವಾಲಯವಿದೆ. ಈ ದೇವಾಲಯ ಪ್ರಾಚೀನವಾದರೂ ಇಂದು ಆಧುನಿಕವಾಗಿ ರೂಪಾಂತರಗೊಂಡಿದೆ. ಗರ್ಭಗೃಹಕ್ಕೆ ನೇರವಾಗಿ ಉಯ್ಯಾಲೆಕಂಬವನ್ನು ಪ್ರತಿಷ್ಠಾಪಿಸಿರುವರು. ಎರಡು ಶಿಲೆ ಕಂಬಗಳನ್ನು ಭೂಮಿಗೆ ನೆಟ್ಟು ಆ ಕಂಬಗಳ ನಡುವೆ ಒಂದು ಅಡ್ಡ ತೊಲೆಯನ್ನು ಸೇರಿಸಲಾಗಿದೆ. ತಳಭಾಗದಿಂದ ಮೇಲೇರಿದಂತೆ ಕಿರಿದಾಗಿದೆ. ಎರಡು ಶಿಲೆ ಕಂಬಗಳ ಮೇಲೆ ಮರದ ಅಡ್ಡ ತೊಲೆಯನ್ನು ಸೇರಿಸಲು ಶಿಲೆಯ ಎರಡು ತುದಿಯಲ್ಲಿ ರಂಧ್ರಮಾಡಿ ಸೇರಿಸಲಾಗಿದೆ. ಈ ಕಂಬಗಳು ಕಣ ಶಿಲೆಗಳಿಂದ ಕೂಡಿರುವವು. ಈ ಉಯ್ಯಾಲೆಕಂಬವನ್ನು ಬಿಟ್ಟರೆ ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯದ ರಾಯಗೋಪುರದ ಬಳಿ ಒಂದು ಉಯ್ಯಾಲೆ ಕಂಬವಿದೆ. ಈ ಕಂಬವು ಗ್ರಾನೈಟ್ ಶಿಲೆಯಿಂದ ರಚನೆಗೊಂಡಿದೆ. ಎರಡು ಕಂಬಗಳ ನಡುವೆ ೫ ಅಡಿ ವಿಸ್ತೀರ್ಣದಿಂದ ಕೂಡಿದೆ. ಈ ಉಯ್ಯಾಲೆ ಕಂಬಗಳು ೧೫ ಅಡಿ ಎತ್ತರದಿಂದ ಕೂಡಿರುವವು. ಆದರೆ ಕಿತ್ತೂರಮ್ಮ ದೇವಾಲಯದ ಮುಂದೆ ಇರುವ ಕಂಬದಷ್ಟು ಉತ್ತಮವಾಗಿಲ್ಲ. ಈ ಎರಡು ಉಯ್ಯಾಲೆ ಕಂಬಗಳನ್ನು ಬಿಟ್ಟರೆ ಬೆಟ್ಟದಪುರದ ಉತ್ಸವ ಮಲ್ಲಿಕಾರ್ಜುನ ದೇವಾಲಯದ ಮುಂದೆ ಒಂದು ಉಯ್ಯಾಲೆ ಕಂಬವಿರುವುದು. ಈ ಕಂಬಗಳು ಪ್ರಾಚೀನವಾದರೂ ಇಂದು ಅವನತಿಯ ಹಾದಿಯಲ್ಲಿವೆ.

ಉತ್ಸವ ಮಂಟಪಗಳು

ಉಯ್ಯಾಲೆ ಕಂಬಗಳಂತೆ ಉತ್ಸವ ಮಂಟಪಗಳು ಧಾರ್ಮಿಕ ಪೂಜಾ ಸ್ಮಾರಕಗಳಾಗಿವೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಉತ್ಸವ ಮಂಟಪಗಳು ಬೆಟ್ಟದಪುರ, ಪಿರಿಯಾಪಟ್ಟಣ, ಬೆಟ್ಟದತುಂಗ, ಆನಿವಾಳು ಮತ್ತು ಕುಡುಕೂರು ಗ್ರಾಮಗಳಲ್ಲಿ ಕಂಡುಬಂದಿವೆ. ಇವುಗಳು ಸಾಮಾನ್ಯವಾಗಿ ವಿಜಯನಗರ ಕಾಲದ ಒಂದು ನಿರ್ಮಾಣ ಸಂಪ್ರದಾಯ. ಉತ್ಸವ ಮೂರ್ತಿಗಳನ್ನು ಉತ್ಸವ ಸಮಯದಲ್ಲಿ ಊರ ಪರಿಸರದಲ್ಲಿ ಕೊಂಡೊಯ್ಯುವಾಗ ದರ್ಶನ, ಪೂಜೆ, ವಿಶ್ರಾಂತಿಗೆಂದು ಊರಿನ ವಿವಿಧೆಡೆಗಳಲ್ಲಿ, ಕೆರೆ, ಪುಷ್ಕರಣಿ, ನದಿತೀರ ಪ್ರದೇಶಗಳಲ್ಲಿ ಉತ್ಸವ ಮಂಟಪಗಳನ್ನು ನಿರ್ಮಿಸುವುದು ವಾಡಿಕೆ. ಉತ್ಸವ ಮಂಟಪವು ಸಾಧಾರಣವಾಗಿ ಒಂದಂಕಣದ ಸಣ್ಣ ಮಂಟಪ. ಉಪಪೀಠದ ಮೇಲೆ ಇದರ ನಿರ್ಮಾಣ, ಭದ್ರತೆ, ರಕ್ಷಣೆಗಾಗಿ ಇದನ್ನು ಮುಂದೆ ಮಾತ್ರ ತೆರೆದಿರುವಂತೆ ಕಟ್ಟುವುದು ಸಂಪ್ರದಾಯ. ಮುಂಭಾಗದಲ್ಲಿ ಭಾವಣಿ ಇನ್ನೊಂದು ಅಂಕಣದಷ್ಟು ಮುಂದುವರೆದು ಎರಡು ಕಂಬಗಳ ಆಸರೆಯ ಮೇಲೆ ನಿಂತಿರುತ್ತದೆ. ಮುಂದಿನ ಈ ಅಂಕಣಕ್ಕೆ ಅಧಿಷ್ಠಾನ ಅಥವಾ ಪೀಠ ಇರುವುದಿಲ್ಲ. ಇದರಿಂದಾಗಿ ಎತ್ತರವಾದ ಪೀಠದ ಮೇಲೆ ದೇವರನ್ನು ಕೂರಿಸಿದಂತೆ ಇರುತ್ತದೆ. ಮಂಟಪದ ಮೇಲೆ ಹಾರದ ನಿರ್ಮಾಣ, ವಿಮಾನದ ನಿರ್ಮಾಣವನ್ನು ಕೆಲವು ಮಂಟಪಗಳಲ್ಲಿ ಕಾಣಬಹುದು. ಇಂತಹ ಉತ್ಸವ

ಮಂಟಪಗಳು ಬೆಟ್ಟದಪುರದ ಸಂಕ್ರಾಂತಿ ಮಂಟಪದಲ್ಲಿ, ಕೋಟೆ ಬದಿ ಇರುವ ಕೊಳದ ಮುಂದೆ ಮತ್ತು ಕುಡುಕೂರು ಗ್ರಾಮಗಳಲ್ಲಿ ಕಂಡುಬಂದಿವೆ. ಗುಡಿಗೆ ಅನತಿ ದೂರದಲ್ಲಿ ಇರುವ ಈ ಮಂಟಪಗಳು ಎದುರು ಬದುರಾಗಿ ನಿರ್ಮಿತವಾಗಿವೆ. ಇವುಗಳ ನಿರ್ಮಾಣ ಸರಳವಾಗಿವೆ. ಇದೇ ರೀತಿಯ ಉತ್ಸವ ಮಂಟಪವೊಂದು ಬೆಟ್ಟದಪುರ ಬೆಟ್ಟಕ್ಕೆ ಹೋಗುವ ಕೋಟೆ ದಾರಿಯಲ್ಲಿದೆ. ಉತ್ಸವಮೂರ್ತಿಯನ್ನು ಕೆರೆಗೆ, ತೀರ್ಥಸ್ನಾನಕ್ಕಾಗಿ ಕೊಂಡೊಯ್ಯುವ ಸಂದರ್ಭದಲ್ಲಿ ವಿಶ್ರಾಂತಿಗಾಗಿ ಮಂಟಪದಲ್ಲಿ ದೇವರನ್ನು ಕೂರಿಸುತ್ತಿದ್ದಿರಬಹುದು. ಇಂತಹ ಮಂಟಪಗಳ ಪೀಠಗಳಲ್ಲಿ ಮತ್ತು ಕಂಬಗಳಲ್ಲಿ ಶೈವ ಧರ್ಮದ ನಂದಿ, ಲಿಂಗ, ಸರ್ಪ ಹಾಗು ನಂದಿ ಶಿಲ್ಪಕ್ಕೆ ಹಸು ಹಾಲು ಹುಯ್ಯುತ್ತಿರುವ ಉಬ್ಬು ಶಿಲ್ಪಗಳನ್ನು ಕಾಣಬಹುದು.

ಪ್ರಾಕಾರ

ದೇವಾಲಯದ ಸುತ್ತ ಪರಿವಾರ ದೇವತೆಗಳ ಗುಡಿಗಳು, ಬಲಿಪೀಠ, ಧ್ವಜಸ್ತಂಭ, ದೀಪಸ್ತಂಭಗಳು ರಚನೆಗೊಂಡ ನಂತರ ಹಾಗೂ ಯಜ್ಞಶಾಲೆ, ಕಲ್ಯಾಣ ಮಂಟಪ, ಉತ್ಸವ ಮಂಟಪಗಳ ದೇವಾಲಯ ಆವರಣದ ಸಮುಚ್ಛಯವನ್ನು ಒಳಗೊಂಡಂತೆ ಸುತ್ತಲೂ ಪ್ರಾಕಾರಗೋಡೆ ನಿರ್ಮಿಸುವ ಪದ್ಧತಿಯನ್ನು ಕಾಣಬಹುದು. ಪ್ರಾಕಾರದ ಗೋಡೆಗಳು ಆವರಣ ಗೋಡೆಗಳಾಗಿದ್ದು ದೇವಾಲಯ ಸಂಕೀರ್ಣದ ಸುತ್ತಲೂ ಆಯತಾಕಾರದಲ್ಲಿ ಕಟ್ಟಲ್ಪಟ್ಟಿರುತ್ತದೆ. ಒಟ್ಟಿನಲ್ಲಿ ದೇವಾಲಯದ ರಕ್ಷಣೆಗಾಗಿ ಸುತ್ತಲೂ ಗೋಡೆಯನ್ನು ಕಟ್ಟಿರುತ್ತಾರೆ. ಇದಕ್ಕೆ ವಾಸ್ತುಶಿಲ್ಪ ರಚನೆಯಲ್ಲಿ ಪ್ರಾಕಾರ ಎಂದು ಕರೆಯುವರು. ಆವರಣ, ಶಾಲ, ನಿಹಾರ ಮತ್ತು ಕೋಶ ಎಂದೂ ಸಹ ಕರೆಯುತ್ತಾರೆ. ಈ ಪ್ರಾಕಾರವು ದೇವಾಲಯದ ಸುತ್ತ ಭಕ್ತರು ಪ್ರದಕ್ಷಿಣೆ ಹಾಕಲು ಮತ್ತು ಜಾತ್ರೆಯ ಸಂದರ್ಭದಲ್ಲಿ ಉತ್ಸವಮೂರ್ತಿಗಳನ್ನು ಹೊತ್ತುಕೊಂಡು ದೇವಾಲಯದ ಸುತ್ತಲು ಮೆರವಣಿಗೆ ಮಾಡಲು ಸಹಾಯಕವಾಗುವಂತೆ ಪ್ರಾಕಾರವು ರಚನೆಗೊಂಡಿರುತ್ತದೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಅತ್ಯಂತ ದೊಡ್ಡ ದೇವಾಲಯಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುವುದಿಲ್ಲ. ಇದರಿಂದಾಗಿ ಪ್ರಾಕಾರಗಳು ಸಹ ಕಡಿಮೆ ಇರುವವು. ಆದರೆ ದೊಡ್ಡ ದೇವಾಲಯಗಳ ಸುತ್ತಲೂ ಪ್ರಾಕರಗಳಿವೆ. ಪ್ರಾಕಾರದಲ್ಲಿ ಪರಿವಾರ ದೇವತೆಗಳ ಗುಡಿಗಳು ಮತ್ತು ಒಳಗಡೆ ಕಂಬಗಳ ಸಾಲು ಮಂಟಪಗಳು ಇವೆ. ಉಳಿದಂತೆ ಹೆಚ್ಚು ವಿಶಿಷ್ಟತೆಯಿಂದ ಕೂಡಿರುವುದಿಲ್ಲ. ಆದರೆ ಮಂಟಪಗಳು ಭವ್ಯವಾಗಿವೆ. ಇವು ವಿಜಯನಗರದ ದ್ವಾರಮಂಟಪಗಳಂತಿವೆ. ಈ ಮಂಟಪಗಳು ಪಿರಿಯಾಪಟ್ಟಣದ ಕೇಶವ ದೇವಾಲಯ, ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯಗಳ ದ್ವಾರಮಂಟಪಗಳ ಮೇಲೆ ಮಾತ್ರ ಗೋಪುರಗಳಿವೆ. ಇಲ್ಲಿಯ ಗೋಪುರಗಳು ಸಂಪೂರ್ಣವಾಗಿ ಅವಶೇಷದ ಅಂಚಿನಲ್ಲಿವೆ.

ದೇವಾಲಯಕ್ಕೆ ಎರಡು ಪ್ರಾಕಾರಗಳು ಅಥವಾ ಅಂಗಳಗಳಿವೆ. ಒಳ ಪ್ರಾಕಾರದಲ್ಲಿ ಮೂಲ ಗುಡಿ ಒಂದು ಭಾಗ. ಹೊರ ಪ್ರಾಕಾರದಲ್ಲಿ, ದ್ವಾರಮಂಟಪ, ಮಹಾ ಮಂಟಪ, ಕಲ್ಯಾಣ ಮಂಟಪ, ಅಮ್ಮನವರ ಗುಡಿ ಮತ್ತು ಅದರ ಮುಂದಿನ ಮಂಟಪ ಇವೆಲ್ಲವೂ ಮತ್ತೊಂದು ಭಾಗ. ದೇವಾಲಯದ ಒಳ ಪ್ರಾಕಾರದಲ್ಲಿ ಶೈವ ದೇವಾಲಯಗಳಾಗಿದ್ದಲ್ಲಿ ನಂದಿ, ಗಣೇಶ, ವೀರಭದ್ರ ಮೂರ್ತಿಗಳಿರುವವು. ಉದಾಹರಣೆಗೆ ನಂದಿನಾಥಪುರದ ಬಸವೇಶ್ವರ ದೇವಾಲಯ, ಪಿರಿಯಾಪಟ್ಟಣದ ಈಶ್ವರ ದೇವಾಲಯ ಮತ್ತು ಮರದೂರಿನ ಈಶ್ವರ ದೇವಾಲಯಗಳಾಗಿವೆ.

ವಿಜಯನಗರ ಕಾಲದಲ್ಲಿ ಪ್ರಾಕಾರಗಳ ನಿರ್ಮಾಣವು ಬೃಹತ್ ದೇವಾಲಯಗಳ ಅಂಗವಾಗಿ ಬೆಳೆಯಿತು. ಇಂತಹ ಬೃಹತ್ ಪ್ರಾಕಾರಗಳನ್ನು ಹಂಪಿಯ ವಿರೂಪಾಕ್ಷ, ಬಾಲಕೃಷ್ಣ, ಅಚ್ಯುತರಾಯ, ಪಟ್ಟಾಭಿರಾಮ, ವಿಜಯವಿಠ್ಠಲ ದೇವಾಲಯಗಳಲ್ಲಿ ನೋಡಬಹುದು. ವಿಜಯನಗರ ವಾಸ್ತುಶೈಲಿಯನ್ನು ಅನುಸರಿಸಿ ಚಂಗಾಳ್ವ ಮನೆತನದ ಪ್ರಮುಖ ದೇವಾಲಯವಾದ ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯದಲ್ಲೂ ಸಹ ಕಾಣಬಹುದು. ಆದರೆ ಸುತ್ತಲು ಇದ್ದ ಗೋಡೆ ಇಂದು ಬಿದ್ದುಹೋಗಿ ಅವಶೇಷ ಮಾತ್ರ ಇರುವುದು ಕಂಡುಬಂದಿದೆ.

ಮಹಾದ್ವಾರ ಗೋಪುರ

ದೇವಾಲಯದ ಪ್ರಾಕಾರ ಗೋಡೆಯ ಮಧ್ಯೆ ಇರುವ ಮಹಾದ್ವಾರದ ಎತ್ತರವಾದ ಕಟ್ಟಡವೇ ಮಹಾದ್ವಾರ ಗೋಪುರ. ಇದನ್ನು ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸಿದ್ದು, ಅದರ ಸಂಪೂರ್ಣ ಭಾಗವನ್ನು ಸುಣ್ಣ ಅಥವಾ ಗಾರೆಗಳಿಂದ ಶಿಲ್ಪಗಳನ್ನು ಅಲಂಕಾರಿಸಿರುತ್ತಾರೆ. ಹಂತ ಹಂತವಾಗಿ ಕಿರಿದಾಗುತ್ತಾ, ಮೇಲಕ್ಕೆ ರಚನೆಗೊಂಡಿರುತ್ತದೆ. ಮಧ್ಯಭಾಗದಲ್ಲಿ ಒಳಗಡೆ ಹೋಗಲು ಕೋಣೆಯ ತರಹ ಸ್ಥಳವನ್ನು ಬಿಡಲಾಗಿರುತ್ತದೆ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಯಾವುದೇ ದೇವಾಲಯಗಳಿಗೆ ಗೋಪುರ ಕಂಡುಬರುವುದಿಲ್ಲ. ಆದರೆ ಬೆಟ್ಟದಪುರ ದಲ್ಲಿ ಅನ್ನದಾನಿಮಲ್ಲಿಕಾರ್ಜುನ ದೇವಾಲಯಕ್ಕೆ ಮಾತ್ರ ಗೋಪುರ ಇರುವುದನ್ನು ಕಾಣಬಹುದು. ಈ ಗೋಪುರದ ಮೇಲೆ ಶಾಲಾಕೂಟ ಮತ್ತು ಕೋಷ್ಠಕಗಳು ಕಂಡುಬಂದಿವೆ. ಅಲ್ಲದೆ ಪೌರಾಣಿಕ ಮತ್ತು ಲೌಕಿಕವಾದಂತಹ ಶಿಲ್ಪಗಳ ರಚನೆ ಸಾಮಾನ್ಯವಾಗಿ ಕಂಡುಬರುತ್ತದೆ. ಗೋಪುರದ ಕೊನೆಯಲ್ಲಿ ಶಾಲಾಶಿಖರವಿದ್ದು, ಅದರ ಮೇಲೆ ಬೆಸಸಂಖ್ಯೆಯಲ್ಲಿ ಕಳಸಗಳು ಇರುವವು. ಅದೇ ರೀತಿಯಾಗಿ ಗೋಪುರದಲ್ಲಿ ನಾಲ್ಕು, ಐದು ಮತ್ತು ಒಂಭತ್ತು ತಲಗಳಿದ್ದು ಕಂಡುಬರುತ್ತದೆ. ವಿಜಯನಗರ ಅರಸರ ಕಾಲದಲ್ಲಿ ಅರಸರು ದೇವಾಲಯದ ಮೇಲಿನ ಶಿಖರಕ್ಕಿಂತ ಮಹಾದ್ವಾರ ಗೋಪುರವನ್ನೇ ಎತ್ತರವಾಗಿ ಕಟ್ಟಿರುವುದು ಕಂಡುಬಂದಿದೆ. ಅವುಗಳನ್ನು ರಾಯಗೋಪುರಗಳೆಂದು ಕರೆಯಲಾಗಿದೆ.

ಬೆಟ್ಟದಪುರ ಗ್ರಾಮದ ಆಗ್ನೇಯ ದಿಕ್ಕಿನಲ್ಲಿ ದೊಡ್ಡದಾದ ಬೆಟ್ಟವಿರುವುದರಿಂದ ಈ ಗ್ರಾಮವನ್ನು ಬೆಟ್ಟದಪುರ ಬೆಟ್ಟವೆಂದು ಕರೆಯುತ್ತಾರೆ. ಸಿಡ್ಲುಮಲ್ಲಿಕಾರ್ಜುನ ದೇವಾಲಯಕ್ಕೆ ಹತ್ತುವ ಮೆಟ್ಟಿಲಿನ ಪ್ರಾರಂಭದಲ್ಲಿ ಪ್ರವೇಶದ್ವಾರ ಮತ್ತು ಮಹಾಗೋಪುರವಿದೆ. ಇದನ್ನೇ ರಾಯಗೋಪುರವೆಂದು ಕರೆಯಲಾಗಿದೆ. ಮಹಾದ್ವಾರದ ಎರಡು ಕಡೆಯಲ್ಲಿಯೂ ಕಲ್ಲಿನಿಂದ ಕೆತ್ತಿದ ಆನೆಗಳ ವಿಗ್ರಹವಿದೆ. ಈ ಪ್ರತಿಯೊಂದು ಆನೆಯು ಎಂಟೆಂಟು ಕಾಲುಗಳನ್ನು ಒಳ ಗೊಂಡಿದ್ದು, ಆಭರಣಗಳನ್ನು ಧರಿಸಿ ನಿಂತಿರುವುದು ಕಂಡುಬಂದಿದೆ. ಆನೆಗಳು ಪೀಠದ ಮೇಲೆ ನಿಂತಿದ್ದು ಗೋಪುರ ಮತ್ತು ಇಡೀ ಬೆಟ್ಟವನ್ನೇ ಹೊತ್ತು ನಿಂತತ್ತಿವೆ. ಅಲ್ಲದೇ ದೇವಾಲಯದ ಪಟ್ಟದಾನೆ ಮತ್ತು ಸಿಡಿಲುಮಲ್ಲಿಕಾರ್ಜುನ ದೇವರ ರಾಜ ಆನೆಗಳಾಗಿವೆ ಎಂದು ಶಾಸನಗಳಲ್ಲಿ ಉಲ್ಲೇಖಗೊಂಡಿವೆ.

ಗೋಪುರದ ಉತ್ತರ ದಿಕ್ಕಿನಲ್ಲಿ ಶಿವಲಿಂಗವಿದ್ದು, ಇದನ್ನು ಆವರಿಸಿರುವ ಏಳು ತಲೆಯ ಆದಿಶೇಷನ ವಿಗ್ರಹವುಳ್ಳ ಏಕಶಿಲೆಯಿದೆ. ಎಲ್ಲಾ ಹೆಡೆಗಳಲ್ಲಿ ಕಿರೀಟವಿದ್ದು ಲಿಂಗವನ್ನು ಪೀಠದ ಮೇಲ್ಭಾಗದಲ್ಲಿ ಕೆತ್ತಲಾಗಿದೆ. ಹಾಗೆಯೇ ದಕ್ಷಿಣ ಗೋಪುರದ ತಳಭಾಗದಲ್ಲಿ ದೊಡ್ಡ ಆಮೆಯ ಶಿಲ್ಪವಿದ್ದು ಇದನ್ನು ಸಹ ಪೀಠದ ಮೇಲೆ ಕೆತ್ತಲಾಗಿದೆ. ಗೋಪುರದ ಪೂರ್ವ ಭಾಗದ ಬಿತ್ತಿಯಲ್ಲಿ ಮತ್ಸ್ಯಶಿಲ್ಪವಿದ್ದು, ಉತ್ತರ ದಿಕ್ಕಿನ ಬಿತ್ತಿಯಲ್ಲಿ ಸರ್ಪ ಮತ್ತು ಆಮೆಯ ಶಿಲ್ಪವಿದೆ. ಇಡೀ ಗೋಪುರವು ಭದ್ರವಾದ ಅಧಿಷ್ಠಾನದ ಮೇಲೆ ನಿಂತಿದೆ. ಅಧಿಷ್ಠಾನ ಮತ್ತು ಬಿತ್ತಿಯು ಸಂಪೂರ್ಣವಾಗಿ ಗ್ರಾನೈಟ್ ಶಿಲೆಯಿಂದ ಕೂಡಿದ್ದು ಚೌಕಕಾರದ ಸ್ತಂಭಗಳು ಇವೆ. ಸ್ತಂಭಗಳು ದ್ರಾವಿಡ ಶೈಲಿಯಲ್ಲಿದ್ದು, ಲಿಂಗ, ನಂದಿ ಮತ್ತು ವಿವಿಧ ದೇವತೆಗಳ ಕೆತ್ತನೆಯಿದೆ. ಉತ್ತರದ ಜಗುಲಿಯಲ್ಲಿ ಒಂದು ನಂದಿಮೂರ್ತಿ ಇದ್ದು, ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟಿದೆ. ಅಲ್ಲದೆ ಗಂಟೆ, ಧಾರ ವಿವಿಧ ರೀತಿಯ ಅಲಂಕಾರಗಳನ್ನು ಒಳಗೊಂಡಿದ್ದು ಅತ್ಯಂತ ಸುಂದರವಾಗಿ ಕಾಣುವುದು. ದಕ್ಷಿಣದ ಜಗುಲಿಯಲ್ಲಿ ಉತ್ತಮ ಕೆತ್ತನೆ ಕೆಲಸವುಳ್ಳ ಒಂದು ಪಾದಪೀಠವಿದೆ. ಪ್ರವೇಶದ್ವಾರದ ಇಕ್ಕೆಲುಗಳ ಹೊರಭಾಗದಲ್ಲಿ ಎರಡು ಚಿಕ್ಕದಾದಂತಹ ಶಿಖರಗಳಿದ್ದು ಪರಸ್ಪರ ಮುಖ ಮಾಡಿಕೊಂಡಿವೆ. ಇದರಲ್ಲಿ ಬಲಭಾಗದ ವಿಗ್ರಹವು ಭೈರವ, ಚಂಡಿಕೇಶ್ವರ, ಮಹಿಷಾಸುರ ಮರ್ದಿನಿ ವಿಗ್ರಹ ಎಡಭಾಗದಲ್ಲಿರುವುದು ಕಂಡುಬಂದಿದೆ.

ಬಿತ್ತಿಯ ಮೇಲ್ಭಾಗವು ಇಟ್ಟಿಗೆಯಿಂದ ಕಟ್ಟಲ್ಪಟ್ಟಿದ್ದು ಪ್ರವೇಶದ್ವಾರದ ಒಳಗೋಡೆಗಳು ಮತ್ತು ಭಾವಣಿಗಳು ಶಿವಪುರಾಣದಲ್ಲಿ ಉಲ್ಲೇಖಿತವಾದ ಹಲವು ದೇವ-ದೇವತೆಗಳ ಶಿಲ್ಪಗಳಿರುವುದು. ಇದರಲ್ಲಿ ಬ್ರಹ್ಮ, ಬಹುಶಿರವುಳ್ಳ ಮಹದೇವ, ಯೋಗಿ ಸ್ವರೂಪನಾದ ಶಿವ, ವೇಣುಗೋಪಾಲ, ಶಿವ ಮತ್ತು ಪಾರ್ವತಿಯರ ವಿವಾಹ, ತಪಸ್ಸಿನಲ್ಲಿ ಕುಳಿತ ತನ್ನ ಒಡೆಯನನ್ನು ಭೇಟಿಯಾಗುವ ಪಾರ್ವತಿ, ಶಿವನಲ್ಲಿ ತನ್ನ ಆತ್ಮಲಿಂಗವನ್ನು ಬೇಡುತ್ತಿರುವ ಹತ್ತು ತಲೆಯ

ರಾವಣ ಮತ್ತು ಮಿಥುನ ಶಿಲ್ಪವುಳ್ಳ ಹಲವು ದೇವತೆಯ ವಿಗ್ರಹಗಳಿರುವುದು. ಗೋಪುರವು ಮೂರು ಅಂತಸ್ತನ್ನು ಹೊಂದಿದ್ದು ಸಂಪೂರ್ಣವಾಗಿ ಇಟ್ಟಿಗೆಯಿಂದ ಕಟ್ಟಲ್ಪಟ್ಟು, ಗಾರೆಯನ್ನು ಉಪಯೋಗಿಸಲಾಗಿದೆ. ಗೋಪುರದ ಶಿಖರದಲ್ಲಿ ಮೂರು ಕಲ್ಲಿನ ಕಳಸಗಳಿವೆ. ಗೋಪುರದ ಒಳಭಾಗದಲ್ಲಿ ಶಿವಶರಣೆಯರ ಚಿತ್ರಗಳಿದ್ದು, ವಿಜಯನಗರ ಶೈಲಿಯ ಲಕ್ಷಣಗಳನ್ನು ಒಳಗೊಂಡಿದೆ.

ಸಂಕ್ರಾಂತಿ ಮಂಟಪವು ಬೆಟ್ಟದ ಶಿಖರಕ್ಕೆ ಹೋಗುವ ಅರ್ಧ ಬೆಟ್ಟದ ಎಡಭಾಗದಲ್ಲಿದೆ. ಇದು ಪೂರ್ವಾಭಿಮುಖವಾಗಿದ್ದು, ಮಂಟಪವು ಮೂರು ಅಡಿ ಎತ್ತರದ ಅದಿಷ್ಠಾನದ ಮೇಲೆ ನಿಂತಿದೆ. ಅಧಿಷ್ಠಾನವು ಕಲ್ಲು ಚಪ್ಪಡಿಗಳಿಂದ ಕಟ್ಟಲ್ಪಟ್ಟಿರುವುದು ಮಂಟಪವು ಒಟ್ಟು ಹದಿನಾಲ್ಕು ಸ್ತಂಭಗಳಿಂದ ನಿರ್ಮಿತಗೊಂಡಿದೆ. ಮಂಟಪದ ಪಶ್ಚಿಮಾಭಿಮುಖವು ಮೂಲ ಗೋಡೆಯನ್ನು ಹೊಂದಿದ್ದು ನಂತರದ ಕಾಲದಲ್ಲಿ ಉತ್ತರದಿಕ್ಕಿನ ಗೋಡೆಯು ಕಟ್ಟಲ್ಪಟ್ಟಿದೆ. ಮಂಟಪದ ಮಧ್ಯೆ ನಾಲ್ಕು ಕಂಬಗಳುಳ್ಳ ಒಂದು ದೊಡ್ಡ ಪೀಠವಿದೆ. ಇದರಲ್ಲಿ ಯಾವುದೇ ವಿಗ್ರಹಗಳು ಇರುವುದಿಲ್ಲ. ಹಿಂದೆ ಸಂಕ್ರಾಂತಿಯ ದಿನದಂದು ಈ ಪೀಠದ ಮೇಲೆ ದೇವರ ಉತ್ಸವಮೂರ್ತಿಯನ್ನು ತಾತ್ಕಾಲಿಕವಾಗಿ ಪ್ರತಿಷ್ಠಾಪಿಸಿ ಪೂಜೆ ನಡೆಯುತ್ತಿದ್ದ ಸ್ಥಳವಾಗಿದೆ. ಪೀಠದ ನಾಲ್ಕು ಸ್ತಂಭಗಳಲ್ಲಿ ಶೈವ ಧರ್ಮಕ್ಕೆ ಸೇರಿದ ಶಿವಲಿಂಗ, ಹಂಸ, ನಂದಿ, ಶಿವಲಿಂಗಕ್ಕೆ ಪೂಜೆಮಾಡುತ್ತಿರುವ ದೃಶ್ಯವಿದೆ. ಆನೆ, ನವಿಲು, ಹಸು, ಉಗ್ರ ನರಸಿಂಹನ ಉಬ್ಬುಶಿಲ್ಪಗಳ ಕೆತ್ತನೆ ಪೀಠದ ಮೇಲ್ಭಾಗದಲ್ಲಿದೆ. ಪುಷ್ಪಾಲಂಕಾರದ ಭುವನೇಶ್ವರಿಯನ್ನು ಹೊಂದಿದ್ದು ಸಂಪೂರ್ಣ ಕಲ್ಲುಚಪ್ಪಡಿಗಳಿಂದ ನಿರ್ಮಿಸಲಾಗಿದೆ. ಛಾವಣಿಯ ಮೇಲ್ಭಾಗದಲ್ಲಿ ನಾಲ್ಕು ದಿಕ್ಕಿಗೂ ಬಸವನ ವಿಗ್ರಹಗಳು ಇದ್ದು ಇಂದು ನಾಶವಾಗುವ ಹಂತದಲ್ಲಿವೆ. ಛಾವಣಿಯ ನಿರ್ಮಾಣಕ್ಕೆ ಗಾರೆಯನ್ನು ಉಪಯೋಗಿಸಲಾಗಿದೆ. ಕಂಬಗಳು ಚೌಕಕಾರದ ಆಕೃತಿಯನ್ನು ಹೊಂದಿದ್ದು ಯಾವುದೇ ಪೀಠದ ಮೇಲೆ ನಿಂತಿರುವುದಿಲ್ಲ ಮತ್ತು ಮಂಟಪಕ್ಕೆ ಹತ್ತಲು ನಾಲ್ಕು ಮೆಟ್ಟಿಲುಗಳಿವೆ. ಸಂಕ್ರಾಂತಿಯ ದಿನದಂದು ವಿಶೇಷ ಪೂಜೆ ಪುರಸ್ಕಾರ, ಜಾತ್ರೆಗಳು ನಡೆಯುತ್ತಿದ್ದ ಸ್ಥಳವಾದ್ದರಿಂದ ಈ ಮಂಟಪವನ್ನು ಸಂಕ್ರಾಂತಿ ಮಂಟಪವೆಂದು ಮತ್ತು ಅತಿ ಹೆಚ್ಚು ಗಾಳಿ ಬೀಸುತ್ತಿದ್ದರಿಂದ ಗಾಳಿಮಂಟಪವೆಂದು ಕರೆಯಲಾಗಿದೆ.

ನಂದಿಮಂಟಪ

ಪಿರಿಯಾಪಟ್ಟಣ ತಾಲ್ಲೂಕು ಪರಿಸರ ಮೂಲತಃ ಜೈನ ಸಂಸ್ಕೃತಿ ಒಳಗೊಂಡಿತು. ಇದಕ್ಕೆ ಅನುಗುಣವಾಗಿ ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನ ದೇವಾಲಯ ಜೈನ ಬಸದಿ ಎಂಬ ಐತಿಹ್ಯವಿದೆ. ಉತ್ಸವ ಮಲ್ಲಿಕಾರ್ಜುನ ದೇವಾಲಯ ಹಿಂದೆ ವಿಶಾಲ ಜೈನ ಬಸದಿಯಾಗಿದ್ದಿತ್ತು. ಬೆಟ್ಟತುಂಗದಲ್ಲಿ ಇರುವ ವೀರಭದ್ರದೇವಾಲಯ ಪೂರ್ವದಲ್ಲಿ ಆದಿ ತೀರ್ಥಂಕರ ಬಸದಿಯಾಗಿದ್ದಿತು. ಪ್ರಸ್ತುತ ಆದಿತೀರ್ಥಂಕರ ವಿಗ್ರಹವಿಲ್ಲದೆ ವೀರಭದ್ರನ ವಿಗ್ರಹ

ಪ್ರತಿಷ್ಠಾಪಿಸಿರುವರು. ಈ ದೇವಾಲಯದಲ್ಲಿದ್ದ ಮೂಲತಃ ಜೈನ ತೀರ್ಥಂಕರ ಬದಲಿಗೆ ನಂದಿವಿಗ್ರಹವನ್ನು ಪ್ರತಿಷ್ಠಾಪಿಸಿರುವರು. ನಂತರ ಪ್ರಬಲಗೊಂಡ ಶೈವಧರ್ಮದ ಕಾಲದಲ್ಲಿ ನಂದಿಮಂಟಪಗಳು ಕಾಣಿಸಿಕೊಂಡಿರುವವು. ಈ ನಂದಿ ಮಂಟಪಗಳು ಅಥವಾ ಶಿಲ್ಪಗಳು ಪ್ರಮುಖವಾಗಿ ಬೆಟ್ಟದಪುರ, ಬೆಟ್ಟತುಂಗ, ಕುಡುಕೂರು, ಬಾರ್ಸೆ, ನಂದಿನಾಥಪುರ, ನಿಲವಾಡಿ, ಹಿಟ್ನೆಹೆಬ್ಬಾಗಿಲು, ಮರದೂರು, ಹಲಗನಹಳ್ಳಿ, ಕಣಗಾಲು, ಕಂಪಲಾಪುರ ಮತ್ತು ಪಿರಿಯಾಪಟ್ಟಣ ಹಲವು ಗ್ರಾಮಗಳಲ್ಲಿ ಕಂಡುಬಂದಿರುವವು. ಅಧಿಕ ಪ್ರಮಾಣದಲ್ಲಿ ಬೆಟ್ಟದಪುರ ಸುತ್ತಮುತ್ತಲಿನಲ್ಲಿ ಕಂಡುಬಂದಿವೆ.

ಬೆಟ್ಟದಪುರದಲ್ಲಿ ಕಲ್ಯಾಣಿಕೊಳದ ಹತ್ತಿರ ಒಂದು ದೊಡ್ಡ ನಂದಿಮಂಟಪವಿದೆ. ಇದು ಸುಮಾರು ಹತ್ತು ಅಡಿ ಎತ್ತರದ ಗುಡ್ಡದ ಮೇಲಿರುವುದು. ಹತ್ತಲು ಮೆಟ್ಟಿಲುಗಳಿವೆ. ಇವುಗಳು ಗ್ರಾನೈಟ್‌ಕಲ್ಲಿನಿಂದ ಕೂಡಿರುವವು. ಈ ಮಂಟಪ ಪೂರ್ವದಿಕ್ಕಿಗಿದ್ದು ಮೂರು ಕಂಬಗಳಿಂದ ಅದಿಷ್ಠಾನದ ಮೇಲೆ ನಿರ್ಮಿಸಿರುವರು. ಕಂಬಗಳ ಮೇಲೆ ಮಂಟಪವಿತ್ತು. ಇಂದು ಅವನತಿ ಗೊಂಡಿದೆ. ಇಲ್ಲಿಯ ಕಂಬಗಳು ವಿಜಯನಗರ ಶೈಲಿಯ ಲಕ್ಷಣದಿಂದ ಕೂಡಿವೆ. ಮಂಟಪ ದಲ್ಲಿರುವ ನಂದಿಯು ಗಾತ್ರದಲ್ಲಿ ದೊಡ್ಡದಾಗಿದ್ದು ಅಲಂಕೃತ ಆಭರಣಗಳಿಂದ ಕೂಡಿದೆ. ದೇಹದ ಮೇಲೆ ಗಂಟೆ, ಹಗ್ಗ ಮತ್ತು ವಿವಿಧ ರೀತಿಯ ಸೂಕ್ಷ್ಮ ಅಲಂಕರಣೆಯಿಂದ ಕೂಡಿದೆ. ಸಂಗರಶೆಟ್ಟಿಳ್ಳಿ, ಹರದೂರು ಮತ್ತು ಅತ್ತಿಗೋಡು ಗ್ರಾಮದಲ್ಲಿರುವ ನಂದಿ ಶಿಲ್ಪಗಳು ಕಪ್ಪುಶಿಲೆಯಿಂದ ಕೂಡಿವೆ. ಸಂಗರಶೆಟ್ಟಿಳ್ಳಿಯ ಕೊಳ್ಳಿಮಲ್ಲಪ್ಪನ ದೇವಾಲಯದಲ್ಲಿ ಇರುವ ನಂದಿಶಿಲ್ಪ ಆಭರಣಗಳಿಂದ ಅಲಂಕೃತಗೊಂಡಿದ್ದು ಸುಂದರವಾಗಿದೆ. ಹಾಗೂ ಕಪ್ಪುಶಿಲೆಯಿಂದ ಕೂಡಿದೆ. ಬೆಟ್ಟದಪುರದ ರಾಯಗೋಪುರದಿಂದ ಅನ್ನದಾನಿಮಲ್ಲಿಕಾರ್ಜುನ ದೇವಾಲಯಕ್ಕೆ ಹತ್ತುವ ಮೆಟ್ಟಿಲುಗಳ ಎರಡು ಭಾಗಗಳಲ್ಲಿ ನಂದಿಮಂಟಪಗಳಿವೆ. ಈ ಭಾಗಗಳಲ್ಲಿ ಚಿಕ್ಕ ನಂದಿಶಿಲ್ಪಗಳಿಂದ ದೊಡ್ಡ ನಂದಿಶಿಲ್ಪ ಮಂಟಪಗಳಿವೆ. ಇವುಗಳು ಗ್ರಾನೈಟ್ ಶಿಲೆ, ಕೆಂಪು ಶಿಲೆ ಹಾಗೂ ಕಪ್ಪುಶಿಲೆಯಿಂದ ನಿರ್ಮಾಣ ಗೊಂಡಿರುವವು.

ಬೆಟ್ಟದಪುರದ ರಾಯಗೋಪುರದ ಸಮೀಪದಲ್ಲಿ ಉತ್ತರಕ್ಕೆ ನಂದಿಮಂಟಪವಿದ್ದು, ತಳವಿನ್ಯಾಸ ಚೌಕಕಾರವಾಗಿದೆ. ಭದ್ರವಾದ ಶಿಲೆಯಿಂದ ನಿರ್ಮಿತವಾದ ಅಧಿಷ್ಠಾನದ ಮೇಲೆ ದ್ರಾವಿಡ ಶೈಲಿಯ ಚೌಕಕಾರದ ಸ್ತಂಬಗಳಿವೆ. ಸ್ತಂಬಗಳು ಪೀಠದ ವ್ಯವಸ್ಥೆಯಿಲ್ಲದೆ ಬೋದಿಗೆ ತೊಲೆಗಳನ್ನು ಒಳಗೊಂಡಿದ್ದು, ಮೇಲ್ಛಾವಣಿಯನ್ನು ಹೊತ್ತು ನಿಂತಿವೆ. ತಳದಿಂದ ಮೇಲ್ಭಾಗಕ್ಕೆ ಕಿರಿದಾದ ಐದು ಪೀಠಗಳ ಮೇಲೆ ನಂದಿಯ ಮೂರ್ತಿಶಿಲ್ಪವಿದ್ದು ಉತ್ತಮ ಸ್ಥಿತಿಯಲ್ಲಿದೆ. ಸ್ತಂಬಗಳು ಸರಳವಾಗಿದ್ದು ಮೇಲ್ಛಾವಣಿಯಲ್ಲಿ ನಾಲ್ಕು ದಿಕ್ಕಿಗೂ ಜೋಡಿ ಬಸವನ ವಿಗ್ರಹಗಳಿವೆ. ನಂದಿಶಿಲ್ಪವು ಕನಿಕಾರನ ಹಳ್ಳಿಯ ಒಡೆಯನೂ, ದೊಡ್ಡಯ್ಯನ ಮಗನೂ, ಆಸ್ಥಾನಿಕನೂ ಆದ

ಪುಣ್ಯಶ್ರೀ ಬಸವಯ್ಯನ ಕೊಡುಗೆಯಾಗಿದೆಯೆಂದು ಬುಡದಲ್ಲಿ ಕೊರೆಯಲ್ಪಟ್ಟ ಶಾಸನವಿದೆ. ತಿಳಿಯಲಾಗಿದೆ. ಈಶಾನ್ಯ ಕಂಬದ ಬುಡದಲ್ಲಿ ದಕ್ಷಿಣಾಭಿಮುಖವಾಗಿ ಕೈಮುಗಿದು ನಿಂತಿರುವ ಸ್ತ್ರೀ ಉಬ್ಬುಶಿಲ್ಪವಿದೆ. ಆಗ್ನೇಯ ಕಂಬದಲ್ಲಿ ಉತ್ತರಾಭಿಮುಖವಾಗಿ ಇದೇ ರೀತಿ ಕೆತ್ತನೆಯಿದ್ದು ಸ್ತ್ರೀಯು ತನ್ನ ಮಗುವಿನೊಂದಿಗೆ ಇರುವ ಶಿಲ್ಪವಿದೆ. ಮತ್ತು ಮಂಟಪದ ಪೂರ್ವಕ್ಕೆ ಎತ್ತರವಾದ ಎರಡು ಉಯ್ಯಾಲೆ ಕಂಬಗಳಿವೆ. ಗೋಪುರದ ಪ್ರವೇಶದ್ವಾರದ ಬಲಭಾಗದಲ್ಲಿ ಬಸವೇಶ್ವರ ಗುಡಿಯಿದ್ದು, ಎಡಭಾಗದಲ್ಲಿ ವಿನಾಯಕನ ಗುಡಿ ಶಿವಲಿಂಗದ ಬಿತ್ತಿಯ ಹಿಂದೆ ಮಹಿಳೆಯೊಬ್ಬಳ ಮಿಥುನ ಶಿಲ್ಪವಿದ್ದು, ಪ್ರವೇಶದ್ವಾರದಲ್ಲಿ ಶೈವ ದ್ವಾರಪಾಲಕರಿದ್ದರೆ, ಇದಕ್ಕೆ ನೇರವಾಗಿ ಪಾದಪೀಠ ಮತ್ತು ನಂದಿಯ ಸ್ತಂಬವಿರುವುದು.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕಂಡುಬರುವ ಪ್ರಮುಖ ದೇವಾಲಯಗಳ ವಾಸ್ತುವಿವರ

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ, ಪಿರಿಯಾಪಟ್ಟಣ, ಚಂಗಾಳ್ವರ ಪ್ರಮುಖ ರಾಜಕೀಯ, ಆಡಳಿತಾತ್ಮಕ ಹಾಗೂ ಸಾಮಾಜಿಕ, ಧಾರ್ಮಿಕ ಕ್ಷೇತ್ರವಾಗಿತ್ತೆಂದು ಇಲ್ಲಿ ದೊರೆತಿರುವ ಆಕಾರಗಳಿಂದ ನಿರ್ಧರಿಸಬಹುದು. ನಂತರ ಬೆಟ್ಟದಪುರ ಮತ್ತು ಇದರ ಸುತ್ತಮುತ್ತಲಿನ ಪರಿಸರವು ಐತಿಹಾಸಿಕ ಪ್ರಾಮುಖ್ಯತೆಯನ್ನು ಹೊಂದಿತ್ತೆಂದು ಹೇಳಬಹುದು. ಇಂತಹ ಐತಿಹಾಸಿಕ ಕುರುಹುಗಳಾದ ದೇವಾಲಯ, ಬಸದಿ, ಕೋಟೆ ಮತ್ತು ಮೂರ್ತಿಶಿಲ್ಪಗಳನ್ನು ಅಧ್ಯಯನ ಮಾಡುವುದರ ಮೂಲಕ ವಾಸ್ತು ವಿವರಗಳನ್ನು ತಿಳಿಯಲಾಗಿದೆ. ಈ ಪರಿಸರದಲ್ಲಿ ಕಂಡು ಬಂದಿರುವ ಎಲ್ಲಾ ದೇವಾಲಯಗಳು ಚಿಕ್ಕ, ಮಧ್ಯಮ ಹಾಗೂ ತಕ್ಕಮಟ್ಟಿಗೆ ಬೃಹತ್ ಪ್ರಮಾಣ ದಲ್ಲಿವೆ. ವಾಸ್ತುದೃಷ್ಟಿಯಿಂದ ಕೆಲವು ಮಹತ್ವದವುಗಳಾಗಿದ್ದರೆ ಉಳಿದವು ಸರಳವಾಗಿವೆ. ಇಲ್ಲಿ ಕಂಡುಬಂದಿರುವ ದೇವಾಲಯಗಳಲ್ಲಿ ಹಲವು ದೇವಾಲಯಗಳು ಕಾಲಕಾಲಕ್ಕೆ ದುರಸ್ತಿಗೊಂಡು, ಅಲ್ಲಲ್ಲಿ ಮೂಲರೂಪದಲ್ಲಿ ಬದಲಾವಣೆಯನ್ನು ಹೊಂದಿವೆ. ಇನ್ನು ಕೆಲವು ಅವನತಿಯ ಅಂಚಿನಲ್ಲಿವೆ. ಆದರೂ ಚಂಗಾಳ್ವರಿಂದ ನಂತರದ ದಿನಗಳಲ್ಲಿ ಬಹಳಷ್ಟು ವಿಸ್ತರಿಸಲ್ಪಟ್ಟಿರುವ ಹಲವು ಮನೆತನಗಳ ವಾಸ್ತು ಲಕ್ಷಣಗಳನ್ನು ಪ್ರತಿಬಿಂಬಿಸುತ್ತವೆ. ಸಮೀಕ್ಷಿಸಿದ ಪ್ರಸ್ತುತ ದೇವಾಲಯ ಗಳಲ್ಲಿ ವಾಸ್ತುಶಿಲ್ಪ ದೃಷ್ಟಿಯಿಂದ ಪ್ರಮುಖ ದೇವಾಲಯಗಳ ವಾಸ್ತು ವಿವರವನ್ನು ಚರ್ಚಿಸಲಾಗಿದೆ.

೧. ಅನ್ನದಾನಿಮಲ್ಲಿಕಾರ್ಜುನ ದೇವಾಲಯ

ಗ್ರಾಮ	: ಬೆಟ್ಟದಪುರ
ಸ್ಥಳ ನಿರ್ದೇಶನ	: ಬೆಟ್ಟದ ತುದಿ
ಅಭಿಮುಖ	: ಉತ್ತರ
ಕಾಲ	: ಕ್ರಿ.ಶ. ೮ನೆಯ ಶತಮಾನ
ನಿರ್ಮಾಣ ಸಾಮಗ್ರಿ	: ಗ್ರಾನೈಟ್‌ಶಿಲೆ, ಇಟ್ಟಿಗೆ

ದೇವಾಲಯವು ಬೆಟ್ಟದ ತುದಿಯಲ್ಲಿ ಕಟ್ಟಲ್ಪಟ್ಟಿದ್ದು, ಇಪ್ಪತ್ತೈದು ಅಡಿ ಎತ್ತರ ಆಯತಕಾರದ ಗುಡ್ಡದ ಮೇಲೆ ಇದೆ. ಬೆಟ್ಟವು ಗ್ರಾಮದ ಆಗ್ನೇಯ ದಿಕ್ಕಿಗಿದ್ದು ೪೩೮೯ ಅಡಿ ಸಮುದ್ರಮಟ್ಟಕ್ಕಿಂತ[೧೫] ಎತ್ತರದಲ್ಲಿದೆ. ದೇವಾಲಯ ಉತ್ತರಾಭಿಮುಖವಾಗಿದ್ದು ಗ್ರಾನೈಟ್ ಶಿಲೆಯಿಂದ ಕಟ್ಟಲ್ಪಟ್ಟಿದೆ. ದೇವಾಲಯವು ವಿಜಯನಗರ ಕಾಲದಲ್ಲಿ ಹೆಚ್ಚಿನ ವಿಕಾಸ ಹೊಂದಿದೆ. ನಂತರ ಚಂಗಾಳ್ವರೂ ಜೀರ್ಣೋದ್ಧಾರ ಮಾಡಿರುವರು. ದೇವಾಲಯ ದ್ರಾವಿಡ ಶೈಲಿ ಲಕ್ಷಣ ಒಳಗೊಂಡಿದೆ. ಇದು ಮೂಲ ಏಕಕೂಟ ಶೈವ ದೇವಾಲಯವಾಗಿದ್ದು ದೇವಾಲಯಕ್ಕೆ ಪ್ರಮುಖವಾಗಿ ರಾಯಗೋಪುರ ಮತ್ತು ಬೆಟ್ಟತುಂಗದ ಕಡೆಯಿಂದ ಹತ್ತಲು ಮೆಟ್ಟಿಲುಗಳಿವೆ.

ಈ ಬೆಟ್ಟವನ್ನು ಪ್ರಾಚೀನ ಕಾಲದಲ್ಲಿ ಶ್ರೀಗಿರಿ, ವಿಜಯಗಿರಿ, ವಿಜಯಾಚಲ, ಅನ್ನದಾನಿ ಮಲ್ಲಿಕಾರ್ಜುನ ಬೆಟ್ಟ ಎಂಬ ಹೆಸರುಗಳಿಂದ ಕರೆಯುತ್ತಿದ್ದರು. ಇದರ ಪ್ರಾರಂಭದ ಹೆಸರು ಕುರುಗಲ್. ಗಂಗ ಅರಸನಾದ ಮೊದಲನೆಯ ಭೂತುಗನ ಹೆಂಡತಿಯಾದ ಪರಮಬ್ಬೆ ಸುಮಾರು ಕ್ರಿ.ಶ. ೯ನೆಯ ಶತಮಾನದಲ್ಲಿ ಈ ಬೆಟ್ಟವನ್ನು ಆಳುತ್ತಿದ್ದಳೆಂದು ತಿಳಿದು ಬರುತ್ತದೆ. ಐತಿಹ್ಯದ ಪ್ರಕಾರ ಶ್ರೀಗಿರಿ ರಾಮಾಯಣ ಮತ್ತು ಮಹಾಭಾರತದ ಕಾಲದ್ದಾಗಿದ್ದು, ಇಲ್ಲಿಗೆ ಗಯಾ, ಗಂಧರ್ವರು, ಗಂಗಾ ನದಿಯನ್ನು ದಾಟಿ ಬಂದು ಸಿಡಿಲು ಮಲ್ಲಿಕಾರ್ಜುನ ದೇವಾಲಯವನ್ನು ಪೂಜಿಸಿದ್ದರೆಂದು ಐತಿಹ್ಯವಿದೆ. ಬೆಟ್ಟದ ಮೇಲಿರುವ ಮಲ್ಲಿಕಾರ್ಜುನ ದೇವಾಲಯವನ್ನು ತಲುಪಬೇಕಾದರೆ ರಾಯಗೋಪುರದಿಂದ ಸುಮಾರು ೩೧೦೮ ಮೆಟ್ಟಿಲುಗಳನ್ನು ಹತ್ತಿಹೋಗಬೇಕಾಗುತ್ತದೆ. ರಾಯಗೋಪುರವು ವಿಜಯನಗರ ಶೈಲಿಯ ಲಕ್ಷಣ ಹೊಂದಿದೆ. ರಾಯಗೋಪುರದ ಒಳಮಾಳಿಗೆಯು ಸ್ಥಳೀಯವಾಗಿ ದೊರೆಯುವ ವನಸ್ಪತಿಗಳಿಂದ ಉತ್ತಮ ಮಟ್ಟದ ಋಷಿ ಮುನಿಗಳನ್ನು ಒಳಗೊಂಡಂತೆ ಚಿತ್ರಿಸಿರುವುದನ್ನು ಕಾಣಬಹುದು. ಆದರೆ ಇಂದು ಅಂತಹ ಎಲ್ಲಾ ಚಿತ್ರಗಳು ಅವನತಿಗೊಳ್ಳುವ ಹಂತದಲ್ಲಿವೆ.

ದೇವಾಲಯ ಪ್ರಾರಂಭದಲ್ಲಿ ಗಂಗರಿಂದ ನಿರ್ಮಾಣಗೊಳ್ಳಲು ಪ್ರಾರಂಭಿಸಿ ನಂತರದ ದಿನಗಳಲ್ಲಿ ಹೊಯ್ಸಳ, ವಿಜಯನಗರ ಹಾಗೂ ಚಂಗಾಳ್ವರಿಂದ ವಿಸ್ತರಿಸಲ್ಪಟ್ಟಿದ್ದಲ್ಲದೆ ಜೀರ್ಣೋದ್ಧಾರವಾಗಿರುವುದು.[೧೬] ಗರ್ಭಗೃಹ ಚೋಳ ಮಾದರಿಯ ಲಕ್ಷಣ ಹೊಂದಿದ್ದು, ಮುಂದೆ ಹೊಯ್ಸಳ ಶೈಲಿಯನ್ನು ಅನುಸರಿಸಿದೆ. ಎಡಭಾಗದ ಗರ್ಭಗೃಹವೂ ವಿಜಯನಗರ ಶೈಲಿಯ ಲಕ್ಷಣ ಹೊಂದಿದ್ದು ನಂತರದ ದಿನಗಳಲ್ಲಿ ಹೊಸದಾಗಿ ಸೇರಿಸಲ್ಪಟ್ಟಿರುವುದು ಹಾಗೂ ಪ್ರವೇಶಮಾರ್ಗದಲ್ಲಿ ಉತ್ತಮ ಮಟ್ಟದಿಂದ ಕೂಡಿದ ಮರದ ಬಾಗಿಲು ಇದ್ದು, ಇದರಲ್ಲಿ ಉತ್ತಮ ಕಲಾಕೃತಿಯ ಚಿತ್ರಗಳನ್ನು ಕೆತ್ತಿರುವರು. ಹಾಗೆಯೇ ಇಲ್ಲಿರುವ ಭಕ್ತನ

ವಿಗ್ರಹ ಪ್ರಾರಂಭದ ವಿಜಯನಗರ ಶೈಲಿಯ ಲಕ್ಷಣದಿಂದ ಕೂಡಿದೆ. ಇಂತಹ ಭವ್ಯ ವಾದ ದೇವಾಲಯಕ್ಕೆ ಚಂಗಾಳ್ವ ಮನೆತನದ ಪ್ರಮುಖ ಅರಸನಾದ ಪೆರಿಯಾರಾಜನು ಕ್ರಿಶ. ೧೫೮೬ರಲ್ಲಿ ಸುಮಾರು ೩೩ ಹಳ್ಳಿಗಳನ್ನು ದಾನ[೧೭] ಮಾಡಿರುವನು.

ಸಂಕೇತಿಗಳೆಂಬ ವಲಸೆಬಂದ ಬ್ರಾಹ್ಮಣರು ಬೆಟ್ಟದಪುರ ಗ್ರಾಮದಲ್ಲಿ ನೆಲೆಸಿದ್ದರು. ಇವರು ನೋಡಲು ಸುಂದರವಾಗಿದ್ದು ಮಧುರೈನಿಂದ ಬಂದವರಾಗಿದ್ದು ತಮಿಳು ಮತ್ತು ಕನ್ನಡ ಮಿಶ್ರಣದ ಅಸ್ಪಷ್ಟ ಭಾಷೆಯನ್ನು ಮಾತನಾಡುತ್ತಿದ್ದರು. ಇವರಲ್ಲಿ ಎರಡು ವಿಧಗಳಿವೆ. ಒಂದು ಕೌಶಿಕ ಸಂಕೇತಿಗಳು ಮತ್ತು ಬೆಟ್ಟದಪುರದ ಸಂಕೇತಿಗಳು. ಇವರು ಆ ಸ್ಥಳದಲ್ಲಿ ಬಂದು ನೆಲೆ ನಿಂತಿರುವುದರಿಂದ ಆ ಹೆಸರು ಬಂದಿರಬಹುದು. ಈ ಎರಡು ಪಂಗಡದವರು ಹಾಸನ ಮತ್ತು ಮೈಸೂರು ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಇವರು ಒಟ್ಟಿಗೆ ಕುಳಿತುಕೊಂಡು ಊಟ ಮಾಡಿದರೂ ಕೂಡ ಪರಸ್ಪರ ವೈವಾಹಿಕ ಸಂಬಂಧವನ್ನು ಮಾಡುವುದಿಲ್ಲ. ಮಧುರೈನಿಂದ ಮೊದಲು ಬಂದಂತಹ ಕೌಶಿಕ ಪಂಗಡದವರು ಬೆಟ್ಟದಪುರದಲ್ಲಿರುವ ಸ್ತ್ರೀಯರೊಂದಿಗೆ ಮದುವೆ ಮಾಡಿಕೊಳ್ಳುತ್ತಾರೆ. ಸಂಕೇತಿಗಳು ನಾಚಾರಮ್ಮ ಅಥವಾ ನಂಗೀರಮ್ಮನನ್ನು ಪೂಜಿಸುತ್ತಾರೆ. ಅವರು ತಮ್ಮ ಮೂಲಸ್ಥಾನದಿಂದ ವಲಸೆ ಬಂದಾಗಲೇ ಇದನ್ನು ತಮ್ಮ ಜೊತೆಯಲ್ಲಿಯೇ ತಂದಿದ್ದರು[೧೮] ಎಂದು ಕಂಡುಬಂದಿದೆ.

ದೇವಾಲಯ ರಚನಾ ನಿರ್ಮಾಣ ವ್ಯವಸ್ಥೆಯಲ್ಲಿ ಅಧಿಷ್ಠಾನವಿದ್ದು ವೇದಿಕೆಯ ಮೇಲೆ ನಿರ್ಮಾಣಗೊಂಡಿದೆ. ಆದರೆ ಗರ್ಭಗೃಹ ಬಿಟ್ಟು ಉತ್ತರ, ಪೂರ್ವ ಮತ್ತು ಪಶ್ಚಿಮಗಳಲ್ಲಿ ಅಡಿಪಾಯ ಚಪ್ಪಡಿಕಲ್ಲುಗಳಿಂದ ಮುಚ್ಚಿಹೋಗಿದೆ. ಮೂಲತಃ ಗರ್ಭಗೃಹ, ಅಂತರಾಳ, ನವರಂಗ ಮಂಟಪ ಒಳಗೊಂಡಿದೆ. ನವರಂಗ ಮಂಟಪಕ್ಕೆ ಪ್ರವೇಶದ್ವಾರವಿದ್ದು ಇದಕ್ಕೆ ನೇರವಾಗಿ ಎಡ ಮತ್ತು ಬಲಭಾಗದಲ್ಲಿ ಎರಡು ಪ್ರವೇಶದ್ವಾರಗಳು ಕಂಡುಬಂದಿವೆ. ದೇವಾಲಯದ ಗರ್ಭಗೃಹದಲ್ಲಿ ಎರಡೂವರೆ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹವು ಚೌಕಕಾರವಾಗಿದ್ದು ಭುವನೇಶ್ವರಿ ಹೊಂದಿದೆ. ಇದರ ಮೇಲೆ ದ್ರಾವಿಡ ಶೈಲಿಯ ಗೋಪುರ ಹೊಂದಿದೆ. ಗೋಪುರವು ಪಿರಮಿಡ್ಡಿನಾಕಾರದಲ್ಲಿದ್ದು ಗಾರೆಶಿಲ್ಪದಿಂದ ಅಲಂಕೃತವಾಗಿದೆ. ನಾಲ್ಕು ದಿಕ್ಕುಗಳ ಮೂಲೆಯಲ್ಲಿ ನಂದಿ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ಇದಕ್ಕೆ ಹೊಂದಿಕೊಂಡಂತೆ ಆಯತಕಾರದ ಪಟ್ಟಿಗೆಯ ಆಕಾರದಲ್ಲಿದೆ. ಇದರ ಮೇಲೆ ಗಾರೆಯಿಂದ ಮಾಡಲ್ಪಟ್ಟ ನಂದಿ ವಿಗ್ರಹವಿದೆ. ಬಾಗಿಲವಾಡವು ಸರಳವಾಗಿದ್ದು ಲಲಾಟಬಿಂಬದಲ್ಲಿ ಯಾವುದೇ ಉಬ್ಬುಶಿಲ್ಪವಿರುವುದಿಲ್ಲ. ಮತ್ತು ಬೆಳಕು ಇಲ್ಲದೆ ಕತ್ತಲೆಯಾಗಿರುವುದು. ಇದು ಪ್ರದಕ್ಷಣೆ ಪಥವನ್ನು ಹೊಂದಿಲ್ಲ. ಬಿತ್ತಿಯು ಚೋಳ, ಹೊಯ್ಸಳರ ಲಕ್ಷಣ ಹೊಂದಿದೆ. ಗರ್ಭಗೃಹ ನಂತರದ ಭಾಗ ಅಂತರಾಳವಾಗಿದ್ದು ಯಾವುದೇ ರೀತಿಯ ಕಲಾತ್ಮಕ ಚಿತ್ರವನ್ನು ಹೊಂದಿರುವುದಿಲ್ಲ. ಅಂತರಾಳದಲ್ಲಿ

ನಂದಿಯ ಶಿಲ್ಪವಿದ್ದು ಕಪ್ಪು ಶಿಲೆಯಿಂದ ಕೂಡಿದೆ. ಬಾಗಿಲುವಾಡದಲ್ಲಿ ಸರಳ ರೇಖೆಯಂಥಹ ಚಿತ್ರಹೊಂದಿದ್ದು ಲಲಾಟಬಿಂಬದಲ್ಲಿ ಪುಷ್ಪಕಾರದ ಚಿತ್ರವನ್ನು ಹೊಂದಿದೆ.

ಅಂತರಾಳದ ಮುಂದಿನ ಭಾಗವೇ ನವರಂಗ ಮಂಟಪ. ನವರಂಗಮಂಟಪಕ್ಕೆ ಎರಡು ಪ್ರವೇಶದ್ವಾರಗಳಿವೆ. ಪೂರ್ವದಿಕ್ಕಿನಲ್ಲಿ ಇರುವಂಥಹ ನವರಂಗಮಂಟಪವು ಪ್ರಾಚೀನ ಕಾಲದ್ದಾಗಿದೆ. ಆದರೆ ದಕ್ಷಿಣದಲ್ಲಿರುವ ನವರಂಗವು ಪಾಳೆಯಗಾರ ಕಾಲದಲ್ಲಿ ನಿರ್ಮಾಣ ಮಾಡಿದ್ದಾಗಿದೆ. ನವರಂಗ ಮಂಟಪದಲ್ಲಿ ನಾಲ್ಕು ಸ್ತಂಭಗಳಿದ್ದು ಒಂದೇ ರೀತಿಯಲ್ಲಿವೆ. ಸ್ತಂಭದ ತಳವು ಚಚ್ಚೌಕಕಾರವಾಗಿದ್ದು, ಅದರ ಮೇಲೆ ಎಂಟು ಮುಖಗಳು, ನಂತರ ಸಿಲಿಂಡರಿನ ಆಕೃತಿ ಹೊಂದಿದೆ. ಸ್ತಂಭಗಳ ಮೇಲೆ ಶಿಲ್ಪಗಳ ಕೆತ್ತನೆ ಇರುವುದಿಲ್ಲ. ಬಿತ್ತಿ, ಸ್ತಂಭ ಮತ್ತು ಛಾವಣಿಗಳಿಗೆ ಬಳಸಿದಂತಹ ಎಲ್ಲಾ ಕಲ್ಲುಗಳು ಗ್ರಾನೈಟ್‌ನಿಂದ ಮಾಡಿದ್ದಾಗಿದೆ. ಮಧ್ಯದ ಛಾವಣಿಯು ಆಳವಾಗಿದ್ದು ಎರಡು ಮೂಲೆಗಳಲ್ಲಿ ಉನ್ನತವಾಗಿದೆ. ಪ್ರವೇಶದ್ವಾರದಲ್ಲಿ ಮರದಿಂದ ಮಾಡಿದ ಬಾಗಿಲು ಇದ್ದು ಇದನ್ನು ಅತ್ಯಂತ ಕಲಾತ್ಮಕ ಕೆತ್ತನೆಯಿಂದ ಕೆತ್ತಲಾಗಿದೆ. ಬಾಗಿಲ ಮೇಲಿನ ಭಾಗದಲ್ಲಿ ನಾಲ್ಕು ಗಿಳಿಗಳ ಚಿತ್ರಗಳ ಕೆತ್ತನೆ ಇರುವುದು. ನಾಲ್ಕು ಗಿಳಿಗಳು ಒಂದಕ್ಕೊಂದು ತಲೆಯನ್ನು ಬಂದಿಸಿದಂತೆ ಕಂಡುಬಂದಿದ್ದು ಹೊಯ್ಸಳರ ಕಾಲದ್ದಾಗಿರುವುದು. ಪ್ರವೇಶದ್ವಾರದಲ್ಲಿ ನಾಲ್ಕು ಕೈಗಳುಳ್ಳ ಶೈವ ದ್ವಾರಪಾಲಕರ ಮೂರ್ತಿಶಿಲ್ಪಗಳಿವೆ.

ಮೂಲ ದೇವಾಲಯವು ಒಟ್ಟು ಎಂಬತ್ತೊಂದು ಸ್ತಂಭಗಳನ್ನು ಹೊಂದಿದೆ. ಗರ್ಭಗೃಹಕ್ಕೆ ನೇರವಾಗಿ ಒಂದು ಅಲಂಕೃತ ಕೆತ್ತನೆಯಿಂದ ಕೂಡಿದ ಕಿಂಡಿ ಇರುವುದು. ಇದನ್ನು ಸಿಡಿಲು ಕಿಂಡಿ ಎಂದು ಕರೆಯುವರು. ಇಲ್ಲಿಯೇ ನಂದಿ ವಿಗ್ರಹವನ್ನು ಗರ್ಭಗೃಹಕ್ಕೆ ನೇರವಾಗಿ ಇಡಲಾಗಿದೆ. ಇದರ ತಳಭಾಗದಲ್ಲಿ ಐದು ವಿವಿಧ ರೀತಿಯ ನಾಗಶಿಲ್ಪ ಮತ್ತೆರೆಡು ಅಸ್ಪಷ್ಟ ಮೂರ್ತಿಗಳನ್ನು ಇಡಲಾಗಿದೆ. ಈ ಕಿಟಕಿಯಿಂದಲೇ ಸೂರ್ಯನ ಬೆಳಕು ದೇವಾಲಯಕ್ಕೆ ಪ್ರವೇಶವಾಗಬೇಕಾಗಿರುವುದು. ಕಿಟಕಿಯಲ್ಲಿ ಹದಿನೈದು ಸಣ್ಣ ಕಿಂಡಿಗಳಿರುವವು. ಇದನ್ನು ಅಧಿಷ್ಠಾನ ಸ್ತಂಭದ ಮೇಲೆ ಮತ್ತು ಬಿತ್ತಿಯೊಂದಿಗೆ ಸೇರಿಸಿ ಇಡಲಾಗಿದೆ. ಇದರ ಮುಂದೆ ಕಂಬವಿದ್ದು ಪೀಠದ ಮೇಲೆ ನರ್ತಿಸುತ್ತಿರುವ ಚಿತ್ರವಿದೆ.

ಸಿಡಿಲುಕಿಂಡಿಗೆ ಒಂದು ಐತಿಹ್ಯವಿದೆ. ಇದರ ಪ್ರಕಾರ ಒಬ್ಬ ಗಂಧರ್ವ ಮಹಾಭಾರತ ಯುದ್ಧ ಸಂದರ್ಭದಲ್ಲಿ ಭೀಷ್ಮಾಚಾರ್ಯರ ಮರಣವನ್ನು ಘೋಷಿಸಿದನು. ಆ ಸಂದರ್ಭದಲ್ಲಿ ಸಿಡಿಲಾಗು ಎಂದು ಶಾಪಗ್ರಸ್ತನಾದನು. ಆತನ ಅಣತಿಯ ಮೇರೆಗೆ ಮಲ್ಲಿಕಾರ್ಜುನ ದೇವರ ಸೇವೆಯನ್ನು ಮಾಡಿದರೆ ಶಾಪ ವಿಮೋಚನೆಯಾಗುತ್ತದೆ ಎಂದು ತಿಳಿದು ಅದೇ ರೀತಿಯಲ್ಲಿ ಪೂಜೆಯನ್ನು ಮಾಡುವರು. ಈ ಪದ್ಧತಿಯನ್ನು ಎರಡು ಅಥವಾ ಮೂರು ವರ್ಷಕ್ಕೆ ಒಂದು ಬಾರಿ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಭೂಕಂಪಿಸುವುದು ಅಲ್ಲಿರುವ ದೀಪಗಳು

ನಂದುವುದು ಮತ್ತು ಪುರೋಹಿತನು ಪುರೋಹಿತ ಕಾರ್ಯದಲ್ಲಿ ತೊಡಗಿದ್ದರೆ ಜ್ಞಾನತಪ್ಪಿ ಬೀಳುವಂಥಹ ಅನಾಹುತಗಳು ನಡೆಯುತ್ತವೆ. ಇದರಿಂದ ಈ ಪೂಜೆಯನ್ನು ಶಾಂತಿಪೂಜೆ ಅಥವಾ ಶುದ್ಧಿ ಕ್ರಿಯೆಯೆಂದು ಕರೆಯುವರು.

ಶಿವಲಿಂಗಕ್ಕೆ ನೇರವಾಗಿ ಒಂದು ಬೃಹತ್ ಬಂಡೆಯ ಮೇಲೆ ನಂದಿಸ್ತಂಭವಿದೆ. ಇದು ಹದಿನೈದು ಅಡಿ ಎತ್ತರವಾಗಿದ್ದು ಇದರ ಮೇಲೆ ನಂದಿಯ ಮೂರ್ತಿ ಇರುವುದು. ಕಂಬವು ಸಿಲಿಂಡರಿನ ಆಕೃತಿಯಲ್ಲಿದೆ. ಇದರ ತಳಭಾಗದಲ್ಲಿ ಗಂಗಾಧರಯ್ಯ ಎಂದು ಕೊರೆಯಲಾಗಿದೆ. ಅಲ್ಲದೇ ಭಕ್ತನು ಭಕುತಿಯಿಂದ ನಮಿಸುತ್ತಿರುವುದು. ಇದನ್ನು ಮೂಡಲ ಕಮರಿಬಸವನೆಂದು ಕರೆಯುತ್ತಾರೆ. ಇದರ ಉತ್ತರ ದಿಕ್ಕಿನಲ್ಲಿ ಇನ್ನೊಂದು ನಂದಿ ಸ್ತಂಭವಿದೆ. ಆದರೆ ಇಂದು ನಂದಿಯಮೂರ್ತಿ ಕೆಳಗೆ ಬಿದ್ದಿದೆ.

ಯುಗಾಂತರ ಶಾಸನಶಿಲ್ಪವು ಸಿಡಿಲು ಕಿಂಡಿಯ ಸಮೀಪವಿದ್ದು, ಪೂರ್ವದ ಗೋಡೆಯಲ್ಲಿ ಕೆತ್ತಿ ನಿಲ್ಲಿಸಲಾಗಿದೆ. ಶಾಸನಶಿಲ್ಪವು ನಾಲ್ಕು ವಿಭಾಗಗಳನ್ನು ಒಳಗೊಂಡಿದ್ದು ಪ್ರತಿಯೊಂದು ವಿಭಾಗದಲ್ಲಿ ಲಿಂಗ ಮತ್ತು ನಂದಿಯ ಶಿಲ್ಪವಿದೆ. ಎಲ್ಲಾ ವಿಭಾಗದಲ್ಲಿ ನಾಲ್ಕು ಕೈಗಳುಳ್ಳ ಮೂರ್ತಿ ಎರಡು ಕೈಗಳುಳ್ಳ ಪುರುಷ ಮೃಗನ ಮೂರ್ತಿಶಿಲ್ಪವಿದೆ. ನಾಲ್ಕನೆಯ ವಿಭಾಗದಲ್ಲಿ ಲಿಂಗಕ್ಕೆ ಹಾಲನ್ನೆರೆಯುತ್ತಿರುವ ದೊಡ್ಡ ಆಕಳಿನ ಉಬ್ಬುಶಿಲ್ಪವಿದೆ. ಇದರ ತಳದಲ್ಲಿ ಕೈಮುಗಿದು ನಿಂತಿರುವ ಪುರುಷನ ಚಿತ್ರವಿದೆ. ಈ ಶಿಲೆಯನ್ನು ಬಲಭಾಗದಲ್ಲಿ ಎರಡು ಲಂಬ ಸರಳ ಕಂಬಗಳೊಂದಿಗೆ ಮೇಲೆ ಒಂದು ಕಂಬವನ್ನು ಜೋಡಿಸುವುದರ ಮೂಲಕ ನಿಲ್ಲಿಸಲಾಗಿದೆ. ಇದರ ಮುಂದೆ ನಂದಿಮೂರ್ತಿಶಿಲ್ಪವಿದೆ. ಇದಕ್ಕೊಂದು ಶಾಸನವಿದ್ದು ಈ ರೀತಿಯಲ್ಲಿದೆ: "ಕೃತಯುಗದಲ್ಲಿ ದೇವತೆ, ಋಷಿಗಳಿಂದಲೂ, ತ್ರೇತಾಯುಗದಲ್ಲಿ ನಾಗಾರ್ಜುನನಿಂದಲೂ, ದ್ವಾಪರಯುಗದಲ್ಲಿ ಪುರುಷಮೃಗನಿಂದಲೂ ಮತ್ತು ಮಿಂಚಿನಿಂದಲೂ ಹಾಗೇ ಕಲಿಯುಗದಲ್ಲಿ ಆಕಳಿನಿಂದಲೂ ಪೂಜಿತನಾದ ಅನ್ನದಾನಿಮಲ್ಲಿಕಾರ್ಜುನವನು. ಶಾಸನ ಶಿಲೆಯನ್ನು ಮಲ್ಲಿಕಾರ್ಜುನನ ಭಕ್ತನಾದ ಸೋಸಲೆಯ ಚೆನ್ನವೀರಗೌಡನ ಪುತ್ರನಾದ ಗಂಗಾಧರಯ್ಯ ಕೆತ್ತಿಸಿದನೆಂದು ಕಂಡುಬಂದಿದೆ."[೧೯]

ಮೂಲಗರ್ಭಗೃಹದ ಪಶ್ಚಿಮಕ್ಕೆ ಭ್ರಮರಾಂಭಿಕೆಯ ಗರ್ಭಗೃಹವಿದೆ. ಇದು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ನಾಲ್ಕು ಅಡಿ ಎತ್ತರದ ದೇವಿ ಮೂರ್ತಿಶಿಲ್ಪ ಇದೆ. ಇದು ಚೌಕಕಾರದಲಿದ್ದು, ಗರ್ಭಗೃಹದ ಮೇಲಿನ ಭಾಗ ಪುಷ್ಪಲಂಕಾರದ ಭುವನೇಶ್ವರಿ ಇದ್ದು, ಇದರ ಮೇಲೆ ಚಿಕ್ಕದಾದ ಗೋಪುರವಿದ್ದು ಗಾರೆಯಿಂದ ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿ ಬೇರೆ ಯಾವುದೇ ಕೆತ್ತನೆ ಇರುವುದಿಲ್ಲ. ಬಾಗಿಲುವಾಡವು

ಸರಳವಾಗಿದ್ದು ಲಲಾಟಬಿಂಬದಲ್ಲಿ ಯಾವುದೇ ಕೆತ್ತನೆ ಕಂಡುಬರುವುದಿಲ್ಲ. ಗರ್ಭಗೃಹದ ನಂತರ ಅಂತರಾಳವಿದ್ದು ಅಂತರಾಳವು ಆಯತಕಾರದಲ್ಲಿದೆ. ಇದರ ಬಾಗಿಲುವಾಡವು ಅಲಂಕಾರಿಕವಾಗಿದ್ದು ಲಲಾಟಬಿಂಬದ ಮೇಲೆ ಶಿವಲಿಂಗ ಮತ್ತು ನಂದಿಯ ಉಬ್ಬುಶಿಲ್ಪವಿದೆ. ಬಾಗಿಲುವಾಡದ ತಳಭಾಗ ಮತ್ತು ಪದ್ಮಪಾದವು ಪುಷ್ಪಲಂಕಾರದ ಕೆತ್ತನೆ ಹೊಂದಿದೆ. ಇದರ ಮುಂದೆ ನೇರವಾಗಿ ಉತ್ತರ ದಿಕ್ಕಿನಿಂದ ದೇವಾಲಯಕ್ಕೆ ಪ್ರವೇಶದ್ವಾರವಿದೆ. ಇಲ್ಲಿ ಸ್ತಂಭಗಳ ಸಾಲುಗಳು ಇರುವುದು. ಇದರ ಪ್ರವೇಶದ್ವಾರದ ಉತ್ತರ ದಿಕ್ಕಿನಲ್ಲಿ ಒಂದು ಶಾಸನವಿದೆ. ಶಾಸನವು ಅಸ್ಪಷ್ಟವಾಗಿದ್ದು, ಶಾಸನದ ಮೇಲಿನ ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬುಶಿಲ್ಪವಿದೆ. ಭ್ರಮರಾಂಭಿಕೆ ದೇವಾಲಯದ ಎಡಭಾಗದಲ್ಲಿ ಒಂದೂವರೆ ಅಡಿ ಎತ್ತರದ ಜಗುಲಿಯ ಮೇಲೆ ವಿಶಾಲ ಸಭಾ ಮಂಟಪವಿದೆ. ಈ ದೇವಾಲಯದಲ್ಲಿ ಒಟ್ಟು ತೊಂಬತ್ತೆರೆಡು ಮೂಲಸ್ತಂಭಗಳಿವೆ. ಇಲ್ಲಿಯ ಸ್ತಂಭಗಳು ಚಚ್ಚೌಕಾರದಲ್ಲಿದ್ದು ವಿಜಯನಗರ ಶೈಲಿಯ ಲಕ್ಷಣಗಳನ್ನು ಹೊಂದಿದೆ. ಇದೊಂದು ವಿಶಾಲ ಪೂಜಾಕಾರ್ಯದ, ವಿವಾಹ ಸಭಾಮಂಟಪ ವೆಂದು ಹೇಳಬಹುದು. ಪಶ್ಚಿಮ ದಿಕ್ಕಿನಲ್ಲಿ ಪ್ರವೇಶದ್ವಾರ ಬಲಭಾಗದಲ್ಲಿ ಸಣ್ಣದೊಂದು ಕೊಠಡಿ ಇದೆ. ಇಲ್ಲಿಯ ಸ್ತಂಭಗಳು ಚೌಕಕಾರದಲ್ಲಿದ್ದು ನಂತರ ಎಂಟು ಮುಖಗಳನ್ನು ಹೊಂದಿರುವುದು. ದೇವಾಲಯದಲ್ಲಿ ಒಟ್ಟು ಮೂಲ ೧೭೩ ಸ್ತಂಭಗಳಿದ್ದು ಹಲವು ಸ್ತಂಭಗಳು ಬಿದ್ದುಹೋಗಿವೆ. ಸ್ತಂಭಗಳ ಪ್ರಮುಖ ಉದ್ದೇಶವೆಂದರೆ ದೇವಾಲಯದ ಮೇಲ್ಚಾವಣೆಯನ್ನು ಹೊತ್ತು ನಿಂತಿರುವುದು ಮತ್ತು ದೇವಾಲಯದ ಅಲಂಕಾರವನ್ನು ವೃದ್ಧಿಸುವುದಾಗಿದೆ.

ದೇವಾಲಯದ ಬಿತ್ತಿ ಚಪ್ಪಡಿ ಕಲ್ಲುಗಳಿಂದ ಕೂಡಿದ್ದು, ಒಂದರ ಮೇಲೊಂದು ಜೋಡಿಸಲಾಗಿದೆ. ಯಾವುದೇ ರೀತಿಯ ಗಾರೆಯನ್ನು ಉಪಯೋಗಿಸಿರುವುದಿಲ್ಲ. ಮೂಲ ದೇವಾಲಯದ ಪೂರ್ವ ದಿಕ್ಕಿಗೆ ಒಂದು ಅಡುಗೆ ಮನೆಯಿರುವುದು. ಅಡುಗೆ ಮನೆಯಲ್ಲಿ ಒಂದು ಹಿತ್ತಾಳೆ ಪಾತ್ರೆ, ಬಿಂದಿಗೆ, ಕಡಾಯಿ ಇರುವುದು. ಕಂಚಿನ ಬಿಂದಿಗೆಯನ್ನು ಮಲ್ಲಿಕಾರ್ಜುನ ದೇವರಿಗೆ ಯಡೆತೊರೆಯ ಶಾನುಭೋಗರ ಮಗಳು ಅನ್ನಪೂರ್ಣಮ್ಮ ನೀಡಿರುವ ಉಡುಗೊರೆಯಾಗಿದೆ. ಅಡುಗೆ ಮನೆಯ ಬಿತ್ತಿಯಲ್ಲಿ ಉದ್ದನೆಯ ಸರ್ಪ, ಆಮೆಯ ಉಬ್ಬುಶಿಲ್ಪವಿದೆ. ಇದರ ಸಮೀಪದಲ್ಲಿ ಒಂದು ದೊಡ್ಡ ಶಾಸನವಿದೆ. ಬೆಟ್ಟತುಂಗಕ್ಕಿರುವ ಮೆಟ್ಟಿಲುಗಳ ದ್ವಾರ ಅಥವಾ ರಾಜಬಾಗಿಲಿನ ಸ್ತಂಭಗಳು ಅಲಂಕಾರವನ್ನು ಹೊಂದಿವೆ. ಇದರ ಪ್ರವೇಶದ್ವಾರದಲ್ಲಿ ನಾಲ್ಕು ಕೈಗಳ್ಳುಳ್ಳ ಶೈವ ದ್ವಾರಪಾಲಕರು ನಿಂತಿದ್ದಾರೆ. ಇಲ್ಲಿಯ ಸ್ತಂಭಗಳು ಅತ್ಯಂತ ಬಲಿಷ್ಟವಾಗಿದ್ದು ಪೀಠವಿಲ್ಲದೆ ನಿಂತಿವೆ ಮತ್ತು ನಂದಿಯ ಮೂರ್ತಿಶಿಲ್ಪವಿದೆ.

ದೇವಾಲಯದ ಸುತ್ತಲೂ ವಿವಿಧ ಗಾತ್ರದ ನಂದಿ ಮೂರ್ತಿಶಿಲ್ಪಗಳಿವೆ. ಈ ದೇವಾಲಯಕ್ಕೆ ಪ್ರಮುಖ ಹೆಬ್ಬಾಗಿಲಿದ್ದು, ಮಂಟಪವನ್ನು ಹೊಂದಿದೆ. ೪+೪=೮ ಸ್ತಂಭಗಳನ್ನು ಒಳಗೊಂಡಿವೆ. ಇವುಗಳ ಮೇಲೆ ಬಿತ್ತಿ, ನಂತರ ಕಲ್ಲು ಚಪ್ಪಡಿಗಳನ್ನು ಸೇರಿಸಿ ಇಟ್ಟಿಗೆಯಿಂದ ಕಟ್ಟಲ್ಪಟ್ಟಿರುವುದು. ಇಲ್ಲಿಯ ಪ್ರವೇಶದ್ವಾರವು ಸುಂದರ ಕಲಾತ್ಮಕ ಕೆತ್ತನೆಯಿಂದ ಕೂಡಿದೆ. ದೇವಾಲಯ ಒಳಭಾಗ ಮತ್ತು ಹೊರಭಾಗದಲ್ಲಿ ಹಲವು ಅವಶೇಷಗಳು ಬಿದ್ದಿರುವವು. ದೇವಾಲಯದ ಸುತ್ತ ಇಟ್ಟಿಗೆ ಗೋಡೆಗಳಿಂದ ಸುತ್ತುವರಿದಿದೆ. ಈ ಗೋಡೆಯ ತಳಭಾಗದಲ್ಲಿ ಕಲ್ಲುಗಳ ಅಧಿಷ್ಠಾನವಿರುವುದು. ಕೆಲವು ಭಾಗಗಳಲ್ಲಿ ಗೋಡೆಗಳು ಬಿದ್ದುಹೋಗಿದ್ದು ಕಲ್ಲಿನ ಅದಿಷ್ಠಾನ ಮಾತ್ರವಿದೆ.

೨. ಅರ್ಕೇಶ್ವರ ದೇವಾಲಯ

ಗ್ರಾಮ : ಕುಡುಕೂರು

ಸ್ಥಳ ನಿರ್ದೇಶನ : ಕೆರೆದಂಡೆ

ಅಭಿಮುಖ : ಪೂರ್ವ

ಕಾಲ : ಕ್ರಿ.ಶ. ೧೧ ಮತ್ತು ೧೨ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಗಾರೆ, ಶಿಲೆ,

ಈ ದೇವಾಲಯದ ಅಧಿಷ್ಠಾನವಿದ್ದರೂ ಸಂಪೂರ್ಣವಾಗಿ ಮಣ್ಣಿನಿಂದ ಮುಚ್ಚಲ್ಪಟ್ಟಿರುವುದು. ಗರ್ಭಗೃಹ ಚಿಕ್ಕದಾಗಿದ್ದು, ತ್ರಿಭುಜಾಕಾರದ ಭುವನೇಶ್ವರಿಯನ್ನು ಒಳಗೊಂಡ ದ್ರಾವಿಡ ಶೈಲಿಯ ಗೋಪುರವಿದೆ. ಗರ್ಭಗೃಹದ ಪ್ರವೇಶದ್ವಾರವು ಸರಳವಾಗಿದ್ದು ಲಲಾಟಬಿಂಬದ ಮೇಲೆ ಯಾವುದೇ ರೀತಿಯ ಕೆತ್ತನೆ ಕಾಣದಷ್ಟು ಸುಣ್ಣವನ್ನು ಬಳಿದಿರುವರು. ಅಂತರಾಳವು ತುಂಬಾ ಚಿಕ್ಕದಾಗಿದ್ದು ಯಾವುದೇ ವಿಗ್ರಹಗಳಿರುವುದಿಲ್ಲ. ನಂತರ ನವರಂಗದ ಸ್ವಲ್ಪ ಪ್ರಮಾಣದಲ್ಲಿ ವಿಶಾಲವಾಗಿದ್ದು ಕತ್ತಲೆಯಿಂದ ಕೂಡಿರುವುದು. ನಂದಿ, ಪಾರ್ವತಿ, ವಿನಾಯಕನ ವಿಗ್ರಹಗಳು ಕಂಡುಬಂದಿದ್ದು, ಮೂಲ ಗರ್ಭಗೃಹದ ವಿಗ್ರಹವು ಸ್ಥಳಾಂತರಗೊಂಡಿದ್ದು ನೂತನ ಶಿವಲಿಂಗವನ್ನು ಪ್ರತಿಷ್ಠಾಪನೆ ಮಾಡಿರುವರು. ನವರಂಗದಲ್ಲಿ ನಾಲ್ಕು ಸ್ತಂಭಗಳು ಪೀಠವಿಲ್ಲದೆ ದೇವಾಲಯದ ತೊಲೆಯನ್ನು ಹೊತ್ತು ನಿಂತಿವೆ. ಸ್ತಂಭವು ತಳಭಾಗದಲ್ಲಿ ಚೌಕಕಾರವಿದ್ದು, ಅದರ ಮೇಲೆ ಆರು ಕೋನಗಳು, ನಂತರ ಕುಂಬ, ಅದರ ಮೇಲೆ ಸ್ವತಂತ್ರವಾದ ವೃತ್ತಾಕಾರ ಶಿಲೆ, ನಂತರ ತೊಲೆ ಇರುವುದು. ಸಂಪೂರ್ಣ ಕಲ್ಲುಚಪ್ಪಡಿಗಳಿಂದ ಬಿತ್ತಿ ಮತ್ತು ಮೇಲ್ಛಾವಣಿಯಿದ್ದು, ಸ್ತಂಭಗಳ ಮೇಲೆ ಯಾವುದೇ ಕೆತ್ತನೆ ಇರುವುದಿಲ್ಲ ಮತ್ತು ನವರಂಗವು ತೆರದ ಮಂಟಪವಾಗಿದ್ದು ನಂತರದ ದಿನಗಳಲ್ಲಿ ಬಿತ್ತಿಯನ್ನು ಕಟ್ಟಿರುವ ಲಕ್ಷಣ ಕಂಡುಬಂದಿದೆ. ಮೇಲ್ಭಾಗದಲ್ಲಿ ನಾಲ್ಕು ದಿಕ್ಕಿಗೂ ಜೋಡಿಬಸವನ ಶಿಲ್ಪಗಳಿವೆ. ದೇವಾಲಯ ಎಪ್ಪತ್ತು ಇಂಚು ಎತ್ತರವಾಗಿದ್ದು ೧೭೦

ಇಂಚು ಅಗಲ ಮತ್ತು ೩೫೦ ಇಂಚು ಉದ್ದವಾಗಿದೆ. ಮೂಲತಃ ಜಿನ ಬಸದಿಯ ಲಕ್ಷಣ ಒಳಗೊಂಡಿದೆ.

೩. ಈಶ್ವರ ದೇವಾಲಯ

ಗ್ರಾಮ	:	ಕೆಸುವಿನ ಕೆರೆ
ಸ್ಥಳ ನಿರ್ದೇಶನ	:	ಜಮೀನಿನ ಮಧ್ಯೆ
ಅಭಿಮುಖ	:	ಉತ್ತರ
ಕಾಲ	:	ಕ್ರಿ.ಶ.೧೫-೧೬ನೆಯ ಶತಮಾನ
ನಿರ್ಮಾಣ ಸಾಮಗ್ರಿ	:	ಗ್ರಾನೈಟ್ ಶಿಲೆ, ಗಾರೆ

ಕೆಸುವಿನ ಕೆರೆ ಗ್ರಾಮ ಐತಿಹಾಸಿಕವಾಗಿದ್ದು ಅಲ್ಲಿ ಪ್ರಾಚೀನ ಕಾಲದ ಈಶ್ವರ ದೇವಾಲಯವಿದೆ. ದೇವಾಲಯವು ಉಪನಗಳ ಪೀಠಗಳಿಂದ ರಚಿತಗೊಂಡಿದೆ. ಜಗತಿಯು ಎರಡು ಅಡಿ ಎತ್ತರವಾಗಿದ್ದು, ಇದರ ಮೇಲೆ ದೇವಾಲಯ ರಚನೆಗೊಂಡಿರುವುದು. ಮೂಲ ಗರ್ಭಗೃಹ ಮತ್ತು ತೆರೆದ ಮಂಟಪ ಒಳಗೊಂಡಿದ್ದು ವಿಶಾಲವಾಗಿದೆ. ಗರ್ಭಗೃಹದಲ್ಲಿ ಸುಮಾರು ಮೂರು ಅಡಿ ಎತ್ತರದ ಪೀಠದ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಆದರೆ ಮೂಲ ಶಿವಲಿಂಗವಿಲ್ಲದೆ ಇಂದು ನಂದಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಲಲಾಟ ಬಿಂಬದಲ್ಲಿ ಶಿವಲಿಂಗದ ಉಬ್ಬುಶಿಲ್ಪದ ಕೆತ್ತನೆ ಉತ್ತಮವಾಗಿದ್ದು, ಬಾಗಿಲುವಾಡವು ಸುಂದರವಾದ ಲತಾಬಳ್ಳಿ, ವಜ್ರಪಟ್ಟಿಕೆಗಳು ಪದ್ಮದಳಗಳ ಅಲಂಕಾರವನ್ನು ಕಾಣಬಹುದು. ಗರ್ಭಗೃಹದ ಪ್ರವೇಶದ್ವಾರದಲ್ಲಿ ಎರಡು ಕಡೆಯಲ್ಲಿಯೂ ಶೈವ ದ್ವಾರಪಾಲಕರು ನಿಂತಿರುವರು. ಇವರು ನಾಲ್ಕು ಕೈಗಳನ್ನು ಹೊಂದಿದ್ದು, ತ್ರಿಶೂಲ, ಡಮರುಗ, ಗದೆ ಹಾಗೂ ಅಭಯ ಹಸ್ತದಿಂದ ಕೂಡಿದೆ. ದೇವಾಲಯ ಏರಲು ಮೆಟ್ಟಿಲುಗಳಿದ್ದು ಎಡ ಮತ್ತು ಬಲಭಾಗದಲ್ಲಿ ಆನೆಯ ಸೊಂಡಿಲಿನಾಕಾರ ಭಕ್ತರನ್ನು ಸ್ವಾಗತಿಸುತ್ತಿದೆ.

ದೇವಾಲಯದ ತೆರೆದ ಮಂಟಪದಲ್ಲಿ ನಾಲ್ಕು ಸ್ವಾತಂತ್ರ ಕಂಬಗಳಿವೆ. ಇವುಗಳ ಜೊತೆಗೆ ಬಿತ್ತಿಗೆ ಹೊಂದಿಕೊಂಡಂತೆ ಎಂಟು ಅರ್ಧಗಂಭಗಳಿವೆ. ಇವುಗಳ ಲಕ್ಷಣಗಳನ್ನು ನೋಡಿದಾಗ ವಿಜಯನಗರ ಶೈಲಿಯ ಕಾಲದಲ್ಲಿ ನಿರ್ಮಿತಿಗೊಂಡಿರುವುದು ಎಂದು ಹೇಳಬಹುದು. ದೇವಾಲಯ ಒಟ್ಟು ನಲವತ್ತು ಅಡಿ ಉದ್ದವಾಗಿದ್ದು, ಮೂವತ್ತೇಳು ಅಡಿ ಅಗಲ ವಿಸ್ತೀರ್ಣತೆಯನ್ನು ಹೊಂದಿರುವುದು. ಇಲ್ಲಿಯ ಪ್ರತಿ ಕಂಬಗಳು ಆರು ಅಡಿ ಎತ್ತರವಾಗಿವೆ. ಇವುಗಳು ಚೌಕಾಕಾರ ಎಂಟು ಮುಖಗಳ ಲಕ್ಷಣಗಳನ್ನು ಹೊಂದಿದ್ದು, ಇವುಗಳ ಮೇಲೆ

ಬೋದಿಗೆ ಇದೆ. ಜೊತೆಗೆ ಹಲವಾರು ಪೌರಾಣಿಕ ಶೈವ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದ್ದು, ಪ್ರಾಚೀನ ಕಾಲದ ಧಾರ್ಮಿಕ ಕ್ಷೇತ್ರವಾಗಿ ಪರಿಣಮಿಸಿದೆ.

ದೇವಾಲಯದ ನವರಂಗ ಮಂಟಪದ ಸ್ತಂಭದಲ್ಲಿ ಗಣೇಶ, ವೀರಭದ್ರ, ಮಹಿಷಾಸುರ ಮರ್ಧಿನಿ, ಹಂಸ, ತಪಸ್ವಿ, ಋಷಿಮುನಿ, ಓಲಗ ಊದುತ್ತಿರುವ ಹಾಗೂ ತಬಲ ಬಾರಿಸುತ್ತಿರುವ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಶೈವಪಂಥಕ್ಕೆ ಸೇರಿದ ಶಿವಲಿಂಗ, ಆದಿಶೇಷ, ಶಿವಲಿಂಗಕ್ಕೆ ಭಕ್ತನು ಕ್ಷೀರಾಭಿಷೇಕ ಮಾಡುತ್ತಿರುವ ದೃಶ್ಯ ಹಾಗೂ ಹಸು ಶಿವಲಿಂಗಕ್ಕೆ ಕ್ಷೀರಾಭಿಷೇಕ ಮಾಡುತ್ತಿರುವ ಶಿಲ್ಪಗಳು ಕಂಬಗಳ ಸುತ್ತಲು ಮೂಡಿರುವುದು ದೇವಾಲಯದ ಸೌಂದರ್ಯವನ್ನು ಇಮ್ಮಡಿಗೊಳಿಸಿದಂತಾಗಿದೆ.

ಗರ್ಭಗೃಹದ ಮೇಲೆ ಭುವನೇಶ್ವರಿ ಇದೆ. ಇದು ಪುಷ್ಪದಳದ ಅಲಂಕಾರಣೆ ಹೊಂದಿದೆ. ಗರ್ಭಗೃಹದ ಮೇಲಿನ ಗೋಪುರವು ವಿಜಯನಗರ ಶೈಲಿಯ ಲಕ್ಷಣಗಳನ್ನು ಹೊಂದಿದ್ದು, ಗಾರೆ ಇಟ್ಟಿಗೆಯಿಂದ ನಿರ್ಮಿತಿಗೊಂಡಿದೆ. ಗೋಪುರವು ಚೌಕಾಕಾರ ಹೊಂದಿದ್ದು, ಮೇಲೇರಿದಂತೆ ಕಿರಿದಾಗುತ್ತಾ ಹೋಗಿದೆ. ಆದರೆ ಇಂದು ಗೋಪುರದಲ್ಲಿದ್ದ ವಿವಿಧ ಶಿಲ್ಪಗಳು ಹಾಗೂ ಅಲಂಕರಣೆಗಳು ಸಂಪೂರ್ಣವಾಗಿ ಅವನತಿ ಹೊಂದಿರುವವು. ಇದರಿಂದ ಗೋಪುರದ ಮೇಲಿದ್ದ ಕಳಸ ಕಾಣದಂತಾಗಿದೆ. ಆದರೆ ದೇವಾಲಯದ ಹೊರಭಾಗದ ಬಿತ್ತಿಯಲ್ಲಿ ಸರ್ಪ ಮತ್ತು ಆಮೆಯ ಉಬ್ಬುಶಿಲ್ಪಗಳನ್ನು ಬಿಟ್ಟರೆ ಯಾವುದೇ ರೀತಿಯ ಶಿಲ್ಪಗಳು ಕಂಡುಬರುವುದಿಲ್ಲ. ದೇವಾಲಯದ ಬಿತ್ತಿಯು ಸಂಪೂರ್ಣವಾಗಿ ಚಪ್ಪಡಿಗಲ್ಲಿನಿಂದ ರಚನೆಗೊಂಡಿರುವುದು. ಬಿತ್ತಿಯ ಒಳಭಾಗದಲ್ಲಿ ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಕಂಡುಬರುವುದಿಲ್ಲ. ಆದರೆ ದೇವಾಲಯದ ಎಡಭಾಗದ ಮೊದಲಿನ ಕಂಬದ ಹೊರಭಾಗದಲ್ಲಿ ಮಿಥುನ ಶಿಲ್ಪವಿರುವುದು.

ಸಾಮಾನ್ಯವಾಗಿ ದೇವಾಲಯದಲ್ಲಿ ಮಿಥುನ ಶಿಲ್ಪವಿರುವುದು. ಇಂತಹ ಶಿಲ್ಪವು ದೇವಾಲಯದ ಹೊರಭಾಗ ಅಥವಾ ಒಳಭಾಗದಲ್ಲಿ ಇರುವುದು ಸಾಮಾನ್ಯ. ಆದರೆ ಇಂತಹ ಶಿಲ್ಪಗಳ ಕೆತ್ತನೆ ಅಂದಿನ ಕಾಲದಲ್ಲಿ ಇದ್ದುದ್ದರ ರಚನೆಯ ಉದ್ದೇಶ ಕಂಡು ಬಂದಿಲ್ಲವಾದರೂ ಬುದ್ಧನು ಹೇಳಿದಂತೆ ಕಾಮವು ಪ್ರಾಪಂಚಿಕವಾದದ್ದು ಹಾಗೂ ಪ್ರತಿಪ್ರಾಣಿ ಯಲ್ಲಿಯೂ ಇದು ಸಾಮಾನ್ಯ ಎಂಬುದರ ವಿಷಯವನ್ನು ಜನರಿಗೆ ತಿಳಿಸಲು ರಚನೆ ಮಾಡುತ್ತಿದ್ದರೆಂದು ತ್ತಿಳಿಯಬಹುದು. ಒಟ್ಟಿನಲ್ಲಿ ಇದೊಂದು ದಾನ ಗ್ರಾಮವಾಗಿದ್ದು, ಬೆಟ್ಟದಮರದ ಮಲ್ಲಿಕಾರ್ಜುನ ದೇವರಿಗೆ[೨೦] ಎಲ್ಲ ತೆರಿಗೆಗಳಿಂದ ಮುಕ್ತಗೊಳಿಸಿ ದಾನ ನೀಡಿರುವುದಾಗಿದೆ.

೪. ವೀರಭದ್ರ ದೇವಾಲಯ

ಗ್ರಾಮ : ಬೆಟ್ಟದಪುರ

ಸ್ಥಳ ನಿರ್ದೇಶನ : ಸಂಕ್ರಾಂತಿ ಮಂಟಪದಿಂದ ಮುಂದೆ ಸಾಗಿದಂತೆ ಬಲಭಾಗ

ಅಭಿಮುಖ : ಪೂರ್ವ

ಕಾಲ : ಕ್ರಿ.ಶ. ೧೬ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಗ್ರಾನೈಟ್ ಶಿಲೆ, ಇಟ್ಟಿಗೆ

ವೀರಭದ್ರ ದೇವಾಲಯ ಬೆಟ್ಟದ ಮೇಲೆ ಶಿಖರದ ಸಮೀಪದಲ್ಲಿರುವುದು. ಮೆಟ್ಟಿಲುಗಳನ್ನು ಏರುತ್ತಾ ಹೋದಲ್ಲಿ ಬಲಭಾಗಕ್ಕೆ ಕಾಣುವುದು. ಇದು ಪೂರ್ವಾಭಿಮುಖವಾಗಿದ್ದು ಇದರ ಎದುರಿಗೆ ಸಿಡ್ಲುಮಲ್ಲಿಕಾರ್ಜುನ ದೇವಾಲಯವಿದೆ. ದ್ರಾವಿಡ ಶೈಲಿಯ ನಿರ್ಮಾಣ ಮತ್ತು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ದೇವಾಲಯ ಅದಿಷ್ಠಾನ ರಹಿತ ದೇವಾಲಯಗಳ ಭೂವಿನ್ಯಾಸದ ಸಮಾನಾಂತರದಲ್ಲಿ ಅಧಿಷ್ಠಾನ ಸಹಿತ ದೇವಾಲಯಗಳನ್ನೇ ಅನುಸರಿಸಿದೆ. ದೇವಾಲಯದ ಪ್ರದೇಶವನ್ನು ಕಾಡುಗಲ್ಲುಗಳನ್ನು ಉಪಯೋಗಿಸಿ ಸಮತಟ್ಟು ಪ್ರದೇಶದ ಮೇಲೆ ನಿರ್ಮಿಸಲಾಗಿದೆ. ಇದು ಏಕಕೂಟ ದೇವಾಲಯವಾಗಿದ್ದು ಗರ್ಭಗೃಹ, ಚಿಕ್ಕ ಅಂತರಾಳ, ನವರಂಗಗಳನ್ನು ಒಳಗೊಂಡಿದೆ. ಆದರೆ ವಾಸ್ತುಗ್ರಂಥಗಳಲ್ಲಿ ಹೇಳಿರುವಂತೆ ಲಕ್ಷಣಗಳನ್ನು ಹೊಂದಿರುವುದಿಲ್ಲ. ಬೃಹತ್ ಗಾತ್ರದ ಕಲ್ಲು ಚಪ್ಪಡಿಗಳಿಂದ ಗೋಡೆಯನ್ನು ನಿರ್ಮಿಸಿರುವರು. ಬಿತ್ತಿಯನ್ನು ಒಂದರ ಮೇಲೊಂದು ಚಪ್ಪಡಿ ಕಲ್ಲನ್ನು ಜೋಡಿಸಿರುವುದರ ಮೂಲಕ ನಿರ್ಮಿಸಲಾಗಿದೆ. ಕಲ್ಲುಗಳನ್ನು ಜೋಡಿಸಲು ಯಾವುದೇ ರೀತಿಯ ಗಾರೆಯನ್ನು ಉಪಯೋಗಿಸಿಲ್ಲ. ಚಾವಣಿಯನ್ನು ಮುಚ್ಚಲು ಕಲ್ಲುಚಪ್ಪಡಿ ಗಾರೆಯನ್ನು ಉಪಯೋಗಿಸಿದ್ದಾರೆ. ದೇವಾಲಯದ ಒಳಕ್ಕೆ ಬೆಳಕು ಬೀಳಲು ಜಾಲಂದ್ರವು ಇರುವುದು, ಆದರೂ ದೇವಾಲಯದ ಒಳಭಾಗವು ಕತ್ತಲೆಯಿಂದ ಕೂಡಿದೆ. ದೇವಾಲಯಕ್ಕೆ ಒಳಪ್ರವೇಶ ಮಾಡಿದ ವೇಳೆಯಲ್ಲಿ ಭಯದ ವಾತವರಣವಿದ್ದು ಗರ್ಭಗೃಹದಲ್ಲಿ ವೀರಭದ್ರನ ವಿಗ್ರಹವಿರುವುದು. ಗರ್ಭಗೃಹದ ಬಾಗಿಲುವಾಡ ಯಾವುದೇ ರೀತಿಯ ಶಿಲ್ಪಗಳಿಲ್ಲದೆ ಸರಳತೆಯಿಂದ ಕೂಡಿದೆ. ಬಾಗಿಲುವಾಡದ ಮೇಲೆ ಲಲಟಬಿಂಬದಲ್ಲಿ ಯಾವುದೇ ಕೆತ್ತನೆ ಇರುವುದಿಲ್ಲ. ಗರ್ಭಗೃಹದ ಮೇಲೆ ಗೋಪುರವಿದ್ದು ದ್ರಾವಿಡ ಶೈಲಿ ಹೊಂದಿದೆ. ಗರ್ಭಗೃಹ ನಂತರ ಅಂತರಾಳ ದ್ವಾರವೂ ಅತ್ಯಂತ ಸರಳತೆಯಿಂದ ಕೂಡಿದ್ದು ಮೂರು ಅಡಿ ಎತ್ತರದ ನಂದಿಮೂರ್ತಿ ಇರುವುದು. ಇದು ಅತ್ಯಂತ ಸುಂದರವಾಗಿದ್ದು ಕಪ್ಪುಶಿಲೆಯಿಂದ ನಿರ್ಮಿತಗೊಂಡಿದೆ. ಹಾರ, ಗಂಟೆ ಮತ್ತು ದಾರದಿಂದ ಕೂಡಿದ್ದು ಕೊರಳಿನ

ಸುತ್ತ ಅಲಂಕಾರವಿದೆ. ಈ ವಿಗ್ರಹವು ನೋಡುಗರನ್ನು ಹೆಚ್ಚು ಆಕರ್ಷಿಸುತ್ತದೆ ಮತ್ತು ಅಂತರಾಳವು ವಿಶಾಲವಾಗಿರುವುದಿಲ್ಲ.

ನವರಂಗ ಮಂಟಪವು ಗರ್ಭಗೃಹ ಮತ್ತು ಅಂತರಾಳ ಮಂಟಪಗಳೆರಡಕ್ಕಿಂತಲೂ ವಿಶಾಲವಾಗಿದೆ. ನವರಂಗದ ವೈಶಾಲಕ್ಕೆ ತಕ್ಕಂತೆ ಇದರ ಮಧ್ಯ, ಎಡ ಮತ್ತು ಬಲಭಾಗ ಒಳಗೊಂಡಂತೆ ಹದಿನಾಲ್ಕು ಸ್ತಂಭಗಳಿವೆ. ನವರಂಗವು ಭಿತ್ತಿಯನ್ನು ಒಳಗೊಂಡಂತೆ ಕಂಡುಬರುವುದಲ್ಲದೇ ಇದರಲ್ಲಿ ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಕಂಡುಬರದೆ ಸರಳತೆಯಿಂದ ಇರುವುದು. ನವರಂಗದ ನಂತರ ಪ್ರಾಂಗಣ ಅಥವಾ ಜಗುಲಿ ಕಂಡುಬಂದು ಪ್ರವೇಶದ್ವಾರವನ್ನು ಒಳಗೊಂಡಿದೆ. ದೇವಾಲಯದಲ್ಲಿ ಒಟ್ಟು ಇಪ್ಪತ್ತಾರು ಸ್ತಂಭಗಳು ಕಂಡುಬರುತ್ತವೆ. ಸ್ತಂಭಗಳು ಚೌಕಕಾರದ ಅಲಂಕಾರವನ್ನು ಒಳಗೊಂಡಿದ್ದು ಏಳು ಅಡಿ ಎತ್ತರವಿದ್ದು, ಯಾವುದೇ ರೀತಿಯ ಉಬ್ಬುಶಿಲ್ಪಗಳು ಕಂಡುಬರುವುದಿಲ್ಲ. ಪ್ರವೇಶದ್ವಾರದ ಲಲಾಟಬಿಂಬದಲ್ಲಿ ನಂದಿಯ ಶಿಲ್ಪವಿದೆ. ಗರ್ಭಗೃಹಕ್ಕೆ ನೇರವಾಗಿ ಸ್ತಂಭವಿದ್ದು ಇದರಲ್ಲಿ ನಂದಿಯ ಶಿಲ್ಪವಿದೆ. ಈ ಸ್ತಂಭದಲ್ಲಿ ಭಕ್ತನು ನಮಿಸುತ್ತಿರುವ ಶಿಲ್ಪವಿದೆ. ದೇವಾಲಯದ ಎಡಭಾಗದಲ್ಲಿ ಒಂದು ಮಂಟಪವಿದೆ ಮತ್ತು ಬಲಭಾಗದಲ್ಲಿ ಹಲವು ಸ್ತಂಭಗಳುಳ್ಳ ಅವಶೇಷಗಳು ಕಂಡುಬರುತ್ತವೆ. ಇದರಿಂದ ದೇವಾಲಯದ ನಿರ್ಮಾಣ ಕಾರ್ಯವು ಪೂರ್ಣಗೊಂಡಿಲ್ಲವೆಂದು ಹೇಳಬಹುದು. ಈ ದೇವಾಲಯಗಳಲ್ಲಿ ಬಳಸಿರುವ ಸ್ತಂಭಗಳು ಬಹುತೇಕ ಚೌಕಕಾರ ಹೊಂದಿದ್ದು ಅವುಗಳ ಮೇಲೆ ಯಾವುದೇ ರೀತಿಯ ಅಲಂಕಾರವಾಗಲಿ, ಕೆತ್ತನೆಯಾಗಲಿ ಕಂಡುಬರುವುದಿಲ್ಲ. ಹೊರಗೋಡೆಯಿಂದ ಹಾದುಬಂದಿರುವ ತೊಲೆಯ ಬಾರ ಹೋರುವುದೇ ಸ್ತಂಭಗಳ ಏಕೈಕ ಉದ್ದೇಶ. ಕಂಬಗಳ ಕೆಳಗೆ ಪೀಠವಿರುವುದಿಲ್ಲ. ದೇವಾಲಯ ಹದಿನಾರನೆಯ ಶತಮಾನದ ಕಾಲದಲ್ಲಿ ನಿರ್ಮಾಣಗೊಂಡಿದ್ದು ಇಂದು ಅವನತಿಯತ್ತ ಸಾಗುತ್ತಿದೆ.

೫. ಪಾಳುಬಿದ್ದ ಶೈವ ದೇವಾಲಯ

ಗ್ರಾಮ	:	ಬೆಟ್ಟದಪುರ
ಸ್ಥಳ ನಿರ್ದೇಶನ	:	ಬೆಟ್ಟದಪುರ–ಪಿರಿಯಾಪಟ್ಟಣ ರಸ್ತೆಯ ಎಡಭಾಗ
ಅಭಿಮುಖ	:	ಪೂರ್ವ
ಕಾಲ	:	ಕ್ರಿ.ಶ. ೧೬ನೆಯ ಶತಮಾನ
ನಿರ್ಮಾಣ ಸಾಮಗ್ರಿ	:	ಗ್ರಾನೈಟ್‌ಶಿಲೆ, ಗಾರೆ, ಇಟ್ಟಿಗೆ

ಬೆಟ್ಟದಪುರದ ಬೆಟ್ಟದ ಪಶ್ಚಿಮ ಭಾಗದ ತಳಭಾಗದಲ್ಲಿ ಶೈವ ದೇವಾಲಯವಿದ್ದು ಕಲ್ಯಾಣಿ ಕೊಳದ ಎಡಭಾಗಕ್ಕಿದೆ. ಇದರ ತಲವಿನ್ಯಾಸ ಆಯತಕಾರದಲ್ಲಿದ್ದು ಗರ್ಭಗೃಹ ಮತ್ತು

ಅಂತರಾಳವನ್ನು ಹೊಂದಿದ್ದು, ಅಧಿಷ್ಠಾನದ ಮೇಲ್ಭಾಗದಲ್ಲಿ ನಿರ್ಮಾಣಗೊಂಡಿದೆ. ಆದರೆ ಇಂದು ಅಧಿಷ್ಠಾನವು ಮಣ್ಣಿನಿಂದ ಮುಚ್ಚಲ್ಪಟ್ಟಿದೆ. ಗೋಡೆ ಇಟ್ಟಿಗೆಯಿಂದ ಕಟ್ಟಲ್ಪಟ್ಟಿದೆ ಮತ್ತು ದೇವಾಲಯದ ಮೇಲ್ಚಾವಣಿಯನ್ನು ಚಪ್ಪಡಿ ಗಾರೆಯನ್ನು ಉಪಯೋಗಿಸುವುದರ ಮೂಲಕ ನಿರ್ಮಾಣಗೊಂಡಿದೆ. ದೇವಾಲಯದ ಮೇಲೆ ನಾಲ್ಕು ದಿಕ್ಕಿಗೂ ಜೋಡಿ ನಂದಿ ವಿಗ್ರಹಗಳು ಇರುವುದು. ಗರ್ಭಗೃಹದ ಮೇಲೆ ಭುವನೇಶ್ವರಿ ಮತ್ತು ಯಾವುದೇ ರೀತಿಯ ಗೋಪುರವಿರುವುದಿಲ್ಲ. ಗರ್ಭಗೃಹ ಅಂತರಾಳದ ನಡುವೇ ಕಲ್ಲು ಚಪ್ಪಡಿಗಳ ಬಿತ್ತಿ ಇರುವುದು. ಈ ಬಿತ್ತಿಯಲ್ಲಿ ಯಾವುದೇ ಶಿಲ್ಪಗಳಿಲ್ಲದೆ ಸರಳ ರೀತಿಯಲ್ಲಿರುವುದು. ಗರ್ಭಗೃಹದ ಬಾಗಿಲುವಾಡವು ಅಲಂಕೃತದಿಂದ ಕೂಡಿದ್ದು ಸುಂದರವಾಗಿ ಕಾಣುತ್ತದೆ. ಲಾಲಟಬಿಂಬದ ಮೇಲೆ ಶಿವಲಿಂಗ ಮತ್ತು ಹಸುವಿನ ಉಬ್ಬುಶಿಲ್ಪವಿರುವುದು. ಗರ್ಭಗೃಹದ ಪ್ರವೇಶದ್ವಾರದಲ್ಲಿ ಎಡ ಮತ್ತು ಬಲಭಾಗದಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಎಡಭಾಗದ ದ್ವಾರಪಾಲಕನಿಗೆ ನಾಲ್ಕು ಕೈಗಳಿದ್ದು ಬಲಗೈಯಲ್ಲಿ ಗದೆಯನ್ನು ಕೆಳಕ್ಕೆ ಹಿಡಿದು ನಿಂತಿರುವುದು ಮತ್ತೊಂದು ಕೈಯಲ್ಲಿ ತ್ರಿಶೂಲವಿರುವುದು. ಎಡಗೈಯಲ್ಲಿ ತ್ರಿಶೂಲ ಮತ್ತು ತೋರು ಹಸ್ತವಿದೆ. ಈ ದ್ವಾರಪಾಲಕನು ಪೀಠದ ಮೇಲೆ ನಿಂತಿದ್ದು ಆಭರಣಗಳಿಂದ ಅಲಂಕೃತವಾಗಿದ್ದು ತಲೆಯಲ್ಲಿ ಕಿರೀಟವಿದೆ. ಬಲಭಾಗದ ದ್ವಾರಪಾಲಕನಿಗೆ ನಾಲ್ಕು ಕೈಗಳಿದ್ದು ಬಲಗೈಯಲ್ಲಿ ತ್ರಿಶೂಲ ಮತ್ತು ಅಭಯ ಹಸ್ತವಿರುವುದು. ಎಡಗೈಯಲ್ಲಿ ಗದೆ ಮತ್ತು ತ್ರಿಶೂಲವನ್ನು ಹೊಂದಿದ್ದು ಪೀಠದ ಮೇಲೆ ನಿಂತಿರುವನು. ಅಲ್ಲದೇ ಎದೆ ಮತ್ತು ಸೊಂಟದಲ್ಲಿ ಹಲವು ಆಭರಣಗಳು ಇರುವುದಲ್ಲದೆ ತಲೆಯಲ್ಲಿ ಕಿರೀಟವಿದೆ. ಇದರ ಮುಂದಿನ ಭಾಗವೆ ಪ್ರಾಂಗಣ ಅಥವಾ ಜಗುಲಿ. ಈ ಜಗುಲಿಯ ಮೇಲ್ಭಾಗದಲ್ಲಿ ನಾಲ್ಕು ಸ್ತಂಭಗಳು ಪೀಠದ ಮೇಲೆ ನಿಂತಿದ್ದು ದೇವಾಲಯದ ತೊಲೆಗಂಬವನ್ನು ಹೊತ್ತು ನಿಂತಿವೆ. ಸ್ತಂಭಗಳು ತಳಭಾಗದಲ್ಲಿ ಚೌಕಕಾರದಲ್ಲಿದ್ದು ಮೇಲ್ಭಾಗಕ್ಕೆ ಹೋದಂತೆ ಕಿರಿದು. ಸ್ಥಂಬದ ಮೇಲ್ಭಾಗದಲ್ಲಿ ಸರಳ ರೀತಿಯ ಬೋದಿಗೆ ಹೊಂದಿದೆ. ಜಗುಲಿಯ ಮೇಲೆ ನಿಂತಿರುವ ಸ್ತಂಭಗಳಲ್ಲಿ ವೈದಿಕಧರ್ಮಕ್ಕೆ ಸಂಬಂಧಪಟ್ಟಂತೆ ವಿವಿಧ ರೀತಿಯ ಶಿಲ್ಪಗಳ ಕೆತ್ತನೆಯಿರುವುದು. ಕಂಬಗಳ ಮೇಲ್ಭಾಗದಲ್ಲಿ ಉದ್ದನೆಯ ನೀಲುವಂಗಿ, ನೃತ್ಯಮಾಡುತ್ತಿರುವ ಕನ್ಯೆ, ದೇವಾಲಯದ ಎಡಭಾಗದ ಹೊರ ಸ್ತಂಭದ ಮೇಲೆ ಹಂಸ, ಆದಿಶೇಷನ ಶಿಲ್ಪವಿರುವುದು.

ಸ್ತಂಭಗಳ ಪೀಠವು ವಿವಿಧ ರೀತಿಯ ಅಲಂಕಾರ ಒಳಗೊಂಡಿದ್ದು ಕಂಬದಲ್ಲಿ ಬಾಣ ಬಿಡುತ್ತಿರುವ, ಮಹಿಳೆ ಭಕ್ತಿಯಿಂದ ನಮಿಸುತ್ತಿರುವ ಶಿಲ್ಪ, ವಿನಾಯಕ, ಹನುಮಂತನ ಶಿಲ್ಪ, ನೃತ್ಯ ಮಾಡುತ್ತಿರುವ ಕನ್ಯೆಯಶಿಲ್ಪ, ಜಿಂಕೆಯ ಶಿಲ್ಪಗಳಿರುವುದಲ್ಲದೆ ಮುಂದೆ ನಾಲ್ಕು ಸ್ತಂಭಗಳಿದ್ದು,

ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಇರುವುದಿಲ್ಲ. ಪ್ರವೇಶದ್ವಾರದಲ್ಲಿ ಮೂರು ಮೆಟ್ಟಿಲುಗಳಿದ್ದು ಆನೆಯ ಸೊಂಡಿಲಾಕಾರದಲ್ಲಿದೆ. ಕಂಬಗಳು ಯಾವುದರ ಹಿಡಿತವಿಲ್ಲದೆ ಸ್ವಾತಂತ್ರ್ಯವಾಗಿವೆ. ಆದರೆ ದೇವಾಲಯದಲ್ಲಿ ಯಾವುದೇ ವಿಗ್ರಹಗಳು ಇರುವುದಿಲ್ಲ. ಇಂದು ದೇವಾಲಯದ ಮೇಲೆ ಗಿಡ-ಬಳ್ಳಿಗಳು ಬೆಳದಿದ್ದು ಅವನತಿಯ ಹಾದಿಯಲ್ಲಿದೆ.

೬ ಬಸವೇಶ್ವರ ದೇವಾಲಯ

ಗ್ರಾಮ	:	ಬಾರ್ಸೆ
ಸ್ಥಳ ನಿರ್ದೇಶನ	:	ಗ್ರಾಮದ ಮಧ್ಯೆ
ಅಭಿಮುಖ	:	ಉತ್ತರ
ಕಾಲ	:	ಕ್ರಿ.ಶ.೧೬ನೆಯ ಶತಮಾನ
ನಿರ್ಮಾಣ ಸಾಮಗ್ರಿ	:	ಶಿಲೆ

ಹಿಂದಿನ ಬಾರಸಿ ಗ್ರಾಮವನ್ನು ಇಂದು ಬಾರ್ಸೆ ಗ್ರಾಮವೆಂದು ಕರೆಯಲಾಗುತ್ತಿದೆ. ಇದೊಂದು ದಾನ ಗ್ರಾಮ. ಕ್ರಿ.ಶ. ೧೬ನೆಯ ಶತಮಾನದಲ್ಲಿ ಮಲ್ಲಿಕಾರ್ಜುನ ದೇವರ ಭಕ್ತರಾದ ಮಲ್ಲಿಕಾರ್ಜುನ ನಾಯಕರ ಪುತ್ರ ಗೋವಿಂದರಾಜು ಹಾಗೂ ನಂಜಯ್ಯದೇವನು ಬಾರಸಿ ಗ್ರಾಮವನ್ನು[೨೧] ದಾನ ನೀಡಿರುವರು. ದೇವಾಲಯವು ಬಾರ್ಸೆ ಗ್ರಾಮದಲ್ಲಿದ್ದು ಮಲ್ಲಿಕಾರ್ಜುನ ಬೆಟ್ಟದ ತಳಭಾಗದಲ್ಲಿರುವ ದಕ್ಷಿಣ ದಿಕ್ಕಿನಲ್ಲಿದೆ. ಇದು ಶೈವ ದೇವಾಲಯವಾಗಿದ್ದು, ಉತ್ತರಾಭಿಮುಖವಾಗಿದೆ. ದೇವಾಲಯವು ಉಪಾನ, ಕಂಠ, ಉಪಪೀಠ ಮತ್ತು ವೇದಿಕೆಯ ಮೇಲೆ ನಿರ್ಮಾಣಗೊಂಡಿದೆ. ತಲವಿನ್ಯಾಸವು ಚೌಕಕಾರದ ಗರ್ಭಗೃಹ, ವೇದಿಕೆ ಅಥವಾ ಜಗುಲಿಯನ್ನು ಒಳಗೊಂಡು ಸಂಪೂರ್ಣ ಕೆಂಪು ಬಣ್ಣದ ಗ್ರಾನೈಟ್ ಶಿಲೆಯಿಂದ ನಿರ್ಮಿಸಿರುವುದು. ದೇವಾಲಯದ ಬಿತ್ತಿಯು ಕಲ್ಲುಚಪ್ಪಡಿಗಳಿಂದ ಒಂದರ ಮೇಲೆ ಒಂದನ್ನು ಜೋಡಿಸುವುದರ ಮೂಲಕ ರಚಿಸಲಾಗಿದೆ. ಒಳಬಿತ್ತಿಯಲ್ಲಿ ಯಾವುದೇ ಶಿಲ್ಪಗಳ ಕೆತ್ತನೆ ಕಂಡುಬರುವುದಿಲ್ಲ ಮತ್ತು ದೇವಾಲಯದ ಗರ್ಭಗೃಹ ಚಿಕ್ಕದಾಗಿದ್ದು ಮೂರು ಅಡಿ ಎತ್ತರದ ಶಿವಲಿಂಗ ಆಕಾರದ ಪೀಠಗಳ ಮೇಲೆ ಬಸವೇಶ್ವರನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಮೂಲವಿಗ್ರಹವು ಸ್ಥಳಾಂತರಗೊಂಡಿದ್ದು, ಗರ್ಭಗುಡಿಯ ಮೇಲೆ ತ್ರಿಭುಜಾಕಾರದ ಭುವನೇಶ್ವಯಿರುವುದು ಮತ್ತು ಅದರ ಮೇಲೆ ದ್ರಾವಿಡ ಶೈಲಿಯ ಗುಮ್ಮಟಾಕಾರದ ಗೋಪುರವಿದೆ. ಬಿತ್ತಿಯ ಹೊರಭಾಗದ ಬಲಭಾಗದಲ್ಲಿ ಸರ್ಪ. ಎರಡು ಮತ್ಸ್ಯಗಳ ಚಿತ್ರಣ, ಗರ್ಭಗೃಹದ ಹಿಂದಿನ ಬಿತ್ತಿಯಲ್ಲಿ ಚಿಕ್ಕ ಆಮೆ, ವರಹ, ಹುಲಿಯ ಉಬ್ಬುಶಿಲ್ಪ ಮತ್ತು ಇದರ ಮೇಲೆ ಸರ್ಪ, ಆನೆಯ ಶಿಲ್ಪಗಳ ಕೆತ್ತನೆಯಿರುವುದು. ದೇವಾಲಯದ ಪಶ್ಚಿಮಕ್ಕೆ ಹೊರ ಬಿತ್ತಿಯಲ್ಲಿ ದಂಪತಿಗಳಿಬ್ಬರು ಲೈಂಗಿಕ ಕ್ರೀಡೆಯಲ್ಲಿ ತೊಡಗಿರುವ ಉಬ್ಬುಶಿಲ್ಪವಿದೆ.

ಗರ್ಭಗೃಹದ ಪ್ರವೇಶದ್ವಾರದಲ್ಲಿ ಬಾಗಿಲುವಾಡ ಸುಂದರವಾಗಿದ್ದು ಲಲಾಟಬಿಂಬದಲ್ಲಿ ಶಿವಲಿಂಗವಿದೆ. ಗರ್ಭಗೃಹದ ಪ್ರವೇಶದ್ವಾರದಲ್ಲಿ ನಾಲ್ಕು ಕೈಗಳುಳ್ಳ ಎರಡು ಕಡೆಯು ದ್ವಾರಪಾಲಕರು ನಿಂತಿದ್ದಾರೆ. ಬಲಭಾಗದ ದ್ವಾರಪಾಲಕನು ನಾಲ್ಕು ಕೈಗಳನ್ನು ಹೊಂದಿದ್ದು ಬಲಗೈಯಲ್ಲಿ ತ್ರಿಶೂಲ, ಮತ್ತೊಂದರಲ್ಲಿ ಆಭಯ ಹಸ್ತ, ಎಡಗೈಯಲ್ಲಿ ಗದೆ, ಡಮರುಗವಿರುವುದು. ಗರ್ಭಗೃಹದ ಎಡಭಾಗದ ಶಿಲ್ಪದಲ್ಲಿ ಬಲಗೈಯಲ್ಲಿ ತ್ರಿಶೂಲ, ಮತ್ತೊಂದರಲ್ಲಿ ಗದೆ, ಎಡಗೈಯಲ್ಲಿ ಡಮರುಗ ಮತ್ತೊಂದರಲ್ಲಿ ಅಭಯ ಹಸ್ತವಿರುವುದು. ಈ ಎರಡು ಶಿಲ್ಪಗಳು ಪೀಠದ ಮೇಲೆ ನಿಂತಿದ್ದು ನಲವತ್ತು ಇಂಚುಗಳಿರುವುದು.

ದೇವಾಲಯದ ಜಗುಲಿಯ ಮೇಲೆ ಮೂಲ ನಾಲ್ಕು ಸ್ತಂಭಗಳಿದ್ದು, ಐದನೆಯ ಸ್ಥಂಬವನ್ನು ಮೈಸೂರು ಒಡೆಯರ ಆಳ್ವಿಕೆಯ ಕಾಲದಲ್ಲಿ ಮೇಲ್ಛಾವಣಿಯ ಭದ್ರತೆಯ ದೃಷ್ಟಿಯಿಂದ ನಿಲ್ಲಿಸಲಾಗಿದೆ. ಎಲ್ಲ ಸ್ತಂಭಗಳ ಮೇಲೆ ಶೈವ ಧರ್ಮಕ್ಕೆ ಸಂಬಂಧಿಸಿದಂತೆ ಉಬ್ಬುಶಿಲ್ಪಗಳ ಕೆತ್ತನೆಯನ್ನು ಕೆತ್ತಲಾಗಿದೆ. ಇಲ್ಲಿಯ ಪ್ರತಿಯೊಂದು ಸ್ತಂಭವು ಅರವತ್ತಾರು ಇಂಚು ಎತ್ತರ ಮತ್ತು ಅರವತ್ತಾರು ಇಂಚು ದಪ್ಪವಿರುವುದು. ಗರ್ಭಗುಡಿಯ ಬಲಭಾಗದ ಮೊದಲನೆಯ ಕಂಬದಲ್ಲಿ ವ್ಯಕ್ತಿಯೊಬ್ಬ ಓಲಗ ಊದುತ್ತಿರುವ, ಮಹಿಳೆ ಡಮರುಗ ಬಾರಿಸುತ್ತಿರುವ ಉಬ್ಬುಶಿಲ್ಪವಿದೆ. ನಂತರ ಭಕ್ತ ಬಾಣವನ್ನು ಹುಡುತ್ತಿರುವ, ಇದರ ಮೇಲೆ ಮುನಿಯು ತಪಸ್ಸು ಮಾಡುತ್ತಿರುವ, ವ್ಯಕ್ತಿಯಬ್ಬನ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಭೂಮಿಯನ್ನು ಹಿಡಿದು ಶಕ್ತಿ ಪ್ರದರ್ಶಿಸುತ್ತಿರುವ ಉಬ್ಬುಶಿಲ್ಪವಿರುವುದು. ನಂತರದ ಬದಿಯಲ್ಲಿ ಮಹಿಳೆಯೊಬ್ಬಳು ನಮಿಸುತ್ತಿರುವ, ಭಕ್ತನೊಬ್ಬ ತನ್ನೆರಡು ಕಾಲುಗಳನ್ನು ಸರ್ಪದ ಬಾಲದ ಮೇಲೆ ಎಡೆಗಾಲನ್ನು ಹೆಡೆಯ ಮೇಲೆ ಬಲಗಾಲನ್ನು ಇರಿಸಿದ್ದು, ಬಲಗೈಯಲ್ಲಿ ಗುಂಡನ್ನು ಹಿಡಿದಿರುವುದು. ಮಹಿಳೆಯು ಡಮರುಗವನ್ನು ಭಾರಿಸುತ್ತಿರುವ ಶಿಲ್ಪವಿದೆ. ಮಹಿಳೆಯೊಬ್ಬಳು ಕೈಮುಗಿದು ನಿಂತಿರುವ ದೃಶ್ಯ, ಮಹಿಳೆ ಶಂಕವನ್ನು ಊದುತ್ತಿರುವ, ವೀಣೆಯನ್ನು ಕುಳಿತು ಭಾರಿಸುತ್ತಿರುವ ದೃಶ್ಯವಿದೆ.

ಬಲಭಾಗದ ಎರಡನೆಯ ಸ್ತಂಭದಲ್ಲಿ ಭಕ್ತೆಯೊಬ್ಬಳು ಕೈಮುಗಿದು ನಿಂತಿರುವ ದೃಶ್ಯ, ಉದ್ದನೆಯ ನಿಲುವಂಗಿಯನ್ನು ಧರಿಸಿರುವ ಪರ್ಶಿಯಾದ ವ್ಯಕ್ತಿಯೊಬ್ಬ ನಾಲ್ಕು ಕೈಗಳನ್ನು ಹೊಂದಿರುವನು. ಉದ್ದನೆಯ ದಾಡಿಯನ್ನು ಬಿಟ್ಟಿರುವ, ತ್ರಿಶೂಲ, ಹಸ್ತಚಾಚಿರುವ, ಡಮರುಗವನ್ನು ಎಡಗೈಯಲ್ಲಿ ಹಿಡಿದು ಕುಳಿತಿರುವ ದೃಶ್ಯವಿದೆ. ಇದರ ಮೇಲೆ ಶಿವಲಿಂಗಕ್ಕೆ ಹಸುವು ಹಾಲು ಸುರಿಸುತ್ತಿರುವ ಶಿಲ್ಪವಿದೆ. ಕನ್ಯೆಯು ನೃತ್ಯ ಮಾಡುತ್ತಿರುವ, ವ್ಯಕ್ತಿಯೊಬ್ಬ ಮಗಳನ್ನು ತೊಡೆಯ ಮೇಲೆ ಕೂರಿಸಿಕೊಂಡಿರುವ ಶಿಲ್ಪವಿದ್ದು, ವಿವಿಧ ರೀತಿಯ ವೈದಿಕ ಧರ್ಮಗಳಿಗೆ ಅನುಗುಣವಾಗಿ

ವಿಭಿನ್ನ ಶಿಲ್ಪಗಳ ಕೆತ್ತನೆ ಇರುವುದಲ್ಲದೆ ಮಿಥುನ ಶಿಲ್ಪಗಳ ಕೆತ್ತನೆಯು ಕಂಬಗಳ ಮೇಲಿರುವುದು. ದೇವಾಲಯದ ನಾಲ್ಕು ದಿಕ್ಕಿಗೂ ಜೋಡಿ ಬಸವನ ವಿಗ್ರಹಗಳಿದ್ದು ಪ್ರವೇಶ ದ್ವಾರದ ಮೇಲ್ಭಾಗದಲ್ಲಿ ಮೂರು ಗೂಡುಗಳು ಇವೆ. ಪ್ರವೇಶದ್ವಾರದ ಮೆಟ್ಟಿಲುಗಳಲ್ಲಿ ಎರಡು ಆನೆಗಳಿದ್ದು ದೇವಾಲಯ ವನ್ನು ಹೊತ್ತು ನಿಂತಿರುವಂತೆ ಕಾಣುವುದು ಮತ್ತು ಜಗುಲಿಯಲ್ಲಿ ಮರದಿಂದ ಮಾಡಲ್ಪಟ್ಟ ಪ್ರಾಚೀನ ಶಿಥಿಲವಾದ ರಥವಿದೆ. ಇತರೆ ಎಲ್ಲಾ ಸ್ಥಳೀಯ ದೇವಾಲಯಗಳಿಗಿಂತ ಅತ್ಯಧಿಕ ಸಂಖ್ಯೆಯ ಶೈವ ಉಬ್ಬುಶಿಲ್ಪಗಳ ಕೆತ್ತನೆಯಿದ್ದು ಶಿಥಿಲವಾಗುತ್ತಿದೆ. ಗರ್ಭಗುಡಿಯ ಮುಂದೆ ಇಪ್ಪತ್ತು ಅಡಿ ಎತ್ತರದ ಗರುಡ ಸ್ತಂಭವಿದ್ದು ವಿಜಯನಗರ ಶೈಲಿಯ ಲಕ್ಷಣಗಳನ್ನು ಹೊಂದಿದೆ.

೭. ಈಶ್ವರ ದೇವಾಲಯ

ಗ್ರಾಮ	: ದೊಡ್ಡನೇರಳೆ
ಸ್ಥಳ ನಿರ್ದೇಶನ	: ಚಿಕ್ಕನೇರಳೆ-ಬೆಟ್ಟದಪುರ ರಸ್ತೆಯ ಎಡಭಾಗ
ಅಭಿಮುಖ	: ಉತ್ತರ
ಕಾಲ	: ಕ್ರಿ.ಶ. ೧೬ನೆಯ ಶತಮಾನ
ನಿರ್ಮಾಣ ಸಾಮಗ್ರಿ	: ಗ್ರಾನೈಟ್‌ಶಿಲೆ, ಇಟ್ಟಿಗೆ, ಗಾರೆ

ಬೆಟ್ಟದಪುರದ ಪಶ್ಚಿಮ ದಿಕ್ಕಿಗೆ ಆರು ಕಿ.ಮೀ. ದೂರದಲ್ಲಿರುವ ಗ್ರಾಮ ದೊಡ್ಡನೇರ್ಲೆ. ಇದು ಶೈವ ದೇವಾಲಯವಾಗಿದ್ದು ಉತ್ತಾರಾಭಿಮುಖ ಮತ್ತು ಏಕಕೂಟ ದೇವಾಲಯವಾಗಿದೆ. ತಳವಿನ್ಯಾಸವು ಉಪಾನ, ಕಂಠ, ಉಪಪೀಠ ಮತ್ತು ವೇದಿಕೆಯ ಮೇಲೆ ನಿರ್ಮಾಣಗೊಂಡಿದೆ. ಗರ್ಭಗೃಹ, ವೇದಿಕೆಯನ್ನು ಒಳಗೊಂಡಿದ್ದು ಬಿತ್ತಿಯು ಇಟ್ಟಿಗೆಗಳಿಂದ ಕಟ್ಟಲ್ಪಟ್ಟಿದೆ. ಗರ್ಭಗೃಹದಲ್ಲಿ ಇಂದು ಯಾವುದೇ ಮೂಲವಿಗ್ರಹಗಳಿಲ್ಲದೆ ಶಿವಲಿಂಗಾಕಾರದ ಅವಶೇಷಗಳಿವೆ. ಗರ್ಭಗೃಹದ ಮೇಲೆ ಪುಷ್ಪಾಲಂಕಾರದ ಭುವನೇಶ್ವರಿಯಿದ್ದು ದ್ರಾವಿಡ ಶೈಲಿಯ ಗೋಪುರವಿದೆ. ಈ ಗೋಪುರದಲ್ಲಿ ವೈದಿಕ ಧರ್ಮಕ್ಕೆ ಅನುಗುಣವಾಗಿ ವಿವಿಧ ರೀತಿಯ ಇಟ್ಟಿಗೆಗಳಿಂದ ಮಾಡಲ್ಪಟ್ಟ ಅವಶೇಷಗಳ ಮೂರ್ತಿಗಳಿವೆ. ಗರ್ಭಗೃಹದ ಪ್ರವೇಶದ್ವಾರದಲ್ಲಿ ನಾಲ್ಕು ಕೈಗಳುಳ್ಳ ಶೈವ ದ್ವಾರಪಾಲಕರಿದ್ದಾರೆ. ಬಾಗಿಲುವಾಡವು ಸರಳವಾಗಿದ್ದು ಲಲಾಟಬಿಂಬದಲ್ಲಿ ಶಿವನ ಲಿಂಗವಿದೆ. ಇದರ ಮುಂದಿನ ಭಾಗ ಜಗತಿಯಾಗಿದ್ದು ಬಿತ್ತಿಗೆ ಸೇರಲ್ಪಟ್ಟ ನಾಲ್ಕು ಸ್ತಂಭ ಗಳು ಇವೆ. ಸ್ತಂಭಗಳು ಚೌಕಕಾರವಾಗಿದ್ದು ಸರಳವಾದ ಬೋದಿಗೆ ಮತ್ತು ಮೇಲ್ಛಾವಣೆಯನ್ನು ಹೊತ್ತು ನಿಂತಿವೆ. ದೇವಾಲಯದ ಮೇಲ್ಭಾಗದಲ್ಲಿ ನಾಲ್ಕು ದಿಕ್ಕುಗಳಿಗೂ ಅನುಗುಣವಾಗಿ ಗಾರೆಯಿಂದ ನಿರ್ಮಿಸಲ್ಪಟ್ಟ ಎಂಟು ಜೋಡಿ ನಂದಿವಿಗ್ರಹಗಳು ಇರುವುದು. ದೇವಾಲಯದ ಮೆಟ್ಟಿಲುಗಳು

ಗಜಾಕಾರದ ವಿಗ್ರಹಗಳನ್ನು ಹೊಂದಿದ್ದು, ಗರ್ಭಗೃಹಕ್ಕೆ ನೇರವಾಗಿ ಮೂರುವರೆ ಅಡಿ ಪೀಠದ ಮೇಲೆ ಹದಿನೈದು ಅಡಿ ಎತ್ತರದ ಸ್ತಂಭವಿದೆ. ಈ ಸ್ತಂಭದಲ್ಲಿ ನೃತ್ಯಮಾಡುತ್ತಿರುವ, ಡಮರುಗವನ್ನು ಬಾರಿಸುತ್ತಿರುವ ಕನ್ಯೆಯ ಉಬ್ಬುಶಿಲ್ಪಗಳಲ್ಲದೆ ವೀರಭದ್ರನ ಅಸ್ಪಷ್ಟ ಉಬ್ಬುಶಿಲ್ಪವಿದೆ. ಜಗತಿಯ ಮೇಲಿರುವ ಕಂಬಗಳಲ್ಲಿ ವೃಷಭ, ಉಗ್ರನರಸಿಂಹ, ಶಿವಲಿಂಗ, ನಂದಿ ಮತ್ತು ಗಣೇಶನ ಉಬ್ಬುಶಿಲ್ಪಗಳಿದ್ದು ದೇವಾಲಯ ಇಂದು ಅತ್ಯಂತ ಶಿಥಿಲ ವ್ಯವಸ್ಥೆಯಲ್ಲಿದೆ ಹಾಗೂ ವಿಜಯನಗರ ಕಾಲಕ್ಕೆ ಸೇರಲ್ಪಟ್ಟಿದ್ದು ಒಟ್ಟು ಹತ್ತು ಸ್ತಂಭಗಳನ್ನು ಹೊಂದಿದೆ.

೮. ಈಶ್ವರ ದೇವಾಲಯ

ಗ್ರಾಮ : ಮರದೂರು

ಸ್ಥಳ ನಿರ್ದೇಶನ : ಗ್ರಾಮದಿಂದ ಒಂದು ಕಿ.ಮೀ.ದೂರದಲ್ಲಿರುವ ಗದ್ದೆಯ ಮಧ್ಯೆ

ಅಭಿಮುಖ : ಪೂರ್ವ

ಕಾಲ : ಕ್ರಿ.ಶ.೧೬-೧೭ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಗ್ರಾನೈಟ್ ಶಿಲೆ, ಇಟ್ಟಿಗೆ

ತಾಲ್ಲೂಕಿನಲ್ಲಿರುವ ಶೈವ ದೇವಾಲಯಗಳಲ್ಲಿ ಮರದೂರು ಗ್ರಾಮದ ಈಶ್ವರ ದೇವಾಲಯ ಪ್ರಮುಖವಾಗಿದೆ. ಇದು ಏಕಕೂಟ ಗರ್ಭಗೃಹ ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ೨೭ ಇಂಚು ಎತ್ತರ ಮತ್ತು ೩೩ ಇಂಚು ಅಗಲ ಹೊಂದಿರುವುದು. ಶಿವಲಿಂಗ ಚಪ್ಪಟೆಯಾಕಾರದ ಪೀಠದ ಮೇಲಿದ್ದು ಕಪ್ಪು ಶಿಲೆಯಿಂದ ಕೂಡಿರುವುದು. ಇದರ ಮೇಲಿನ ಭಾಗ ಸರಳವಾಗಿದೆ. ಸುಖನಾಸಿ ಒಳಗೊಂಡಂತೆ ನವರಂಗಮಂಟಪದಲ್ಲಿ ಆರು ಸ್ತಂಭಗಳು ಇರುವವು. ಇಲ್ಲಿನ ಸ್ತಂಭಗಳು ಚೌಕಕಾರವಾಗಿದ್ದು ಮೂರು ಪಟ್ಟಿಕೆಗಳನ್ನು ಹೊಂದಿವೆ. ಸ್ತಂಭಗಳು ಪೀಠದ ಮೇಲೆ ನಿಂತಿದ್ದು, ಇದರ ಮೇಲ್ಭಾಗದಲ್ಲಿ ಚೌಕಕಾರದ ೪ ಇಂಚು ದಪ್ಪದ ಕಲ್ಲಿನ ಪಟ್ಟಿಕೆ ಇರುವುದು. ಇದರ ಮೇಲೆ ಬೋದಿಗೆಯಿದ್ದು ದೇವಾಲಯವನ್ನು ಹೊತ್ತು ನಿಂತಿರುವುದು. ಇಲ್ಲಿಯ ಪ್ರತಿಯೊಂದು ಕಂಬಗಳು ೬೫ ಇಂಚು ಉದ್ದ ಮತ್ತು ೪೬ ಇಂಚು ದಪ್ಪವಾಗಿದ್ದು ಒಟ್ಟು ಎಂಟು ಕಂಬಗಳು ಇರುವವು. ಆದರೂ ಎರಡು ಕಂಬಗಳು ಸಂಪೂರ್ಣವಾಗಿ ಸರಳತೆಯಿಂದ ಕೂಡಿರುವವು. ದೇವಾಲಯದ ಪ್ರವೇಶದ್ವಾರದಲ್ಲಿ ಬಾಗಿಲುವಾಡದ ಮೇಲೆ ಗಜಲಕ್ಷ್ಮಿಯ ಉಬ್ಬುಶಿಲ್ಪವಿದ್ದು ಎರಡು ಆನೆಗಳು ನಿಂತಿವೆ. ದೇವಾಲಯದ ಒಳಭಾಗ ಮತ್ತು ಹೊರಭಾಗದಲ್ಲಿ ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಇರುವುದಿಲ್ಲ. ಪ್ರತಿಯೊಂದು ಬಿತ್ತಿಯ ಕಲ್ಲು ೮೦ ಇಂಚು ಉದ್ದ ಮತ್ತು ೧೫ ಇಂಚು ಅಗಲ ವಿಸ್ತೀರ್ಣವಾಗಿದೆ. ದೇವಾಲಯ

ಒಟ್ಟು ೩೮೦ ಇಂಚು ಉದ್ದ ಹಾಗೂ ೧೯೫ ಇಂಚು ಅಗಲವನ್ನು ಹೊಂದಿದ್ದು ೯೦ ಇಂಚು ಎತ್ತರವಾಗಿದೆ.

ದೇವಾಲಯದ ಅಧಿಷ್ಠಾನ ಭೂಮಿಯಲ್ಲಿ ಹೂತಿರುವುದು, ಪ್ರವೇಶದ್ವಾರದ ಮೇಲ್ಭಾಗದ ಕೋಷ್ಟಕದಲ್ಲಿ ಶಿವಲಿಂಗವಿದ್ದು ಇದನ್ನು ನಾಗಶಿಲ್ಪ ಸುತ್ತಿ ನಿಂತಿದೆ. ಇಲ್ಲಿಯ ಕೋಷ್ಟಕ ಬಾಗಿದ ಕಮಾನಿನಂತಿದ್ದು ನಾಲ್ಕು ದಿಕ್ಕಿನಲ್ಲಿ ಜೋಡಿ ದೇಹದ ಬಸವನ ಶಿಲ್ಪವಿರುವುದು ಮತ್ತು ದೇವಾಲಯದ ಮೇಲಿನ ಭಾಗವು ಕಾಮಾನಿನಾಕಾರದ ಅಲಂಕರಣೆ ಹೊಂದಿರುವುದು. ಗರ್ಭಗೃಹದ ಮೇಲಿನ ಭಾಗವು ಚೌಕಾಕಾರದಿಂದ ಕೂಡಿದ್ದು ಗುಮ್ಮಟಾಕಾರದಿಂದ ಕೂಡಿದೆ. ಇದರ ಮೇಲೆ ಕಳಸವಿದೆ. ದೇವಾಲಯದ ಒಳಭಾಗದಲ್ಲಿ ಸುಂದರ ಶಿಲ್ಪಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಗಣೇಶ, ವೀರಭದ್ರ ಹಾಗೂ ಬ್ರಹ್ಮ, ವಿಷ್ಣು, ಮಹೇಶ್ವರ ಶಿಲ್ಪ ಹಂಸದ ಮೇಲೆ ಕುಳಿತಿರುವುದು. ಈ ಶಿಲ್ಪ ನೋಡುಗರನ್ನು ಆಕರ್ಷಿಸುತ್ತಿದೆ.

೯. ನಂದಿಬಸವೇಶ್ವರ ದೇವಾಲಯ

ಗ್ರಾಮ	:	ಐಲಾಪುರ
ಸ್ಥಳ ನಿರ್ದೇಶನ	:	ಗ್ರಾಮದ ಬಲಭಾಗದ ಕೆರೆಯ ದಂಡೆ
ಅಭಿಮುಖ	:	ಪೂರ್ವ
ಕಾಲ	:	ಕ್ರಿ.ಶ.೧೬-೧೭ನೆಯ ಶತಮಾನ
ನಿರ್ಮಾಣ ಸಾಮಗ್ರಿ	:	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ

ಇದು ಶೈವ ದೇವಾಲಯವಾಗಿದ್ದು ಏಕಕೂಟ ಗರ್ಭಗೃಹ ಹೊಂದಿದೆ. ಗರ್ಭಗೃಹ, ಸುಖನಾಸಿ, ನವರಂಗ ಮಂಟಪ ಹಾಗೂ ಹಜಾರ ಒಳಗೊಂಡು ಉತ್ತಮಸ್ಥಿತಿಯಲ್ಲಿದೆ. ಗರ್ಭಗೃಹದಲ್ಲಿ ಒಂದು ಅಡಿ ಎತ್ತರದ ಚೌಕಾಕಾರದ ಪೀಠದ ಮೇಲೆ ನಂದಿ ವಿಗ್ರಹ ಕೂರಿಸಿರುವರು. ಇದು ಕಪ್ಪು ಶಿಲೆಯಿಂದ ಕೂಡಿದೆ. ಗರ್ಭಗೃಹಕ್ಕಿಂತ ಸುಖನಾಸಿ ಚಿಕ್ಕದಾಗಿದ್ದು ಇಂದು ಆಧುನಿಕ ಶೈಲಿಯನ್ನು ಹೊಂದಿರುವುದು. ನವರಂಗ ಮಂಟಪದಲ್ಲಿ ಸ್ವಾತಂತ್ರ್ಯವಾಗಿ ನಾಲ್ಕು ಸ್ತಂಭಗಳಿವೆ. ಜೊತೆಗೆ ಬಿತ್ತಿಗೆ ಹೊಂದಿಕೊಂಡಂತೆ ಎಂಟು ಸ್ತಂಭಗಳು ಇರುವವು. ಎಲ್ಲ ಸ್ತಂಭಗಳು ಚೌಕಾಕಾರದ ಆಕೃತಿ ಹೊಂದಿವೆ. ನವರಂಗ ಸ್ತಂಭಗಳಲ್ಲಿ ಕಮಲ, ಆನೆ, ಮಂಗ ಮತ್ತು ನಂದಿಯ ಉಬ್ಬುಶಿಲ್ಪವಿದೆ. ನವರಂಗ ಮಂಟಪದ ಮೇಲ್ಭಾಗವಾದ ಭುವನೇಶ್ವರಿಯಲ್ಲಿ ಪುಷ್ಪದಳದ ಉಬ್ಬುಶಿಲ್ಪ ಕೆತ್ತನೆ ಇದೆ. ಹಜಾರದ ಬಲಭಾಗದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪ, ಬಲಭಾಗದಲ್ಲಿ ಹಜಾರದ ಸ್ತಂಭದ ತಳದಲ್ಲಿ ಹಸು ಶಿವಲಿಂಗದ ಬಳಿ ನಿಂತು

ತನ್ನ ಹಾಲನ್ನು ತಾನೇ ಕುಡಿಯುತ್ತಿರುವ ಉಬ್ಬುಶಿಲ್ಪದ ಕೆತ್ತನೆಯನ್ನು ಕಾಣಬಹುದು. ಇದರ ಮೇಲ್ಭಾಗದಲ್ಲಿ ಹಂಸದ ಉಬ್ಬುಶಿಲ್ಪ ಹಾಗೂ ಮತ್ತೊಂದು ಭಾಗದಲ್ಲಿ ಶಿವಲಿಂಗ ಇದೆ.

ದೇವಾಲಯದ ಬಿತ್ತಿಯು ಸಂಪೂರ್ಣವಾಗಿ ಕಲ್ಲಿನ ಚಪ್ಪಡಿಗಳಿಂದ ನಿರ್ಮಾಣವಾಗಿದ್ದು ಯಾವುದೇ ರೀತಿಯ ಚಿತ್ರಗಳ ಕೆತ್ತನೆ ಕಂಡುಬರುವುದಿಲ್ಲ. ಅದಿಷ್ಠಾನ ಮಣ್ಣಿನಲ್ಲಿ ಮುಚ್ಚಿಕೊಂಡಿದ್ದು ಅವುಗಳನ್ನು ಗುರ್ತಿಸಲು ಅಸಾಧ್ಯವಾಗಿದೆ. ಹಜಾರ, ನವರಂಗ ಮಂಟಪಗಳ ಸ್ತಂಭದ ಮೇಲಿನ ಬೋದಿಗೆ ದೇವಾಲಯವನ್ನು ಹೊತ್ತಿರುವುದು. ಗರ್ಭಗೃಹದ ಎಡ ಮತ್ತು ಬಲಭಾಗದಲ್ಲಿ ಅರ್ಧಗಂಭಗಳಿದ್ದು ಇಡೀ ಗೋಪುರವನ್ನು ಹೊತ್ತು ನಿಂತಿರುವಂತೆ ಮತ್ತು ಗರ್ಭಗೃಹ ಮೇಲಿನ ಗೋಪುರದ ನಾಲ್ಕು ಮೂಲೆಗಳಲ್ಲಿ ಜೋಡಿ ಬಸವೇಶ್ವರ ವಿಗ್ರಹಗಳಿದ್ದು ಆಕರ್ಶಕವಾಗಿವೆ. ಗೋಪುರವು ಚೌಕಾಕಾರದ ಆಕೃತಿ ಹೊಂದಿ ಕಳಶವನ್ನು ಒಳಗೊಂಡಿರುವುದು. ಹಜಾರ ಮತ್ತು ನವರಂಗ ಮಂಟಪದ ನಾಲ್ಕು ಮೂಲೆಗಳಲ್ಲಿ ಬಸವೇಶ್ವರನ ಜೋಡಿ ವಿಗ್ರಹಗಳನ್ನು ಕಾಣಬಹುದು. ದೇವಾಲಯ ಪ್ರವೇಶದ್ವಾರ ಹಜಾರದ ಎಡಭಾಗದ ತಳಭಾಗದಲ್ಲಿ ಸ್ತ್ರೀಯ ಮಿಥುನ ಶಿಲ್ಪವಿದೆ. ಇನ್ನುಳಿದಂತೆ ಸಾಧಾರಣವಾಗಿದ್ದು ನವರಂಗ ಮಂಟಪದ ಎಡಭಾಗದಲ್ಲಿ ಚಿಕ್ಕದಾದ ಪ್ರವೇಶದ್ವಾರವಿದೆ. ನಂದಿ ಅಥವಾ ಬಸವೇಶ್ವರ ದೇವಾಲಯವಿರುವುದರಿಂದ ಹಿಂದಿನಿಂದಲೂ ನಂದಿನಾಥಪುರ ಎಂಬ ಹೆಸರು ರೂಢಿಯಲ್ಲಿದೆ. ಆದರೆ ಇಂದು ಪ್ರಸ್ತುತ ಐಲಾಪುರವೆಂಬ ಹೆಸರಿನಿಂದ ಕರೆಯುತ್ತಿರುವರು. ಐಲಾಪುರ ಹೊಲದ ಮಧ್ಯದಲ್ಲಿ ಒಂದು ಪ್ರಾಚೀನ ಕಾಲದ ಅವಶೇಷವುಳ್ಳ ಗುಡಿ ಇರುವುದು. ಈ ಗುಡಿಯು ಪಶ್ಚಿಮಾಭಿಮುಖವಾಗಿದ್ದು ಗರ್ಭಗೃಹದಲ್ಲಿ ಯಾವುದೇ ವಿಗ್ರಹ ಕಂಡುಬರುವುದಿಲ್ಲ ಮತ್ತು ಇಲ್ಲಿರುವ ಯಾವುದೇ ಅವಶೇಷ ಕಂಬದ ಮೇಲೆ ಚಿತ್ರಗಳ ಕೆತ್ತನೆಯು ಇರುವುದಿಲ್ಲ. ಇದರಿಂದ ಯಾವ ದೇವಾಲಯವೆಂದು ಗುರ್ತಿಸಲು ಅಸಾಧ್ಯ ಹಾಗೂ ಇಲ್ಲಿಯ ಸ್ಥಳವನ್ನು ಸಂಪೂರ್ಣವಾಗಿ ವ್ಯವಸಾಯಕ್ಕೆ ಒತ್ತುವರಿ ಮಾಡಿಕೊಳ್ಳಲಾಗಿದೆ.

೧೦. ಸೋಮೇಶ್ವರ ದೇವಾಲಯ

ಗ್ರಾಮ : ಕಿತ್ತೂರು

ಸ್ಥಳ ನಿರ್ದೇಶನ : ಗ್ರಾಮದ ಕೇಂದ್ರ ಭಾಗ

ಅಭಿಮುಖ : ಪೂರ್ವ

ಕಾಲ : ಕ್ರಿ.ಶ.೧೭ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಗ್ರಾನೈಟ್ ಶಿಲೆ

ಪಿರಿಯಾಪಟ್ಟಣದಿಂದ ಉತ್ತರ ದಿಕ್ಕಿಗೆ ಸುಮಾರು ೨೭ ಕಿ.ಮೀ.ದೂರದಲ್ಲಿ ಕಿತ್ತೂರು ಗ್ರಾಮವಿದೆ. ಈ ಗ್ರಾಮವು ಐತಿಹಾಸಿಕ ಹಾಗೂ ಜನಪದವಾಗಿ ಪ್ರಾಮುಖ್ಯತೆ ಪಡೆದ ಸ್ಥಳ. ಇಲ್ಲಿ ಶೈವ ಸೋಮೇಶ್ವರ ದೇವಾಲಯವಿರುವುದು. ಇದು ಗ್ರಾಮದ ಕೇಂದ್ರ ಭಾಗದಲ್ಲಿದ್ದು ಪೂರ್ವಾಭಿಮುಖವಾಗಿದೆ. ಇದನ್ನು ಶಾಸನದಲ್ಲಿ ಸೋಮಯ್ಯದೇವರ ದೇವಾಲಯವೆಂದು ಕರೆದಿರುವರು. ಪ್ರಾಚೀನ ದೇವಾಲಯವು ಅಪೂರ್ಣಗೊಂಡಿದ್ದು ಮುಂದೆ ಮಾದಣ್ಣಗೌಡರ ಪುತ್ರ ಸಣ್ಣ ಓಭಳಪಗೌಡನೂ ಹೊರಾಂಗಣ ಕಲ್ಲಿನ ಕೆಲಸವನ್ನು, ಅಂಕಣದ ಬಾಗಿಲನ್ನು, ಗೋಡೆಯನ್ನು ಮತ್ತು ಗೋಪುರವನ್ನು ನಿರ್ಮಿಸಿ ಜೀರ್ಣೋದ್ಧಾರ ಮಾಡಿಸಿರುವನು. ಸೋಮಯ್ಯ ದೇವರಿಗೆ ಮಾಡಿದಂತಹ ಸೇವೆಯು ಚಂದ್ರ ಭೂಮಿ ಸೂರ್ಯರಿರುವ ತನಕ ಉಳಿಯಲಿ ಎಂದಿದ್ದು, ಮೂಲತಃ ಕಾಳಿಗನು ಈ ಶಿವ ದೇವಾಲಯವನ್ನು ನಿರ್ಮಿಸಿರುವುದು ಎಂದು ಶಾಸನದಿಂದ[೨೨] ಕಂಡುಬಂದಿದೆ. ತಳವಿನ್ಯಾಸದಲ್ಲಿ ಗರ್ಭಗೃಹ ಅಂತರಾಳ, ರಂಗಮಂಟಪ ಹಾಗೂ ತೆರೆದ ಮಂಟಪವನ್ನು ಹೊಂದಿದೆ. ಇದು ದ್ರಾವಿಡಶೈಲಿಯನ್ನು ಹೊಂದಿದ್ದು ಏಕಕೋಟ ದೇವಾಲಯವಾಗಿದೆ.

ಗರ್ಭಗೃಹದಲ್ಲಿ ಶಿವಲಿಂಗವಿದೆ. ನವರಂಗದಲ್ಲಿನ ಕಂಬಗಳು ಚೌಕಾಕಾರವಾಗಿದ್ದು ಮರದ ದಬ್ಬೆಯಂತೆ ಬಾಗಿರುವಂತಿವೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳು ಸುಮಾರು ೬ ಅಡಿ ಎತ್ತರವಾಗಿದ್ದು ಯಾವುದೇ ಶಿಲ್ಪಕೆತ್ತನೆಗಳು ಕಂಡುಬರುವುದಿಲ್ಲ. ಹಾಗೆಯೇ ದೇವಾಲಯದ ದಕ್ಷಿಣ ಭಾಗಕ್ಕೆ ಒಂದು ಪ್ರವೇಶದ್ವಾರವಿದ್ದು, ಮುಂಭಾಗದಲ್ಲಿ ಚಿಕ್ಕದಾದ ಎರಡು ಕಂಬಗಳ ಮುಖಮಂಟಪವಿದೆ. ದೇವಾಲಯದ ಮುಂಭಾಗದ ಮೇಲ್ಭಾಗದಲ್ಲಿ ಕಮಾನಿನಾಕಾರದ ಕೋಷ್ಟಕವಿದ್ದು ಶಿವಲಿಂಗದ ವಿಗ್ರಹವಿದೆ. ಗರ್ಭಗುಡಿಯ ಮೇಲೆ ಶಿಖರವಿದ್ದು ಮೇಲ್ಭಾಗದಲ್ಲಿ ಶಿವಲಿಂಗವನ್ನು ಕೂರಿಸಲಾಗಿದೆ. ಹಾಗೆಯೇ ದೇವಾಲಯದ ಸುತ್ತಲೂ ಮೂಲೆಮೂಲೆಗಳಲ್ಲಿ ನಂದಿಯ ವಿಗ್ರಹಗಳನ್ನು ಇಡಲಾಗಿದೆ.

ಗರ್ಭಗೃಹವು ೧೦x೧೦ ಅಡಿ ಚದುರ ಸುತ್ತಳತೆಯನ್ನು ಹೊಂದಿದ್ದು, ಗರ್ಭಗೃಹದಲ್ಲಿ ಕಲ್ಲು ಪೀಠದ ಮೇಲೆ ಶಿವಲಿಂಗವಿದೆ. ಇದು ಎರಡು ಅಡಿ ಎತ್ತರವಾಗಿದ್ದು ಕಪ್ಪುಶಿಲೆಯಿಂದ ಕೂಡಿದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಗೂಡುಗಳಿದ್ದು ಮೇಲೇರಿದಂತೆ ಕಿರಿದಾಗುತ್ತಾ ಹೋಗಿದೆ. ಕಳಸದ ತಳಭಾಗದಲ್ಲಿ ಮಂಟಪವಿದ್ದು, ಮಂಟಪದ ಕೆಳಭಾಗದಲ್ಲಿ ಡೋಮು ಇರುವುದು, ಇದನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಿಸಿರುವುದಾಗಿದೆ. ಗರ್ಭಗೃಹದ ಮೇಲೆ ಎರಡು ದಿಕ್ಕಿಗೆ ಅನುಗುಣವಾಗಿ ಜೋಡಿಬಸವನ ಶಿಲ್ಪವಿರುವುದು. ಗರ್ಭಗೃಹದ ಮುಂದಿನ ಭಾಗ ಅಂತರಾಳ. ಇದು ವಿಸ್ತೀರ್ಣದ ದೃಷ್ಟಿಯಿಂದ ಕಿರಿದಾಗಿದ್ದು ಬಾಗಿಲುವಾಡದ ಉಬ್ಬುಶಿಲ್ಪ ಸಂಪೂರ್ಣವಾಗಿ ಅವಶೇಷಗೊಂಡಿರುವುದು. ಗರ್ಭಗೃಹದ ಮೇಲ್ಭಾಗದಲ್ಲಿ ನಾಲ್ಕು

ಅಂತಸ್ತು ಹೊಂದಿರುವ ದ್ರಾವಿಡ ಶೈಲಿಯ ವಿಮಾನವಿರುವುದು. ಅಂತರಾಳದ ಮುಂದಿನ ಭಾಗವೇ ರಂಗಮಂಟಪ. ಅಂತರಾಳಕ್ಕೆ ಹೊಂದಿಕೊಂಡಂತೆ ಎರಡು ಅರ್ಧಗಂಭಗಳಿರುವವು. ನವರಂಗಮಂಟಪ ವಿಶಾಲವಾಗಿದ್ದು ಇದರಲ್ಲಿ ನಾಲ್ಕು ಕಂಬಗಳು ಉತ್ತಮ ರೀತಿಯಲ್ಲಿ ಇವೆ. ಇವುಗಳು ಹೊಯ್ಸಳ ಶೈಲಿಯ ಅಲಂಕೃತದಿಂದ ಕೂಡಿವೆ. ಕಂಬದ ತಳಭಾಗವು ಚೌಕಾಕಾರದಿಂದ ಕೂಡಿದ್ದು ಮೇಲೇರಿದಂತೆ ಕುಂಭದ ಅಲಂಕರಣೆಯನ್ನು ಹೊಂದಿದೆ. ಇದರ ಮೇಲಿನ ಭಾಗದಲ್ಲಿ ವೃತ್ತಕಾರವಿದ್ದು ಇದರ ಮೇಲೆ ಬೋದಿಗೆ ಇರುವುದು. ಬೋದಿಗೆ ದೇವಾಲಯವನ್ನು ಹೊತ್ತು ನಿಂತಿರುವಂತಿದೆ. ನವರಂಗದಲ್ಲಿ ಅಲಂಕೃತವಾದ ಭುವನೇಶ್ವರಿ ಇದೆ.

ನವರಂಗ ಮಂಟಪದ ಮುಂದಿನ ಭಾಗ ಹಜಾರ ಅಥವಾ ತೆರೆದ ಮಂಟಪ. ಇಲ್ಲಿ ನಾಲ್ಕು ಕಂಬಗಳು ಇರುವವು. ಇವುಗಳು ಚೌಕಾಕಾರವಾಗಿದ್ದು ಎಂಟು ಮುಖಗಳನ್ನು ಹೊಂದಿರುವವು. ಹಜಾರವು ಉತ್ತರ ದಕ್ಷಿಣಾಭಿಮುಖವಾಗಿ ಹತ್ತು ಅಡಿ ಉದ್ದ ಹೊಂದಿದೆ. ಇದರಲ್ಲಿ ಗೋಡೆಗೆ ಸೇರಿದಂತೆ ನಾಲ್ಕು ಕಂಬಗಳು ಮತ್ತು ಇದರ ಮುಂಭಾಗದಲ್ಲಿ ನಾಲ್ಕು ಕಂಬಗಳು ಇರುವವು. ಇದರ ಮೇಲಿನ ಭಾಗದಲ್ಲಿ ಒಂದು ಗೋಡು ಇದೆ. ಇಲ್ಲಿ ಶಿವಲಿಂಗದ ವಿಗ್ರಹವಿದ್ದು, ಇದರ ಎರಡು ಮೂಲೆಯಲ್ಲಿ ಜೋಡಿ ಬಸವನ ಮೂರ್ತಿಶಿಲ್ಪವಿರುವುದು. ಹಾಗೆಯೇ ಉತ್ತರ ದಿಕ್ಕಿನಲ್ಲಿಯು ಸಹ ಪ್ರವೇಶ ಮಾರ್ಗವಿರುವುದು. ಗರ್ಭಗೃಹಕ್ಕೆ ನೇರವಾಗಿ ಸುಮಾರು ಮೂರು ಅಡಿ ಎತ್ತರದ ಬಲಿಪೀಠ ಸ್ತಂಭವಿದೆ. ಇದರ ಮುಂದೆ ಸುಮಾರು ೨೦ ಅಡಿ ಎತ್ತರದ ದೀಪಸ್ತಂಭವನ್ನು ಕಾಣಬಹುದು.

ಒಟ್ಟಿನಲ್ಲಿ ಇದೊಂದು ಪ್ರಾಚೀನ ಶೈವ ದೇವಾಲಯವಾಗಿದ್ದು ಅಗ್ರಹಾರವೆಂದು ಹೇಳಬಹುದು ಮತ್ತು ದೇವಾಲಯವು ಚೋಳ ಮತ್ತು ಹೊಯ್ಸಳ ವಾಸ್ತುಶೈಲಿಯ ಸಮ್ಮಿಶ್ರ ಲಕ್ಷಣ ಹೊಂದಿದೆ. ದೇವಾಲಯದಲ್ಲಿ ಒಟ್ಟು ೨೦ ಕಂಬಗಳಿದ್ದು ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಇಲ್ಲದೆ ಸರಳವಾಗಿದೆ. ಒಟ್ಟಿನಲ್ಲಿ ಶೈವಭಕ್ತ ಸ್ಥಳೀಯ ಮುಖಂಡ ಕಾಳಿಗನು ಕ್ರಿ.ಶ. ೧೭ನೆಯ ಶತಮಾನದಲ್ಲಿ ಈಶ್ವರ ದೇವಾಲಯವನ್ನು ನಿರ್ಮಿಸಿರುವನು. ಹಾಗೂ ಇದು ಹೊಯ್ಸಳ[೨೩] ಕಾಲಕ್ಕೆ ಸೇರಿತ್ತೆಂದು ಹೇಳಲಾಗಿದೆ.

೧೧. ಸೋಮೇಶ್ವರ ದೇವಾಲಯ

ಗ್ರಾಮ	:	ಹರದೂರು
ಸ್ಥಳ ನಿರ್ದೇಶನ	:	ಗ್ರಾಮದಿಂದ ಅರ್ಧ ಕಿ.ಮೀ. ದೂರದಲ್ಲಿರುವ ಗದ್ದೆ ಬಳಿ
ಅಭಿಮುಖ	:	ಪೂರ್ವ
ಕಾಲ	:	ಕ್ರಿ.ಶ.೧೭ನೆಯ ಶತಮಾನ
ನಿರ್ಮಾಣ ಸಾಮಗ್ರಿ	:	ಇಟ್ಟಿಗೆ

ಸೋಮೇಶ್ವರ ದೇವಾಲಯ ಏಕಕೂಟವಾಗಿದ್ದು ಮೂಲಗರ್ಭಗೃಹ ಮತ್ತು ನವರಂಗ ಮಂಟಪಗಳನ್ನು ಒಳಗೊಂಡಿದೆ. ಆದರೆ ಕ್ರಿ.ಶ. ೨೦೦೭ರಲ್ಲಿ ಪುನರುಜ್ಜೀವನಗೊಂಡಿದ್ದರಿಂದ ಪ್ರಾಚೀನ ದೇವಾಲಯದ ಲಕ್ಷಣಗಳನ್ನು ಗುರುತಿಸಲು ಕಷ್ಟಕರ. ಏಕೆಂದರೆ ನವರಂಗ ಮಂಟಪದಲ್ಲಿದ್ದ ನಾಲ್ಕು ಸ್ತಂಭಗಳನ್ನು ತೆಗೆದು ಗರ್ಭಗೃಹದ ಮುಂದೆ ಅಂದರೆ ದೀಪಸ್ತಂಭದ ಮುಂದೆ ಒಂದು ಅಡಿ ಬಿಟ್ಟು ಉಳಿದ ಭಾಗವನ್ನು ಭೂಮಿಯಲ್ಲಿ ಹೂಳಲಾಗಿದೆ. ಕಲ್ಲು ಚಪ್ಪಡಿಯ ಬದಲು ಆಧುನಿಕ ಇಟ್ಟಿಗೆಗಳಿಂದ ಗೋಡೆಯನ್ನು ಕಟ್ಟಲಾಗಿದೆ. ಗರ್ಭಗೃಹದಲ್ಲಿ ಒಂದು ಅಡಿ ಎತ್ತರ ಶಿವಲಿಂಗವಿದ್ದು ಕಪ್ಪುಶಿಲೆಯಿಂದ ಕೂಡಿದೆ. ಗರ್ಭಗೃಹದ ಬಾಗಿಲವಾಡವು ಸಂಪೂರ್ಣವಾಗಿ ಇಲ್ಲದಿರುವುದು ಹಾಗೂ ಗರ್ಭಗೃಹದ ಪ್ರವೇಶದ್ವಾರದ ಎಡ ಮತ್ತು ಬಲಭಾಗದಲ್ಲಿ ವೀರಭದ್ರ ಹಾಗೂ ಪ್ರಳಯರುದ್ರ ದೇವರ ವಿಗ್ರಹಗಳಿವೆ. ಮುಂದಿನ ನವರಂಗ ಮಂಟಪದಲ್ಲಿ ಒಂದು ಅಡಿ ಎತ್ತರದ ನಂದಿಯ ವಿಗ್ರಹವಿರುವುದು. ಹರದೂರು ಸೋಮೇಶ್ವರ ದೇವಾಲಯದಲ್ಲಿ ಪ್ರಳಯರುದ್ರ ದೇವನ ವಿಗ್ರಹ ೩೩ ಇಂಚು ಉದ್ದ ನಾಲ್ಕುವರೆ ಇಂಚು ಅಗಲ ವಿಸ್ತೀರ್ಣತೆಯಿಂದ ಕೂಡಿದೆ. ಇದು ಕಪ್ಪುಶಿಲೆಯಾಗಿದ್ದು ನೋಡಲು ಸುಂದರವಾಗಿರುವುದು. ಶಿಲ್ಪದ ಎರಡೂ ಕಡೆಯೂ ಸ್ತ್ರೀಶಿಲ್ಪಗಳಿದ್ದು ವಿಗ್ರಹದ ಸುತ್ತ ೧೨ ವಿವಿಧ ಸಣ್ಣ ನೃತ್ಯ ಉಬ್ಬುಶಿಲ್ಪಗಳಿವೆ. ವೀರಭದ್ರನ ಮೂರ್ತಿಶಿಲ್ಪ ೨೧ ಇಂಚು ಹಾಗೂ ೧೨ ಇಂಚು ಅಗಲ ವಿಸ್ತೀರ್ಣ ಹೊಂದಿದೆ. ವೀರಭದ್ರ ತಲೆಗೆ ಶಿರಶ್ರಾಣ ಧರಿಸಿದ್ದು ಬಲಗೈಯಲ್ಲಿ ಕತ್ತಿಯನ್ನು ಹಿಡಿದಿರುವನು ಹಾಗೂ ಎಡಗೈಯಲ್ಲಿ ಶತ್ರುವಿನ ತಲೆಯನ್ನು ಕಡಿದು ರುಂಡವನ್ನು ಹಿಡಿದಿದೆ. ಅದನ್ನು ನಾಯಿ ನೆಕ್ಕುತ್ತಿರುವ ದೃಶ್ಯವಿದೆ. ಎತ್ತರ ಪಾದುಕೆಗಳನ್ನು ಹಾಗೂ ಕೊರಳಿನಲ್ಲಿ ಅಲಂಕೃತ ಆಭರಣಗಳನ್ನು ಮತ್ತು ಜನಿವಾರವನ್ನು ಧರಿಸಿದ್ದು ಸುಂದರವಾದ ಶಿಲ್ಪವಾಗಿದೆ. ಶಾಸನದಲ್ಲಿ[೨೪] ಈ ದೇವಾಲಯವನ್ನು ಸೋಮನಾಥ ಎಂದು ಹೆಸರಿಸಲಾಗಿದೆ. ದೇವಾಲಯವನ್ನು ವಿರುಪಾಯಅಮ್ಮನ ಪುತ್ರನಾದ ಅಮಾಸಿಯಅಯ್ಯನು ತನ್ನ ಕುಟುಂಬದವರಿಗೆ ಪುಣ್ಯವಾಗಲಿಯೆಂದು ಹಾಗೂ ನಂದಾದೀವಿಗೆ ನೀಡಿದೆ.

೧೨. ಈಶ್ವರ ದೇವಾಲಯ

ಗ್ರಾಮ : ಪಿರಿಯಾಪಟ್ಟಣ

ಸ್ಥಳ ನಿರ್ದೇಶನ : ಕೋಟೆ ಒಳಭಾಗದ ಬ್ರಾಹ್ಮಣರ ಬೀದಿ

ಅಭಿಮುಖ : ದಕ್ಷಿಣ

ಕಾಲ : ಕ್ರಿ.ಶ.೧೭ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಗ್ರಾನೈಟ್ ಶಿಲೆ

ಈ ದೇವಾಲಯ ವಿಸ್ತೀರ್ಣ ದೃಷ್ಟಿಯಿಂದ ಸುಮಾರು ೬೦ ಅಡಿ ಉದ್ದ, ೫೦ ಅಡಿ ಅಗಲವಾಗಿರುವುದು. ಇದು ಶೈವ ದೇವಾಲಯವಾಗಿದ್ದು ಮುಖ್ಯ ಗರ್ಭಗೃಹದಲ್ಲಿ ಶಿವಲಿಂಗ ಎರಡನೆಯ ಕೂಟದಲ್ಲಿ ಪಾರ್ವತಿಯ ಮೂರ್ತಿಶಿಲ್ಪವಿದೆ. ಇದು ದ್ರಾವಿಡ ಶೈಲಿಯಲ್ಲಿದ್ದು, ಸ್ಥಳೀಯರು ವೈದ್ಯನಾಥೇಶ್ವರ ದೇವಾಲಯವೆಂದು ಕರೆಯುವರು. ದೀಪಸ್ತಂಭವಿದ್ದು ಗರ್ಭಗೃಹಕ್ಕೆ ನೇರವಾಗಿ ಒಂದು ಗುಡ್ಡವಿದೆ. ಈ ಗುಡ್ಡವು ಅಂದಿನ ಬತೇರಿ ಅಥವಾ ವೀಕ್ಷಣಾ ಕೇಂದ್ರವಾಗಿತ್ತೆಂದು ಕಂಡುಬಂದಿದೆ. ಆದರೆ ಇಂದು ಬಹುತೇಕ ಅವನತಿಗೊಂಡಿದೆ. ದೇವಾಲಯ ತಲ ವಿನ್ಯಾಸದಲ್ಲಿ ಗರ್ಭಗೃಹ. ಅಂತರಾಳ, ನವರಂಗಮಂಟಪ ಹಾಗೂ ತೆರೆದಮಂಟಪವನ್ನು ಕಾಣಬಹುದು. ಮುಖ್ಯ ಗರ್ಭಗುಡಿಯ ಎಡ ಮತ್ತು ಬಲಭಾಗದಲ್ಲಿ ಗುಡಿಗಳಿದ್ದು, ಇವುಗಳಲ್ಲಿ ಎಡಭಾಗದಲ್ಲಿ ನಾರಾಯಣಮೂರ್ತಿ ಹಾಗೂ ಬಲಭಾಗದಲ್ಲಿ ಗಣಪತಿಯ ಮೂರ್ತಿಶಿಲ್ಪವಿರುವುದು. ಈ ಎರಡು ಗುಡಿಗಳಲ್ಲಿ ಮೂಲ ವಿಗ್ರಹಗಳು ಇಲ್ಲದೇ ನೂತನ ವಿಗ್ರಹಗಳನ್ನು ಪ್ರತಿಷ್ಠಾಪಿಸಿದಂತೆ ಕಂಡುಬಂದಿದೆ. ಗರ್ಭಗೃಹ, ಅಂತರಾಳ ಚೋಳರ ಕಾಲದಲ್ಲಿ ರಚಿತಗೊಂಡಿರುವುದು. ಆದರೆ ಮುಂದಿನ ಮಂಟಪವು ವಿಜಯನಗರ ಅರಸರ ಕಾಲದಲ್ಲಿ ವಿಸ್ತಾರಗೊಂಡಂತೆ ಕಂಡುಬಂದಿದೆ. ಈ ದೇವಾಲಯ ಕ್ರಿ.ಶ. ೧೭ನೆಯ ಶತಮಾನದಲ್ಲಿ ಪಾಳೆಯಗಾರಿಕೆ ಮನೆತನವಾದ ಚಂಗಾಳ್ವ[೨೫] ಮನೆತನದಲ್ಲಿ ನಿರ್ಮಿಸಲ್ಪಟ್ಟಿದೆ. ನವರಂಗಮಂಟಪ ನಂತರದ ಕಾಲಘಟ್ಟದಲ್ಲಿ ವಿಸ್ತರಿಸಲ್ಪಟ್ಟಿದ್ದು, ಇಲ್ಲಿ ಇರುವ ಕಂಬಗಳು ವಿಜಯನಗರ[೨೬] ಕಾಲದ ಲಕ್ಷಣಗಳನ್ನು ಹೊಂದಿವೆ.

ಮೂಲಗರ್ಭಗೃಹದಲ್ಲಿ ಸುಮಾರು ಒಂದೂವರೆ ಅಡಿಯ ಶಿವಲಿಂಗವಿದೆ. ಗರ್ಭಗೃಹದ ಮೇಲಿನ ಭಾಗದಲ್ಲಿ ಭುವನೇಶ್ವರಿ ಇದೆ. ಗರ್ಭಗೃಹ ಮತ್ತು ಇಡೀ ದೇವಾಲಯವನ್ನು ಆಧುನೀಕರಣಗೊಳಿಸಲಾಗಿದೆ. ಗರ್ಭಗೃಹದಲ್ಲಿನ ನೀರು ಹೊರಹೋಗಲು ಹೊರಭಾಗದಲ್ಲಿ ಆನೆಸೊಂಡಿಲಾಕೃತಿಯ ಲಕ್ಷಣ ಹೊಂದಿರುವುದು ಮತ್ತು ಲಲಾಟಬಿಂಬದಲ್ಲಿ ಶೈವ ಉಬ್ಬುಶಿಲ್ಪವಿದೆ. ಗರ್ಭಗೃಹದ ಮುಂದಿನ ಭಾಗ ಅಂತರಾಳ. ಇದು ಚಿಕ್ಕದಾಗಿದ್ದು, ಲಲಾಟ ಬಿಂಬದಲ್ಲಿ ಶಿವಲಿಂಗ, ನಂದಿ ಉಬ್ಬುಶಿಲ್ಪ ಕೆತ್ತಲ್ಪಟ್ಟಿರುವುದು. ಬಾಗಿಲುವಾಡವು ಮೂರು ಪಟ್ಟಿಕೆಗಳನ್ನು ಹೊಂದಿದ್ದು. ಲತಾಬಳ್ಳಿಯ ಅಲಂಕಾರಿಕ ಸೌಂದರ್ಯವನ್ನು ಹೊಂದಿದೆ. ಗರ್ಭಗೃಹಕ್ಕೆ ನೇರವಾಗಿ ಮತ್ತು ಅಂತರಾಳದಲ್ಲಿ ನಂದಿಮೂರ್ತಿಶಿಲ್ಪವಿರುವುದು. ಬಾಗಿಲುವಾಡದಲ್ಲಿ ಶೈವ ದ್ವಾರಪಾಲಕರು ನಿಂತಿದ್ದು ೪ ಕೈಗಳನ್ನು ಹೊಂದಿರುವರು. ತಮ್ಮ ಕೈಗಳಲ್ಲಿ ತ್ರಿಶೂಲ, ಡಮರುಗ, ಉದ್ದವಾದ ಕಿರೀಟ ಹಾಗೂ ಆಭರಣಗಳನ್ನು ಧರಿಸಿರುವರು. ಗರ್ಭಗೃಹದ ಎಡಭಾಗದಲ್ಲಿ ಲಕ್ಷ್ಮೀನಾರಾಯಣನ ಗುಡಿಯಿದೆ. ಇಲ್ಲಿಯ ಮೂಲಶಿಲ್ಪ ಇಲ್ಲದೇ ನೂತನ

ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದ್ದು, ಬಾಗಿಲುವಾಡವು ಸರಳವಾದ ಪಟ್ಟಿಕೆಗಳಿಂದ ಅಲಂಕೃತಗೊಂಡಿದೆ.

ಎರಡನೇ ಗರ್ಭಗುಡಿಯಲ್ಲಿ ನಿಂತಿರುವ ಪಾರ್ವತಿ ಮೂರ್ತಿಶಿಲ್ಪವಿದೆ. ಇದು ಸಂಪೂರ್ಣವಾಗಿ ಕಪ್ಪು ಅಲ್ಲದೆ, ಬಿಳಿಯು ಅಲ್ಲದೆ ಕಪ್ಪು ಮಿಶ್ರಿತ ಶಿಲ್ಪವಾಗಿದೆ. ಸೌಂದರ್ಯವಾಗಿದ್ದು ಸುಮಾರು ಎರಡೂವರೆ ಅಡಿ ಎತ್ತರವಾಗಿದೆ. ನಾಲ್ಕು ಕೈಗಳನ್ನು ಹೊಂದಿದ್ದು, ಕೈಬಳೆ, ಕಾಲು ಬಳೆ ಮತ್ತು ಸೂಕ್ಷ್ಮವಾದ ಕೆತ್ತನೆಯಿಂದ ಕೂಡಿದ ಅಲಂಕಾರಿಕ ಆಭರಣಗಳನ್ನು ಧರಿಸಿರುವರು. ಈ ಗರ್ಭಗೃಹದ ಲಲಾಟ ಬಿಂಬದಲ್ಲಿ ಶಿವಲಿಂಗಕ್ಕೆ ಹಸುವು ಹಾಲನ್ನು ಸುರಿಸುತ್ತಿರುವ ಉಬ್ಬುಶಿಲ್ಪವಿದೆ. ಬಾಗಿಲುವಾಡವು ಸುಂದರವಾದ ಅಲಂಕಾರಿಕ ಪಟ್ಟಿಗಳನ್ನು ಹೊಂದಿದ್ದು ಉತ್ತಮವಾಗಿದೆ.

ರಂಗಮಂಟಪದಲ್ಲಿ ನಾಲ್ಕು ಸ್ವಾತಂತ್ರ್ಯವಾದ ಕಂಬಗಳಿವೆ. ನೋಡಲು ಸುಂದರವಾಗಿದ್ದು, ಹದಿನೆಂಟು ಮುಖಗಳನ್ನು ಮತ್ತು ಸೂಕ್ಷ್ಮವಾದ ಅಲಂಕಾರದಿಂದ ಕೂಡಿವೆ. ಪ್ರತಿ ಕಂಬಗಳು ಹತ್ತು ಅಡಿ ಎತ್ತರ ಹಾಗೂ ಮೇಲಿನ ಭಾಗದಲ್ಲಿ ಬೋದಿಗೆಯನ್ನು ಹೊಂದಿವೆ. ಇಲ್ಲಿಯ ಕಂಬಗಳು ವಿಜಯನಗರ ಅರಸರ ವಾಸ್ತುಶೈಲಿಯನ್ನು ಹೊಂದಿವೆ. ಈ ಕಂಬಗಳ ಮೇಲೆ ತಾಂಡವಮೂರ್ತಿ, ನರಸಿಂಹ, ನಂದಿ, ಮುನಿ, ಶಿವಮಾರ್ತಾಂಡ ನರ್ತನ ಹಾಗೂ ನರಸಿಂಹನ ನರ್ತನ ಉಬ್ಬುಶಿಲ್ಪಗಳಿವೆ. ಪ್ರವೇಶದ್ವಾರದ ಲಲಾಟ ಬಿಂಬದ ಮೇಲೆ ನಂದಿ, ಶಿವಲಿಂಗದ ಉಬ್ಬುಶಿಲ್ಪ ಕೆತ್ತನೆ ಕಂಡುಬಂದಿದೆ. ಬಾಗಿಲುವಾಡವು ಸೂಕ್ಷ್ಮವಾದ ಅಲಂಕಾರಿಕ ಪಟ್ಟಿಕೆಗಳಿಂದ ಕೂಡಿರುವುದು. ಬಿತ್ತಿಯ ಮೇಲೆ ತಳಭಾಗದಲ್ಲಿ ಎಂಟು ಕೈಗಳ ನಟರಾಜನ ಉಬ್ಬುಶಿಲ್ಪಗಳು ಪ್ರವೇಶದ್ವಾರದ ಎರಡು ಬದಿಯಲ್ಲಿ ಕಂಡುಬಂದಿವೆ. ಇವುಗಳು ನೋಡಲು ಆಕರ್ಷಕವಾಗಿವೆ. ಮುಖ್ಯ ಗರ್ಭಗುಡಿಯ ಬಲಭಾಗಕ್ಕೆ ಒಂದು ಪ್ರವೇಶದ್ವಾರವಿದೆ. ಇಲ್ಲಿ ಸುಮಾರು ಮೂರು ಅಡಿ ಎತ್ತರದ ಗಣಪತಿಯ ಶಿಲ್ಪವಿದೆ. ಇದರ ಎರಡು ಬದಿಯಲ್ಲಿ ನಾಗಶಿಲ್ಪವಿದ್ದು, ಸಮೀಪದಲ್ಲಿಯೇ ಕನ್ಯೆಯ ಮಿಥುನ ಉಬ್ಬುಶಿಲ್ಪವಿದೆ.

ದೇವಾಲಯದ ಗರ್ಭಗೃಹದ ಮೇಲೆ ದೊಡ್ಡದಾದ ಗೋಪುರವಿದೆ. ಇದು ಗಾರೆಯಿಂದ ರಚಿತಗೊಂಡಿದ್ದು, ತಳಭಾಗದಿಂದ ಮೇಲೇರಿದಂತೆ ಕಿರಿದಾಗುತ್ತಾ ಸಾಗುತ್ತದೆ. ಇಲ್ಲಿರುವ ಶಿಲ್ಪಗಳು ಶಿವ, ಪಾರ್ವತಿ ಹಾಗೂ ಶೈವ ಧರ್ಮಕ್ಕೆ ಸಂಬಂಧಪಟ್ಟಂತಹ ವಿಗ್ರಹಗಳನ್ನು ಕಾಣಬಹುದು. ದೇವಸ್ಥಾನದ ಮೇಲಿರುವ ಮೂರು ಕೋಷ್ಟಕಗಳು ಇತ್ತೀಚಿನದೆಂದು ಕಂಡುಬರುತ್ತವೆ. ದೇವಾಲಯದ ನಾಲ್ಕು ಮೂಲೆಯಲ್ಲಿ ಬಸವನ ಶಿಲ್ಪಗಳು ಇದ್ದು, ಗಾರೆಯಿಂದ ರಚಿತಗೊಂಡಿರುವವು. ಜೊತೆಗೆ ಒಂದು ತಲೆ ಎರಡು ದೇಹದಿಂದ ನಿರ್ಮಾಣಗೊಂಡಿವೆ.

ದೇವಾಲಯದ ಹೊರಗೋಡೆಯ ಗರ್ಭಗುಡಿ, ಶುಕನಾಸಿ, ನವರಂಗ ಈ ಮೂರು ಅಂಕಣದ ಹೊರಬಿತ್ತಿಯಲ್ಲಿ ಚೋಳರ ಕಾಲದ ಅರೆಗಂಬಗಳು ಮತ್ತು ಕೋಷ್ಠಕಗಳನ್ನು ಕಾಣಬಹುದು. ದೇವಾಲಯವು ಪ್ರಮುಖವಾಗಿದ್ದು ಚೋಳ ಮತ್ತು ವಿಜಯನಗರ ಅರಸರ ಕಾಲದ ಕಟ್ಟಡವಾಗಿದೆ ಗರ್ಭಗುಡಿಯ ನೇರಕ್ಕೆ ನಂದಿ ಸ್ತಂಭವಿದೆ. ಇದರ ಸಮೀಪ ಇತ್ತೀಚೆಗೆ ೪ ಕಂಬ ಗಳನ್ನು ಪ್ರತಿಷ್ಠಾಪಿಸಿರುವರು. ಇವುಗಳು ಇಂದು ಅವಶೇಷಗಳಾಗಿವೆ. ಇವುಗಳ ಮಧ್ಯೆ ಗಣಪತಿ, ಭೈರವನ ಶಿಲ್ಪಗಳನ್ನು ಕಾಣಬಹುದು.

೧೩. ಈಶ್ವರ ದೇವಾಲಯ

ಗ್ರಾಮ	: ಬೆಟ್ಟದಪುರ
ಸ್ಥಳ ನಿರ್ದೇಶನ	: ರಾಯಗೋಪುರ
ಅಭಿಮುಖ	: ಉತ್ತರ
ಕಾಲ	: ಕ್ರಿ.ಶ.೧೭ನೆಯ ಶತಮಾನ
ನಿರ್ಮಾಣ ಸಾಮಗ್ರಿ	: ಶಿಲೆ, ಇಟ್ಟಿಗೆ

ಬೆಟ್ಟದ ಬುಡದಲ್ಲಿರುವ ಗೋಪುರದ ಬಲಭಾಗಕ್ಕೆ ಇರುವುದು. ದೇವಾಲಯವು ಉತ್ತರಾಭಿಮುಖವಾಗಿದ್ದು ತಲವಿನ್ಯಾಸದಲ್ಲಿ ಚೌಕಕಾರ ಗರ್ಭಗೃಹ, ಹಜಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ನಾಲ್ಕು ಅಡಿ ಎತ್ತರದ ಪೀಠದ ಮೇಲೆ ಕಪ್ಪು ಶಿಲೆಯ ಲಿಂಗವಿದೆ. ಗರ್ಭಗೃಹದ ಮೇಲೆ ಪುಷ್ಪಾಲಂಕಾರ ಭುವನೇಶ್ವರಿ ಇದ್ದು ದ್ರಾವಿಡ ಶೈಲಿಯ ಗೋಪುರ ಕಾಣಬಹುದು. ಗೋಪುರ ಇಂದು ಜೀರ್ಣಾವ್ಯವಸ್ಥೆಯ ಹಂತದಲ್ಲಿದೆ. ಗರ್ಭಗೃಹದ ಪ್ರವೇಶ ದ್ವಾರದ ಎಡ ಮತ್ತು ಬಲಭಾಗದಲ್ಲಿ ನಾಲ್ಕು ಕೈಗಳುಳ್ಳ ಶೈವ ದ್ವಾರಪಾಲಕರು ಪೀಠದ ಮೇಲೆ ನಿಂತಿದ್ದಾರೆ. ಬಾಗಿಲುವಾಡವು ಸುಂದರವಾಗಿದೆ. ಇಡೀ ದೇವಾಲಯವು ಗ್ರಾನೈಟ್ ಶಿಲೆಯಿಂದ ನಿರ್ಮಿತಗೊಂಡಿದ್ದು ಅಧಿಷ್ಠಾನದ ಮೇಲೆ ನಿಂತಿದೆ. ಗರ್ಭಗೃಹದ ಮುಂದಿನ ಭಾಗವೇ ಪಾಥಾಲಾಂಕ ಅಥವಾ ಜಗುಲಿಯಾಗಿದೆ. ಇಲ್ಲಿ ಚೌಕಕಾರದ ನಾಲ್ಕು ಸ್ಥಂಬಗಳು ಕಂಡುಬಂದಿವೆ. ಇವುಗಳ ಮೇಲೆ ಹೆಚ್ಚಿನ ಶಿಲ್ಪಗಳು ಕಂಡುಬಂದಿಲ್ಲ. ವರಾಂಡದಲ್ಲಿರುವ ಕಂಬಗಳಲ್ಲಿ ಗಣಪತಿ, ಲಿಂಗ, ಕುಳಿತುಕೊಂಡಿರುವ ಸಿಂಹ ಮತ್ತು ಪುಷ್ಪದ ಚಿತ್ರವಿದ್ದು ದೇವಾಲಯದ ಬಿತ್ತಿಯಲ್ಲಿ ಮತ್ಸ್ಯ ಮತ್ತು ಸರ್ಪದ ಉಬ್ಬುಶಿಲ್ಪವಿರುವುದು. ದೇವಾಲಯದ ಮೇಲ್ಭಾಗದಲ್ಲಿ ನಾಲ್ಕು ದಿಕ್ಕಿಗೂ ಜೋಡಿ ಬಸವ ವಿಗ್ರಹಗಳು ಕಂಡುಬರುತ್ತವೆ. ಆದರೆ ಇಂದು ಈ ದೇವಾಲಯ ಜೀರ್ಣವ್ಯವಸ್ಥೆಗೆ ಒಳಪಟ್ಟಿರುವುದು. ದೇವಾಲಯಕ್ಕೆ ಹತ್ತಲು ಮೂರು ಮೆಟ್ಟಿಲುಗಳಿದ್ದು

ಗಜಾಲಂಕಾರವನ್ನು ಹೊಂದಿದೆ. ದೇವಾಲಯ ವಾಸ್ತುದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಹೊಂದಿರುವುದಿಲ್ಲ. ಬಿತ್ತಿಯು ಕೆಂಪು ಬಣ್ಣದ ದೊಡ್ಡ ಚಪ್ಪಡಿಗಳಿಂದ ಕಟ್ಟಲ್ಪಟ್ಟಿದ್ದು ದ್ರಾವಿಡ ಶೈಲಿಯ ಲಕ್ಷಣ ಹೊಂದಿದೆ.

೧೪. ಪವಾಡ ಬಸವೇಶ್ವರ ದೇವಾಲಯ

ಗ್ರಾಮ : ಬೆಟ್ಟದಪುರ

ಸ್ಥಳ ನಿರ್ದೇಶನ : ಗ್ರಾಮದ ಮಧ್ಯಭಾಗ

ಅಭಿಮುಖ : ಪಶ್ಚಿಮ

ಕಾಲ : ಕ್ರಿ.ಶ.೧೭ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಗ್ರಾನೈಟ್ ಶಿಲೆ, ಇಟ್ಟಿಗೆ

ಈ ದೇವಾಲಯವು ಬೆಟ್ಟದಪುರ ಗ್ರಾಮದ ಒಳಭಾಗದಲ್ಲಿದ್ದು ಉತ್ಸವ ಮಲ್ಲಿಕಾರ್ಜುನ ದೇವಾಲಯದ ಎದರುಗಡೆ ಇದೆ. ದೇವಾಲಯದ ತಳವಿನ್ಯಾಸವು ಗರ್ಭಗೃಹ, ಅಂತರಂಗ, ನವರಂಗವನ್ನು ಒಳಗೊಂಡಿರುವುದು. ಇದು ಏಕಕೂಟ ದೇವಾಲಯವಾಗಿದ್ದು ಗರ್ಭಗೃಹದಲ್ಲಿ ಬಸವೇಶ್ವರ ವಿಗ್ರಹವಿದ್ದು ಪಶ್ಚಿಮಾಭಿಮುಖವಾಗಿದೆ. ಈ ಗರ್ಭಗೃಹದ ಮೇಲೆ ಗೋಪುರವು ನಿರ್ಮಾಣಗೊಂಡಿದ್ದು, ದೇವಾಲಯದ ಬಿತ್ತಿಯು ಕಲ್ಲುಚಪ್ಪಡಿಗಳಿಂದ ಜೋಡಿಸಲ್ಪಟ್ಟಿದ್ದು ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಇಲ್ಲದೇ ಸರಳವಾಗಿದೆ. ನವರಂಗದಲ್ಲಿ ಒಟ್ಟು ಹನ್ನೆರಡು ಸ್ತಂಭಗಳು ಕಂಡುಬಂದಿದ್ದು ಚೌಕಕಾರದಲ್ಲಿವೆ. ಗರ್ಭಗೃಹದ ಬಾಗಿಲುವಾಡವು ಸರಳವಾಗಿದ್ದು ಎರಡು ಕಡೆಯಲ್ಲಿಯೂ ದ್ವಾರಪಾಲಕರು ಮತ್ತು ಸಪ್ತಮಾತೃಕೆಯ ಸಣ್ಣ ಶಿಲ್ಪಗಳು ಕಂಡುಬಂದಿವೆ. ದೇವಾಲಯದ ಒಟ್ಟು ಉದ್ದ ೩೫ ಅಡಿ. ಪ್ರವೇಶದ್ವಾರದ ಮೇಲೆ ದೊಡ್ಡದಾದ ಬಸವೇಶ್ವರ ವಿಗ್ರಹವಿದೆ. ಗರ್ಭಗೃಹದ ನಂತರ ಅಂತರಾಳವು ವಿಶಾಲವಾಗಿಲ್ಲದೆ ಚಿಕ್ಕದಾಗಿರುವುದು. ಇದು ಹಲವು ಭಾರಿ ಜೀರ್ಣ ವ್ಯವಸ್ಥೆ ಹೊಂದಿದ್ದು ಗೋಪುರವು ವಿಮಾನಕಾರದಲ್ಲಿದೆ. ಈ ದೇವಾಲಯವನ್ನು ಪವಾಡ ಬಸವೇಶ್ವರ ದೇವಾಲಯವೆಂದು ಸ್ಥಳೀಯರು ಕರೆಯುತ್ತಿರುವರು.

೧೫. ಬಸವೇಶ್ವರ ದೇವಾಲಯ

ಗ್ರಾಮ : ಕುಡುಕೂರು

ಸ್ಥಳ ನಿರ್ದೇಶನ : ಊರಿನ ಮಧ್ಯಭಾಗ ಹಾಗೂ ವೃತ್ತದ ಬಳಿ

ಅಭಿಮುಖ : ಉತ್ತರ

ಕಾಲ : ಕ್ರಿ.ಶ.೧೬ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಗ್ರಾನೈಟ್ ಶಿಲೆ

ಮಲ್ಲಿಕಾರ್ಜುನ ಬೆಟ್ಟದ ಆಗ್ನೇಯ ದಿಕ್ಕಿಗೆ ಇರುವ ಗ್ರಾಮ ಕುಡುಕೂರು. ಈ ಗ್ರಾಮದ ಮಧ್ಯದಲ್ಲಿ ಬಸವೇಶ್ವರ ದೇವಾಲಯವಿದ್ದು ಉತ್ತರಾಭಿಮುಖವಾಗಿ ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ದೇವಾಲಯದ ತಳವಿನ್ಯಾಸದಲ್ಲಿ ಚೌಕಕಾರದ ಗರ್ಭಗೃಹವಿದ್ದು ಹಜಾರ ವನ್ನು ಒಳಗೊಂಡಿದೆ. ಇಪ್ಪತ್ತಾರು ಇಂಚು ಶಿಲೆಯಿಂದ ನಿರ್ಮಿತವಾದ ಅಧಿಷ್ಠಾನದ ಮೇಲೆ ಏಕಕೂಟ ದೇವಾಲಯವಿದೆ. ಗರ್ಭಗೃಹದಲ್ಲಿ ಶಿವಲಿಂಗ, ಪೀಠದ ಮೇಲೆ ಎರಡುವರೆ ಅಡಿ ಎತ್ತರದ ಬಸವೇಶ್ವರ ವಿಗ್ರಹವಿದ್ದು ಮೂಲ ವಿಗ್ರಹ ಸ್ಥಳಾಂತರಗೊಂಡಿದೆ. ಇದರ ಮೇಲೆ ತ್ರಿಭುಜಕಾರದ ಭುವನೇಶ್ವರಿ ಇದ್ದು ದ್ರಾವಿಡ ಶೈಲಿಯ ಗೋಪುರವಿದೆ. ಗರ್ಭಗೃಹದ ಬಾಗಿಲುವಾಡವು ಸುಂದರವಾಗಿದ್ದು ಲಾಲಟಬಿಂಬದಲ್ಲಿ ಜೈನಮೂರ್ತಿಯ ಅಸ್ಪಷ್ಟ ಉಬ್ಬು ಶಿಲ್ಪವಿರುವುದು. ಪ್ರವೇಶದ್ವಾರದಲ್ಲಿ ನಾಲ್ಕು ಕೈಗಳುಳ್ಳ ದ್ವಾರಪಾಲಕರ ಮೂರ್ತಿಶಿಲ್ಪವಿದೆ. ಗರ್ಭಗೃಹದ ಮುಂದಿನ ಭಾಗ ಹಜಾರ ಭಿತ್ತಿಯು ಕೆಂಪುಗಲ್ಲಿನ ಚಪ್ಪಡಿಗಳನ್ನು ಒಳಗೊಂಡಿದ್ದು ಜಗುಲಿಯ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ಸ್ತಂಭಗಳಿದ್ದು, ಸರಳವಾದ ಬೋದಿಗೆ ಹೊಂದಿದ್ದು ದೇವಾಲಯದ ಮೇಲ್ಛಾವಣಿಯನ್ನು ಹೊತ್ತು ನಿಂತಿದೆ. ಮೇಲ್ಛಾವಣಿಯ ನಾಲ್ಕು ದಿಕ್ಕಿಗೂ ಜೋಡಿಬಸವನ ವಿಗ್ರಹವಿದ್ದು, ಮುಂಭಾಗದಲ್ಲಿ ಆದಿಶೇಷನ ಮೂರ್ತಿ ಇದೆ. ಇದರ ಅಕ್ಕಪಕ್ಕದ ವಿಗ್ರಹಗಳು ಅಸ್ಪಷ್ಟವಾಗಿದ್ದು ಇಂಡೋ-ಇಸ್ಲಾಮಿಕ್ ಶೈಲಿಯ ಲಕ್ಷಣಗಳನ್ನು ಒಳಗೊಂಡಿದೆ. ದೇವಾಲಯವು ಮೂರು ಮೆಟ್ಟಿಲುಗಳನ್ನು ಹೊಂದಿದ್ದು ಗಜಾಕಾರದ ಮೂರ್ತಿಗಳನ್ನು ಎರಡು ದಿಕ್ಕಿನಲ್ಲಿಯೂ ಕಾಣಬಹುದು. ಗರ್ಭಗೃಹದ ಮುಂದೆ ಜಗುಲಿಯ ಮೇಲೆ ವಿವಿಧ ರೀತಿಯ ಉಬ್ಬುಶಿಲ್ಪಗಳನ್ನು ಒಳಗೊಂಡಂತೆ ನಾಲ್ಕು ಸ್ತಂಭಗಳು ಇರುವುದು. ಬಲಭಾಗದ ಸ್ತಂಭದಲ್ಲಿ ನಂದಿಯ ಉಬ್ಬುಶಿಲ್ಪ, ಇದರ ತಳಭಾಗದಲ್ಲಿ ಸರ್ಪಗಳು ಸರಸದಲ್ಲಿರುವ ಶಿಲ್ಪ ಇದರ ಕೆಳಗೆ ಮಹಿಳೆ ಗದೆಯನ್ನು ಹಿಡಿದು ತನ್ನ ತಲೆಯ ತುರುಬನ್ನು ಕಟ್ಟಿ ನಿಂತಿರುವಂತಿದೆ. ಮತ್ತು ಮಹಿಳೆ ಕಂಚಿನ ಕನ್ನಡಿ ಹಿಡಿದು ಸೌಂದರ್ಯ ನೋಡುವ ರೀತಿಯಲ್ಲಿದ್ದು, ಇದರ ಮೇಲೆ ಶಿವಲಿಂಗವನ್ನು ಸರ್ಪವು ಸುತ್ತುವರಿದಿರುವುದು.

ಬಲಭಾಗದ ಎರಡನೆಯ ಕಂಬದಲ್ಲಿ ಮಹಿಳೆಯ ಉಬ್ಬುಶಿಲ್ಪಗಳು ಮತ್ತೊಂದು ಭಾಗದಲ್ಲಿ ಗಣೇಶನ ಶಿಲ್ಪವಿರುವುದು. ಮೂರನೆಯ ಕಂಬದ ತಳಭಾಗದಲ್ಲಿ ವ್ಯಕ್ತಿಯು ಗದೆಯನ್ನು ಹಿಡಿದು ನಿಂತಿರುವ ನಾಲ್ಕು ಕೈಗಳಿರುವುದು, ಇದರ ಮೇಲ್ಭಾಗದಲ್ಲಿ ಪರ್ಶಿಯಾದ ಮುಸ್ಲಿಂ ವ್ಯಕ್ತಿಯ ಉಬ್ಬುಶಿಲ್ಪಗಳ ಕೆತ್ತನೆಯಿರುವುದು. ವ್ಯಕ್ತಿಯೂ ಕುದುರೆಯೊಂದಿಗೆ ಶಿವಲಿಂಗವನ್ನು ನಾಶಪಡಿಸುತ್ತಿರುವ ಉಬ್ಬುಶಿಲ್ಪ, ಇದರ ಮೇಲೆ ಹಂಸದ ಶಿಲ್ಪವಿರುವುದು. ನಾಲ್ಕನೆಯ ಕಂಬದ ಮೇಲ್ಭಾಗದಲ್ಲಿ ಹಂಸ ಹಾಗೂ ಮಹಿಳೆಯರ ವಿವಿಧ ರೀತಿಯ ಉಬ್ಬು ಶಿಲ್ಪಗಳನ್ನು

ಒಳಗೊಂಡಂತೆ ಓಲಗವನ್ನು ಊದುತ್ತಿರುವ ದೃಶ್ಯಾವಳಿಗಳಿವೆ. ಇದರ ತಳಭಾಗದಲ್ಲಿ ಆನೆಯ ಉಬ್ಬುಶಿಲ್ಪವಿದ್ದು ಅರಸನು ಕುಳಿತಿರುವುದು ಕಂಡುಬಂದಿದೆ. ಗರ್ಭಗೃಹಕ್ಕೆ ನೇರವಾಗಿ ನಾಲ್ಕು ಅಡಿ ಪೀಠದ ಮೇಲೆ ಇಪ್ಪತ್ತು ಅಡಿ ಎತ್ತರದ ದೀಪಸ್ತಂಭವಿದೆ. ಇದರ ಸುತ್ತ ತಳಭಾಗದಲ್ಲಿ ಗಣೇಶ, ವೀರಭದ್ರ ಮತ್ತು ಉದ್ದನೆಯ ನೀಲುವಂಗಿಯನ್ನು ಧರಿಸಿರುವ ಉಬ್ಬುಶಿಲ್ಪ ಕೆತ್ತನೆಯಿರುವುದು.

೧೬. ಈಶ್ವರ ದೇವಾಲಯ

ಗ್ರಾಮ : ಮೇಲೂರು

ಸ್ಥಳ ನಿರ್ದೇಶನ : ಗ್ರಾಮದಿಂದ ಅರ್ಧಕಿ.ಮೀ. ಪೂರ್ವಕ್ಕಿರುವ ಹೊಲದ ಮಧ್ಯೆ

ಅಭಿಮುಖ : ಪೂರ್ವ

ಕಾಲ : ಕ್ರಿ.ಶ.೧೯ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ

ಪ್ರಾಚೀನ ಈಶ್ವರ ದೇವಾಲಯ ಮೇಲೂರು ಗ್ರಾಮದ ಹೊಲದ ಮಧ್ಯದಲ್ಲಿ ಮತ್ತು ಪೂರ್ವಾಭಿಮುಖವಾಗಿ ನಿಂತಿರುವುದು. ಇದು ಏಕಕೋಟ ಗರ್ಭಗುಡಿಯಾಗಿದೆ. ಶೈವ ದೇವಾಲಯವಾಗಿದ್ದು ಗರ್ಭಗುಡಿ, ಅಂತರಾಳ ಹಾಗೂ ನವರಂಗಮಂಟಪವನ್ನು ಒಳಗೊಂಡಿದೆ. ಮೂಲ ದೇವಾಲಯವು ಅಂದರೆ ಗರ್ಭಗುಡಿಯು ಸ್ಥಳೀಯ ಪಾಳೆಯಗಾರಿಕೆ ಮನೆತನವಾದ ಚಂಗಾಳ್ವ ಮನೆತನದ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿರುವುದು. ಗರ್ಭಗುಡಿಯಲ್ಲಿ ಸುಮಾರು ಎರಡು ಅಡಿ ಎತ್ತರದ ಶಿವಲಿಂಗವಿದ್ದು ಕೃಷ್ಣಶಿಲೆಯಿಂದ ಕೂಡಿದೆ. ಇದರ ಮೇಲೆ ಪುಷ್ಪದಳದ ಭುವನೇಶ್ವರಿ ಅಲಂಕೃತಿಯನ್ನು ಕಾಣಬಹುದು. ಇದನ್ನು ಬಿಟ್ಟರೆ ಒಳಭಾಗದಲ್ಲಿ ಸರಳತೆಯಿಂದ ಕೂಡಿರುವುದು. ಗರ್ಭಗುಡಿಯ ಮೇಲೆ ದ್ರಾವಿಡ ಶೈಲಿಯ ಗೋಪುರ ಹೊಂದಿದ್ದು ಭಗ್ನಗೊಂಡಿರುವುದು. ಇಲ್ಲಿ ಎರಡು ದಿಕ್ಕಿಗೂ ಅನುಗುಣವಾಗಿ ಜೋಡಿಬಸವನ ವಿಗ್ರಹಗಳನ್ನು ಗಾರೆಶಿಲ್ಪದಿಂದ ರಚನೆಗೊಂಡಿರುವವು. ದೇವಾಲಯದ ವಿಸ್ತೀರ್ಣತೆಯು ೨೫x೧೫ ಉದ್ದ ಮತ್ತು ಅಗಲವನ್ನು ಒಳಗೊಂಡಿದೆ.

ಗರ್ಭಗೃಹದ ಮುಂದಿನ ಭಾಗ ಅಂತರಾಳ. ಇದು ವಿಶಾಲವಾಗಿಲ್ಲವಾದರೂ ಚಿಕ್ಕದು. ಇದರ ಮುಂದಿನ ಭಾಗ ರಂಗಮಂಟಪ. ಇದು ನಂತರದ ವೇಳೆಯಲ್ಲಿ ನಿರ್ಮಾಣಗೊಂಡಿರುವುದು. ಈ ಭಾಗವು ಬಹುತೇಕ ಇಟ್ಟಿಗೆಯಿಂದ ರಚನೆಗೊಂಡಿರುವುದು. ದೇವಾಲಯದ ಪ್ರವೇಶದ್ವಾರದಲ್ಲಿ ಮೈಸೂರು ರಾಜಮನೆತನದ ರಾಜ್ಯ ಲಾಂಛನವಾದ ಗಂಡುಭೇರುಂಡನ ಉಬ್ಬುಶಿಲ್ಪವನ್ನು ಕಾಣಬಹುದು. ಇದರಿಂದ ಈ ದೇವಾಲಯ ಮೈಸೂರು ರಾಜ ಒಡೆಯರ

ಆಳ್ವಿಕೆಯ ಅವಧಿಯಲ್ಲಿ ಜೀರ್ಣೋದ್ಧಾರವಾಗಿದೆ ಎನ್ನಬಹುದು. ಪ್ರವೇಶದ್ವಾರದ ಮೇಲ್ಭಾಗದಲ್ಲಿ ಹಾರವಿದ್ದು, ಉಳಿದಂತೆ ದೇವಾಲಯದ ನಾಲ್ಕು ದಿಕ್ಕಿಗೆ ಅನುಗುಣವಾಗಿ ಜೋಡಿಬಸವನ ಶಿಲ್ಪಗಳನ್ನು ಗಾರೆಯಿಂದ ನಿರ್ಮಿಸಿರುವರು. ಒಟ್ಟಿನಲ್ಲಿ ಇದೊಂದು ದಾನ ಗ್ರಾಮವಾಗಿರುವುದು.

೧೭. ಹುಟ್ಟುಬಂಡೆಯ ಗಣಪತಿ

ಗ್ರಾಮ	:	ಸಂಗರಶೆಟ್ಟಿಹಳ್ಳಿ
ಸ್ಥಳ ನಿರ್ದೇಶನ	:	ಹೊಲದ ಮಧ್ಯ
ಅಭಿಮುಖ	:	ಪಶ್ಚಿಮ
ಕಾಲ	:	ಕ್ರಿ.ಶ.೨೦ನೆಯ ಶತಮಾನ
ನಿರ್ಮಾಣ ಸಾಮಗ್ರಿ	:	ಕಣಶಿಲೆ

ದೇವಾಲಯವು ಗ್ರಾಮದಿಂದ ಅರ್ಧ ಕಿ.ಮೀ. ದೂರದಲ್ಲಿರುವ ಹೊಲದ ಮಧ್ಯದಲ್ಲಿರುವುದು. ಇದು ಮೂಲತಃ ಬಂಡೆಯಲ್ಲಿ ಕೊರೆದ ಶಿಲ್ಪವಾಗಿದೆ. ಇಂತಹ ಶಿಲ್ಪ ತಾಲ್ಲೂಕಿನಲ್ಲಿ ಬಹು ಅಪರೂಪವಾಗಿರುವುದಲ್ಲದೆ ನೈಸರ್ಗಿಕ ಬಂಡೆಯಾಗಿದ್ದು ಸುಮಾರು ಹತ್ತು ಅಡಿ ಉದ್ದ ಹಾಗೂ ಎರಡೂವರೆ ಅಗಲ ವಿಸ್ತೀರ್ಣತೆಯಿಂದ ಕೂಡಿದೆ. ಇದು ಗರ್ಭಗೃಹ, ಮಂಟಪ ಮತ್ತು ಶಿಖರವನ್ನು ಹೊಂದಿದೆ. ತಳಭಾಗದಿಂದ ಶಿಖರದವರೆಗೆ ಹನ್ನೊಂದು ಅಡಿ ಎತ್ತರವಿದೆ. ಕುಳಿತಿರುವ ಗಣೇಶನ ಶಿಲ್ಪದಲ್ಲಿ ವಾಹನವಾದ ಮೂಷಿಕ ನಿಂತಿರುವುದು. ಈ ಏಕಶಿಲೆ ಬಂಡೆಯ ಶಿಲ್ಪವನ್ನು ಮಹಾಮಂಡಳೇಶ್ವರ ಕುಲೋತ್ತುಂಗ ಚೋಳ ಚಂಗಾಳ್ವ ಒಡೆಯಾದಿತ್ಯನ ಆಳ್ವಿಕೆಯ ಕಾಲದಲ್ಲಿ ಗ್ರಾಮದ ಎಚೆಯನು ಗಣಪತಿಯ ವಿಗ್ರಹವನ್ನು ಪ್ರತಿಷ್ಠಾಪಿಸಿ, ಕೆರೆ ಮತ್ತು ಭೂಮಿಯನ್ನು ದಾನ[೨೭] ನೀಡಿರುವನು. ಮುಂದೆ ಈ ವಿಗ್ರಹಕ್ಕೆ ಮೈಸೂರು ರಾಜಮನೆತನದ ಆಳ್ವಿಕೆಯ ಕಾಲದಲ್ಲಿ ಅಂದರೆ ಕ್ರಿ.ಶ. ೧೯೩೨ರಲ್ಲಿ ವೀರಾಚಾರ್ಯ ಎಂಬುವರು ದೇವಾಲಯ ಅಥವಾ ಮಂಟಪವನ್ನು ನಿರ್ಮಿಸಿ ಜೀರ್ಣೋದ್ಧಾರ ಕಾರ್ಯ ಮಾಡಿರುವುದು ಅಲ್ಲಿಯ ಶಾಸನದಿಂದ ತಿಳಿದುಬರುತ್ತದೆ.

೧೮. ರಂಗನಾಥ ದೇವಾಲಯ.

ಗ್ರಾಮ	:	ಚಿಕ್ಕಹೊನ್ನೂರು
ಸ್ಥಳ ನಿರ್ದೇಶನ	:	ಬೆಟ್ಟದ ಮೇಲೆ
ಅಭಿಮುಖ	:	ಪೂರ್ವ
ಕಾಲ	:	ಕ್ರಿ.ಶ.೧೫ನೆಯ ಶತಮಾನ
ನಿರ್ಮಾಣ ಸಾಮಗ್ರಿ	:	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ

ತಾಲ್ಲೂಕಿನ ಪ್ರಾಚೀನ ಮತ್ತು ಪ್ರಮುಖ ದೇವಾಲಯ. ಇದು ಬೈಲುಕುಪ್ಪೆ ಗ್ರಾಮದಿಂದ ಪೂರ್ವಾಭಿಮುಖ ದಿಕ್ಕಿನಲ್ಲಿರುವ ಚಿಕ್ಕಹೊನ್ನೂರು ಗ್ರಾಮ ಬೆಟ್ಟದ ಮೇಲಿದೆ. ಇಲ್ಲಿಯ ಗರ್ಭಗೃಹವು ಸುಮಾರು ೧೦x೧೦ ಅಡಿ ಚದರ ಸುತ್ತಳತೆಯನ್ನು ಹೊಂದಿರುವುದು. ನಾಲ್ಕು ಮೂಲೆಯಲ್ಲಿಯೂ ಗೋಡೆಗೆ ಸೇರಿದಂತೆ ಕಂಬಗಳಿವೆ. ಮಧ್ಯಭಾಗದಲ್ಲಿ ಕಲ್ಲುಪೀಠದ ಮೇಲೆ ಆರು ಅಡಿ ಎತ್ತರವಿರುವ ನಾರಾಯಣ ವಿಗ್ರಹವಿದೆ. ದೇವಾಲಯವು ಸುಮಾರು ೧೫೦೦ ಅಡಿಗಳ ಎತ್ತರದ ಬೆಟ್ಟದ೨೮ ಮೇಲಿದೆ. ಮುಖ್ಯ ಗರ್ಭಗುಡಿಯಲ್ಲಿ ರಂಗನಾಥ ನಿಂತಿರುವ ವಿಗ್ರಹ ಮತ್ತು ಇದರ ಎಡ ಪಾರ್ಶ್ವದ ಗರ್ಭಗುಡಿಯಲ್ಲಿ ಪದ್ಮಾವತಿ ಮೂರ್ತಿಶಿಲ್ಪವಿರುವುದನ್ನು ಕಾಣಬಹುದು. ದೇವಾಲಯವು ದ್ರಾವಿಡ ಶೈಲಿಯ ಲಕ್ಷಣ ಹೊಂದಿದೆ.

ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಅಥವಾ ಸುಖನಾಸಿ ಹಾಗೂ ನವರಂಗ ಮಂಟಪದಿಂದ ಕೂಡಿದೆ. ಗರ್ಭಗುಡಿಯು ಆರು ಅಡಿ ಅಗಲ ಹಾಗೂ ಐದು ಅಡಿ ಉದ್ದ ವಿಸ್ತೀರ್ಣತೆಯಿಂದ ಕೂಡಿದೆ. ಗರ್ಭಗುಡಿಯಲ್ಲಿ ರಂಗನಾಥನ ವಿಗ್ರಹ ಆರು ಅಡಿ ಎತ್ತರವಾಗಿದ್ದು ಕೃಷ್ಣ ಶಿಲೆಯಾಗಿದೆ. ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಅಲಂಕೃತ ಎತ್ತರವಾದ ಕಿರೀಟವನ್ನು ಧರಿಸಿರುವನು. ಸೌಮ್ಯಸ್ವಭಾವದಿಂದ ನಿಂತಿದ್ದು, ವಿಶೇಷವಾಗಿ ಅಗಲವಾದ ಕಿವಿಗಳನ್ನು ಹೊಂದಿದೆ. ಎರಡು ಭುಜದ ಮೇಲೆ ಹಾಗೂ ಅಂಗೈ ಸಮೀಪ ಸೂಕ್ಷ್ಮ ಕೆತ್ತನೆಯ ಆಭರಣಗಳನ್ನು ಧರಿಸಿರುವನು. ನಾಲ್ಕು ಕೈಗಳನ್ನು ಹೊಂದಿದ್ದು, ಬಲಭಾಗದ ಮುಂದಿನ ಕೈಯಲ್ಲಿ ಯಾವುದೇ ವಸ್ತುಗಳಿರದೇ ನೀಳವಾಗಿ ಬಿಟ್ಟ ಆಭಯ ಹಸ್ತವಿರುವುದು. ಹಿಂದಿನ ಕೈಯಲ್ಲಿ ಚಕ್ರ ಹಿಡಿದಿರುವುದನ್ನು ಕಾಣಬಹುದು.

ಎಡಭಾಗದ ಮುಂದಿನ ಕೈಯನ್ನು ಉದ್ದವಾದ ಗದೆಯ ಮೇಲಿಟ್ಟುಕೊಂಡಂತೆ ಹಾಗೂ ಹಿಂದಿನ ಕೈಯಲ್ಲಿ ಶಂಖವನ್ನು ಹಿಡಿದುಕೊಂಡಿರುವುದಾಗಿದೆ. ವಿಶೇಷವಾಗಿ ಎಡಭಾಗದ ಮುಂದಿನ ಕೈಬೆರಳುಗಳು ನೀಳವಾಗಿದ್ದು, ತೋರು ಬೆರಳು ಮಾತ್ರ ಚಿಕ್ಕದಾಗಿದೆ. ತಲೆಯ ಸುತ್ತ ಹಿಂಭಾಗದಲ್ಲಿ ಸುರುಳಿಯಾಕಾರದ ಸೂಕ್ಷ್ಮ ಕೆತ್ತನೆಯಿಂದ ಕೂಡಿರುವುದನ್ನು ಕಾಣಬಹುದು. ರಂಗನಾಥನ ಎಡಭಾಗದಲ್ಲಿ ಪದ್ಮಾವತಿ ಹಾಗೂ ಬಲಭಾಗದಲ್ಲಿ ಲಕ್ಷ್ಮಿಯ ಉಬ್ಬುಶಿಲ್ಪಗಳಿರುವುದು. ರಂಗನಾಥನು ಪೀಠದ ಮೇಲಿನ ಪದ್ಮದಳದ ಮೇಲೆ ನಿಂತಿರುವನು ಹಾಗೂ ಸರಳವಾದ ಭುವನೇಶ್ವರಿ ಇದೆ. ನವರಂಗವು ೨೦x೨೦ ಅಡಿ ಚದರ ಸುತ್ತಳತೆ ಹೊಂದಿದ್ದು, ಸುತ್ತಲು ೧೬ ಕಂಬಗಳನ್ನು ಹೊಂದಿದೆ. ನವರಂಗದ ಎರಡು ಪಾರ್ಶ್ವಗಳಲ್ಲಿ ಆಂಜನೇಯ ವಿಗ್ರಹವಿದೆ. ಮತ್ತು ದೇವಾಲಯವು ವಿಜಯನಗರ ಅರಸರ ಕಾಲದ್ದಾಗಿದೆ. ಈ ದೇವಾಲಯವನ್ನು ಕ್ರಿ.ಶ.

೧೯೯೯ರಲ್ಲಿ ಅರಣ್ಯ ಇಲಾಖೆಯವರು ಜೀರ್ಣೋದ್ಧಾರ ಮಾಡಿರುವರು. ಗರ್ಭಗೃಹ, ಅಂತರಾಳ ಹಾಗೂ ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಯಾವುದೇ ಉಬ್ಬುಶಿಲ್ಪಗಳಿಲ್ಲದೆ ಸರಳವಾಗಿದೆ. ಒಂದು ವೇಳೆ ಇದ್ದರೂ ಅತಿಯಾದ ಬಣ್ಣ ಬಳಿದಿರುವುದರಿಂದ ಕಾಣಲು ಅಸಾಧ್ಯ ವಾಗಿದೆ. ಅಂತರಾಳವು ವಿಶಾಲವಲ್ಲದ ವಿಸ್ತೀರ್ಣತೆಯಿಂದ ಕೂಡಿದೆ. ಇದರಲ್ಲಿ ರಾಮಾನುಜಾ ಚಾರ್ಯ ಹಾಗೂ ವ್ಯಾಸರಾಯರ ಮೂರ್ತಿಶಿಲ್ಪಗಳು ಕಂಡುಬರುತ್ತವೆ. ರಾಮಾನುಜಾಚಾರ್ಯರ ಮೂರ್ತಿಶಿಲ್ಪವು ಎರಡು ಅಡಿ ಎತ್ತರವಾಗಿದೆ. ಇವರು ಧ್ಯಾನಮಗ್ನರಾಗಿ ದೇವರಿಗೆ ತನ್ನ ಎರಡು ಕೈಗಳಿಂದ ನಮಿಸುತ್ತಾ ಪೀಠದ ಮೇಲೆ ಕುಳಿತಿರುವರು. ಇವರ ತಲೆಯು ಬುರುಡೆಯಿಂದ ಕೂಡಿದೆ. ಇದರ ಸಮೀಪದಲ್ಲಿಯೇ ಮತ್ತೊಂದು ಮೂರ್ತಿಶಿಲ್ಪವಿದೆ. ಇದನ್ನು ವ್ಯಾಸರಾಯರು ಬೆಟ್ಟಕ್ಕೆ ಬಂದುದ್ದರ ನೆನಪಿನಾರ್ಥವಾಗಿ ಕೆತ್ತಲಾಗಿದೆ ಎಂಬ ಐತಿಹ್ಯವಿದೆ. ಈ ಶಿಲ್ಪವು ಸಹ ಎರಡು ಅಡಿ ಎತ್ತರವಾಗಿದ್ದು, ಪೀಠದ ಮೇಲೆ ಕುಳಿತಿರುವುದು. ಧ್ಯಾನಾಸ್ಥವಾಗಿದ್ದು ಬಲಭಾಗದ ಕೈ ಅಭಯಹಸ್ತದಿಂದ ಕೂಡಿದೆ. ಆದರೆ ಇವರ ತಲೆಯ ಮೇಲೆ ತುರುಬು ಅಥವಾ ಸಿಖ್ ಮಾದರಿಯ ಗಂಟು ಇರುವುದು. ಪೀಠದ ಮಧ್ಯದಲ್ಲಿ ಆಂಜನೇಯನ ಉಬ್ಬುಶಿಲ್ಪವಿದೆ.

ಪದ್ಮಾವತಿಯ ಮೂರ್ತಿಶಿಲ್ಪ ದೇವಾಲಯದ ಎರಡನೇ ಗರ್ಭಗುಡಿಯಲ್ಲಿದೆ ಮತ್ತು ನವರಂಗ ಮಂಟಪಕ್ಕೆ ಎದುರಾಗಿದೆ. ಇದು ದಕ್ಷಿಣಾಭಿಮುಖವಾಗಿ ಪದ್ಮಾಸನದಲ್ಲಿ ಕುಳಿತಿದ್ದು. ಎತ್ತರವಾದ ಕಿರೀಟವನ್ನು ಧರಿಸಿರುವುದು ಹಾಗೂ ಅಗಲವಾದ ಕಿವಿಗಳು ಇರುವವು. ಎಡಕೈಯಲ್ಲಿ ಶಂಖವನ್ನು ಹಿಡಿದು, ಬಲಗೈಯಲ್ಲಿ ಅಭಯಹಸ್ತವಿದ್ದು, ಪೀಠದ ಮೇಲೆ ಕುಳಿತಿರುವುದಾಗಿದೆ. ಶಿಲ್ಪಕ್ಕೆ ಹೊಂದಿಕೊಂಡಂತೆ ಕಮಾನು ಆಕಾರದಲ್ಲಿ ರಚನೆಯಾಗಿದೆ. ವಿಗ್ರಹದ ಹಿಂಬದಿಯಲ್ಲಿ ಕಾಮಾನು ಆಕಾರದ ಸೂಕ್ಷ್ಮ ಕೆತ್ತನೆ ಕಂಡುಬರುವುದು. ಶಿಲ್ಪವು ತುಂಬಾ ಸರಳತೆಯಿಂದ ಕೂಡಿದ್ದರೂ ವಿಶೇಷವಾಗಿ ದೇವಿಯ ತೊಡೆಯು ಸಾಮಾನ್ಯ ತೊಡೆಗಿಂತ ಅಧಿಕವಾಗಿ ದಪ್ಪವಾಗಿರುವುದಾಗಿದೆ. ಈ ಶಿಲ್ಪವು ಮೂರು ಅಡಿ ಎತ್ತರವಾಗಿದೆ.

ರಂಗನಾಥ ದೇವಾಲಯದ ನವರಂಗ ಮಂಟಪದಲ್ಲಿ ನಾಲ್ಕು ಸ್ವಾತಂತ್ರ ಕಂಬಗಳು ಇರುವವು. ನವರಂಗ ಮಂಟಪದ ಎಡ ಮತ್ತು ಬಲಭಾಗದಲ್ಲಿ ಆಂಜನೇಯನ ಉಬ್ಬುಶಿಲ್ಪ ಬಿತ್ತಿಯಲ್ಲಿ ಕಂಡುಬಂದಿವೆ. ಕಂಬವು ಪೀಠದ ಮೇಲೆ ನಿಂತಿದ್ದು, ಚೌಕಾಕಾರ ಹಾಗೂ ಇದರ ಮೇಲೆ ಎಂಟು ಮುಖಗಳು ಕಂಡುಬರುವವು. ಇದರ ಮೇಲೆ ಬೋದಿಗೆ ಇದ್ದು ದೇವಾಲಯವನ್ನು ಹೊತ್ತುನಿಂತಿರುವುದಾಗಿದೆ. ಇಲ್ಲಿಯ ಪ್ರತಿ ಕಂಬಗಳು ಏಳು ಅಡಿ ಉದ್ದ ಮತ್ತು ಐದು ಅಡಿ ದಪ್ಪದಿಂದ ಕೂಡಿರುವುದಾಗಿದೆ. ಇದರ ಮುಂದೆ ಹಜಾರವಿದೆ. ಇದರಲ್ಲಿ ಎರಡು ಸ್ವಾತಂತ್ರ

ಕಂಬಗಳಿವೆ. ಕಂಬಗಳಲ್ಲಿ ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಕಂಡುಬರದೇ ಸರಳವಾಗಿವೆ. ಇದು ನೂತನ ಲಕ್ಷ್ಮಿಯ ವಿಗ್ರಹವಾಗಿದೆ. ದೇವಾಲಯ ಒಟ್ಟು ೫೫ ಅಡಿ ಉದ್ದ ವಿಸ್ತೀರ್ಣತೆ ಹೊಂದಿದೆ. ಗರ್ಭಗೃಹದ ಮೇಲಿನ ಗೋಪುರ ಐದು ಅಡಿ ಎತ್ತರವಾಗಿದ್ದು, ಚೌಕಾಕಾರದ ರೀತಿಯಲ್ಲಿದ್ದು ಮೇಲೆರುತ್ತಾ ಕಿರಿದಾಗಿದೆ. ಇದರ ಮೇಲೆ ಕಳಸವಿದೆ. ಮೂಲತಃ ಗೋಪುರವು ಗಾರೆಯಿಂದ ನಿರ್ಮಿತವಾಗಿದ್ದು ಇಂದು ಹೊಸ ರೀತಿಯಲ್ಲಿ ನಿರ್ಮಿತಗೊಂಡಿದೆ. ದೇವಾಲಯ ಪ್ರವೇಶದ್ವಾರದ ಎರಡು ಭಾಗದ ಮೂಲೆಯಲ್ಲಿ ಒಂದೇ ಶಿರ ಎರಡು ದೇಹದ ಬಸವೇಶ್ವರನ ಮೂರ್ತಿಶಿಲ್ಪಗಳಿರುವುದನ್ನು ಕಾಣಬಹುದು.

ದೇವಾಲಯದ ಮುಂದೆ ಪಾದ ಶಿಲ್ಪವಿರುವುದು. ಇದನ್ನು ರಂಗನಾಥನ ಪಾದಗಳೆಂದು ಸ್ಥಳೀಯ ನಂಬಿಕೆ. ಇದರ ಸಮೀಪದಲ್ಲಿಯೇ ಆರು ನಾಗಶಿಲ್ಪಗಳು ಇರುವವು. ಬೆಟ್ಟದ ಮೇಲೆ ಒಂದು ಚಿಕ್ಕ ಪುಷ್ಕರಣಿ ಮತ್ತು ದೇವಾಲಯದ ಹಿಂಬದಿಯಲ್ಲಿ ಒದು ಗುಹೆ ಇದೆ. ಇದು ಅರ್ಧಬೆಟ್ಟದಲ್ಲಿ ಕಂಡುಬಂದಿದೆ. ಆದರೆ ಯಾವುದೇ ವಿಗ್ರಹಗಳು ಕಂಡುಬರುವುದಿಲ್ಲ. ಪ್ರಾಚೀನ ಕಾಲದಲ್ಲಿ ನಿರ್ಮಾಣಗೊಂಡ ಭೈರವೇಶ್ವರ ದೇವಾಲಯ ಹೊನ್ನೂರು ಗ್ರಾಮದಲ್ಲಿ ಅಥವಾ ಬೆಟ್ಟದ ತಳಭಾಗದಲ್ಲಿ ಇರುವುದು. ಇಂದು ದೇವಾಲಯ ಇದ್ದುದಕ್ಕೆ ಸಾಕ್ಷಿಯಾಗಿ ಕಂಬಗಳನ್ನು ಬಿಟ್ಟರೆ ಯಾವುದೇ ರೀತಿಯ ಕುರುಹುಗಳು ಕಂಡುಬರುವುದಿಲ್ಲ. ಪ್ರಸ್ತುತ ದಿನಗಳಲ್ಲಿ ಇದೊಂದು ಪ್ರಾಚ್ಯಾ ಅವಶೇಷಗಳಾಗಿದೆ.

೧೯. ರಾಮ ದೇವಾಲಯ

ಗ್ರಾಮ	:	ಬೆಟ್ಟದಪುರ
ಸ್ಥಳ ನಿರ್ದೇಶನ	:	ಗ್ರಾಮದ ಮಧ್ಯಭಾಗ
ಅಭಿಮುಖ	:	ಪೂರ್ವ
ಕಾಲ	:	೧೫ನೆಯ ಶತಮಾನ
ನಿರ್ಮಾಣ ಸಾಮಗ್ರಿ	:	ಗಾರೆ, ಇಟ್ಟಿಗೆ ಶಿಲೆ,

ರಾಮದೇವಾಲಯ ಬೆಟ್ಟದಪುರ ಗ್ರಾಮದ ಕೇಂದ್ರಭಾಗದಲ್ಲಿದೆ. ಇದು ಉತ್ಸವ ಮಲ್ಲಿಕಾರ್ಜುನ ದೇವಾಲಯದ ಹಿಂದೆ ಇದ್ದು, ಗರ್ಭಗೃಹ, ಅಂತರಾಳ, ನವರಂಗಗಳನ್ನು ಒಳಗೊಂಡು ಪೂರ್ವಾಭಿಮುಖವಾಗಿದೆ. ಅಧಿಷ್ಠಾನದ ಮೇಲೆ ದೇವಾಲಯ ನಿರ್ಮಿತಗೊಂಡಿದ್ದು ಇಂದು ಮಣ್ಣಿನಿಂದ ಮುಚ್ಚಿರುವುದು. ವೈಷ್ಣವ ದೇವಾಲಯವಾಗಿರುವ ಈ ಗರ್ಭಗೃಹದ ಸುತ್ತ ಪ್ರದಕ್ಷಣೆ ಪಥ ಇಲ್ಲದಿರುವುದು ಮತ್ತು ದೇವಾಲಯವನ್ನು ತಕ್ಷಣ ನೋಡಿದಾಗ

ವಿಜಯನಗರ ಕಾಲದ ಸ್ತಂಭಗಳ ಲಕ್ಷಣ, ಗರ್ಭಗೃಹ, ಅಂತರಾಳ ನವರಂಗಗಳು ಕಂಡುಬಂದಿವೆ. ದೇವಾಲಯದ ಮೇಲ್ಭಾಗದ ಸುತ್ತ ಇಂಡೋ-ಇಸ್ಲಾಮಿಕ್ ಶೈಲಿಯ ಗೊಮ್ಮಟಗಳು ಹಾಗೂ ಇಸ್ಲಾಮಿಕ್ ಶೈಲಿಯ ಕಮಾನುಗಳನ್ನು ಒಳಗೊಂಡ ಏಕಕೂಟ ದೇವಾಲಯವಾಗಿದೆ.

ಗರ್ಭಗೃಹ ಚಿಕ್ಕದಾಗಿದ್ದು ಮೂಲವಿಗ್ರಹವು ಸ್ಥಳಾಂತರಗೊಂಡಿದೆ. ರಾಮ, ಲಕ್ಷ್ಮಣ, ಸೀತೆಯ ವಿಗ್ರಹಗಳನ್ನು ಸ್ಥಳೀಯ ಜನತೆ ಪ್ರತಿಷ್ಠಾಪನೆ ಮಾಡಿರುವರು. ಗರ್ಭಗೃಹದ ಮೇಲ್ಭಾಗ ತ್ರಿಭುಜಕಾರದಲ್ಲಿದ್ದು ಮೇಲೆ ದ್ರಾವಿಡ ಶೈಲಿಯ ಗೋಪುರವಿದೆ. ಗರ್ಭಗೃಹದ ಬಾಗಿಲುವಾಡವು ಸುಂದರವಾಗಿದ್ದು ಲಾಲಟಬಿಂಬದಲ್ಲಿ ಪುಷ್ಪಾಲಂಕಾರ ಒಳಗೊಂಡಿರುವುದಲ್ಲದೇ ಯಾವುದೇ ರೀತಿಯ ದ್ವಾರಪಾಲಕರ ಶಿಲ್ಪಗಳಿರುವುದಿಲ್ಲ. ಗರ್ಭಗೃಹದ ಮುಂದಿನ ಭಾಗವೇ ಅಂತರಾಳ. ಇದು ಆಯಾತಕಾರವಾಗಿದ್ದು. ಅಂತರಾಳದಲ್ಲಿ ಯಾವುದೇ ವಿಗ್ರಹಗಳು ಕಂಡುಬರುವುದಿಲ್ಲ ಮತ್ತು ಇದರ ಬಾಗಿಲುವಾಡವು ಅಲಂಕೃತದಿಂದ ಕೂಡಿದ್ದು ಲಲಾಟಬಿಂಬದಲ್ಲಿ ಪುಷ್ಪಾಲಂಕಾರದ ಚಿತ್ರವನ್ನು ಒಳಗೊಂಡಿದೆ. ಅಂತರಾಳದ ಮುಂದಿನ ಭಾಗವೇ ನವರಂಗಮಂಟಪ. ಇದರಲ್ಲಿ ೨೫X೨೫ ಅಡಿ ಚದುರ ಸುತ್ತಳತೆ ಹೊಂದಿದ್ದು ಉತ್ತರ ಮತ್ತು ದಕ್ಷಿಣದಿಕ್ಕಿಗೆ ಎರಡು ಕಂಬಗಳ ಸಾಲುಗಳಿವೆ. ಒಂದೊಂದು ಸಾಲಿನಲ್ಲಿ ನಾಲ್ಕು ಕಂಬಗಳಂತೆ ಒಟ್ಟು ಹದಿನಾರು ಕಂಬಗಳು ಕಂಡುಬಂದಿವೆ. ಆದರೆ ಈ ಕಂಬಗಳ ಮೇಲೆ ಯಾವುದೇ ರೀತಿಯ ಚಿತ್ರಗಳ ಕೆತ್ತನೆ ಇರುವುದಿಲ್ಲ. ಮತ್ತು ಮೇಲ್ಚಾವಣೆಯನ್ನು ಹೊತ್ತು ನಿಂತಿವೆ. ಅಲ್ಲದೆ ಸ್ತಂಭಗಳ ಬೋದಿಗೆಗಳು ಸರಳವಾಗಿವೆ.

೨೦. ಆಂಜನೇಯ ದೇವಾಲಯ

ಗ್ರಾಮ	: ಕಿತ್ತೂರು
ಸ್ಥಳ ನಿರ್ದೇಶನ	: ಗ್ರಾಮದ ಕೇಂದ್ರಭಾಗ
ಅಭಿಮುಖ	: ದಕ್ಷಿಣ
ಕಾಲ	: ಕ್ರಿ.ಶ.೧೫ನೆಯ ಶತಮಾನ
ನಿರ್ಮಾಣ ಸಾಮಗ್ರಿ	: ಗ್ರಾನೈಟ್ ಶಿಲೆ

ಆಂಜನೇಯ ದೇವಾಲಯ ಕಿತ್ತೂರು ಗ್ರಾಮದ ಏಕಕೂಟ ದೇವಾಲಯ. ಗರ್ಭಗೃಹದಲ್ಲಿ ಆಂಜನೇಯ ಮೂರ್ತಿಶಿಲ್ಪ ಇದೆ. ದೇವಾಲಯವು ಗರ್ಭಗೃಹ ಮತ್ತು ಮುಖಮಂಟಪ ಒಳಗೊಂಡಿರುವುದು. ಗಜಗಳು ಅದಿಷ್ಠಾನದಲ್ಲಿ ಇಡೀ ದೇವಾಲಯವನ್ನು ಹೊತ್ತು ನಿಂತಿರುವಂತೆ ಹೊರಭಾಗದಲ್ಲಿ ಉಬ್ಬುಶಿಲ್ಪವನ್ನು ಕೊರೆಯಲಾಗಿದೆ. ಗರ್ಭಗೃಹದ ಮೇಲೆ ಕಮಲಾಕಾರದ ಕೆತ್ತನೆಯಿರುವುದು. ಬಾಗಿಲವಾಡದ ಮೇಲೆ ಗಜಲಕ್ಷ್ಮಿ ಉಬ್ಬುಶಿಲ್ಪವಿದ್ದು ವೈಷ್ಣವ ದ್ವಾರಪಾಲಕರ

ಶಿಲ್ಪಗಳು ಸುಂದರವಾಗಿದ್ದು ಗರ್ಭಗೃಹವನ್ನು ರಕ್ಷಿಸುವಂತಿದೆ. ಬಾಗಿಲುವಾಡ ಮತ್ತು ಸಮೀಪದ ಬಿತ್ತಿಯು ಸೂಕ್ಷ್ಮ ಅಲಂಕರಣೆಯಿಂದ ಕೂಡಿದೆ. ಹಜಾರದಲ್ಲಿ ಎಂಟು ಸ್ತಂಭಗಳಿದ್ದು ಚೌಕಕಾರದ ಅಲಂಕಾರವನ್ನು ಹೊಂದಿರುವವು ಮತ್ತು ಇಲ್ಲಿಯ ಪ್ರತಿಯೊಂದು ಸ್ತಂಭವು ಹದಿನೈದು ಇಂಚು ಉದ್ದವಿದೆ. ದೇವಾಲಯ ೩೦೫ ಇಂಚು ಉದ್ದವಾಗಿದ್ದು ೧೨೦ ಇಂಚು ಅಗಲವಾದ ವಿಸ್ತೀರ್ಣವನ್ನು ಒಳಗೊಂಡಿದೆ. ದೇವಾಲಯದ ಎಡಭಾಗದ ಹಜಾರದ ಹೊರಭಾಗದ ಬಿತ್ತಿಯಲ್ಲಿ ಮೀನುಗಳು ಪರಸ್ಪರ ಮುತ್ತಿಕ್ಕುವ ರೀತಿಯಲ್ಲಿದ್ದು ಇದರ ತಳಭಾಗದಲ್ಲಿ ಒಂದು ಮೀನಿನ ಉಬ್ಬುಶಿಲ್ಪವಿದೆ. ಹಜಾರದ ಮುಂದಿನ ಸ್ತಂಭಗಳಲ್ಲಿ ಶ್ರೀಕೃಷ್ಣ ಕೊಳಲನ್ನು ಬಾರಿಸುತ್ತಿರುವಾಗ ಹಸು ಭಾಗಿ ನಿಂತಿರುವಂತಿದೆ. ಅಲ್ಲದೆ ವಿವಿಧ ರೀತಿಯ ಸ್ತ್ರೀ ಮತ್ತು ಮಿಥುನಶಿಲ್ಪಗಳ ಉಬ್ಬುಶಿಲ್ಪವನ್ನು ನಾವು ಕಾಣಬಹುದು. ಮೂಲ ಗರ್ಭಗೃಹದ ಆಂಜನೇಯ ವಿಗ್ರಹ ಉತ್ತಮವಾಗಿದ್ದು ಬಲಗೈಯಲ್ಲಿ ಅಭಯ ಹಸ್ತವನ್ನು ಹೊಂದಿದ್ದು ತನ್ನ ಎಡಗೈಯನ್ನು ಸೊಂಟದ ಮೇಲೆ ಇಟ್ಟಿರುವುದನ್ನು ಕಾಣಬಹುದು. ಒಟ್ಟಿನಲ್ಲಿ ವಿಜಯನಗರ ಶೈಲಿಯ[೨೯] ಲಕ್ಷಣಗಳಿಂದ ಕೂಡಿದೆ.

ಜನಪದದ ಪ್ರಕಾರ ಕಿತ್ತೂರಮ್ಮ ಸೋಮೇಶ್ವರನ ತಂಗಿ, ಒಮ್ಮೆ ಸೋಮೇಶ್ವರ ತಪಸ್ಸಿಗೆ ಕುಳಿತ ಸಂದರ್ಭದಲ್ಲಿ ಕಿತ್ತೂರಮ್ಮನನ್ನು ಹೂವ ತರಲು ಹೇಳಿದನಂತೆ. ಅದರಂತೆ ಕಿತ್ತೂರಮ್ಮ ಹೂವನ್ನು ತರಲು ಕೆರೆಯ ಬಳಿ ತೆರಳಿದಳು. ಆದರೆ ಆಕೆ ಕೆರೆಯಲ್ಲಿ ಬೇಡನು ಮೀನನ್ನು ಹಿಡಿಯುತ್ತಿರುವುದನ್ನು ನೋಡುತ್ತ ಸಮಯ ಕಳೆದಳು. ಇದರಿಂದ ಅತೃಪ್ತಗೊಂಡ ಸೋಮೇಶ್ವರ ಕಿತ್ತೂರಮ್ಮನನ್ನು ಊರಿನಿಂದ ಹೊರ ಹಾಕಿದನಂತೆ. ಆ ಕಾರಣದಿಂದ ಕಿತ್ತೂರಮ್ಮ ಗ್ರಾಮದ ಹೊರ ಭಾಗದಲ್ಲಿ ನೆಲೆಸಿದ್ದಾಳೆಂಬ ಜನರ ನಂಬಿಕೆ.

೨೧. ಆಂಜನೇಯ ದೇವಾಲಯ

ಗ್ರಾಮ	: ಚಿಕ್ಕಹೊನ್ನೂರು
ಸ್ಥಳ ನಿರ್ದೇಶನ	: ಗ್ರಾಮದ ಬೆಟ್ಟ ಪ್ರವೇಶ ಮಾರ್ಗ
ಅಭಿಮುಖ	: ಉತ್ತರ
ಕಾಲ	: ಕ್ರಿ.ಶ.೧೬ನೆಯ ಶತಮಾನ
ನಿರ್ಮಾಣ ಸಾಮಗ್ರಿ	: ಶಿಲೆ, ಇಟ್ಟಿಗೆ

ಗ್ರಾಮದ ತಳಭಾಗದಲ್ಲಿರುವ ಅತ್ಯಂತ ಪ್ರಾಚೀನ ದೇವಾಲಯ. ಇದು ಉತ್ತರಾಭಿಮುಖ ವಾಗಿದ್ದು ಕಪ್ಪುಶಿಲೆಯಿಂದ ಕೂಡಿರುವುದು. ವಿಗ್ರಹವು ೬೪ ಇಂಚು ಉದ್ದ ಮತ್ತು ೩೯

ಇಂಚು ಅಗಲ ವಿಸ್ತೀರ್ಣತೆ ಹೊಂದಿದೆ. ಆಂಜನೇಯ ಶಿಲ್ಪವು ವೀರವೇಷದಿಂದ ನಿಂತಿದ್ದು, ಎಡಗಾಲನ್ನು ಮುಂದೆ ಮತ್ತು ಬಲಗಾಲನ್ನು ಹಿಂದೆ ಹಾಕಿ ನಿಂತಿರುವುದು. ಉದ್ದನೆಯ ಬಾಲ ಹೊಂದಿದ್ದು, ಬಾಲದಲ್ಲಿ ಚಿಕ್ಕದಾದ ಮೂರು ಗಂಟೆ ಮತ್ತು ತುದಿಯಲ್ಲಿ ದೊಡ್ಡ ಗಂಟೆಯನ್ನು ಕಟ್ಟಿರುವುದಾಗಿದೆ. ಮುಖವು ಆಮೆಯ ಮುಖ ಹೋಲುವಂತಿದ್ದು, ಸೂರ್ಯ ಮತ್ತು ಚಂದ್ರನ ಉಬ್ಬುಶಿಲ್ಪಗಳಿರುವುದರ ಜೊತೆಗೆ ಶಂಖವನ್ನು ಸಹ ಕಾಣಬಹುದು. ದೇವರ ಬಲಕೈಯು 'ಎಲ್' ಆಕಾರ ಹೊಂದಿದ್ದು, ಆಭಯಹಸ್ತವನ್ನು ತೋರಿಸುತ್ತಿದೆ ಹಾಗೂ ಎಡ ಕೈಯನ್ನು ತನ್ನ ಸೊಂಟದ ಮೇಲಿಟ್ಟು ನಿಂತಿರುವಂತಿದೆ. ಬಲಭಾಗದಲ್ಲಿ ಬೀಸಣಿಕೆಯ ಉಬ್ಬು ಶಿಲ್ಪವಿರುವುದು. ದೇವಾಲಯದ ಗರ್ಭಗೃಹವು ವಿಶಾಲವಾಗಿದ್ದು, ಗರ್ಭಗೃಹದ ಭುವನೇಶ್ವರಿ ಕಮಲದ ದಳಗಳನ್ನು ಒಳಗೊಂಡಿರುವುದು. ಇದರ ಮುಂದಿನ ಭಾಗ ಹಜಾರ, ದೇವಾಲಯದ ಬಿತ್ತಿಯು ಸಂಪೂರ್ಣವಾಗಿ ಶಿಲೆಗಳಿಂದ ನಿರ್ಮಿತಿಗೊಂಡಿದೆ.

೨೨. ಚನ್ನಕೇಶವ ದೇವಾಲಯ

ಗ್ರಾಮ : ಪಿರಿಯಾಪಟ್ಟಣ

ಸ್ಥಳ ನಿರ್ದೇಶನ : ಉಪ್ಪರಗೇರಿ

ಅಭಿಮುಖ : ದಕ್ಷಿಣ

ಕಾಲ : ಕ್ರಿ.ಶ.೧೬ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಗ್ರಾನೈಟ್ ಶಿಲೆ

ಪಿರಿಯಾಪಟ್ಟಣದ ಪ್ರಾಚೀನ ಮತ್ತು ಪ್ರಮುಖ ದೇವಾಲಯ ಚನ್ನಕೇಶವ ಅಥವಾ ಕೇಶವ ದೇವಾಲಯವಾಗಿದೆ. ವಿಸ್ತೀರ್ಣ ಹಾಗೂ ಧಾರ್ಮಿಕ ಶ್ರದ್ಧೆಯನ್ನು ಗಮನಿಸಿದಾಗ ಅತ್ಯಂತ ದೊಡ್ಡ ದೇವಾಲಯವೆಂದು ಹೇಳಬಹುದು. ಪ್ರಸ್ತುತ ದಿನಗಳಲ್ಲಿ ದೇವಾಲಯವನ್ನು ರಕ್ಷಣೆ ಮಾಡದೇ ಇದ್ದರೆ ಅವನತಿಯ ದಾರಿ ಹಿಡಿಯುವುದು. ಶ್ರೀಕಂಠರಾಜಯ್ಯನವರ ಪುತ್ರನಾದ ಕುಲೋತ್ತುಂಗ ಚಂಗಾಳ್ವ ಪಿರಿಯಾರಾಜಯದೇವ ಮಹಾರಸನು, ಪ್ರಾಚೀನವಾದ ಸಿಂಗಪಟ್ಟಣವನ್ನು ಜೀರ್ಣೋದ್ಧಾರ ಮಾಡಿಸಿ ಇದರ ನೆನಪಿನಾರ್ಥವಾಗಿ ಕ್ರಿ.ಶ. ೧೫೧೧ ರಲ್ಲಿ ಚನ್ನಕೇಶವ ದೇವಾಲಯವನ್ನು ನಿರ್ಮಿಸಿದನೆಂದು ಶಾಸನಗಳಿಂದ ತಿಳಿದುಬಂದಿದೆ. ಅಂದಿನಿಂದ ಸಿಂಗಪಟ್ಟಣಕ್ಕೆ ತನ್ನ ಹೆಸರಾದ ಪೆರಿಯರಾಜಪಟ್ಟಣವೆಂದು ಕರೆಯುವಂತೆ ಜನತೆಗೆ ಆದೇಶಿಸಿದ್ದಾನೆ.[೩೦] ಇದು ದ್ರಾವಿಡ ಶೈಲಿಯಲ್ಲಿದ್ದು, ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದೆ ಮತ್ತು ಏಕಕೂಟ ಗರ್ಭಗೃಹ ಹೊಂದಿದೆ. ದೇವಾಲಯಕ್ಕೆ ಆಗಸ್ತಮುನಿ

ಭೇಟಿ ನೀಡಿರುವರು ಎಂಬ ಐತಿಹ್ಯವಿದೆ. ಇದು ಚೋಳ, ಹೊಯ್ಸಳ ಮತ್ತು ವಿಜಯನಗರ ಶೈಲಿಯ ಲಕ್ಷಣಗಳಿಂದ ಕೂಡಿದೆ. ಗರ್ಭಗೃಹ, ಸುಖನಾಸಿ ಅಥವಾ ಅರ್ಧಮಂಟಪವು ಚೋಳರ ಕಾಲದಲ್ಲಿಯೇ ನಿರ್ಮಾಣಗೊಂಡಿದೆ. ನಂತರದ ದಿನಗಳಲ್ಲಿ ನವರಂಗಮಂಟಪ ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿದೆ ಮತ್ತು ಇಲ್ಲಿರುವ ಕಂಬಗಳು ಹೊಯ್ಸಳ ಶೈಲಿಯ ಲಕ್ಷಣಗಳನ್ನು ಹೊಂದಿದೆ. ಇದರ ಮುಂದಿನ ಭಾಗ ಮುಖಮಂಟಪ. ಇದು ವಿಜಯನಗರ[೩೧] ಆಳ್ವಿಕೆಯ ಕಾಲದಲ್ಲಿ ವಿಸ್ತರಿಸಲ್ಪಟ್ಟಿರುವುದಾಗಿದೆ. ಒಟ್ಟಿನಲ್ಲಿ ಈ ದೇವಾಲಯ. ಕ್ರಿ.ಶ. ೧೬ ಮತ್ತು ೧೭ನೆಯ ಶತಮಾನದ ದೇವಾಲಯವಾಗಿದ್ದು ಉತ್ತಮ ಧಾರ್ಮಿಕ ಕೇಂದ್ರವಾಗಿತ್ತೆಂದು ಹೇಳಬಹುದು.

ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ರಂಗಮಂಟಪ, ತೆರೆದ ಮಂಟಪ ಹಾಗೂ ದೇವಾಲಯದ ಮುಂದೆ ಗೋಪುರ ರಚನೆಗೊಂಡಿರುವುದು. ಇದರ ಮುಂದಿನ ಭಾಗದಲ್ಲಿ ಗರುಡ ಸ್ತಂಭವಿದೆ. ತೆರೆದ ಮಂಟಪವು ಎರಡು ಅಡಿಗಳಷ್ಟು ಮಣ್ಣಿನಿಂದ ಮುಚ್ಚಿಕೊಂಡಿದ್ದರಿಂದ ಸ್ಥಳೀಯರು ಕ್ರಿ.ಶ. ೧೯೨ರಲ್ಲಿ ಮಣ್ಣನ್ನು ತೆಗೆದು ಹೊರಹಾಕುವುದರ ಮೂಲಕ ರಕ್ಷಣಾ ಕಾರ್ಯ ಮಾಡಿರುವರು. ದೇವಾಲಯವು ಸುಮಾರು ೧೦೦ ಅಡಿ ಉದ್ದ ಹಾಗೂ ೨೦ ಅಡಿ ಅಗಲ ವಿಸ್ತೀರ್ಣತೆಯನ್ನು ಹೊಂದಿರುವುದು. ಮೂಲ ದೇವಾಲಯವು ಪಿರಿಯಾರಾಜನ ಕಾಲದಲ್ಲಿ ನಿರ್ಮಾಣಗೊಂಡರೂ ನಂತರದ ಅರಸರ ಕಾಲದಲ್ಲಿ ತೆರೆದ ಮಂಟಪ ವಿಸ್ತಾರಗೊಡಿದೆ.

ಚನ್ನಕೇಶವ ದೇವಾಲಯದ ಗರ್ಭಗೃಹ ೧೦ ಅಡಿ ಉದ್ದ ಹಾಗೂ ೧೦ ಅಡಿ ಅಗಲ ವಿಸ್ತೀರ್ಣತೆ ಹೊಂದಿರುವುದು. ಗರ್ಭಗೃಹದ ಬಾಗಿಲುವಾಡ ಮತ್ತು ಲಲಾಟಬಿಂಬದ ಮೇಲೆ ಕೆತ್ತನೆಗಳು ಕಂಡುಬರುವುದಿಲ್ಲ. ಆದರೆ ಬಾಗಿಲುವಾಡದ ತಳಭಾಗದಲ್ಲಿ ಎಡ ಮತ್ತು ಬಲಭಾಗದಲ್ಲಿ ಒಂದೊಂದು ಸಿಂಹಗಳ ಉಬ್ಬುಶಿಲ್ಪ, ಎಡಭಾಗದ ಸಿಂಹದ ಮೇಲ್ಭಾಗದಲ್ಲಿ ನೃತ್ಯ ಮಾಡುತ್ತಿರುವ ಶಿಲ್ಪ ಹಾಗೂ ಬಲಭಾಗದಲ್ಲಿ ಪುಷ್ಪದಳದ ಉಬ್ಬುಶಿಲ್ಪವಿದೆ. ಅಂತರಾಳವು ೧೨೪ ಅಡಿ ಉದ್ದವಾಗಿದ್ದು, ೭೪ ಅಡಿ ಅಗಲ ಚಿಕ್ಕದಾಗಿರುವುದಾಗಿದೆ. ಚನ್ನಕೇಶವನ ಮೂರ್ತಿಶಿಲ್ಪ ಶಾಂತಚಿತ್ತವಾಗಿ ನಿಂತಿದೆ. ಆಭರಣಗಳಿಂದ ಅಲಂಕೃತವಾಗಿರುವ ಕಿರೀಟ ಧರಿಸಿರುವ ಈ ಶಿಲ್ಪವು ೫ ಅಡಿ ಎತ್ತರ ಹೊಂದಿದೆ. ನಾಲ್ಕು ಕೈಗಳನ್ನು ಹೊಂದಿದ್ದು, ಬಲಭಾಗದ ಕೈಯಲ್ಲಿ ಶಂಖ ಹಾಗೂ ಅಭಯಹಸ್ತವನ್ನು ಹೊಂದಿರುವುದು. ಎಡಭಾಗದ ಕೈಯಲ್ಲಿ ಚಕ್ರ ಮತ್ತು ಗದೆಯನ್ನು ಹಿಡಿದು ನಿಂತಿರುವುದಾಗಿದೆ. ಮೂಲ ಗದೆಯು ಭಗ್ನಗೊಂಡಿದ್ದರಿಂದ ಪುರೋಹಿತ ನಾಗರಾಜು ಸಿಮೆಂಟಿನಿಂದ ಮಾಡಿರುವ ಗದೆಯನ್ನು ನಿರ್ಮಿಸಿರುವರು. ಕೈಯಲ್ಲಿ ತೋಳುಬಂಧಿ,

ಕೊರಳಲ್ಲಿ ಅಲಂಕಾರಿಕ ಆಭರಣಗಳು ಹಾಗೂ ದೇಹದಲ್ಲಿ ಐಶ್ವರ್ಯಯುತ ಆಭರಣಗಳನ್ನು ಧರಿಸಿ ಸುಂದರವಾಗಿರುವ ಈ ಶಿಲ್ಪವು ಒಂದು ಅಡಿಪೀಠದ ಮೇಲೆ ನಿಂತಿದೆ. ಕಪ್ಪು ಶಿಲೆಯಿಂದ ಕೂಡಿರುವ ಸೂಕ್ಷ್ಮ ಕೆತ್ತನೆಯ ಚನ್ನಕೇಶವ ಶಿಲ್ಪವಾಗಿದೆ.

ರಂಗಮಂಟಪ ವಿಶಾಲವಾಗಿದ್ದು ನಾಲ್ಕು ಸ್ತಂಭಗಳನ್ನು ಒಳಗೊಂಡಿದೆ. ಪ್ರತಿ ಸ್ತಂಭಗಳು ಐದು ಅಡಿ ಉದ್ದವಾಗಿರುವವು. ಇವು ಸಿಲಿಂಡರಿನ ಆಕೃತಿಯನ್ನು ಹೊಂದಿದ್ದು, ನಯವಾಗಿವೆ. ರಂಗಮಂಟಪದ ಕಂಬಗಳು ಹೊಯ್ಸಳ ಶೈಲಿಯ ಲಕ್ಷಣ ಹೊಂದಿರುವವು. ರಂಗಮಂಟಪದಲ್ಲಿ ಕೇಶವ ದೇವರ ಮೂರ್ತಿಶಿಲ್ಪವಿದೆ. ಇದು ಮೂರು ಅಡಿ ಎತ್ತರ ಹೊಂದಿದ್ದು ಶಿರವು ಮುರಿದುಬಿದ್ದಿದೆ. ಈ ಶಿಲ್ಪವು ಗರ್ಭಗೃಹದಲ್ಲಿರುವ ವಿಗ್ರಹದಂತೆ ಸೌಂದರ್ಯವಾದ ಆಭರಣಗಳನ್ನು ಧರಿಸಿದೆ. ಇದರ ಸಮೀಪದಲ್ಲಿಯೇ ಆನೆಯ ಶಿಲ್ಪದ ಶಿಲೆ ಇರುವುದು. ನವರಂಗಮಂಟಪದ ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದ್ದು, ಲಕ್ಷ್ಮಿಗೆ ಎರಡು ಆನೆಗಳು ನಿಂತು ಆಶೀರ್ವಾದ ಮಾಡುತ್ತಿರುವಂತಿದೆ. ತೆರೆದ ಮಂಟಪವನ್ನು ಹಜಾರವೆಂದು ಸಹ ಕರೆಯುವರು. ಈ ಮಂಟಪ ಎರಡು ಹಂತಗಳನ್ನು ಒಳಗೊಂಡಿದೆ. ಮೊದಲನೆಯ ಭಾಗದಲ್ಲಿ ಎತ್ತರವಾಗಿದ್ದು ಜಗಲಿಯಂತೆ ಕಂಡುಬರುವುದು. ಈ ಭಾಗದಲ್ಲಿ ಎರಡು+ಎರಡು ಕಂಬಗಳು ಇರುವವು. ಕಂಬಗಳ ತಳಭಾಗದಲ್ಲಿ ಚೌಕಾಕೃತಿಯನ್ನು ಹೊಂದಿದ್ದು ಸಿಲಿಂಡರಿನ ಆಕೃತಿಯ ಲಕ್ಷಣಗಳನ್ನು ಹೊಂದಿವೆ. ಇವುಗಳ ಮೇಲೆ ಯಾವುದೇ ಶಿಲ್ಪಗಳ ಕೆತ್ತನೆ ಕಂಡುಬರುವುದಿಲ್ಲ. ಇದರ ಮುಂದೆ ತೆರೆದ ಮಂಟಪವಿದೆ. ಇದರ ಬಲ ಮತ್ತು ಎಡಭಾಗದಲ್ಲಿ ತಲ ೪+೪ ಕಂಬಗಳು ಇರುವವು. ಇವುಗಳು ಸುಮಾರು ೧೨ ಅಡಿ ಎತ್ತರವಾಗಿದ್ದು, ಚೌಕಾಕಾರ ಮತ್ತು ಮುಖಗಳನ್ನು ಹೊಂದಿವೆ. ಈ ಕಂಬಗಳ ಮೇಲೆ ವೈಷ್ಣವ ದ್ವಾರಪಾಲಕರು ಹಂಸ, ಬ್ರಾಹ್ಮಣನು ಬೋಧನೆ ಮಾಡುತ್ತಿರುವ ಶಿಲ್ಪಗಳಿವೆ.

ದೇವಾಲಯದ ಮುಂದೆ ಗೋಪುರವಿದೆ. ಲಲಾಟಬಿಂಬದಲ್ಲಿ ಲಕ್ಷ್ಮಿಯ ಉಬ್ಬುಶಿಲ್ಪ ಕೆತ್ತನೆಯಿಂದ ಕೂಡಿರುವುದು. ಬಾಗಿಲುವಾಡವು ಮೂರು ಪಟ್ಟಿಕೆಗಳನ್ನು ಹೊಂದಿದ್ದು, ಎರಡು ಪಟ್ಟಿಕೆಗಳು ಲತಾಬಳ್ಳಿಯಾಕಾರದಲ್ಲಿದ್ದು, ಮಧ್ಯದಲ್ಲಿ ಮಣಿಯಾಕಾರದ ಸಾಲುಗಳನ್ನು ಹೊಂದಿದೆ. ಗೋಪುರದ ಬಿತ್ತಿಯು ಸಂಪೂರ್ಣವಾಗಿ ಗ್ರಾನೈಟ್ ಶಿಲೆಯಿಂದ ನಿರ್ಮಿತಿಗೊಂಡಿದೆ. ಬಾಗಿಲುವಾಡದ ತಳಭಾಗದಲ್ಲಿ ಎರಡು ವೈಷ್ಣವ ದ್ವಾರಪಾಲಕರು ನಿಂತಿರುವ ಶಿಲ್ಪಗಳನ್ನು ಕಾಣಬಹುದು. ಗೋಪುರದ ಮೇಲ್ಭಾಗದಲ್ಲಿ ಇಟ್ಟಿಗೆಯಿಂದ ರಚಿತಗೊಂಡಿದ್ದ ಕಟ್ಟಡ ಅವನತಿಗೊಂಡಿರುವುದರಿಂದ ಪತ್ತೆ ಹಚ್ಚುವುದು ಕಷ್ಟಕರವಾಗಿದೆ. ಗೋಪುರದ ಮುಂದೆ ಮುರಿದುಬಿದ್ದಿರುವ ಗರುಡಸ್ತಂಭ ಇದೆ. ಈ ಸ್ಥಂಭದಲ್ಲಿ ಪಿರಿಯಾಪಟ್ಟಣದ ಸಂಸ್ಥಾಪಕನಾದ

ಪಿರಿಯಾರಾಜ ನಮಸ್ಕರಿಸುತ್ತಿರುವ ಮತ್ತು ಭಕ್ತ ಆಂಜನೇಯನ ಉಬ್ಬುಶಿಲ್ಪ ಕೆತ್ತನೆ ಉತ್ತಮವಾಗಿ ಮೂಡಿದೆ. ಸ್ತಂಭವು ಗರ್ಭಗೃಹಕ್ಕೆ ನೇರವಾಗಿ ಸ್ಥಾಪಿತವಾಗಿದ್ದರೂ ಇಂದು ಅವಶೇಷವಾಗಿರುವುದು.

೨೩. ಏಣಿಹನುಮಂತ ಗುಡಿ

ಗ್ರಾಮ : ಬೆಟ್ಟದಪುರ

ಸ್ಥಳ ನಿರ್ದೇಶನ : ಬೆಟ್ಟದಬುಡ

ಅಭಿಮುಖ : ಉತ್ತರ

ಕಾಲ : ೧೬ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಶಿಲೆ, ಮೇಲ್ಛಾವಣಿ ಕಾಂಕ್ರಿಟ್

ಬೆಟ್ಟದಪುರದ ಬೆಟ್ಟದ ಇಳಿಜಾರಿನ ಪಶ್ಚಿಮ ದಿಕ್ಕಿನಲ್ಲಿ ಆಂಜನೇಯ[೩೨] ದೇವಾಲಯವಿದೆ. ಇದು ಗ್ರಾಮದ ಆಗ್ನೇಯ ದಿಕ್ಕಿನಲ್ಲಿದ್ದು ಉತ್ತರಾಭಿಮುಖವಾಗಿದೆ. ಇದರ ತಳವಿನ್ಯಾಸವು ಚೌಕಕಾರಗಳಾಗಿದ್ದು ಗರ್ಭಗೃಹ ಮತ್ತು ತೆರದ ಮಂಟಪವನ್ನು ಮಾತ್ರ ಹೊಂದಿದೆ. ಹಿಂದೆ ಈ ಪ್ರದೇಶವು ಕೊಪ್ಪಳ ಎಂದು ಕರೆಯಲ್ಪಟ್ಟ ಸಣ್ಣ ಹಳ್ಳಿ. ಇದು ಸಣ್ಣ ಗುಡಿಸಲಿನಂತಿದ್ದು ದೇವಾಲಯದ ವಾಸ್ತು ದೃಷ್ಟಿಯಿಂದ ಅಂತಹ ಮಹತ್ವವನ್ನು ಹೊಂದಿರುವುದಿಲ್ಲ. ದೇವಾಲಯಕ್ಕೆ ಭಕ್ತರು ಆಗಮಿಸಲು ಉತ್ತರದಿಕ್ಕಿನಿಂದ ಪ್ರಾಚೀನ ಕಾಲದ ಮೆಟ್ಟಿಲುಗಳಿದ್ದು ಭಕ್ತರಿಂದ ಕಟ್ಟಲ್ಪಟ್ಟಿದೆ.

ಇಂದು ಭಕ್ತರು ಹನುಮಂತನ ಗುಡಿಗೆ ಆಧುನಿಕ ದೇವಾಲಯ ನಿರ್ಮಿಸಿದ್ದು, ಸುತ್ತಲು ಕಲ್ಲಿನಿಂದ ಗೋಡೆಯನ್ನು ನಿರ್ಮಿಸಿರುವರು. ಯಾವುದೇ ರೀತಿಯ ಭುವನೇಶ್ವರಿ ಮತ್ತು ಗೋಪುರವಿರುವುದಿಲ್ಲ. ಇದೊಂದು ಸರಳ ರೀತಿಯ ಗೋಡೆಯಾಗಿದೆ. ಆದರೆ ಇಂದು ದೇವಾಲಯವು ವಿಶಾಲವಾಗಿದ್ದು, ಗರ್ಭಗೃಹಕ್ಕೆ ನೇರವಾಗಿ ಗರುಡ ಸ್ತಂಭ ಮತ್ತು ಬಲಿಕಂಬವಿದೆ. ದೇವಾಲಯದ ಮುಂಭಾಗದಲ್ಲಿ ಸಿದ್ಧಿವಿನಾಯಕ ಮೂರ್ತಿಯಿದ್ದು, ಇದರ ಬಲ ಮತ್ತು ಎಡಭಾಗದಲ್ಲಿ ಸಿದ್ಧಿ ಬುದ್ಧಿಯ ವಿಗ್ರಹಗಳಿವೆ.

೨೪. ನಾರಾಯಣಸ್ವಾಮಿ ದೇವಾಲಯ

ಗ್ರಾಮ : ಕಿತ್ತೂರು

ಸ್ಥಳ ನಿರ್ದೇಶನ : ಗ್ರಾಮದ ಕೇಂದ್ರ ಭಾಗ

ಅಭಿಮುಖ : ಪೂರ್ವ

ಕಾಲ : ಕ್ರಿ.ಶ.೧೭ನೆಯ ಶತಮಾನ[೩೩]

ನಿರ್ಮಾಣ ಸಾಮಗ್ರಿ: ಗ್ರಾನೈಟ್ ಶಿಲೆ

ದೇವಾಲಯವು ಕಿತ್ತೂರು ಗ್ರಾಮದ ಮಧ್ಯಭಾಗದಲ್ಲಿದ್ದು ಪ್ರಾಚೀನ ವೈಷ್ಣವ ಹಾಗೂ ಏಕಕೂಟವಾಗಿದೆ. ಇದರ ಗರ್ಭಗೃಹವು ೫x೫ ಅಡಿ ಚದರ ಸುತ್ತಳತೆಯನ್ನು ಹೊಂದಿದ್ದು, ನಾಲ್ಕು ಮೂಲೆಯಲ್ಲಿ ಗೋಡೆಗೆ ಸೇರಿದಂತೆ ಕಂಬಗಳಿವೆ. ಮಧ್ಯದಲ್ಲಿ ಕಲ್ಲುಪೀಠದ ಮೇಲೆ ನಾರಾಯಣಸ್ವಾಮಿ ವಿಗ್ರಹವಿದೆ. ನಾರಾಯಣಸ್ವಾಮಿಯ ಎಡ ಮತ್ತು ಬಲಭಾಗದಲ್ಲಿ ಶ್ರೀದೇವಿ ಮತ್ತು ಭೂದೇವಿಯರ ವಿಗ್ರಹಗಳನ್ನು ಕಾಣಬಹುದು. ನಾರಾಯಣ ವಿಗ್ರಹವು ಕೃಷ್ಣ ಶಿಲೆಯಿಂದ ಕೂಡಿದ್ದು ಪೀಠದ ಮೇಲೆ ಎರಡು ಅಡಿಯಿಂದ ಎತ್ತರವಾಗಿದೆ. ಗರ್ಭಗೃಹದ ಮಧ್ಯದ ಮೇಲ್ಭಾಗದಲ್ಲಿ ಭುವನೇಶ್ವರಿ ಇದೆ. ಗರ್ಭಗೃಹದ ಬಾಗಿಲುವಾಡದ ಮೇಲೆ ಪುಷ್ಪದಳದ ಉಬ್ಬುಶಿಲ್ಪವನ್ನು ಕಾಣಬಹುದು. ಬಾಗಿಲುವಾಡವು ಶಿಲೆಯಿಂದ ಕೂಡಿದ್ದು ಸರಳ ಆಕಾರವನ್ನು ಹೊಂದಿದೆ. ಇದರ ಮುಂದಿನ ಭಾಗ ಅಂತರಾಳ. ಇದು ಸಹ ೫x೫ ಅಡಿ ಚದರ ಸುತ್ತಳತೆಯನ್ನು ಹೊಂದಿದ್ದು ಇಲ್ಲಿ ಯಾವುದೇ ರೀತಿಯ ವಿಗ್ರಹಗಳು ಕಂಡುಬರುವುದಿಲ್ಲ. ಆದರೆ ಎರಡು ಗೋಡೆ ಪಾರ್ಶ್ವಗಳಲ್ಲಿ ಮದನಿಕಾ ವಿಗ್ರಹಗಳು ಕಂಡುಬರುತ್ತವೆ. ಈ ದೇವಾಲಯ ಗರ್ಭಗೃಹ, ಅಂತರಾಳ, ದ್ವಿರಂಗ ಮಂಟಪ ಮತ್ತು ಶಿಖರವನ್ನು ಒಳಗೊಂಡಿದೆ.

ಅಂತರಾಳದ ಮುಂದಿನ ಭಾಗ ನವರಂಗ ಮಂಟಪ. ಇಲ್ಲಿಯ ಬಾಗಿಲುವಾಡವು ಸಂಪೂರ್ಣವಾಗಿ ಶಿಲೆಯಿಂದ ನಿರ್ಮಾಣಗೊಂಡಿದ್ದು ಎರಡು ಕಡೆ ದ್ವಾರಪಾಲಕರು ನಿಂತಿರುವ ಉಬ್ಬುಶಿಲ್ಪವಿದೆ. ಇದರ ಮೇಲಿನ ಭಾಗದಲ್ಲಿ ಶಂಖ, ತ್ರಿಶೂಲ ಹಾಗೂ ಚಕ್ರವಿದೆ. ಇದರ ಎಡಭಾಗದಲ್ಲಿ ಆಂಜನೇಯನ ಉಬ್ಬುಶಿಲ್ಪವಿದೆ. ಇದರ ಮುಂದೆ ಮತ್ತೊಂದು ಮಂಟಪವನ್ನು ಕಾಣಬಹುದು. ಇದು ನಂತರದ ದಿನಗಳಲ್ಲಿ ರಚನೆಗೊಂಡಿರುವುದು ಹಾಗೂ ಗಾರೆಯಿಂದ ಗೋಡೆಯನ್ನು ಕಟ್ಟಿರುವರು. ನವರಂಗದಲ್ಲಿ ಉತ್ತರ ದಿಕ್ಕಿಗೂ ಮತ್ತು ಪೂರ್ವ ದಿಕ್ಕಿಗೂ ಕೋಷ್ಟಕಗಳು ಇವೆ. ಮುಂದಿನ ಮಂಟಪದ ಬಾಗಿಲುವಾಡದ ಮೇಲೆ ಸರಳವಾದ ಹೂವಿನ ಅಲಂಕರಣೆ ಚಿತ್ರವಿದೆ ಹಾಗೂ ಪ್ರವೇಶದ್ವಾರದ ಎಡ ಹಾಗೂ ಬಲಭಾಗದಲ್ಲಿ ಆಂಜನೇಯನ ಉಬ್ಬುಶಿಲ್ಪವಿದೆ. ದೇವಾಲಯದಲ್ಲಿ ಒಟ್ಟು ೨೦ ಸ್ತಂಭಗಳಿದ್ದು ಯಾವುದೇ ರೀತಿಯ ಕೆತ್ತನೆಯಿಂದ ಕೂಡಿದ ಅಲಂಕರಣೆಗಳು ಕಂಡುಬರುವುದಿಲ್ಲ ಮತ್ತು ದೇವಾಲಯದ ಹೊರಭಾಗದ ಭಿತ್ತಿಯಲ್ಲಿಯೂ ಯಾವುದೇ ಶಿಲ್ಪಗಳು ಕಂಡುಬರುವುದಿಲ್ಲ. ಪ್ರವೇಶದ್ವಾರದ ಮೇಲಿನ ಭಾಗದ ಕೋಷ್ಟಕದಲ್ಲಿ ಒಂದು ನಾರಾಯಣನ ವಿಗ್ರಹವಿರುವುದು. ಗರ್ಭಗೃಹದ ಮೇಲಿನ ಗೋಪುರವು ಚೌಕಾಕಾರದಿಂದ ಕೂಡಿದ್ದು ಮೇಲೇರಿದಂತೆ ಕಿರಿದಾಗಿದೆ ಮತ್ತು ಇದರ ಮೇಲೆ ತಾಮ್ರದ ಕಳಸವಿದೆ.

೨೫. ಮತ್ಸ್ಯಆಂಜನೇಯ ದೇವಾಲಯ

ಗ್ರಾಮ : ಪಿರಿಯಾಪಟ್ಟಣ

ಸ್ಥಳ ನಿರ್ದೇಶನ : ಹೊರಕೋಟೆ ಹೆಮ್ಮಿಗೆ ರಸ್ತೆಯ ಬಲಭಾಗ

ಅಭಿಮುಖ : ಪೂರ್ವ

ಕಾಲ : ಕ್ರಿ.ಶ.೧೭ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಗ್ರಾನೈಟ್ ಶಿಲೆ

ಇದು ವೈಷ್ಣವ ದೇವಾಲಯವಾಗಿದ್ದು ಚಿಕ್ಕಕೆರೆಯ ಎದುರಿನಲ್ಲಿದೆ ಮತ್ತು ದೊಡ್ಡ ಉಪ್ಪರಗೇರಿಯಲ್ಲಿರುವುದು. ಇದರ ಮುಂದೆ ಅರಳಿಮರವಿದೆ. ಇದು ಏಕಕೂಟ ದೇವಾಲಯ ವಾಗಿದ್ದು ಗರ್ಭಗೃಹದಲ್ಲಿ ಮೂಲ ಆಂಜನೇಯನ ಮೂರ್ತಿಶಿಲ್ಪ ಕಪ್ಪುಶಿಲೆಯಿಂದ ಕೂಡಿದೆ. ಇಲ್ಲಿಯ ವಿಗ್ರಹವು ೫ ಅಡಿ ಎತ್ತರವಾಗಿದ್ದು ವೀರಾವೇಷದಿಂದ ನಿಂತಿರುವುದಾಗಿದೆ. ಹನುಮಂತನ ಬಾಲದಲ್ಲಿ ಐದು ಗಂಟೆಗಳಿರುವವು. ಗರ್ಭಗೃಹದ ಪ್ರವೇಶದ್ವಾರದ ಲಲಾಟ ಬಿಂಬದಲ್ಲಿ ವೈಷ್ಣವ ಉಬ್ಬಶಿಲ್ಪ ಕೆತ್ತನೆ ಅಥವಾ ಆಂಜನೇಯನ ಶಿಲ್ಪ ಕಂಡುಬರುತ್ತದೆ. ಬಾಗಿಲುವಾಡವು ವಜ್ರ ಪಟ್ಟಿಕೆಗಳಿಂದ ಅಲಂಕೃತಗೊಂಡಿದ್ದು ಸುಂದರವಾಗಿದೆ. ಬಾಗಿಲುವಾಡದ ಕೆಳಭಾಗದಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪಗಳು ಉತ್ತಮ ಆಕೃತಿಯಲ್ಲಿವೆ. ಗರ್ಭಗೃಹದ ಮೇಲೆ ಭುವನೇಶ್ವರಿ ಪುಷ್ಪದಳಗಳ ಆಕೃತಿಗಳಿವೆ. ಇದರ ಮೇಲೆ ಮೂಲ ಗೋಪುರವು ಅವನತಿ ಗೊಂಡಿದ್ದರಿಂದ ಗ್ರಾಮಸ್ಥರು ಹೊಸದಾದ ಗೋಪುರವನ್ನು ಇತ್ತೀಚಿನ ದಿನಗಳಲ್ಲಿ ನಿರ್ಮಿಸಿರುವರು. ಇದು ನಾಗರಶೈಲಿಯ ಲಕ್ಷಣವನ್ನು ಹೊಂದಿದೆ. ಈ ದೇವಾಲಯ ಕ್ರಿ.ಶ. ೧೭ನೆಯ ಶತಮಾನದಲ್ಲಿ ನಿರ್ಮಾಣಗೊಂಡಿದು, ಇಲ್ಲಿರುವ ಕಂಬಗಳು ವಿಜಯನಗರ[೩೪] ಶೈಲಿ ಲಕ್ಷಣದಿಂದ ಕೂಡಿವೆ.

ಗರ್ಭಗೃಹದ ಮುಂದೆ ತೆರೆದ ಮಂಟಪ ಅಥವಾ ಹಜಾರವಿದೆ. ಇದರಲ್ಲಿ ೪ ಕಂಬಗಳು ಸ್ವಾತಂತ್ರವಾಗಿ ನಿಂತಿವೆ. ಆದರೆ ಇತ್ತೀಚೆಗೆ ಕಂಬಗಳ ಮೇಲೆ ಸಿಮೆಂಟಿನ ರಚನೆ ಮಾಡಿರುವುದರಿಂದ ಕಂಬ ಬಹಳಷ್ಟು ದಪ್ಪವಾಗಿದ್ದು ತನ್ನ ಮೂಲ ಆಕಾರವನ್ನು ಕಳೆದುಕೊಂಡಿವೆ. ದೇವಾಲಯ ಗ್ರಾನೈಟ್ ಶಿಲೆಯಿಂದ ರೂಪಿತವಾಗಿದ್ದು, ಹೊರಭಾಗದ ಬಿತ್ತಿಯಲ್ಲಿ ಸರ್ಪ ಮತ್ತು ಆಮೆಯ ಉಬ್ಬುಶಿಲ್ಪವನ್ನು ಬಿಟ್ಟರೆ ಯಾವುದೇ ರೀತಿಯ ಕೆತ್ತನೆಗಳು ಕಂಡುಬರುವುದಿಲ್ಲ. ಕೆಲವು ವರ್ಷಗಳ ಹಿಂದೆ ದೇವಾಲಯವನ್ನು ನವೀಕರಣ ಮಾಡುವುದರ ಜೊತೆಗೆ ಶನಿದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ಈ ವಿಗ್ರಹವು ಸುಮಾರು ಐದು ಅಡಿ ಎತ್ತರ ಮತ್ತು ಕಪ್ಪುಶಿಲೆಯಿಂದ ಕೂಡಿದೆ. ದೇವಾಲಯವನ್ನು ನೋಡಿದಾಗ ತಕ್ಷಣ ಪ್ರಾಚೀನ ದೇವಾಲಯದ ಲಕ್ಷಣಗಳನ್ನು ಹೊಂದಿರುವಂತೆ ಕಾಣುವುದು. ಆದರೆ ಶನಿದೇವರ ಗರ್ಭಗುಡಿಯನ್ನು ಭಕ್ತರು

ಹೊಸದಾಗಿ ನಿರ್ಮಿಸಿರುವರು. ಪಿರಿಯಾಪಟ್ಟಣ, ಹೊನ್ನೂರಯ್ಯನಗುಡ್ಡಗಳಿಗೆ ವ್ಯಾಸರಾಯರು ಭೇಟಿ ನೀಡಿರುವರು. ಇದರ ನೆನಪಿನಾರ್ಥವಾಗಿ ಹನುಮಂತನ ಬಾಲದಲ್ಲಿ ಐದು ಗಂಟೆಗಳಿರುವವು ಎಂಬ ಐತಿಹ್ಯವಿದೆ.

೨೬. ಮಸಣಿಕಮ್ಮ ದೇವಾಲಯ

ಗ್ರಾಮ	:	ಪಿರಿಯಾಪಟ್ಟಣ
ಸ್ಥಳ ನಿರ್ದೇಶನ	:	ಸಂತೇಪೇಟೆ
ಅಭಿಮುಖ	:	ದಕ್ಷಿಣ
ಕಾಲ	:	ಕ್ರಿ.ಶ.೧೫ನೆಯ ಶತಮಾನ
ನಿರ್ಮಾಣ ಸಾಮಗ್ರಿ	:	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ.

ಮಸಣಿಕಮ್ಮ ದೇವಾಲಯ ಪಿರಿಯಾಪಟ್ಟಣದಿಂದ ಮಡಿಕೇರಿಗೆ ಹೋಗುವ ರಸ್ತೆಯ ಬಲಭಾಗದಲ್ಲಿ ಊರಿನ ಮಧ್ಯೆ ಸಂತೆಪೇಟೆಯಲ್ಲಿದೆ. ಪ್ರತಿ ಮಂಗಳವಾರ ಮತ್ತು ಶುಕ್ರವಾರ ಪೂಜಾ ಕಾರ್ಯ ನಡೆದು ಪ್ರಾಣಿ ಬಲಿ ನಡೆಯುವುದು. ಇದು ಪಿರಿಯಾಪಟ್ಟಣ ಕಾಳಗದ ಪ್ರಮುಖ ದೇವತೆ ಹಾಗೂ ಚಂಗಾಳ್ವ ಮನೆತನದ ಅರಸನಾದ ವೀರರಾಜನ ಕುಲದೇವತೆ. ಪಿರಿಯಾಪಟ್ಟಣ ಕಾಳಗದ ಅವಧಿಯಲ್ಲಿ ಉರಿಮಸಣಿ ಎಂದು ಭಕ್ತರಿಂದ ಹೆಸರು ಪಡೆದಿರುವಳು ಹಾಗೂ ಕೊಡಗಿನ ಜನ ಮಾಮ್ಮಾಯಿ ಹೆಸರಿನಿಂದ ಪೂಜಿಸುತ್ತಿದ್ದರು. ದೇವಾಲಯ ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದ್ದು ದ್ರಾವಿಡಶೈಲಿಯನ್ನು ಹೊಂದಿದೆ. ಏಕಕೂಟ ದೇವಾಲಯ ಹಾಗೂ ಶಕ್ತಿದೇವತೆಯಾಗಿದ್ದು ದಕ್ಷಿಣಾಭಿಮುಖವಾಗಿ ನಿರ್ಮಾಣಗೊಂಡಿದೆ. ಗರ್ಭಗೃಹ, ಸುಖನಾಸಿ, ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಮಸಣಿಕಮ್ಮದೇವಿ, ಜೊತೆಗೆ ಚಿಕ್ಕಮ್ಮ, ಹನ್ನಾಳಮ್ಮ, ತೋಟದಮ್ಮ, ಅಕ್ಕಪಕ್ಕದ ಜಗತಿಯಲ್ಲಿ ಸಪ್ತಮಾತೃಕೆಯರ ವಿಗ್ರಹಗಳನ್ನು ಕಾಣಬಹುದು. ದೇವಾಲಯದ ಕಂಬಗಳಲ್ಲಿ ಕೆತ್ತಿರುವ ಸಿಂಹದ ಉಬ್ಬುಶಿಲ್ಪಗಳು, ಕದಂಬರ ಲಾಂಛನವಾಗಿದ್ದು, ಈ ದೇವತೆ ಮೂಲದಲ್ಲಿ ಜೈನ ಯಕ್ಷಣಿ ಮಹಾಮಾನಸಿ ಯಾಗಿತ್ತೆಂದು[೩೫] ತಿಳಿಯುತ್ತದೆ. ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗೂ ನವರಂಗ ಮಂಟಪದಿಂದ ಕೂಡಿದೆ. ಗರ್ಭಗೃಹಕ್ಕೆ ನೇರವಾಗಿ ಬಲಿಕಂಬವಿದೆ. ಗರ್ಭಗೃಹದಲ್ಲಿ ಶಕ್ತಿ ದೇವತೆಯಾದ ಮಸಣಿಕಮ್ಮನ ಮೂರ್ತಿಶಿಲ್ಪವಿರುವುದು. ಇದಕ್ಕೆ ಇಂದು ಬೆಳ್ಳಿಕವಚವನ್ನು ಮಾಡಿ ಪೂಜಿಸುತ್ತಿರುವರು. ಇದು ಸುಮಾರು ಒಂದು ಅಡಿ ಎತ್ತರವಾಗಿದೆ. ಗರ್ಭಗೃಹ ವಿಶಾಲವಾಗಿದ್ದು, ಇದರ ಮೇಲೆ ಭುವನೇಶ್ವರಿ ಪುಷ್ಪದಳಕಾರದಲ್ಲಿದೆ. ಗುಡಿಯ ಮುಂದಿನ ಭಾಗ ಅಂತರಾಳ, ಶುಕನಾಸಿ ಗರ್ಭಗೃಹಕ್ಕಿಂತ ಚಿಕ್ಕದಾಗಿರುವುದು. ಅಂತರಾಳದಲ್ಲಿ ಯಾವುದೇ

ವಿಗ್ರಹಗಳು ಇಲ್ಲದೆ ಗರ್ಭಗೃಹ ಮತ್ತು ಅಂತರಾಳಗಳ ಪ್ರವೇಶ ದ್ವಾರಗಳಲ್ಲಿ ಯಾವುದೇ ಶಿಲ್ಪಗಳ ಕೆತ್ತನೆ ಕಂಡುಬರದೇ ಸರಳವಾಗಿವೆ.

ಅಂತರಾಳದ ಮುಂದಿನ ಭಾಗ ನವರಂಗಮಂಟಪ. ಇದು ಸರಳತೆಯಿಂದ ಕೂಡಿದೆ. ಇಲ್ಲಿಯ ಪ್ರಮುಖ ವಿಶೇಷತೆ ಎಂದರೆ ನಾಲ್ಕು ಸ್ವಾತಂತ್ರ ಕಂಬಗಳು, ಬಹುಶಃ ಗರ್ಭಗೃಹ, ಅಂತರಾಳ, ಚೋಳರ ಕಾಲದಲ್ಲಿ ರಚಿತಗೊಂಡಿದೆ. ಆದರೆ ರಂಗಮಂಟಪ ಮತ್ತು ಕಂಬಗಳು ವಿಜಯನಗರೊತ್ತರ ಕಾಲದಲ್ಲಿ ನಿರ್ಮಾಣಗೊಂಡಿರಬಹುದು. ಪ್ರತಿಕಂಬಗಳು ಆರು ಅಡಿ ಎತ್ತರ ವಿಸ್ತೀರ್ಣತೆ ಹೊಂದಿವೆ ಮತ್ತು ಸೂಕ್ಷ್ಮ ಕೆತ್ತನೆಯ ಅಲಂಕಾರದಿಂದ ರೂಪಿತವಾಗಿವೆ. ಕಂಬದ ತಳಭಾಗದಲ್ಲಿ ಚೌಕಾಕಾರ ಹೊಂದಿದ್ದು ಮೇಲಿನ ಭಾಗದಲ್ಲಿ ಶಿಲ್ಪಿಯ ಕೈಚಳಕ ಕಲಾತ್ಮಕವಾಗಿ ರೂಪಿತಗೊಂಡಿದೆ. ಹದಿನೆಂಟು ಮುಖ, ಪುಷ್ಪ ಹಾಗೂ ಲತಾಬಳ್ಳಿಗಳಿಂದ ನಿರ್ಮಾಣಗೊಂಡಿದ್ದು, ಇದರ ಮೇಲೆ ಸಿಲಿಂಡರಿನ ಆಕಾರ ಹಾಗೂ ಪುಷ್ಪ ಬೋದಿಗೆಯನ್ನು ಕಾಣಬಹುದು. ಕಂಬಗಳ ಚೌಕಾಕಾರದಲ್ಲಿ ಪುರುಷನು ಡಮರುಗವನ್ನು ಬಾರಿಸುತ್ತಿರುವ, ಗಜ, ಮೀನು, ನರ್ತಿಸುತ್ತಿರುವ ಕನ್ಯೆಯರ ಉಬ್ಬುಶಿಲ್ಪ. ಬಿಲ್ಲುಬಾಣವನ್ನು ಹಿಡಿದು ಬೇಟೆಯಾಡು ತ್ತಿರುವ ದೃಶ್ಯವಿದೆ. ಇದರ ಜೊತೆಗೆ ಮಹಿಳಾ ಸನ್ಯಾಸಿನಿಯರನ್ನು ಉಬ್ಬುಶಿಲ್ಪಗಳಲ್ಲಿ ಕೆತ್ತಲ್ಪಟ್ಟಿರುವುದು. ಹಾಗೆಯೇ ಕಂಬಗಳ ಮೇಲ್ಭಾಗದಲ್ಲಿ ವಜ್ರಪಟ್ಟಿಕೆಗಳು, ಹಂಸ, ಎಳೆಗರು ಮತ್ತು ಮೀನಿನ ಮೇಲೆ ವೀರನು ಕುಳಿತಿರುವಂತಹ ಉಬ್ಬುಶಿಲ್ಪವಿದೆ. ಒಟ್ಟಿನಲ್ಲಿ ಕಂಬಗಳು ಅತ್ಯಂತ ಸೂಕ್ಷ್ಮವಾಗಿ ರಚಿತಗೊಂಡಿವೆ.

ರಂಗಮಂಟಪದ ಮುಂದೆ ನಾಲ್ಕು ಸ್ವಾತಂತ್ರ್ಯ ಕಂಬಗಳು ಕಂಡುಬರುತ್ತವೆ. ಆದರೆ ಇಂದು ದೇವಾಲಯವನ್ನು ಆಧುನೀಕರಿಸಿರುವುದರಿಂದ ಅರ್ಧಗಂಬಗಳಾಗಿ ಮಾರ್ಪಟ್ಟಿವೆ. ಈ ಕಂಬಗಳು ಚೌಕಾಕೃತಿಯ ಮೂರು ಪಟ್ಟಿಕೆಗಳು ಹೊಂದಿದ್ದು ವಿಜಯನಗರ ಶೈಲಿಯ ಲಕ್ಷಣದಿಂದ ಕೂಡಿವೆ ಮತ್ತು ಇವರ ಕಾಲದಲ್ಲಿಯೇ ದೇವಾಲಯ ಜೀರ್ಣೋದ್ಧಾರಗೊಂಡಿದೆ. ಇಲ್ಲಿರುವ ಸಪ್ತಮಾತೃಕೆಯರ ವಿಗ್ರಹಗಳು ಹೊಯ್ಸಳ ಶೈಲಿಯ[೩೬] ಲಕ್ಷಣದಿಂದ ಕೂಡಿವೆ. ದೇವಾಲಯದ ಮೇಲೆ ನಾಲ್ಕು ಮೂಲೆಯಲ್ಲಿ ನಾಲ್ಕು ನಂದಿಯ ಶಿಲ್ಪಗಳಿವೆ. ಇವುಗಳು ಎರಡು ದೇಹ ಒಂದೇ ಶಿರದಿಂದ ಕೂಡಿದ್ದು, ಗಾರೆ ರಚನೆಯಿಂದ ನಿರ್ಮಾಣಗೊಂಡಿವೆ. ದೇವಾಲಯದ ಮೇಲಿನ ಸುತ್ತಲೂ ಇಸ್ಲಾಮಿಕ್ ಶೈಲಿಯ ಕಾಮಾನಿನ ಲಕ್ಷಣ ಹೊಂದಿದೆ. ಗರ್ಭಗುಡಿಯ ಮೇಲೆ ಎತ್ತರವಾದ ಗೋಪುರವಿದೆ. ಇದು ಸಹ ಗಾರೆ ರಚನೆಯಿಂದ ಕೂಡಿದ್ದು, ತಳಭಾಗದಿಂದ ಮೇಲೆರಿದಂತೆ ಕಿರಿದಾಗುತ್ತಾ ಸಾಗಿದೆ. ಆದರೆ ಯಾವುದೇ ರೀತಿಯ ಗಾರೆ ಶಿಲ್ಪಗಳ ರಚನೆ ಇರುವುದಿಲ್ಲ.

೨೭. ಕಾಳಿಕಾ ದೇವಾಲಯ

ಗ್ರಾಮ : ಬೆಟ್ಟದಪುರ

ಸ್ಥಳ ನಿರ್ದೇಶನ : ಸಂತೆಪೇಟೆ

ಅಭಿಮುಖ : ಪೂರ್ವ

ಕಾಲ : ಕ್ರಿ.ಶ.೧೮ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಗಾರೆ, ಇಟ್ಟಿಗೆ, ಶಿಲೆ

ದೇವಾಲಯವು ಗ್ರಾಮದ ಒಳಭಾಗದಲ್ಲಿದ್ದು ಉತ್ಸವ ಮಲ್ಲಿಕಾರ್ಜುನ ದೇವಾಲಯದ ಎಡಭಾಗದಲ್ಲಿದೆ ಮತ್ತು ಪೂರ್ವಾಭಿಮುಖವಾಗಿದ್ದು ದೊಡ್ಡ ದೇವಾಲಯವಾಗಿದೆ. ಇದರ ನೇರಕ್ಕೆ ಗರುಡಸ್ತಂಭವಿದೆ. ಇಲ್ಲಿನ ಬಹುಪಾಲು ದೇವಾಲಯಗಳಂತೆ ಇದು ಸಹ ದ್ರಾವಿಡ ಶೈಲಿಯಲ್ಲಿ ರಚಿತವಾಗಿದ್ದು ಗ್ರಾನೈಟ್ ಶಿಲೆಯಿಂದ ಕೂಡಿದೆ. ತಳವಿನ್ಯಾಸವು ಅದಿಷ್ಠಾನದ ಮೇಲ್ಭಾಗದಲ್ಲಿ ನಿರ್ಮಿತಗೊಂಡಿದೆ. ಗರ್ಭಗೃಹ, ಅಂತರಾಳ, ಮತ್ತು ನವರಂಗ ಹೊಂದಿದ್ದು ಗರ್ಭಗೃಹದ ಮೇಲ್ಭಾಗದಲ್ಲಿ ತ್ರಿಭುಜಾಕಾರದ ಭುವನೇಶ್ವರಿಯಿರುವುದು. ಇದರ ಮೇಲ್ಭಾಗದಲ್ಲಿ ದ್ರಾವಿಡಶೈಲಿ ಗೋಪುರವಿರುವುದು, ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ದ್ವಾರವನ್ನು ಗಜಾಮುಖಕಾರದ ಮೆಟ್ಟಿಲನ್ನು ಹೊಂದಿದೆ. ಬಿತ್ತಿ ಕಲ್ಲುಚಪ್ಪಡಿಯಿಂದ ಕಟ್ಟಲ್ಪಟ್ಟಿದೆ. ದ್ರಾವಿಡ ಶೈಲಿಯ ಸ್ತಂಭಗಳು ಒಳಭಾಗದಲ್ಲಿದ್ದು ದೇವಾಲಯ ಛಾವಣಿಯನ್ನು ಹೊತ್ತು ನಿಂತಿವೆ. ಮೇಲ್ಛಾವಣಿಯ ಸುತ್ತಲೂ ಅಲಂಕೃತವಾಗಿದೆ. ಬಿತ್ತಿಯಲ್ಲಿ ಸರ್ಪ, ನಂದಿ ಮತ್ತು ಶೈವ ಉಬ್ಬುಶಿಲ್ಪಗಳಿವೆ.

೨೮. ಕಿತ್ತೂರಮ್ಮ ದೇವಾಲಯ

ಗ್ರಾಮ : ಕಿತ್ತೂರು

ಸ್ಥಳ ನಿರ್ದೇಶನ : ಗ್ರಾಮದಿಂದ ಒಂದು ಕಿ.ಮೀ. ಪೂರ್ವಕ್ಕಿರುವ ಕೆರೆ ಅಂಚಿನಲ್ಲಿ

ಅಭಿಮುಖ : ಪೂರ್ವ

ಕಾಲ : ಕ್ರಿ.ಶ.೨೦ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಇಟ್ಟಿಗೆ

ಕಿತ್ತೂರು ತಾಲ್ಲೂಕಿನಲ್ಲಿ ಐತಿಹಾಸಿಕವಾಗಿ ಹಾಗೂ ರಾಜಕೀಯವಾಗಿ ಪ್ರಸಿದ್ಧಿ ಪಡೆದಿರುವ ಗ್ರಾಮವಾಗಿದ್ದು, ಜನಪದೀಯವಾಗಿ ತನ್ನ ಪ್ರಾಮುಖ್ಯತೆಯನ್ನು ಪಡೆದಿದೆ. ಜನಪದದಲ್ಲಿ

ಹತ್ತೂರು ಕೊಟ್ಟರು ಕಿತ್ತೂರು ಕೊಡನೊಲ್ಲೆ
ಕೇಳೇ ಚಾಮುಂಡಿ
ನನ್ನ ಕಿತ್ತೂರು ಕೊಟ್ಟರು ಕೊತ್ವಳ್ಳಿ ಕೊಡನೊಲ್ಲೆ
ಎಂದು ಹೇಳಿರುವಂತೆ
ಊರು ಊರಿಗೆ ಹೆಚ್ಚಿನ ಊರಂತೆ
ವೀರರಾಜ ದೊರೆಗೆ ಕೀರ್ತಿ ಊರಂತೆ!
ಕೀರ್ತಿ ಊರಿಗೆ ಪಾಳ್ಯೇಗೇರಿಯಲಾಂದ್ರೆ
ಸತ್ಯ ರಾಜರಸು
ಸತ್ಯದಿಂದ ರಾಜ್ಯ ಆಳಿದನು.
ಸತ್ಯವಂತರ ಸೀಮೆ ಕಿತ್ತೂರಿಗೆ
ಕಾವಾಲ್ಯರಂದಾರೆ
ಸತ್ಯದ ದೇವ್ತಿ ಕಿತ್ತೂರಮ್ಮ ತಾಯಿ....

ಗ್ರಾಮದ ಸ್ಥಳೀಯ ದೇವತೆಯಾದ ಕಿತ್ತೂರಮ್ಮ ಹಾಗೂ ಮೈಸೂರಿನ ಬೆಟ್ಟದ ಚಾಮುಂಡೇಶ್ವರಿ ಕಿತ್ತೂರನ್ನು ವಶಪಡಿಸಿಕೊಳ್ಳುವುದಕ್ಕೋಸ್ಕರ ನಡೆದ ಕದನವಾಗಿದೆ. ಈ ಕದನದಲ್ಲಿ ಅಂತಿಮವಾಗಿ ಮೈಸೂರಿನ ಪಾಳೆಯಗಾರರು ಕಿತ್ತೂರನ್ನು ಹಂಚಿ ಕೊಂಡಿದ್ದರಿಂದ ಕಿತ್ತೂರು ಎಂಬ ಹೆಸರು ಬಂದಿದೆಯೆಂಬ ವಾಡಿಕೆ. ಪ್ರಾಚೀನ ಕಿತ್ತೂರಮ್ಮನ ದೇವಾಲಯ ಚಿಕ್ಕದಾಗಿದ್ದು, ಮೂಲತಃ ಗರ್ಭಗೃಹ ಮತ್ತು ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಮೂಲ ಕಿತ್ತೂರಮ್ಮನ ವಿಗ್ರಹವಿದ್ದು ಒಂದು ಅಡಿ ಎತ್ತರವಿರುವುದು. ಮತ್ತು ಇದು ಕಪ್ಪುಶಿಲೆಯಿಂದ ಕೂಡಿರುವುದು. ಗರ್ಭಗೃಹದ ನೇರಕ್ಕೆ ಪ್ರವೇಶದ್ವಾರದಲ್ಲಿ ಒಂದು ಅಡಿಯ ಶಿಲ್ಪವಿದೆ. ಇದು ಕಿರೀಟವನ್ನು ಹೊಂದಿದ್ದು ಉದ್ದವಾದ ಮತ್ತು ಅಗಲವಾದ ಕಿವಿಯನ್ನು ಹೊಂದಿದೆ. ತನ್ನ ಎಡಗೈಯಲ್ಲಿ ಬಿಲ್ಲನ್ನು ಬಲಗೈಯಲ್ಲಿ ಬಾಣವನ್ನು ಹಿಡಿದು ಯುದ್ಧಕ್ಕೆ ಸಿದ್ದ ಎಂದು ನಿಂತಿರುವಂತಿದೆ. ವಿಗ್ರಹದ ಮುಖವು ದೇಹದ ಅಂಗಗಳಿಗಿಂತ ದೊಡ್ಡದು. ಆದರೆ ಇಂದು ದೇವಾಲಯವು ತನ್ನ ಪ್ರಾಚೀನತೆ ಕಳೆದುಕೊಂಡು ಸಂಪೂರ್ಣ ಆಧುನಿಕತೆ ಕಟ್ಟಡ ಹೊಂದಿದೆ. ದೇವಾಲಯದ ಮುಂಭಾಗದಲ್ಲಿ ಮೂಲ ಉಯ್ಯಾಲೆ ಕಂಬವಿದೆ. ಈ ಕಂಬವು ತಳಭಾಗದಲ್ಲಿ ಚೌಕಾಕಾರದ ದೊಡ್ಡ ಆಕೃತಿಯನ್ನು ಹೊಂದಿದ್ದು ಮೇಲೇರಿದಂತೆ ಕಿರಿದಾಗುತ್ತ ಸಾಗಿದೆ. ಹಾಗೂ ಸ್ತಂಭವು ೨೫ ಅಡಿ ಎತ್ತರವಾಗಿರುವುದು. ಇದರಲ್ಲಿ ವಾರ್ಷಿಕವಾಗಿ ನಡೆಯುವ ದೇವರ ಉತ್ಸವಗಳಲ್ಲಿ ದೇವರ ವಿಗ್ರಹವನ್ನು ಇಟ್ಟು ಪೂಜಿಸುತ್ತ ಬರುತ್ತಿರುವರು. ಕಿತ್ತೂರಮ್ಮನ

ದೇವಾಲಯದ ಪೂಜಾ ಕಾರ್ಯವನ್ನು ಪರಿಶಿಷ್ಟ ಪಂಗಡ ಅರ್ಚಕರು ನೆರವೇರಿಸಿಕೊಂಡು ಬರುತ್ತಿರುವರು. ಏಕೆಂದರೆ ಕಿತ್ತೂರಮ್ಮ ಬೆಸ್ತ ಸಮುದಾಯದವಳು ಎಂಬ ನಂಬಿಕೆ. ದೇವಾಲಯ ಪೂರ್ವಾಭಿಮುಖ ಮತ್ತು ಊರ ಹೊರಗಿದೆ.

ಗುಹಾ ರಚನೆಗಳು

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ದೇವಾಲಯಗಳಲ್ಲಿ ರಚನೆಯಲ್ಲದ ಕೊರೆದ ಗುಹಾ ದೇವಾಲಯಗಳು ಕಡಿಮೆ ಸಂಖ್ಯೆಯಲ್ಲಿವೆ. ಆದರೆ ಪಲ್ಲವರಂತಾಗಲೀ, ತಮ್ಮ ಅಧಿರಾಜರಾಗಿದ್ದ ಚಾಲುಕ್ಯ ಅಥವಾ ರಾಷ್ಟ್ರಕೂಟರ ಗುಹಾ ರಚನೆಗಳಂತೆ ಈ ಪರಿಸರದಲ್ಲಿ ಇಲ್ಲ. ಆದರೂ ಗುಹಾ ದೇವಾಲಯಗಳನ್ನು ಕೊರೆಯಿಸಲು ಇವರು ಪ್ರಯತ್ನಿಸಿದ್ದುದುಂಟು.

೨೯. ಪಾಪನಾಶಿನಿ ಗುಹೆ

ಗ್ರಾಮ : ಬೆಟ್ಟದಪುರ

ಸ್ಥಳ ನಿರ್ದೇಶನ : ಆಂಜನೇಯ ದೇವಾಲಯ

ಅಭಿಮುಖ : ಪಶ್ಚಿಮ

ಕಾಲ : ಕ್ರಿ.ಶ.೧೭ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಶಿಲೆ,

ಪಾಪನಾಶಿನಿ ಗುಹೆ ಮಲ್ಲಿಕಾರ್ಜುನ ಬೆಟ್ಟದ ಪಶ್ಚಿಮಕ್ಕಿರುವ ಆಂಜನೇಯ ದೇವಾಲಯದ ತಳಭಾಗದಲ್ಲಿದೆ. ಗುಹೆಗೆ ಪಶ್ಚಿಮಾಭಿಮುಖ ದ್ವಾರವಿದ್ದು ಪೂರ್ವ ಭಾಗದಲ್ಲಿ ವ್ಯಕ್ತಿ ನುಸುಳಿಕೊಂಡು ಬರುವಂತಹ ಸ್ವಾಭಾವಿಕ ಮೆಟ್ಟಿಲುಗಳ ಕಿಂಡಿಯಿರುವುದು. ಪ್ರವೇಶದ್ವಾರವು ತುಂಬ ಚಿಕ್ಕದಾಗಿದ್ದು ೨'x೩'ರಷ್ಟು ಅಗಲವಾಗಿದೆ. ಸಭಾಪ್ರಾಂಗಣವೆಂದು ಕರೆಯುವಷ್ಟು ವಿಶಾಲವಾಗಿದ್ದು ೧೫'x೨೦' ರಷ್ಟು ವಿಸ್ತೀರ್ಣವುಳ್ಳದ್ದಾಗಿದೆ. ಪ್ರಾಂಗಣದಿಂದ ಉತ್ತರಕ್ಕೆ ಹೋದಂತೆ ಒಂದು ಸ್ವಾಭಾವಿಕ ಬಾಗಿಲು ಇದ್ದು ಇನ್ನೊಂದು ಗುಹೆಗೆ ದಾರಿ ಕಲ್ಪಿಸುತ್ತದೆ. ಇದರಲ್ಲಿ ಕಲ್ಲಿನಿಂದ ನಿರ್ಮಿಸಿದ ಸಮತಟ್ಟಾದ ಪ್ರದೇಶವಿದ್ದು ಪಿರಾಮಿಡ್ ಆಕಾರ ಹೊಂದಿದೆ. ಈ ಸಮತಟ್ಟಿನ ಬಲಭಾಗದಲ್ಲಿ ಒಂದು ಸಣ್ಣ ಕಿಂಡಿಯಿದ್ದು ಅಲ್ಲಿ ಇನ್ನೊಂದು ಗುಹೆಯಿರುವುದು ಮತ್ತು ವಿಸ್ತೀರ್ಣದಲ್ಲಿ ಮೊದಲನೆಯದಕ್ಕಿಂತ ಚಿಕ್ಕದು. ಈ ಸಮತಟ್ಟಿನ ತುದಿಯಲ್ಲಿ ಎರಡು ಶಿವಲಿಂಗಗಳಿದ್ದವು ಎಂದು ಮೈಸೂರು ಸರ್ಕಾರದ ಪುರಾತತ್ವ ಇಲಾಖೆಯ ವರದಿಯಲ್ಲಿ ಹೇಳಿದೆ. ಆದರೆ ಯಾವುದೇ ಲಿಂಗಗಳು ಇಂದು ಗುಹೆಯಲ್ಲಿ ಕಂಡುಬಂದಿಲ್ಲ. ಲಿಂಗದ ಪೀಠಮಾತ್ರ ಉಳಿದಿದ್ದು ಪೀಠದ ಅಳತೆಯು ೧° ರಿಂದ ೯'x೧'-೦° ವಿಸ್ತೀರ್ಣವಿದೆ. ದೊಡ್ಡ ಲಿಂಗದ ಸುತ್ತಳತೆಯು ನಾಲ್ಕೂವರೆ ಅಡಿ ಅಗಲವಿದ್ದರೆ ಏಳೂವರೆ ಅಡಿ ಉದ್ದವಿತ್ತು ಎಂದಿದೆ. ಇದು

ಚಿಕ್ಕಲಿಂಗದ ಹಿಂಭಾಗದಲ್ಲಿದ್ದು, ಅದರ ಸುತ್ತಳತೆ ಮೂರುವರೆ ಅಡಿ ಅಗಲ ಮತ್ತು ಐದೂವರೆ ಅಡಿ ಎತ್ತರವಿತ್ತೆಂದು ವರದಿಯಲ್ಲಿ ತಿಳಿಸಿದೆ. ಆದರೆ ಲಿಂಗಗಳು ಇಂದು ಕಾಣದೆ ತಳಭಾಗದ ಪೀಠ ಮಾತ್ರವಿರುವುದು. ಇದರ ತುದಿಯಲ್ಲಿ ಒಂಬತ್ತು ಶಿವಲಿಂಗಗಳಿದ್ದು ಸರ್ಪದಿಂದ ಸುತ್ತುವರಿಯಲ್ಪಟ್ಟಿದೆ. ಇದು ಬಹುತೇಕ ಕಪ್ಪು ಕಾಡುಗಲ್ಲಿನಿಂದ ಕೆತ್ತನೆಗೊಂಡಿದ್ದು ವೃತ್ತಾಕಾರವಾಗಿದೆ. ಚಿಕ್ಕ ಲಿಂಗದಲ್ಲಿ ಪಾರ್ವತಿಯ ಉಬ್ಬುಶಿಲ್ಪವಿದ್ದು ಪೀಠದ ನಾಲ್ಕು ತುದಿಗಳಲ್ಲೂ ಒಂದೊಂದು ಉಬ್ಬುಶಿಲ್ಪವಿದೆ. ಪಂಚಪಾಂಡವರು, ರಾಮ, ಲಕ್ಷ್ಮಣ, ಲವ, ಕುಶ, ಗರುಡ, ವೀರಭದ್ರ, ಭೈರವ, ಹರಿ, ಹರ, ಬ್ರಹ್ಮ, ವಿಭೀಷಣ, ಬಲಿಚಕ್ರವರ್ತಿ, ಚನ್ನಬಸವ, ನೀಲಲೋಚನೆ ಮತ್ತು ಗಣಪತಿ, ಹರಿಶ್ಚಂದ್ರ, ಚಂದ್ರಮತಿ ಉಬ್ಬುಶಿಲ್ಪಗಳ ಕೆತ್ತನೆ ಇರುವುದಲ್ಲದೇ ನರಿ, ನಾಯಿ, ಆನೆ, ಇಲಿ, ಸಿಂಹ, ಪ್ರಾಣಿ ಪಕ್ಷಿಗಳ ಕೆತ್ತನೆ ಇರುವುದು. ಲಿಂಗಕ್ಕೆ ಅಭಿಷೇಕ ಮಾಡಿದ ನೀರು ಹರಿದುಹೋಗುವ ಭಾಗದಲ್ಲಿ ಪೀಠದ ಎರಡು ಬದಿಗಳಲ್ಲಿ ಏಳು ಹೆಡೆಯ ನಾಗದೇವರನ್ನು ಕೆತ್ತಲಾಗಿದ್ದು, ತಲೆಯ ಭಾಗದಲ್ಲಿ ಕಿವಿಯೋಲೆ, ಸರ, ಆಭರಣಗಳುಳ್ಳ ಒಂದು ಸ್ತ್ರೀಯ ಉಬ್ಬುಶಿಲ್ಪವಿದ್ದು ಪೀಠದ ಮೇಲೆ 'ಸುಬ್ರಮಣ್ಯದೇವ' ಎಂದು ಕೊರೆಯಲಾಗಿದೆ.

ಪೀಠದಲ್ಲಿರುವ ನಾಗದೇವರ ಹೆಡೆಗಳ ಎಡಭಾಗದಲ್ಲಿ ಉಚ್ಛಿಷ್ಠ ಗಣಪತಿ ಅಥವಾ ಶಕ್ತಿಗಣಪತಿಯ ಉಬ್ಬುಶಿಲ್ಪವಿದೆ. ತೊಡೆಯ ಮೇಲೆ ನಗ್ನ ಮಹಿಳೆಯ ಉಬ್ಬುಶಿಲ್ಪವಿದೆ. ಇದರ ಕೆಳಗೆ ಜಿನ ಎಂದು ಕೆತ್ತಲ್ಪಟ್ಟಿರುವುದರಿಂದ ಹಿಂದೂ ಮತ್ತು ಜೈನರ ಧಾರ್ಮಿಕ ಸಹಿಷ್ಣುತೆ ತೋರಿಸುತ್ತದೆ. ಪ್ರಾಣಿ–ಪಕ್ಷಿಗಳ ಚಿತ್ರವಿರುವುದು ಅಸ್ಪಷ್ಟವಾದರೂ, ಜೈನ ಧರ್ಮದ ಪ್ರಭಾವವನ್ನು ಸೂಚಿಸುತ್ತದೆ. ಈ ರೀತಿಯಾದ ಕೆತ್ತನೆಯು ನಮ್ಮ ರಾಜ್ಯದಲ್ಲಿ ಬೇರೆ ಎಲ್ಲಿಯೂ ಕಂಡುಬಂದಿಲ್ಲ ಮತ್ತು ಆಗಮ ಶಾಸ್ತ್ರಗಳಲ್ಲಿಯೂ ಈ ರೀತಿಯ ಶಿಲ್ಪಗಳ ಉಲ್ಲೇಖವಿಲ್ಲವೆಂದು ಕಂಡುಬಂದಿದೆ. ಗುಹಾಲಯವನ್ನು ದೊಡ್ಡಕಾಡುಗಲ್ಲಿನಿಂದ ಮಣ್ಣು ಜಾರದಂತೆ ಮತ್ತು ನೈಸರ್ಗಿಕವಾಗಿ ಕೊರೆದಿರುವಂತೆ ಕಾಣುವುದು. ಗುಹಾಲಯವು ಇತರೆ ಎಲ್ಲಾ ಗುಹೆಗಳಿಗಿಂತ ವಿಭಿನ್ನವಾಗಿದ್ದು ವಾಸ್ತುಶೈಲಿಯ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ ಮತ್ತು ಪ್ರವೇಶದ್ವಾರದ ಸಮೀಪದಲ್ಲಿ ಒಂದು ಸ್ತಂಭವಿದ್ದು ತಳಭಾಗದಲ್ಲಿ ಮಿಥುನ ಶಿಲ್ಪವಿದೆ.

ಏಣಿ ಹನುಮಂತ ದೇವಾಲಯದ ಬಲಬದಿಗೆ ಮತ್ತೊಂದು ಗುಹಾಲಯವಿದ್ದು ದೊಡ್ಡ ಬಂಡೆಯ ತಳಭಾಗದಲ್ಲಿ ನಿರ್ಮಿತಗೊಂಡಿದೆ. ಹತ್ತು ಅಡಿ ಉದ್ದ, ಅಗಲ, ಐದು ಅಡಿ ವಿಸ್ತೀರ್ಣ ಉಳ್ಳಂತಹ ಗುಹೆಯಾಗಿದೆ. ಇದರಲ್ಲಿ ೪' x ೫' ಮತ್ತು ೬' x ೫' ಸುತ್ತಳತೆಯ ಎರಡು ಕವಾಟಗಳಿದ್ದು, ತುಂಬಾ ಕತ್ತಲೆಯಿಂದ ಕೂಡಿರದೆ ಸ್ವಲ್ಪ ಪ್ರಮಾಣದ ಬೆಳಕಿರುವುದು ಮತ್ತು ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಉತ್ತಮ ಪ್ರದೇಶವೆಂದು ಹೇಳಬಹುದು.

ಮೂಡಲಗವಿ

ಮೂಡಲದಿಕ್ಕಿಗೆ ಗವಿ ಇರುವುದರಿಂದ ಮೂಡಲಗವಿಯೆಂದು, ಗವಿಯ ಒಳಗೆ ವೀರಭದ್ರನ ವಿಗ್ರಹವಿರುವುದರಿಂದ ವೀರಭದ್ರನ ಗವಿಯೆಂದು ಕರೆಯಲಾಗಿದೆ. ಬೆಟ್ಟತುಂಗದಿಂದ ಮಲ್ಲಿಕಾರ್ಜುನ ಬೆಟ್ಟಕ್ಕೆ ಮೆಟ್ಟಿಲು ಹತ್ತುವ ಸಮೀಪದಲ್ಲಿದೆ. ಇದೊಂದು ಬೃಹತ್ ಬಂಡೆಯಾಗಿದ್ದು ಒಳಪ್ರವೇಶಿಸಲು ಭಯವಾಗುತ್ತದೆ. ಸಂಪೂರ್ಣ ಕತ್ತಲೆಯಿಂದ ಕೂಡಿರುವ ಈ ಗುಹೆಯಲ್ಲಿ ಪ್ರಾರಂಭದ ಎರಡು ಕೋಣೆಯಲ್ಲಿ ಮಾತ್ರ ಸ್ವಲ್ಪ ಪ್ರಮಾಣದ ಬೆಳಕಿರುವುದು. ಪ್ರವೇಶದ್ವಾರದ ಬಾಗಿಲುವಾಡವು ಸಾಮಾನ್ಯ ಕಂಬಗಳಂತೆ ಇದ್ದು ಲಲಾಟಬಿಂಬದಲ್ಲಿ ಶಿವಲಿಂಗವಿದೆ. ಪ್ರಾರಂಭದ ಕೋಣೆಯ ಬಲಬದಿಗೆ ನಂದಿ ವಿಗ್ರಹವಿರುವುದು. ಗುಹೆಯು ಹದಿನೇಳು ಅಡಿ ಉದ್ದ ಮತ್ತು ಹನ್ನೆರಡು ಅಡಿ ಅಗಲದ ವಿಸ್ತೀರ್ಣದ ವಿಶಾಲದ ಸ್ಥಳವನ್ನು ಹೊಂದಿದೆ. ಬಲಬದಿಯಲ್ಲಿ ೬' x ೬' ಮತ್ತು ೮' x ೭' ವಿಸ್ತೀರ್ಣದ ಎರಡು ಗುಹೆಗಳಿವೆ. ಈ ವಿಶಾಲ ಪ್ರಾಂಗಣವು ೧೭' x ೧೮' ವಿಸ್ತೀರ್ಣದ ಇನ್ನೊಂದು ಗುಹೆಗೆ ಹೋಗುತ್ತದೆ. ಈ ದಾರಿಯಲ್ಲಿ ವಿಶಾಲವಾದ ಬಂಡೆಗಳು ಕಂಡುಬರುತ್ತವೆ. ಮೂರನೆಯ ಪ್ರಾಂಗಣವು ೮' x ೮' ವಿಸ್ತೀರ್ಣವಿದ್ದು, ವೀರಭದ್ರ ದೇವರ ಮೂರ್ತಿಯಿದೆ. ಇದರ ಕೋಣೆಯ ಎಡಬದಿಗೆ ಮುಂಭಾಗದಲ್ಲಿ ೧೫' x ೧೦' ಮತ್ತು ಹಿಂಬದಿಗೆ ೬' x ೭' ವಿಸ್ತೀರ್ಣವುಳ್ಳ ಇನ್ನೊಂದು ಕೋಣೆಯಲ್ಲಿ ಒಂದು ಲಿಂಗವಿದೆ ಮತ್ತು ದ್ವಾರದ ಎಡಭಾಗದಲ್ಲಿರುವ ಪೀಠದಲ್ಲಿ ಶೈವ ಧರ್ಮದ ಉಬ್ಬುಶಿಲ್ಪಗಳಿವೆ. ಗವಿಗೆ ಬೆಟ್ಟದಿಂದ ತಲುಪಲು ಬಹಳಷ್ಟು ಕಷ್ಟ ಅಲ್ಲದೇ ಸ್ಥಳೀಯ ಜನತೆ ಇದನ್ನು ಹುಲಿ ಗವಿಯೆಂದು ಸಹ ಕರೆಯುತ್ತಾರೆ. ಗವಿಯ ಮುಂದೆ ಸ್ವಲ್ಪ ಸಮತಟ್ಟಾದ ಪ್ರದೇಶವಿದೆ.

ಮೂಡಲಗವಿಯ ದಕ್ಷಿಣ ದಿಕ್ಕಿಗೆ ನೂರು ಅಡಿ ಎತ್ತರದಲ್ಲಿ ಕನಕ ಗವಿ ಇದೆ. ಪ್ರವೇಶ ದ್ವಾರದಲ್ಲಿ ಒಂದುವರೆ ಅಡಿ ಕಿಂಡಿಯಿದ್ದು ಕಿಂಡಿಯ ಒಳಗೆ ಹೋಗಬೇಕಾದರೆ ನಿಧಾನವಾಗಿ ಹೆಜ್ಜೆಯನ್ನಿಡುತ್ತಾ ಕಲ್ಲುಗಳ ಮೇಲೆ ನಡೆಯಬೇಕು. ಇಲ್ಲಿರುವ ಒಂದು ಶಾಸನದ ಪ್ರಕಾರ ಕೃತಕ ಗುಹೆಗಳನ್ನು ಹರದೂರಿನ ಕಂಕಾಲದೇವನು ಋಷಿಮುನಿಗಳ ವಾಸ್ತವ್ಯಕ್ಕಾಗಿ ನಿರ್ಮಿಸಿದ ನೆಂದು ಶಾಸನ ತಿಳಿಸುತ್ತದೆ. ಮಲ್ಲಿಕಾರ್ಜುನ ಬೆಟ್ಟಕ್ಕೆ ಹತ್ತುವ ರಾಯಗೋಪುರದ ಸಮೀಪದಲ್ಲಿ ಮತ್ತೊಂದು ಗವಿ ಇರುವುದು. ಇದನ್ನು ಕಲ್ಲದೇವರ ಗವಿ ಎಂದು ಕರೆಯಲಾಗುತ್ತಿದೆ. ಈ ಗವಿಯು ಪಶ್ಚಿಮ ದಿಕ್ಕಿನಲ್ಲಿರುವ ಚಿಕ್ಕ ಗವಿ ೩' x ೬' ವಿಸ್ತೀರ್ಣ ಹೊಂದಿದ್ದು, ಇನ್ನೊಂದು ಗುಹೆಗೆ ದಾರಿಯನ್ನುಂಟು ಮಾಡಿದೆ. ಇದನ್ನು ಸ್ತ್ರೀಯರು ಮಕ್ಕಳು ಮತ್ತು ಬೆಲೆಬಾಳುವ ವಸ್ತುಗಳನ್ನು ಎರಡುನೂರು ವರ್ಷಗಳ ಹಿಂದೆ ಶತ್ರುಗಳಿಂದ ರಕ್ಷಣೆ ಪಡೆಯುವುದಕ್ಕಾಗಿ ನಿರ್ಮಿಸಲಾಗಿತೆಂದು ಹೇಳಲಾಗಿದೆ. ಬಂಡೆ ಗವಿ ವೀರಭದ್ರ ದೇವಾಲಯದ ದಕ್ಷಿಣ ದಿಕ್ಕಿನಲ್ಲಿದ್ದು

ಪಶ್ಚಿಮಾಭಿಮುಖವಾಗಿರುವುದು ಮತ್ತು ಬಂಡೆಯ ಒಳಭಾಗದಲ್ಲಿದ್ದು ಎರಡು ಕೋಣೆ ಹೊಂದಿದೆ. ಮೊದಲನೆ ಕೋಣೆಯ ಪ್ರವೇಶದ್ವಾರವು ಚಿಕ್ಕದಾಗಿದ್ದು ಒಳಹೋದಂತೆ ಕತ್ತಲೆಯಾಗಿರುವುದಲ್ಲದೆ ದಕ್ಷಿಣದಿಕ್ಕಿಗೆ ವಿಶಾಲವಾಗಿರುವುದು. ಈ ಕೋಣೆಯಿಂದ ಉತ್ತರಕ್ಕೆ ಹೋದಂತೆ ಮತ್ತೊಂದು ಗವಿ ಇದೆ. ಇದು ಮೊದಲನೆಯದಕ್ಕಿಂತ ಚಿಕ್ಕದಾಗಿದ್ದು ಎರಡು ಕೋಣೆಗಳ ನಡುವೆ ಮಣ್ಣಿನಿಂದ ಕಟ್ಟಿದ ಗೋಡೆ ಇದೆ.

ಜೈನ ವಾಸ್ತುಶಿಲ್ಪ

ದಕ್ಷಿಣ ಭಾರತಕ್ಕೆ ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಜೈನಧರ್ಮ ಪ್ರವೇಶ ಮಾಡಿದೆ. ತಮಿಳುನಾಡಿನ ಗುಹೆಗಳಲ್ಲಿ ಜೈನಮುನಿಗಳು ವಾಸಿಸುತ್ತಿದ್ದ ಉಲ್ಲೇಖಗಳು ದೊರೆಯುತ್ತವೆ. ಗುಹೆಗಳಲ್ಲಿ ಅನೇಕ ಭಕ್ತರು ಕಲ್ಲು ಹಾಸಿಗೆ ಮಾಡಿಸಿ ಅವುಗಳ ಬಳಿ ಬರೆಸಿರುವ ಶಾಸನಗಳಿಂದ ಜೈನ ಮುನಿಗಳಿಗಾಗಿ ಮೀಸಲಾಗಿದ್ದವುಗಳೆಂದು ತಿಳಿಯುತ್ತದೆ. ಈ ಶಾಸನಗಳು ಕ್ರಿ.ಪೂ. ಒಂದರಿಂದ ಕ್ರಿ.ಶ. ನಾಲ್ಕರ ಕಾಲಕ್ಕೆ ಸೇರಿದವುಗಳಾಗಿರುತ್ತವೆ. ಪಾಂಡ್ಯ ರಾಜನ ಕಥೆಯ ಪ್ರಕಾರ ದಕ್ಷಿಣಕ್ಕೆ ಬಂದ ಜೈನ ಮುನಿಗಳು ಬರಗಾಲ ಮುಗಿದ ಕೂಡಲೇ ಅಲ್ಲಿ ನಿಲ್ಲದೆ ಉತ್ತರದ ಕಡೆ ಪ್ರಯಾಣ ಬೆಳೆಸಿದರು. ಹೀಗಾಗಿ ಗುಹೆಗಳಲ್ಲಿ ಕೆಲವು ಅವಶೇಷಗಳು ಮಾತ್ರ ಉಳಿದವು. ಕ್ರಿ.ಪೂ. ಒಂದನೆಯ ಶತಮಾನ ಅಥವಾ ಕ್ರಿ.ಶ.ಪ್ರಾರಂಭದಲ್ಲಿ ರಚಿತವಾದ ಆಲಯಗಳು ಕಾಣಬರುವುದಿಲ್ಲ. ಜೈನ ಕೇವಲಿಗಳಲ್ಲಿ ಒಬ್ಬರಾದ ಭದ್ರಬಾಹು ಸುಮಾರು ಕ್ರಿ.ಪೂ.ಎರಡನೆಯ ಶತಮಾನದಲ್ಲಿ ದಕ್ಷಿಣಕ್ಕೆ ಬಂದು ಶ್ರವಣಬೆಳಗೊಳದಲ್ಲಿ ನೆಲೆಸಿ ತಮ್ಮ ದೇಹ ತ್ಯಾಗ ಮಾಡುತ್ತಾರೆ. ಇವರ ಶಿಷ್ಯ ಚಂದ್ರಗುಪ್ತ ಮುನಿ ಇಲ್ಲಿಯೇ ನೆಲಸಿ ದೇಹ ತ್ಯಾಗ ಮಾಡುತ್ತಾನೆ. ಕ್ರಿ.ಶ. ಐದನೇ ಶತಮಾನದಲ್ಲಿ ಕದಂಬ ಕಾಕುಸ್ಥನು ಪಲಾಸಿಕಾದಲ್ಲಿ (ಹಲಸಿಗೆ) ಬಸದಿಗೆ ದಾನ ನೀಡುತ್ತಾನೆ. ಅಂದರೆ ಅವನ ಕಾಲಕ್ಕಾಗಲೇ ಹಲಸಿಯಲ್ಲಿ ಬಸದಿ ಇತ್ತೆಂದು ತಿಳಿಯುತ್ತದೆ. ಹೀಗಾಗಿ ಇದು ಕರ್ನಾಟಕದಲ್ಲಿ ಮೊದಲು ರಚಿತವಾದ ಉಪಲಬ್ಧ ಜೈನಬಸದಿಯ ಉಲ್ಲೇಖವಾಗಿದೆ. ರವಿವರ್ಮನ ಶಾಸನದಲ್ಲಿ ಪಲಾಸಿಕಾದ ಜೈನವಾಸ್ತುವನ್ನು ಚೈತ್ಯಾಲಯವೆಂದು ಕರೆದಿದ್ದು ಅಲ್ಲಿನ ಜೈನ ಶ್ರಾವಕರನ್ನು ಶ್ರಮಣ ಸಂಘವೆಂದು ಕರೆದಿದೆ.

೩೦. ಜೈನ ಬಸದಿ

ಗ್ರಾಮ	:	ಬೆಟ್ಟದಪುರ
ಸ್ಥಳ ನಿರ್ದೇಶನ	:	ಕೋಟೆಬೀದಿಯ ಮಧ್ಯಭಾಗ
ಅಭಿಮುಖ	:	ಪೂರ್ವ
ಕಾಲ	:	ಕ್ರಿ.ಶ.೧೧ನೆಯ ಶತಮಾನ
ನಿರ್ಮಾಣ ಸಾಮಗ್ರಿ	:	ಗ್ರಾನೈಟ್ ಶಿಲೆ

ಈ ಜೈನ ಬಸದಿ ಇಂದು ಉತ್ಸವ ಮಲ್ಲಿಕಾರ್ಜುನ ದೇವಾಲಯವಾಗಿದ್ದು, ತಳವಿನ್ಯಾಸದಲ್ಲಿ ತೆರೆದ ಗರ್ಭಗೃಹ, ಸಭಾಂಗಣ ಒಳಗೊಂಡಿದೆ. ಪ್ರವೇಶದ್ವಾರದ ಎರಡು ಬದಿಯಲ್ಲಿ ಚಿಕ್ಕದಾದ ಕೊಠಡಿಗಳಿದ್ದು ವಾಸ್ತುಶೈಲಿ ದೃಷ್ಟಿಯಿಂದ ಪ್ರಮುಖ್ಯತೆ ಇಲ್ಲದಿರುವುದು. ಚಂಗಾಳ್ವ ಮನೆತನ ಅರಸರುಗಳು ಪ್ರಾರಂಭದಲ್ಲಿ ಜೈನರಾಗಿದ್ದರಿಂದ ವಿಕ್ರಮರಾಯ ಅಥವಾ ಚಂಗಲರಾಯನ ಕಾಲದಲ್ಲಿ ಅಂದರೆ ಹನ್ನೊಂದನೆಯ ಶತಮಾನದಲ್ಲಿ ನಿರ್ಮಾಣಗೊಂಡಿದೆ. ಇದು ದ್ರಾವಿಡ ಶೈಲಿಯ ಲಕ್ಷಣ ಹೊಂದಿದ್ದು ಗರ್ಭಗೃಹದ ಮೇಲ್ಭಾಗದಲ್ಲಿ ಗೋಪುರವಿದೆ. ಗರ್ಭಗೃಹದ ವೇದಿಕೆ ಎರಡೂವರೆ ಅಡಿ ತೆರದ ಸಭಾಂಗಣಕ್ಕಿಂತ ಎತ್ತರವಾಗಿದ್ದು ಗರ್ಭಗೃಹದಿಂದ ಮುಖಮಂಟಪದವರೆಗೆ ಒಟ್ಟು ನಲವತ್ತು ಸ್ತಂಭಗಳನ್ನು ಒಳಗೊಂಡಿದೆ. ಬಸದಿಯು ಉಪಾನ, ಗಂಟೆ, ಮತ್ತು ವೇದಿಕೆಯ ಮೇಲೆ ಕಟ್ಟಲ್ಪಟ್ಟಿದೆ. ಆದರೆ ಇದು ಮಣ್ಣಿನಿಂದ ಮುಚ್ಚಲ್ಪಟ್ಟಿದೆ. ಬಸದಿಯ ಪ್ರವೇಶದ್ವಾರದ ಬಾಗಿಲುವಾಡವು ಸರಳವಾಗಿದ್ದು ಲಲಟಾಬಿಂಬದಲ್ಲಿ ಯಾವುದೇ ಕೆತ್ತನೆ ಕಂಡುಬರುವುದಿಲ್ಲ. ಬಸದಿಯ ಬಿತ್ತಿಯು ಸಂಪೂರ್ಣವಾಗಿ ಕಲ್ಲು ಚಪ್ಪಡಿಗಳಿಂದ ಜೋಡಿಸಲಾಗಿದೆ. ಬಿತ್ತಿಯ ಒಳ ಮತ್ತು ಹೊರಭಾಗದಲ್ಲಿ ಹೆಚ್ಚಿನ ಕಲಾತ್ಮಕ ಕೆತ್ತನೆ ಇರುವುದಿಲ್ಲ. ಗರ್ಭಗೃಹದ ದಕ್ಷಿಣ ದಿಕ್ಕಿನ ಹೊರಭಾಗದಲ್ಲಿ ಬಿತ್ತಿಯ ಮೇಲೆ ಮತ್ಸ್ಯ, ಚಂದ್ರ, ಸೂರ್ಯ ಮತ್ತು ಉತ್ತರ ದಿಕ್ಕಿನಲ್ಲಿ ಹನುಮಂತ, ಬಸವನ ಶಿಲ್ಪಗಳ ಕೆತ್ತನೆಯಿರುವುದು. ಬಸದಿಯು ನೂರ ಎರಡು ಅಡಿ ಉದ್ದ ಮತ್ತು ಮೂವತ್ತೈದು ಅಡಿ ಅಗಲವನ್ನು ಹೊಂದಿ ಪೂರ್ವ ಮತ್ತು ಪಶ್ಚಿಮಾಭಿಮುಖವಾಗಿದೆ. ಎರಡು ಪ್ರವೇಶದ್ವಾರವಿದ್ದು ಗಾಳಿ ಬೆಳಕು ಬರಲು ಏಳು ಕಿಟಕಿಗಳಿದ್ದು ಮೇಲ್ಭಾಗದಲ್ಲಿ ಜೋಡಿ ಬಸವ ವಿಗ್ರಹಗಳಿವೆ. ಬಸದಿಯಲ್ಲಿರುವ ಎಲ್ಲ ಸ್ತಂಭಗಳು ಒಂದೇ ರೀತಿಯಲ್ಲಿದ್ದು ಹದಿನೈದು ಅಡಿ ಎತ್ತರವಾಗಿವೆ. ಈ ಕಂಬಗಳು ಚಂಗಾಳ್ವ ಮತ್ತು ಗಂಗ ಕಾಲದಾಗಿದ್ದು, ಇತ್ತೀಚಿನ ದಿನಗಳಲ್ಲಿ ಮೇಲ್ಭಾಗದಲ್ಲಿ ಆಧುನಿಕ ಶೈಲಿಯ ಟೈಲ್ಸ್‌ಗಳನ್ನು ಹಾಕಿರುವುದರಿಂದ ಅದರ ವಿನ್ಯಾಸವನ್ನು ಅರಿಯುವುದಕ್ಕೆ ಕಷ್ಟಕರವಾಗಿದೆ. ಕಂಬಗಳು ಚೌಕಕಾರವಾಗಿದ್ದು ಸರಳವಾದ ಬೋದಿಗೆ ಒಳಗೊಂಡಿದೆ.

೩೧. ಆದಿತೀರ್ಥಂಕರ ಬಸದಿ

ಗ್ರಾಮ : ಬೆಟ್ಟತುಂಗ

ಸ್ಥಳ ನಿರ್ದೇಶನ : ಗ್ರಾಮದ ಪ್ರವೇಶ

ಅಭಿಮುಖ : ಪೂರ್ವ

ಕಾಲ : ಕ್ರಿ.ಶ.೧೨ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಗ್ರಾನೈಟ್‌ಶಿಲೆ, ಇಟ್ಟಿಗೆ, ಗಾರೆ

ಬಸದಿಯು ಬೆಟ್ಟದಪುರ ಗ್ರಾಮಕ್ಕೆ ಪೂರ್ವದಿಕ್ಕಿಗಿರುವ ಬೆಟ್ಟತುಂಗ ಗ್ರಾಮದಲ್ಲಿದೆ. ಏಕಕೂಟ ಬಸದಿಯಾಗಿದ್ದು ಪೂರ್ವಾಭಿಮುಖವಾಗಿದೆ ಮತ್ತು ಬೆಟ್ಟದ ತಳಭಾಗದಲ್ಲಿದ್ದು ಗ್ರಾನೈಟ್ ಶಿಲೆಯಿಂದ ರಚಿತವಾಗಿದೆ. ಇದೊಂದು ಜೈನರ ದೊಡ್ಡ ಬಸದಿಯಾಗಿದ್ದು ತಲವಿನ್ಯಾಸವನ್ನು ನೋಡಿದಾಗ ಉಪಾನ, ಕಂಠ, ಉಪಪೀಠ ಮತ್ತು ವೇದಿಕೆಯ ಮೇಲೆ ಕಟ್ಟಲ್ಪಟ್ಟಿದೆ. ಅತ್ಯಂತ ಪ್ರಾಚೀನ ಬಸದಿಗಳಲ್ಲಿ ಇದು ಒಂದು. ಗರ್ಭಗೃಹ, ಅಂತರಾಳ, ನವರಂಗಮಂಟಪ, ಸಭಾಮಂಟಪ ಮತ್ತು ತೆರದ ಮಂಟಪಗಳನ್ನು ಒಳಗೊಂಡಿದೆ. ಬಸದಿಗಳಲ್ಲಿ ಅತ್ಯಂತ ಪ್ರಮುಖ ಭಾಗವಾದ ಗರ್ಭಗೃಹವು ಚೌಕಕಾರವಾಗಿದೆ. ಗರ್ಭಗೃಹದಲ್ಲಿ ಮೂಲ ಆದಿತೀರ್ಥಂಕರನ ವಿಗ್ರಹ ಸ್ಥಳಾಂತರಗೊಂಡಿದ್ದು ಪ್ರಸ್ತುತ ವೀರಭದ್ರನಮೂರ್ತಿ ಇರುವುದು. ಇದರ ಮೇಲ್ಭಾಗದಲ್ಲಿ ವೃತ್ತಾಕಾರದ ಭುವನೇಶ್ವರಿ ಇದ್ದು, ಮೇಲೆ ಹತ್ತು ಅಡಿ ದ್ರಾವಿಡ ಶೈಲಿಯ ಗೋಪುರವಿರುವುದು. ಸರಳವಾದ ಬಾಗಿಲುವಾಡ ಹೊಂದಿದ್ದು ಲಲಾಟಬಿಂಬದಲ್ಲಿ ರೇಖೆಯಾಕಾರದ ಕೆತ್ತನೆ ಇದೆ. ಬಾಗಿಲವಾಡದ ಮಧ್ಯಭಾಗದಲ್ಲಿ ಯಾವುದೇ ಉಬ್ಬುಶಿಲ್ಪಗಳು ಕಂಡುಬರುವುದಿಲ್ಲ ಮತ್ತು ಗರ್ಭಗೃಹವು ೧೦x೧೦ ಅಡಿ ಚದರ ಸುತ್ತಳತೆಯನ್ನು ಹೊಂದಿದೆ. ಗರ್ಭಗೃಹದ ನಂತರ ಭಾಗ ಅಂತರಾಳ. ಇದು ಚಿಕ್ಕದಾಗಿದ್ದು ಅಂತರಾಳದ ಲಲಾಟಬಿಂಬದಲ್ಲಿ ಆದಿನಾಥನ ಉಬ್ಬುಶಿಲ್ಪವಿರುವುದನ್ನು ಬಿಟ್ಟರೆ ಬೇರೆ ಯಾವುದೇ ರೀತಿಯ ಶಿಲ್ಪಗಳು ಕಂಡುಬರುವುದಿಲ್ಲ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗಮಂಟಪ, ಸಭಾಮಂಟಪ, ತೆರೆದ ಮಂಟಪ ಹಾಗೂ ಗೋಪುರ ಒಳಗೊಂಡಿದೆ.

ನವರಂಗಮಂಟಪ ಅಂತರಾಳಗಿಂತ ವಿಸ್ತೀರ್ಣವಾಗಿದ್ದು ನಾಲ್ಕು ಸ್ತಂಭಗಳನ್ನು ಒಳಗೊಂಡಿರುವುದು. ಇದರ ಪ್ರವೇಶದ್ವಾರವು ವಿಸ್ತೀರ್ಣವಾಗಿದ್ದು, ಬಾಗಿಲುವಾಡ ಮತ್ತು ಲಲಾಟಬಿಂಬ ಒಳಗೊಂಡಂತೆ ನೇರ ರೇಖೆಯನ್ನು ಒಳಗೊಂಡಿದೆ. ಲಲಾಟಬಿಂಬದಲ್ಲಿ ಜಿನಮೂರ್ತಿಯ ಶಿಲ್ಪವಿದೆ. ಈ ಭಾಗದಲ್ಲಿ ಇಂದು ವಿನಾಯಕ, ಆದಿಶೇಷ ಶಿಲ್ಪಗಳು ಕಂಡುಬಂದು ಕಮಲದಾಕಾರದ ಭುವನೇಶ್ವರಿ ಹೊಂದಿದೆ. ನವರಂಗ ಮಂಟಪಕ್ಕಿಂತ ವಿಸ್ತೀರ್ಣದಲ್ಲಿ ಸಭಾಮಂಟಪ ವಿಶಾಲವಾಗಿದೆ. ಇದರ ದ್ವಾರವು ಎರಡು ಮೆಟ್ಟಿಲು ಹೊಂದಿದ್ದು ಬಾಗಿಲುವಾಡವು ಸರಳ ರೇಖಾ ಉಬ್ಬುಶಿಲ್ಪಗಳನ್ನು ಹೊಂದಿದೆ. ಆದರೆ ಲಲಾಟಬಿಂಬದಲ್ಲಿ ಯಾವುದೇ ರೀತಿಯ ಕೆತ್ತನೆ ಇರುವುದಿಲ್ಲ. ಇದರಲ್ಲಿ ಆರು ಸ್ತಂಭಗಳು ಇದ್ದು, ಬಸದಿಯ ಉತ್ತರ ದಿಕ್ಕಿನಲ್ಲಿ ಪ್ರವೇಶದ್ವಾರವಿದೆ. ಇದು ಪೂರ್ವ ಪಶ್ಚಿಮಾಭಿಮುಖವಾಗಿ ನಲವತ್ತು ಅಡಿ ಉದ್ದ ಮತ್ತು ಉತ್ತರ ದಕ್ಷಿಣವಾಗಿ ಇಪ್ಪತ್ತೈದು ಅಡಿ ಅಗಲ ಹೊಂದಿದೆ. ತೆರದ ಮಂಟಪವು ನಾಲ್ಕು ಸ್ತಂಭಗಳನ್ನು ಒಳಗೊಂಡಿದ್ದು ವಿವಿಧ ರೀತಿಯ ಕೆತ್ತನೆ ಇರುವುದು. ಈ ಮಂಟಪಕ್ಕೆ

ಇತ್ತೀಚಿಗೆ ಬಿತ್ತಿಯನ್ನು ಕಟ್ಟಿದ್ದು, ಪ್ರವೇಶದ್ವಾರದ ಮೇಲೆ ಮೂರು ಕೋಷ್ಟಕಗಳು ಇದ್ದು ಯಾವುದೇ ರೀತಿಯ ಶಿಲ್ಪಗಳು ಕಂಡುಬರುವುದಿಲ್ಲ.

ಕಂಬಗಳ ಪ್ರಮುಖ ಉದ್ದೇಶ ತೊಲೆಯನ್ನು ಹೊತ್ತಿಕೊಂಡಂತೆ ಮೇಲ್ಭಾವಣೆಯನ್ನು ಹೊತ್ತಿರುವುದೇ ಆಗಿದೆ. ನವರಂಗದಲ್ಲಿ ಎರಡು ಸ್ತಂಭಗಳು ಪೀಠದ ಮೇಲೆ ನಿಂತಿದ್ದು, ಚೌಕಾಕಾರ ಒಳಗೊಂಡಂತೆ ಎಂಟು ಕೋನಗಳು ಬೋದಿಗೆ ಹೊಂದಿದೆ. ನವರಂಗ, ಸಭಾಮಂಟಪಗಳಲ್ಲಿ ಸ್ತಂಭಗಳು ಸ್ವಲ್ಪ ಪ್ರಮಾಣದಲ್ಲಿ ಭಿನ್ನವಾಗಿವೆ. ಇಲ್ಲಿಯ ಕಂಬಗಳು ಚೌಕಕಾರದ ಪೀಠದ ಮೇಲೆ ನಿಂತಿವೆ. ತಳಭಾಗ ಚೌಕಕಾರವಾಗಿದ್ದು ಇದರ ಮೇಲ್ಭಾಗದಲ್ಲಿ ಹದಿನಾಲ್ಕು ಕೋನಗಳು ಇದ್ದು, ಇದರ ಮೇಲೆ ವೃತ್ತ ನಂತರ ಬೋದಿಗೆ ಇದೆ. ಇಲ್ಲಿಯ ಸ್ತಂಭಗಳ ಮೇಲೆ ಯಾವುದೇ ರೀತಿಯ ಕೆತ್ತನೆ ಇರುವುದಿಲ್ಲ. ಆದರೆ ನವರಂಗ ಮಂಟಪದ ತೊಲೆಯ ಮೇಲೆ ಆನೆ, ಟಗರು, ಹಸು, ಜಿಂಕೆ, ಆನೆಯ ಮೇಲೆ ಮಹಿಳೆ ಕುಳಿತಿರುವ ಉಬ್ಬುಶಿಲ್ಪವಿದೆ. ಬಸದಿಯ ಬಿತ್ತಿ ಮತ್ತು ಮೇಲ್ಚಾವಣಿ ಕಲ್ಲು ಚಪ್ಪಡಿಯಿಂದ ನಿರ್ಮಿತವಾಗಿದೆ. ಮೂಲಬಿತ್ತಿಯಲ್ಲಿ ಕಲ್ಲುಚಪ್ಪಡಿಗಳನ್ನು ಜೋಡಿಸಲು ಯಾವುದೇ ವಸ್ತುವನ್ನು ಉಪಯೋಗಿಸಿಲ್ಲ. ಗರ್ಭಗೃಹದಿಂದ ಮುಖಮಂಟಪದವರೆಗೆ ತೊಂಬತ್ತು ಅಡಿ ಉದ್ದವಾಗಿದ್ದು ಬಸದಿಯ ಸುತ್ತಲೂ ಏಕರೀತಿಯ ಕಪೋತವನ್ನು ಹೊಂದಿರುವುದು. ಅಲ್ಲದೇ ಗರ್ಭಗೃಹಕ್ಕೆ ನೇರ ಮೂವತ್ತು ಅಡಿ ಎತ್ತರದ ಗರುಡ ಸ್ತಂಭವನ್ನು ಹೊಂದಿರುವುದು. ಇದರ ತಳಭಾಗದ ಸುತ್ತ ವೀರಭದ್ರ, ಗಣಪತಿ, ತೀರ್ಥಂಕರ ಶಿಲ್ಪಗಳಿವೆ. ಬಸದಿಯ ಮೇಲ್ಭಾಗದಲ್ಲಿ ನಾಲ್ಕು ದಿಕ್ಕಿಗೂ ಜೋಡಿ ಬಸವನ ನಾಲ್ಕು ವಿಗ್ರಹಗಳಿವೆ.

೩೨. ಶಾಂತಿನಾಥ ಬಸದಿ

ಗ್ರಾಮ	:	ಕೊಣಸೂರು
ಸ್ಥಳ ನಿರ್ದೇಶನ	:	ಗ್ರಾಮದ ಕೇಂದ್ರ ಭಾಗ
ಅಭಿಮುಖ	:	ಪೂರ್ವ
ಕಾಲ	:	ಕ್ರಿ.ಶ. ೧೬ನೆಯ ಶತಮಾನ
ನಿರ್ಮಾಣ ಸಾಮಗ್ರಿ	:	ಗಾರೆ, ಶಿಲೆ

ಶಾಂತಿನಾಥ ಬಸದಿಯು ಬೆಟ್ಟದಪುರದಿಂದ ಪಶ್ಚಿಮಕ್ಕೆ ಎಂಟು ಕಿ.ಮೀ.ಗಳ ಅಂತರದಲ್ಲಿದೆ. ಇದು ಏಕಕೂಟ ಬಸದಿಯಾಗಿದ್ದು ಇಪ್ಪತ್ತು ಅಡಿ ಎತ್ತರ ಗುಡ್ಡದ ಮೇಲಿದೆ. ಈ ಗ್ರಾಮವನ್ನು ಪ್ರಾಚೀನ ಕಾಲದಲ್ಲಿ ವಿಶ್ವನಾಥಪುರವೆಂದು ಕರೆಯುತ್ತಿದ್ದರು. ಪಿರಿಯಾಪಟ್ಟಣ ತಾಲ್ಲೂಕಿನ ಪ್ರಮುಖ ಜೈನ ನೆಲೆ ಕೊಣಸೂರು. ಪ್ರಾಚೀನ ಕಾಲದಲ್ಲಿ ಅಧಿಕ ಪ್ರಮಾಣದಲ್ಲಿ ಜೈನರು

ನೆಲಸಿದ್ದರು ಎಂಬುದಕ್ಕೆ ಇದು ಉದಾಹರಣೆಯಾಗಿದೆ. ಜೊತೆಗೆ ವೈದಿಕ ನೆಲೆ. ಸ್ಥಳಿಯ ಚಂಗಾಳ್ವ ಮನೆತನದ ಶ್ರೀಕಂಠ ರಾಜಯ್ಯನ ಪುತ್ರನು ಸೂರ್ಯವಂಶದವನೂ ಋಗ್ವೇದಿಯು ಹರಿತಗೋತ್ರದವನಾದ ನಂಜರಾಯ ಪಟ್ಟಣ ರಾಜನಾದ ಪಿರಿಯರಾಜಯ್ಯದೇವ ಮಹಾರಸನು ತನ್ನ ಪಟ್ಟದ ರಾಣಿಗೆ ಕೈಲಾಸದಲ್ಲಿ ಮುಕ್ತಿ ದೊರೆಯಲೆಂದು ಅವಳ ಹೆಸರಿನಲ್ಲಿ ಸಿರಿಗೆರೆಯ ಅನ್ನದಾನಿಮಲ್ಲಿಕಾರ್ಜುನ ದೇವರ ಶಿವರಾತ್ರಿ ಮಹೋತ್ಸವನ್ನು ಆಚರಿಸುವುದಕ್ಕಾಗಿ ಅಥವಾ ಧಾರ್ಮಿಕ ಕಾರ್ಯಕ್ಕಾಗಿ ಕೊಣಸೂರು ಗ್ರಾಮವನ್ನು ದಾನ ನೀಡಿರುವನು. ಈ ಗ್ರಾಮಕ್ಕೆ ಪ್ರಾಚೀನ ಕಾಲದಲ್ಲಿ ವಿರೂಪಾಕ್ಷಪುರ[೩೭] ಎಂಬ ಹೆಸರು ಇದ್ದಿತೆಂದು ಹೇಳಲಾಗಿದೆ. ಈ ಗ್ರಾಮವನ್ನು ದಾನ ಮಾಡಿದ ಕಾಲ ಕ್ರಿ.ಶ ೧೫೯೧ ಅಕ್ಟೋಬರ್ ೨೩ ಆಗಿದೆ. ಬಸದಿಯನ್ನು ಕ್ರಿ.ಶ.೧೪೨೦ರಲ್ಲಿ ವಿಜಯನಗರದ ಸಂಗಮ ವಂಶದ ದೊರೆ ವಿರೂಪಾಕ್ಷ ಕಾಲದಲ್ಲಿ ನಿರ್ಮಾಣಗೊಂಡಿದ್ದು ೧೬ನೆಯ ತೀರ್ಥಂಕರಸಾದ ಶಾಂತಿನಾಥನ ಬಸದಿಯಾಗಿದೆ. ನಂತರದ ದಿನಗಳಲ್ಲಿ ಕಾಂತೂರ ವೀರಶೆಟ್ಟಿಯೂ ಜೀರ್ಣೋದ್ಧಾರ[೩೮] ಮಾಡಿಸಿದ್ದಾರೆ.

ಬಸದಿಯ ತಳಲಕ್ಷಣವು ಉಪಾನ, ಪೀಠ, ವೇದಿಕೆ ಒಳಗೊಂಡಂತೆ ಗರ್ಭಗೃಹ, ಅಂತರಾಳ, ನವರಂಗಮಂಟಪದೊಂದಿಗೆ ತೆರದ ಮಂಟಪ ಹೊಂದಿದೆ. ಗರ್ಭಗೃಹದಲ್ಲಿ ಶಾಂತಿನಾಥ ಖಡ್ಗಸನದಲ್ಲಿದ್ದು ಪುಷ್ಪಲಂಕಾರದ ಅಥವಾ ತ್ರಿಭುಜಕಾರದ ಭುವನೇಶ್ವರಿಯಿರುವುದು. ನಾಗರ ಶೈಲಿಯ ಗೋಪುರ ಹೊಂದಿದ್ದು ಕಳಸವಿದೆ. ಗರ್ಭಗೃಹದಲ್ಲಿ ಸುತ್ತ ಪ್ರದಕ್ಷಣೆ ಪಥವಿಲ್ಲದೆ ಹೊರಭಾಗದ ಜಗುಲಿಯೇ ಪ್ರದಕ್ಷಣಾ ಪಥವಾಗಿದೆ. ಭಿತ್ತಿಯು ಸಂಪೂರ್ಣವಾಗಿ ಕಲ್ಲು ಚಪ್ಪಡಿಗಳ ಜೋಡಣೆಯಾಗಿದ್ದು ಯಾವುದೇ ರೀತಿಯ ಗಾರೆಯನ್ನು ಉಪಯೋಗಿಸದೇ ನಿಲ್ಲಿಸಲಾಗಿದೆ. ಆದರೆ ಗೋಪುರದ ಪ್ರವೇಶದ್ವಾರದ ಮೇಲ್ಭಾಗದಲ್ಲಿ ಮೂರು ರೀತಿಯ ಹಾರಗಳಿದ್ದು ದ್ರಾವಿಡ ಶೈಲಿ ಹೊಂದಿದೆ. ಮಧ್ಯದಲ್ಲಿ ಶಾಂತಿನಾಥ, ಬಲಭಾಗದಲ್ಲಿ ಚಂದ್ರನಾಥ ಮತ್ತು ಎಡಭಾಗದಲ್ಲಿ ಆದಿನಾಥನ ವಿಗ್ರಹಗಳಿವೆ. ಅಂತರಾಳ ಚಿಕ್ಕದಾಗಿದ್ದು ಯಾವುದೇ ರೀತಿಯ ಕಲಾತ್ಮಕ ಉಬ್ಬುಶಿಲ್ಪಗಳು, ವಿಗ್ರಹಗಳು ಇಲ್ಲಿ ಕಂಡುಬರುವುದಿಲ್ಲ. ಗರ್ಭಗೃಹದಲ್ಲಿ ತ್ರಿಭುಜಾಕಾರದ ಭುವನೇಶ್ವರಿ ಮತ್ತು ದ್ರಾವಿಡ ಶೈಲಿಯ ಗೋಪುರವಿದೆ. ಪೀಠವು ಎರಡೂವರೆ ಅಡಿ ಎತ್ತರವಾಗಿದ್ದು ಇದರ ಮುಂದೆ ಪಾಣಿಬಟ್ಟಲು ಇರುವುದು. ಗರ್ಭಗೃಹದ ಪ್ರವೇಶದ್ವಾರದ ಲಲಾಟ ಬಿಂಬದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಜಿನ ತೀರ್ಥಂಕರನ ಉಬ್ಬುಶಿಲ್ಪವಿದ್ದು ಬಾಗಿಲುವಾಡವು ಕಲಾತ್ಮಕ ಕೆತ್ತನೆಯಿಂದ ಕೂಡಿರುವುದು. ನವರಂಗದಲ್ಲಿ ನಾಲ್ಕು ಸ್ತಂಭಗಳು ಇದ್ದು ಪೀಠದ ಮೇಲೆ ನಿಂತಿವೆ. ಸ್ತಂಭಗಳು ಎಪ್ಪತ್ತು ಇಂಚು ಉದ್ದ ಐವತ್ತೈದು ಇಂಚು ದಪ್ಪ ಹೊಂದಿ ತಳಭಾಗದಲ್ಲಿ ಚೌಕಕಾರ ಹೊಂದಿ ವೃತ್ತವನ್ನು ಒಳಗೊಂಡಿದೆ. ಈ ಸ್ತಂಭಗಳು ತೊಲೆಯನ್ನು ಹೊತ್ತು ನಿಂತಿವೆ. ಪ್ರವೇಶದ್ವಾರದ ಬಾಗಿಲುವಾಡವು ಸರಳವಾಗಿದ್ದು ಲಲಾಟ

ಬಿಂಬದಲ್ಲಿ ಪುಷ್ಪಾಲಂಕಾರ ಹೊಂದಿದೆ. ಕಳೆದ ೨೦೦೦ನೆಯ ವರ್ಷದಲ್ಲಿ ಶ್ರೀಧರ್ಮಸ್ಥಳ ಮಂಜುನಾಥ ಟ್ರಸ್ಟ್ ವತಿಯಿಂದ ಪುನರುಜ್ಜೀವನಗೊಂಡಿದೆ.

೩೩. ಚಂದ್ರನಾಥ ತೀರ್ಥಂಕರ ಬಸದಿ

ಗ್ರಾಮ : ಬೂವನಹಳ್ಳಿ

ಸ್ಥಳ ನಿರ್ದೇಶನ : ಗ್ರಾಮದ ಮಧ್ಯಭಾಗ

ಅಭಿಮುಖ : ಪೂರ್ವ

ಕಾಲ : ಕ್ರಿ.ಶ.೧೬ನೆಯ ಶತಮಾನ

ನಿರ್ಮಾಣ ಸಾಮಗ್ರಿ : ಗ್ರಾನೈಟ್‌ಶಿಲೆ,

ಬಸದಿಯು ಬೂವನಹಳ್ಳಿ ಗ್ರಾಮದಲ್ಲಿದ್ದು ಮಲ್ಲಿಕಾರ್ಜುನ ಬೆಟ್ಟದ ಪಶ್ಚಿಮಕ್ಕೆ ಆರು ಕಿ.ಮೀ. ಅಂತರದಲ್ಲಿದೆ. ಬಸದಿಯು ಪೂರ್ವಾಭಿಮುಖವಾಗಿದ್ದು ಗುಡ್ಡದ ಮೇಲಿದೆ. ಚಂಗಾಳ್ವ ವಂಶದ ಮಂಗರಸನ ಕಾಲದಲ್ಲಿ ಕಟ್ಟಲ್ಪಟ್ಟಿದೆ. ಆದರೆ ಬಾಳಚಂದ್ರ ಸಿದ್ಧಾಂತ ಭಟ್ಟರ ಶಿಷ್ಯರಾದ ಕೆ.ಲಭದ್ರಗೊರ್ ಇಲ್ಲಿರುವ ಮೂರ್ತಿಯನ್ನು ಪ್ರತಿಷ್ಠಾಪಿಸಿರುವರು.[೩೯] ಸ್ಥಳೀಯ ದೇವಾಲಯಗಳಂತೆ ದ್ರಾವಿಡ ಶೈಲಿ ಹೊಂದಿರುವುದು ಹಾಗೂ ಸಂಪೂರ್ಣವಾಗಿ ಗ್ರಾನೈಟ್ ಶಿಲೆಯಿಂದ ರಚನೆ ಗೊಂಡಿರುತ್ತದೆ. ತಳವಿನ್ಯಾಸದಲ್ಲಿ ಉಪಾನ, ಕಂಠ, ಉಪಪೀಠ ಒಳಗೊಂಡು ವೇದಿಕೆಯ ಮೇಲೆ ನಿರ್ಮಾಣಗೊಂಡಿದೆ. ಗರ್ಭಗೃಹ, ಅಂತರಾಳ, ನವರಂಗಮಂಟಪ ಹೊಂದಿರು ವುದಲ್ಲದೇ ತೆರೆದಮಂಟಪ ಹೊಂದಿದೆ. ಉತ್ತಮವಾದ ಗರ್ಭಗೃಹ ಹೊಂದಿದ್ದು ತ್ರಿಭುಜಾಕಾರದ ಭುವನೇಶ್ವರಿ ಮತ್ತು ದ್ರಾವಿಡ ಶೈಲಿಯ ಗೋಪುರ ಒಳಗೊಂಡಿದೆ. ಪೀಠವು ಎರಡೂವರೆ ಅಡಿ ಎತ್ತರವಾಗಿದ್ದು ಇದರ ಮುಂದೆ ಪಾಣಿಬಟ್ಟಲು ಇರುವುದು. ಗರ್ಭಗೃಹದ ಪ್ರವೇಶದ್ವಾರದ ಲಲಾಟ ಬಿಂಬದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಜಿನ ಶಿಲ್ಪವಿದ್ದು ಬಾಗಿಲುವಾಡವು ಸುಂದರ ಕಲಾತ್ಮಕ ಕೆತ್ತನೆಯಿಂದ ಕೂಡಿರುವುದು. ಗರ್ಭಗೃಹದ ಮುಂದಿನ ಭಾಗವೇ ಅಂತರಾಳ. ಇದು ಉತ್ತಮವಾಗಿದ್ದು ಬಾಗಿಲುವಾಡದ ಮೇಲೆ ಯಾವುದೇ ರೀತಿಯ ಶಿಲ್ಪಗಳ ಕೆತ್ತನೆ ಇರುವುದಿಲ್ಲ.

ನವರಂಗದಲ್ಲಿ ನಾಲ್ಕು ಸ್ತಂಭಗಳಿದ್ದು ಉತ್ತಮವಾದ ಕಲಾತ್ಮಕ ಉಬ್ಬುಶಿಲ್ಪಗಳಿಂದ ಕೂಡಿವೆ. ಎರಡು ಇಂಚು ನವರಂಗ ಮಂಟಪ ಎತ್ತರವಾಗಿರುವುದಲ್ಲದೇ ಇಲ್ಲಿಯ ಪ್ರವೇಶದ್ವಾರವು ಉಬ್ಬುಶಿಲ್ಪುಗಳಿಂದ ಕೂಡಿದ್ದು ಲಲಾಟಬಿಂಬದ ಮೇಲೆ ಜಿನಮೂರ್ತಿಯ ಕೆತ್ತನೆ ಇರುವುದು. ಇದು ವಿಶಾಲವಾಗಿದ್ದು ಉತ್ತಮ ಬೆಳಕಿನಿಂದ ಕೂಡಿದೆ. ತೆರೆದ ಮಂಟಪದಲ್ಲಿ ಎರಡು

ಸ್ತಂಭಗಳಿದ್ದು, ಇದರ ಬಾಗಿಲುವಾಡದಲ್ಲಿ ಬಳ್ಳಿಯಾಕಾರದ ಕೆತ್ತನೆಯಿದ್ದು ಲಲಾಟಬಿಂಬದ ಮೇಲೆ ಜಿನಶಿಲ್ಪವಿದೆ. ಸ್ತಂಭಗಳ ಮೇಲೆ ಮಂಗವು ಬಾಳೆ ಹಣ್ಣನ್ನು ತಿನ್ನುತ್ತಿರುವ ಶಿಲ್ಪ, ಹಂಸ, ಕಳಸ, ನವಿಲು, ಆನೆಯ ಶಿಲ್ಪ, ಮತ್ತು ಇದರ ಕೆಳಗೆ ಮಹಿಳೆಯ ಶಿಲ್ಪವಿದ್ದು ಎರಡು ಕೈಯಲ್ಲಿ ತಾವರೆಯ ಮೊಗ್ಗನ್ನು ಹಿಡಿದು ಕುಳಿತಿದೆ. ಮತ್ತೊಂದರಲ್ಲಿ ಹಸು, ಎಂಟು ಕರುವಿನ ಕೆತ್ತನೆಯಿರುವುದಲ್ಲದೇ, ಕುದುರೆಯ ಮೇಲೆ ಅರಸನು ಕುಳಿತಿರುವ ದೃಶ್ಯ ಉತ್ತಮ ಕಲಾತ್ಮಕ ಕೆತ್ತನೆಯಿದೆ. ಇಲ್ಲಿಯ ಎಲ್ಲ ಸ್ತಂಭಗಳು ಒಂದೇ ರೀತಿಯಲ್ಲಿದ್ದು ಚೌಕಕಾರದಲ್ಲಿವೆ. ಕಂಬಗಳು ಪೀಠದ ಮೇಲೆ ನಿಂತಿದ್ದು ಮೇಲ್ಭಾಗದಲ್ಲಿ ಬೋದಿಗೆ, ತೊಲೆಯಿದ್ದು ಇಡಿ ಮೇಲ್ಛಾವಣಿಯನ್ನು ಹೊತ್ತು ನಿಂತಿವೆ. ಪ್ರವೇಶದ್ವಾರದ ಎಡ ಮತ್ತು ಬಲಭಾಗದಲ್ಲಿ ಸಿಂಹದ ಮೂರ್ತಿಗಳಿದ್ದು ಸುತ್ತಲೂ ಬಳ್ಳಿಯಾಕಾರದ ಅಲಂಕಾರವನ್ನು ಹೊಂದಿದೆ. ನವರಂಗ ಮಂಟಪದ ಲಲಾಟಬಿಂಬ ದಲ್ಲಿ ಜಿನಮೂರ್ತಿಯ ಸಮೀಪ ಎರಡು ಕಡೆಯು ಭಕ್ತರ ಗಮನ ಸೆಳೆಯುವಂತಿದೆ. ಪ್ರವೇಶದ್ವಾರದ ಮೇಲ್ಭಾಗದಲ್ಲಿ ಹಾರ ಮತ್ತು ಪೀಠದ ಮುಂದೆ ಆನೆಯ ಶಿಲ್ಪವಿದ್ದು ಜಿನಾ ಸಂಪ್ರದಾಯದ ಸರ್ವಾಣ್ಹಕ್ಷ ನಿಂತಿದೆ. ಬಸದಿಯು ನಲವತ್ತೊಂಬತ್ತು ಅಡಿ ಉದ್ದವಾಗಿದ್ದು, ಹದಿನೆಂಟು ಅಡಿ ಅಗಲವಿದೆ. ನಾಲ್ಕು ಮೆಟ್ಟಿಲುಗಳನ್ನು ಹೊಂದಿದ್ದು ಗರ್ಭಗೃಹಕ್ಕೆ ನೇರವಾಗಿ ಮೂರು ಅಡಿ ಎತ್ತರದ ಬಲಿಪೀಠವಿರುವುದು ಮತ್ತು ಎಂಟು ದಿಕ್ಕಿಗೂ ಎಂಟು ಬಲಿಪೀಠ ಇರುವುದು. ಶ್ರೀ ಧರ್ಮಸ್ಥಳ ಮಂಜುನಾಥ ಟ್ರಸ್ಟ್‌ವತಿಯಿಂದ ಕ್ರಿ.ಶ. ೨೦೦೮ ಜೂನ್ ತಿಂಗಳಿನಲ್ಲಿ ಪುನರುಜ್ಜೀವನಗೊಂಡಿದೆ.

೩೪. ಅನಂತನಾಥ ಬಸದಿ

ಗ್ರಾಮ	: ಆನಿವಾಳು
ಸ್ಥಳ ನಿರ್ದೇಶನ	: ಗ್ರಾಮದಿಂದ ಅರ್ಧಕಿಲೋಮೀಟರ್ ಹೊಲದ ಮಧ್ಯ
ಅಭಿಮುಖ	: ಪೂರ್ವ
ಕಾಲ	: ಕ್ರಿ.ಶ.೧೬ನೆಯ ಶತಮಾನ
ನಿರ್ಮಾಣ ಸಾಮಗ್ರಿ	: ಗ್ರಾನೈಟ್‌ಶಿಲೆ,

ಅನಂತನಾಥ ಬಸದಿ ಆನಿವಾಳ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿದೆ. ಇದನ್ನು ಸ್ಥಳೀಯರು ಆದಿನಾಥ ಹೆಸರಿನಿಂದ ಕರೆಯುತ್ತಿರುವರು. ಇದು ಇಪ್ಪತ್ತು ಅಡಿ ಎತ್ತರದ ವೃಷಭಗಿರಿ ಬೆಟ್ಟದ ಮೇಲಿದ್ದು ಪೂರ್ವಾಭಿಮುಖವಾಗಿದೆ. ಬಸದಿಯು ಗ್ರಾನೈಟ್ ಶಿಲೆಯಿಂದ ಕಟ್ಟಲ್ಪಟ್ಟಿರುವುದು. ಇದರ ತಳವಿನ್ಯಾಸದಲ್ಲಿ ಉಪಾನ, ಕಂಠ, ಉಪಪೀಠ ಮತ್ತು ವೇದಿಕೆಯ ಮೇಲೆ ನಿರ್ಮಾಣ

ಗೊಂಡಿದೆ. ಇದು ದ್ವಿಕೂಟ ಬಸದಿಯಾಗಿದ್ದು ಪ್ರದಕ್ಷಣೆಪಥ ಮತ್ತು ನವರಂಗ ಮಂಟಪವಿದೆ. ಇದರ ದಕ್ಷಿಣಕ್ಕೆ ಮತ್ತೊಂದು ಗರ್ಭಗೃಹ ಹಾಗೆ ತೆರೆದ ಮಂಟಪ ಅಥವಾ ಜಗುಲಿ ಒಳಗೊಂಡಿರುವುದು. ಬಿತ್ತಿ ಮತ್ತು ಚಾವಣಿ ಕಲ್ಲುಚಪ್ಪಡಿಗಳಿಂದ ನಿರ್ಮಾಣಗೊಂಡಿದೆ. ಇದು ಹಾಳಾಗಿದ್ದು ಶ್ರೀ ಧರ್ಮಸ್ಥಳ ಜೀರ್ಣೋದ್ಧಾರ ಸಮಿತಿ ವತಿಯಿಂದ ಇಂದು ಜೀರ್ಣೋದ್ಧಾರ ಗೊಳಿಸಲಾಗಿದೆ. ಆದರೂ ಇದರ ಎಡಬದಿಯಲ್ಲಿ ಮಂಟಪಗಳ ಅವಶೇಷಗಳು ಬಿದ್ದಿವೆ. ಈ ಬಸದಿಯ ಬಗ್ಗೆ ಯಾವುದೇ ಮುದ್ರಿತ ಮಾಹಿತಿಗಳು ತಿಳಿದುಬರುವುದಿಲ್ಲ. ಆದರೆ ಬಸದಿಯಲ್ಲಿರುವ ಕೆಲವು ಶಾಸನಗಳು ಅಲ್ಪ ಮಾಹಿತಿಯನ್ನು ನೀಡುತ್ತವೆ. ಜೈನನಾದ ಚಿಕಣ್ಣಗೌಡನ ಪುತ್ರನಾದ ಹೊನ್ನಗೌಡನು ತನ್ನ ತಂದೆಯ ಹತ್ತು ತಲೆಮಾರಿನ ಪಿತೃಗಳಿಗೆ ಮತ್ತು ತಾಯಿಯ ಹನ್ನೊಂದು ತಲೆಮಾರಿನ ಪಿತೃಗಳಿಗೆ ಅಕ್ಷಯ ಪುಣ್ಯಲೋಕ ಪ್ರಾಪ್ತಿಯಾಗಲೆಂದು ನಿರ್ಮಿಸಿರುವನು. ಕೊನೆಯಲ್ಲಿ ಶಾಸನವನ್ನು ಬರೆದವನು ಚೆನ್ನಪ್ಪ ಎಂದು ದಾಖಲಿಸಲಾಗಿದೆ.[೪೦]

ಬಸದಿಯ ರಂಗಮಂಟಪದ ಪ್ರವೇಶದ್ವಾರದ ಬಲಭಾಗದಲ್ಲಿ ಗರ್ಭಗೃಹದ ಗೋಡೆಯ ಬಲಭಾಗದಲ್ಲಿ ಶಾಸನವಿರುವುದು. ಇದು ಆನೆವಾಳು ಗ್ರಾಮದ ಚಿಕ್ಕಣ್ಣಗೌಡನ ಪುತ್ರನಾದ ಹೊನ್ನಣಗೌಡನು ತನ್ನ ಪುತ್ರನಾದ ಬೊಮ್ಮಣಗೌಡನಿಗೆ ಒಳ್ಳೆಯದಾಗಲೆಂದು ಬ್ರಹ್ಮದೇವ ಮತ್ತು ಪದ್ಮಾವತಿಯರ ಬಸದಿ ಅಥವಾ ಗುಡಿ ನಿರ್ಮಿಸಿರುವನೆಂದು[೪೧] ಕಂಡುಬರುತ್ತದೆ. ಜಿನಮೂರ್ತಿಯ ಹಿಂಬದಿಯಲ್ಲಿ ಶಾಸನವಿದೆ. ಇದು ಅನಂಥ ಬಿಂಬವನ್ನು ಪ್ರತಿಷ್ಠಾಪಿಸಿದ್ದರ[೪೨] ಬಗ್ಗೆ ಮಾಹಿತಿ ನೀಡುತ್ತದೆ. ಒಟ್ಟಿನಲ್ಲಿ ಇಲ್ಲಿರುವ ಮಾಹಿತಿ ಆಧಾರದ ಮೇಲೆ ಪ್ರಾರಂಭದ ಚಂಗಾಳ್ವರು ಜೈನರೆಂದು ಅಭಿಪ್ರಾಯ ಪಡಬಹುದು.

ಬಸದಿಯ ಗರ್ಭಗೃಹದಲ್ಲಿ ಆದಿನಾಥನ ವಿಗ್ರಹ ಪದ್ಮಾಸನದಲ್ಲಿದ್ದು ಗರ್ಭಗೃಹದ ಸುತ್ತ ವಿಶಾಲ ಪ್ರದಕ್ಷಣೆ ಪಥವಿದೆ. ಈ ರೀತಿಯ ಪ್ರದಕ್ಷಣೆ ಪಥವಿರುವುದು ಇಡೀ ತಾಲ್ಲೂಕಿನಲ್ಲಿಯೇ ಇದಾಗಿದ್ದು, ಗರ್ಭಗೃಹಕ್ಕೆ ಬಿತ್ತಿಯೇ ಬಾಗಿಲವಾಡವಾಗಿದ್ದು ಸರಳವಾಗಿದೆ. ಇದರ ಮುಂದೆ ನವರಂಗ ಮಂಟಪವಿದೆ. ಇದರಲ್ಲಿ ನಾಲ್ಕು ಸ್ತಂಭಗಳಿವೆ. ಈ ಸ್ಥಂಬಗಳು ಪೀಠವಿಲ್ಲದೇ ಚೌಕಕಾರವಾಗಿದ್ದು, ಹದಿನಾಲ್ಕು ಮುಖ ಮತ್ತು ಬೋದಿಗೆ ಒಳಗೊಂಡಿದ್ದು, ತೊಲೆ ಮೇಲ್ಚಾವಣಿಯನ್ನು ಹೊತ್ತು ನಿಂತಿವೆ. ಇಲ್ಲಿಯ ಪ್ರತಿಯೊಂದು ಕಂಬವು ಅರವತ್ತೈದು ಇಂಚು ಉದ್ದವಾಗಿದ್ದು ಐವತ್ತೈದು ಇಂಚು ದಪ್ಪವಿರುವುದು. ಬಸದಿಯ ಬಲಭಾಗದ ಕಂಬದಲ್ಲಿ ಇಬ್ಬರು ಕೈಮುಗಿಯುತ್ತಿರುವ ಭಕ್ತರ ಶಿಲ್ಪವಿರುವುದನ್ನು ಬಿಟ್ಟರೆ ಬೇರೆ ಯಾವುದೇ ರೀತಿಯ ಕೆತ್ತನೆ ಇರುವುದಿಲ್ಲ. ದಕ್ಷಿಣ ಗರ್ಭಗೃಹದಲ್ಲಿ ಮೂಲ ವಿಗ್ರಹ ಸ್ಥಳಾಂತರಗೊಂಡಿರುವುದು. ಬಸದಿಯಲ್ಲಿ ಒಂದು ಹಾರವಿದ್ದು ಪೀಠದ ಮೇಲೆ ಜಿನಮೂರ್ತಿ ಪದ್ಮಾಸನದ ಸಿಮೆಂಟಿನ

ಶಿಲ್ಪವಿರುವುದು. ಅಲ್ಲದೆ ತೆರದ ಮಂಟಪ ಅಥವಾ ಜಗತಿ ಹೊಂದಿದ್ದು ಐದು ಮೆಟ್ಟಿಲುಗಳನ್ನು ಒಳಗೊಂಡಿದೆ. ಗರ್ಭಗೃಹಕ್ಕೆ ನೇರವಾಗಿ ಒಂದು ಮಂಟಪವಿದೆ. ಬಸದಿಯ ಆಗ್ನೇಯ ದಿಕ್ಕಿಗೆ ಚಿಕ್ಕಮಂಟಪವಿದೆ. ಉತ್ತರಕ್ಕೆ ಸ್ತಂಭಗಳುಳ್ಳ ಅವಶೇಷ ಅಧಿಕ ಸಂಖ್ಯೆಯಲ್ಲಿ ಬಿದ್ದಿರುವುದು. ಇದರ ಜೊತೆಗೆ ಯಾವುದೇ ರೀತಿಯ ಅವಶೇಷಗಳು ಕಂಡುಬರುವುದಿಲ್ಲ. ಬಸದಿಯ ಉತ್ತರಕ್ಕೆ ದ್ವಾರವಿದ್ದು ಗಜಾಕಾರದ ಮೆಟ್ಟಿಲು ಹೊಂದಿರುವುದು. ಬಸದಿಯನ್ನು ಕ್ರಿಶ. ೨೦೦೫ನೆಯ ವರ್ಷದಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥ ಟ್ರಸ್ಟ್ ವತಿಯಿಂದ ಜೀರ್ಣೋದ್ಧಾರ ಮಾಡಿರುವರು.

ರಕ್ಷಣಾ ವಾಸ್ತುಶಿಲ್ಪ

ಶತೃಗಳ ದಾಳಿಯಿಂದ ರಕ್ಷಿಸಿಕೊಳ್ಳಲು ನಗರ ಅಥವಾ ಗ್ರಾಮದ ಸುತ್ತಲೂ ನಿರ್ಮಿಸಿದ ಎತ್ತರ ಹಾಗೂ ಭದ್ರವಾದ ಗೋಡೆಯನ್ನು ಕೋಟೆ ಎಂದು ಕರೆಯಲಾಗುತ್ತದೆ. ಕಾಲದಿಂದ ಕಾಲಕ್ಕೆ ಯುದ್ಧ ಅಥವಾ ಆಕ್ರಮಣಗಳ ಮತ್ತು ತಂತ್ರಗಳಿಗೆ ಹೊಸದಾಗಿ ಆವಿಷ್ಕಾರಗೊಂಡ ಆಯುಧಗಳಿಗೆ ತಕ್ಕಂತೆ ಕೋಟೆ ರಚನೆಯ ವಿಧಾನದಲ್ಲಿ ಮಾರ್ಪಾಡುಗಳಾದವು.[೪೩] ಕೋಟೆ ಎಂದರೆ ಆವರಣವುಳ್ಳ ಪ್ರದೇಶ ಎಂದರ್ಥ. ಕೋಟೆ ಅಥವಾ ರಕ್ಷಾವರಣ ಇದನ್ನು ಸಂಸ್ಕೃತದಲ್ಲಿ ದುರ್ಗ ಎಂದು ಹೇಳುತ್ತಾರೆ. ಕೋಟೆಗೆ ಪುರ, ಪ್ರಕಾರ, ಕಿಲ್ಲೆ ಎಂಬ ಅರ್ಥಗಳು ಉಂಟು. ಸೈನಿಕರುಗಳಿಂದ ಆವರಿಸಲ್ಪಟ್ಟ ರಕ್ಷಿತವಾದ ಮತ್ತು ರಕ್ಷಣೆಗೆ ಮುಡುಪಾಗಿರುವ ಗಟ್ಟಿಯಾದ ಸ್ಥಳವೇ ಕೋಟೆ. ಪ್ರಾಚೀನ ಗ್ರಂಥವಾದ ಋಗ್ವೇದದಲ್ಲಿ ಪುರಗಳ ಉಲ್ಲೇಖವಿದೆ. ಪುರ ಅಂದರೆ ಭದ್ರವಾದ ಕೋಟೆ ಹೊಂದಿರುವ ಪಟ್ಟಣ ಎಂದರ್ಥ.[೪೪] ರಾಜ್ಯ ಸಾಮ್ರಾಜ್ಯಗಳು ಉದಯವಾಗುವುದಕ್ಕೂ ಮೊದಲು ಸಮಾಜದ ಜನರು ಸಣ್ಣ ಸಣ್ಣ ಗುಂಪುಗಳಾಗಿ ವಾಸಿಸುತ್ತಿದ್ದರು. ಕಾಲಕ್ರಮೇಣ ಈ ಗುಂಪುಗಳಲ್ಲಿ ಜನಸಂಖ್ಯೆ ಹೆಚ್ಚಾಗಿ ಅಥವಾ ಬೇರೆ ಗುಂಪುಗಳ ಜೊತೆಗೂಡಿ ಊರುಗಳಾದವು. ಈ ಪ್ರಕ್ರಿಯೆಗೆ ಮೂಲ ಕಾರಣ ಮನುಷ್ಯ. ಹೀಗೆ ಒಂದೆಡೆ ನೆಲೆನಿಂತ ಮಾನವ ತನ್ನ ನಾಗರಿಕತೆ ಪ್ರಗತಿಪಥದಲ್ಲಿ ನಡೆದಂತೆ ತನ್ನ ಮತ್ತು ಸಮುದಾಯದ ಲೌಕಿಕ ಸಂಪತ್ತನ್ನು ಬೆಳೆಸುತ್ತಾ ನಡೆದನು. ಹೀಗೆ ಸಂಗ್ರಹಗೊಂಡ ಲೌಕಿಕ ಸಂಪತ್ತನ್ನು ರಕ್ಷಣೆ ಮಾಡುವುದು, ಅಂತೆಯೇ ನೆಲೆನಿಂತ ಊರು ಅಥವಾ ಪ್ರದೇಶಗಳನ್ನು, ಕಾಡುಪ್ರಾಣಿಗಳಿಂದ ರಕ್ಷಣೆಗಾಗಿ ತಡೆಗೋಡೆ ಅಥವಾ ಬೇಲಿಗಳನ್ನು ಕಟ್ಟಿಕೊಳ್ಳುವ ಅವಶ್ಯಕತೆ ಕಂಡುಬಂದಿತು. ಇದುವೇ ರಕ್ಷಣಾ ವಾಸ್ತುವಿನ ಪ್ರಾಥಮಿಕ ಹೆಜ್ಜೆ.[೪೫] ಕೌಟಿಲ್ಯನು ನೈಸರ್ಗಿಕ ಸನ್ನಿವೇಶಗಳಿಗನು ಗುಣವಾಗಿ ಜಲದುರ್ಗ, ವನದುರ್ಗ, ಸ್ಥಳದುರ್ಗ, ಗಿರಿದುರ್ಗಗಳಾಗಿ ವರ್ಗೀಕರಿಸಿ ಅವುಗಳ ರಚನೆಯ ವಿಧಾನವನ್ನು ತನ್ನ ಅರ್ಥಶಾಸ್ತ್ರ ಗ್ರಂಥದಲ್ಲಿ ವಿವರಿಸಿದ್ದಾನೆ.[೪೬] ಪ್ರಾಚೀನ ಮಾನವನ ರಕ್ಷಣೆ ಕಾರ್ಯದಲ್ಲಿ ಕೋಟೆ ಮಹತ್ತರ ಪಾತ್ರವಹಿಸಿದೆ. ಹಿಂದೆ ಯುದ್ಧಗಳು ನಡೆದಾಗ

ಹೊರಗಿನ ಆಕ್ರಮಣ ತಡೆಯಲು ಕೋಟೆ ಕಟ್ಟಿಕೊಳ್ಳುವುದು ಅವಶ್ಯಕವಾಗಿತ್ತು. ಕೋಟೆ ರಾಜಕೀಯ ದೇಹದ ಪ್ರಮುಖ ಅಂಗ. ಯಾವುದೇ ರಾಜ್ಯದ ರಾಜಧಾನಿಯು ದೇಹದಲ್ಲಿನ ಹೃದಯವಿದ್ದಂತೆ. ರಾಜಧಾನಿಯನ್ನು ವಶಪಡಿಸಿಕೊಂಡರೆ, ಸಾಮಾನ್ಯವಾಗಿ ಒಂದು ರಾಜ್ಯವು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿದ್ದಿತು. ಆದುದರಿಂದ ಕೋಟೆ ಅಥವಾ ದುರ್ಗದ ನಿರ್ಮಾಣವು ರಕ್ಷಣೆಯ ದೃಷ್ಟಿಯಿಂದ ಅತ್ಯವಶ್ಯಕವಾಗಿತ್ತು. ಜಿ.ಟಿ. ಡಾಂಟೆ ಪ್ರಕಾರ ಪ್ರಾಚೀನ ಕಾಲದಲ್ಲಿ ಕೋಟೆಗಳು ರಾಜಧಾನಿಯ ರಕ್ಷಣೆಯ ಸಲುವಾಗಿ ಇರುವಂತಹವು. ಯಕ್ವೆರಂ ಸ್ಟ್ರೇಟ್ ಪ್ರಕಾರ ವಿರೋಧಿಗಳಿಂದ ಯುದ್ಧ ತಡೆಯುವುದಕ್ಕಾಗಿ ಮತ್ತು ರಕ್ಷಣೆಗಾಗಿ ಕೋಟೆಗಳೂ ತುಂಬಾ ಅನುಕೂಲಕರವಾಗಿದ್ದವು.[೪೭]

ಭಾರತದಲ್ಲಿ ಕೋಟೆಗಳ ಇತಿಹಾಸ ಸಿಂಧೂ ನಾಗರಿಕತೆಯಷ್ಟು ಪ್ರಾಚೀನತೆ ಹೊಂದಿದೆ. ಮಗಧ ರಾಜ್ಯದ ರಾಜಗೀರ್‌ನಲ್ಲಿ ಮರದ ದಿಮ್ಮಿಗಳಿಂದ ನಿರ್ಮಿಸಿದ ಕೋಟೆ ಅವಶೇಷಗಳನ್ನು ಶೋಧಿಸಲಾಗಿದೆ. ಮೌರ್ಯರ ರಾಜಧಾನಿ ಪಾಟಲೀಪುತ್ರವು ಅಂದಿನ ಗ್ರೀಕ್ ರಾಯಭಾರಿ ಮೆಗಾಸ್ತಾನೀಸ್ ವಿವರಿಸಿದಂತೆ ೫೦೦ ಕಾವಲುಗೋಪುರಗಳು ೬೪ ದ್ವಾರಗಳಿಂದ ಕೂಡಿದ ಒಂದು ಭದ್ರ ಕೋಟೆಯಾಗಿತ್ತು. ಕಳಿಂಗ ರಾಜ್ಯದ ರಾಜಧಾನಿಯೆಂದು ಗುರುತಿಸುವ ಒರಿಸ್ಸಾದ ಭುವನೇಶ್ವರದ ಹತ್ತಿರದ ಶಿಶುಪಾಲಗಡದಲ್ಲಿ ಆಯತಾಕಾರದ ಕೋಟೆ ಇದೆ. ವಿಶಾಲವಾದ ಈ ಕೋಟೆ ಸುರಕ್ಷಿತವಾಗಿ ಉಳಿದುಕೊಂಡು ಬಂದ ಅತ್ಯಂತ ಪ್ರಾಚೀನ ಕೋಟೆ. ಕೋಟೆಗಳನ್ನು ಕಲ್ಲಿನಿಂದ ನಿರ್ಮಿಸಲಾಗಿದ್ದು ಅಗಲವಾದ ಗೋಡೆಗಳಿಂದ ಕೂಡಿವೆ. ಪ್ರಾಚೀನ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಹಾಗೂ ಪುರಾಣಗಳಲ್ಲಿ ಕೋಟೆಗಳಿಂದ ಕೂಡಿದ ನಗರಗಳ ಉಲ್ಲೇಖಗಳಿವೆ. ರಾಮಾಯಣದಲ್ಲಿ ಉಲ್ಲೇಖಿಸಿದಂತೆ ಲಂಕಾಪಟ್ಟಣ ಬಲವಾದ ಕೋಟೆಯಿಂದ ಸುತ್ತುವರಿಯಲ್ಪಟ್ಟಿತು.

ಕರ್ನಾಟಕದಲ್ಲಿ ಕೋಟೆಗಳ ಪ್ರಾಚೀನತೆಯನ್ನು ಮೌರ್ಯರ ಕಾಲಕ್ಕೆ ಕೊಂಡೊಯ್ಯಬಹುದು. ಮೌರ್ಯರ ಕಾಲದ ಪಟ್ಟಣಗಳಾದ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳು ಕೋಟೆಯಿಂದ ಆವೃತ್ತವಾಗಿದ್ದ ಊರುಗಳಾಗಿದ್ದವೆಂದು ಅಭಿಪ್ರಾಯಪಡಲಾಗಿದೆ. ಕ್ರಿ. ಶ. ೩ನೆಯ ಶತಮಾನದಿಂದ ೪ನೆಯ ಶತಮಾನದವರೆಗೆ ಆಳ್ವಿಕೆ ಮಾಡಿದ ಶಾತವಾಹನರು ನಿರ್ದಿಷ್ಟ ಆಕಾರದ ಇಟ್ಟಿಗೆಗಳನ್ನು ಕೋಟೆ ನಿರ್ಮಾಣಕ್ಕೆ ಬಳಸಿದ್ದರೆನ್ನಲಾಗಿದೆ. ಶಾತವಾಹನರ ಕೋಟೆಗಳ ಕುರುಹುಗಳು, ಸನ್ನತಿ, ಮಾನ್ಯಖೇಟ, ಚಂದ್ರವಳ್ಳಿ, ಬ್ರಹ್ಮಗಿರಿಗಳಲ್ಲಿ ಕಂಡುಬಂದಿವೆ. ಕೋಟೆಯ ರಚನೆ ಹೀಗೆ ಪ್ರಾದೇಶಿಕ ಪರಿಸರದಲ್ಲಿನ ಭಿನ್ನತೆ, ಹವಾಗುಣ, ರಾಜಕೀಯ ಭದ್ರತೆ, ಆರ್ಥಿಕ ಸಂಪನ್ಮೂಲ, ನೈಸರ್ಗಿಕ ರಕ್ಷಣೆಯ ಅಂಶಗಳನ್ನು ಗಮನಿಸಿರುವುದು ಕಂಡುಬರುತ್ತದೆ. ಕಾಲದಿಂದ ಕಾಲಕ್ಕೆ ಬದಲಾದ

ಆಧುನಿಕ ಯುದ್ಧ ತಂತ್ರಕ್ಕನುಗುಣವಾಗಿ ಪ್ರಾಚೀನ ಕದಂಬರಿಂದ ಹಿಡಿದು ವಿಜಯನಗರದವರೆಗೆ ಕೋಟೆಯ ರಚನೆಯಲ್ಲಿ ಬದಲಾವಣೆ ಮತ್ತು ಬೆಳವಣಿಗೆಯಾಗಿರುವುದನ್ನು ಗುರುತಿಸಬಹುದು.[೪೮] ಒಟ್ಟಿನಲ್ಲಿ ಶುಕ್ರನೀತಿಸಾರ ಹೇಳುವಂತೆ ಅನೇಕ ರೀತಿಯ ಗಿಡಮರ ಪೊದರುಗಳಿಂದ ಕೂಡಿದ, ದನಕರು, ಪ್ರಾಣ ಪಕ್ಷಿಗಳಿಂದ ಸಮೃದ್ಧವಾಗಿರುವ, ಧಾನ್ಯ ಸಮೃದ್ಧಿಯಿರುವ, ಬೆಟ್ಟ ನೀರುಗಳಿಂದ ಆವೃತವಾಗಿರುವ ಪ್ರದೇಶದಲ್ಲಿ ಕೋಟೆ ಕಟ್ಟಬೇಕು[೪೯] ಎಂಬ ನಿಯಮಕ್ಕನುಸಾರವಾಗಿ ಕೋಟೆಗಳೂ ಕಟ್ಟಲ್ಪಟ್ಟಿವೆ.

ಬೆಟ್ಟದಪುರ ಪಿರಿಯಾಪಟ್ಟಣ ತಾಲ್ಲೂಕಿಗೆ ಸೇರಿದ ಹೋಬಳಿ. ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ಹದಿನಾರು ಕಿ.ಮೀ.ಗಳ ಅಂತರದಲ್ಲಿದೆ. ಈ ಪ್ರದೇಶ ಐತಿಹಾಸಿಕವಾಗಿ ಬಹಳ ಮಹತ್ವದ್ದಾಗಿದೆ. ಕ್ರಿ.ಶ. ಹತ್ತನೆಯ ಶತಮಾನಕ್ಕೆ ಸೇರಬಹುದಾದ ಬೆಟ್ಟದಪುರ ಶಾಸನಗಳಿಂದ ಚೋಳ, ಚಂಗಾಳ್ವ, ಹೊಯ್ಸಳ, ವಿಜಯನಗರ ಮತ್ತು ಮೈಸೂರು ಒಡೆಯರ ಆಳ್ವಿಕೆಗೆ ಒಳಪಟ್ಟಿತು. ಅಲ್ಲದೆ ಚಂಗಾಳ್ವ ಮನೆತನದ ಪ್ರಮುಖ ಧಾರ್ಮಿಕ ಕ್ಷೇತ್ರವಾಗಿತ್ತು. ಗುಜರಾತಿನ ದ್ವಾರಕೆಯಿಂದ ಬಂದಂತಹ ಅರಸನಾದ ವಿಕ್ರಮರಾಯ ಪ್ರಾರಂಭದಲ್ಲಿ ನಂಜರಾಯ ಪಟ್ಟಣದಲ್ಲಿ ನೆಲೆಸಿದನು. ನಂತರ ತನ್ನ ಮಂತ್ರಿ ಮಂಗರಸನೊಂದಿಗೆ ಪ್ರಾಚೀನವಾದ ಅಂಜನಗಿರಿ ಬೆಟ್ಟ ಹಾಗೂ ಬೆಟ್ಟದಪುರ ಬೆಟ್ಟಕ್ಕೆ ಭೇಟಿ ನೀಡಿದ್ದನು. ಪ್ರಾರಂಭದಲ್ಲಿ ಇಲ್ಲಿಯ ಸ್ಥಳೀಯ ಜನತೆಯಾದ ಬೇಡ ಸಮುದಾಯದೊಂದಿಗೆ ಯುದ್ಧ ಮಾಡಬೇಕಾಯಿತು. ಅಂತಿಮವಾಗಿ ಸ್ಥಳೀಯ ಬೇಡ ನಾಯಕರನ್ನು ಸೋಲಿಸಿ ರಾಜ್ಯ ವಿಸ್ತರಿಸಿದ. ಹೀಗೆ ರಾಜ್ಯ ವಿಸ್ತರಿಸಿದ ಚಂಗಾಳ್ವನು ತೀರ್ಥಂಕರ ಬೆಟ್ಟದ ಬಳಿ ಬಿಡಾರ ಬಿಟ್ಟಿದ್ದಾಗ ಮೊಲವೊಂದು ಬೇಟೆ ನಾಯಿಯನ್ನು ಅಟ್ಟಿಸಿಕೊಂಡು ಹೋಗುತ್ತಿದ್ದ ದೃಶ್ಯವನ್ನು ಕಂಡು ಆ ಭೂಮಿಯು ರಾಜ್ಯ ಸ್ಥಾಪನೆಗೆ ಯೋಗ್ಯವಾದ ಗಂಡು ಭೂಮಿಯೆಂದು ತಿಳಿದು ಅಲ್ಲಿ ಕೋಟೆ ಸಮೇತ ಪಟ್ಟಣವನ್ನು ಕಟ್ಟಿ ಅದನ್ನೆ ಬೆಟ್ಟದಪುರವೆಂದು ಕರೆದ. ತರುವಾಯ ಬೆಟ್ಟದಪುರ ಆಡಳಿತವನ್ನು ತನ್ನ ಮಗ ಚಂಗಾಲರಾಯನಿಗೂ, ಕಲ್ಲಹಳ್ಳಿಯನ್ನು ತನ್ನ ಮಂತ್ರಿ ಹಾಗೂ ಕುಲದವನು ಆದ ಮಂಗರಸನಿಗೂ ವಹಿಸಿದನೆಂದು ಹೇಳಲಾಗಿದೆ. ಹೀಗೆ ವಿಜೇಯನಾದ ವಿಕ್ರಮರಾಯ ಇಲ್ಲಿಯೇ ಅದರ ನೆನಪಿಗಾಗಿ ಒಂದು ಪುರವನ್ನು ಸ್ಥಾಪಿಸಿದನು. ತನ್ನ ಹೆಸರಿನಿಂದಲೇ ಹತ್ತನೇ ಶತಮಾನದಲ್ಲಿ ವಿಕ್ರಮಪುರವೆಂದು ಕರೆದನು. ಈತ ಜೈನ ಧರ್ಮಿಯಾನಾಗಿದ್ದು ಜನತೆಯನ್ನು ಇಲ್ಲಿಗೆ ಕರೆತಂದು ಕೋಟೆಯನ್ನು ನಿರ್ಮಿಸಿದನು. ಇಲ್ಲಿಯವರೆಗೆ ಕಾಡುಪ್ರದೇಶವಾಗಿದ್ದ ಅಂಜನಗಿರಿ, ಪುರ, ಪಟ್ಟಣವಾಗಿ ಪರಿವರ್ತನೆಯಾಯಿತು. ಒಟ್ಟಿನಲ್ಲಿ ಇಂದಿನ ಬೆಟ್ಟದಪುರ ಸ್ಥಾಪಕನಾಗಿ ವಿಕ್ರಮರಾಯ ಇತಿಹಾಸದ ಪುಟಗಳಲ್ಲಿ ದಾಖಲೆಯಾಗಿದ್ದು, ಜೈನಧರ್ಮದ ನೆಲೆಯಾಗಿತ್ತೆಂದು ಪುರಾತತ್ವ ಮತ್ತು ಇತಿಹಾಸದಿಂದ ತಿಳಿದುಬರುತ್ತದೆ.

ವಿಕ್ರಮರಾಯನು ಪಟ್ಟಣವನ್ನು ಸ್ಥಾಪಿಸಿ ಆರ್ಥಿಕವಾಗಿ ಏಳುಸಾವಿರ ಪಗೋಡಗಳಷ್ಟು ಆದಾಯ ತರುವಂತಹ ಭೂಪ್ರದೇಶವನ್ನು ವಶಪಡಿಸಿಕೊಂಡನು. ಈತನ ನಂತರ ಈತನ ಪುತ್ರನಾದ ಚಂಗಾಲರಾಯನು ಪಟ್ಟಾಭಿಷಿಕ್ತನಾದನು. ಈತನು ತನ್ನ ತಂದೆಗಿಂತ ಬಲಿಷ್ಟನಾಗಿದ್ದು ಪಟ್ಟಣವನ್ನು ವಿಸ್ತರಿಸಿ ಜೈನಧರ್ಮ ಪ್ರಚಾರ ಮಾಡಿ ಹನ್ನೆರಡುಸಾವಿರ ಪಗೋಡಗಳಷ್ಟು ಆದಾಯ ಬರುವಷ್ಟು ರಾಜ್ಯವಿಸ್ತರಿಸಿ ಕೋಟೆ ನಿರ್ಮಿಸಿದ. ಪ್ರಕೃತಿದತ್ತವಾದ ಬೆಟ್ಟಗುಡ್ಡಗಳಿಂದ ಸುತ್ತುವರೆದಿದ್ದ ಈ ಪಟ್ಟಣದಲ್ಲಿ ಬೆಟ್ಟದ ತಳಭಾಗದಲ್ಲಿ ಕೋಟೆಯ ಅವಶೇಷಗಳು ಮಾತ್ರ ಕಂಡುಬಂದಿದ್ದು, ಶಾಸನದಲ್ಲಿ ಕೋಟೆಯ ಸುತ್ತುಗಳು ಅದರ ವ್ಯಾಪ್ತಿ, ಉದ್ದ ಅಗಲಗಳ ಬಗ್ಗೆ ಮಾಹಿತಿಗಳಿಲ್ಲ.

ಬೆಟ್ಟದಪುರ ಮತ್ತು ಅದಕ್ಕೆ ಹೊಂದಿಕೊಂಡಂತೆ ಬೆಟ್ಟದತುಂಗದಲ್ಲಿ ಚಂಗಲರಾಯನು ಕೋಟೆಯನ್ನು ನಿರ್ಮಿಸಿದನೆಂದು ಹೇಳುವರು. ಬೆಟ್ಟದಪುರ ಮತ್ತು ಬೆಟ್ಟದತುಂಗಗಳಲ್ಲಿ ಒಳಕೋಟೆ, ಹೊರಕೋಟೆಗಳಿದ್ದವೆಂದು ಮೌಖಿಕ ಆಧಾರಗಳು ತಿಳಿಸುತ್ತವೆ. ಬೆಟ್ಟದಪುರದಲ್ಲಿ ಪ್ರಮುಖವಾಗಿ ಎರಡು ಪ್ರವೇಶದ್ವಾರಗಳಿದ್ದವು. ಕೋಟೆಯ ಹೆಬ್ಬಾಗಿಲೆಂದು ಕರೆಯಲಾಗಿರುವ ಪ್ರವೇಶದ್ವಾರವು ಪೂರ್ವಾಭಿಮುಖವಾಗಿರುವುದಾಗಿದೆ. ಪೂರ್ವಾಭಿಮುಖವಾಗಿರುವ ಪ್ರವೇಶದ್ವಾರದ ಹೆಬ್ಬಾಗಿಲು ಕಲ್ಲಿನಿಂದ ನಿರ್ಮಿತವಾಗಿದ್ದು, ಬಲಭಾಗದಲ್ಲಿ ಗಣೇಶನ ಗುಡಿಯಿದೆ. ಕೋಟೆಯ ಒಳಭಾಗದಲ್ಲಿ ಜಿನಾಲಯ, ಮಂದಿರ ಮತ್ತು ಅರಮನೆಯನ್ನು ಒಳಗೊಂಡಿರುವುದು. ಆದರೆ ಒಳಕೋಟೆಯ ಮುಂಭಾಗದಲ್ಲಿ ಪೇಟೆಬೀದಿ, ಕೋಟೆ ಬೀದಿಯಿದೆ. ಹೊರ ಕೋಟೆಯ ಆವರಣದಲ್ಲಿ ಪುಷ್ಕರಣಿಗಳು, ವೇಶ್ಯೆಯರ ಸ್ನಾನಕೊಳವಿತ್ತು. ಇದೇ ರೀತಿಯಲ್ಲಿ ಬೆಟ್ಟತುಂಗದಲ್ಲಿಯು ಒಳಕೋಟೆ, ಹೊರಕೋಟೆ ಇತ್ತೆಂದು ಕಂಡುಬಂದಿದೆ. ಒಳಕೋಟೆಯಲ್ಲಿ ಇಂದು ಜಿನಾ ಬಸದಿಗಳು ಇರುವುದು. ಹೊರಕೋಟೆ ಇದ್ದ ಸ್ಥಳದಲ್ಲಿ ಇಂದು ಹಾರಂಗಿನಾಲೆಯ ಕಾಲುವೆ ತೆಗೆದಿರುವರು. ಇದರಿಂದ ಇಲ್ಲಿ ಕೋಟೆಯ ಯಾವುದೇ ಅವಶೇಷಗಳು ಕಂಡು ಬರುವುದಿಲ್ಲ.

ಪ್ರಾಚೀನ ಕರ್ನಾಟಕದ ಹಲವು ಸಾಮಂತ ಮನೆತನಗಳಲ್ಲಿ ಪಿರಿಯಾಪಟ್ಟಣದ ಚಂಗಾಳ್ವರು, ಸಲ್ಲಿಸಿದ ಸೇವೆ ಅಮೂಲ್ಯವಾದುದ್ದಾಗಿದೆ. ಇತರೆ ಅರಸರಿಗೆ ಸೇವೆ ಸಲ್ಲಿಸಿರುವುದರೊಂದಿಗೆ ರಾಜ್ಯ ವಿಸ್ತರಣೆ, ಸಾಮಾಜಿಕ ಕಾರ್ಯಗಳನ್ನು ಮಾಡಿರುವರು. ಇದರ ಜೊತೆಗೆ ಕೋಟೆ ನಿರ್ಮಿಸುವುದರಲ್ಲೂ ಪ್ರಮುಖರಾಗಿದ್ದಾರೆ. ಕ್ರಿ.ಶ.೧೦೩೦-೬೦ರಲ್ಲಿ ಚಂಗಾಳ್ವರ ವೀರರಾಜೇಂದ್ರನು ಬೆಟ್ಟದಪುರದಲ್ಲಿ ಕೋಟೆಯನ್ನು ಕಟ್ಟಿ ರಾಜ್ಯಾಡಳಿತ ಪ್ರಾರಂಭಿಸಿದನು. ಕೋಟೆಯ ಸುತ್ತಲು ಶತೃವಿನಿಂದ ರಕ್ಷಣೆ ಪಡೆಯಲು ಕಂದಕಗಳನ್ನು ನಿರ್ಮಿಸಿ, ಒಳಭಾಗಕ್ಕೆ ನೀರು ಹರಿಸಲು

ಸುತ್ತಲು ಸ್ವಾಭಾವಿಕ ಹಾಗೂ ನಿರ್ಮಿತ ಕೆರೆಗಳನ್ನು ಸ್ಥಾಪಿಸಿದ್ದಾರೆ. ಆದರೆ ಪ್ರಸ್ತುತವಾಗಿ ಒಳಕೋಟೆ ಮತ್ತು ಹೊರಕೋಟೆ ಇದ್ದುದಕ್ಕೆ ಸ್ಮಾರಕವಾಗಿ ಯಾವುದು ಉಳಿದಿಲ್ಲ. ಆದರೆ ಸಂತೆ ಬೀಧಿ ಮತ್ತು ಕೋಟೆ ಬೀದಿಯಲ್ಲಿ ಸುಮಾರು ೧೫–೨೦ ಅಡಿ ಎತ್ತರದ ಗೋಡೆಯನ್ನು ಬಿಟ್ಟರೇ ಯಾವುದೇ ಆಧಾರಗಳು ದೊರೆಯುವುದಿಲ್ಲ. ಕೋಟೆಗೆ ಬಳಸಿರುವ ಕಲ್ಲುಗಳು ೩x೪, ೪x೩, ೩x೫ ಅಡಿ ಉದ್ದ ಮತ್ತು ಅಗಲ ವಿಸ್ತೀರ್ಣತೆ ಹೊಂದಿರುವುದನ್ನು ಕಾಣಬಹುದು. ಒಟ್ಟಿನಲ್ಲಿ ಕಾಡುಪ್ರಾಣಿ ಹಾಗೂ ಶತೃವಿನಿಂದ ರಕ್ಷಣೆ ಪಡೆದು ತನ್ನ ಕುಟುಂಬ ಹಾಗೂ ಜನಸಾಮಾನ್ಯರನ್ನು ರಕ್ಷಿಸುತ್ತಿದ್ದರೆಂದು ಕಂಡುಬರುವುದು. ರಾಜಧಾನಿ ಮತ್ತು ಕೋಟೆಯ ನಿರ್ಮಾಣದಲ್ಲಿ ಸ್ಥಳ ಬಹುಮುಖ್ಯವಾದ ವಿಷಯ. ನೈಸರ್ಗಿಕ ರಕ್ಷಣೆಯ ದೃಷ್ಟಿಯಿಂದ ನದಿಯ ದಡಗಳು ಹೆಚ್ಚು ಉಪಯುಕ್ತ. ಅದರಲ್ಲೂ ನದಿಯೂ ತೀವ್ರವಾಗಿ ತಿರುವು ಪಡೆದುಕೊಂಡು ಸ್ವಲ್ಪಮಟ್ಟಿಗೆ ರಕ್ಷಣೆ ನೀಡುವುದು ಉಳಿದೆಡೆ ಕೋಟೆಯ ಸುತ್ತ ಕಂದಕವನ್ನು ತೋಡಿ ಅದಕ್ಕೆ ಕಾಲುವೆ ಮೂಲಕ ನೀರನ್ನು ಹರಿಸುವುದು ಸುಲಭ ಕೆಲಸ. ವೇಗವಾಗಿ ಹರಿಯುವ ನೀರು ತಿರುವಿನಲ್ಲಿ ಸುಲಭವಾಗಿ ಕಾಲುವೆಯ ಮೂಲಕ ಕಂದಕವನ್ನು ತುಂಬುತ್ತದೆ. ಇಲ್ಲಿಯ ಕೋಟೆ ನಿರ್ಮಾಣಕ್ಕೆ ಕಂದಕದಿಂದ ತೆಗೆದ ಮಣ್ಣನ್ನು ಹಾಗೂ ಜಂಬಿಟ್ಟಿಗೆಯನ್ನು ಬಳಸಲಾಗಿದೆ.

ಪಿರಿಯಾಪಟ್ಟಣದ ಕೋಟೆಯನ್ನು ಎರಡು ವಿಧವಾಗಿ ವಿಂಗಡಿಸಬಹುದು. ಒಂದು ಒಳಕೋಟೆ ಹಾಗೂ ಮತ್ತೊಂದು ಹೊರಕೋಟೆ. ನಂಜುಂಡರಾಜನು ಕ್ರಿ.ಶ. ೧೫೨೫–೧೫೪೦ರ ಆಳ್ವಿಕೆಯಲ್ಲಿ ಪಿರಿಯಾಪಟ್ಟಣದಲ್ಲಿ ಮಣ್ಣಿನ ಕೋಟೆ ಕಟ್ಟಿ ಆಳುತ್ತಿದ್ದನು. ಆದರೆ ಇವನ ನಂತರದ ಅರಸರ ಕಾಲದಲ್ಲಿ ಶತೃಗಳ ಹಾಗೂ ಮುಖ್ಯವಾಗಿ ಮೈಸೂರು ಒಡೆಯರ ದಾಳಿ ಅಧಿಕವಾಗಿರಬೇಕು. ಆ ಕಾರಣದಿಂದ ಇವನ ಮೊಮ್ಮಗನಾದ ಪಿರಿಯಾರಾಜಯ್ಯ ಕುಲೋತ್ತುಂಗನು ರಾಜ್ಯ ವಿಸ್ತರಣೆ ಹಾಗೂ ರಕ್ಷಣೆಯ ದೃಷ್ಟಿಯಿಂದ ಮಣ್ಣಿನ ಕೋಟೆಯ ಬದಲಿಗೆ ಕಲ್ಲಿನ ಕೋಟೆ ಕಟ್ಟಿಸಿದನು. ಪಿರಿಯಾಪಟ್ಟಣ ಕೋಟೆಯ ವ್ಯಾಪ್ತಿಗೆ ಸುಮಾರು ೧೫ ರಿಂದ ೨೦ ಎಕರೆ ಪ್ರದೇಶ ಒಳಗೊಂಡಿದೆ. ಕೋಟೆಯ ಸ್ಮಾರಕಗಳು ಅವನತಿಗೊಂಡಿರುವುದರಿಂದ ಅವುಗಳ ರಚನಾ ವಿನ್ಯಾಸವನ್ನು ಅರಿಯಲು ಕಷ್ಟಕರ. ಆದರೆ ಪ್ರಸ್ತುತ ಕೋಟೆಯ ಸ್ಮಾರಕಗಳಲ್ಲಿ ಉಳಿದಿರುವ ಎರಡು ಭಾಗವನ್ನು ಗುರುತಿಸಲಾಗಿದೆ. ಕೋಟೆ ಬೀದಿಗೆ ಪ್ರವೇಶ ಮಾಡಲು ಉಳಿದಿರುವ ಕೋಟೆಯ ಪ್ರವೇಶದ್ವಾರ ಹಾಗೂ ಒಳಕೋಟೆಯಿಂದ ಹೊರಹೋಗಲು ಇರುವ ಉಪ್ಪರಗೇರಿಯ ಹೊರಕೋಟೆಯ ಪ್ರವೇಶದ್ವಾರ. ಹೊರಕೋಟೆಯ ಪ್ರವೇಶದ್ವಾರ ಚಿಕ್ಕದಾಗಿದ್ದು, ಸಂಪೂರ್ಣ ಅವನತಿಯ ಹಾದಿಯಲ್ಲಿದೆ. ಇದು ಹಮ್ಮಿಗೆ ರಸ್ತೆ ಮತ್ತು ಚಿಕ್ಕ ಕೆರೆಯ ಸಮೀಪದಲ್ಲಿದೆ. ಇಲ್ಲಿಯ ಪ್ರವೇಶದ್ವಾರ ಸುಮಾರು ಹತ್ತು ಅಡಿ ಎತ್ತರದ ಕಂಬಗಳ ಮೇಲೆ ಇಟ್ಟಿಗೆಯನ್ನು ಇಟ್ಟು ನಿರ್ಮಿಸಿರುವರು. ಇವುಗಳ ಮೇಲೆ ಸುಮಾರು ೨x೩, ೩x೫, ೪x೩

ಅಡಿ ಎತ್ತರದ ಕಲ್ಲುಗಳಿಂದ ಗೋಡೆ ನಿರ್ಮಿಸಿರುವರು. ಈ ಕೋಟೆ ಗೋಡೆಯು ಸುಮಾರು ೨೦ ಅಡಿ ಎತ್ತರ ಹಾಗೂ ಎರಡರಿಂದ ಮೂರು ಅಡಿ ಅಗಲ ವಿಸ್ತೀರ್ಣತೆ ಹೊಂದಿದೆ. ಒಳಕೋಟೆಯ ಪ್ರವೇಶದ್ವಾರಕ್ಕಿಂತ ಹೊರಕೋಟೆಯ ಪ್ರವೇಶದ್ವಾರ ಚಿಕ್ಕದಾಗಿದೆ.

ಹೊರಕೋಟೆಯ ಪ್ರವೇಶದ್ವಾರ ಸ್ಮಾರಕವಾಗಿ ಉಳಿದಿದ್ದು, ೨೦ ಅಡಿ ಎತ್ತರವಾಗಿದೆ. ಪ್ರವೇಶದ್ವಾರದ ಮೇಲಿದ್ದ ಗೋಪುರ ಸಂಪೂರ್ಣವಾಗಿ ಅವನತಿ ಹೊಂದಿರುವುದು, ಆದರೆ ಜಗಲಿಯ ಮೇಲೆ ೧೦ ಅಡಿ ಎತ್ತರದ ಕಂಬಗಳು ಉಳಿದಿರುವವು. ಎಂಟು ಕಂಬಗಳು ಸ್ವತಂತ್ರವಾಗಿರುವವು ಮತ್ತು ಗೋಡೆಗೆ ಹೊಂದಿಕೊಂಡಂತೆ ಅರ್ಧಗಂಭಗಳಿವೆ. ಇವುಗಳು ಚೌಕಾಕಾರದಲ್ಲಿದ್ದು ೮ ಮುಖಗಳನ್ನು ಹೊಂದಿವೆ. ಮತ್ತು ವಿಜಯನಗರ ಶೈಲಿಯ ಲಕ್ಷಣ ಹೊಂದಿವೆ. ಈ ಕಂಬಗಳನ್ನು ಒಂದು ಅಡಿ ಎತ್ತರದ ಪೀಠದ ಮೇಲೆ ನಿಲ್ಲಿಸಲಾಗಿದೆ. ಒಟ್ಟು ೮ ಮುಖ ಹೊಂದಿರುವ ೧೨ ಕಂಬಗಳು ಇವೆ. ಸರಳವಾಗಿರುವ ಆರು ಕಂಬಗಳಿವೆ. ಇವುಗಳ ಮೇಲೆ ಯಾವುದೇ ಶಿಲ್ಪಗಳ ಕೆತ್ತನೆ ಇಲ್ಲದೆ ಸರಳವಾಗಿರುವವು. ಆದರೆ ಒಂದು ಕಂಬದಲ್ಲಿ ಎಂಟು ಸರ್ಪಗಳು ಸರಸದಲ್ಲಿ ತೊಡಗಿರುವ, ಗೋಡೆಯಲ್ಲಿ ಎರಡು ಅಡಿ ಎತ್ತರದ ಆಂಜನೇಯನ ಶಿಲ್ಪವಿದೆ. ಇದರ ಸಮೀಪದಲ್ಲಿಯೇ ಮಾರಮ್ಮನ ಗುಡಿ ಇದೆ. ಕೋಟೆಯ ಪ್ರವೇಶದ್ವಾರದಲ್ಲಿ ಒಂದು ಮಿಥುನಶಿಲ್ಪ ಬಿಟ್ಟರೆ ಉಳಿದ ಕಡೆ ಸರಳವಾಗಿದೆ. ಪ್ರವೇಶದ್ವಾರದ ಬಾಗಿಲ ಬಳಿಯೇ ಒಂದು ಕಿಂಡಿ ಇರುವುದು. ಇಲ್ಲಿರುವ ಕೋಟೆ ಗೋಡೆಯು ೨೫ ರಿಂದ ೩೦ ಅಡಿ ಎತ್ತರವಾಗಿದ್ದು, ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸಲಾಗಿದೆ. ಈ ಕಲ್ಲುಗಳು ಸುಮಾರು ೩ X ೪, ೪ X ೩, ೩ X ೫ ಇಂಚು ಉದ್ದ ಮತ್ತು ಅಗಲ ವಿಸ್ತೀರ್ಣತೆಯಿಂದ ಕೂಡಿವೆ ಹಾಗೂ ಕೋಟೆಗೆ ಬಳಸಿರುವ ಇಟ್ಟಿಗೆಗಳು ಎರಡೂವರೆಯಿಂದ ಮೂರು ಇಂಚುಗಳಷ್ಟು ವಿಸ್ತೀರ್ಣತೆ ಹೊಂದಿವೆ.

ಕೋಟೆಯ ಸುತ್ತಲು ಎಂಟು ದಿಕ್ಕುಗಳಲ್ಲಿ ಎಂಟು ಬತೇರಿಗಳು ಇದ್ದವೆಂದು ದಕ್ಷಿಣಾ ಮೂರ್ತಿಯವರ ಅಭಿಪ್ರಾಯ. ಆದರೆ ಇವುಗಳಲ್ಲಿ ಒಂದು ಬತೇರಿಯನ್ನು ಬಿಟ್ಟರೆ ಉಳಿದವು ಸಂಪೂರ್ಣವಾಗಿ ಹಾನಿಗೊಂಡಿರುವುದರಿಂದ ಅವುಗಳ ಅವಶೇಷಗಳು ಇಲ್ಲವಾಗಿವೆ. ಅವುಗಳಲ್ಲಿ ಒಂದು ಬತೇರಿ ಮಾತ್ರ ಈಶ್ವರ ದೇವಾಲಯದ ಮುಂದೆ ಇರುವುದು. ಈ ಬತೇರಿ ಅಥವಾ ವೀಕ್ಷಣಾಗೋಪುರವನ್ನು ಸ್ಥಳೀಯರ ಹಾಗೂ ಇತಿಹಾಸಕಾರರ ಆಸಕ್ತಿಯಿಂದ ರಕ್ಷಣೆ ಮಾಡಲ್ಪಟ್ಟಿದೆ. ಈ ಗುಡ್ಡದ ಮೇಲೆ ನಂದಿಯ ಶಿಲ್ಪ ಇಟ್ಟು ಪೂಜಿಸುತ್ತಿರುವುದರಿಂದ ಸ್ಮಾರಕವಾಗಿ ಉಳಿದಿದೆ. ಕೋಟೆಯ ಸುತ್ತಲೂ ಅಥವಾ ಗ್ರಾಮದ ಸುತ್ತಲೂ ಕೆರೆ ಇರುವುದರಿಂದ ಇಲ್ಲಿಯ ಜನತೆಗೆ ನೀರು ಹರಿಸಲು ಅನುಕೂಲಕರವಾಗಿತ್ತೆಂದು ಕಂಡುಬಂದಿದೆ. ಕೋಟೆಯ ಸುತ್ತಲು ಸುಮಾರು ೧೦ ರಿಂದ ೨೦ ಅಡಿ ಎತ್ತರ ಕಂದಕಗಳಿದ್ದವೆಂದು ಕಂಡುಬಂದಿದೆ. ಕೊತ್ತಳವೆಂದರೆ

ಕೋಟೆಯ ಮೇಲ್ಭಾಗವೆಂತಲೂ, ಕೋಟೆಯ ಮೇಲೆ ಸೈನಿಕರು ನಿಂತು ಕಾಯುವ ಎತ್ತರ ಪ್ರದೇಶವೆಂದು ಅರ್ಥ. ಕೊತ್ತಳಗಳು ಹೊರಗಿನ ಚಲನವಲನವನ್ನು ಸೂಕ್ಷ್ಮವಾಗಿ ಗಮನಿಸುವ ವೀಕ್ಷಣಾ ಕೇಂದ್ರಗಳಾಗಿದ್ದು ಸಾಮ್ರಾಜ್ಯ ರಕ್ಷಿಸಲು ಅನುಕೂಲಕರವಾಗಿವೆ. ಎತ್ತರವಾಗಿ ಕಟ್ಟಿದ ವೀಕ್ಷಣೆ ಕೇಂದ್ರಗಳಾದ ಈ ಕೊತ್ತಳಗಳು ಕೋಟೆಯ ನಾಲ್ಕು ಅಥವಾ ಎಂಟು ದಿಕ್ಕುಗಳಲ್ಲಿಯೂ ಇರುತ್ತಿದ್ದವೆಂದು ಚಿದಾನಂದಮೂರ್ತಿ ಅಭಿಪ್ರಾಯ ಪಟ್ಟಿರುವರು. ಸ್ಥಲದುರ್ಗದ ಸುತ್ತ ಕಂದಕ ವಿರುವ ವಿಷಯ ಸಾಮಾನ್ಯವಾಗಿ ಎಲ್ಲಾ ಕವಿಗಳ ವರ್ಣನೆಯಲ್ಲಿ ಬಂದಿದೆ. ಕಂದಕಕ್ಕೆ ಅಗಳು, ನೀರ್ಗಾವಿಗೆ, ಪರಿಖೆ ಎಂಬ ಪದಗಳನ್ನು ಪರ್ಯಾಯವಾಗಿ ಬಳಸಿದೆ. ಕೊಡವ ಭಾಷೆಯಲ್ಲಿ ಕಂದಕಕ್ಕೆ 'ಕಡಂಗ' ವೆಂದು ಹೆಸರು. ಕಡಂಗವೆಂದರೆ ಯುದ್ಧ ಸಮಯದಲ್ಲಿ ತೋಡಿಸಲಾದ ಕಂದಕವೆಂದು ಬಿ.ಎಲ್.ರೈಸ್ ಹೇಳಿದ್ದಾರೆ. ಒಟ್ಟಿನಲ್ಲಿ ಕೋಟೆ ಗೆದ್ದುದಾದರೆ ಇಡೀ ರಾಜ್ಯವೇ ಸಿಕ್ಕಂತೆ. ಅಂದು ಕೋಟೆ ಕಟ್ಟಿಸುವುದು ಮತ್ತು ಗೆಲ್ಲುವುದು ಪ್ರತಿಷ್ಠೆಯ ವಿಷಯ. ಕೋಟೆಯ ರಕ್ಷಕನಾಗಿ ಹಾಗೂ ಗಡಿಯ ಸುತ್ತಲೂ ಆಂಜನೇಯ ಗುಡಿ ಇರುವುದು ಇಲ್ಲಿಯ ಮತ್ತೊಂದು ವಿಶೇಷ.

ಅಡಿಟಿಪ್ಪಣಿಗಳು

೧. **ಕನ್ನಡ ವಿಷಯ ವಿಶ್ವಕೋಶ,** ೨೦೦೯: ಪು.೯೪೧.

೨. ಪರ್ಸಿಬ್ರೌನ್, ೧೯೪೩: **ಇಂಡಿಯನ್ ಆರ್ಕಿಟೆಕ್ಚರ್(ಬುದ್ಧಿಸ್ಟ್ ಆಂಡ್ ಹಿಂದೂ ಪಿರಿಯಡ್),** ಪು.೩

೩. **ಕನ್ನಡ ವಿಷಯ ವಿಶ್ವಕೋಶ,** ೨೦೦೯: ಪು.೯೪೧

೪. ಗೋಪಾಲ್ ಬಾ.ರಾ., ೧೯೯೩: **ಕಲೆ ಮತ್ತು ವಾಸ್ತು,** ಪು.೧

೫. ಬ್ರೂನೋಡಗೆನ್ಸ್, ೧೯೮೫: **ಮಯಮತ,** ಪು.೩೫.

೬. ಗೋಪಾಲ್ ಬಾ.ರಾ., **ಪೂರ್ವೋಕ್ತ:** ಪು.೧

೭. ಪ್ರಭಾಕರ್ ಎಂ.ಎನ್., ೧೯೯೯: **ದೇವಾಲಯಗಳ ವಾಸ್ತು ಚಂದ್ರಿಕೆ,** ಪು.೩

೮. ತಿಪ್ಪೇರುದ್ರಸ್ವಾಮಿ ಹೆಚ್., ೨೦೧೦: **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಪು.೫೨೩.

೯. ಅದೇ.

೧೦. ಅದೇ, ಪು.೫೨೭

೧೧. ಅದೇ, ಪು.೫೨೮

೧೨. ಅದೇ, ಪು.೫೨೯

೧೩. ಶಿವರಾಮ ಕಾರಂತ, ೧೯೯೧: **ಚಾಲುಕ್ಯ ವಾಸ್ತುಶಿಲ್ಪ,** ಪು.೧೨,೧೯,

೧೪. ಸಿಂದಗಿ ರಾಜಶೇಖರ್, ೧೯೮೮: **ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ,** ಪು.೬೭.

೧೫. ರೈಸ್ ಬಿ.ಎಲ್., **ಮೈಸೂರು ಇನ್ ಜನರಲ್,** ಸಂಪುಟ ೧, ಪು.೧೦

೧೬. ಸೂರ್ಯನಾಥ ಯು. ಕಾಮತ್(ಸಂ), ೧೯೮೮: **ಕರ್ನಾಟಕ ರಾಜ್ಯ ಗ್ಯಾಸೆಟಿಯರ್,** ಪು.೮೩೯

೧೭. ಅದೇ, ಪು.೮೪೦

೧೮. ರೈಸ್ ಬಿ.ಎಲ್., **ಪೂರ್ವೋಕ್ತ,** ಪು.೨೩೯

೧೯. ಎ.ಕ. ಸಂಪುಟ ನಾಲ್ಕು, ಪಿ.ಪ.ಸಂ.೭೪.

೨೦. ಅದೇ, ಸಂ.೫೦.

೨೧. ಅದೇ, ಸಂ.೯೮-೧೦೧.

೨೨. ಅದೇ, ಸಂ.೧೪೧.

೨೩. ಸೂರ್ಯನಾಥ ಯು. ಕಾಮತ್(ಸಂ), ೧೯೮೮: **ಪೂರ್ವೋಕ್ತ,** ಪು.೮೬೯.

೨೪. ಎ.ಕ. ಸಂಪುಟ ೪, ಸಂ.೫೭.

೨೫. ಸೂರ್ಯನಾಥ ಯು.ಕಾಮತ್(ಸಂ), ೧೯೮೮: **ಪೂರ್ವೋಕ್ತ,** ಪು.೯೦೫

೨೬. ಅದೇ, ಪು.೯೧೫

೨೭. ಎ.ಕ. ಸಂಪುಟ ೪, ಸಂ.೧೩೯.

೨೮. ರಾಜಶೇಖರ್ ಪಿ.ಕೆ.(ಸಂ), ೨೦೦೧: **ಶಿವಸಂಪದ,** ಪು.೩೩೫.

೨೯. ಸೂರ್ಯನಾಥ ಯು.ಕಾಮತ್(ಸಂ), **ಪೂರ್ವೋಕ್ತ,** ಪು.೮೬೯

೩೦. ಎ.ಕ. ಸಂಪುಟ ೪, ಸಂ.೧.

೩೧. ಸೂರ್ಯನಾಥ ಯು. ಕಾಮತ್(ಸಂ), **ಪೂರ್ವೋಕ್ತ,** ಪು.೯೦೪

೩೨. ಅದೇ, ಪು.೮೪೦

೩೩. ಅದೇ, ಪು.೮೬೯

೩೪. ಅದೇ, ಪು.೯೦೫

೩೫. ಹಯವದನ ರಾವ್, **ಮೈಸೂರು ಜಿಲ್ಲಾ ಗೆಜೆಟಿಯರ್,** ಪು.೯೦೫

೩೬. ಸೂರ್ಯನಾಥ ಯು.ಕಾಮತ್(ಸಂ), **ಪೂರ್ವೋಕ್ತ,** ಪು.೯೦೪

೩೭. ಎ.ಕ., ಸಂಪುಟ ನಾಲ್ಕು, ಪಿ.ಪ.ಸಂ.೪೦

೩೮. ಅದೇ, ಸಂ.೪೧.

೩೯. ಅದೇ, ಸಂ.೪೨.

೪೦. ಅದೇ, ಸಂ.೫೪.

೪೧. ಅದೇ, ಸಂ.೫೫.

೪೨. ಅದೇ, ಸಂ.೫೩.

೪೩. **ಕನ್ನಡ ವಿಷಯ ವಿಶ್ವಕೋಶ,** ೧೯೭೫: ಸಂಪುಟ ೦೯. ಪು.೨೮೧.

೪೪. ಕೊಟ್ರೇಶ್ ಎಂ., ೨೦೧೧: **ಬಳ್ಳಾರಿ ಜಿಲ್ಲೆಯ ಕೋಟೆಗಳು,** ಪು.೧೩.

೪೫. ರಮೇಶನಾಯಕ(ಸಂ), ೨೦೦೭: **ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ,** ಪು.೫೮.

೪೬. **ಕನ್ನಡ ವಿಷಯ ವಿಶ್ವಕೋಶ,** ೧೯೭೫: ಪು.೨೮೧.

೪೭. ಕೊಟ್ರೇಶ್ ಎಂ., ೨೦೧೧: ಪೂರ್ವೋಕ್ತ. ಪು.೧೪.

೪೮. ತಿಪ್ಪೇಸ್ವಾಮಿ, ೨೦೦೪: **ರಕ್ಷಣಾ ವಾಸ್ತುಶಿಲ್ಪ, ಪೂರ್ವೋಕ್ತ.** ಪು.೧೦೪.

೪೯. ಎಚ್ಚೆಸ್ಕೆ(ಸಂ), ೧೯೮೫: **ಅವಲೋಕನ ಕರ್ನಾಟಕದ ಪರಂಪರೆಯ ಸಮೀಕ್ಷೆ,** ಪು.೧೨೯.

ಅಧ್ಯಾಯ ಆರು

ಮೂರ್ತಿಶಿಲ್ಪ

ಅಧ್ಯಾಯ ಆರು

ಮೂರ್ತಿಶಿಲ್ಪ

ಭಾರತದಲ್ಲಿ ದೇವತಾರಾಧನೆ, ದೇವಾಲಯಗಳ ನಿರ್ಮಾಣ ಪ್ರಾರಂಭವಾದ ದಿನದಿಂದ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಆರಾಧನೆ ನಡೆದುಕೊಂಡು ಬಂದಿದೆ. ಯಾವುದೇ ಪಂಥದ ದೇವಾಲಯವಿರಲಿ, ಆ ದೇವಾಲಯಕ್ಕೊಂದು ದೇವತಾಮೂರ್ತಿ ಇರುತ್ತದೆ. ಈ ರೀತಿಯ ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ಮೂರ್ತಿಶಿಲ್ಪಶಾಸ್ತ್ರ ಎಂದು ಕರೆಯುವರು. ಮೂರ್ತಿ ಪದಕ್ಕೆ ಸಮಾನಾರ್ಥವಾಗಿ ಪ್ರತಿಮೆ[೧] ಪದ ಪ್ರಯೋಗದಲ್ಲಿದೆ. ಅಲ್ಲದೆ ಮೂರ್ತಿಶಿಲ್ಪಶಾಸ್ತ್ರವನ್ನು ಪ್ರತಿಮಾಶಾಸ್ತ್ರ ಎಂದು ಕರೆಯಲಾಗಿದೆ. ಮೂರ್ತಿಯನ್ನು ಪ್ರಮಾಣಬದ್ಧವಾಗಿ ಹೇಗೆ ಹಿಡಿಯ ಬೇಕೆಂಬುದನ್ನು ತಿಳಿಸುವ ಶಾಸ್ತ್ರ. ಶಾಸ್ತ್ರೀಯ ನಿರೂಪಣೆ ಪ್ರಕಾರ ಮೂರ್ತಿಯು ಒಂಭತ್ತು ಅಂಗಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ, ನ್ಯಾಸ (ರೂಪಸಂಯೋಜನೆ), ಅಲಂಕಾರ(ಆಭರಣ, ವಸ್ತ್ರ, ಕೇಶ), ಮುದ್ರಾ(ಹಸ್ತ ಮುದ್ರೆಗಳು), ಆಯುಧ(ದೇವತೆಯ ಕೈಯಲ್ಲಿರುವ ಆಯುಧಗಳು), ಭಾಘ್ರಕಕ್ಷ(ಆಸನ), ವಾಹನ, ಉಪದೇವ(ಪ್ರಧಾನ ಪುರುಷ ದೇವತೆಗಳ ಸಂದರ್ಭದಲ್ಲಿ ಇವರ ಸ್ತ್ರೀ ದೇವತೆಗಳು), ಅರಿ (ದೇವತೆಯ ವೈರಿ) ಹಾಗು ಸ್ತುವಕ(ಭಕ್ತರು ಹಾಗು ಇತರ ಸೇವಕರು) ಈ ಶಾಸ್ತ್ರೀಯ ಸಂಪ್ರದಾಯಕ್ಕನುಗುಣವಾಗಿ ದೇವತಾ ಮೂರ್ತಿಗಳು ರೂಪುಗೊಳ್ಳುತ್ತವೆ. ಭಾರತದಲ್ಲಿ ಕ್ರಿ.ಪೂ. ೨೫೦೦ರ ಸುಮಾರಿಗೆ ಶಿಲ್ಪಕಲೆಯು ಬೆಳೆದು ಬಂದಿದ್ದುದನ್ನು[೨] ಹರಪ್ಪ ಮತ್ತು ಮೊಹೆಂಜೋದಾರೋಗಳಲ್ಲಿ ದೊರೆತಿರುವ ಮುದ್ರೆ ಮತ್ತು ಶಿಲ್ಪಗಳು ಮನದಟ್ಟು ಮಾಡಿವೆ. ಕ್ರಿ.ಪೂ.೩ನೆಯ ಶತಮಾನದಿಂದ ಈವರೆಗೆ ನಿರಂತರವಾಗಿ ಶಿಲ್ಪಕಲೆ ಭಾರತದಲ್ಲಿ ಮಹತ್ವದ ಸಾಧನೆ ಮಾಡುತ್ತಲೇ ಬಂದಿದೆ. ನೆರೆಹೊರೆಯ ರಾಷ್ಟ್ರಗಳ ಶಿಲ್ಪಕಲೆಯ ಪ್ರಭಾವವೂ ಭಾರತದ ಶಿಲ್ಪಕಲೆಯ ಮೇಲೆ ಆಗಿರುವುದು ನಿಜವಾದರೂ, ಅದು ಇಲ್ಲಿನ ಸ್ವಂತಿಕೆಯ ಮೇಲೆ ವಿಶೇಷ

ಪರಿಣಾಮ ಬೀರಿಲ್ಲ. ತನ್ನ ಮೂಲ ಸ್ವರೂಪದ ಜತೆಗೆ, ತನ್ನದೇ ಆದ ವಿಶೇಷತೆಗಳನ್ನು ಭಾರತೀಯ ಶಿಲ್ಪಕಲೆ ಉಳಿಸಿಕೊಂಡು ಬಂದಿದೆ.

ಭಾರತೀಯರು ವೇದಗಳ ಕಾಲದಲ್ಲಿ ವಿಗ್ರಹಗಳ ಪೂಜೆಗೆ ಪ್ರಾಧಾನ್ಯತೆ ಕೊಟ್ಟಿರಲಿಲ್ಲವೆಂಬ ಅಂಶ ತಿಳಿದುಬಂದರೂ, ಇಂದ್ರ, ವರುಣ, ರುದ್ರದೇವತೆಗಳಿಗೆ ಮನುಷ್ಯಾಕಾರದ ಕಲ್ಪನೆಯನ್ನು ಕೊಟ್ಟಿರುವುದು ಕಾಣಬರುತ್ತದೆ. ಋಷಿಗಳು ತಮ್ಮ ಮನೆಗಳಲ್ಲಿ ವಿಗ್ರಹಗಳನ್ನು ಪೂಜಿಸುತ್ತಿದ್ದರೆಂದೂ, ಸಹಸ್ರ ಗೋವುಗಳನ್ನು ಕೊಟ್ಟರೂ ವಿಗ್ರಹಗಳನ್ನು ಇತರರಿಗೆ ಕೊಡುತ್ತಿರಲಿಲ್ಲವೆಂಬ ಉಲ್ಲೇಖಗಳಿರುವುದರಿಂದ[೩] ಆ ಕಾಲದಲ್ಲೇ ವಿಗ್ರಹಾರಾಧನೆ ಪ್ರಚಲಿತವಾಗಿದ್ದ ಪದ್ಧತಿಯಾಗಿತ್ತೆನ್ನಬಹುದು, ರಾಮಾಯಣ, ಮಹಾಭಾರತಗಳಲ್ಲೂ ದೇವಾಲಯಗಳ ವಿಷಯ ಬರುವುದರಿಂದ ಅವುಗಳಲ್ಲಿ ಆ ವೇಳೆಗೆ ಮೂರ್ತಿಗಳು ಪ್ರತಿಷ್ಠಾಪಿತವಾಗಿರಬೇಕು. ಭಾರತದಲ್ಲಿನ ಮೂರ್ತಿಶಿಲ್ಪಕ್ಕೆ ಸ್ಫೂರ್ತಿಕೊಟ್ಟವರಲ್ಲಿ ಅಗ್ರಗಣ್ಯರು ಜೈನರು. ಇವರು ಮೊದಲು ತೀರ್ಥಂಕರ ಪ್ರತಿಮೆಗಳನ್ನು ನಿರ್ಮಿಸಿಕೊಂಡರು. ಇವರೊಡನೆ ಜೈನಪುರಾಣಗಳಿಲ್ಲಿರುವ ದೇವ–ದೇವಿಯರ[೪] ವಿಗ್ರಹಗಳ ನಿರ್ಮಾಣವೂ ನಂತರ ಪ್ರಾರಂಭವಾಯಿತ್ತೆಂದು ಕಂಡುಬರುತ್ತದೆ. ಮುಂದೆ ಬೌದ್ಧಧರ್ಮ ಹೆಚ್ಚು ಪ್ರಸಾರವಾದ ನಂತರ ಬುದ್ಧನ ವಿಗ್ರಹಗಳು ರೂಪುಗೊಳ್ಳತೊಡಗಿದವು. ಭಾರತದಲ್ಲಿ ಮೂರ್ತಿಗಳನ್ನು ಆರಾಧಿಸುವ ಪದ್ಧತಿ ಹಿಂದಿನಿಂದ ಬಂದಿದ್ದರೂ, ಮೂರ್ತಿಪೂಜೆ ಆಚರಿಸುವ ಕಾರಣಗಳೂ ಸ್ಪಷ್ಟವಾಗಿಲ್ಲ. ಅನೇಕ ವಿದ್ವಾಂಸರುಗಳ ಪ್ರಕಾರ, ಗೌತಮಬುದ್ಧನ ಪರಿನಿರ್ವಾಣದ ನಂತರ, ಆತನ ಅನುಯಾಯಿಗಳು ದಿವ್ಯ ಪುರುಷವರ್ಗಕ್ಕೆ ಸೇರಿಸುವ ಕ್ರಮ ಕೈಗೊಂಡರು. ಈ ಘಟ್ಟದಲ್ಲಿ ಬುದ್ಧನ ಮೂರ್ತಿಯ ಆರಾಧನೆ[೫] ಆರಂಭವಾಯಿತು.

ಚಾರಿತ್ರಿಕ ಯುಗಕ್ಕೆ ಬಂದಾಗ ಉತ್ತರ ಭಾರತದಲ್ಲಿ ಮೌರ್ಯರು, ಶುಂಗರು, ಕುಶಾನರು, ಗುಪ್ತರು, ವಾಕಾಟಕರು, ಪಾಲ ಮತ್ತು ಸೇನರು, ಒರಿಸ್ಸಾ ದೇಶವನ್ನು ಆಳಿದ ಚಾಂದೇಲರು ಪ್ರತೀಹಾರ, ಪರಮಾರ, ಚೌಹಾನರು, ಸೋಲಂಕಿಗಳೂ ಈ ರಾಜವಂಶದವರುಗಳ ಕಾಲದ ಶಿಲ್ಪಕಲೆಯ ಕಾಣಿಕೆಗಳು ಸಿಗುತ್ತವೆ. ದಕ್ಷಿಣ ಭಾರತದಲ್ಲಿ ಶಾತವಾಹನರು, ಚೋಳರು, ಪಾಂಡ್ಯರು, ಕರ್ನಾಟಕದವರಾದ ಕದಂಬ, ಗಂಗ, ರಾಷ್ಟ್ರಕೂಟ, ಚಾಳುಕ್ಯ, ಹೊಯ್ಸಳರು ಮತ್ತು ವಿಜಯನಗರದ ಅರಸರು ತಮ್ಮ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಕರ್ನಾಟಕದ ಗುಲ್ಬರ್ಗ ಜಿಲ್ಲೆಯ ಸನ್ನತಿಯಲ್ಲಿ ಶಾತವಾಹನ ಕಾಲದ ವಾಸ್ತುಶಿಲ್ಪ ಅವಶೇಷಗಳು[೬] ಬೆಳಕಿಗೆ ಬಂದಿವೆ. ಇಲ್ಲಿ ಆ ಕಾಲದ ಇಟ್ಟಿಗೆಯ ಸ್ತೂಪಗಳು, ಅವುಗಳನ್ನು ಅಲಂಕರಿಸಲು ಬಳಿಸಿದ್ದ ಶಿಲ್ಪ ಫಲಕಗಳು ಪತ್ತೆಯಾಗಿವೆ ಮತ್ತು ಬೌದ್ಧ ಧರ್ಮಕ್ಕೆ ಸೇರಿದ ಶಿಲ್ಪ ಫಲಕಗಳು, ಮಣ್ಣಿನ ಮತ್ತು ಇಟ್ಟಿಗೆಯ ಸ್ತೂಪಗಳ ಅಂಡಗಳನ್ನು ಅಲಂಕರಿಸುವುದಕ್ಕೋಸ್ಕರ ನೂರಾರು ಶಿಲ್ಪ ಫಲಕಗಳು ತಯಾರಾದವು. ಅವುಗಳಲ್ಲಿ

ಬುದ್ಧನ ಜನನ ಮತ್ತು ಜೀವನಕ್ಕೆ ಸಂಬಂಧಿಸಿದ ಶಿಲ್ಪ, ಜಾತಕ ಕಥೆಗಳೂ ವಿಶೇಷವಾಗಿವೆ. ಭಾರತದಲ್ಲಿ ಪೂಜೆಗೊಳ್ಳುತ್ತಿರುವ ಮೂರ್ತಿಗಳಲ್ಲಿ ಮೂರ್ತ ಮತ್ತು ಅಮೂರ್ತ ರೂಪಗಳೆರಡೂ ಇವೆ. ಮೂರ್ತಬಿಂಬಗಳಿಗೆ ನಿರ್ದಿಷ್ಟವಾದ ರೂಪವಿದ್ದು, ಮನುಷ್ಯ ರೂಪವು ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅವಯವಗಳನ್ನು ಹೊಂದಿರುತ್ತದೆ. ಆದರೆ ಅಮೂರ್ತ ರೂಪಕ್ಕೆ ನಿರ್ದಿಷ್ಟ ರೂಪವಿರುವುದಿಲ್ಲ. ಹುಟ್ಟು ಬಂಡೆಯ ಆಕಾರವನ್ನನುಸರಿಸಿ ಒಂದು ಕಲ್ಪಿತ ರೂಪವನ್ನು ರಚಿಸುತ್ತಾರೆ. ಇಂತಹ ಮೂರ್ತಿಗಳನ್ನು ಒಡಮೂಡಿದ ಅಥವಾ ಉದ್ಭವ ಮೂರ್ತಿಗಳೆಂದು ಸಾಮಾನ್ಯವಾಗಿ ಭಾವಿಸಿ ಇವುಗಳ ಸುತ್ತಲೂ ಪೌರಾಣಿಕ ಕಥೆಯನ್ನು ಹೆಣೆಯಲಾಗಿರುತ್ತದೆ. ಅನೇಕ ಕ್ಷೇತ್ರಗಳಲ್ಲಿನ ಉದ್ಭವ ಲಿಂಗ, ನರಸಿಂಹಮೂರ್ತಿ, ಗಣಪತಿ ವಿಗ್ರಹಗಳು, ಮೂರ್ತಿಶಿಲ್ಪಗಳ ಗುಂಪಿಗೆ[೭] ಸೇರಲ್ಪಟ್ಟಿವೆ. ಮೂರ್ತಿ ಪದವನ್ನು ಸಾಮಾನ್ಯವಾಗಿ ದೇವತಾ ವಿಗೃಹಗಳಿಗೆ ಪರ್ಯಾಯವಾಗಿ ಬಳಸಲಾಗುತ್ತದೆ. ಆದರೆ 'ಶಿಲ್ಪ' ದೇವತೆಗಳ ವಿಗ್ರಹವನ್ನು ರೂಪಿಸುವ ಅಥವಾ ಪ್ರತಿಮೆ(ಪ್ರತಿರೂಪ) ಅಸ್ತಿತ್ವದಲ್ಲಿರುವುದು. ಶಿಲ್ಪಗಳು ಜೀವಂತ ಇಲ್ಲವೆ ಜಡ ವಸ್ತುಗಳ ಬಾಹ್ಯ ಆಕೃತಿಯನ್ನು ಸೂಚಿಸುತ್ತವೆ.[೮] ಸಂಸ್ಕೃತದ ಪ್ರಾಚೀನ ಗ್ರಂಥಗಳಲ್ಲಿ ಶಿಲ್ಪ ಶಬ್ದವು ಪಾಣಿನಿಯ (ಕ್ರಿ.ಪೂ ೫೦೦) ಅಷ್ಟಧ್ಯಾಯದಲ್ಲಿ ಚಾರು (ಲಲಿತ)ಎಂತಲೂ, ಶಿಲ್ಪಗಳ ಹೆಸರನ್ನು ಮತ್ತು ಅವರ ಕಾರ್ಯಗಳನ್ನು ಸೂಚಿಸಲಾಗಿದೆ.[೯] ಒಟ್ಟಿನಲ್ಲಿ ದೇವಾಲಯ ಕಟ್ಟುವ ಉದ್ದೇಶವೇ ಮೂರ್ತಿಪೂಜೆಗಾಗಿ. ಮೂರ್ತಿಪೂಜೆ ಮಾಡುವ ಉದ್ದೇಶ ಮನಃಶಾಂತಿ ಗಾಗಿ. ಇದು ಅವರವರ ನಂಬಿಕೆಯು ಹೌದು ದೇವಾಲಯವನ್ನು ಕಟ್ಟುವ ಉದ್ದೇಶವೇ ಮೂರ್ತಿ ಪೂಜೆಗಾಗಿರುವುದಿಂದ ದೇವಾಲಯ ವಾಸ್ತುಕಲೆ ಮತ್ತು ಮೂರ್ತಿಶಿಲ್ಪಕಲೆ ಒಂದಕ್ಕೊಂದು ಅವಿನಾಭಾವ ಸಂಬಂಧದಿಂದ ಬೆಳೆದುಬಂದಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಕರ್ನಾಟಕದಲ್ಲಿ ಅಶೋಕನ ಶಾಸನಗಳು ದೊರೆತಿದ್ದರೂ ಅವನ ಕಾಲದ ಶಿಲ್ಪಗಳು ದೊರೆಯು ವುದಿಲ್ಲ. ಅವನ ನಂತರ ದಕ್ಷಿಣ ಭಾರತವನ್ನಾಳಿದ ಶಾತವಾಹನರ ಕಾಲದ ಶಿಲ್ಪಾವಶೇಷಗಳು ವಡಗಾಂವ್ ಮಾಧವಪುರ, ಬನವಾಸಿ, ಸನ್ನತಿಯಲ್ಲಿ ದೊರೆತಿವೆ. ಶಾತವಾಹನರ ನಂತರ ರಾಜ್ಯ ಸ್ಥಾಪನೆ ಮಾಡಿದ ಕದಂಬರ ಅವಶೇಷಗಳು ಉಪಲಬ್ಧವಿರುವುದು ಕಡಿಮೆಯಾದರೂ ಬನವಾಸಿ, ಹಲಸಿ, ಹಲ್ಮಿಡಿ ಮುಂತಾದ ಕಡೆ ಬಿಡಿಶಿಲ್ಪಗಳು ಕಾಣಬರುತ್ತವೆ.

ಪಿರಿಯಾಪಟ್ಟಣ ತಾಲ್ಲೂಕಿನ ಪರಿಸರದಲ್ಲಿ ಪ್ರಾಚೀನ ಕಾಲದಿಂದಲೂ ಹಂತ ಹಂತವಾಗಿ ದೇವಾಲಯಗಳು ನಿರ್ಮಾಣಗೊಳ್ಳುತ್ತಾ ಬಂದಿವೆ. ಇಲ್ಲಿ ಗುಹಾ ದೇವಾಲಯಗಳು ಮತ್ತು ರಚನಿಕ (ಕಟ್ಟಡ) ದೇವಾಲಯಗಳು ಕಂಡುಬರುತ್ತೇವೆ. ಇಲ್ಲಿ ಪ್ರಾಕೃತಿಕವಾಗಿ ಲಭ್ಯ ಬಂಡೆಗಳನ್ನು ಬಳಸಿ ದೇವಾಲಯಗಳು ನಿರ್ಮಾಣಗೊಂಡಿವೆ. ಅವುಗಳು ಗರ್ಭಗೃಹದಿಂದ ಹಿಡಿದು ದೇವಾಲಯದ ಎಲ್ಲ ಭಾಗಗಳು ಕಟ್ಟಡದ ಮಾದರಿಯಲ್ಲಿ ನಿರ್ಮಿತಿಗೊಂಡಿರುವ ಕದಂಬ,

ಗಂಗ, ಚಾಲುಕ್ಯ, ಹೊಯ್ಸಳ, ಚಂಗಾಳ್ವ, ವಿಜಯನಗರ ಮತ್ತು ವಿಜಯನಗರೋತ್ತರ, ಮೈಸೂರು ಒಡೆಯ ಮನೆತನದ ವಾಸ್ತುವಿಶೇಷತೆಗಳನ್ನು ಗಮನಿಸಬಹುದು. ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ದೇವಾಲಯಗಳು ಯಾವುದೇ ಒಂದು ರಾಜವಂಶದ ಕಾಲದಲ್ಲಿ ನಿರ್ಮಾಣಗೊಳ್ಳದೆ ಪ್ರಾರಂಭಿಕ ಕಾಲದಿಂದಲೂ ಬೆಳವಣಿಗೆ ಹೊಂದುತ್ತ ಬಂದಿದೆ. ಅವುಗಳಿಗೆ ಪೂರಕವಾಗಿ ಮೂರ್ತಿಶಿಲ್ಪಗಳನ್ನು ಅಳವಡಿಸಿದ್ದಾರೆ. ಸಾಮಾನ್ಯವಾಗಿ ದೇವಾಲಯಗಳ ಗರ್ಭಗೃಹಗಳಲ್ಲಿ ಮತ್ತು ಇತರ ಮಂಟಪಗಳಲ್ಲಿ ಬಿಡಿ ಶಿಲ್ಪಗಳನ್ನು ಕಾಣಬಹುದು. ಈ ಬಿಡಿಶಿಲ್ಪಗಳು ಕೆಲವು ಪೂರ್ಣ ರೂಪದಲ್ಲಿದ್ದರೆ, ಕೆಲವು ಉಬ್ಬುಶಿಲ್ಪಗಳ ರೂಪದಲ್ಲಿವೆ. ದೇವಾಲಯ ಕಟ್ಟಡಗಳ ಕಂಬಗಳ ಮೇಲೆ ಅಲ್ಪ ಸಂಖ್ಯೆಯಲ್ಲಿ ಉಬ್ಬುಶಿಲ್ಪಗಳು ಕಂಡುಬರುತ್ತವೆ. ಆದರೆ ಭಿತ್ತಿಗಳ ಮೇಲೆ ಇವು ವಿರಳವಾಗಿವೆ. ದೇವಾಲಯಗಳ ಮುಖಮಂಟಪ, ಸಭಾಮಂಟಪಗಳ ದೇವಕೋಷ್ಠಗಳಲ್ಲಿ ಮತ್ತು ಗರ್ಭಗೃಹಗಳ ಮೇಲಿನ ಶಿಖರ, ಮಹಾದ್ವಾರಗಳ ಮೇಲಿನ ಗೋಪುರಗಳಲ್ಲಿ ಗಾರೆಯ ಪ್ರತಿಮೆಗಳು ಕಂಡುಬರುತ್ತವೆ. ಕೆಲವು ಪ್ರಮುಖ ದೇವಾಲಯಗಳಲ್ಲಿ ದೇವರ ಉತ್ಸವಮೂರ್ತಿಗಳ ಲೋಹದ ಪ್ರತಿಮೆಗಳು ಕೂಡ ಇವೆ. ಸುಮಾರು ೫೦೦ ವರ್ಷಗಳವರೆಗೆ ಪಿರಿಯಾಪಟ್ಟಣ ತಾಲ್ಲೂಕು ಪರಿಸರವನ್ನಾಳಿದ ಚಂಗಾಳ್ವ ಮತ್ತಿತರ ಅರಸರ ದೇವಾಲಯ ಮತ್ತು ಮೂರ್ತಿಶಿಲ್ಪಗಳು ಇಂದಿಗೂ ಕಂಡುಬರುತ್ತವೆ. ಈ ಶಿಲ್ಪಗಳು ಕರ್ನಾಟಕವನ್ನಾಳಿದ ಇತರೆ ರಾಜಮನೆತನಗಳ ಪ್ರಭಾವಕ್ಕೆ ಒಳಗಾಗಿದ್ದರೂ ತಮ್ಮದೇ ಆದ ವಿಭಿನ್ನ ಲಕ್ಷಣಗಳನ್ನು ಅವು ಹೊಂದಿವೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರವನ್ನಾಳಿದ ಅರಸರು ಮತ್ತು ಸಾಮಂತ ಅರಸರು ಶಿಲ್ಪಗಳಿಗೆ ಗಾರೆ, ಮಣ್ಣು, ಲೋಹ ಮತ್ತು ಶಿಲೆಗಳನ್ನು ಬಳಸಿರುತ್ತಾರೆ. ಮರದ ಬಳಕೆ ಕಾಣಬರುವುದಿಲ್ಲ. ಬೆಟ್ಟದಪುರ, ಐಲಾಪುರದ ಬಸವೇಶ್ವರ, ಮೇಲೂರು, ಹರದೂರು ಬಸವೇಶ್ವರ ದೇವಾಲಯ ವಿಗ್ರಹಗಳು ಗಾರೆ ಅಥವಾ ಮಣ್ಣಿನವಾಗಿವೆ. ಐಲಾಪುರದ ಬಸವೇಶ್ವರ, ದೊಡ್ಡನೆರ್ಲೆಯ ಈಶ್ವರ ದೇವಾಲಯದಲ್ಲಿನ ಗಾರೆ ವಿಗ್ರಹ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಉಳಿದುಬಂದಿವೆ. ಲೋಹದ ವಿಗ್ರಹಗಳು ದೊರಕಿರುವುದು ಕಡಿಮೆ. ಇವುಗಳಲ್ಲಿ ಬೆಟ್ಟದಪುರದ ವೀರಭದ್ರನ ವಿಗ್ರಹ ಮಾತ್ರ ಈಗ ಉಳಿದಿದೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ದೇವಾಲಯಗಳು ಚಿಕ್ಕದಾಗಿರುವುದರ ಜೊತೆಗೆ ಎತ್ತರವೂ ಕಡಿಮೆಯುಳ್ಳದ್ದಾಗಿವೆ. ಹೀಗಾಗಿ ಇವುಗಳಲ್ಲಿನ ಶಿಲ್ಪಗಳು ಚಿಕ್ಕದಾಗಿವೆ. ಮೂಲ ವಿಗ್ರಹವನ್ನು ಬಿಟ್ಟು ಉಳಿದ ಶಿಲ್ಪಗಳು ಅಂತರಾಳ ಮತ್ತು ನವರಂಗ ಭಾಗದಲ್ಲಿ ಪ್ರತಿಷ್ಠಾಪಿತವಾಗಿರುತ್ತವೆ. ಇವರ ಶಿಲ್ಪಗಳ ಮುಖ್ಯ ಲಕ್ಷಣಗಳನ್ನು ಹೀಗೆ ಗುರುತಿಸಬಹುದು. ಇವರ ಶಿಲ್ಪಗಳು ಹೆಚ್ಚಾಗಿ ಗಟ್ಟಿಕಲ್ಲಿನಲ್ಲಿ ಕೆತ್ತಿದವುಗಳಾಗಿವೆ. ಕಲ್ಲಿನ ಅಳತೆಗೆ

ತಕ್ಕಂತೆ ಶಿಲ್ಪವನ್ನು ಬಿಡಿಸಿರುತ್ತಾರೆ. ಉಬ್ಬು ಕೆತ್ತನೆ ಅಲ್ಪ ಪ್ರಮಾಣದಲ್ಲಿದ್ದು, ಬಿಡಿ ಬಿಡಿಯಾಗಿ ಅಂಗಾಂಗಳನ್ನು ಬಿಡಿಸಿದ ಶಿಲ್ಪಗಳು ಕಡಿಮೆ. ಈ ಶಿಲ್ಪಗಳಲ್ಲಿ ನಂದಿ ಶಿಲ್ಪಗಳೇ ಅಧಿಕವಾಗಿವೆ. ಕಲ್ಲಿನ ಮುಂಬದಿಯಲ್ಲಿ ಶಿಲ್ಪದ ವಿವರಗಳು ಬಂದಿದ್ದು ಹಿಂಬದಿಯಲ್ಲಿ ಶಿಲ್ಪದ ಕೆತ್ತನೆಯಿರುವುದಿಲ್ಲ. ವಿಷ್ಣು, ಜಿನ, ಭ್ರಮಾರಾಂಬಿಕೆ ಶಿಲ್ಪಗಳಲ್ಲಿ ಸೌಮ್ಯಭಾವವನ್ನು, ಮಹಿಷಮರ್ದಿನಿ, ಚಾಮುಂಡಿ ಶಿಲ್ಪಗಳಲ್ಲಿ ಉಗ್ರಭಾವವನ್ನೂ ಶಿಲ್ಪಿ ಕೆತ್ತಿರುತ್ತಾನೆ. ಈ ಶಿಲ್ಪಗಳಲ್ಲಿ ದೇವಿಶಿಲ್ಪವನ್ನು ಶತೃವಿನ ಮೇಲೆ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿರುವಂತೆ ಬಿಡಿಸಿರುತ್ತಾನೆ. ಹೆಚ್ಚಿನ ಶಿಲ್ಪಗಳು ನಂದಿಶಿಲ್ಪಗಳಾಗಿದ್ದು ಬಹುತೇಕ ಕೃಷ್ಣಶಿಲೆಯಿಂದ ಕೂಡಿವೆ. ಇವುಗಳ ನಂತರ ಗಣಪತಿ, ವೀರಭದ್ರ, ಭೈರವ ಮತ್ತು ನಾಗಶಿಲ್ಪಗಳು ಕಂಡುಬರುವವು. ಈ ಪರಿಸರದಲ್ಲಿ ಕಂಡುಬರುವ ಶಿಲ್ಪಗಳನ್ನು ಪ್ರಮುಖವಾಗಿ ಪುರುಷ ದೇವತೆ, ಶಕ್ತಿ ದೇವತೆ ಹಾಗು ಪ್ರಾಣಿರೂಪ ದೇವತೆಗಳೆಂದು ಮೂರು ವಿಭಾಗ ಮಾಡಲಾಗಿದೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ಶಿಲ್ಪಗಳನ್ನು ಧಾರ್ಮಿಕವಾಗಿ ಶೈವ, ವೈಷ್ಣವ ಹಾಗು ಜೈನ, ಶಾಕ್ತ ಶಿಲ್ಪಗಳೆಂದು ಪ್ರಧಾನವಾಗಿ ವಿಂಗಡಿಸಬಹುದು. ಜತೆಗೆ ಆಂಜನೇಯನ ಪ್ರತಿಮೆಗಳನ್ನು ಕಾಣಬಹುದು. ವಿರಳವಾಗಿ ಗಣಪತಿ, ದುರ್ಗಿ, ವೀರಭದ್ರ, ವಿಷ್ಣು, ಸಪ್ತಮಾತೃಕೆ ಶಿಲ್ಪಗಳೂ ಇವೆ. ಲೌಕಿಕವಾಗಿ ಅರಸರ ಪ್ರತಿಮೆಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಸ್ಮಾರಕಶಿಲೆಗಳು ಕಂಡುಬರುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿ ನಂದಿಶಿಲ್ಪಗಳು ಕಂಡುಬರುತ್ತವೆ. ಈ ಎಲ್ಲ ಶಿಲ್ಪಗಳ ಶಿಷ್ಟ ರಚನೆಯನ್ನು ಎರಡು ಶೈಲಿಗಳಲ್ಲಿ ಗುರುತಿಸಬಹುದು. ಮೊದಲನೆಯದು ಶಿಷ್ಟ ಶೈಲಿ, ಎರಡನೆಯದು ಜಾನಪದೀಯ ಅಥವಾ ಸ್ಥಳೀಯ ಶೈಲಿ. ಶಿಷ್ಟ ಶೈಲಿಯ ಶಿಲ್ಪಗಳು ಪ್ರಾಚೀನ ಪರಂಪರೆಯಂತೆ ಹೆಚ್ಚು ಸಂಪ್ರದಾಯಬದ್ಧವಾಗಿ ರಚಿತವಾಗಿವೆ. ಆದರೆ ಜಾನಪದೀಯ ಶಿಲ್ಪಗಳು ಹೆಚ್ಚು ಪ್ರಾದೇಶಿಕತೆಯನ್ನು ವ್ಯಕ್ತಗೊಳಿಸುತ್ತವೆ. ಈ ಎಲ್ಲಾ ಮೂರ್ತಿಶಿಲ್ಪಗಳ ಪ್ರತಿಮಾ ಲಕ್ಷಣ ಮತ್ತು ವೈಶಿಷ್ಟಗಳನ್ನು ಈ ಮುಂದಿನಂತೆ ಗಮನಿಸಬಹುದು.

ಶೈವ ಶಿಲ್ಪಗಳು

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ದೇವಾಲಯಗಳಲ್ಲಿ ಕಂಡುಬರುವ ಶೈವಶಿಲ್ಪಗಳಲ್ಲಿ ಶಿವ, ಗಣೇಶ, ವೀರಭದ್ರ, ಭೈರವ, ಸೂರ್ಯ, ಸ್ಕಂದ ಹಾಗು ನಂದಿಶಿಲ್ಪಗಳು ಮುಖ್ಯವಾಗಿವೆ. ಇವುಗಳಲ್ಲಿ ಪಿರಿಯಾಪಟ್ಟಣದ ಈಶ್ವರ ದೇವಾಲಯ, ಬೆಟ್ಟದಪುರದ ಮಲ್ಲಿಕಾರ್ಜುನ ದೇವಾಲಯ, ಓಟ್ಟೆಹೆಬ್ಬಾಗಿಲಿನ ಮಹಾಬಲೇಶ್ವರ ದೇವಾಲಯ. ಕಿತ್ತೂರಿನ ಈಶ್ವರ ದೇವಾಲಯ, ಕಂಪಲಾಪುರದ ಈಶ್ವರ ದೇವಾಲಯ, ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯ, ಪಶ್ಚಿಮಕ್ಕಿರುವ ಜಡೆವೀರಭದ್ರ ದೇವಾಲಯ. ಸಾಮಾನ್ಯವಾಗಿ ಶಿವನನ್ನು ಲಿಂಗರೂಪದಲ್ಲಿ ಪ್ರತಿಷ್ಠಾಪಿಸಿ

ಆರಾಧಿಸುವ ಪದ್ಧತಿಯೇ ಹೆಚ್ಚಾಗಿ ಬೆಳೆದುಬಂದಿದೆ. ಸುಮಾರು ಅರ್ಧ ಅಡಿಯಿಂದ ನಾಲ್ಕು ಅಡಿಯವರೆಗೆ ಎತ್ತರವಾಗಿರುವ ಶಿವನ ಲಿಂಗಗಳು ಕಂಡುಬರುತ್ತವೆ. ಅವುಗಳಲ್ಲಿ ವಿಶಿಷ್ಟವಾಗಿರುವ ಶಿವನಲಿಂಗವೆಂದರೆ ತಾಲ್ಲೂಕಿನ ಜಿ.ಬಸವನಹಳ್ಳಿಯಲ್ಲಿ ಕಂಡುಬಂದಿರುವ ಈಶ್ವರ ದೇವಾಲಯದ ಶಿವಲಿಂಗ. ಇದು ಎತ್ತರ ಮತ್ತು ಗಾತ್ರದಲ್ಲಿ ವಿಶಿಷ್ಟವಾಗಿರುತ್ತದೆ. ಎತ್ತರದಲ್ಲಿ ನಾಲ್ಕು ಅಡಿಯಾಗಿದ್ದು ಅಗಲದಲ್ಲಿ ಎರಡೂವರೆ ಅಡಿ ವಿಸ್ತೀರ್ಣತೆಯನ್ನು ಹೊಂದಿದೆ. ಒಟ್ಟಿನಲ್ಲಿ ತಾಲ್ಲೂಕು ಪರಿಸರದಲ್ಲಿ ಕಂಡುಬರುವ ದೇವಾಲಯದಲ್ಲಿ ಶೈವ ದೇವಾಲಯಗಳೇ ಅಧಿಕವಾಗಿವೆ. ಈ ದೇವಾಲಯಗಳ ಗರ್ಭಗುಡಿಯಲ್ಲಿ ಶಿವನ ಪ್ರತೀಕವಾದ ಶಿವಲಿಂಗವನ್ನು ಬಹುತೇಕ ಶೈವ ದೇವಾಲಯಗಳಲ್ಲಿ ಕಾಣಲಾಗಿದೆ.

ಶಿವಲಿಂಗ ಶಿಲ್ಪ

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ನಿರ್ಮಿತವಾದ ಹೆಚ್ಚಿನ ದೇವಾಲಯಗಳು ಶಿವ ದೇವಾಲಯಗಳಾಗಿವೆ. ಈ ದೇವಾಲಯಗಳಲ್ಲಿ ನಿರಾಕಾರ ರೂಪದ ಶಿವಲಿಂಗಗಳು ಎಲ್ಲೆಡೆ ಕಾಣಬರುತ್ತವೆ. ಪ್ರಾಚೀನ ಹಾಗು ಅರ್ವಾಚೀನ ಲಿಂಗಗಳ ನಡುವಿನ ವ್ಯತ್ಯಾಸ ಗುರುತಿಸುವುದು ಕಷ್ಟವಾದರೂ ಇತ್ತೀಚೆಗೆ ವಿದ್ವಾಂಸರು ಮಂಡಿಸಿರುವ ಸೂತ್ರವನ್ನು ಬಳಸಿ ಗುರುತಿಸಬಹುದು. ಡಾ. ಅ.ಸುಂದರ ಅವರ ಪ್ರಕಾರ ಬಾಣದಾಕಾರದ ಮಧ್ಯನಾಡಿ (ಬ್ರಹ್ಮಸೂತ್ರ) ಉಳ್ಳವುಗಳು ಪ್ರಾಚೀನವಾದವುಗಳು. ಈ ಬಗೆಯ ಲಿಂಗಗಳು ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನ ದೇವಾಲಯ, ಮೇಲೂರಿನ ಈಶ್ವರ ದೇವಾಲಯ, ಜಿ.ಬಸವನಹಳ್ಳಿಯ ಈಶ್ವರ ದೇವಾಲಯಗಳಲ್ಲಿ ಕಾಣಬಹುದು. ಇವುಗಳ ಪೀಠ ಭಾಗವು ದೇವಾಲಯದ ಅಧಿಷ್ಠಾನಗಳಂತಿದ್ದು ತ್ರಿಪಟ್ಟ ಕುಮುದ, ಊರ್ಧ್ವಪದ್ಮ ಭಾಗಗಳನ್ನು ಹೊಂದಿರುತ್ತದೆ. ಈ ಬಗೆಯ ಲಿಂಗಗಳಲ್ಲದೆ ಚಾಲುಕ್ಯ ಅರಸರ ಪ್ರಭಾವದಿಂದ ಮೂಡಿರುವ ಲಿಂಗಗಳು ಚೌಕಾಕಾರದ ಕಲ್ಲು ಪಿಂಡಿಗಳಂತಿದ್ದು ಅವುಗಳ ಮಧ್ಯೆ ಚಿಕ್ಕದಾಗಿ ಲಿಂಗ ಭಾಗವಿರುತ್ತದೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬರುವ ಪ್ರಮುಖ ಮೂರ್ತಿಶಿಲ್ಪಗಳೆಂದರೆ ವಿಷ್ಣು, ಭೈರವ, ವಿನಾಯಕ, ನಂದಿ, ಉಮಾಮಹೇಶ್ವರ, ದಿಕ್ಪಾಲಕ, ಶಕ್ತಿದೇವತೆಗಳಾದ ಮಹಿಷಮರ್ದಿನಿ, ಸಪ್ತಮಾತೃಕಾ ಶಿಲ್ಪಗಳಲ್ಲದೆ, ಜೈನ ಮೂರ್ತಿಶಿಲ್ಪಗಳು ಸೇರುತ್ತವೆ. ಈ ಶಿಲ್ಪಗಳಲ್ಲಿನ ವಸ್ತ್ರಧಾರಣೆ, ಕೈಗಳ ಸಂಖ್ಯೆ, ಧಾರಣಮುದ್ರೆ, ಮುಖಭಾವ, ಯಜ್ಞೋಪವೀತಧಾರಣೆ ನಿರ್ದಿಷ್ಟ ಲಕ್ಷಣಗಳಿಂದ ಗುರುತಿಸಬಹುದು. ಕೈಗಳ ಸಂಖ್ಯೆಯಲ್ಲಿಯೂ ವ್ಯತ್ಯಾಸ ಕಾಣಬರುತ್ತದೆ. ಮಹಿಷಮರ್ದಿನಿ ಶಿಲ್ಪಕ್ಕೆ ಕೆಲವೆಡೆ ನಾಲ್ಕು ಕೈಗಳನ್ನು ಬಿಡಿಸಿದ್ದರೆ ಕೆಲವೆಡೆ ಎಂಟು ಕೈಗಳನ್ನು ಬಿಡಿಸಿರುತ್ತಾರೆ. ದಿಕ್ಪಾಲಕ ಶಿಲ್ಪಗಳು, ದಕ್ಷ, ಯೋಗಿನಿ, ಸೂರ್ಯ ಬಿಂಬಗಳಲ್ಲಿ ಎರಡು ಕೈಗಳು ಮಾತ್ರ ಕಾಣಬರುತ್ತವೆ. ಸ್ಕಂಧನ ಪ್ರಾಚೀನ ಶಿಲ್ಪಗಳಲ್ಲಿ ಎರಡು ಕೈ ಕಂಡುಬಂದರೂ ಮುಂದಿನ

ಶಿಲ್ಪಗಳಲ್ಲಿ ನಾಲ್ಕು ಕೈ ಕಾಣಬರುತ್ತದೆ. ಸಪ್ತಮಾತೃಕೆಯರ ಸಾಲಿನಲ್ಲಿ ಬರುವ ಚಾಮುಣ್ಡಾ ಶಿಲ್ಪಕ್ಕೆ ಎಂಟು ಕೈಗಳಿರುತ್ತವೆ. ದೇವಾಲಯದ ಮುಚ್ಚಿಗೆಯಲ್ಲಿ ಕಾಣಬರುವ ನಟರಾಜನ ಶಿಲ್ಪಗಳಲ್ಲಿ ನಾಲ್ಕರಿಂದ ಎಂಟು ಕೈಗಳಿರುತ್ತವೆ. ಗಣಪತಿ, ಭೈರವ, ಉಮಾಮಹೇಶ್ವರ ಶಿಲ್ಪಗಳಲ್ಲಿ ನಾಲ್ಕು ಕೈಗಳಿರುತ್ತವೆ. ದೇವಾಲಯದ ಮುಚ್ಚಿಗೆಯಲ್ಲಿ ಕಾಣಬರುವ ನಟರಾಜನ ಶಿಲ್ಪಗಳಲ್ಲಿ ನಾಲ್ಕರಿಂದ ಎಂಟು ಕೈಗಳಿರುತ್ತವೆ. ವಿಷ್ಣು, ಚಾಮುಂಡಿ ಶಿಲ್ಪಗಳಲ್ಲಿ ಎಂಟು ಕೈಗಳಿರುತ್ತವೆ. ಕೈಗಳಲ್ಲಿ ಆಯುಧಗಳನ್ನು ಹಿಡಿದಿರುವ ರೀತಿಯಲ್ಲೂ ಒಂದೇರೀತಿ ಕಾಣಬರುವುದಿಲ್ಲ. ಕೆಲವುಗಳಲ್ಲಿ ಧಾರಕಮುದ್ರೆಯಿದ್ದರೆ, ಕೆಲವು ಶಿಲ್ಪಗಳಲ್ಲಿ ಬಿಗಿಯಾಗಿ ಹಿಡಿದಿರುವುದನ್ನು ಕಾಣುತ್ತೇವೆ. ಶೂಲ, ಖಡ್ಗ ಮೊದಲಾದ ಆಯುಧಗಳನ್ನು ಇದೇ ರೀತಿಯಾಗಿ ಹಿಡಿದಿರುವಂತೆ ಬಿಡಿಸಿರುತ್ತಾರೆ. ಇವರ ಶಿಲ್ಪಗಳಲ್ಲಿ ಆಯುಧಧಾರಣೆ ಅನೇಕ ವೇಳೆ ಸಾಂಕೇತಿಕವಾಗಿರುತ್ತದೆ. ಮುಖವು ವೃತ್ತಾಕಾರದೊಳಗೆ ಬರುವಂತೆ ಬಿಡಿಸಿದ್ದು ಚೂಪಾದ ನೀಳವಾದ ಮೂಗು, ತೀಡಿದ ಹುಬ್ಬುಗಳು, ಹೆಗಲವರೆಗೆ ಬಂದಿರುವ ಕಿವಿಗಳು, ಸ್ವಲ್ಪ ಉಬ್ಬಿದ ತುಟಿಗಳು, ಉಬ್ಬಿದ ಗಲ್ಲವಿರುವಂತೆ ಬಿಡಿಸಿರುತ್ತಾರೆ. ಭೈರವ, ಚಾಮುಂಡಿ ಶಿಲ್ಪದ ಮುಖದಲ್ಲಿ ರೌದ್ರವಿದ್ದರೆ ವಿಷ್ಣು, ಗಣಪತಿ ಮತ್ತು ಜಿನ ಶಿಲ್ಪಗಳಲ್ಲಿ ಸೌಮ್ಯಭಾವ ಬರುವಂತೆ ಶಿಲ್ಪಿಸಿರುತ್ತಾರೆ. ಶಿಲ್ಪಗಳ ಪ್ರಾಚೀನತೆಯನ್ನು ಗುರುತಿಸುವಲ್ಲಿ ಇನ್ನೊಂದು ಅಂಶವೆಂದರೆ ಯಜ್ಞೋಪವೀತ. ಅನೇಕ ಶಿಲ್ಪಗಳಲ್ಲಿ ಯಜ್ಞೋಪವೀತವು ಎಡಭುಜದಿಂದ ಹಾದು ಬಲಕ್ಕೆ ಹೋಗಿರುತ್ತದೆ. ಕೆಲವು ಶಿಲ್ಪಗಳಲ್ಲಿ ಈ ಯಜ್ಞೋಪವೀತವು ಬಲ ಭುಜದ ಮೇಲೆ ಬರುತ್ತದೆ. ಈ ಬಗೆಯ ಯಜ್ಞೋಪವೀತವು ಬೆಟ್ಟದಪುರ, ಬೆಟ್ಟತುಂಗದ ವೀರಭದ್ರನ ಶಿಲ್ಪಗಳಲ್ಲಿ ಕಾಣಬರುತ್ತದೆ.

ಗಂಗರ ಕಾಲದಲ್ಲಿ ನಿರ್ಮಿತವಾದ ಪ್ರಮುಖ ದೇವಾಲಯಗಳಲ್ಲಿ ಸಿಡ್ಲು ಮಲ್ಲಿಕಾರ್ಜುನ ದೇವಾಲಯವು ಬೆಟ್ಟದ ತುದಿಯಲ್ಲಿದ್ದು ಗರ್ಭಗೃಹದಲ್ಲಿ ಶಿವಲಿಂಗವಿದೆ. ಪೀಠದ ಮೇಲೆ ಎರಡೂವರೆ ಅಡಿ ಎತ್ತರದ ಕಪ್ಪು ಶಿಲೆಯಿಂದ ರಚನೆಗೊಂಡಿರುವ ಲಿಂಗವನ್ನು ಅನ್ನದಾನಿಮಲ್ಲಿಕಾರ್ಜುನ, ಸಿಡಿಲುಮಲ್ಲಿಕಾರ್ಜುನ, ಭೂತನಾಥ, ವಿಜಯಾದ್ವಿನಾಥ, ವಿಸರ್ಪಣೇಶ ಹೆಸರಿನಿಂದ ಕರೆಯುತ್ತಿರುವರು. ಶಿವಲಿಂಗಕ್ಕೆ ಎದುರಾಗಿ ಅಂತರಾಳದಲ್ಲಿ ಎರಡು ಅಡಿ ಎತ್ತರ ಇರುವ ಕಪ್ಪು ಶಿಲೆಯಿಂದ ಕಡೆದ ನಂದಿಯ ವಿಗ್ರಹವಿದೆ.

ಉಮಾಮಹೇಶ್ವರ ಶಿಲ್ಪ

ವಿಷ್ಣು ಧರ್ಮೋತ್ತರ ಮತ್ತು ರೂಪ ಮಂಡನ ಗ್ರಂಥಗಳು ಉಮಾ ಮಹೇಶ್ವರ ಮೂರ್ತಿಯ ಬಗ್ಗೆ ವಿವರಣೆ ನೀಡುತ್ತವೆ. ಉಮೆ ಮತ್ತು ಮಹೇಶ್ವರ(ಶಿವ) ಒಟ್ಟಾಗಿಯೇ ಇರುವ ಈ ಮೂರ್ತಿಯಲ್ಲಿ ಉಮೆ ಶಿವನ ಎಡತೊಡೆಯ ಮೇಲೆ ಕುಳಿತಿರುತ್ತಾಳೆ.[೧೦] ಇಂಥ ಮೂರ್ತಿಗಳು ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಅಧಿಕವಾಗಿ ಕಂಡುಬರದೆ ಅಲ್ಪ

ಪ್ರಮಾಣದಲ್ಲಿ ಕಂಡುಬರುತ್ತವೆ. ಉಮಾಮಹೇಶ್ವರ ಮೂರ್ತಿಶಿಲ್ಪಗಳಲ್ಲಿ ಶಿವನ ಎಡತೊಡೆಯ ಮೇಲೆ ಕುಳಿತ ಉಮೆಯು ದಾಂಪತ್ಯಾಸನದಲ್ಲಿ ಕುಳಿತಿರುವಳು. ಉಮೆ ಅಥವಾ ಪಾರ್ವತಿ ದುಂಡಾಕಾರವಾಗಿ ಅಲಂಕರಿಸಿದ ತಲೆಗೋದಲು, ಅದರ ಹಿಂಭಾಗದಲ್ಲಿ ಕಲಾತ್ಮಕ ಶಿರಶ್ಚಕ್ರ ಕಟ್ಟಿರುವಂತಿದೆ. ಕಿವಿಯಲ್ಲಿ ಪುತ್ರ ಕುಂಡಲ, ಕೊರಳಲ್ಲಿ ಕಂಠಾಭರಣ, ಕೊರಳಹಾರ, ಭುಜಕೀರ್ತಿ, ಕೇಯೂರ, ಕೈಗಡಕ, ಎಡಗೈಯಲ್ಲಿ ಫಲ, ಬಲಗೈನಿಂದ ಶಿವನ ಬೆನ್ನಿನ ಸೊಂಟವನ್ನು ಬಳಸಿ ಹಿಡಿದಿದ್ದಾಳೆ. ಮೊಣಕಾಲಿನಿಂದ ಕೆಳಗೆ ಇಳಿಬಿದ್ದಿರುವ ಮಣಿಸರದ ಹಾರ, ಕಾಲಿನಲ್ಲಿ ಕಡಗ ಮತ್ತು ಪಾದ ಸರಗಳಿವೆ. ಕಾಲ ಕೆಳಭಾಗದಲ್ಲಿ ಸಿಂಹವಿರುತ್ತದೆ.

ಮರದೂರು ಮತ್ತು ಶಿರಂಗಾಲ ಗ್ರಾಮದಲ್ಲಿ ಚಿಕ್ಕ ಪ್ರಮಾಣದ ಉಮ ಮಹೇಶ್ವರ ಮೂರ್ತಿಶಿಲ್ಪಗಳು ಕಂಡುಬರುತ್ತವೆ. ಈ ಶಿಲ್ಪಗಳಲ್ಲಿ ಕಿರೀಟ ಮುಕುಟಧಾರಿಯಾದ ಮಹೇಶ್ವರ (ಶಿವ) ಚರ್ತುಭುಜಧಾರಿಯಾಗಿದ್ದು ದಾಂಪತ್ಯಾಸನದಲ್ಲಿ ಕುಳಿತಿದ್ದಾನೆ. ಕಿರೀಟದ ಹಿಂಭಾಗಕ್ಕೆ ಶಿರಚಕ್ರವಿದ್ದು ಮಂದಹಾಸ ಬೀರುತ್ತಿರುವ ಮುಖ, ಕಿವಿಯಲ್ಲಿ ಸರ್ಪಕುಂಡಲ, ಕೊರಳಲ್ಲಿ ಅನೇಕ ಬಗೆಯ ಹಾರಗಳು, ಭುಜಕೀರ್ತಿ, ಕೇಯೂರ, ಕೈಗಡಗ, ಯಜ್ಞೋಪವೀತ ಉದರ ಬಂಧಗಳಿವೆ. ಮೇಲಿನ ಬಲಗೈಯಲ್ಲಿ ತ್ರಿಶೂಲವಿದ್ದು, ಎಡಗೈ ಮೇಲ್ಭಾಗ ತೃಟಿತವಾಗಿ (ಹಾನಿ)ರುವುದರಿಂದ ಆ ಕೈಯಲ್ಲಿ ಹಿಡಿದ ಆಯುಧ ಗೋಚರಿಸುತ್ತಿಲ್ಲ. ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದು ಕೆಳ ಎಡಗೈಯು ಉಮೆಯ ಭುಜವನ್ನು ಆಲಂಗಿಸಿದಂತಿದೆ. ಮಣಿಗಳ ಅಲಂಕಾರಿಕ ಕಟಿಬಂಧವಿದ್ದು, ಒಂದು ಭಾಗವು ಕಾಲ ಮಧ್ಯದಲ್ಲಿ ಇಳಿ ಬಿದ್ದಿದೆ. ಕಾಲಿನಲ್ಲಿ ಕಡಗ, ಪಾದಸರ ಹಾಗು ಕಾಲಿನ ಬೆರಳುಗಳಲ್ಲಿ ಉಂಗುರಗಳಿವೆ. ವೃತ್ತಕಾರದಲ್ಲಿರುವ ಮುಖ, ನೀಳವಾದ ಮೂಗು, ಎದ್ದು ಕಾಣುವ ಹುಬ್ಬು, ಉಬ್ಬಿದ ಗಲ್ಲ, ಹಾಗು ತುಟಿಗಳು ಸೌಮ್ಯ ಸ್ವಭಾವವನ್ನು ಪ್ರತಿಬಿಂಬಿಸುವ ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಚಾಲುಕ್ಯ ಕಾಲದ್ದು ಎಂದು ಹೇಳಬಹುದು.

ವೀರಭದ್ರ ಶಿಲ್ಪ

ಶೈವ ದೇವಾಲಯಗಳಲ್ಲಿ ಇಲ್ಲವೇ, ವೀರಭದ್ರನಿಗಾಗಿ ಪ್ರತ್ಯೇಕ ದೇವಾಲಯಗಳನ್ನು ನಿರ್ಮಿಸಿರುವುದನ್ನು ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಾಣಬಹುದು. ಕೂರ್ಮಪುರಾಣ, ವೀರಭದ್ರಪುರಾಣ, ಮತ್ತು ಭಾಗವತಪುರಾಣ, ವೀರಭದ್ರಮೂರ್ತಿಯ ಉಗಮ ಮತ್ತು ಹಿನ್ನೆಲೆಯನ್ನು ಉಲ್ಲೇಖಿಸಿವೆ. ತತ್ವನಿಧಿ, ವೀರಭದ್ರನ ಪ್ರತಿಮಾ ಲಕ್ಷಣಗಳನ್ನು[೧೧] ವಿವರಿಸುತ್ತದೆ. ಶಿಲ್ಪರತ್ನ ಗ್ರಂಥಗಳು ವೀರಭದ್ರ ಮೂರ್ತಿಯ ವಿವಿಧ ರೂಪಗಳನ್ನು ತಿಳಿಸುತ್ತವೆ.[೧೨] ಈ ಮೂರ್ತಿಗಳು ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಪಿರಿಯಾಪಟ್ಟಣ, ಬೆಟ್ಟದಪುರ, ಮರದೂರು, ಹರದೂರು, ಬೆಟ್ಟತುಂಗ, ರಾವಂದೂರು, ಅತ್ತಿಗೋಡು ಮತ್ತು ಕುರ್ಗಲ್

ಗ್ರಾಮಗಳಲ್ಲಿ ಕಂಡುಬಂದಿವೆ. ಇಲ್ಲಿನ ನಾಲ್ಕು ಕೈಗಳುಳ್ಳ ವೀರಭದ್ರ ಮೂರ್ತಿಗಳಲ್ಲಿ ಮೇಲಿನ ಕೈಗಳಲ್ಲಿ ಹಾವು, ಖಟ್ವಾಂಗ, ಕೆಳಗಿನ ಕೈಗಳಲ್ಲಿ ಖಡ್ಗ, ಖೇಟಕಗಳನ್ನು ಹಿಡಿದು ಸ್ಥಾನಿಕ ಭಂಗಿಯಲ್ಲಿರುವ ಮೂರ್ತಿಗಳಿವೆ. ಪಿರಿಯಾಪಟ್ಟಣ, ಹರದೂರು ಮತ್ತು ಬೆಟ್ಟತುಂಗ, ಕಣಗಾಲು ಗ್ರಾಮಗಳಲ್ಲಿ ಇರುವ ವೀರಭದ್ರ ಮೂರ್ತಿಶಿಲ್ಪಗಳು ಪೀಠದ ಮೇಲೆ ಸ್ಥಾನಿಕವಾಗಿರುವ ಮೂರ್ತಿ ಕಿರೀಟಧಾರಿಯಾಗಿದ್ದು, ಚರ್ತುಭುಜಧಾರಿಯಾಗಿದೆ. ಈ ಮೂರ್ತಿಯ ಕೊರಳಹಾರ, ಕಿವಿಯೋಲೆ, ಯಜ್ಞೋಪವಿತ ಉದರಬಂಧ, ಕೈಕಡಗ ಹಾಗು ಕೇಯೂರ ಧರಿಸಿದೆ. ಎಡಗೈಯಲ್ಲಿ ಬಿಲ್ಲು, ಖೇಟಕವನ್ನು ಹಿಡಿದಿದೆ. ಮೂರ್ತಿಯ ಹಿಂಭಾಗದಲ್ಲಿ ಕೀರ್ತಿಮುಖಯುಕ್ತ ಪ್ರಭಾವಳಿಯನ್ನು ಉತ್ತಮ ರೀತಿಯಲ್ಲಿ ಅಲಂಕರಿಸಲಾಗಿದೆ. ವೀರಭದ್ರನ ಮುಖಭಾವ, ಮಿತವಾದ ಅಲಂಕರಣೆ, ಆಯುಧಗಳನ್ನು ಹಿಡಿದ ರೀತಿ ಚಾಲುಕ್ಯರ ಕಾಲದ ಮೂರ್ತಿಗಳಿಗಿಂತ ಸ್ವಲ್ಪ ಭಿನ್ನವಾಗಿದೆ. ನೀಳವಾದ ಮೂಗು ಹಾಗು ದೇಹದಾಢ್ಯ ಇವುಗಳನ್ನು ಗಮನಿಸಿದಲ್ಲಿ ಇವುಗಳ ಲಕ್ಷಣಗಳ ಆಧಾರದ ನಂತರ ಚಂಗಾಳ್ವರ ಕಾಲದ್ದೆಂದು ಹೇಳಬಹುದು.

ಕಂಚನ್ನು ವಿವಿಧ ಮಿಶ್ರಲೋಹಗಳ ಸಂಮಿಶ್ರಣದಿಂದ ತಯಾರಿಸಲಾಗುತ್ತದೆ.[೧೩] ತಾಮ್ರ, ಬೆಳ್ಳಿ, ಬಂಗಾರ, ಹಿತ್ತಾಳೆ ಮತ್ತು ಬಿಳಿಸೀಸ. ಈ ಐದು ಲೋಹಗಳಿಂದ ತಯಾರಿಸಲ್ಪಟ್ಟ ಲೋಹವನ್ನು ಪಂಚಲೋಹವೆನ್ನುತ್ತಾರೆ. ಹೀಗೆ ತಯಾರಿಸಿದ್ದನ್ನು ಸಾಮಾನ್ಯವಾಗಿ ಕಂಚು[೧೪] ಎನ್ನುವರು. ಹತ್ತು ಭಾಗ ತಾಮ್ರ, ಅರ್ಧ ಭಾಗ ಹಿತ್ತಾಳೆ, ಮುಕ್ಕಾಲು ಭಾಗ ಬಿಳಿ ಸೀಸವನ್ನು ಸೇರಿಸಿ ಕಂಚಿನ ಲೋಹ ಶಿಲ್ಪ ತಯಾರಿಸುವ ಬಗ್ಗೆ ಶಿಲ್ಪಗ್ರಂಥ[೧೫] ವಿವರಿಸುತ್ತದೆ. ಮೇಣದಿಂದ ಮೂರ್ತಿಗಳನ್ನು ತಯಾರಿಸುವ ವಿಧಾನಕ್ಕೆ ಮಧುಶಿಷ್ಠವಿಧಾನ ಎನ್ನುತ್ತಾರೆ. ಜೇಡಿಮಣ್ಣಿನ ಮೂರ್ತಿಗಳಿಗೆ ಮೇಣ ಲೇಪಿಸಿ ಅದನ್ನು ಬಿಸಿಲಿನಲ್ಲಿ ಒಣಗಿಸಿದ ನಂತರ ಸುಟ್ಟಾಗ ಉತ್ತಮ ಮೂರ್ತಿಗಳು ಸಿದ್ಧವಾಗುವವು. ಇದೇ ವಿಧಾನದ ಮೂಲಕ ಲೋಹ ಮೂರ್ತಿಗಳನ್ನು ತಯಾರಿಸಿ ನೀರಿನಿಂದ ತೊಳೆಯಬೇಕೆಂದು ಶಿಲ್ಪಶಾಸ್ತ್ರ[೧೬] ತಿಳಿಸುತ್ತದೆ.

ಅನ್ನದಾನಿಮಲ್ಲಿಕಾರ್ಜುನ ದೇವಾಲಯದ ಸಮೀಪದಲ್ಲಿ ಪಶ್ಚಿಮಕ್ಕಿರುವ ವೀರಭದ್ರ ಶಿಲ್ಪವು ಬೆಟ್ಟದಲ್ಲಿರುವ ದೊಡ್ಡ ವಿಗ್ರಹಗಳಲ್ಲಿ ಒಂದು. ಮೂರ್ತಿಶಿಲ್ಪವು ಪೂರ್ವಾಭಿಮುಖ ವಾಗಿರುವುದು ಇದನ್ನು ಪಂಚಲೋಹದಿಂದ ಕೆತ್ತಿದ್ದು ಏಳು ಅಡಿ ಎತ್ತರವಾಗಿದೆ. ವೀರಭದ್ರನು ಎರಡು ಅಡಿ ಎತ್ತರದ ಪೀಠದ ಮೇಲೆ ನಿಂತಿರುವನು. ವೀರಾವೇಷದಿಂದ ನಿಂತಿದ್ದು ನಾಲ್ಕು ಕೈಗಳನ್ನು ಹೊಂದಿರುವನು. ಬಲಭಾಗದ ಕೈಯಲ್ಲಿ ಕಟಾರಿ, ಮತ್ತೊಂದರಲ್ಲಿ ಬಾಣವನ್ನು ಹಿಡಿದು, ಎಡಗೈ ಒಂದರಲ್ಲಿ ಕೇಟವನ್ನು, ಮತ್ತೊಂದರಲ್ಲಿ ಬಾಣವನ್ನು ಹಿಡಿದು ನಿಂತಿರುವನು. ವೀರಭದ್ರನ ಶಿರದಲ್ಲಿ ಕಿರೀಟ, ಮುಕುಟ, ಹಣೆಯಲ್ಲಿ ಶಿವಲಿಂಗ ಹೊಂದಿದ್ದು, ವೀರಾವೇಷದ

ಮುಖದ ಭಾವನೆಯನ್ನು ಹೊಂದಿರುವನು. ಉದ್ದನೆಯ ಮೀಸೆಯಿದ್ದು ಸೂಕ್ಷ್ಮ ಕೆತ್ತನೆಯ ಕಂಠಾಭರಣ, ಯಜ್ಞೋಪವೀತೆ, ಉದರಬಂಧಿ ಮತ್ತು ನಡುಬಂಧಿಯನ್ನು ಧರಿಸಿರುವನು. ಈತನ ಸೊಂಟವು ಅತ್ಯಂತ ಸಣ್ಣದಿದ್ದು ಸ್ತ್ರೀ ಆಕೃತಿಯನ್ನು ಹೊಂದಿದೆ. ಕಿವಿಯು ಚಿಕ್ಕದಾಗಿದ್ದು ದೊಡ್ಡದಾದ ಓಲೆಯನ್ನು ಧರಿಸಿರುವನು. ನಡವು ವಿಸ್ತರವಾಗಿದ್ದು ಮೂರು ಇಂಚು ಎತ್ತರವಾದ ಪಾದರಕ್ಷೆಯನ್ನು ಧರಿಸಿರುವರು ಮತ್ತು ಕಾಲ್ಗಡಗವನ್ನು ಹಾಕಿ ರುಂಡಗಳನ್ನೇ ತನ್ನ ಹಾರವನ್ನಾಗಿ ಮಾಡಿಕೊಂಡಿರುವನು. ಬೆರಳುಗಳು ಬಲಿಷ್ಠವಾಗಿದ್ದು ಉತ್ತಮವಾದ ಉಂಗುರ ಹಾಕಿದೆ. ತನ್ನ ಶಿರದ ಸಮೀಪ ಸೂರ್ಯ–ಚಂದ್ರರ ಕೆತ್ತನೆಯಿರುವುದು. ಅಲ್ಲದೇ ಮಕರಕುಂಡಲ ಹೊಂದಿದ್ದು ಉದ್ದವಾದ ಹುಬ್ಬನ್ನು ಹೊಂದಿರುವರು. ವೀರಭದ್ರನ ಬಲಭಾಗದಲ್ಲಿ ಟಗರುಮುಖದ ಮನುಷ್ಯಕಾರದ ವ್ಯಕ್ತಿಯು ಭಕ್ತಿಯಿಂದ ಕೈಮುಗಿಯುತ್ತಿರುವ ಶಿಲ್ಪವಿರುವುದು. ತಾಮ್ರದ ಪೀಠವು ಹೂವಿನಕಾರದ ಅಲಂಕಾರವನ್ನು ಒಳಗೊಂಡಿದೆ. ಇದರ ತಳಭಾಗದಲ್ಲಿ ಮಲಗಿರುವ ಮಹಿಳೆಯ ಶಿಲ್ಪವಿದೆ. ಈ ಶಿಲ್ಪವನ್ನು ಜಡೇವೀರಭದ್ರ ಎಂದು ಕರೆಯುವರು. ವೀರಭದ್ರನ ಹಿಂಭಾಗವು ಮಹಿಳೆಯ ಆಕಾರವನ್ನು ಹೊಂದಿರುವುದು. ಜಡೆಯನ್ನು ಉದ್ದವಾಗಿ ಬಿಟ್ಟು ಮಕರ ಕುಂಡಲ, ಕೇಯೂರ, ಉದರಬಂಧ, ನಡುಬಂಧ ಧರಿಸಿರುವರು. ಮತ್ತು ಉದ್ದನೆಯ ಬಟ್ಟೆ, ಆಭರಣಗಳನ್ನು ಧರಿಸಿರುವರು. ಕಾಲ್ಗಡಗ, ಕೈಗಡಗವನ್ನು ಧರಿಸಿ ಪಾದರಕ್ಷೆಯ ಮೇಲೆ ನಿಂತಿರುವರು. ಜಡೇವೀರಭದ್ರನ ಭಾವಚಿತ್ರ ತೆಗೆಯಲು ತುಂಬ ಕಷ್ಟಕರ. ವೀರಭದ್ರನ ವಿಗ್ರಹದ ಮುಂದಿನ ಭಾಗದಲ್ಲಿ ಮಹಿಳೆಯೊಬ್ಬಳ ವಿಗ್ರಹವಿದೆ. ಈ ವಿಗ್ರಹವು ಮೂರು ಅಡಿ ಉದ್ದವಾಗಿದ್ದು ಶಿಲೆಯಿಂದ ರಚನೆಗೊಂಡಿದೆ. ಶಿವಲಿಂಗಕಾರದ ಪೀಠದ ಮೇಲೆ ನಿಂತಿದ್ದು, ಪೀಠವು ಒಂದೂವರೆ ಅಡಿ ಎತ್ತರವಾಗಿದೆ. ಇದರ ಮೇಲೆ ವೀರಾವೇಷ ಭಾವದ ರೀತಿಯಲ್ಲಿ ನಿಂತಿದ್ದು ಎರಡು ಕೈಗಳನ್ನು ಹೊಂದಿರುವರು. ಬಲಗೈಯಲ್ಲಿ ಕಟಾರಿಯನ್ನು ಎಡ ಕೈಯಲ್ಲಿ ಕೇಟವನ್ನು ಹಿಡಿದಿರುವುದು. ಅಲ್ಲದೇ ತೋಳುಬಂದಿ, ಎದೆಪಟ್ಟಿಕೆ, ಉದರಬಂಧಿ, ಸೊಂಟಬಂಧಿಯನ್ನು ಧರಿಸಿರುವರು. ಸರಮಾಲೆಯನ್ನು ಹೊಂದಿದ್ದು ಅಲಂಕೃತವಾದ ನೆರಿಗೆಯಾಕಾರದ ಬಟ್ಟೆಯನ್ನು ಹಾಕಿದ್ದು ಕಾಲ್ಗಡಗವು ಇರುವುದು. ಪೀಠ ಪುಷ್ಪಲಂಕಾರ ಚಿತ್ರವನ್ನು ಒಳಗೊಂಡಿದೆ.

ವೀರಭದ್ರ ಶಿಲ್ಪವು ಸಿದ್ಧುಮಲ್ಲಿಕಾರ್ಜುನ ದೇವಾಲಯದ ನವರಂಗ ಮಂಟಪದಲ್ಲಿ ಪಶ್ಚಿಮಾಭಿಮುಖವಾಗಿದೆ. ಈ ಮೂರ್ತಿಯು ಮೂರು ಅಡಿ ಎತ್ತರವಾಗಿದೆ. ಶಿಲ್ಪವು ಹಿತ್ತಾಳೆಯದು. ವೀರಾವೇಶದಿಂದ ನಿಂತಿದ್ದು ನಾಲ್ಕು ಕೈಗಳನ್ನು ಹೊಂದಿದೆ. ಶಿರದಲ್ಲಿ ಅಲಂಕೃತವಾದ ಕಿರೀಟಮಕುಟ, ಉದ್ದನೆಯ ಮೀಸೆಯನ್ನು ಸುಂದರವಾದ ಕಂಠಾಭರಣ, ಉದರಬಂಧಿ

ಮತ್ತು ನಡುಬಂಧಿಯನ್ನು ಧರಿಸಿರುವರು. ನೆರಿಗೆಯಾಕಾರದ ಇಳಿಬಟ್ಟೆಯನ್ನು ತೊಟ್ಟು ಪಾದರಕ್ಷೆಯನ್ನು ಧರಿಸಿರುವ ವೀರಭದ್ರ ಬಲಗೈಯಲ್ಲಿ ಉದ್ದನೆಯ ತ್ರಿಶೂಲ, ಕಠಾರಿಯನ್ನು ಮತ್ತು ಎಡಗೈಯನ್ನು ಕೇಟದ ಮೇಲೆ ಇಟ್ಟಿರುವರು. ಮತ್ತೊಂದು ಕೈಯಲ್ಲಿ ಡಮರುಗವನ್ನು ಅದರ ಮೇಲಿನ ಭಾಗದಲ್ಲಿ ರುಂಡವನ್ನು ಒಳಗೊಂಡಿದೆ. ರುಂಡಗಳನ್ನು ಸರಮಾಲೆಯನ್ನಾಗಿ ಮಾಡಿಕೊಂಡು ಖಡ್ಗವನ್ನು ತನ್ನ ಮುಂದಿನ ಸೊಂಟಕ್ಕೆ ಸಿಲುಕಿಸಿಕೊಂಡಿದೆ. ವೀರಭದ್ರನ ಪೀಠದ ತಳಭಾಗದಲ್ಲಿ ನಂದಿಯ ಶಿಲ್ಪವಿರುವುದು.

ಭೈರವ ಶಿಲ್ಪ

ಶೈವ ಮತ್ತು ವೈಷ್ಣವ ದೇವಾಲಯಗಳಲ್ಲಿ ಸಾಮಾನ್ಯವಾಗಿ ಭೈರವ ಮೂರ್ತಿ ಶಿಲ್ಪಗಳು ಕಂಡುಬರುತ್ತವೆ. ಭೈರವನನ್ನು ಅಸುರರೊಡನೆ ಹೋರಾಟ ಮಾಡಿದ ಶಿವನ ಪ್ರತಿರೂಪವೆಂದು ಪರಿಗಣಿಸಲಾಗಿದೆ. ಬ್ರಹ್ಮವೈವಾರ್ಥಪುರಾಣ, ತಂತ್ರಸಾರ, ವಿಷ್ಣುಧರ್ಮೋತ್ತರ ಪುರಾಣ ಹಾಗು ಕಾಳಿಕಾ ಪುರಾಣಗಳು ಭೈರವ ಮೂರ್ತಿಯ ಕುರಿತು ವಿವರಣೆ ನೀಡುತ್ತವೆ.[೧೭] ಈ ಮೂರ್ತಿಶಿಲ್ಪಗಳಲ್ಲಿ ಸ್ಥಾನಿಕ ಮತ್ತು ಆಸೀನ ಮೂರ್ತಿಶಿಲ್ಪಗಳೆಂದು ವಿಂಗಡಿಸಬಹುದು. ಆದರೆ ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ಬಹುತೇಕ ಎಲ್ಲ ಶಿಲ್ಪಗಳು ನಿಂತ ಭಂಗಿಯಲ್ಲಿಯೇ ದೊರೆತಿರುವವು. ಇಲ್ಲಿಯ ಶಿಲ್ಪಗಳು ಸಾಮಾನ್ಯವಾಗಿ ಪಾಣಿಪೀಠದ ಮೇಲೆ ಸ್ಥಾನಿಕವಾಗಿರುವವು. ಈ ಎಲ್ಲ ಶಿಲ್ಪಗಳ ವೈಶಿಷ್ಟ್ಯವೆಂದರೆ ಕಿರೀಟ ಮುಖಿಯಾಗಿರುವುದರ ಜೊತೆಗೆ ಅಷ್ಟಕೈಗಳನ್ನು ಹೊಂದಿದ್ದು, ವಿವಿಧ ಆಯುಧಗಳನ್ನು ಹಿಡಿದಿರುವುದಾಗಿದೆ. ಸರ್ಪಕುಂಡಲ, ಕೊರಳಹಾರ, ಕಂಠಾಭರಣ, ಯಜ್ಞೋಪವೀತೆ, ಉದರಬಂಧ, ಕಟಿಬಂಧ, ಮೊಣಕಾಲವರೆಗೆ ಇಳಿಬಿದ್ದ ಉಪವೀತವಿದೆ. ತ್ರಿಶೂಲ, ಡಮರುಗ, ಅಂಕುಶ, ಖಡ್ಗ, ಕಠಾರಿ, ಧನಸ್ಸು, ಕಪಾಲ ಹಿಡಿದ ಎಂಟು ಕೈಗಳಿಗೂ ಕೈಗಡಗ, ಪಾದರಕ್ಷೆಗಳಿದ್ದು, ನಗ್ನವಾಗಿ ಸರ್ಪದ ಮೇಲೆ ನಿಂತಿರುವ ಮೂರ್ತಿಶಿಲ್ಪ ಇವುಗಳಾಗಿವೆ. ಎಡಗಾಲ ಮುಂಭಾಗದಲ್ಲಿ ಸರ್ಪ ಹೆಡೆಬಿಚ್ಚಿ ಹಿಂಭಾಗಕ್ಕೆ ತನ್ನ ಬಾಲವನ್ನು ಚಾಚಿ ಮಲಗಿದಂತಿರುವ ಸರ್ಪದ ಮೇಲೆ ಈ ಮೂರ್ತಿ ಸ್ಥಾನಿಕವಾಗಿದೆ. ಬಲಗಾಲಿನ ಬಳಿ ವಾದ್ಯದವರು, ಎಡಗಾಲಿನ ಬಳಿ ನಾಯಿ ಮತ್ತು ಚಿಕ್ಕಪುರುಷ ಶಿಲ್ಪಗಳಿವೆ. ಸುತ್ತಲೂ ಪ್ರಭಾವಳಿ ಸುಂದರವಾಗಿದೆ. ಕಾಲ ಕೆಳಗಿನ ಪಾಣಿಪೀಠದಲ್ಲಿ ಚೇಳು ಮತ್ತು ಪದ್ಮಗಳ ಕೆತ್ತನೆಯಿದೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಪಿರಿಯಾಪಟ್ಟಣ, ಬಾರ್ಸೆ, ಕೊತ್ತವಳ್ಳಿ, ಅತ್ತಿಗೂಡು, ಹರದೂರು, ಬೆಟ್ಟದಪುರ, ಬೆಟ್ಟತುಂಗ ಕಡೆಗಳಲ್ಲಿ ಭೈರವ ಮೂರ್ತಿಶಿಲ್ಪಗಳು

ಕಂಡುಬಂದಿವೆ. ಈ ಶಿಲ್ಪಗಳು ಸಮಪಾದದಲ್ಲಿ ನಿಂತಿದ್ದು ನಗ್ನವಾಗಿರುತ್ತವೆ. ಬಲಮುಂಗೈಲಿ ಶೂಲ, ಹಿಂಗೈಲಿ ಡಮರುಗ, ಎಡ ಮುಂಗೈಲಿ ಕಪಾಲ, ಹಿಂಗೈಲಿ ಸರ್ಪವಿದೆ. ಕೆಲವು ಶಿಲ್ಪಗಳಲ್ಲಿ ಶೂಲಕ್ಕೆ ಬದಲಾಗಿ ಖಡ್ಗವಿರುವುದುಂಟು. ಜ್ವಾಲೆಗಳನ್ನುಳ್ಳ ಅಥವಾ ಕೆದರಿದ ಜಟಾಮಕುಟ, ಹಣೆಗಣ್ಣು, ಪತ್ರಕುಂಡಲ, ಕೇಯೂರ, ರುಂಡಮಾಲೆ ಸಾಮಾನ್ಯ ಅಲಂಕಾರ ವಾಗಿರುತ್ತವೆ. ಕೆಲವು ಶಿಲ್ಪಗಳಲ್ಲಿ ಸರ್ಪಗಳು ಕಾಲು, ನಡು, ಜಟೆಯನ್ನು ಸುತ್ತಿಕೊಂಡಂತಿದ್ದು ಕಿವಿಯಲ್ಲಿ ಸರ್ಪಕುಂಡಲಗಳಿರುತ್ತವೆ. ಬೆಟ್ಟದಪುರದ ಆಂಜನೇಯ ದೇವಾಲಯದ ಉತ್ತರಕ್ಕೆ ಮೆಟ್ಟಿಲುಗಳ ಎಡಭಾಗದಲ್ಲಿ ಭೈರವನ ಮೂರ್ತಿ ಏಕಶಿಲೆಯಾಗಿದೆ. ಮೂರ್ತಿಯ ಶಿಲ್ಪ ಬೆತ್ತಲೆಯಾಗಿ ನಾಲ್ಕು ಕೈಗಳನ್ನು ಹೊಂದಿರುವುದು. ಬಲಭಾಗದ ಒಂದು ಕೈಯಲ್ಲಿ ಡಮರುಗ ಅಭಯ ಹಸ್ತವಿರುವುದು. ಎಡಗೈಯಲ್ಲಿ ತ್ರಿಶೂಲ ಹಿಡಿದಿರುವುದು. ಈತನ ಕಿವಿಯು ಉದ್ದವಾಗಿದ್ದು ಯಜ್ಞೋಪವಿತವನ್ನು ಧರಿಸಿರುವರು. ಅಲ್ಲದೇ ಮೂರ್ತಿಯ ಎರಡು ಪಾದವು ಬಲಭಾಗದ ಕಡೆಗೆ ಇದೆ.

ವಿನಾಯಕ ಶಿಲ್ಪ

ಭಾರತದಲ್ಲಿ ವಿನಾಯಕನ ಆಚರಣೆ ಹಿಂದಿನಿಂದಲೂ ಆಚರಣೆಯಲ್ಲಿದೆ. ಶಿವ, ಬ್ರಹ್ಮಾಂಡ, ಗಣೇಶ, ವರಹ, ಭವಿಷ್ಯ, ಸ್ಕಂದ, ಮೊದಗಲ ಬ್ರಹ್ಮವೈವರ್ಥ ಪುರಾಣಗಳಲ್ಲಿ ವಿನಾಯಕನ ಉಲ್ಲೇಖವಿದೆ.[೧೮] ವಿನಾಯಕನನ್ನು ಕೃಷ್ಣನ ಪ್ರತಿರೂಪವೆಂದು ಕೆಲವು ಪುರಾಣ ಗ್ರಂಥಗಳು ಹೇಳುತ್ತವೆ.[೧೯] ಹಾಗು ವಿನಾಯಕನನ್ನು ಪರಬ್ರಹ್ಮನೆಂದು, ಬ್ರಾಹ್ಮಣಸ್ಪಥಿ ಮತ್ತು ಬೃಹಸ್ಪತಿಯೆಂದು ಗುರುತಿಸಲಾಗಿದೆ. ವಿನಾಯಕನು ತನ್ನ ಕೈಗಳಲ್ಲಿ ಕುಟಾಹರ (ಪರುಶು) ಪಾಶ, ಅಂಕುಶ ಮತ್ತು ಅಕ್ಷಮಾಲ, ಈಟಿ (ಭರ್ಜಿ) ಮೋದಕ, ತ್ರಿಶೂಲ, ಶಂಖ, ಚಕ್ರ, ರತ್ನಕಲಶ, ಫಲ ಹಿಡಿದಿದ್ದು, ಜೊತೆಗೆ ಕೆಳಗಿನ ಕೈಗಳು ಅಭಯ, ವರದ ಮುದ್ರೆಗಳಲ್ಲಿರುತ್ತವೆ.[೨೦] ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಪ್ರಾಚೀನ ಮತ್ತು ಮಧ್ಯಯುಗೀನ ಕಾಲಕ್ಕೆ ಸೇರಿದ ಗಣಪತಿ ಮೂರ್ತಿಗಳು ದೊರೆತಿದ್ದು, ಇವುಗಳಲ್ಲಿ ದ್ವಿಭುಜ ಮತ್ತು ಚತುರ್ಭುಜ ವಿನಾಯಕ ಮೂರ್ತಿಗಳು ಅಧಿಕವಾಗಿವೆ. ಎಡಗಾಲನ್ನು ಸಮವಾಗಿ ಮಡಿಚಿ ಬಲಗಾಲನ್ನು ಮೇಲಕ್ಕೆ ಮಡಿಚಿ ಸುಖಾಸನದಲ್ಲಿರುವ ಮೂರ್ತಿಶಿಲ್ಪ ಚತುರ್ಭುಜಧಾರಿಯಾಗಿದ್ದು, ಕರಂಡ ಮುಕುಟಧಾರಿಯಾಗಿದೆ. ವಿನಾಯಕನ ಮೇಲಿನ ಬಲಗೈಯಲ್ಲಿ ಅಂಕುಶ ಹಾಗು ಮೇಲಿನ ಎಡಗೈಯನ್ನು ಮಡಿಚಿ ಹಿಡಿದಿದೆ. ಕೆಳಬಲಗೈಯನ್ನು ಕೆಳಗೆ ಬಾಗಿಸಿ ಮಡಿಚಿದ ರೀತಿಯಲ್ಲಿದ್ದು, ಎಡಗೈಯಲ್ಲಿ ಮೋದಕ ಪಾತ್ರೆ, ಆ ಪಾತ್ರೆಗೆ ತಾಗಿ ಸೊಂಡಿಲಿದೆ. ಎದೆಯಲ್ಲಿ ಉರಗಬಂಧ, ಯಜ್ಞೋಪವೀತವಿದೆ.

ಕಾಲು ಮತ್ತು ಕೈಗಳಲ್ಲಿ ಕಡಗ, ಕೇಯೂರಗಳಿವೆ. ಸುತ್ತಲೂ ಪ್ರಭಾವಳಿ ಇಲ್ಲ. ಪಾಣಿಪೀಠದ ಮೇಲೆ ಕುಳಿತಿರುವ ಹೆಚ್ಚಿನ ಅಲಂಕಾರವಿಲ್ಲದ ಈ ಮೂರ್ತಿಯು ಮಿತವಾದ ಅಲಂಕಾರಣೆ ಆಯುಧಗಳನ್ನು ಹಿಡಿದ ರೀತಿಯಲ್ಲಿದೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ದೊರೆಯುವ ಶಿಲ್ಪಗಳಲ್ಲಿ ವಿನಾಯಕ ಅಥವಾ ಗಣಪತಿ ವಿಗ್ರಹದ ಬೆಳವಣಿಗೆಯನ್ನು ಗುರುತಿಸುವುದು ಕಷ್ಟ. ಗಣಪತಿ ಶಿಲ್ಪಗಳಲ್ಲಿ ವಿಕಾಸ ಬಹು ಕಡಿಮೆ. ಈ ಕಾಲದಲ್ಲಿ ಇಕ್ಕೈ ಮತ್ತು ನಾಲ್ಕು ಕೈಗಳುಳ್ಳ ಗಣಪತಿ ಶಿಲ್ಪಗಳ ಜೊತೆಗೆ ಎಡಮುರಿ ಮತ್ತು ಬಲಮುರಿ ಶಿಲ್ಪಗಳೂ ಕಾಣಬರುತ್ತವೆ. ಈ ಪರಿಸರದ ಗಣಪತಿ ಶಿಲ್ಪಗಳು ಮರದೂರು, ಸಂಗರಶೆಟ್ಟಿಹಳ್ಳಿ, ಕಿತ್ತೂರು, ಕಂಪಲಾಪುರ, ಪಿರಿಯಾಪಟ್ಟಣ, ಬೆಟ್ಟದಪುರಗಳಲ್ಲಿ ಕಾಣಬರುತ್ತವೆ. ಇವುಗಳಲ್ಲಿ ಕಂಪಲಾಪುರ, ಕಿತ್ತೂರಿನ ವಿಗ್ರಹಗಳು ಪ್ರಾಚೀನವಾದುವಾಗಿದೆ. ಪ್ರಾಚೀನ ಶಿಲ್ಪಗಳಲ್ಲಿ ಎಡಗಾಲನ್ನು ಸಮವಾಗಿ ಮಡಚಿ ಬಲಗಾಲನ್ನು ಮೇಲಕ್ಕೆ ಮಡಚಿ ಕುಳಿತಿರುವಂತೆ ಬಿಡಿಸಿದ್ದರೆ, ನಂತರದ ಶಿಲ್ಪಗಳಲ್ಲಿ ಪದ್ಮಾಸನದ ರೀತಿಯಲ್ಲಿ ಬಿಡಿಸಿರುತ್ತಾರೆ. ಪ್ರಾಚೀನ ಶಿಲ್ಪಗಳಲ್ಲಿ ಹೆಚ್ಚಿನ ಅಲಂಕಾರವಿರುವುದಿಲ್ಲ. ಕೈಗಳಲ್ಲಿ ಮೋದಕ ಮತ್ತು ಚಿಕ್ಕದಂಡವನ್ನು ಹಿಡಿದಂತೆ ಬಿಡಿಸಿರುತ್ತಾರೆ. ಕೊರಳಲ್ಲಿ ಗಂಟೆಗಳ ಸರವನ್ನು ಧರಿಸಿರುವಂತಿದ್ದು ಸೊಂಡಿಲನ್ನು ಕೈಯಲ್ಲಿನ ಮೋದಕವನ್ನು ತಿನ್ನುತ್ತಿರುವಂತೆ ಬಿಡಿಸಿದೆ. ನಂತರ ಕಾಲದ ಶಿಲ್ಪಗಳಲ್ಲಿ ಆಭರಣಗಳ ಅಲಂಕಾರ ಜಾಸ್ತಿ ಹಾಗು ತಲೆಯ ಮೇಲೆ ಕರಂಡ ಮಕುಟವನ್ನು ಧರಿಸಿರುವಂತೆ ಬಿಡಿಸಿದ್ದು ನಾಲ್ಕು ಕೈಗಳನ್ನು ಹೊಂದಿರುತ್ತವೆ.

ತಾಂಡವೇಶ್ವರ ಶಿಲ್ಪ

ಈ ವಿಗ್ರಹವು ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯದ ಗರ್ಭಗೃಹದ ಮುಂದೆ ಇದೆ. ಇದನ್ನು ಎರಡೂವರೆ ಅಡಿ ಪೀಠದ ಮೇಲ್ಭಾಗದಲ್ಲಿ ಕಂಚಿನಿಂದ ಕಡೆದಿರುವರು. ಪೀಠದ ಮುಂದೆ ಪುಷ್ಪಕಾರದ ಚಿತ್ರದ ಕೆತ್ತನೆಯಿರುವುದು. ತಾಂಡವೇಶ್ವರನು ತನ್ನ ಎಡಗಾಲನ್ನು ಮಡಿಸಿಕೊಂಡು ಬಲಗಾಲನ್ನು ಕೆಳಗೆ ಇಳಿಬಿಟ್ಟಿರುವನು. ಅಲಂಕಾರಿಕ ಕಿರೀಟ ಮುಕುಟವನ್ನು ಹೊಂದಿದ್ದು ಕಂಠಾಭರಣವನ್ನು ಧರಿಸಿದೆ. ಉದರಬಂಧ ಮತ್ತು ನಡುಬಂಧವನ್ನು ಧರಿಸಿರುವರು. ಕಾಲು ಮತ್ತು ಕೈ ಕಡಗಗಳನ್ನು ತೊಟ್ಟಿರುವುದು ಅಲ್ಲದೆ ಬಲಭಾಗದ ಕೈಯಲ್ಲಿ ಕೂಡ ಒಡಿದಿದ್ದು ಎಡಗೈಯನ್ನು ಅಭಯ ಹಸ್ತ ತೋರಿಸುತ್ತಿದೆ. ವಿಗ್ರಹದ ಹಿಂದೆ ಬಾಗಿದ ಕಮಾನು ಹೊಂದಿದ್ದು ಅಲಂಕಾರವಾಗಿದೆ. ಇದು ಕಳಲೆ ನಂಜರಾಜನ ಕಾಣಿಕೆ ಎಂದು ಶಾಸನದಿಂದ ಕಂಡುಬಂದಿದೆ.

ಸ್ಕಂದ ಶಿಲ್ಪ

ಸ್ಕಂದನನ್ನು ಕುಮಾರ, ಸುಬ್ರಮಣ್ಯ, ಕಾರ್ತಿಕೇಯ, ಷಣ್ಮುಖ ಹೆಸರುಗಳಿಂದ ಕರೆಯಲಾಗುತ್ತಿದೆ. ಭಾರತದಾದ್ಯಂತ ಈ ದೇವತಾರಾಧನೆ ಕಂಡುಬರುತ್ತಿದ್ದರೂ ಸಹ ಅದರಲ್ಲೂ ತಮಿಳುನಾಡು ಮತ್ತು ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತದಲ್ಲಿದೆ.[೨೧] ಸುಪ್ರಭೇದ, ಅಮಸುಮದ್‌ಭೇಧ, ಉತ್ತರಕಾಮಿಕಾ, ಪೂರ್ಣಕರ್ಣ ಆಗಮ, ಶ್ರೀತತ್ವನಿಧಿ, ಕುಮಾರ ತಂತ್ರ ಗ್ರಂಥಗಳಲ್ಲಿ ಸ್ಕಂದಮೂರ್ತಿ ಆರಾಧನೆಯ ಹಿನ್ನೆಲೆಯನ್ನು ತಿಳಿಸುತ್ತವೆ.[೨೨] ಶ್ರೀ ಶಂಕರಾಚಾರ್ಯರು ರಚಿಸಿದ ಸುಬ್ರಮಣ್ಯ ಭುಜಾಂಗ ಪ್ರಯೋತಸೂತ್ರ ಲಿಂಗದ ಜೊತೆಗೆ ಸುಬ್ರಮಣ್ಯನನ್ನು ಪೂಜಿಸಲಾಗುತ್ತದೆ ಎಂದು ಉಲ್ಲೇಖಿಸಿದೆ.[೨೩] ಪಿರಿಯಾಪಟ್ಟಣ ತಾಲ್ಲೂಕು ಪರಿಸರಕ್ಕೆ ಸಂಬಂಧಿಸಿದಂತೆ ಕಾರ್ತಿಕೇಯ ಅಥವಾ ಕುಮಾರಸ್ವಾಮಿ ಮೂರ್ತಿಶಿಲ್ಪಗಳು ದೇವಾಲಯ ಭಿತ್ತಿಗಳಲ್ಲಿ ಅಲ್ಲಲ್ಲಿ ಕಾಣಿಸಿಕೊಂಡಿವೆ. ಆದರೆ ಪ್ರತ್ಯೇಕ ಮೂರ್ತಿಗಳು ದೊರೆತಿರುವುದು ಬಹು ಕಡಿಮೆಯಾಗಿದ್ದರಿಂದ ಸ್ಕಂದ ದೇವತಾರಾಧನೆ ಕಡಿಮೆ ಇತ್ತೆಂದು ಕಂಡುಬರುತ್ತದೆ.

ಸ್ಥಳೀಯರಿಂದ ನವಿಲುಸ್ವಾಮಿ ಎಂದು ಕರೆಸಿಕೊಳ್ಳುವ ಮೂರ್ತಿ ಶಿಲ್ಪ ನವಿಲೂರು ಮತ್ತು ಹರವೆಮಲ್ಲರಾಜಪಟ್ಟಣಗಳಲ್ಲಿ ಕಂಡುಬಂದಿದೆ. ಈ ಮೂರ್ತಿ ಮೂರು ಮುಖ, ನಾಲ್ಕು ಕೈಗಳನ್ನು ಹೊಂದಿದೆ. ಕರಂಡ ಮಕುಟ, ದಪ್ಪನೆಯ ಕಿವಿಯೋಲೆ, ಕೊರಳಲ್ಲಿ ಕೊರಳಹಾರ ಹಾಗು ಯಜ್ಞೋಪವೀತವಿದೆ. ಶೂಲ, ಧನಸ್ಸು, ಮೇಲಿನ ಕೈಗಳಲ್ಲಿದ್ದರೆ, ಅಕ್ಷಮಾಲೆ, ಮೋದಕ ಪಾತ್ರೆ, ಕೆಳಗಿನ ಎಡ, ಬಲ ಕೈಗಳಲ್ಲಿ ಹಿಡಿದಿದ್ದು, ಕೈಗಳಲ್ಲಿ ಕಡಗ, ಭುಜಕೀರ್ತಿ ಕೇಯೂರಗಳಿವೆ. ಮೊಣಕಾಲಿನವರೆಗೆ ಕಚ್ಚೆಯಿದ್ದು, ಸುಖಾಸೀನನಾಗಿ ನವಿಲು ಮೇಲೆ ಕುಳಿತಂತೆ ಕೆತ್ತಲಾಗಿದೆ. ಕಾಲಿನಲ್ಲಿ ಕಡಗ ಇದೆ. ನವಿಲೂ ಕೂಡಾ ಅಲಂಕಾರಯುಕ್ತ ವಾಗಿದ್ದು, ಅದರ ತಲೆಭಾಗ ಹಾನಿಗೊಂಡಿದೆ. ಸುತ್ತಲೂ ಪ್ರಭಾವಳಿಯಿಂದ ಅಲಂಕೃತವಾಗಿದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ನಂತರದ ಚಂಗಾಳ್ವರ ಕಾಲದ್ದೆಂದು ಹೇಳಬಹುದು.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬರುವ ದೇವಾಲಯಗಳಲ್ಲಿ ಸ್ಕಂದ ಅಥವಾ ಕುಮಾರನ ವಿಗ್ರಹಗಳು ದೊರೆಯುವುದು ಕಡಿಮೆ. ಸಮಪಾದದಲ್ಲಿ ನಿಂತಿರುವ ಈ ಬಿಂಬ ಬಾಲಾಲಂಕಾರದಿಂದ ಕೂಡಿದ್ದು ಕರಂಡಮಕುಟ, ಕೊರಳಲ್ಲಿ ಜಪಮಣಿಗಳ ಸರದಂತಹ ಯಜ್ಞೋಪವೀತ, ದಪ್ಪನೆಯಕುಂಡಲಗಳು, ಮೊಣಕಾಲ ಮಂಡಿಯವರೆಗೆ ಕಚ್ಚೆ ಇದೆ. ಪ್ರಾಚೀನ ಶಿಲ್ಪಗಳಲ್ಲಿ ಎರಡು ಕೈಗಳಿದ್ದು ಬಲಗೈಲಿ ಉದ್ದವಾದ ಬಿಲ್ಲೆ ಎಡಗೈಲಿ ಫಲವನ್ನು ಬಿಡಿಸಿರುತ್ತಾರೆ.

ನಂತರದ ಶಿಲ್ಪಗಳಲ್ಲಿ ನಾಲ್ಕು ಕೈಗಳಿದ್ದು ಟಂಕ, ಅಕ್ಷಮಾಲೆ, ಕಟಿಹಸ್ತ, ಅಭಯ ಹಸ್ತಗಳನ್ನು ಬಿಡಿಸಿದೆ. ಹರವೆ ಮಲ್ಲರಾಜಪಟ್ಟಣಗಳಲ್ಲಿ ಈ ರೀತಿಯ ಶಿಲ್ಪ ಕಂಡುಬಂದಿದೆ.

ನಂದಿ ಶಿಲ್ಪ

ಶಿವದೇವಾಲಯಗಳಲ್ಲಿ ಕಾಣಬರುವ ಮುಖ್ಯವಾದ ಶಿಲ್ಪ ನಂದಿ ಅಥವಾ ಬಸವಶಿಲ್ಪ. ಇವನ್ನೂ ಪ್ರಾಚೀನ ಹಾಗು ಅರ್ವಾಚೀನ ಎಂದು ಗುರುತಿಸುವುದು ಕಷ್ಟ. ಆದರೂ ಸೂಕ್ಷ್ಮವಾಗಿ ಗಮನಿಸಿದಾಗ ವ್ಯತ್ಯಾಸವನ್ನು ಗುರುತಿಸಬಹುದು. ಗಂಗರ ಕಾಲದ ಶಿಲ್ಪಗಳು ಚಿಕ್ಕದಾಗಿರುವುದು ಹಾಗು ಅವು ಹೆಚ್ಚು ಅಲಂಕಾರ ರಹಿತವಾಗಿರುವುದರಿಂದ ಅವುಗಳನ್ನು ಕಿತ್ತು ಪಕ್ಕಕ್ಕೆ ಇರಿಸಿ ನಂತರದ ಕಾಲದ ಶಿಲ್ಪಗಳನ್ನು ಇರಿಸಿರುತ್ತಾರೆ. ವೃಷಭ ಅಥವಾ ನಂದಿ ಶಿವನ ವಾಹನವಾಗಿದ್ದು ಬಹುತೇಕ ಶೈವ ದೇಗುಲಗಳಲ್ಲಿ ಲಿಂಗಕ್ಕೆ ಎದುರಾಗಿ ಅಂತರಾಳ ಇಲ್ಲವೇ ನವರಂಗದಲ್ಲಿ ಈ ಮೂರ್ತಿಗಳಿರುತ್ತವೆ. ಕೆಲವು ವೇಳೆ ಪ್ರತ್ಯೇಕ ನಂದಿ ಅಥವಾ ಬಸವನ ಗುಡಿಯನ್ನು ಕಟ್ಟಿರುವುದನ್ನು ಕಾಣಬಹುದು. ಉದಾಹರಣೆಗೆ ಪಿರಿಯಾಪಟ್ಟಣ, ಬೆಟ್ಟದಪುರ, ಹರದೂರು, ನಿಲವಾಡಿ, ಹಿಟ್ನೆಹೆಬ್ಬಾಗಿಲು ಮತ್ತು ನಂದಿನಾಥಪುರ ಗ್ರಾಮಗಳಲ್ಲಿ ಲಿಂಗಕ್ಕೆ ಮುಖ ಮಾಡಿರುವ ನಂದಿ ಶಿಲ್ಪಗಳಿವೆ. ಇಲ್ಲಿಯ ನಂದಿ ಮೂರ್ತಿಗಳನ್ನು ಎರಡು ರೀತಿಯಲ್ಲಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಅಲಂಕಾರ ರಹಿತ ನಂದಿಗಳು ಮತ್ತು ಅಲಂಕಾರ ಸಹಿತ ನಂದಿಗಳು. ಚಾಮರಾಯನಕೋಟೆ, ದೊಡ್ಡಕಮರವಳ್ಳಿ, ಬೆಟ್ಟದಪುರ, ಪುನಾಡನಹಳ್ಳಿ, ನಿಲವಾಡಿ ಮತ್ತು ಬಾರ್ಸೆ, ದೊಡ್ಡನೇರಳೆಗಳಲ್ಲಿ ಅಲಂಕಾರ ರಹಿತ ನಂದಿ ಶಿಲ್ಪಗಳು ಕಂಡುಬರುತ್ತವೆ. ಇವುಗಳು ಸಾಧಾರಣ ನಂದಿಶಿಲ್ಪಗಳಾಗಿದ್ದು, ತಲೆ ಲಿಂಗಕ್ಕೆ ಎದುರಾಗಿದ್ದು, ಮುಂದಿನ ಬಲಗಾಲನ್ನು ಮಡಿಚಿ ಎಡಗಾಲನ್ನು ಮುಂದೆ ಚಾಚಿ ಮಲಗಿದ ರೀತಿ ಇರುತ್ತದೆ. ಪ್ರಾಚೀನ ಕಾಲದ ಈ ನಂದಿಶಿಲ್ಪಗಳ ಭುಜವು ಅಷ್ಟೇನು ಎತ್ತರವಾಗಿರುವುದಿಲ್ಲ. ಹಾಗು ಕೊರಳಲ್ಲಿ ಸಾಧಾರಣ ಗಂಟೆಸರವೊಂದಿದ್ದು ಬಾಲವು ಬಾಗಿದ ರೀತಿ ಇರುತ್ತದೆ.

ಬೆಟ್ಟದಪುರ, ಪಿರಿಯಾಪಟ್ಟಣ, ಬೆಟ್ಟತುಂಗ ಮತ್ತು ಸಂಗರಶೆಟ್ಟಿ ಗ್ರಾಮಗಳಲ್ಲಿ ಕಂಡು ಬಂದಿರುವ ನಂದಿ ಶಿಲ್ಪಗಳು ಲಿಂಗಕ್ಕೆ ಎದುರಾಗಿ ಬಲಗಾಲನ್ನು ಮುಂದೆ ಚಾಚಿ, ಎಡಗಾಲ ಮೇಲೆ ಒರಗಿ ಮಲಗಿಕೊಂಡ ಹಾಗೆ ಕಾಣಬರುತ್ತವೆ. ಈ ಮೂರ್ತಿಗಳು ಕೊರಳಲ್ಲಿ ಗಂಟೆಸರ, ಹಣೆಪಟ್ಟಿ, ಬೆನ್ನ ಮೇಲೆ ಗಂಟೆಸರ ಹಾಗು ಮೈಯನ್ನು ಅಲಂಕಾರಿಕ ಬಟ್ಟೆಯಿಂದ ಮುಚ್ಚಿ ಅಲಂಕರಿಸಿರುವುದು ವಿಶೇಷತೆ. ಕೆಲವೊಮ್ಮೆ ಬಾಲವನ್ನು ಕೆಳಕ್ಕೆ ಬಿಡದ ಹಾಗೆ ಡುಬ್ಬದ ಬಳಿ ಗಂಟು ಹಾಕಿ ಕಟ್ಟಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ದೇವಾಲಯದ ಅಂತರಾಳ ದಲ್ಲಿ ಇಲ್ಲವೇ ದೇವಾಲಯದ ಆವರಣದೊಳಗೆ ನಂದಿಶಿಲ್ಪಗಳು ಕಂಡುಬರುತ್ತವೆ. ಇವುಗಳಲ್ಲದೆ

ಇನ್ನೂ ಕೆಲವು ಶಿಲ್ಪಗಳಿದ್ದು ಅವುಗಳಲ್ಲಿ ದಿಕ್ಪಾಲಕ ಶಿಲ್ಪಗಳು, ದ್ವಾರಪಾಲಕ ಶಿಲ್ಪಗಳು, ಉಮಾಮಹೇಶ್ವರ ಶಿಲ್ಪಗಳು ಮುಖ್ಯವಾದವು. ದಿಕ್ಪಾಲಕ ಶಿಲ್ಪಗಳು ದೇವಾಲಯದ ಅಥವಾ ಬಸದಿಗಳ ಮುಚ್ಚಿಗೆಯಲ್ಲಿ ಕಾಣಬರುತ್ತವೆ. ತಮ್ಮ ವಾಹನಗಳ ಮೇಲೆ ಸಪತ್ನೀಕರಾಗಿದ್ದು ಒಂದು ಕೈಲಿ ಕಮಲವನ್ನು ಇನ್ನೊಂದು ಕೈಲಿ ವಿಸ್ಮಯ ಹಸ್ತವನ್ನು ತೋರಿಸುತ್ತಾ ದೇವರ ಮಹಿಮೆಯನ್ನು ದಿಕ್ಕು ದಿಕ್ಕುಗಳಿಗೂ ಸಾರುತ್ತಿರುವಂತೆ ಶಿಲ್ಪಿಸಿರುತ್ತಾರೆ.

ರಾಜಭಕ್ತ

ಅನ್ನದಾನಿ ಮಲ್ಲಿಕಾರ್ಜುನ ದೇವಾಲಯದಲ್ಲಿ ಸುಂದರವಾಗಿರುವ ಮೂರ್ತಿಶಿಲ್ಪಗಳಲ್ಲಿ ಒಂದು. ಇದು ರಾಜನ ಶಿಲ್ಪವಾಗಿದ್ದು ಗರ್ಭಗೃಹಕ್ಕೆ ನೇರವಾಗಿ ನವರಂಗಮಂಟಪದ ಎದುರಿಗೆ ಎಡಭಾಗದ ಮೂಲೆಯಲ್ಲಿದೆ. ಈ ಮೂರ್ತಿಯು ಪೀಠದ ಮೇಲೆ ನಿಂತು ರಾಜಭಕ್ತಿಯಿಂದ ದೇವರಿಗೆ ತನ್ನ ಎರಡು ಕೈಗಳನ್ನು ಜೋಡಿಸಿ, ಸ್ವಲ್ಪ ಪ್ರಮಾಣದಲ್ಲಿ ತಲೆ ಭಾಗಿಸಿ ನಮಸ್ಕರಿಸುತ್ತಿರುವ ರೀತಿಯಲ್ಲಿದೆ. ಬೆಲೆಬಾಳುವ ರತ್ನ, ರುದ್ರಾಕ್ಷಿಮಾಲೆ, ಕಿವಿಯೋಲೆ ಮತ್ತು ಸರವನ್ನು ಧರಿಸಿದೆ. ಈತನು ಯಜ್ಞೋಪವೀತ ಹೊಂದಿದ್ದು, ಮುಖವು ಕ್ಷೌರ ಮಾಡಿಕೊಂಡಿದ್ದು, ಗೃಹಸ್ಥನಂತೆ ಧೋತಿಯನ್ನು ಧರಿಸಿದ್ದಾನೆ ಮತ್ತು ಒಂದು ಶಾಲನ್ನು ಕೂಡಾ ಹೊಂದಿದ್ದಾನೆ. ಈತನ ಹುಬ್ಬು ದೀರ್ಘವಾಗಿದ್ದು ಕೂದಲು ಸುರಳಿಯಾಕಾರದಲ್ಲಿದೆ. ಮೂಗು ಉದ್ದವಾಗಿದ್ದು ತುಟಿಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಆಭರಣ ಅಲಂಕೃತವಾದ ಕಿರೀಟ ಮುಕುಟವನ್ನು ಧರಿಸಿರುವನು. ಅಲ್ಲದೇ ಮಕರ ಕುಂಡಲ, ಕಂಠಾಭರಣ ಕೇಯೂರ ಅಥವಾ ತೋಳು ಬಂದಿಯನ್ನು ಧರಿಸಿದ್ದು ಕೈಕಡಗ, ಕೈಯಾರ ಎಲ್ಲಾ ಬೇರಳುಗಳಿಗೆ ಉಂಗುರವನ್ನು ಧರಿಸಿರುವನು. ಉದರಬಂಧ, ನಡುಬಂಧ, ಅಲಂಕೃತ ಇಳಿಬಟ್ಟೆಯನ್ನು ತೊಟ್ಟಿರುವನು. ಭಾವ ತುಂಬಿದ ಮುಖ ಒಳಗೊಂಡಿದ್ದು ಮೀಸೆಯನ್ನು ಹೊಂದಿರುವನು. ಭಕ್ತನ ಬಲ ಮತ್ತು ಎಡಭುಜದ ಸಮೀಪ, ಸೂರ್ಯ, ಚಂದ್ರರ ಉಬ್ಬು ಕೆತ್ತನೆಯಿರುವುದು. ಕಾಲ್ಗಡಗವನ್ನು ಧರಿಸಿದ್ದಲ್ಲದೆ ಮಂಡಿಬಂಧಿಯನ್ನು ಧರಿಸಿರುವನು. ಭಕ್ತನ ಎರಡು ಬದಿಗಳಿಗೆ ಸಿಂಹವು ನಿಂತಿರುವ ಶೈಲಿಯಲ್ಲಿ ಕೆತ್ತನೆಯನ್ನು ಒಳಗೊಂಡಿದ್ದಲ್ಲದೆ ಪುಷ್ಪಲಂಕಾರದ ಚಿತ್ರವನ್ನು ಹೊಂದಿರುವುದು. ರಾಜಭಕ್ತನು ಪ್ರವೇಶದ್ವಾರದಲ್ಲಿ ನಿಂತಂತೆ ಇದ್ದು, ಬಾಗಿಲುವಾಡವು ಕಲಾತ್ಮಕ ಕೆತ್ತನೆಯನ್ನು ಒಳಗೊಂಡಿರುವುದಲ್ಲದೆ ಮೇಲ್ಭಾಗವು ಕಮಾನಿನಾಕಾರದಲ್ಲಿದೆ. ಪೀಠದ ಮೇಲೆ ಯಾವುದೇ ರೀತಿಯ ಅಕ್ಷರಗಳ ಕೆತ್ತನೆ ಇರುವುದಿಲ್ಲ. ಒಟ್ಟಿನಲ್ಲಿ ರಾಜಭಕ್ತನ ಶಿಲ್ಪ ಸದೃಢವಾದ ಮೈಕಟ್ಟನ್ನು ಹೊಂದಿದೆ. ಇದು ನಾಲ್ಕು ಅಡಿ ಉದ್ದ ಇದ್ದು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದಂತಹ ಕುಡುಕೂರಿನ ಪಾಳೆಯಗಾರನ ಪ್ರತಿಮೆಯಾಗಿದೆ.

ಶೈವ ದ್ವಾರಪಾಲಕರ ಶಿಲ್ಪ

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಬಹುತೇಕ ಶೈವ ದೇವಾಲಯಗಳಲ್ಲಿ ಪ್ರವೇಶದ್ವಾರ, ಅಂತರಾಳದಲ್ಲಿ ಶೈವದ್ವಾರಪಾಲಕರ ಉಬ್ಬು ಮೂರ್ತಿಶಿಲ್ಪಗಳನ್ನು ಕಾಣಬಹುದು. ಈ ದ್ವಾರಪಾಲಕರನ್ನು ಆಯಾ ಮುಖ್ಯದೇವರ ಸೇವಕರೆಂದು ಕರೆಯಲಾಗುತ್ತಿದೆ. ಪಿರಿಯಾಪಟ್ಟಣದ ಈಶ್ವರ ದೇವಾಲಯ, ಬಸವೇಶ್ವರ ದೇವಾಲಯ, ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯ, ಈಶ್ವರ ದೇವಾಲಯ, ಬಾರ್ಸೆಯ ಬಸವೇಶ್ವರ ದೇವಾಲಯ, ಕೆಸುವಿನಕೆರೆಯ ಬಸವೇಶ್ವರ ದೇವಾಲಯಗಳಲ್ಲಿ ಶೈವ ದ್ವಾರಪಾಲಕರ ಮೂರ್ತಿಶಿಲ್ಪಗಳು ಕಂಡುಬರುತ್ತವೆ. ಶೈವ ದೇವಾಲಯಗಳ ದ್ವಾರದ ಎಡಬಲದಲ್ಲಿ ಅಭಯ, ವರದಹಸ್ತ, ತ್ರಿಶೂಲ, ಡಮರುಗ ಹಿಡಿದುನಿಂತಿರುವ ದ್ವಿಭುಜ ಇಲ್ಲವೇ ಚರ್ತುಭುಜವುಳ್ಳ ಶೈವ ದ್ವಾರಪಾಲಕ ಶಿಲ್ಪಗಳು ಕಾಣಬರುತ್ತವೆ. ಬೆಟ್ಟದಪುರ ಮತ್ತು ಪಿರಿಯಾಪಟ್ಟಣದ ಅಂತರಾಳ ದ್ವಾರದ ಎಡ ಮತ್ತು ಬಲದಲ್ಲಿ ಎರಡು ಶೈವಮೂರ್ತಿಗಳಿದ್ದು ಅವು ಅಲಂಕಾರ ಹಾಗು ಸೂಕ್ಷ್ಮತೆಯ ದೃಷ್ಟಿಯಿಂದ ಮಹತ್ವದಸ್ಥಾನ ಪಡೆದಿವೆ. ಬಲಭಾಗದ ಮೂರ್ತಿ ಚರ್ತುಭುಜಧಾರಿಯಾಗಿದ್ದು, ದ್ವಿಭಂಗದಲ್ಲಿ ಸ್ಥಾನಿಕವಾಗಿದೆ. ಕಿರೀಟ ಮುಖಟಧಾರಿಯಾದ ಮೂರ್ತಿಯ ಕಿವಿಗಳಲ್ಲಿ ಕುಂಡಲಗಳಿವೆ. ನೀಳವಾದ ಕಣ್ಣು, ಮಂದಹಾಸ ಬೀರುತ್ತಿರುವ ಮುಖ, ಕೋರೆಹಲ್ಲುಗಳಿದ್ದು, ಜಟೆಯು ಭುಜದ ಮೇಲೆ ಇಳಿಬಿದ್ದಿದೆ. ಕೊರಳಲ್ಲಿ ಕಂಠಿಹಾರ, ಎದೆಯ ಮೇಲೆ ಅನೇಕ ಬಗೆಯ ಹಾರಗಳಿದ್ದು ಯಜ್ಞೋಪವೀತವಿದೆ. ಮೊಣಕಾಲಿನಿಂದ ಕೆಳಗೆ ಇಳಿಬಿದ್ದಿರುವ ಹಾರವಿದೆ. ಸರ್ಪಕೇಯೂರ, ಕೈಗಡಗಗಳಿದ್ದು, ಮೇಲಿನ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಡಮರುಗ, ಕೆಳಬಲಗೈ ಅಭಯ ಮುದ್ರೆಯಲ್ಲಿದ್ದು, ಕೆಳ ಎಡಗೈಯಲ್ಲಿ ಗದೆ ಇದೆ. ಗದೆ ಮತ್ತು ತ್ರಿಶೂಲಗಳಿಗೆ ಸರ್ಪ ಸುತ್ತುವರಿದು ಹೆಡೆ ಬಿಚ್ಚಿದೆ. ನಡುವಿನಲ್ಲಿ ನಡುಬಂಧ, ಮಣಿಸರಗಳಿಂದ ಅಲಂಕೃತವಾದ ಉಡುಪು, ಎರಡು ಕಾಲಿನ ಮಧ್ಯ ಇಳಿಬಿದ್ದ ಇಳಿಬಟ್ಟೆ ಇದೆ. ಕಾಲಿನಲ್ಲಿ ಕಾಲ್ಗಡಗ, ಪಾದಸರಗಳಿವೆ. ತೋರಣವನ್ನು ತುಂಬಾ ಸೂಕ್ಷ್ಮವಾಗಿ ಲತಾಪದ್ಮಗಳಿಂದ ಅಲಂಕರಿಸಿರುವುದು ವಿಶೇಷ. ಈ ಎಲ್ಲಾ ಲಕ್ಷಣಗಳನ್ನು ಎಡಭಾಗದ ಮೂರ್ತಿಯು ಹೊಂದಿದ್ದು, ಬಲಗಾಲಿನ ಮೇಲೆ ದೇಹದ ಭಾರವನ್ನೆಲ್ಲಾ ಬಿಟ್ಟು ಸ್ಥಾನಿಕವಾಗಿರುವ ಮೂರ್ತಿಯ ಮೇಲಿನ ಎಡಬಲದಲ್ಲಿ ತ್ರಿಶೂಲ ಮತ್ತು ಡಮರಿದೆ. ಕೆಳ ಬಲಗೈಯಲ್ಲಿ ಗದೆ ಇದ್ದು, ಎಡಗೈ ಅಭಯ ಮುದ್ರೆಯಲ್ಲಿರುವುದು ಮೂರ್ತಿಯ ವಿಶೇಷತೆ.

ವೈಷ್ಣವ ಶಿಲ್ಪಗಳು

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ವೈಷ್ಣವ ಶಿಲ್ಪಗಳು ಶೈವಶಿಲ್ಪಗಳಷ್ಟು ಅಧಿಕ ಪ್ರಮಾಣದಲ್ಲಿ ಇಲ್ಲವೆಂದು ಹೇಳಬಹುದು. ವೈಷ್ಣವ ದೇವಾಲಯಗಳು ಅಥವಾ ಶಿಲ್ಪಗಳು

ಸಂಖ್ಯೆಯಲ್ಲಿ ಕಡಿಮೆ. ಶೈವಧರ್ಮದಂತೆ ವೈಷ್ಣವ ಧರ್ಮವು ಕೂಡ ಪ್ರಾಚೀನ ಕಾಲದಿಂದಲೂ ಜನರಿಂದ ಮನ್ನಣೆ ಪಡೆದ ಧಾರ್ಮಿಕ ಪಂಥ. ಇಲ್ಲಿ ವಿಷ್ಣುವೇ ಪ್ರಧಾನವಾಗಿದ್ದು, ಇಪ್ಪತ್ನಾಲ್ಕು ರೂಪ ಮತ್ತು ಹತ್ತು ಅವತಾರಗಳಲ್ಲಿ ಪೂಜಿಸಲಾಗುತ್ತದೆ. ಬೃಹತ್‌ಸಂಹಿತೆ, ಮತ್ಸ್ಯಪುರಾಣ, ವಿಹಜೇಂದ್ರಸಂಹಿತೆ, ವಿಷ್ಣುಧರ್ಮೋತ್ತರ ಪುರಾಣ, ಸಮರಾಂಗಣ ಸೂತ್ರಧಾರ ಗ್ರಂಥಗಳು ಈ ಮೂರ್ತಿ ಆರಾಧನೆ ಮತ್ತು ಹಿನ್ನೆಲೆಯನ್ನು ಉಲ್ಲೇಖಿಸುತ್ತವೆ.[೨೪] ಪಂಥದಲ್ಲಿ ಸ್ಥಾನಿಕ, ಆಸೀನ, ಶಯನ, ವಾಹನರೂಡ, ದೇವಿಸಹಿತ, ದಶಾವತಾರ, ಚತುರ್ವಂಶ ಮೂರ್ತಿಗಳೆಂಬ ವಿಧಗಳಿವೆ. ಪ್ರಸ್ತುತ ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಸ್ಥಾನಿಕ ಮೂರ್ತಿಗಳೇ ಹೆಚ್ಚಾಗಿದ್ದು, ಅವುಗಳಲ್ಲಿ ವಿಷ್ಣು, ಕೇಶವ ಮತ್ತು ಜನಾರ್ಧನ ಮೂರ್ತಿಗಳು ಪ್ರಮುಖವಾಗಿವೆ. ಅಗ್ನಿಪುರಾಣ, ಭಾಗವತದ ದಶಮಾಸಕಾಂಡ, ಹರಿವಂಶ, ವಿಷ್ಣುಪುರಾಣ, ಮಹಾಭಾರತ, ಬ್ರಹ್ಮವೈವರ್ಥ ಪುರಾಣಗಳು ಕೃಷ್ಣನ ಅವತಾರ, ಆರಾಧನೆ ಕುರಿತು ವಿಶ್ಲೇಷಿಸುತ್ತವೆ. ವಿಷ್ಣುವಿನ ಇಪ್ಪತ್ನಾಲ್ಕು ರೂಪದ ಮೂರ್ತಿಗಳು ಸಾಮಾನ್ಯವಾಗಿ ಶಂಖ, ಚಕ್ರ, ಗದೆ, ಪದ್ಮಗಳನ್ನು ಮೇಲಿನ ಇಲ್ಲವೇ ಕೆಳಗಿನ ಕೈಗಳಲ್ಲಿ ಹಿಡಿದು ನಿಂತಿರುವ ಭಂಗಿಯಲ್ಲಿರುತ್ತವೆ. ಕಿರೀಟ ಮಕುಟ, ಕಂಠಾಭರಣ, ಮಕರಕುಂಡಲ ಯಜ್ಞೋಪವೀತ, ದೋತಿಯನ್ನು ಧರಿಸಿ ಸಮಭಂಗಿಯಲ್ಲಿರುತ್ತವೆ. ಕೇವಲ ವಿಷ್ಣುವಷ್ಟೇ ಅಲ್ಲದೆ ಕೇಶವ, ವೇಣುಗೋಪಾಲ, ಮಾಧವ, ಜನಾರ್ಧನ, ಉಗ್ರನರಸಿಂಹ ಮೂರ್ತಿಗಳು ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಅಲ್ಪ ಪ್ರಮಾಣದಲ್ಲಿ ಕಂಡುಬರುತ್ತವೆ. ಪಿರಿಯಾಪಟ್ಟಣದ ಕೇಶವ ದೇವಾಲಯದ ಕೇಶವ ಶಿಲ್ಪ ಚತುರ್ಭುಜಧಾರಿಯಾದ ವಿಷ್ಣು, ಸಮಭಂಗಿಯಲ್ಲಿ ನಿಂತಿದ್ದು, ಕಿರೀಟ ಮಕುಟಧಾರಿಯಾಗಿದೆ. ಕಿರೀಟದ ಹಿಂಬದಿಗೆ ಶಿರಚಕ್ರವಿದ್ದು, ಕಿವಿಯಲ್ಲಿ ಮಕರಕುಂಡಲಗಳಿವೆ. ಕೊರಳಲ್ಲಿ ಕಂಠಾಭರಣ ಹಾಗು ಅನೇಕ ಬಗೆಯ ಹಾರಗಳಿವೆ. ಅಷ್ಟೇ ಅಲ್ಲದೆ ಉದರಬಂಧ, ಯಜ್ಞೋಪವೀತ, ಭುಜಕೀರ್ತಿ, ಕೇಯೂರ, ಕೈಕಡಗಗಳಿಂದ ಅಲಂಕೃತವಾಗಿದೆ. ಮೇಲಿನ ಬಲಗೈಯಲ್ಲಿ ಮಾತ್ರ ಕಾಣುತ್ತಿದ್ದು ಹಿಡಿದ ಆಯುಧ ಹಾನಿಗೊಂಡಿದೆ. ಹಾಗೆಯೇ ಉಳಿದ ಮೂರು ಕೈಗಳು ಸಹ ಹಾನಿಗೊಂಡಿದೆ. ಧೋತಿಯನ್ನು ವಿವಿಧ ಮಣಿಸರಗಳಿಂದ ಅಲಂಕರಿಸಲಾಗಿದೆ. ಕಾಲಿನಲ್ಲಿ ಕಾಲ್ಗಡಗಳಿವೆ. ಈ ಮೂರ್ತಿಯ ಕಾಲಿನ ಎಡಬಲದಲ್ಲಿ ಅಲಂಕೃತ ಚಾಮರಧಾರಿಣಿಯರಿದ್ದಾರೆ. ವಿಷ್ಣುವಿನ ದಶಾವತಾರಗಳಾದ ಮತ್ಸ್ಯ, ಕೂರ್ಮ, ವರಹ, ನರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಕೃಷ್ಣ, ಬುದ್ಧ, ಕಲ್ಕಿ, ಅವತಾರಗಳನ್ನು ಪ್ರಭಾವಳಿಯಲ್ಲಿ ಸರ್ಪ ತೋರಣದ ಮಧ್ಯದಲ್ಲಿ ಕೆತ್ತಿರುವುದು ವಿಶೇಷತೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಪೆರಿಯಾ ರಾಜನ ಕಾಲದ್ದೆಂದು ಹೇಳಬಹುದು.

ವಿಷ್ಣು ಪ್ರಧಾನವಾಗಿ ವೈಷ್ಣವ ಮತ ಬೆಳೆದು ಬಂದಿದೆ. ವಿಷ್ಣುವನ್ನು ಇಪ್ಪತ್ನಾಲ್ಕು ರೂಪಗಳಲ್ಲಿ ಆರಾಧಿಸುವ ಪರಂಪರೆಯಿದೆ. ಅವನ ಬೇರೆ ಬೇರೆ ರೂಪದ ಶಿಲ್ಪಗಳನ್ನು

ಚರಿತ್ರೆಯುದ್ದಕ್ಕು ಕಾಣಬಹುದು. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬರುವ ವೈಷ್ಣವ ಶಿಲ್ಪಗಳಲ್ಲಿ ಕೇಶವ, ಜನಾರ್ಧನ ಮತ್ತು ರಂಗನಾಥನ ಹೆಸರಿನಲ್ಲಿ ವಿಷ್ಣುವಿನ ಆರಾಧನೆ ಕಂಡುಬರುತ್ತದೆ. ಈ ಶಿಲ್ಪಗಳಲ್ಲಿ ವಿಷ್ಣು ಸಮಭಂಗಿಯಲ್ಲಿದ್ದು ಚತುರ್ಭುಜಗಳನ್ನು ಹೊಂದಿದ್ದಾನೆ. ಹಿಂದಿನ ಕೈಗಳಲ್ಲಿ ಶಂಖ ಚಕ್ರಗಳಿವೆ. ಮುಂದಿನ ಕೈಗಳ ಅಭಯ ಮತ್ತು ವರದ ಮುದ್ರೆಯಲ್ಲಿವೆ. ಆದರೆ ಹಿಟ್ನೆಹೆಬ್ಬಾಗಿಲು, ಪಿರಿಯಾಪಟ್ಟಣ ಶಿಲ್ಪಗಳಲ್ಲಿ ಅಭಯ ಮುದ್ರೆ ಬದಲಿಗೆ ಗದೆಗಳಿವೆ. ತಲೆಯ ಮೇಲೆ ಕಿರೀಟ ಮುಕುಟವಿದ್ದು, ಕಿವಿಯಲ್ಲಿ ಕುಂಡಲಗಳೂ, ಭುಜಕೀರ್ತಿಗಳು, ಕೊರಳಲ್ಲಿ ವಿವಿಧ ರೀತಿಯ ಸರಗಳು, ಕೌಸ್ತುಭಹಾರ, ಭುಜಸರ, ತೋಳ್ಬಂದಿ, ಕೈಕಡಗ, ಕಾಲ್ಕಡಗಳಿವೆ. ಈ ಶಿಲ್ಪಗಳ ಇಕ್ಕೆಲಗಳಲ್ಲಿ ಶ್ರೀದೇವಿ ಭೂದೇವಿಯರ ಶಿಲ್ಪಗಳಿವೆ. ವಿಷ್ಣು ಶಿಲ್ಪಗಳಲ್ಲಿ ಹಿಟ್ನೆಹೆಬ್ಬಾಗಿಲು, ಪಿರಿಯಾಪಟ್ಟಣ, ಚಿಕ್ಕಹೊನ್ನೂರು, ಮರದೂರುಗಳಲ್ಲಿ ದೊಡ್ಡ ವಿಷ್ಣು ಶಿಲ್ಪಗಳು ಕಂಡುಬರುತ್ತವೆ. ಪಿರಿಯಾಪಟ್ಟಣ, ಚಿಕ್ಕಹೊನ್ನೂರು, ಹಿಟ್ನೆಹೆಬ್ಬಾಗಿಲಿನ ಶಿಲ್ಪಗಳು ಅಲಂಕಾರದಲ್ಲಿ ಒಂದೇ ರೀತಿಯಲ್ಲಿವೆ. ಸಮಭಂಗಿಯಲ್ಲಿ ನಿಂತಿದ್ದು ಬಲಮುಂಗೈಯಿಲ್ಲಿ. ಫಲ, ಹಿಂಗೈಯಲ್ಲಿ ಪ್ರಯೋಗ ಚಕ್ರ, ಎಡಹಿಂಗೈಲಿ ಶಂಖ, ಮುಂಗೈಯಲ್ಲಿ ಸೊಂಟದ ಬಟ್ಟೆಯನ್ನು ಬಿಗಿಯಾಗಿ ಹಿಡಿದಿರುವಂತಿದೆ. ಕಿರೀಟವು ಕೊಳಗದಂತಿದೆ. ಕಿವಿಗಳಲ್ಲಿ ಮಕರ ಕುಂಡಲ, ಎಡಭುಜದಿಂದ ಹಾದು ಬಲತೋಳ ಮೇಲೆ ಇಳಿದಿರುವ ಯಜ್ಞೋಪವೀತ, ಮೊಣಕಾಲವರೆಗೆ ಇಳಿದಿರುವ ಮಾಲೆ, ನಡುವನ್ನು ಬಿಗಿದು ಮುಂಭಾಗದಲ್ಲಿ ಗಂಟು ಬಿದ್ದಿರುವ ನಡುಬಂಧ, ನಡುವಿನ ಎರಡೂ ಕಡೆಗಳಲ್ಲಿ ಇಳಿದಿರುವ ಬಟ್ಟೆಯನ್ನು ಸೇರಿಸುವಂತೆ ಮಧ್ಯೆ ಅರ್ಧಚಂದ್ರಾಕಾರದ ಇಳಿಬಟ್ಟೆ, ಕೈಗಳಲ್ಲಿ ದಪ್ಪಕಡಗಗಳನ್ನು ಕಾಣುತ್ತೇವೆ. ಚಕ್ರದೊಳಕ್ಕೆ ಕೈಹಾಕಿ ಹಿಡಿದಿದ್ದು ಬಲಭಾಗದಲ್ಲಿ ಗದೆಹಿಡಿದಿರುವಂತೆ ಬಿಡಿಸಿದೆ. ಉದರ ಬಂಧವಿದೆ. ಅಭಯ ವರದಹಸ್ತಗಳಿವೆ. ಚಿಕ್ಕಹೊನ್ನೂರು, ಹಿಟ್ನಹೆಬ್ಬಾಗಿಲು, ಪಿರಿಯಾಪಟ್ಟಣಗಳಲ್ಲಿ ಶಿಲ್ಪಗಳು ಅಭಯ, ಚಕ್ರ, ಶಂಖ, ಕಟಿಹಸ್ತಗಳಿದ್ದು ಅಲಂಕಾರದಲ್ಲಿ ಒಂದೇ ತೆರನಾಗಿವೆ. ಜನಿವಾರ ಮತ್ತು ಶಿಲ್ಪಗಳಲ್ಲಿ ಯಜ್ಞೋಪವೀತ ಬಲಗೈ ಮೇಲೆ ಹಾದುಹೋಗಿದೆ. ಶಿಲ್ಪದಲ್ಲಿ ಅಭಯ ಹಸ್ತದ ಕೆಳಗೆ ಗದೆಯನ್ನು ಬಿಡಿಸಿದೆ. ಜನಿವಾರದ ಶಿಲ್ಪದ ಕೈಲಿ ಫಲವಿದೆ. ಹೀಗೆ ವಿಷ್ಣು ಶಿಲ್ಪಗಳು ಮೇಲ್ನೋಟಕ್ಕೆ ಒಂದೇ ರೀತಿಯವಂತೆ ಕಂಡರೂ ಅವುಗಳಲ್ಲಿ ವೈವಿಧ್ಯತೆ ವಿರುವುದನ್ನು ಕಾಣಬಹುದು.

ಗೋಪಾಲಕೃಷ್ಣ ಶಿಲ್ಪ

ಬೆಟ್ಟದಪುರ ಏಣಿ ಹನುಮಂತ ದೇವಾಲಯದಲ್ಲಿ ಉತ್ತರ ದಿಕ್ಕಿಗೆ ಗೋಪಾಲಕೃಷ್ಣ ಮೂರ್ತಿಶಿಲ್ಪವಿದೆ. ಕಪ್ಪು ಶಿಲೆಯಾಗಿದ್ದು ನಾಲ್ಕು ಅಡಿ ಎತ್ತರವಿರುವುದು. ಈತನನ್ನು ವೇಣುಗೋಪಾಲನೆಂದು ಕರೆಯುವರು. ತ್ರಿಭಂಗಿಯಲ್ಲಿ ನಿಂತು ಕೊರಳನ್ನು ನುಡಿಸುತ್ತಿರುವ

ಈತನ ಶಿರದಲ್ಲಿ ಕೇಶವನ್ನು ಎಡಭಾಗದಲ್ಲಿ ಮುಡಿಗಟ್ಟು ದಪ್ಪದಾದ ತುರುಬು ಇದೆ. ಇದರಿಂದ ಶಿರದಲ್ಲಿ ಕಿರೀಟ ಮುಕುಟವಿಲ್ಲ. ಗೋಪಾಲನ ಮುಖ ಅಂಡಾಕಾರವಾಗಿದ್ದು ಅರೆಮುಚ್ಚಿದ ಕಣ್ಣುಗಳು ಗಾನದಲ್ಲಿ ತನ್ಮಯವಾಗಿರುವುದನ್ನು ಬಿಂಬಿಸಿದೆ. ಎರಡು ಕೈಗಳಿಂದ ಕೊರಳನ್ನು ಹಿಡಿದಿರುವ ಗೋಪಾಲನಿಗೆ ಕೊರಳಲ್ಲಿ ದಪ್ಪದಾದ ಪಟ್ಟಿಯಂತಹ ಕಡಗವಿದೆ. ಕೈತೋಳಿನಲ್ಲಿ ಭುಜಕೀರ್ತಿ, ತೋಳ್ಬಂದಿಯೂ ಕೈಗಳಲ್ಲಿ ದಪ್ಪದಾದ ಪಟ್ಟಿಯಂತಹ ಕಡಗವಿದೆ. ನಾಲ್ಕು ಕೈಗಳಿದ್ದು ಇನ್ನುಳಿದ ಬಲ ಕೈಯಲ್ಲಿ ಗಂಟೆಯನ್ನು ಎಡಕೈಯಲ್ಲಿ ದಂಡವನ್ನು ಹಿಡಿದಿರುವುದು. ತೊಡೆಯು ದಪ್ಪವಾಗಿದ್ದು ಬಲ ಮತ್ತು ಎಡಭಾಗದಲ್ಲಿ ಗೋವುಗಳಿರುವುದನ್ನು ಕಾಣಬಹುದು. ಶಿರದ ಎಡಭಾಗದಲ್ಲಿ ಚಂದ್ರ, ಬಲಭಾಗದಲ್ಲಿ ಸೂರ್ಯನ ಉಬ್ಬುಶಿಲ್ಪವಿದೆ.

ಏಣಿ ಹನುಮಂತ ಶಿಲ್ಪ

ಬೆಟ್ಟದಪುರದ ಪಶ್ಚಿಮಕ್ಕಿರುವ ಕಿರಿದಾದ ಬೆಟ್ಟದ ಮೇಲೆ ಏಣಿಹನುಮಂತನ ಶಿಲ್ಪವಿದೆ. ಇದು ದೊಡ್ಡ ಬಂಡೆಯಾಗಿದ್ದು ಕಪ್ಪು ಶಿಲೆಯಾಗಿದೆ. ವಿಗ್ರಹವು ಉತ್ತರ ದಿಕ್ಕಿಗೆ ಮುಖಮಾಡಿದೆ. ಮೂರ್ತಿಯು ನಾಲ್ಕು ಮೀಟರು ಎತ್ತರವಾಗಿದ್ದು ಐದು ಅಡಿ ಅಗಲವಿರುವುದು. ಮೂರ್ತಿಯು ವೀರವೇಷದಿಂದ ನಿಂತಿದ್ದು, ತನ್ನ ಎಡಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿರುವನು ಅಲ್ಲದೇ ಬಲಗೈಯನ್ನು ಶಿರದ ನೇರಕ್ಕೆ ಎತ್ತಿದ್ದು ಐದು ಬೆರಳುಗಳು ಕಾಣುತ್ತಿವೆ. ಎರಡು ಕೈಗಳಿಗೂ ಕಡಗ, ಕೊರಳಲ್ಲಿ ಅಲಂಕೃತ ಸರ ಹೊಂದಿದೆ. ಅಲ್ಲದೇ ಸೊಂಟ ಬಂಧಿ ಯನ್ನು ಸಹ ಧರಿಸಿರುವನು. ಇಳಿ ಬಟ್ಟೆಯನ್ನು ಹೊಂದಿದ್ದು ಕಾಲಿಗೆ ಕಾಲ್ಗಡಗವನ್ನು ಧರಿಸಿರುವಂತೆ ಶಿಲ್ಪಿ ಕೆತ್ತಿರುವನು. ಎಡಗೈಯಲ್ಲಿ ಗದೆಯನ್ನು ಹಿಡಿದುಕೊಂಡಿದ್ದು ಭುಜದ ಮೇಲಿದೆ. ಆಂಜನೇಯ ವಿಗ್ರಹದ ಬಲಭುಜದ ಮೇಲ್ಭಾಗದಲ್ಲಿ ಲಕ್ಷ್ಮಣನು ಇಂದ್ರಜಿತನೊಂದಿಗೆ ಆಕಾಶದಲ್ಲಿ ಹಾರುತ್ತಾ ಬಿಲ್ಲನ್ನು ಹಿಡಿದುಕೊಂಡು ಬಾಣವನ್ನು ಬಿಡುತ್ತಿರುವ ಅಥವಾ ಹೋರಾಡುತ್ತಿರುವ ದೃಶ್ಯವನ್ನು ಕೊರೆಯಲಾಗಿದೆ. ತಳಭಾಗದಲ್ಲಿ ಹನುಮಂತನಂತಿರುವ ಇನ್ನೊಂದು ಶಿಲ್ಪವಿದ್ದು ಇದನ್ನು ಮಕರ ಧ್ವಜವೆಂದು ಕರೆಯಲಾಗಿದೆ. ಇಲ್ಲಿಯೇ ಸಮುದ್ರದಾಕಾರದ ರಚನೆಯಿದ್ದು, ಮತ್ಸ್ಯ, ಸರ್ಪ ಉಬ್ಬುಶಿಲ್ಪವಿರುವುದು. ಈ ವಿಗ್ರಹದಲ್ಲಿ ಎರಡು ಗೂಡುಗಳನ್ನು ಕೊರೆದಿರುವುದು ಒಂದು ವೃತ್ತಾಕಾರದ ಸಣ್ಣ ಸ್ಥಂಭವಿದ್ದು ಇದರ ಮೇಲೆ ಬಳ್ಳಿಯಾಕಾರದ ಹೂವಿನ ಕೆತ್ತನೆಯಿದೆ. ಹನುಮಂತನು ಸಮುದ್ರದ ಮೇಲೆ ವೀರಾವೇಷದಿಂದ ನಿಂತಿರುವ ದೃಶ್ಯವನ್ನು ಕಾಣಬಹುದು. ಇದರಿಂದ ವೀರಹನುಮಂತನೆಂದು, ಪುರೋಹಿತ ಕಾರ್ಯವನ್ನು ಏಣಿ ಹಾಕಿಕೊಂಡು ಮಾಡಬೇಕಾಗಿರುವುದರಿಂದ ಏಣಿ ಹನುಮಂತನೆಂದು ಕರೆಯುವರು.

ಈ ವಿಗ್ರಹದ ಮೇಲೆ ಶಿಲ್ಪಿಯು

ಲಕ್ಷ್ಮಣದೇವರು.

ವೀರ ಹನುಮಂತ ದೇವರು,

ಹನುಮಂತದೇವರು,

ಮಕರಧ್ವಜ ತುರುಮ

ಮಕರ[೨೫] ಎಂದು ಕೊರೆದಿದೆ.

ಆಂಜನೇಯ ಶಿಲ್ಪ

ದಕ್ಷಿಣ ಭಾರತಕ್ಕೆ ಸೀಮಿತವಾಗಿದ್ದ ಹನುಮಂತನ ಪೂಜೆ ಈಗ ಭಾರತದಲ್ಲೆಲ್ಲ ನಡೆಯುತ್ತಿದೆ. ಆದರೆ ಕನ್ನಡ ನಾಡಿನಲ್ಲಿ ವಿಶೇಷವಾಗಿ ಪೂಜೆಗೊಳ್ಳುವ ಹನುಮಂತನನ್ನು ತಮ್ಮವನೇ ಎಂದು ಕರೆದುಕೊಂಡಿರುವುದು ಇದೆ. ಕೋಟೆಕೊತ್ತಲಗಳಲ್ಲಿ, ಬೇಟೆಗಾರರ ವಸತಿಗಳಲ್ಲಿ ಪೂಜೆಗೊಳ್ಳುತ್ತಿದ್ದ ಈ ದೈವದ ಪ್ರಾಚೀನತೆ ಬಹಳವೇ ಇದೆ. ಈ ದೇವತೆ ಜಾನಪದ ನೆಲೆಯಿಂದ ಬಂದುದು. ಮೂರ್ತಿಯ ಆಕಾರ, ಇತಿಹಾಸ, ಸ್ವಭಾವ, ಪೂಜಾಪದ್ಧತಿ ಎಲ್ಲವೂ ಇದನ್ನೇ ಸೂಚಿಸುವವು. ನಾಡಿನ ಗುಡ್ಡಗಾಡುಗಳಲ್ಲಿ, ಕಾಡುಮೇಡುಗಲ್ಲಿ, ಮೂಲೆಮೂಲೆಯ ಹಳ್ಳಿಗಳಲ್ಲಿ ಹನುಮಂತನ ಸಣ್ಣ ಸಣ್ಣ ಗುಡಿಗಳು ಕಂಡುಬರುತ್ತವೆ. ಹಾಗೆಯೇ ಊರ ಹೊರೆಗೆ ಅವನ ಗುಡಿಯಿರುವುದು ವಿಶೇಷವಾಗಿದೆ.[೨೬]

ಸೂರ್ಯಶಿಲ್ಪ

ಶಿವನ ಪಂಚಾಯತನದಲ್ಲಿ ಬರುವ ವಿಗ್ರಹಗಳಲ್ಲಿ ಸೂರ್ಯ ವಿಗ್ರಹವೂ ಒಂದು. ಸಮಭಂಗಿಯಲ್ಲಿ ನಿಂತು ಕೈಗಳಲ್ಲಿ ತಾವರೆಯ ಮೊಗ್ಗುಗಳನ್ನು ಹಿಡಿದಿರುವಂತೆ ಶಿಲ್ಪಿ ಕೆತ್ತಿರುತ್ತಾರೆ. ಕರ್ನಾಟಕದಲ್ಲಿ ಸೌರಮತದವರ ಪ್ರಭಾವ ಅಲ್ಲಲ್ಲಿ ಕಂಡುಬಂದರೂ ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಡಿಮೆ. ಸೌರಮತದ ಪ್ರಭಾವಕ್ಕೆ ಒಳಗಾಗಿದ್ದ ವ್ಯಾಪಾರಿಗಳಿಂದ ಸೂರ್ಯೋಪಾಸನೆ ಪಿರಿಯಾಪಟ್ಟಣ ಪ್ರದೇಶಕ್ಕೆ ಬಂದಿರಬೇಕು. ಸೂರ್ಯದೇವರು ಸೌರಮತದವರಿಂದ ಆಚರಣೆಗೊಳ ಪಡುವ ದೇವರಾಗಿದೆ. ಈತನ ಆರಾಧನೆ ಋಗ್ವೇದ ಕಾಲದಲ್ಲಿ ಹೆಚ್ಚಾಗಿತ್ತು. ಕೂರ್ಮಪುರಾಣವು ಸೂರ್ಯನ ಉಗಮ ಮತ್ತು ಹಿನ್ನೆಲೆಯನ್ನು ತಿಳಿಸುತ್ತದೆ. ವಿಶ್ವಕರ್ಮಶಿಲ್ಪ, ಭವಿಷ್ಯ ಪುರಾಣ, ಅಂಶುಮದ್‌ಭೇದ, ಸುಪ್ರಭೇದಾಗಮಗಳು ಸೂರ್ಯಮೂರ್ತಿಯ ಲಕ್ಷಣ ಕುರಿತು ಹೇಳುತ್ತದೆ.[೨೭] ಮರದೂರಿನಲ್ಲಿರುವ ಸೂರ್ಯಶಿಲ್ಪವು ಸಮಭಂಗಿಯಲ್ಲಿ ನಿಂತಿದೆ. ಈ ಮೂರ್ತಿ ಶಿಲ್ಪ ಕಿರೀಟ ಮುಕುಟಧಾರಿಯಾಗಿದೆ. ಮಕರಕುಂಡಲ, ಕಂಠಾಭರಣ ಯಜ್ಞೋಪವೀತ, ಎಡಗಾಲಿನ ಮೇಲೆ ಇಳಿಬಿದ್ದ ಉಪವೀತ, ವೈಜಯಂತಿಹಾರ ಮತ್ತು ಉದರ ಬಂಧವನ್ನು ಧರಿಸಿದೆ. ದ್ವಿಭುಜಧಾರಿ

ಯಾದ ಮೂರ್ತಿಗೆ ಭುಜಬಂಧ, ಕೇಯೂರ, ಕೈಕಡಗಗಳಿದ್ದು, ಕೈಗಳಲ್ಲಿ ಪದ್ಮವಿದೆ. ನಡುಬಂಧವಿದೆ. ಮಣಿಸರದಿಂದ ಅಲಂಕೃತವಾದ ಇಳಿವಸ್ತ್ರ ಇದ್ದು, ಕಾಲ್ಗಡಗ ಹಾಗು ಪದಸರಗಳಿವೆ. ಉಷೆ ಮತ್ತು ಪ್ರತ್ಯುಷಿಯರು ಸೂರ್ಯನ ಎಡಬಲದಲ್ಲಿ ಬಿಲ್ಲು ಹಿಡಿದು ಪ್ರಯೋಗಿಸುತ್ತಿರುವಂತೆ ಕೆತ್ತಿರುವುದು ಹಾಗು ಸುತ್ತಲಿನ ಪ್ರಭಾವಳಿಯಲ್ಲಿ ದ್ವಾದಶ ಆದಿತ್ಯರನ್ನು ಕೆತ್ತಿರುವುದು ವಿಶೇಷವೆನ್ನಬಹುದು. ಹಾಗೆಯೇ ಪೀಠ ಭಾಗದಲ್ಲಿ ಅಶ್ವಗಳು ರಥವನ್ನು ಎಳೆಯುತ್ತಿರುವಂತೆ ಕೆತ್ತಲಾಗಿದೆ.

ಸೂರ್ಯ ಬಿಂಬವು ವಸ್ತ್ರಾಲಂಕಾರಗಳಲ್ಲಿ ಮತ್ತು ಆಭರಣಗಳ ಅಲಂಕಾರದಲ್ಲಿ ವಿಷ್ಣು ಶಿಲ್ಪದಂತೆ ಇರುತ್ತದೆ. ಸೂರ್ಯ ಬಿಂಬಗಳು ಶಿವಲಿಂಗಕ್ಕೆ ಎದುರಾಗಿರುವುದರಿಂದ ಪೂರ್ವಕ್ಕೆ ಬೆನ್ನುಮಾಡಿ ಪಶ್ಚಿಮಕ್ಕೆ ಮುಖಮಾಡಿರುತ್ತವೆ. ಹರವೆಮಲ್ಲರಾಜಪಟ್ಟಣ ಕಡೆ ದೊರೆಯುವ ಬಿಂಬಗಳು ಪ್ರಾಚೀನವಾಗಿವೆ. ಪ್ರಾಚೀನ ಶಿಲ್ಪಗಳಲ್ಲಿ ಕಮಲದ ದಂಟುಗಳನ್ನು ಬಿಗಿಯಾಗಿ ಹಿಡಿದಿರುವಂತೆ ಬಿಡಿಸಿದ್ದು, ಕೊರಳಲ್ಲಿ ಗಂಟೆಗಳ ಸರದಂತಹ ಸರಮಾಲೆಯಿರುತ್ತದೆ. ಅಲಂಕಾರಗಳು ಕಡಿಮೆ. ಒಂಭತ್ತನೆಯ ಶತಮಾನದಿಂದೀಚಿನ ಶಿಲ್ಪಗಳಲ್ಲಿ ಕಮಲದ ದಂಟು ನೀಳವಾಗಿರುತ್ತದೆ. ಅದನ್ನು ಲಘುವಾಗಿ ಹಿಡಿದಿರುವಂತೆ ಬಿಡಿಸಿರುತ್ತಾರೆ. ಕೊರಳಲ್ಲಿ ಆಭರಣಗಳು ಹೆಚ್ಚಾಗಿದ್ದು ಹೆಚ್ಚಿನ ಅಲಂಕಾರಯುಕ್ತವಾಗಿರುತ್ತವೆ. ಹರವೆಮಲ್ಲರಾಜಪಟ್ಟಣ ಶಿಲ್ಪ ಹೆಚ್ಚಿನ ಅಲಂಕಾರಯುಕ್ತವಾಗಿದ್ದು, ಕಿರೀಟ, ಮಕುಟ, ಭುಜಗಳ ಮೇಲೆ ಇಳಿಬಿದ್ದಿರುವ ಮಕರ ಕುಂಡಲಗಳು, ಕೊರಳಲ್ಲಿ ಹಾರಗಳು, ಮಣಿ ಯಜ್ಞೋಪವೀತ, ಸಿಂಹವಸ್ತ್ರದ ನಡುಪಟ್ಟಿ, ಅದರಿಂದ ಇಳಿಬಿದ್ದಿರುವ ಇಳಿ ಬಟ್ಟೆಗಳು, ಕೈಗಳನ್ನು ತೋಳುಸಮಕ್ಕೆ ಮುಂಚಾಚಿ ಉದ್ದವಾದ ಕಮಲಗಳ ದಂಟನ್ನು ಹಿಡಿದಿರುವುದು ಹಾಗು ಪಾದಗಳ ಬಳಿ ಚಿಕ್ಕದಾಗಿ ಅರುಣ ಮತ್ತು ಏಳು ಕುದುರೆಗಳನ್ನು ಬಿಡಿಸಿದೆ.

ಬ್ರಹ್ಮ ಶಿಲ್ಪ

ಹಿಂದೂ ಸಂಪ್ರದಾಯದಲ್ಲಿ ಬ್ರಹ್ಮನನ್ನು ಪೂಜಿಸುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಮಂಡುಕ ಉಪನಿಷತ್ ಮತ್ತು ವಿಷ್ಣುಪುರಾಣಗಳು ಹೇಳುವ ಹಾಗೆ ಬ್ರಹ್ಮ ಜಗತ್ತನ್ನೇ ಸೃಷ್ಟಿಸಿದ ಸೃಷ್ಟಿಕರ್ತ. ಈತನನ್ನು ಪ್ರಜಾಪತಿಯೆಂದು ಸಹ ಗುರುತಿಸಲಾಗುತ್ತದೆ. ಮಾರ್ಕಂಡೇಯ ಪುರಾಣದ ಪ್ರಕಾರ ಜಗತ್ತಿಗೆ ಮೂಲಾಧಾರ ಅಥವಾ ಜಗತ್ತಿನ ಸಂಘಟಕನಾಗಿದ್ದಾನೆ. ಕರ್ನಾಟಕದಲ್ಲಿ ದೇವಾಲಯಗಳ ಭಿತ್ತಿಯ ಮತ್ತು ಕಂಬದ ಭಾಗದಲ್ಲಿ ಹೆಚ್ಚಾಗಿ ಈ ಮೂರ್ತಿಗಳನ್ನು ಕಾಣಬಹುದಾಗಿದೆ.[೨೮] ಇವು ಸಾಮಾನ್ಯವಾಗಿ ಸ್ಥಾನಿಕ ಇಲ್ಲವೆ ಆಸೀನ ಭಂಗಿಯಲ್ಲಿವೆ. ಬಾಸೆ೯ ಗ್ರಾಮದಲ್ಲಿ ಪೀಠದ ಮೇಲೆ ಕುಳಿತ ಬ್ರಹ್ಮಮೂರ್ತಿಗೆ ಚತುರ್ಮುಖವಿದ್ದು, ಕಿರೀಟ

ಮುಕುಟಧಾರಿಯಾಗಿದೆ. ಎಲ್ಲಾ ಕಿವಿಗಳಲ್ಲೂ ಪತ್ರ ಕುಂಡಲಗಳಿವೆ. ಕೊರಳಲ್ಲಿ ಕಂಠಾಭರಣ, ಅನೇಕ ಬಗೆಯ ಕೊರಳಹಾರ ಮತ್ತು ಉಪವೀತವಿದೆ. ಚತುರ್ಭುಜ ಧಾರಿಯಾದ ಬ್ರಹ್ಮಮೂರ್ತಿಯ ಕೈಗಳಲ್ಲಿ ಭುಜಕೀರ್ತಿ, ಕೇಯೂರ, ಕೈಕಡಗಗಳಿದ್ದು ಮೇಲಿನ ಕೈಗಳಲ್ಲಿ ಹಿಡಿದ ಆಯುಧಗಳ ಮೇಲಿನ ಭಾಗ ಸ್ವಲ್ಪ ಹಾನಿಯಾಗಿರುವುದರಿಂದ ಆ ಆಯುಧಗಳು ಯಾವುದು ಎಂದು ಗುರುತಿಸುವುದು ಕಷ್ಟಕರ. ಕೆಳಗಿನ ಬಲಗೈಯಲ್ಲಿ ಅಕ್ಷಯಮಾಲೆ, ಎಡಗೈಯಲ್ಲಿ ಪುಸ್ತಕ ಹಿಡಿದಿದ್ದು, ಉದರಬಂಧ ಹಾಗು ಕಟಿಬಂಧಗಳಿವೆ. ಈ ಮೂರ್ತಿಯ ಕಾಲಿನಲ್ಲಿ ಕಡಗಗಳಿವೆ. ಪಾಣಿಪೀಠದ ಬಿಂಬದಲ್ಲಿ ಹಂಸವಿದೆ. ಸುತ್ತಲೂ ಅಲಂಕೃತ ಪ್ರಭಾವಳಿ ಇದೆ.

ಶಾಕ್ತ ಶಿಲ್ಪಗಳು

ಪಾರ್ವತಿ ಶಿಲ್ಪ

ಪಾರ್ವತಿಯನ್ನು ಶಿವನ ಪತ್ನಿಯೆಂದು, ಪರ್ವತರಾಜನ ಮಗಳೆಂದು ಅರಿಯಲಾಗಿದೆ. ಪಾರ್ವತಿಗಾಗಿ ಕಟ್ಟಿಸಿದ ಪ್ರತ್ಯೇಕ ದೇವಾಲಯಗಳು ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಇರದಿದ್ದರೂ ಅಲ್ಲಲ್ಲಿ ಪಾರ್ವತಿಯ ಪ್ರತ್ಯೇಕ ಮೂರ್ತಿಗಳು ದೊರೆತಿವೆ. ಬೆಟ್ಟದಪುರದ ಅನ್ನದಾನಿಮಲ್ಲಿಕಾರ್ಜುನ ದೇವಾಲಯದ ಪೀಠದ ಮೇಲೆ ಲಲಿತಾಸನದಲ್ಲಿ ಕುಳಿತಿರುವ ಮೂರ್ತಿ ಕರಂಡ ಮುಕುಟ ಧರಿಸಿದ್ದು, ಕಿವಿಯಲ್ಲಿ ಅಗಲವಾದ ಪತ್ರ ಕುಂಡಲಗಳಿವೆ. ಕಂಠಾಭರಣ, ಕೊರಳಹಾರ, ಕುಚಬಂಧ ಹಾಗು ಕೆಳಗೆ ಇಳಿಬಿದ್ದ ಉದ್ದನೆಯ ಹಾರಗಳಿವೆ. ಚತುರ್ಭುಜಧಾರೆಯಾದ ಈ ಮೂರ್ತಿ ಭುಜಕೀರ್ತಿ, ಕೇಯೂರ, ಕೈಕಡಗಗಳಿದ್ದು, ಮೇಲಿನ ಕೈಗಳಲ್ಲಿ ತ್ರಿಶೂಲ, ಡಮರುಗ, ಕೆಳಗಿನ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಫಲವನ್ನು ಹಿಡಿದಂತೆ ಕೆತ್ತಲಾಗಿದೆ. ಕಟಿಬಂದ ಹಾಗು ಎರಡು ಕಾಲಿನ ಮಧ್ಯ ಇಳಿಬಿದ್ದ ವಸ್ತ್ರ ಇದ್ದು, ಕಾಲಿನಲ್ಲಿ ಕಾಲ್ಗಡಗ ಮತ್ತು ಪಾದಸರಗಳಿವೆ. ಈ ಮೂರ್ತಿಯ ಕಾಲಿನ ಬಳಿ ಸಿಂಹದ ಚಿಕ್ಕಶಿಲ್ಪವನ್ನು ಕೆತ್ತಲಾಗಿದೆ. ಸಾಧಾರಣ ರೀತಿಯ ಪ್ರಭಾವಳಿ ಇದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ವಿಜಯನಗರ ಕಾಲದ್ದೆಂದು ಕಂಡುಬರುತ್ತದೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಚಂಗಾಳ್ವ ಮತ್ತು ನಂತರ ಆಳ್ವಿಕೆ ಮಾಡಿದ ಅರಸರ ಕಾಲದ ಪ್ರತಿಮೆಗಳಲ್ಲಿ ಶಿವ ಮತ್ತು ವಿಷ್ಣು ದೇವತೆಗಳ ಸಂಗಾತಿಯಾಗಿ ಅಲ್ಪಪ್ರಮಾಣದಲ್ಲಿ ದೇವಿಯ ಶಿಲ್ಪಗಳು ಕಂಡುಬರುತ್ತವೆ. ದೇವಿಯ ಶಿಲ್ಪಗಳಲ್ಲಿ ಶೈವ ಮತ್ತು ವೈಷ್ಣವ ಪರಂಪರೆಯನ್ನು ಒಳಗೊಂಡಂತೆ ಕಾಳಿ, ದುರ್ಗಿ, ಲಕ್ಷ್ಮಿಯ ಶಿಲ್ಪಗಳು ಅಲ್ಲಲ್ಲಿ ಕಂಡುಬರುತ್ತವೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಶಕ್ತಿ ದೇವತೆಗಳಾದ ಮಹಿಷಮರ್ದಿನಿ ಹಾಗು ಸಪ್ತಮಾತೃಕೆಯರ

ಪೂಜೆಯು ವ್ಯಾಪಕವಾಗಿತ್ತು. ಈ ದೇವತೆಗಳಿಗೆ ಕೆಲವೆಡೆ ಪ್ರತ್ಯೇಕ ದೇವಾಲಯಗಳಿರುವುದುಂಟು. ಶಿವನ ಪರಿವಾರದಲ್ಲಿ ದುರ್ಗಾ ಅಥವಾ ಮಹಿಷಮರ್ದಿನಿ ಹಾಗು ಸಪ್ತಮಾತೃಕಾ ಶಿಲ್ಪಗಳು ಕಾಣಬರುತ್ತವೆ.

ಮಹಿಷಮರ್ದಿನಿ ಶಿಲ್ಪ

ಶಕ್ತಿ ದೇವತೆಗಳಲ್ಲಿ ಬಹುಜನ ಪರಿಚಿತವಾದ ದೇವತೆಗಳಲ್ಲಿ ಮಹಿಷಾಸುರ ಮರ್ದಿನಿ ಒಬ್ಬಳಾಗಿದ್ದಾಳೆ. ಇವಳದ್ದು ಉಗ್ರರೂಪವಾಗಿದ್ದು ಕ್ರಿಯೆಯಲ್ಲಿಯೂ ಕೊಲ್ಲುತ್ತಿರುವುದೇ ಪ್ರಾಮುಖ್ಯವಾಗಿದೆ. ಶಾಸ್ತ್ರ ಗ್ರಂಥಗಳಲ್ಲಿ ಈಕೆಯು ಕೋಪಗೊಂಡ ಯುವತಿಯಂತಿದ್ದು ಒಂದು ಮುಖ ಹಾಗು ಅನೇಕ ಕೈಗಳನ್ನು ಹೊಂದಿರುತ್ತಾಳೆಂದು ವರ್ಣಿಸಿವೆ.[೨೯] ಶಿಲ್ಪಗಳಲ್ಲಿಯೂ ಇದೇ ಭಾವನೆ ಬರುವಂತೆ ಶಿಲ್ಪಿ ಶಿಲ್ಪಿಸಿರುತ್ತಾನೆ. ಮಹಿಷಮರ್ದಿನಿಯ ಮುಖವು ಶಿವನ ಬೆಳಕಿನಿಂದಲೂ, ಯಮನ ಶಕ್ತಿಯಿಂದ ಕೂದಲು, ವಿಷ್ಣುವಿನ ಶಕ್ತಿಯಿಂದ ಕೈಗಳು, ಚಂದ್ರನ ಬೆಳಕಿನಿಂದ ಸ್ತನಗಳು, ಇಂದ್ರನಿಂದ ನಡುವು ಹೀಗೆ ಒಂದೊಂದು ದೇವತೆಯ ಬೆಳಕಿನಿಂದ ರೂಪಿತವಾಗುತ್ತವೆ.[೩೦] ಮಹಿಷನು ಕೋಣದ ರೂಪವನ್ನು ಧರಿಸಿ ಬಂದಾಗ, ಮಹಿಷಮರ್ದಿನಿಯು ಕೋಣದ ತಲೆಯನ್ನು ಕತ್ತರಿಸಿ ಕಾಲಿನಿಂದ ಅದನ್ನು ತುಳಿದಾಗ ಅಸುರನು ಕತ್ತಿನಿಂದ ಹೊರಬರುತ್ತಾನೆ. ಅನಂತರ ಅವನ ಮೇಲೆ ಯುದ್ಧ ಮಾಡಿ ಸಂಹರಿಸುತ್ತಾಳೆ. ಮಹಿಷ ಮರ್ದಿನಿಯ ಶಿಲ್ಪವನ್ನು ಕಡೆದ ಶಿಲ್ಪಿ ಅನೇಕ ಶಿಲ್ಪಗಳಲ್ಲಿ ಈ ವಿವರಣೆಯನ್ನು ಬಿಡಿಸಿರುತ್ತಾನೆ.

ಮಹಿಷಮರ್ದಿನಿಗೆ ಯಜ್ಞೋಪವೀತಕ್ಕೆ ಬದಲಾಗಿ ರುಂಡಮಾಲೆ ಇದೆ. ಈ ಎಲ್ಲಾ ವಿಗ್ರಹಗಳಲ್ಲೂ ಕಂಡುಬರುವ ವಿಶೇಷವೆಂದರೆ ಕ್ರಿಯಾಶೀಲತೆ. ಬಹುತೇಕ ವಿಗ್ರಹಗಳು ಆಲೀಢ ಭಂಗಿಯಲ್ಲಿದ್ದು[೩೧] ಮುಖಭಾವದಲ್ಲಿ ಮಹಿಷನನ್ನು ಲೀಲಾಜಾಲವಾಗಿ ಕೊಲ್ಲುತ್ತಿರುವಂತೆ ಅಥವಾ ಕೊಲ್ಲಲು ಹೋಗುತ್ತಿರುವಂತೆ ಇದೆ. ಎಲ್ಲಾ ವಿಗ್ರಹಗಳ ಪ್ರಧಾನ ಆಯುಧ ಶೂಲ. ಉಳಿದಂತೆ ಬಿಡಿಸಿರುವ ಆಯುಧಗಳು ಸಂಕೇತ ಮಾತ್ರ. ಕೆಲವು ಕಡೆ ಸಿಂಹವಾಹಿನಿಯಾಗಿ ಬಿಡಿಸಿದ್ದರೆ, ಕೆಲವು ಕಡೆ ಸಿಂಹವನ್ನು ಚಿಕ್ಕದಾಗಿ ಅದರ ಇರುವಿಕೆಯನ್ನು ಸಾಂಕೇತಿಕವಾಗಿ ತೋರಿಸಿರುತ್ತಾರೆ. ಕೆಲವು ಶಿಲ್ಪಗಳಲ್ಲಿ ಸಿಂಹವೂ ಕೂಡ ಶತ್ರುವಿನ ಮೇಲೆ ಬಿದ್ದಿರುವಂತೆ ಅತ್ತಿಗೋಡು, ಕೂಡುಕುರು, ಬೆಟ್ಟತುಂಗ, ಹಿಟ್ನೆಹೆಬ್ಬಾಗಿಲು ಶಿಲ್ಪಗಳಲ್ಲಿ ಕಂಡುಬಂದಿದೆ. ಸಂಹಾರ ಕಾರ್ಯದಲ್ಲಿ ಮುಂದಿನ ಬಲಗೈ ಮತ್ತು ಎಡಕೈಗಳು ಪ್ರಧಾನ ಪಾತ್ರವಹಿಸಿವೆ. ಬಲಮುಂಗೈಯಲ್ಲಿ ಪ್ರಧಾನವಾಗಿ ಶೂಲವಿದ್ದು, ಎಡಗೈಯಲ್ಲಿ ಕೋಣನ ಮೂರ್ತಿಯನ್ನು ಹಿಡಿದಿರುವಂತೆ ಅಥವಾ ಕೋಣ ಒಮ್ಮೊಗವಾಗಿದ್ದಲ್ಲಿ ಅದರ ಬಾಲವನ್ನು ಹಿಡಿದೆತ್ತಿರುವಂತೆ ಕೆತ್ತಿದೆ. ವಿಗ್ರಹದಲ್ಲಿ ಮಾತ್ರ ಶೂಲ, ಖಡ್ಗ, ಶಂಖಗಳಿವೆ. ಎಂಟು ಕೈಗಳುಳ್ಳ ವಿಗ್ರಹಗಳಲ್ಲಿ ಶಂಖ, ಚಕ್ರಗಳ ಜೊತೆಯಲ್ಲಿ

ಬಿಲ್ಲು ಬಾಣಗಳನ್ನು ಹಿಡಿದಿರುವುದು ಪ್ರಧಾನ. ವಿಗ್ರಹದಲ್ಲಿ ಎಡಗಡೆ ಬಿಲ್ಲು ಕಠಾರಿ, ಶಂಖ, ಬಲಗಡೆ ಖಡ್ಗ, ಬಾಣ, ಚಕ್ರ, ಶೂಲವಿದೆ. ಬೆಟ್ಟತುಂಗ ವಿಗ್ರಹಗಳಲ್ಲಿ ಶಂಖ, ಚಕ್ರಗಳನ್ನು ಹಿಡಿದಿರುವಂತೆಯೂ, ಬಿಲ್ಲನ್ನು ಪ್ರಯೋಗಿಸುತ್ತಿರುವಂತೆಯೂ ಕರ್ತರಿ ಮುದ್ರೆ ಮತ್ತು ಧಾರಕ ಮುದ್ರೆಯಲ್ಲಿ ಬಾಣ ಪ್ರಯೋಗಿಸುತ್ತಿರುವಂತಿದೆ. ಬತ್ತಳಿಕೆ ಎಡಭಾಗದಲ್ಲಿದೆ. ಗುರಾಣಿಯನ್ನು ಹಿಡಿದಿದೆ. ಈ ವಿಗ್ರಹಗಳು ಮಹಿಷನನ್ನು ಕೊಲ್ಲುತ್ತಿರುವ ರೀತಿಯಲ್ಲೂ ನಿಂತ ಭಂಗಿಯಲ್ಲೂ ವ್ಯತ್ಯಾಸಗಳಿವೆ. ಬಲಗಾಲನ್ನು ಕೋಣದ ಬೆನ್ನ ಮೇಲಿಟ್ಟು ತುಳಿಯುತ್ತಾ ಇನ್ನೊಂದು ಕಾಲನ್ನು ನೆಲದ ಮೇಲೆ ಇಟ್ಟಿರುವಂತೆ ಬಿಡಿಸಿದೆ.

ಮಹಿಷಮರ್ದಿನಿ ಶಿಲ್ಪವು ಈತರೆ ವಿಗ್ರಹಗಳಿಗಿಂತ ವಿಭಿನ್ನ ಲಕ್ಷಣವನ್ನು ಹೊಂದಿರುವುದನ್ನು ಗುರುತಿಸಬಹುದು. ಈ ಶಿಲ್ಪದ ಲಕ್ಷಣ ಪ್ರದೇಶದಲ್ಲಿ ದೊರೆಯುವ ಈತರೆ ಶಿಲ್ಪಗಳಿಗಿಂತ ವಿಭಿನ್ನವಾಗಿದೆ. ಈಕೆ ಸಿಂಹಾರೂಢೆಯಾಗಿದ್ದು, ಸಿಂಹದ ಮೇಲೆ ಬಲಗಾಲನ್ನಿರಿಸಿ, ಎಡಗಾಲನ್ನು ನೆಲದ ಮೇಲೆ ಊರಿ ನಿಂತಿದ್ದಾಳೆ. ಸಿಂಹವು ನಡೆಯುತ್ತಿರುವಂತೆ ಕೆತ್ತಿದೆ. ಅಷ್ಟಭುಜಗಳಿಂದ ಕೂಡಿದ ದೇವಿಯು ಕರಂಡ ಮಕುಟದ ಮಾದರಿಯ ಮಕುಟವನ್ನು ಧರಿಸಿದ್ದಾಳೆ. ಪತ್ರಕುಂಡಲ, ಅಲಂಕೃತಗೊಂಡ ಕೇಯೂರ ಹಾಗು ಬಲಭುಜ ಮೇಲೆ ಬತ್ತಳಿಕೆಯೂ ಇದೆ. ಸಿಂಹ ಗಂಭೀರವಾಗಿ ತಲೆ ಎತ್ತಿ ನಡೆಯುತ್ತಿದೆ. ಸುಂದರವಾದ ಭುಜಕೀರ್ತಿಯೂ, ಸ್ತನಬಂಧವೂ, ಕೊರಳಲ್ಲಿ ಸಣ್ಣ ಕೊಳವೆಯಾಕಾರದ ವಸ್ತುಗಳನ್ನು ಸೇರಿಸಿ ಮಾಡಿದ ಹಾರವೂ ಇದೆ. ಮಾನವ ಶರೀರದ ಅಳತೆಯಲ್ಲಿದ್ದು ದೇಹದ ನೆರಿಗೆಗಳನ್ನು ಶಿಲ್ಪಿ ಬಿಡಿಸಿದ್ದಾನೆ. ಸಿಂಹದ ಬಿಂಬವೂ ಆಕಾರಕ್ಕೆ ತಕ್ಕಂತಹ ಅಂಗಾಂಗಗಳು, ಉಗ್ರರೂಪ, ಕೇಸರಗಳನ್ನು ಹೊಂದಿದೆ. ಆದರೆ ಆಯುಧಗಳನ್ನು ಬಿಡಿಸುವಲ್ಲಿ, ಸ್ಥಳಾಭಾವ ತಲೆದೋರಿದ್ದು, ಆಯುಧಗಳನ್ನು ಹಿಡಿದಿರುವಂತೆ ಭಾವವನ್ನು ಮಾತ್ರ ತೋರಿಸಲಾಗಿದೆ. ಎಂಟು ಕೈ, ಯಜ್ಞೋಪವೀತ ಹಾಗು ಸ್ತನಬಂಧವನ್ನು ಬಿಡಿಸಿದೆ. ಸಿಂಹವು ಬಾಯಿ ತೆರೆದು ಮಹಿಷನ ಮೇಲೆ ಬಿದ್ದಿರುವಂತೆಯೂ ಮಹಿಷನು ಎಮ್ಮೆ ತಲೆ, ಮಾನವ ದೇಹವನ್ನು ಹೊಂದಿರುವಂತೆ ಇದೆ.

ಲಕ್ಷ್ಮಿ ಶಿಲ್ಪ

ಲಕ್ಷ್ಮಿ ವಿಷ್ಣುವಿನ ಪತ್ನಿ. ಮಹಾಭಾರತ, ಭಾಗವತ ಪದ್ಮಪುರಾಣ ಮತ್ತು ವಿಷ್ಣು ಪುರಾಣಗಳು ಲಕ್ಷ್ಮಿಯ ಮೂಲವನ್ನು ಕ್ಷೀರ ಸಮುದ್ರಕ್ಕೆ ಒಯ್ಯುತ್ತವೆ. ಹಾಗೆಯೇ ಅವಳು ಅಲ್ಲಿಂದ ಬಂದವಳೆಂದು ತಿಳಿಸುತ್ತವೆ. ಮತ್ತು ಇವಳನ್ನು ಕ್ಷೀರಾಬಿತನಯ ಗಳೆಂದು, ಅಂದರೆ ಕ್ಷೀರ ಸಮುದ್ರಾಧಿಪತಿಯ ಮಗಳೆಂದು ಹೇಳುತ್ತೇವೆ. ವಿಷ್ಣುವಿನ ಎದೆಯಲ್ಲಿ ವಾಸಿಸುವಳೆಂದು ವಕ್ಷಸ್ಥಳವಾಸಿನಿ ಎಂದು ಸಹ ಕರೆಯಲ್ಪಡುತ್ತಿದ್ದಾಳೆ.[೩೨] ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಪ್ರತ್ಯೇಕ ಲಕ್ಷ್ಮಿ ದೇವಾಲಯಗಳು ಇರುವುದಿಲ್ಲ. ಆದರೆ ಚಿಕ್ಕ ಹೊನ್ನೂರಿನ ರಂಗನಾಥ

ದೇವಾಲಯದಲ್ಲಿ ಲಕ್ಷ್ಮಿಯ ಮೂರ್ತಿಶಿಲ್ಪ ಪ್ರತ್ಯೇಕ ಗುಡಿಯಲ್ಲಿ ಇದೆ. ಇದನ್ನು ಸ್ಥಳೀಯರು ಸತ್ಯಭಾಮೆ, ರುಕ್ಮಿಣಿ ಎಂದು ಕರೆಯುವರು. ಈ ಮೂರ್ತಿಶಿಲ್ಪ ಲಲಿತಾಸನದಲ್ಲಿ ಪೀಠದ ಮೇಲೆ ಕುಳಿತಿದೆ. ಕರಂಡ ಮಕುಟಧಾರಿಯಾದ ಮೂರ್ತಿಯ ತಲೆಯ ಹಿಂಬದಿಯಲ್ಲಿ ಶಿರಚಕ್ರವಿದ್ದು, ಕಿವಿಯಲ್ಲಿ ಅಗಲವಾದ ಚಕ್ರಕುಂಡಲಗಳಿವೆ. ಕಂಠಾಭರಣ, ಎದೆಹಾರ, ಯಜ್ಞೋಪವಿತ, ವೈಜಯಂತಿಹಾರ, ಕುಚಬಂಧ ಹಾಗು ಭುಜಕೀರ್ತಿ, ಕೇಯೂರ, ಕೈಕಡಗಳನ್ನು ಧರಿಸಿದ್ದು, ಎಡಗೈಯಲ್ಲಿ ಫಲ, ಬಲಗೈಯಲ್ಲಿ ಪದ್ಮಗಳನ್ನು ಹಿಡಿದಿದೆ. ಅಲ್ಲದೆ ಕಟಿಬಂಧವಿದ್ದು, ಕಾಲ್ಗಡಗ ಹಾಗು ಪಾದಸರಗಳಿವೆ. ಸುತ್ತಲೂ ಪ್ರಭಾವಳಿಯನ್ನು ಒಳಗೊಂಡಿದ್ದು, ಲತಾತೋರಣಗಳಿಂದ ಅಲಂಕಾರಿಕವಾಗಿದೆ.

ಸಪ್ತಮಾತೃಕೆಯರು

ಸಪ್ತಮಾತೃಕೆಯರು ಊರ ಹೆಸರನ್ನು ಪಡೆದ ದೇವತೆಗಳಾಗಿ ಎಲ್ಲ ವರ್ಗದ ಜನರಿಂದ ಪೂಜೆಗೊಳ್ಳುವವರಾಗಿರುತ್ತಾರೆ. ಅನೇಕ ವೇಳೆ ಶೈವ ದೇವಾಲಯದ ಪರಿವಾರ ದೇವತೆಗಳಾಗಿ, ಕೆಲವೊಮ್ಮೆ ಸ್ವತಂತ್ರವಾಗಿ ಪೂಜೆಗೊಳ್ಳುತ್ತಿದ್ದಾರೆ. ಇವರನ್ನು ಕನ್ಯೆಯರೆಂದೂ, ಅಮ್ಮನವರೆಂದು ಕರೆಯುವುದು ವಾಡಿಕೆ. ಮೂರ್ತಿಶಿಲ್ಪಗಳ ಗಾತ್ರ ಮತ್ತು ಅಂಗಾಂಗಗಳ ವಿನ್ಯಾಸವು ಕಲ್ಲಿನ ಅಳತೆ, ಆಕಾರವನ್ನು ಅವಲಂಬಿಸಿರುತ್ತದೆ. ಚಾಮುಂಡಿಯನ್ನುಳಿದು ಇತರ ವಿಗ್ರಹಗಳು ಒಂದು ಅಥವಾ ಒಂದೂವರೆ ಅಡಿ ಎತ್ತರದ ವಿಗ್ರಹಗಳಾಗಿರುತ್ತವೆ. ರಕ್ತಬೀಜನೊಡನೆ ಕೌಶಿಕದುರ್ಗ ಹೋರಾಟ ಮಾಡುತ್ತಿರುವಾಗ ಅಸುರನ ರಕ್ತ ನೆಲಕ್ಕೆ ಬಿದ್ದ ತಕ್ಷಣ ಮತ್ತೊಬ್ಬ ರಕ್ತ ಬೀಜಾಸುರ ಜನಿಸಿ ದೇವಿಯೊಡನೆ ಹೋರಾಟಕ್ಕಿಳಿಯುತ್ತಿದ್ದ ಸಂದರ್ಭದಲ್ಲಿ ದೇವಿಯು ತನ್ನ ಸಹಾಯಕ್ಕಾಗಿ ಏಳು ಜನ ದೇವಿಯರನ್ನು ಸೃಷ್ಟಿಸಿದಳು. ಆ ಏಳು ಜನರೇ ಸಪ್ತಮಾತೃಕೆಯರೆಂದು ಕರೆಯಲ್ಪಡುತ್ತಾರೆಂದು ಮಾತೃದೇವತಾ ಆರಾಧನೆಯನ್ನು ವಿವರಿಸುವ ಗ್ರಂಥವೊಂದರಿಂದ ತಿಳಿದುಬರುತ್ತದೆ. ದುರ್ಗಸಪ್ತಸತಿ ಎನ್ನುವ ಗ್ರಂಥವು ಸಹ ಇದೇ ವಿವರವನ್ನೊದಗಿಸುತ್ತದೆ.[೩೩] ಈ ಮಾತೃದೇವತೆಗಳೆಂದರೆ ಬ್ರಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ಇಂದ್ರಾಣಿ ಮತ್ತು ಚಾಮುಂಡಿ. ಇವರ ಜೊತೆಗೆ ವೀರಭದ್ರ ಅಥವಾ ಗಣೇಶ ಇರುತ್ತಾರೆ. ಬೃಹತ್‌ಸಂಹಿತೆಯಲ್ಲಿ ಸಪ್ತಮಾತೃಕೆಯರ ಹೆಸರುಗಳನ್ನು ಹೇಳದಿದ್ದರೂ ಅವರ ಪ್ರಸ್ತಾಪ ಬರುತ್ತದೆ. ವ್ಯಾಖ್ಯಾನಕಾರನಾದ ಉತ್ಪಲ ಸಪ್ತಮಾತೃಕೆಯರ ಹೆಸರುಗಳನ್ನು ಹೇಳಿದ್ದಾನೆ. ಬ್ರಾಹ್ಮೀ, ವೈಷ್ಣವೀ, ರೌದ್ರಿ (ಮಹೇಶ್ವರಿ) ಕೌಮಾರಿ, ಯಮೀ, ವಾರುಣಿ, ಕೌಬೇರಿ ಇವರನ್ನು ಕ್ರಮವಾಗಿ ಬ್ರಹ್ಮ, ವಿಷ್ಣು, ಶಿವ, ಸ್ಕಂದ, ಇಂದ್ರ, ಯಮ, ವರುಣ ಮತ್ತು ಕುಬೇರ ದೇವತೆಗಳ ಶಕ್ತಿಯರು.[೩೪] ಬ್ರಾಹ್ಮಿಯ ಬಲಭಾಗದಲ್ಲಿ ವೀರಭದ್ರನನ್ನು, ಚಾಮುಂಡಿಯ ಎಡಭಾಗದಲ್ಲಿ ಗಣೇಶನನ್ನು ಇರಿಸಿ ನಡುವೆ ಮಾತೃಗಣಗಳನ್ನು ಇರಿಸಬೇಕೆಂದು ವಿಧಿಯಿದೆ.[೩೫]

ಸಾಮಾನ್ಯವಾಗಿ ಸಪ್ತಮಾತೃಕಾ ಶಿಲ್ಪಗಳು ಅಥವಾ ಗುಡಿಗಳು ಕೆರೆಯ ದಂಡೆಯಲ್ಲಿ ಕಾಣಬರುತ್ತವೆ. ಇನ್ನೊಂದು ಸಂಗತಿಯೆಂದರೆ ಈ ದೇವಿಯರು ರಕ್ತತರ್ಪಣ ಬೇಡುವವರಾದರೂ ಇವರನ್ನು ಪೂಜಿಸುವವರು ಶಿವದ್ವಿಜರು, ಶೈವ ಬ್ರಾಹ್ಮಣರು. ಅನೇಕ ಕಡೆ ಸಪ್ತಮಾತೃಕೆಯರ ಪ್ರತೀಕವಾಗಿ ತ್ರಿಕೋಣಾಕಾರದ ಏಳು ಕಲ್ಲುಗಳನ್ನು ಇಟ್ಟು ಪೂಜಿಸುತ್ತಾರೆ. ಪ್ರತ್ಯೇಕ ಸಪ್ತ ಮಾತೃಕಾ ದೇವಾಲಯಗಳಿರುವೆಡೆಯಲ್ಲೆಲ್ಲಾ ಅವುಗಳಿಗೆ ಸ್ಥಳೀಯವಾಗಿ ಬೇರೆ ಹೆಸರಿರುತ್ತದೆ. ಕಿತ್ತೂರಿನಲ್ಲಿ ಕಿತ್ತೂರಮ್ಮ, ಪಿರಿಯಾಪಟ್ಟಣದಲ್ಲಿ ಪಿರಿಯಾಪಟ್ಟಣದಮ್ಮ, ದುಗ್ಗಮ್ಮ, ಮಸಣಿಕಮ್ಮ, ಹಿಟ್ನೆಹೆಬ್ಬಾಗಿಲಿನಲ್ಲಿ ಚೌಡೇಶ್ವರಿ ಎಂದೂ ಕರೆಯುತ್ತಾರೆ. ಇಲ್ಲಿರುವ ಏಳು ಜನ ಮಾತೃಕೆಯರಿಗೆ ಈಗ ಪೂಜೆ ನಡೆಯುತ್ತಿಲ್ಲ. ಚಾಮುಂಡಿ ಅಥವಾ ಜನರಿಗೆ ಅನುಕೂಲಕರವಾಗಿ ಕಾಣುವ ದೇವಿಯರಿಗೆ ಮಾತ್ರ ಪೂಜೆ ಸಲ್ಲಿಸಲಾಗುತ್ತದೆ.

ಈ ಪರಿಸರದಲ್ಲಿ ಸಪ್ತಮಾತೃಕೆಗಳಲ್ಲಿನ ಚಾಮುಂಡಿಯ ಆರಾಧನೆ ಜನಪ್ರಿಯವಾಗಿತ್ತು. ಕೆಲವು ಕಡೆ ಈಕೆ ಸಪ್ತಮಾತೃಕೆಗಳ ಗುಂಪಿನಲ್ಲಿದ್ದರೆ ಕೆಲವೆಡೆ ಒಂಟಿಯಾಗಿದ್ದು ಪೂಜಿತಳಾಗಿದ್ದಾಳೆ. ಹೆಸರಿಗೆ ಸಪ್ತಮಾತೃಕೆಗಳಾದರೂ ಕೆಲವೆಡೆ ಇಡೀ ದೇವಾಲಯವನ್ನು ಚೌಡೇಶ್ವರಿ ಎಂದೇ ಕರೆಯುತ್ತಾರೆ. ಇದು ಈಕೆಯ ಪ್ರಭಾವವನ್ನು ಸೂಚಿಸುತ್ತದೆ. ಅತ್ತಿಗೋಡು ಗ್ರಾಮದಲ್ಲಿ ಕಂಡುಬಂದಿರುವ ಶಿಲ್ಪಗಳಲ್ಲಿ ಪ್ರಮುಖವಾದುದ್ದು ದುರ್ಗಿಯ ಶಿಲ್ಪ ಮತ್ತು ಬೆಟ್ಟದತುಂಗದಲ್ಲಿರುವ ಮತ್ತೊಂದು ಪ್ರತಿಮೆಯು ದುರ್ಗಿಯ ಶಿಲ್ಪವೇ ಆಗಿದೆ. ಇವುಗಳು ಈತರೆ ಎಲ್ಲಾ ಮೂರ್ತಿ ಶಿಲ್ಪಗಳಿಗಿಂತಲೂ ದುರ್ಗಿಯ ಶಿಲ್ಪ ಹೆಚ್ಚು ಪ್ರಭಾವಶಾಲಿಯಾಗಿದೆ. ದೇವಿಯ ರೂಪವು ಮಹಿಷನವಧೆಯೊಂದಿಗೆ ಸಂಬಂಧವಿರಿಸಿಕೊಂಡಿರುವಂತೆ ಮೇಲ್ನೋಟಕ್ಕೆ ಕಾಣಿಸುವುದಿಲ್ಲ. ಶಿವ, ವಿಷ್ಣು ಇಬ್ಬರ ಆಯುಧಗಳನ್ನು ಧರಿಸಿರುವ ದೇವಿಯು ತನ್ನ ಎಡಗಾಲನ್ನು ಅಸುರನ ಮೇಲೆ ಇರಿಸಿದ್ದಾಳೆ. ಮಹಿಷನು ಸೋತು ಕೆಳಗೆ ಬಿದ್ದಿದ್ದರೂ ಇನ್ನೂ ಜೀವಂತವಾಗಿದ್ದಾನೆ. ದೇವಿಯ ಪಕ್ಕದಲ್ಲಿ ಆಕೆಯ ವಾಹನ ನಿಂತಿದೆ. ಅದರ ತೆರೆದ ಬಾಯಿಂದ ಕೋರೆಗಳು ಕಾಣಿಸುತ್ತಿವೆ. ತುಟಿಗಳು ತಿರುಚವೆ. ಕೆಳಗೆ ಬಿದ್ದಿರುವ ಶತೃವನ್ನು ದುರುಗುಟ್ಟಿಕೊಂಡು ನೋಡುತ್ತಾ ಅವನ ಮೇಲೆರಗಲು ಸಿದ್ದವಾಗಿದೆ. ದೇವಿಯು ಮಹಾಶಕ್ತಿಶಾಲಿಯಾಗಿ ಕಂಡುಬಂದರೂ ಕರುಣಾಮಯಿಯಾದ ಆಕೆಯಲ್ಲಿ ಶಾಲೀನತೆಯೂ ಕಾಣಿಸುತ್ತದೆ. ಮಹಿಷನ ಮೇಲೆ ಇರಿಸಿರುವ ಕಾಲು ಕತ್ತರಿಸಿ ಪಾದ ಮಾತ್ರವೇ ಉಳಿದಿದ್ದರೂ ಮೂರ್ತಿಯಲ್ಲಿಯ ಶೌರ್ಯ ಮತ್ತು ಶಾಲೀನತೆಗಳಿಗೆ ಭಂಗ ಬಂದಿಲ್ಲವೆಂಬಂತಿದೆ. ಈ ರೀತಿಯ ಶಿಲ್ಪ ನೋಡುಗರನ್ನು ಆಕರ್ಷಿಸುತ್ತದೆ. ಅಲ್ಲದೆ ಇಂದು ಈ ಶಿಲ್ಪ ಭಗ್ನಗೊಂಡು ಅವನತಿಯ ಹಾದಿಯಲ್ಲಿದೆ. ಇವುಗಳನ್ನು ಬಿಟ್ಟರೆ ಕಿತ್ತೂರಿನ ಕಿತ್ತೂರಮ್ಮನ ಮೂರ್ತಿಶಿಲ್ಪ, ಪಿರಿಯಾಪಟ್ಟಣದ ಮಸಣಿಕಮ್ಮ ಹಾಗು ಕನ್ನಂಬಾಡಿಯಮ್ಮನ ಮೂರ್ತಿಶಿಲ್ಪಗಳು ಶಾಂತ ಸ್ವಭಾವಗಳಾಗಿವೆ.

ಜೈನ ಶಿಲ್ಪ

ಜಂಬುದ್ವೀಪದ ಪ್ರಾಚೀನ ಧರ್ಮಗಳಲ್ಲಿ ಜೈನ ಧರ್ಮವು ಒಂದು. ಇದು ಅನೇಕ ಬದಲಾವಣೆಗಳಿಗೆ ಒಳಗಾಗಿದ್ದರು. ಮೂರ್ತಿಶಿಲ್ಪಗಳಲ್ಲಿ ಮಾತ್ರ ಯಾವುದೇ ರೀತಿಯ ಬದಲಾವಣೆ ಕಂಡುಬರುವುದಿಲ್ಲ. ಪ್ರಾರಂಭದಿಂದ ಇಂದಿನವರೆಗೆ ಒಂದು ರೀತಿಯ ಲಕ್ಷಣದಿಂದ ಕೂಡಿದೆ. ಇವುಗಳಲ್ಲಿ ಪ್ರಮುಖವಾಗಿ ಮೂರ್ತಿಶಿಲ್ಪದ ಪದ್ಮಾಸನದಲ್ಲಿ ಕುಳಿತು ಧ್ಯಾನಿಸುತ್ತಿರುವ ಅಥವಾ ಖಡ್ಗಸನದಲ್ಲಿ(ಭಂಗಿಯಲ್ಲಿ) ನಿಂತು ಧ್ಯಾನಿಸುತ್ತಿರುವ ಶಿಲ್ಪಗಳೇ ಅಧಿಕವಾಗಿವೆ. ತೀರ್ಥಂಕರ ಅಥವಾ ಜೈನ ಮೂರ್ತಿಗಳನ್ನು ಇಂದಿಗೂ ಮೇಲಿನ ಎರಡು ರೀತಿಯಲ್ಲಿ ಮಾತ್ರ ಕಾಣಲು ಸಾಧ್ಯ. ಆಭರಣಗಳ ಅಲಂಕಾರವಾಗಲಿ ಅಥವಾ ಯಾವುದೇ ರೀತಿಯ ಅಲಂಕಾರವಿಲ್ಲದೆ ನಗ್ನರೀತಿಯಲ್ಲಿರುವುದು. ಒಂದು ತೀರ್ಥಂಕರ ಮೂರ್ತಿಶಿಲ್ಪದಂತೆ ಮತ್ತೊಂದು ಮೂರ್ತಿಶಿಲ್ಪವಿರಬಹುದು. ಇವರನ್ನು ಗುರುತಿಸುವುದಾದರೆ ಪೀಠದ ಕೆಳಗೆ ಇರಬಹುದಾದ ಶಾಸನ ಮತ್ತು ಲಾಂಛನಗಳು ಸಹಾಯ ಮಾಡುತ್ತವೆ.[೩೬] ಜೈನಧರ್ಮ ವೈದಿಕೇತರ ಧರ್ಮವಾಗಿದ್ದು[೩೭] ಇಪ್ಪತ್ನಾಲ್ಕು ತೀರ್ಥಂಕರರನ್ನು ಒಳಗೊಂಡಿದೆಯೆಂದು ಚರಿತ್ರೆ ಇದೆ. ಇವುಗಳನ್ನು ಪೀಠದ ಬಳಿಯ ಜಿನಬಿಂಬ ಶಿಲ್ಪ ಇಲ್ಲವೇ ಶಾಸನ ದೇವತೆಯಿಂದ ಗುರುತಿಸಬಹುದು.[೩೮]

೨೪ ತೀರ್ಥಂಕರರು, ಅವರಿಗೆ ಸಂಬಂಧಿಸಿದ ಲಾಂಛನಗಳು ಮತ್ತು ಯಕ್ಷಯಕ್ಷಿಯರ ಹೆಸರುಗಳು

ತೀರ್ಥಂಕರರು	ಲಾಂಛನ	ಯಕ್ಷ	ಯಕ್ಷಿ
ವೃಷಭ	ಎತ್ತು	ಗೋಮುಖ	ಚಕ್ರೇಶ್ವರಿ
ಅಜಿತ	ಆನೆ	ಮಹಾಯಕ್ಷ	ರೋಹಿಣಿ
ಶಂಭವ	ಕುದುರೆ	ತ್ರಿಮುಖ	ಪ್ರಜ್ಞಪ್ತಿ
ಅಭಿನಂದನ	ಕಪಿ	ಯಕ್ಷೇಶ್ವರ	ವಜ್ರಶೃಂಬಲಾ
ಸುಮತಿ	ಚಕ್ರ	ತುಂಬುರು	ಪುರುಷದತ್ತ
ಪದ್ಮಪ್ರಭ	ಕಮಲ	ಕುಸುಮ	ಮನೋವೇಗಿ
ಸುಪಾರ್ಶ್ವ	ಸ್ವಸ್ತಿಕ	ವರನಂದಿ	ಕಾಳೀ
ಚಂದ್ರಪ್ರಭ	ಚಂದ್ರ	ಶಾಮಯಕ್ಷ	ಜ್ವಾಲಮಾಲನೀ
ಪುಷ್ಪದಂತ	ಮಕರ	ಅಜಿತ	ಮಹಾಕಾಳಿ

ಶ್ರೀತಲ	ವೃಕ್ಷ	ಬ್ರಹ್ಮ	ಮಾನವಿ
ಶ್ರೇಯಾಂಸ	ಗಂಡ	ಈಶ್ವರ	ಗೌರಿ
ವಾಸುಪೂಜ್ಯ	ಕೋಣ	ಕುಮಾರ	ಗಾಂಧಾನಿ
ವಿಮಲ	ಹಂದಿ	ಷಣ್ಮುಖ	ವೈರೋಟಿ
ಅನಂತ	ಕರಡಿ	ಪಾತಾಲ	ಅನಂತಮತಿ
ಧರ್ಮ	ವಜ್ರ	ಕಿನ್ನರ	ಮಾನಸಿ
ಶಾಂತಿ	ಎರಳೆ	ಗರುಡ	ಮಹಾಮಾನಸಿ
ಕುಂಥು	ಟಗರು	ಗಂಧರ್ವ	ಜಯಾ
ಅರ	ಮೀನಾ	ಖೇಂದ್ರ	ವಿಜಯಾ
ಮಲ್ಲಿ	ಕುಂಭ	ಕುಬೇರ	ಅಪರಾಜಿತಾ
ಮುನಿಸುವ್ರತ	ಆಮೆ	ವರುಣ	ಬಹುರೂಪಿಣಿ
ನಮಿ	ನೈದಿಲಂ	ಭ್ರಕುಟಿ	ಚಾಮುಂಡಿ
ನೇಮಿ	ಶಂಖ	ಸರ್ವಾಹ್ಣ	ಕೂಷ್ಮಾಂಡಿನಿ
ಪಾರ್ಶ್ವನಾಥ	ಸರ್ಪ	ಧರಣೇಂದ್ರ	ಪದ್ಮಾವತಿ
ವರ್ಧಮಾನ	ಸಿಂಹ	ಮಾತಂಗ	ಸಿದ್ಧಾಯಿನಿ

ಕೊಣಸೂರು ಗ್ರಾಮದ ಶಾಂತಿನಾಥನು ಖಡ್ಗಾಸನ ಭಂಗಿಯಲ್ಲಿ ಪೀಠದ ಮೇಲೆ ನಿಂತಿರುವನು. ಈ ಮೂರ್ತಿಶಿಲ್ಪವು ನಿರ್ವಸ್ತ್ರನಾಗಿದ್ದು ದ್ವಿಭುಜಧಾರಿಯಾಗಿದೆ. ತನ್ನ ಎರಡೂ ಕೈಗಳನ್ನು ಇಳಿಬಿಟ್ಟು ನಿಂತಿರುವ ಶಾಂತಿನಾಥನು ಗುಂಗರು ಕೂದಲನ್ನು ಹೊಂದಿದೆ. ತಲೆಯ ಓಂಬದಿಯಲ್ಲಿ ಶಿರಚಕ್ರವಿದೆ. ಅಗಲವಾದ ಕಿವಿಗಳಿದ್ದು ಮಂದಹಾಸ ಬೀರುತ್ತಿರುವ ಮುಖವಿದೆ. ಧ್ಯಾನಾಸಕ್ತನಾಗಿರುವಂತೆ ಇರುವ ಮೂರ್ತಿಶಿಲ್ಪದ ಸುತ್ತಲೂ ಸರ್ಪತೋರಣದ ಪ್ರಭಾವಳಿ ಇದೆ. ಈ ಜಿನಮೂರ್ತಿಯ ಲಕ್ಷಣಗಳನ್ನು ಪರಿಶೀಲಿಸಿದಾಗ ನಂತರ ಚಂಗಾಳ್ವರ ಕಾಲಕ್ಕೆ ಸೇರಿದ್ದಾಗಿದೆ ಎಂದು ಹೇಳಬಹುದು. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಖಡ್ಗಾಸನದಲ್ಲಿ ನಿಂತ ಜಿನಬಿಂಬಗಳು ಕೂಣಸೂರು, ಬುವನಹಳ್ಳಿಯಲ್ಲಿ ದೊರೆಯುವುದು. ಹಾಗೆಯೇ ಕುಳಿತ ಜಿನಬಿಂಬಗಳು ಆನೆವಾಳು ಗ್ರಾಮದಲ್ಲಿ ಕಂಡುಬರುತ್ತದೆ. ಕುಳಿತ ಜಿನಬಿಂಬಗಳು ತ್ರಿಕೋಣಾಕಾರದ ಚೌಕಟ್ಟಿನಲ್ಲಿ ರಚಿತವಾಗಿರುತ್ತವೆ. ಕುಳಿತ ಯಕ್ಷ ಮತ್ತು ಯಕ್ಷಿ ಶಿಲ್ಪಗಳೂ ತ್ರಿಕೋಣಾಕಾರದ

ಚೌಕಟ್ಟಿನಲ್ಲಿಯೇ ಇರುತ್ತವೆ. ಯಕ್ಷ ಯಕ್ಷಿಯರನ್ನು ಹಾಗು ಚಾಮರಧಾರಿ ಶಿಲ್ಪಗಳನ್ನು ವಿಶೇಷ ಆಭರಣಗಳಿಂದ ಅಲಂಕರಿಸಿರುವುದು. ಜಿನಬಿಂಬಗಳ ಮುಖಭಾವ ಮಂದಹಾಸದಿಂದ ಕೂಡಿರುವುದು, ಯಕ್ಷ ಯಕ್ಷಿ ಹಾಗು ಚಾಮರಧಾರಿಗಳ ಕೈಲಿ ಫಲವಿರುವುದು. ಪದ್ಮಾಸನದಲ್ಲಿ ಕುಳಿತು ಧ್ಯಾನಮುದ್ರೆಯಲ್ಲಿವೆ. ಬಿಂಬಗಳ ಪೀಠದಲ್ಲಿ ಲಾಂಛನಗಳನ್ನು ಬಿಡಿಸಿರುವುದಿಲ್ಲ.

ಆದಿನಾಥ ತೀರ್ಥಂಕರ ಶಿಲ್ಪ

ಈ ವಿಗ್ರಹವು ಭುವನಹಳ್ಳಿ ಬಸದಿಯ ಗರ್ಭಗೃಹದಲ್ಲಿದೆ. ಜೈನ ಸಂಪ್ರದಾಯದ ಪ್ರಕಾರ ಒಟ್ಟು ಇಪ್ಪತ್ನಾಲ್ಕು ತೀರ್ಥಂಕರರಿದ್ದಾರೆ. ಅವರಲ್ಲಿ ಮೊದಲಿಗನು ಆದಿನಾಥ ಅಥವಾ ವೃಷಭನಾಥ. ಪೀಠದ ಮೇಲ್ಭಾಗದಲ್ಲಿ ಪದ್ಮಪೀಠದ ಮೇಲೆ ತ್ಯಾಗಿಯಾಗಿ ನಿಂತಿರುವನು. ಪಂಚಲೋಹದಿಂದ ಮಾಡಲ್ಪಟ್ಟ ಈ ವಿಗ್ರಹವು ಮೂರು ಅಡಿ ಎತ್ತರವಾಗಿದೆ ಮತ್ತು ಶಿಲ್ಪವು ಪೂರ್ವಾಭಿಮುಖವಾಗಿದ್ದು ಕಪ್ಪು ಬಣ್ಣದಿಂದ ಕೂಡಿದೆ. ಶಿರದ ಮೇಲಿನ ಭಾಗದಲ್ಲಿ ಮುಕ್ಕೊಡೆಯನ್ನು ಹೊಂದಿದ್ದು ಭುಜದ ಮೇಲಿನ ಎರಡು ಭಾಗದಲ್ಲಿ ಬಿಸಣಿಕೆ ಇರುವುದು. ಏಕಾಂಗಿಯಾಗಿ ನಿಂತ ಆದಿನಾಥನ ಸುತ್ತ ಇಪ್ಪತ್ಮೂರು ಜೈನ ತೀರ್ಥಂಕರರ ಕೆತ್ತನೆಯಿರುವುದು ಆದಿನಾಥನ ಎಡ ಮತ್ತು ಬಲಭಾಗದಲ್ಲಿ ಗೋಮುಖ, ಚಕ್ರೇಶ್ವರಿಯ ಯಕ್ಷ-ಯಕ್ಷಿಯರ ಕೆತ್ತನೆಯಿರುವುದು. ಪೀಠದಲ್ಲಿ ಆದಿನಾಥನ ವಾಹನವಾದ ವೃಷಭ ಇರುವುದು. ಇಲ್ಲಿದ್ದ ಮೂಲ ತೀರ್ಥಂಕರರ ವಿಗ್ರಹ ಸ್ಥಳಾಂತರಗೊಂಡಿದೆ.

ಶಾಂತಿನಾಥ ತೀರ್ಥಂಕರ ಶಿಲ್ಪ

ಕೊಣಸೂರು ಗ್ರಾಮದ ಶಾಂತಿನಾಥ ಬಸದಿಯಲ್ಲಿ ಮೂಲ ವಿಗ್ರಹವಿದೆ. ಜೈನ ಸಂಪ್ರದಾಯದ ಪ್ರಕಾರ ೨೪ ತೀರ್ಥಂಕರಗಳಲ್ಲಿ ಶಾಂತಿನಾಥನು ೧೬ನೆಯ ತೀರ್ಥಂಕರನಾಗಿದ್ದಾನೆ. ಖಡ್ಗಾಸನದಲ್ಲಿದ್ದು ನಾಲ್ಕೂವರೆ ಅಡಿ ಎತ್ತರವಾಗಿದೆ. ಕಪ್ಪು ಶಿಲೆಯಿಂದ ಕೂಡಿದ್ದು ಎಡ ಮತ್ತು ಬಲಭಾಗದಲ್ಲಿ ಗರುಡ, ಮಹಾಮಾನಸಿಯರೆಂಬ ಯಕ್ಷ-ಯಕ್ಷಿಯರ ಶಿಲ್ಪವಿರುವುದು, ಪೀಠದ ತಳಭಾಗದಲ್ಲಿ ಎರಳೆಯ(ಜಿಂಕೆ) ಚಿತ್ರವಿದ್ದು, ಪೀಠವು ಶಿವಲಿಂಗಕಾರದಲ್ಲಿದೆ. ಶಾಂತಿ ನಾಥನು ಉದ್ದವಾದ ಕಿವಿಯನ್ನು ಹೊಂದಿದ್ದು ಶಿರದ ಮೇಲಿನ ಭಾಗದಲ್ಲಿ ಮುಕ್ಕೂಡೆ ಇದೆ ಮತ್ತು ಶಿರದ ಕೇಶವು ಗುಂಗುರು ಆಕಾರವನ್ನು ಹೊಂದಿದೆ.

ಮಹಾವೀರ ಶಿಲ್ಪ

ಶಿಲ್ಪವು ಬೆಟ್ಟದ ಪಶ್ಚಿಮಕ್ಕಿರುವ ಜೋಗನಹಳ್ಳಿಯಲ್ಲಿದೆ. ಪ್ರಾಥಮಿಕ ಶಾಲೆ ಸಮೀಪದ ರಸ್ತೆ ಬದಿಯಲ್ಲಿರುವುದು. ಶಿಲೆಯ ಮೇಲ್ಭಾಗದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಚಿತ್ರವಿದೆ.

ಬಲಭಾಗದಲ್ಲಿ ಭಕ್ತನು ಮಹಾವೀರನಿಗೆ ನಮಿಸುತ್ತಿರುವ ಮತ್ತು ಎಡಭಾಗದಲ್ಲಿ ಬಿಸಣಿಕೆಯನ್ನು ಹಿಡಿದು ಸೇವಕನು ಗಾಳಿ ಬೀಸುತ್ತಿರುವುದಾಗಿದೆ. ಶಿರದ ಎಡಭಾಗದಲ್ಲಿ ಚಂದ್ರ ಮತ್ತು ಬಲಭಾಗದಲ್ಲಿ ಸೂರ್ಯನ ಉಬ್ಬುಶಿಲ್ಪವಿದೆ. ಈ ಶಿಲ್ಪವು ೨.೫x೨.೫ ಉದ್ದ ಮತ್ತು ಅಗಲವಿದೆ.

ಯಕ್ಷ ಯಕ್ಷಿಯರ ಶಿಲ್ಪ

ಕರ್ನಾಟಕದಲ್ಲಿ ತೀರ್ಥಂಕರರ ಸ್ಥಾಪನೆ ಮತ್ತು ಪೂಜೆ ಹೆಚ್ಚಾಗಿರುವುದರಿಂದ ಆ ತೀರ್ಥಂಕರರ ಶಾಸನ ದೇವತೆಗಳೂ ಹೆಚ್ಚಿಗೆ ಪ್ರಸಿದ್ಧಿಯನ್ನು ಪಡೆದಿರುತ್ತಾರೆ. ಈ ದೇವತೆಗಳಲ್ಲಿ ಪುರುಷರಿಗಿಂತ ಸ್ತ್ರೀ ದೇವತೆಗಳೇ ಹೆಚ್ಚಿಗೆ ಪ್ರಭಾವವನ್ನು ಉಳ್ಳವರಾಗಿದ್ದು, ಅವರೇ ಎಲ್ಲಾ ಕಡೆಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ದೊರೆಯುವ ಯಕ್ಷರ ಶಿಲ್ಪಗಳು ಕಡಿಮೆಯೆಂದೇ ಹೇಳಬೇಕಾಗಿದೆ. ಅನಂತನಾಥ, ಆದಿತೀರ್ಥಂಕರ, ಚಂದ್ರನಾಥ, ಶಾಂತಿನಾಥ ಮತ್ತು ಮಹಾವೀರರ ಆರಾಧನೆ ಹೆಚ್ಚಿಗೆ ಕಂಡುಬರುತ್ತದೆ. ಯಕ್ಷ ಶಿಲ್ಪಗಳು ದ್ವಿಬಾಹುವುಳ್ಳವಾಗಿ ಆರಾಮಾಸನ ಭಂಗಿಯಲ್ಲಿದ್ದು ದಪ್ಪ ಹೊಟ್ಟೆಯನ್ನು ಹೊಂದಿರುತ್ತವೆ. ಸಾಮಾನ್ಯವಾಗಿ ಯಕ್ಷರಿಗಿಂತ ಹೆಚ್ಚಾಗಿ ಯಕ್ಷಿಯರ ಬಿಂಬಗಳು ದೊರೆಯುತ್ತವೆ. ಇವುಗಳು ವೈವಿಧ್ಯಮಯವಾಗಿಯೂ ಇವೆ. ಪದ್ಮಾವತಿ ಯಕ್ಷಿಯ ಬಗ್ಗೆ ಸುಮಾರು ಒಂಭತ್ತನೇ ಶತಮಾನದಲ್ಲಿಯೇ ನಮಗೆ ಶಾಸನೋಕ್ತ ಉಲ್ಲೇಖಗಳು ಕಾಣಬರುತ್ತವೆ. ತಮ್ಮಲ್ಲಿಲ್ಲದ ಮಾತೃ ಪೂಜೆಯ ಸ್ಥಾನವನ್ನೂ ಈ ಯಕ್ಷಿಯರಿಗೆ ನೀಡಿದ ಪರಿಣಾಮವಾಗಿ ಯಕ್ಷಿಯರ ಬಗ್ಗೆ ವಿಫಲ ಸ್ತೋತ್ರ ಸಾಹಿತ್ಯವೂ ನಿರ್ಮಾಣವಾಗಿದೆ. ಜೊತೆಗೆ ಯಕ್ಷ ಯಕ್ಷಿಯರ ಆರಾಧನೆ, ಅವರನ್ನು ಒಲಿಸಿಕೊಳ್ಳುವ ವಿಧಾನಗಳ ಬಗ್ಗೆಯೂ ತಾಂತ್ರಿಕ ಗ್ರಂಥಗಳು ರಚಿತವಾಗಿದೆ. ಒಂದೊಂದು ಯಕ್ಷಿ ಒಂದೊಂದು ಸ್ಥಳದ ಅಧಿದೇವತೆಯಾಗಿದ್ದಾಳೆಂಬ ನಂಬಿಕೆ ಇದೆ. ಬಸದಿಗಳಲ್ಲಿ ದೊರೆಯುವ ಶಿಲ್ಪಗಳ ಆಧಾರದ ಮೇಲೆ ಪದ್ಮಾವತಿಯೇ ಹೆಚ್ಚು ಜನಪ್ರಿಯ ಯಕ್ಷಿಯಾಗಿರುತ್ತದೆ.

ಪದ್ಮಾವತಿ ಶಿಲ್ಪ

ಇಪ್ಪತ್ತಮೂರನೆಯ ತೀರ್ಥಂಕರನಾದ ಪಾರ್ಶ್ವನಾಥನ ಯಕ್ಷ ಧರಣೇಂದ್ರ ಮತ್ತು ಯಕ್ಷಿ ಪದ್ಮಾವತಿ. ಪದ್ಮಾವತಿಯು ಕರ್ನಾಟಕದ ಕೆಲವು ರಾಜಮನೆತನಗಳ ಅಧಿದೇವತೆಯೆಂಬ ವಿಷಯ ಶಾಸನಗಳಿಂದ ತಿಳಿಯುತ್ತದೆ. ಈ ಪದ್ಮಾವತಿಯ ಆರಾಧನೆಯು ರಾಜ ಮನ್ನಣೆಯ ಜೊತೆಗೆ ಜನಮನ್ನಣೆ ಗಳಿಸಿದ್ದು ತಿಳಿಯುತ್ತದೆ. ಪಾರ್ಶ್ವನಾಥ ಶಿಲ್ಪಗಳು ಕರ್ನಾಟಕದಲ್ಲಿ ಹೆಚ್ಚಾಗಿ ದೊರೆಯುತ್ತವೆ. ಅದರಿಂದಾಗಿ ಪದ್ಮಾವತಿ ಶಿಲ್ಪಗಳೂ ಹೆಚ್ಚಾಗಿ ದೊರೆಯುತ್ತವೆ.

ಚಾಮರಧಾರಿಗಳ ಶಿಲ್ಪ

ತೀರ್ಥಂಕರನ ಪಕ್ಕದಲ್ಲಿ ಯಕ್ಷ ಯಕ್ಷಿಯರೇ ಅಲ್ಲದೆ ಚಾಮರಧಾರಿ ಶಿಲ್ಪಗಳು ಇರುತ್ತವೆ. ಚಾಮರಧಾರಿಯರನ್ನು ತೀರ್ಥಂಕರನ ಇಕ್ಕೆಲಗಳಲ್ಲಿ ನಿಂತು ಚಾಮರಗಳನ್ನು ಹಿಡಿದಿರುವಂತೆ ಬಿಡಿಸಿರುತ್ತಾರೆ. ಅಲಂಕಾರಕ್ಕೆ ಶಿಲ್ಪದ ಬಲಗಡೆಯ ಚಾಮರಧಾರಿಯ ಬಲಗೈಲೂ, ಚಾಮರ ಧಾರಿಯ ಎಡಗೈಲೂ ಚಾಮರವನ್ನು ಹಿಡಿದಿರುವಂತೆ ಕೆತ್ತಿರುತ್ತಾರೆ. ಕೋಣಸೂರು, ಅನಿವಾಳುಗಳಲ್ಲಿ ಈ ರೀತಿಯ ಶಿಲ್ಪಗಳನ್ನು ಕಾಣಬಹುದು. ಈ ಶಿಲ್ಪಗಳನ್ನು ಸುಂದರವಾಗಿ ಕೆತ್ತುವುದರ ಮೂಲಕ ಶಿಲ್ಪಿಯು ತನ್ನ ಪ್ರತಿಭೆಯನ್ನು ಮೆರೆಯುವ ಕಲಾ ಮಾಧ್ಯಮವಾಗಿ ಬಳಸಿರುತ್ತಾನೆ. ಚಾಮರಧಾರಿಗಳು ಪುರುಷರೇ ಆಗಿರುತ್ತಾರೆ. ಜಿನನ ಸಾನಿಧ್ಯದಲ್ಲಿ ಯಕ್ಷಿಯನ್ನು ಬಿಟ್ಟರೆ ಈತರೆ ಹೆಂಗಸರು ಇರಬಾರದೆಂಬ ನಿಯಮವಿದ್ದಿರಬಹುದೆಂದು ಈ ಶಿಲ್ಪಗಳಿಂದ ಊಹಿಸಬಹುದು. ಕೋಣಸೂರು, ಅನಿವಾಳುನಲ್ಲಿ ಇಂತಹ ಶಿಲ್ಪಗಳನ್ನು ಕಾಣಬಹುದು.

ಸ್ಮಾರಕ ಶಿಲ್ಪಗಳು

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಸತ್ತವರ ನೆನಪಿಗಾಗಿ ನೆಟ್ಟ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು ದೊರೆಯುತ್ತವೆ. ಇವುಗಳಲ್ಲಿ ಚಿತ್ರಿತವಾಗಿರುವ ಶಿಲ್ಪಗಳಿಂದ ಅಂದಿನ ಸಾಮಾಜಿಕ ಸ್ಥಿತಿಗತಿಯನ್ನು ಚಿತ್ರಿಸಬಹುದು. ರಾಜರು, ಸಾಮಂತರು ಮತ್ತು ಸಾಮಾನ್ಯರಿಂದ ನಿರ್ಮಿಸಲ್ಪಟ್ಟ ಈ ಸ್ಮಾರಕಶಿಲ್ಪಗಳು ಕೂಡ ಇತಿಹಾಸ ರಚಿಸಲು ಸಹಕಾರಿಯಾಗಿವೆ. ಮೂರ್ತಿಶಿಲ್ಪಕ್ಕೆ ನಿರ್ದಿಷ್ಟವಾದ ಶ್ಲೋಕ ಅಥವಾ ಕಥಾ ಹಿನ್ನೆಲೆ ಇರುವಂತೆ ಶಿಲ್ಪಿ ಮೂರ್ತಿಶಿಲ್ಪವನ್ನು ಕೆತ್ತುತ್ತಾನೆ. ಆದರೆ ಶಾಸನ ಅಥವಾ ವೀರಗಲ್ಲುಗಳ ರಚನೆಗೆ ನಿರ್ದಿಷ್ಟ ಶ್ಲೋಕವಾಗಲಿ, ಪಾರಂಪರಿಕ ಕಥಾ ಹಿನ್ನೆಲೆಯಾಗಲೀ ಇರುವುದಿಲ್ಲ. ವೀರನ ಸಾಹಸವನ್ನು ಮಾತ್ರ ಶಿಲ್ಪಿ ಕೆತ್ತಿರುತ್ತಾನೆ. ಶಿಲ್ಪಿಯು ಹಲವಾರು ಕಟ್ಟುಪಾಡುಗಳಿಂದ ಬಿಡುಗಡೆ ಹೊಂದಿರುವುದರಿಂದ ಶಾಸನ ಶಿಲ್ಪಿಗಳಲ್ಲಿ ಎದ್ದು ಕಾಣುವಂತಹ ಹಾಗು ಅಪರೂಪದ ಸ್ಮಾರಕ ಶಿಲ್ಪಗಳು ಮೂಡಿಬರಲು ಕಾರಣವಾಯಿತು.[೩೯] ಮೂರ್ತಿಶಿಲ್ಪಕ್ಕೆ ಪಿರಿಯಾಪಟ್ಟಣ ತಾಲ್ಲೂಕು ಪರಿಸರವನ್ನು ಆಳ್ವಿಕೆ ಮಾಡಿದ ಅರಸುಮನೆತನಗಳ ಕೊಡುಗೆಯನ್ನು ವಿಚಾರ ಮಾಡುವುದು ಅವಶ್ಯಕ. ಈ ಅರಸು ಮನೆತನಗಳ ಅವಧಿಯಲ್ಲಿ ನಿರ್ಮಿತವಾದ ಸ್ಮಾರಕ ಶಿಲೆಗಳನ್ನು ವಿಶ್ಲೇಷಿಸುತ್ತ ಯುದ್ಧದಲ್ಲಿ ಗೆದ್ದವರ ನೆನಪಿಗಾಗಿ, ಶತ್ರುಗಳು ಹಸುಗಳನ್ನು ಇಲ್ಲವೇ ಸ್ತ್ರೀಯರನ್ನು ಕದ್ದೊಯ್ಯುತ್ತಿರುವಾಗ ಹೋರಾಡಿ ಮಡಿದವರ ನೆನಪಿಗೆ ಕೆತ್ತಿ ನಿಲ್ಲಿಸಲಾಗುತ್ತಿತ್ತು. ರಾಜ ಮಡಿದಾಗ ಆತ್ಮತ್ಯಾಗ ಮಾಡಿಕೊಂಡ ಸೇವಕರ ನೆನಪಿಗೆ ಮತ್ತು ಆತ್ಮತ್ಯಾಗಗೊಂಡವನಿಗೆ ಪ್ರೇರಕ, ಇಲ್ಲವೇ ಸಹಾನುಭೂತಿಯ ದೃಷ್ಟಿಯಿಂದ ಸಾಮೂಹಿಕವಾಗಿ

ಪ್ರಾಣತ್ಯಾಗ ಮಾಡಿಕೊಂಡ ಒಂದು ಬಳಗದವರ ನೆನಪಿಗೆ ಅಥವಾ ಕಳ್ಳ ಕಾಕರು ಗ್ರಾಮವೊಂದರ ಮೇಲೆ ಆಕ್ರಮಣ ಮಾಡಿದಾಗ ಅಲ್ಲಿನ ನಾಯಕರು ತಮ್ಮ ಶೌರ್ಯ ಪರಾಕ್ರಮ ತೋರಿಸಿ ಮರಣ ಹೊಂದಿದವರ ನೆನಪಿಗೆ ಹಾಗು ಹೋರಾಡುತ್ತಿರುವಾಗ ಮರಣ ಹೊಂದಿದ ನಾಯಿಯಂತಹ ಪ್ರಾಣಿಗಳ ನೆನಪಿಗೆ ಸ್ಮಾರಕ ಶಿಲೆಗಳು ಕಂಡುಬಂದಿದೆ.[೪೦]

ಸ್ಮಾರಕ ಶಿಲ್ಪಗಳಲ್ಲಿ ವೀರಗಲ್ಲುಗಳು, ಮಹಾಸತಿಕಲ್ಲು ಮತ್ತು ತುರುಗಾಳಗ ಶಿಲ್ಪಗಳ ಮತ್ತು ದಾನಶಾಸನಗಳು[೪೧] ಪ್ರಮುಖವಾಗಿವೆ. ಸಾಮಾನ್ಯವಾಗಿ ವೀರಗಲ್ಲುಗಳು ಮೂರು ಹಂತಗಳಲ್ಲಿ ಇದ್ದು ಕೆಳ ಹಂತದಲ್ಲಿ ವೀರನ ಹೋರಾಟದ ದೃಶ್ಯ, ಮಧ್ಯದಲ್ಲಿ ಅವನನ್ನು ದೇವಕನ್ನಿಕೆಯರು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ ಮತ್ತು ಮೇಲಿನ ಹಂತದಲ್ಲಿ ಅವನು ಸ್ವರ್ಗದಲ್ಲಿ ಸ್ಥಾನ ಪಡೆದ ದೃಶ್ಯಗಳಿರುವುದು ಪರಂಪರೆ. ಇವುಗಳ ಜೊತೆಗೆ ಮಾಸ್ತಿ ಅಥವಾ ಮಹಾಸತಿ ಕಲ್ಲುಗಳನ್ನು ಸೇರಿಸಬಹುದು. ಮಹಾಸತಿ ಕಲ್ಲುಗಳೆಂದರೆ ಮೃತ್ಯುವಶನಾದ ಪತಿಯನ್ನು ಹಿಂಬಾಲಿಸಿ ಸಹಗಮನ ಮಾಡಿದ ಮಹಾಸತಿಯ ಸ್ಮರಣಾರ್ಥ ನಿಲ್ಲಿಸಿದವುಗಳು. ಊರಿನ ಹಿತಕ್ಕಾಗಿಯೋ ದುಷ್ಟ ಶಿಕ್ಷಕ್ಕಾಗಿಯೋ, ಸ್ವಾಮಿನಿಷ್ಟೆಯಿಂದಲೋ ಹೋರಾಡಿ ಮಡಿದ ವೀರಪುರುಷರ ಸ್ಮಾರಕಕ್ಕಾಗಿ ರಚಿತವಾದ ಶಾಸನವುಳ್ಳ ವೀರಗಲ್ಲುಗಳು. ಈ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು ಒಂದು ವಿಶಿಷ್ಟ ಬಗೆಯ ಸ್ಮಾರಕಗಳು ಇವುಗಳು ಪಿರಿಯಾಪಟ್ಟಣ, ಬೆಟ್ಟದಪುರ, ಹಿಟ್ನೆಹೆಬ್ಬಾಗಿಲು, ಆವರ್ತಿ, ದೊಡ್ಡಕಮರವಳ್ಳಿ, ನಿಲವಾಡಿ, ಅತ್ತಿಗೋಡು, ಚಿಕ್ಕಹೊನ್ನೂರು ಮತ್ತು ಚನ್ನಕಲ್ಲು ಕಾವಲುಗಳಲ್ಲಿ ಕಾಣಬಹುದು.

ಶಾಸನ ಶಿಲ್ಪ

ಕರ್ನಾಟಕದ ಅರಸು ಮನೆತನದವರು ಹಾಕಿಸಿರುವ ಶಾಸನಗಳು. ವಿಷಯದ ವೈವಿಧ್ಯತೆಯಿಂದ ಮಾತ್ರವಲ್ಲದೆ, ಅವುಗಳ ಬಾಹ್ಯ ಸ್ವರೂಪದಿಂದಲೂ ಮಹತ್ವದ ಸ್ಥಾನವಿದೆ. ಶಾಸನಗಳನ್ನು ಕೆಲವು ಕಡೆ ದೇವಾಲಯಗಳ ಗೋಡೆಗಳ ಮೇಲೆ ಬರೆಸಿದ್ದರೂ ಅನೇಕ ಕಡೆ ಪ್ರತ್ಯೇಕವಾದ ಕಲ್ಲಿನ ಚಪ್ಪಡಿಯ ಮೇಲೆ ಬರೆದು ನೆಟ್ಟಿರುವುದನ್ನು ಕಾಣಬಹುದಾಗಿದೆ. ಶಾಸನ ಪಾಠಗಳ ವಿಕಾಸವಾದಂತೆ ಅದಕ್ಕೆ ಒಂದು ಸ್ಪಷ್ಟ ರೂಪ ಬರುತ್ತಿದ್ದಂತೆ ಶಾಸನ ಫಲಕಗಳಿಗೂ ಒಂದು ನಿರ್ದಿಷ್ಟ ರೂಪ ಬರಲಾರಂಭಿಸಿತು. ಮೂರ್ತಿಶಿಲ್ಪಕ್ಕೆ ನಿರ್ದಿಷ್ಟವಾದ ಶ್ಲೋಕ ಮತ್ತು ಕಥಾ ಹಿನ್ನೆಲೆ ಇದ್ದು ಅದರಂತೆ ಶಿಲ್ಪಿ ಶಿಲ್ಪವನ್ನು ಕೆತ್ತುತ್ತಾನೆ. ಆದರೆ ಶಾಸನ ಅಥವಾ ವೀರಗಲ್ಲುಗಳ ಸೃಷ್ಟಿಗೆ ಇಂತಹ ಧ್ಯಾನ ಶ್ಲೋಕವಾಗಲೀ, ಪಾರಂಪರಿಕ ಕಥಾ ಹಿನ್ನೆಲೆಯಾಗಲೀ ಇರುವುದಿಲ್ಲ. ವೀರನ ಸಾಹಸವನ್ನು ಮಾತ್ರ ಶಿಲ್ಪಿ ಕೇಳಿರುತ್ತಾನೆ. ಉಳಿದದ್ದು ಶಿಲ್ಪಿಯ ಅಭಿವ್ಯಕ್ತಿಗೆ ಬಿಟ್ಟಿದ್ದು. ವೀರಗಲ್ಲುಗಳನ್ನು ಕೆತ್ತುವ ಶಿಲ್ಪಿಯು ಹಲವಾರು ಕಟ್ಟುಪಾಡುಗಳಿಂದ

ಬಿಡುಗಡೆ ಹೊಂದಿರುವುದರಿಂದ ಶಾಸನ ಶಿಲ್ಪಗಳಲ್ಲಿ ಎದ್ದು ಕಾಣುವಂತಹ ಹಾಗು ಅಪರೂಪವಾದ ಸ್ಮಾರಕ ಶಿಲ್ಪಗಳು ಮೂಡಿ ಬರಲು ಕಾರಣವಾಯಿತು. ಆ ಪರಂಪರೆ ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲೂ ಮುಂದುವರೆದಿದೆ. ಇಲ್ಲಿ ದೊರೆಯುವ ಕೆಲವು ವೀರಗಲ್ಲು, ಮಹಾಸತಿಕಲ್ಲು, ತುರುಗೋಳ್ ಶಿಲ್ಪಗಳು ಮತ್ತು ದಾನ ಶಾಸನಶಿಲ್ಪಗಳು ವಾಸ್ತುಶಿಲ್ಪ ದೃಷ್ಟಿಯಿಂದ ವಿಶೇಷವಾಗಿರದೆ ಕೇವಲ ಸಾಂಕೇತಿಕವಾಗಿವೆ. ಇಂತಹ ಶಿಲ್ಪಗಳು ಆವರ್ತಿ, ನೀಲವಾಡಿ, ಚಾಮರಾಯನಕೋಟೆ, ಸೊಳೆಕೋಟೆ, ಬೆಟ್ಟದಪುರ, ಪಿರಿಯಾಪಟ್ಟಣ, ಬೆಟ್ಟದತುಂಗ, ಚಪ್ಪರದಹಳ್ಳಿ, ಹರದೂರು, ಮೇಲೂರು, ಹಂದಿಗುಡ್ಡಕಾವಲು ದೊಡ್ಡಕಮರವಳ್ಳಿ ಗ್ರಾಮಗಳ ಶಿಲ್ಪಗಳಲ್ಲಿವೆ. ಈ ಗ್ರಾಮಗಳ ಶಿಲ್ಪಗಳಲ್ಲಿ ಅಶ್ವರೂಢನಾದ ವೀರ ಶಿಲ್ಪಗಳಿದ್ದು, ಅವನ ಮುಂದೆ ಪ್ರಾಯಶಃ ಪತ್ನಿಯರ ಶಿಲ್ಪಗಳಿವೆ. ಇದೇ ಸ್ಥಳಗಳಲ್ಲಿ ಭರ್ಜಿಯನ್ನು ಎತ್ತಿ ಹೋರಾಟಕ್ಕೆ ಹೊರಟಿರುವ ಉಬ್ಬುಶಿಲ್ಪಗಳಿವೆ. ಅಲ್ಲಿ ಅಲಂಕೃತವಾದ ಅಶ್ವದ ಮೇಲೆ ವೀರನು ಆಸೀನನಾಗಿದ್ದು, ಅಶ್ವದ ಹಿಂಭಾಗದಲ್ಲಿ ಸೇವಕನೊಬ್ಬನು ಛತ್ರಿಯನ್ನು ಹಿಡಿದಿದ್ದಾನೆ. ಪ್ರಾಯಶಃ ಇವು ಯುದ್ದದಲ್ಲಿ ಮಡಿದ ವೀರರ ಸ್ಮಾರಣಾರ್ಥದ ಶಿಲೆಗಳಾಗಿವೆ. ಇವುಗಳಲ್ಲಿ ಸಮಕಾಲೀನ ವೇಷಭೂಷಣಗಳು, ಸಾಮಾಜಿಕ ಸಂಪ್ರದಾಯಗಳು ಮತ್ತು ಯುದ್ಧದ ಸಂಗತಿಗಳು ತಿಳಿದುಬರುತ್ತದೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಕಂಡುಬಂದಿರುವ ಇತರೆ ಎಲ್ಲಾ ಶಾಸನಗಳಿಗಿಂತ ದಾನಶಾಸನಗಳೂ ಅಧಿಕ ಸಂಖ್ಯೆಯಲ್ಲಿ ಇವೆ. ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಿಗೆ ದಾನ ನೀಡಿರುವುದಾಗಿವೆ. ದೇವಾಲಯಗಳನ್ನು ಕಟ್ಟಿಸುವುದು ಅವುಗಳ ವ್ಯವಸ್ಥೆಗಾಗಿ ಮತ್ತು ಮಠಗಳಿಗಾಗಿ ಮಹಾವ್ಯಕ್ತಿಗಳಿಗಾಗಿ ಇಲ್ಲವೆ ಅನ್ನದಾನ, ಧಾರ್ಮಿಕ ಕಾರ್ಯಗಳಿಗಾಗಿ ಎಂದು ಜನ ಭಾವಿಸಿದ್ದರು.

ರಾಜರಿಂದ ಹಿಡಿದು ಜನಸಾಮಾನ್ಯರವರಿಗೂ ಧಾರ್ಮಿಕ ಭಾವನೆ ಜೀವನದ ಸಹಜಗುಣ. ಅದರ ಫಲವಾಗಿ ಹಳ್ಳಿಹಳ್ಳಿಗಳಲ್ಲಿ ದೇವಾಲಯಗಳು ತಲೆಯೆತ್ತಿದವು. ದಾನಧರ್ಮಗಳು ಜೀವನದ ತಳಹದಿಯಾದವು. ಇದನ್ನು ದಾನಶಾಸನಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಅಂತಹ ದಾನಶಾಸನಗಳು ಆಯಿತನಹಳ್ಳಿ, ಕೆಸುವಿನಕೆರೆ, ನಿಲವಾಡಿ, ಹರದೂರು, ಮೇಲೂರು, ಕುಡುಕೂರು, ಬಾರ್ಸೆ, ರಾವಂದೂರು, ಕಿತ್ತೂರು ಮುಂತಾದ ಕಡೆ ಇರುವ ಶಾಸನಗಳಿಂದ ಅರಿಯಬಹುದು.

ಅಡಿಟಿಪ್ಪಣಿಗಳು

೧. ರಾಜರಾಂ ಹೆಗಡೆ, ೧೯೯೨: *ಭಾರತೀಯ ಮೂರ್ತಿಶಾಸ್ತ್ರ, ಧರ್ಮ, ದೇವತಾರಾಧನೆ ಹಾಗು ಸಾಂಸ್ಕೃತಿಕ ರಾಜಕೀಯದ ಐತಿಹಾಸಿಕ ವಿಶ್ಲೇಷಣೆ,* ಅರಿವು-ಬರಹವು, ಸಂ. ೩, ಭಾಗ ೧, ಪು. ೩೫-೩೬

೨. ತಿಪ್ಪೇಸ್ವಾಮಿ ಪಿ.ಆರ್.(ಸಂ), ೧೯೯೪: **ಶಿಲ್ಪ ಕಲಾ ಪ್ರಪಂಚ,** ಪು.೧೨೯.

೩. ಅದೇ, ಪು.೧೧೩.

೪. ಅದೇ, ಪು.೮೪.

೫. ಅದೇ, ಪು.೧೧೪.

೬. ನರಸಿಂಹಮೂರ್ತಿ ಎ.ವಿ., ೧೯೮೩: **ಕರ್ನಾಟಕದಲ್ಲಿ ಪುರಾತತ್ವ ಶೋಧನೆ,** ಪು.೩೬.

೭. ದೇವರಕೊಂಡರೆಡ್ಡಿ. ೧೯೯೩: **ಗಂಗರ ಶಿಲ್ಪಕಲೆ,** ಪು.೧

೮. ಶಿವರಾಮ ಕಾರಂತ, ೧೯೭೫: **ಭಾರತೀಯ ಶಿಲ್ಪ,** ಪು.೧

೯. ಮರಿಶಾಮಾಚಾರ್, ೨೦೦೦: **ಭಾರತೀಯ ಶಿಲ್ಪಕಲೆ,** ಪು.೫.

೧೦. ಗೋಪಿನಾಥರಾವ್ ಟಿ.ಎ., ೧೯೮೫: **ಎಲಿಮೆಂಟ್ಸ್ ಆಫ್ ಹಿಂದೂ ಐಕೋನೂಗ್ರಫಿ; ಸಂ೨, ಭಾಗ ೧,** ಪು.೭೫

೧೧. ರಾಮಚಂದ್ರರಾವ್ ಎಸ್.ಕೆ., ೧೯೮೨: **ಪ್ರತಿಮಾಕೋಶ ಸಂ.೪,** ಪು.೧೫೦

೧೨. ಅದೇ

೧೩. ಚಿಂತಾಮಣಿಕರ್, ೧೯೫೨: **ಇಂಡಿಯನ್ ಮೆಟಲ್ ಸ್ಕಾಲ್ಪಚರ್,** ಪು.೨೯

೧೪. ಗಂಗೋಲಿ ಓ.ಸಿ., ೧೯೭೮: **ಸೌತ್ ಇಂಡಿಯನ್ ಬ್ರಾಂಜಸ್,** ಪು.೩೩

೧೫. ಧಮಿಜಾ ಜಸ್ಲೀನ್, ೧೯೭೦: **ಇಂಡಿಯನ್ ಪೋಕ್ ಆರ್ಟ್ಸ್ ಆ್ಯಂಡ್ ಕ್ರಾಪಟ್ಸ್,** ಪು.೭೨

೧೬. ಶಿವರಾಮಮೂರ್ತಿ ಸಿ., ೧೯೬೩: **ಸೌತ್ ಇಂಡಿಯನ್ ಬ್ರಾಂಜಸ್,** ಪು. ೧೪ ಹಾಗು ಮನಸಾರ ೮,೨೦,೨೩

೧೭. ರಾಮಚಂದ್ರರಾವ್ ಎಸ್.ಕೆ., ೧೯೮೨: **ಪೂರ್ವೋಕ್ತ,** ಪು.೨೦೮-೨೧೫

೧೮. ಗೋಪಿನಾಥರಾವ್ ಟಿ.ಎ., ೧೯೮೫: **ಪೂರ್ವೋಕ್ತ,** ಪು. ೩೫-೬೭

೧೯. ಬ್ರಹ್ಮವೈವರ್ಥ ಪುರಾಣವು ಗಣಪತಿಯನ್ನು ಕೃಷ್ಣನೆಂದು ಪರಿಗಣಿಸಿ, ಮೂಲತಃ ಮನುಷ್ಯರೂಪಿ ಎನ್ನುತ್ತದೆ. ನೋಡಿ ಗೋಪಿನಾಥರಾವ್ ಟಿ.ಎ., **ಪೂರ್ವೋಕ್ತ,** ೧೯೮೫: ಪು.೪೫

೨೦. ಗುರುರಾಜ್ ಭಟ್ ಪಿ., ೧೯೭೫: **ಸ್ಟಡೀಸ್ ಆಫ್ ತುಳುವ ಹಿಸ್ಟರಿ ಅಂಡ್ ಕಲ್ಚರ್,** ಪು. ೨೮೨

೨೧. ಶಿವರುದ್ರಸ್ವಾಮಿ ಎಸ್.ಎನ್., ೧೯೯೬: **ವಿಜಯನಗರ ಟೆಂಪಲ್ಸ್ ಇನ್ ಕರ್ನಾಟಕ,** ಪು. ೧೫೪

೨೨. ರಾಮಚಂದ್ರರಾವ್ ಎಸ್.ಕೆ., ೧೯೭೫: **ಮೂರ್ತಿಶಿಲ್ಪ ನೆಲೆ- ಹಿನ್ನಲೆ,** ಪು.೧೯೦-೧೯೩

೨೩. ಭಟ್‌ಸೂರಿ ಕೆ.ಜಿ., ೧೯೮೭: **ಆರ್ಟ್ ಅಂಡ್ ಆರ್ಕಿಟೆಕ್ಚರ್ ಆಫ್ ನಾರ್ತ್ ಕನ್ನಡ(ಅರ್ಲಿ ಅಂಡ್ ಮಿಡಿವೆಲ್ ಪೀಸ್)** ಅಪ್ರಕಟಿತ ಪಿ.ಎಚ್.ಡಿ.ಪ್ರಬಂಧ, ಪು.೨೧೧

೨೪. ರಾಮಚಂದ್ರರಾವ್ ಎಸ್.ಕೆ., ೧೯೭೫: **ಪೂರ್ವೋಕ್ತ** ಪು.೧೨೦-೧೪೦

೨೫. ಎ.ಕ.ಸಂ.೪., ಪಿರಿಯಾಪಟ್ಟಣ, ಶಾ.ಸಂ.೮೦

೨೬. ರಾಮಚಂದ್ರರಾವ್ ಎಸ್.ಕೆ., ೧೯೭೫: **ಪೂರ್ವೋಕ್ತ,** ಪು.೩೫

೨೭. ರಾಮಚಂದ್ರರಾವ್ ಎಸ್.ಕೆ., ೧೯೮೨: **ಪೂರ್ವೋಕ್ತ,** ಪು.೨೭೮

೨೮. ಅದೇ, ಪು.೬೨

೨೯. ಗೋಪಿನಾಥರಾವ್ ಟಿ.ಎ., ೧೯೮೫: **ಪೂರ್ವೋಕ್ತ** ಸಂ.೨, ಭಾಗ.೧, ಪು.೧೮೬

೩೦. ರಾಜೇಶ್ವರಿ ಡಿ.ಆರ್., **ಶಕ್ತಿ ಐಕನೋಗ್ರಪಿ,** ಪು.೫೩-೫೪

೩೧. ದೇವರಕೊಂಡಿರೆಡ್ಡಿ, ೧೯೯೪: **ತಲಕಾಡಿನ ಗಂಗರ ದೇವಾಲಯಗಳು,** ಪು.೯೮

೩೨. ನರಸಿಂಹಚಾರ್ಯ ಎಮ್., ೧೯೮೯: **ಹಿಸ್ಟರಿ ಅಂಡ್ ಕಲ್ಟ್ ಆಫ್ ನರಸಿಂಹ ಇನ್ ತೆಲಂಗಾಣ,** ಪು.೧೩೨

೩೩. ಸ್ವಾಮಿ ಹರ್ಷನಂದ, ೧೯೮೨: **ಹಿಂದೂ ಗಾಡ್ಸ್ ಅಂಡ್ ಗಾಡೆಸೆಸ್,** ಪು.೯೮

೩೪. ರಾಮಚಂದ್ರರಾವ್ ಎಸ್.ಕೆ., ೧೯೭೫: **ಪೂರ್ವೋಕ್ತ,** ಪು.೧೭೨-೧೭೩

೩೫. ಬ್ಯಾನರ್ಜಿ ಜೆ.ಎನ್., ೧೯೪೧: **ಡೆವಲಪ್‌ಮೆಂಟ್ ಆಫ್ ಹಿಂದೂ ಐಕನೋಗ್ರಪಿ,** ಪು.೭೮

೩೬. ಭಟ್ಟಾಚಾರ್ಯ ಬಿ.ಸಿ., ೧೯೭೪: **ಜೈನ ಐಕನೋಗ್ರಪಿ,** ಸಂ.೨, ಪು.೧೦೩-೧೦೪

೩೭. ಗುಪ್ತ ಆರ್.ಎಸ್., ೧೯೭೨: **ಐಕನೋಗ್ರಪಿ ಆಫ್ ಹಿಂದೂಸ್, ಬುದ್ದಿಸ್ಟ್ ಅಂಡ್ ಜೈನಿಸ್,** ಪು ೧೭೪

೩೮. ಭಟ್‌ಸೂರಿ ಕೆ.ಜಿ., ೧೯೯೫: **ಆಂಟಿಕ್ವಿಟೀಸ್ ಇನ್‌ದ ಗವರ್ನಮೆಂಟ್ ಮ್ಯೂಜಿಯಂ,** ಪು.೨೯

೩೯. ಶೇಷಶಾಸ್ತ್ರಿ ಆರ್., ೧೯೮೨: **ಕರ್ನಾಟಕದ ವೀರಗಲ್ಲುಗಳು,** ಪು.೩೦

೪೦. ಶೆಟ್ಟರ್ ಎಸ್. ಗುಂಥಾರ್ ಡಿ. ಮತ್ತು ಸಂಥಿಮಿಕ್(ಸಂ) ೧೯೮೨: **ಮೆಮೋರಿಯಲ್ ಸ್ಟೋನ್ ಎ ಸ್ಟಡಿ ಆಫ್ ಪೀರ್ ಆರಿಜನ್ ಸಿಗ್ನಿಪಿಕೆನ್ಸ್ ಅಂಡ್ ಪೀರಿಟಿ, ಮೇಟಿರಿಯಲ್ ಸ್ಟೋನ್ಸ್ ಇನ್ ಸೌಥ್ ಇಂಡಿಯಾ,** ಪು.೧೯೪-೧೯೬

೪೧. ತಿಪ್ಪೇರುದ್ರಸ್ವಾಮಿ ಹೆಚ್., ೨೦೧೧: **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಪು.೨೪೦.

ಅಧ್ಯಾಯ ಏಳು

ಕೆರೆ ಕಟ್ಟೆಗಳು

ಅಧ್ಯಾಯ ಏಳು

ಕೆರೆ ಕಟ್ಟೆಗಳು

ಸಂಸ್ಕೃತಿಯ ಉಗಮ ಮತ್ತು ವಿಕಾಸಕ್ಕೆ ವ್ಯವಸಾಯವೇ ತಳಹದಿ. ಮಾನವ ಕೃಷಿಯನ್ನು ಹಿಂದಿನಿಂದ ಇಂದಿನವರೆಗೆ ತನ್ನ ಪ್ರಮುಖ ವೃತ್ತಿಯನ್ನಾಗಿಸಿಕೊಂಡು ಬಂದಿದ್ದಾನೆ. ಭಾರತವು ಪ್ರಮುಖವಾಗಿ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಇಂದಿಗೂ ವ್ಯವಸಾಯವೇ ಪ್ರಮುಖವೃತ್ತಿ ಆಗಿದೆ. ಸತತವಾಗಿ ಸಾವಿರಾರು ವರ್ಷಗಳಿಂದ ಮಾನವ ವ್ಯವಸಾಯ ಪದ್ಧತಿಗಳನ್ನು ಸುಧಾರಿಸುತ್ತ ಪ್ರಗತಿ ಕಾಣುತ್ತ ಬರುತ್ತಿದ್ದಾನೆ. ಮೊದಲಿಗೆ ವ್ಯವಸಾಯ ಪ್ರಾರಂಭಿಸಿದಾಗ ಮಳೆಯನ್ನೇ ನಂಬಿದ ಮತ್ತು ವಿಫುಲವಾಗಿ ನೀರು ಸಿಗುವ ಜಾಗವಾಗಿದ್ದ ನದಿಯನ್ನು ಆಶ್ರಯಿಸಿದ್ದನು. ಪರಿಸರದಲ್ಲಿ ಆಗುತ್ತಿದ್ದ ಬದಲಾವಣೆಗಳು ಮತ್ತು ಸಕಾಲದ ಮಳೆಯ ವೈಫಲ್ಯತೆಯು ಅವನನ್ನು ಆಗಿಂದ್ದಾಗ್ಗೆ ಕಷ್ಟಕ್ಕೆ ಒಳಪಡಿಸುತ್ತಿತ್ತು. ಇದರಿಂದ ನೀರನ್ನು ಸಂಗ್ರಹ ಮಾಡಿ, ತನ್ನ ಹತೋಟಿಯಲ್ಲಿಟ್ಟುಕೊಳ್ಳುವ ಪ್ರಯತ್ನದಲ್ಲಿ ತೊಡಗಿದ. ಮಳೆಗಾಲವು ವರ್ಷದಲ್ಲಿ ಕೆಲವು ಮಾಸಗಳು ಮಾತ್ರ ಇರುತ್ತಿತ್ತು. ಆದುದರಿಂದ ಅವನು ಎಲ್ಲಾ ನೀರನ್ನು ಸಂಗ್ರಹಿಸಿಟ್ಟುಕೊಂಡು, ಅಗತ್ಯವಿದ್ದಾಗ ಸಮಪರ್ಕವಾಗಿ ಬಳಸಿಕೊಳ್ಳತೊಡಗಿದನು. ಕೃತಕ ಕುಂಟೆ ಮತ್ತು ಕೆರೆಗಳ ನಿರ್ಮಾಣದಿಂದ ಮಾನವ ತನಗೆ ಬೇಕೆಂದಾಗ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡತೊಡಗಿದನು. ಕೆರೆಗಳ ನಿರ್ಮಾಣ ಪ್ರಯತ್ನವನ್ನು ನವಶಿಲಾಯುಗದ[೧] ಆರಂಭದಿಂದ ಕಾಣಬಹುದು. ಪುರಾತತ್ವ ಆಧಾರಗಳಿಂದ ಕೆರೆ ನೀರಾವರಿ ಪದ್ಧತಿ ಈಜಿಪ್ಟ್ ದೇಶದಲ್ಲಿ[೨] ಮೊದಲ ಬಾರಿಗೆ ಬೆಳಕಿಗೆ ಬಂದಿತೆಂದು ತಿಳಿದುಬಂದಿದೆ. ಭಾರತದಲ್ಲಿ ಈಜಿಪ್ಟ್‌ಗೆ ಸಮಕಾಲೀನವಾಗಿ ಕೃಷಿ ಜೀವನವನ್ನು ಸಿಂಧೂಕೊಳ್ಳದ ಸಂಸ್ಕೃತಿಯ ಜನರು ಉತ್ತಮ ಮಟ್ಟದ ನೀರಾವರಿ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದರು. ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ತಮಿಳುನಾಡಿನಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ವಾಸಿಸುತ್ತಿದ್ದು, ಅವರ ವಾಸಸ್ಥಳಗಳ ಸಮೀಪ ತಗ್ಗು ಪ್ರದೇಶಗಳಲ್ಲಿ ನೀರು ಸಂಗ್ರಹಗಳಾಗುತ್ತಿದ್ದವು. ಆ ನೀರನ್ನು ಕೃಷಿ ಮಾಡಲು ಉಪಯೋಗಿಸುತ್ತಿದ್ದರೆಂದು

ಅಭಿಪ್ರಾಯಪಡಲಾಗಿದೆ. ಆದ್ದರಿಂದ ದಕ್ಷಿಣ ಭಾರತದಲ್ಲಿ ಕೆರೆ ನೀರಾವರಿ ಪದ್ಧತಿಯನ್ನು ಪೂರ್ಣ ಪ್ರಮಾಣದಲ್ಲಿ ಬೃಹತ್‌ಶಿಲಾಯುಗದ ಜನರು ಪ್ರಾರಂಭಿಸಿದ ರೆಂದು ಹೇಳಬಹುದು.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಚಂದ್ರಗುಪ್ತಮೌರ್ಯ ಜುನಾಗಡದಲ್ಲಿ ಕೆರೆಯನ್ನು ನಿರ್ಮಿಸಿ[೩] ನೀರಾವರಿ ವ್ಯವಸ್ಥೆ ಮಾಡಿಸಿದ ಉಲ್ಲೇಖವಿದೆ. ಮೆಗಾಸ್ತನೀಸನ ಬರವಣಿಗೆಯಲ್ಲಿ ಪ್ರಾಂತ್ಯಾಧಿಕಾರಿಗಳು ಭೂಮಿಯನ್ನು ಅಳತೆ ಮಾಡುವುದು, ಮುಖ್ಯ ತೂಬುಗಳಿಂದ ಕಾಲುವೆಗಳಿಗೆ ನೀರು ಹರಿಸುವ ವ್ಯವಸ್ಥೆಯನ್ನು ನೋಡಿಕೊಳ್ಳುವುದು, ಪ್ರತಿಯೊಬ್ಬರಿಗೂ ನೀರು ಸಿಗುವಂತೆ ಮಾಡುವುದು ನೀರಾವರಿ ಇಲಾಖೆಯ ಕರ್ತವ್ಯವಾಗಿತ್ತು. ರಾಜರು, ಶ್ರೀಮಂತರು, ವರ್ತಕರು, ದಂಡನಾಯಕರು, ರಾಜವಂಶದ ಸ್ತ್ರೀಯರು ಮತ್ತು ಗ್ರಾಮಸಂಸ್ಥೆಗಳು ನೀರಾವರಿಗೆ ಕೆರೆ, ಬಾವಿಗಳನ್ನು ಕಟ್ಟಿಸುವುದು ಶ್ರೇಯಸ್ಕರವೆಂದು ನಂಬಿದ್ದರು. ಚಂದ್ರಗುಪ್ತಮೌರ್ಯನ ಪ್ರಾಂತ್ಯಾಧಿಕಾರಿ ವೈಶ್ಯನಾದ ಪುಷ್ಯಗುಪ್ತ ಜುನಾಗಡದಲ್ಲಿಯ ಒಂದು ಸಣ್ಣ ಹೊಳೆಗೆ ಅಡ್ಡಕಟ್ಟೆ ಸರೋವರವನ್ನು ನಿರ್ಮಿಸಿ ಅದಕ್ಕೆ ಸುದರ್ಶನ ಸರೋವರವೆಂದು ಹೆಸರಿಟ್ಟಿರುವುದನ್ನು ಕಾಣಬಹುದು. ಮಹಾಭಾರತದ ಅನುಶಾಸನಿಕ ಪರ್ವದಲ್ಲಿ ಮಹಾರಾಜರಾದವರು ಕೈಗೊಳ್ಳಬೇಕಾದ ಪ್ರಜಾಹಿತಾತ್ಮಕ ಕಾರ್ಯಗಳಲ್ಲಿ ಕೆರೆಗಳ ನಿರ್ಮಾಣದ ಬಗ್ಗೆ ತಿಳಿಸುತ್ತದೆ. ಇದರಲ್ಲಿ ನಾರದನು, ಧರ್ಮರಾಜನಿಗೆ ಎಚ್ಚರಿಕೆಯನ್ನು ನೀಡುತ್ತಾ ಮಳೆಯನ್ನೇ ನಂಬಿಕೊಂಡು ಬೇಸಾಯಕ್ಕೆ ತೊಡಗಬಾರದೆಂತಲೂ ಹಾಗೂ ಕೆರೆ, ಸರೋವರಗಳನ್ನು[೪] ನಿರ್ಮಿಸಿಕೊಳ್ಳಬೇಕೆಂದು ತಿಳಿಸುತ್ತಾನೆ. ಇದರಿಂದ ಪ್ರಾಚೀನ ಭಾರತದಲ್ಲಿ ಹವಾಮಾನವು ಒಂದೇ ರೀತಿಯಾಗಿರದೆ ವಿಭಿನ್ನವಾಗಿತ್ತೆಂದು ಕಂಡುಬಂದಿದೆ.

ಮೌರ್ಯರು ಕರ್ನಾಟಕದ ಉತ್ತರ ಮತ್ತು ಮಧ್ಯಭಾಗಗಳನ್ನು ಆಳಿದರು. ಆ ಪ್ರದೇಶದಲ್ಲಿ ಅವರ ಉತ್ತರಾಧಿಕಾರಿಗಳಾದ ಶಾತವಾಹನರು ಮೌರ್ಯರಿಂದಲೇ ಕೆರೆ ಕಾಲುವೆ ನಿರ್ಮಾಣದ ಕಲೆಯನ್ನು ಬಲ್ಲವರಾಗಿದ್ದಾರೆ.[೫] ಇವರ ಉತ್ತರಾಧಿಕಾರಿಯಾದ ಕದಂಬರ ಕಾಲದಲ್ಲಿ ಕೆರೆಗಳನ್ನು ತಟಾಕಗಳೆಂದು ಕರೆಯುತ್ತಿದ್ದರು. ವೈಜಯಂತಿಪುರ, ತಾಳಗುಂದ (ಸ್ಥಾನಕುಂದೂರು), ಹಲಸಿ, ಚಂದ್ರವಳ್ಳಿಗಳಲ್ಲಿ ದೊಡ್ಡ ಕೆರೆಗಳನ್ನು ನಿರ್ಮಿಸಿದರು. ಚಂದ್ರವಳ್ಳಿಯ ಶಾಸನದಲ್ಲಿ ಅಲ್ಲಿನ ತಟಾಕವನ್ನು ದುರಸ್ತಿಪಡಿಸಿದ ಉಲ್ಲೇಖವಿದೆ. ತುಂಗಭದ್ರ, ವರದ, ಕಾಳಿನದಿಗಳಿಗೆ ಸೂಕ್ತವಾದ ಸ್ಥಳಗಳಲ್ಲಿ ಒಡ್ಡುಗಳನ್ನು ನಿರ್ಮಿಸಿ ಕೃಷಿಗೆ ನೀರಾವರಿ ಸೌಲಭ್ಯ ಒದಗಿಸಲಾಯಿತು. ತಮಿಳುನಾಡಿನ ಉತ್ತರಮೇರೂರು ಗ್ರಾಮದ ವೈರಮೇಘ ತಟಾಕವು ಪ್ರಮುಖವಾದುದು. ಈ ಕೆರೆಯನ್ನು ಪಲ್ಲವರ ಕಾಲದಲ್ಲಿಯೇ ಕಟ್ಟಲಾಗಿದ್ದು, ಕೆರೆಯ ಉಸ್ತುವಾರಿಗೆ 'ಏರಿವಾರಿಯಂ' ಎಂಬ ಸಮಿತಿಯನ್ನು ರಚಿಸಲಾಗಿತ್ತೆಂದು ಚೋಳರ ಉತ್ತರ ಮೇರೂರಿನ[೬] ಶಾಸನ ಹೇಳುತ್ತದೆ. ಚೋಳ ಅರಸ ಕರಿಕಾಲ ಕಾವೇರಿ ಮತ್ತು ಕೊಲೆರುಮ್ ನದಿಗಳ ಸಂಗಮ ಪ್ರದೇಶದಲ್ಲಿ ಅಣೆಕಟ್ಟೆ ನಿರ್ಮಿಸಿದ. ಕ್ರಿ.ಶ ೧೧ನೆಯ ಶತಮಾನದಲ್ಲಿ ಒಂದನೆಯ ರಾಜೇಂದ್ರಚೋಳ

ತಿರುವನ್ವೇಲಿಯಿಂದ ಸು. ೧೫ ಕಿ.ಮೀ. ದೂರದಲ್ಲಿ ಗಂಗೈಕೊಂಡ ಎಂಬ ಬೃಹತ್ ಕೆರೆಯನ್ನು ಕಟ್ಟಿಸಿದ. ಆಂಧ್ರಪ್ರದೇಶದ ತೆಲಂಗಾಣದಲ್ಲಿ ನೀರಾವರಿ ಕೆರೆಗಳು ಅಧಿಕ ಸಂಖ್ಯೆಯಲ್ಲಿದ್ದರಿಂದ ಸಾವಿರ ಕೆರೆಗಳ ಪ್ರದೇಶವೆಂದು[೭] ಕರೆದಿರುವರು. ಕೆರೆಗಳನ್ನು ಕಟ್ಟಿಸುವುದು ಪ್ರಜಾಹಿತಾತ್ಮಕ ಕಾರ್ಯವೆಂದು ಪರಿಗಣಿಸಿ ಈ ಕಾರ್ಯವನ್ನು ಮಾಡಿದವನಿಗೆ ಇಹಲೋಕ ಮತ್ತು ಪರಲೋಕದಲ್ಲಿ ಸದ್ಗತಿಯು ದೊರೆಯುವುದೆಂದು ಪ್ರಾಚೀನ ಭಾರತದ ಜನರ ನಂಬಿಕೆಯಾಗಿತ್ತು. ಕೆರೆ ಕಟ್ಟಿಸುವುದು ಪುಣ್ಯಕೆಲಸ ಎಂದು ಅಂದಿನ ಜನಸಾಮಾನ್ಯರ ನಂಬಿಕೆಯಾಗಿತ್ತು. ಇದರಿಂದ ಬಾವಿ ಕೊಳಗಳನ್ನು ಬಳಸುವ ಮುನ್ನ ವೈದಿಕ ಆಚರಣೆಗಳನ್ನು ನಡೆಸಿ ಋಗ್ವೇದ ಮಂತ್ರಗಳನ್ನು ಉಚ್ಚರಿಸಿ ಮಳೆಯ ಅಧಿದೇವತೆಯಾದ ವರುಣ ಮತ್ತು ಇತರ ದೇವತೆಗಳನ್ನು ಸ್ತುತಿಸಿದ ನಂತರ ಕೊಳ ಮತ್ತು ಬಾವಿಗಳನ್ನು ಉಪಯೋಗಿಸಬೇಕು ಎಂದು ಗ್ರಂಥವು[೮] ತಿಳಿಸುತ್ತದೆ. ಇದಕ್ಕೆ ಅನುಗುಣವಾಗಿ ಕರ್ನಾಟಕದ ಅರಸರು ಕೆರೆ ಕಟ್ಟೆಗಳನ್ನು ನಿರ್ಮಿಸಿ ರಕ್ಷಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿರುವರು.

ಕರ್ನಾಟಕದಲ್ಲಿ ಕೆರೆಗಳ ಇತಿಹಾಸ ಕದಂಬರ ಮೂಲಪುರುಷ್ ಮಯೂರಶರ್ಮನಿಂದ ಆರಂಭವಾಗುತ್ತದೆ. ಇವನು ಚಿತ್ರದುರ್ಗದ ಹತ್ತಿರ ಚಂದ್ರವಳ್ಳಿಯಲ್ಲಿ ಎರಡು ಗುಡ್ಡಗಳ ನಡುವೆ ಕೆರೆಯನ್ನು ಕಟ್ಟಿಸಿದನು. ಇದು ಕ್ರಿ.ಶ.೩೫೦ರಷ್ಟು ಪ್ರಾಚೀನವಾದುದ್ದು ಮತ್ತು ಸಾಮಾಜಿಕ ಕಾರ್ಯದ ಕುರುಹುವಾಗಿ ಕಟ್ಟಲ್ಪಟ್ಟಿದೆ. ಹೊಯ್ಸಳರ ನಂತರ ಬಂದ ವಿಜಯನಗರದ ಅರಸರು ಕೆರೆಕಟ್ಟೆಗಳನ್ನು ಕಟ್ಟಿ ತಮ್ಮ ಪರಿಣತೆಯನ್ನು ಒಯ್ದಿದ್ದಾರೆ. ಹಂಪಿಗೆ ನೀರನ್ನು ಒದಗಿಸುವ ತುರ್ತಾ ಅಣೆಕಟ್ಟು ಇಂದಿಗೂ ಉಪಯುಕ್ತ. ಇಂತಹ ಅಣೆಕಟ್ಟುಗಳನ್ನು ವಿಜಯ ನಗರದ ರಾಜರು ತುಂಗಭದ್ರ ಕಾವೇರಿ ನದಿಗೆ ಕಟ್ಟಿಸಿದರು. ಇವತ್ತಿಗೂ ಅವು ಜನರಿಗೆ ನೀರನ್ನು ಕೊಡುತ್ತವೆ. ಕೃಷ್ಣದೇವರಾಯನಕಾಲ(ಕ್ರಿ.ಶ.೧೫೦೯–೩೦)ಕೆರೆ ಕಟ್ಟುವ ಉನ್ನತ ಕಾಲ ವೆಂದು[೧೦] ಕಂಡುಬಂದಿದೆ.

ಮಳೆಯ ನೀರನ್ನು ಒಂದೆಡೆ ಸಂಗ್ರಹಿಸಿ ನೀರಾವರಿ ಉದ್ದೇಶಕ್ಕೆ ಉಪಯೋಗಿಸುತ್ತಿರುವುದಕ್ಕೆ ಕೆರೆಗಳು ಎಂದು ಕರೆಯುವರು. ಕೆರೆಗಳು ಹರಿಯಾಣ, ಪಂಜಾಬ್, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ, ಒರಿಸ್ಸಾ, ಕರ್ನಾಟಕ ಮತ್ತು ಬಿಹಾರ ರಾಜ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಕೆರೆಗಳಿಂದ ೩.೧ ದಶಲಕ್ಷ ಹೆಕ್ಟೇರು ಭೂಮಿ ನೀರಾವರಿ ಸೌಲಭ್ಯವನ್ನು ಪಡೆದಿದ್ದು, ಇದರಲ್ಲಿ ಅಧಿಕವಾಗಿ ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳು ಪಡೆದಿವೆ.[೧೧] ಕರ್ನಲ್ ಮೆಕಂಜಿ ಕ್ರಿ.ಶ.೧೭೯೯ರಲ್ಲಿ ಭೌಗೋಳಿಕ ಹಾಗೂ ಅಂಕಿ ಅಂಶಗಳ ಸಮೀಕ್ಷೆಯನ್ನು ಆರಂಭಿಸಿ ವಿವರಗಳನ್ನು ಸಂಗ್ರಹಿಸಿರುವನು. ಈ ಸಮೀಕ್ಷೆಯಿಂದ ೧೪೮೦೩ಕ್ಕೂ ಹೆಚ್ಚು ಕೆರೆ

ಮತ್ತು ೮೫೬೩ ಕುಂಟೆಗಳು ಇದ್ದವೆಂದು ತಿಳಿಸಿರುವನು. ಕ್ರಿ.ಶ.೧೮೪೭ರಲ್ಲಿ ಮುಖ್ಯ ಇಂಜಿನಿಯರ್ ಆಗಿದ್ದ ಕರ್ನಲ್‌ಗ್ರೀನ್ ೨೦,೦೦೦ಕ್ಕೂ ಹೆಚ್ಚು ಕೆರೆಗಳಿದ್ದವು ಎಂದು ತಿಳಿಸಿದ್ದಾನೆ. ಕ್ರಿ.ಶ. ೧೮೫೩–೫೪ರ ವರದಿಯ ಪ್ರಕಾರ ಮೈಸೂರು ಪ್ರಾಂತ್ಯದಲ್ಲಿ ೨೬೪೫೦ ಕೆರೆಗಳಿದ್ದು ಅವುಗಳಲ್ಲಿ ೪೧೦೬ ದೊಡ್ಡ ಕೆರೆಗಳು, ೧೩,೭೩೭ ಸಣ್ಣ ಹಾಗೂ ೮೬೦೯ ನೀರಾವರಿಗೆ ಯೋಗ್ಯವಲ್ಲದ ಕೆರೆಗಳು ಕಂಡುಬಂದಿವೆ. ಅಲ್ಲದೇ ೨೭೨೬೯ಚದರಮೈಲಿ ಪ್ರದೇಶದ ಮೈಸೂರು ಪ್ರಾಂತ್ಯದಲ್ಲಿ ಸುಮಾರು ಶೇ.೬೦ರಷ್ಟು ಕೆರೆಗಳಿಂದ ಆವೃತ್ತವಾಗಿತ್ತು. ಕ್ರಿ.ಶ.೧೮೭೧ರ ವರದಿಯಂತೆ ೩೬,೨೬೫ ಕೆರೆಗಳಿದ್ದವು[೧೨] ಎಂದು ಕಂಡುಬಂದಿದೆ. ಫ್ರಾನ್ಸಿಸ್ ಬುಕಾನನ್, ಕ್ರಿ.ಶ. ೧೮೦೦ರ ವೇಳೆಯಲ್ಲಿ ಮೈಸೂರಿಲ್ಲಿ ಪ್ರವಾಸ ಮಾಡಿದವರಲ್ಲಿ ಪ್ರಮುಖನು. ಈತನು ದನಕರುಗಳಿಗೆ ಕುಡಿಯಲು ನೀರು ಒದಗಿಸುವ ಸಣ್ಣ ಜಲಾಶಯವೇ ಕಟ್ಟೆ ಎಂದು, ಭೂಮಿಗೆ ನೀರು ಹಾಯಿಸಲು ಉಪಯೋಗಿಸುವ ದೊಡ್ಡ ಜಲಾಶಯವೇ ಕೆರೆ ಎಂದು ತಿಳಿಸುತ್ತಾನೆ. ಅಲ್ಲದೆ ನೆಲದಲ್ಲಿ ಚೌಕವಾಗಿ ಅಗೆದು ಮಾಡಿದ ಕೆರೆಯ ಹೆಸರು ಕುಂಟೆ ಎಂದು ಹೇಳುತ್ತಾನೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಹವಾಮಾನವು ಮೈಸೂರು ಜಿಲ್ಲೆಯ ಇತರೆ ತಾಲ್ಲೂಕುಗಳ ಹವಾಮಾನವನ್ನು ಅನುಸರಿಸುತ್ತದೆ. ತಾಲ್ಲೂಕಿನಲ್ಲಿ ಬಿಸಿಲಿನ ತಾಪವು ಇತರೆ ತಾಲ್ಲೂಕುಗಳಿಗಿಂತ ಕಡಿಮೆ ಇದ್ದು ಸಾಮಾನ್ಯವಾಗಿ ೨೩ ರಿಂದ ೨೭ ಡಿಗ್ರಿ ಸೇಲ್ಸಿಯಸ್ ಇರುತ್ತದೆ. ಜುಲೈ ತಿಂಗಳಿನಿಂದ ಸೆಪ್ಟೆಂಬರ್‌ವರೆಗೆ ಮಳೆಗಾಲ ಇರುತ್ತದೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ವಾರ್ಷಿಕ ಮಳೆಯ ಸರಾಸರಿ ೮೩೦ ರಿಂದ ೧೦೩೩ ಮಿ.ಮೀಗಳಷ್ಟು ಬೀಳುತ್ತದೆ. ಸಾಧಾರಣವಾಗಿ ಒಣ ಹವೆಯನ್ನು ಹೊಂದಿರುವ ತಾಲ್ಲೂಕಿನಲ್ಲಿ ಹವಾಮಾನಕ್ಕನುಗುಣವಾಗಿ ಕಬ್ಬು, ಭತ್ತ, ಜೋಳ, ರಾಗಿ, ಹುರುಳಿ, ಅಡಿಕೆ, ತೆಂಗು, ಬಾಳೆ, ಶುಂಠಿ, ಮತ್ತು ಹೊಗೆಸೊಪ್ಪು ಬೆಳೆಗಳನ್ನು ಬೆಳೆಯುತ್ತಾರೆ. ಆದರೆ ತಾಲ್ಲೂಕಿನಲ್ಲಿ ಅಧಿಕವಾಗಿ ಜೋಳ ಮತ್ತು ಹೊಗೆಸೊಪ್ಪು ಬೆಳೆಯುವರು. ನೀರಾವರಿ ಸೌಕರ್ಯವಿರುವ ಪ್ರದೇಶಗಳಲ್ಲಿ ಪ್ರಮುಖವಾಗಿ ಕಾವೇರಿ ನದಿಯ ಆಸುಪಾಸಿನಲ್ಲಿ ಬತ್ತ, ಕಬ್ಬು ಮತ್ತು ಬಾಳೆ ಬೆಳೆಯುತ್ತಾರೆ. ಅಡಿಕೆ, ತೆಂಗು, ಹೊಗೆಸೊಪ್ಪು ಬೆಳೆಗೆ ಪ್ರಸಿದ್ಧಿ ಪಡೆದಿರುವುದು. ತಾಲ್ಲೂಕಿನಲ್ಲಿ ಅನೇಕ ಕೆರೆಕಟ್ಟೆ, ಕಾಲುವೆ ಮತ್ತು ಕುಂಟೆಗಳು ಇವೆ. ಬಹುತೇಕ ಬಹುಪಾಲು ಪ್ರಾಚೀನ ಕಾಲದಲ್ಲಿ ನಿರ್ಮಿಸಿದಂತಹವುಗಳೇ ಆಗಿವೆ. ಇವುಗಳಲ್ಲಿ ಅನೇಕ ಕೆರೆ, ಕಾಲುವೆ ಮತ್ತು ಕಟ್ಟೆಗಳು ಇಂದಿಗು ಇಲ್ಲಿಯ ವ್ಯವಸಾಯಗಳಿಗೆ ನೀರನ್ನು ಪೂರೈಸುತ್ತಿದ್ದು ಕೃಷಿ ಕಾರ್ಯಗಳಿಗೆ ಅನುವು ಮಾಡಿಕೊಟ್ಟಿವೆ. ನೀರಾವರಿ ವ್ಯವಸ್ಥೆಗೆ ಪ್ರಾಚೀನ ಮತ್ತು ಮಧ್ಯಕಾಲೀನ ಭಾರತದಲ್ಲಿ ಅನೇಕ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದರೆಂಬುವುದು ಸ್ಪಷ್ಟವಾಗಿದೆ.

ಕೆರೆಕಟ್ಟೆಯ ಪ್ರಾಮುಖ್ಯತೆ

ಪುರಾತನ ಕಾಲದಿಂದ ಭಾರತ ದೇಶದಲ್ಲಿ ಕೆರೆ ಕಟ್ಟೆ ಮತ್ತು ಬಾವಿಗಳನ್ನು ನಿರ್ಮಿಸಿ ಅವುಗಳಿಂದ ಭೂಮಿಯನ್ನು ಮಾಡುತ್ತ ಬಂದಿದ್ದಾರೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರವು ಭೌಗೋಳಿಕ ಪರಿಸರದಿಂದಾಗಿ ಬೇಸಾಯದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕೆರೆ ನೀರಾವರಿ ವ್ಯವಸ್ಥೆಯನ್ನೇ ಅವಲಂಬಿಸಿದೆ. ಚಂಗಾಳ್ವ ಮತ್ತು ಇತರೆ ಆಳ್ವಿಕೆ ಮಾಡಿದ ಅರಸರು ನೀರಾವರಿ ಕಾರ್ಯಗಳಿಗೆ ಮಹತ್ವ ನೀಡಿರುವರು. ಈ ಅವಧಿಯಲ್ಲಿ ನೀರಾವರಿಯ ಪ್ರಯೋಜನವನ್ನು ಪಡೆಯಲೆಂದೆ ಚಿಕ್ಕಪುಟ್ಟ ಕೆರೆ ಕಟ್ಟೆಗಳನ್ನು ನಿರ್ಮಿಸಿ, ಹರಿದುಹೋಗುವ ನೀರಿನ ಸದುಪಯೋಗ ಮಾಡಿಕೊಂಡಿರುವರು.

ಮೊದಲಿಗೆ ಯಾವುದೇ ನೀರಾವರಿ ನಿರ್ಮಾಣ ಕಾರ್ಯವನ್ನು ಪುಣ್ಯಕಾರ್ಯವೆಂದೇ ಭಾವಿಸಲಾಗಿತ್ತು. ಏಕೆಂದರೆ ಅದು ಮಾನವ ಜೀವನದ ಪ್ರಗತಿಗೆ ಮಾತ್ರ ಸೀಮಿತವಾಗಿರದೆ, ಎಲ್ಲಾ ಪ್ರಾಣಿ ಪಕ್ಷಿ, ಕ್ರಿಮಿ ಕೀಟ ಹಾಗೂ ಗಿಡ ಮರಗಳ ಜೀವಿಗಳಿಗೂ ಸಹಕಾರಿಯಾಗಿದೆ. ಆದುದರಿಂದ ಈ ಕಾರ್ಯವನ್ನು ಮಠಮಂದಿರ ನಿರ್ಮಾಣ ಕಾರ್ಯದಷ್ಟೇ ಪವಿತ್ರ ಎಂದು ಭಾವಿಸಲಾಗಿತ್ತು. ಈ ಕಾರ್ಯಗಳು ಮಾನವ ಕಲ್ಯಾಣಕ್ಕೆ ಮತ್ತು ಜಗತ್ತಿನ ಚರಾಚರ ಜೀವಿಗಳಿಗೂ ಬೇಕಾದುದು. ಕೆರೆಗಳ ಗಾತ್ರವು ಅದು ಹೊಂದಿದ ಭೌಗೋಳಿಕ ಪರಿಸರವನ್ನು ಅವಲಂಬಿಸಿತ್ತು. ಪಿರಿಯಾಪಟ್ಟಣ ತಾಲ್ಲೂಕು ಪರಿಸರವನ್ನು ಆಳಿದ ಅರಸರು, ಆಡಳಿತಗಾರರು, ನೂತನ ಕೆರೆಕಟ್ಟೆಗಳನ್ನು ನಿರ್ಮಿಸಿದರಲ್ಲದೆ, ಹಳೆಯ ಹಾಗೂ ಒಡೆದುಹೋದ ಕೆರೆಗಳ ಪುನರ್ ನಿರ್ಮಾಣ ಮಾಡಿರುವರು. ಏಕೆಂದರೆ ಅಂದಿನ ಮಾನವೀಯ ಅವಶ್ಯಕತೆಗಳನ್ನು ಈ ಕೆರೆ ಕಟ್ಟೆಗಳು ಪೂರೈಸುತ್ತಿದ್ದವು. ಮತ್ತು ಅಂದಿನ ದಿನಗಳಲ್ಲಿ ಜನಸಂಖ್ಯೆಯ ಸಮಸ್ಯೆ, ಪರಿಸರ ಮಾಲಿನ್ಯ ಸಮಸ್ಯೆಗಳಿರದೇ ಇದ್ದುದರಿಂದ ಕೆರೆಗಳಲ್ಲಿ ಶೇಖರಿಸಿದ ನೀರನ್ನು ಕುಡಿಯಲು, ಬಟ್ಟೆ ಒಗೆಯಲು, ಸ್ನಾನ ಮಾಡಲು ಮತ್ತಿತರ ಕಾರ್ಯಗಳಿಗೂ ಉಪಯೋಗಿಸಲಾಗುತ್ತಿತ್ತು. ಹೀಗಾಗಿ ಕೆರೆಗಳು ಮಾನವ ಜೀವನದಲ್ಲಿ ಪ್ರಮುಖ ಸ್ಥಾನ ಪಡೆದಿದ್ದವು. ಅಲ್ಲದೆ ಪ್ರತಿಯೊಂದು ಹಳ್ಳಿಗಳಲ್ಲಿ ಒಂದು ಕೆರೆ ಅಥವಾ ಕಟ್ಟೆ ಇದ್ದಿತ್ತು. ಕೆರೆಕಟ್ಟೆಗಳು ಧಾರ್ಮಿಕ ಸಂಪ್ರದಾಯಗಳಿಂದಲು ಕೂಡಿದ್ದವು. ಸಾಮಾನ್ಯವಾಗಿ ದೇವಾಲಯದ ಬಳಿ ಕೆರೆ, ಕಟ್ಟೆ ಅಥವಾ ಪುಷ್ಕರಣೆಗಳು ಇದ್ದುದನ್ನು ಗುರ್ತಿಸಲಾಗಿದೆ.

ಕೆರೆಕಟ್ಟೆಗಳು, ಪ್ರವಾಹ ನಿಯಂತ್ರಣ, ಬರದ ಹತೋಟಿ, ಭೂಮಿಯೊಳಗಿನ ನೀರಿನ ಹೆಚ್ಚಳ, ಪರಿಸರದ ಸೌಂದರ್ಯ ಹಾಗೂ ಶುಚಿತ್ವವನ್ನು ಕಾಪಾಡುತ್ತವೆ. ಮಳೆ ಬಾರದ ವರ್ಷಗಳಲ್ಲಿ ಅನೇಕ ಕೆರೆಕಟ್ಟೆಗಳು ಇಂಗಿ ಹೋಗುತ್ತಿದ್ದವು. ಆದರೆ ಸಾಧಾರಣ ದಿನಗಳಲ್ಲಿ

ರೈತರ ಕೃಷಿ ಚಟುವಟಿಕೆ ಕಾರ್ಯಗಳಿಗೆ ನೆರವಾಗಿವೆ. ಮೀನುಗಾರಿಕೆಯ ಅಭಿವೃದ್ಧಿ ಹಾಗೂ ಆರ್ಥಿಕ ಅಭಿವೃದ್ಧಿಗೂ ಸಹಾಯಕವಾಗಿವೆ. ತಮ್ಮ ಸುತ್ತಮುತ್ತಲ ಪ್ರದೇಶಗಳ ಉಷ್ಣತೆಯನ್ನು ಕಡಿಮೆ ಮಾಡುತ್ತವೆ. ಅಲ್ಲದೆ ಪ್ರಕೃತಿಯನ್ನು ಹಸಿರು ವಲಯವನ್ನಾಗಿಸುತ್ತದೆ. ಕೆರೆಯ ಸುತ್ತ ಬೆಳೆದ ಹಸಿರು ಹುಲ್ಲು ಮಣ್ಣನ್ನು ಹಿಡಿದಿಡುತ್ತದೆ. ಗಾಳಿ ಮತ್ತು ನೀರಿನಿಂದ ಮಣ್ಣು ಕೊಚ್ಚಿ ಹೋಗದಂತೆ ತಡೆಯೊಡ್ಡುತ್ತದೆ. ಮುಖ್ಯವಾಗಿ ಕೆರೆ ಕಟ್ಟೆಗಳು ಜನ ಮತ್ತು ದನಗಳ ಆಹಾರದ ವಿಷಯದಲ್ಲಿ ಹಳ್ಳಿಗಳನ್ನು ಸ್ವಯಂ ಪೂರ್ಣವಾಗಿ ಮಾಡಿದ್ದವು. ರಾಜ್ಯದ ಬಹುಪಾಲು ಸಂಪತ್ತನ್ನು ಉತ್ಪತ್ತಿ ಮಾಡಿದ್ದವು. ಅಭಾವ ಹಾಗೂ ಪ್ರವಾಹಗಳ ವಿರುದ್ಧವೂ ಸಹ ರಕ್ಷಣೆ ಒದಗಿಸಿದ್ದವು. ಒಟ್ಟಿನಲ್ಲಿ ಕ್ರಿ.ಶ.೧೯೦೧ರ ನೀರಾವರಿ ಆಯೋಗದ ಪ್ರಕಾರ ಕೆರೆಗಳು ಜನತೆಯ ಜೀವ ಆಗಿದ್ದವು.

ಕೆರೆಗಳಿಗೆ ನೀರನ್ನು ಒದಗಿಸುವ ಮೂಲಗಳ ಆಧಾರದ ಮೇಲೆ ಕೆರೆಗಳನ್ನು ಈ ರೀತಿಯಲ್ಲಿ ವಿಂಗಡಿಸಬಹುದು. ಅವುಗಳಲ್ಲಿ ಮೊದಲನೆಯದು ನದಿಯಿಂದ ನೀರು ಪಡೆಯುವ ಕೆರೆ. ಈ ವರ್ಗದಲ್ಲಿ ಜೀವಂತ ಅಥವಾ ಸರ್ವಋತು ನದಿಗಳಿಂದ ನೀರು ಪಡೆಯಲಾಗುತ್ತಿತ್ತು. ಎರಡನೆಯದು ಕೇವಲ ಮಳೆಯಿಂದಲೇ ನೀರು ಪಡೆಯುವ ಕೆರೆಗಳು. ಈ ಮಾದರಿಯ ಕೆರೆಗಳಲ್ಲಿ ಕೇವಲ ಮಳೆಯಿಂದ ಬಿದ್ದ ನೀರನ್ನು ಸಂಗ್ರಹಿಸಿಕೊಳ್ಳುವುದು. ಮೂರನೆಯ ವರ್ಗದ ಕೆರೆ ಎಂದರೆ, ಸ್ಥಳೀಯವಾಗಿ ಹರಿದು ಬರುತ್ತಿದ್ದ ಚಿಕ್ಕ ಹಳ್ಳಗಳಿಂದ, ಪಕ್ಕದ ಬೆಟ್ಟದಿಂದ ಮತ್ತು ಮಳೆಗಾಲದಲ್ಲಿ ಹರಿದು ಬರುವ ಮೇಲಿನ ನೀರನ್ನು ಸಂಗ್ರಹಿಸಿ ಅದನ್ನು ಬೇಸಾಯಕ್ಕೆ ಹಾಗೂ ಇತರ ಕಾರ್ಯಗಳಿಗೆ ಉಪಯೋಗಿಸುತ್ತಿದ್ದರು. ಶಾಸನಗಳಲ್ಲಿ ಕೆರೆಗಳನ್ನು ವಿವಿಧ ಹೆಸರುಗಳಿಂದ ಕರೆಯುತ್ತಿದ್ದುದ್ದನ್ನು ಕಾಣಬಹುದು. ಕೆರೆ, ಕಟ್ಟೆ, ಕುಂಟೆ, ಕೊಳ, ಸಮುದ್ರ, ಸರೋವರ, ತಟಾಕ ಮತ್ತು ತೀರ್ಥ ಹೆಸರುಗಳು ಬಳಕೆಯಲ್ಲಿದ್ದವು. ಇದಲ್ಲದೆ ಕೆರೆಗಳನ್ನು ದೇವತೆಗಳ, ಅರಸರ, ಅಧಿಕಾರಿಗಳ, ದಾನಿಗಳ, ರಾಣಿಯರ ಹಾಗೂ ಕಟ್ಟಿದವರ ಹೆಸರುಗಳಿಂದಲೂ ಕರೆಯಲಾಗುತ್ತಿತ್ತು.

ಜಲಾನಯನ ಪ್ರದೇಶವು ಸಾಮಾನ್ಯವಾಗಿ ಕೆರೆಯ ಭಾಗಕ್ಕಿಂತ ಎತ್ತರದಲ್ಲಿರುತ್ತದೆ. ಈ ಪ್ರದೇಶದಲ್ಲಿ ಅಧಿಕ ಮಳೆಯಾಗುತ್ತದೆ ಇಲ್ಲಿ ಬಿದ್ದ ಮಳೆಯ ನೀರು ಹರಿದುಬಂದು ಕೆರೆಯನ್ನು ಸೇರುತ್ತದೆ. ಸಾಮಾನ್ಯವಾಗಿ ಗುಡ್ಡಗಳ ನಡುವಿನ ಕಣಿವೆ ಪ್ರದೇಶಕ್ಕೆ ಜಲಾಯನ ಪ್ರದೇಶವೆಂದು ಹೆಸರು. ಈ ಪ್ರದೇಶದಲ್ಲಿ ಸಂಗ್ರಹಗೊಂಡ ನೀರು ಸಣ್ಣ ಝರಿಯಂತೆ ಹರಿದುಬಂದು ನದಿ ಗಳಾಗಿ ಮಾರ್ಪಾಡಾಗುತ್ತವೆ. ಕೆಲವು ಝರಿಗಳು ಹಳ್ಳಗಳಾಗಿ ಕೆರೆಯ ಪ್ರದೇಶಕ್ಕೆ ಬಂದು ಸೇರುತ್ತವೆ. ಈ ರೀತಿಯಾಗಿ ಹರಿದುಬರುವಂತಹ ನೀರಿಗೆ ಅಡ್ಡಲಾಗಿ ಕಟ್ಟೆಯನ್ನು ನಿರ್ಮಿಸಿ ಕೆರೆಯನ್ನು ಕಟ್ಟುತ್ತಾರೆ. ಕೆರೆಯ ತಳಭಾಗವು ಸಾಮಾನ್ಯ ಭೂಪ್ರದೇಶವಾಗಿದ್ದು ಇಲ್ಲಿ ನೀರು

ಸಂಗ್ರಹಗೊಳ್ಳುತ್ತದೆ. ಈ ಭಾಗಕ್ಕೆ ಚಿಕ್ಕ ಹಳ್ಳಗಳಿಂದ ನೀರು ಹರಿದು ಬಂದು ಶೇಖರಗೊಳ್ಳುತ್ತದೆ. ಹೆಚ್ಚು ಮಳೆಯಾಗಿ ಅಧಿಕ ನೀರು ಬಂದಂತೆ ನೀರಿನ ಹರವು ವಿಸ್ತಾರಗೊಳ್ಳುವುದರೊಂದಿಗೆ ಕೆರೆಯು ತುಂಬುತ್ತಾ ಹೋಗುತ್ತದೆ. ಕನಿಷ್ಠ ಮಟ್ಟದ ನೀರು ನಿಲ್ಲುವ ಕೆರೆಯ ಭೂಭಾಗಕ್ಕೆ ಕೆರೆಯತಳ ಎಂದು ಹೆಸರು. ಕೆರೆ ನೀರಾವರಿ ಅಥವಾ ಕೃಷಿ ಮಾಡಲ್ಪಡುವ ಪ್ರದೇಶಕ್ಕೆ ಆಯಕಟ್ಟು ಅಥವಾ ಅಚ್ಚುಕಟ್ಟು ಪ್ರದೇಶವೆಂದು ಹೆಸರು. ಏರಿ ಕೆರೆಯ ಪ್ರಮುಖ ಭಾಗ. ಏರಿ ಕೆರೆಯಲ್ಲಿ ಸಂಗ್ರಹವಾಗುವ ನೀರನ್ನು ತಡೆಯುತ್ತದೆ. ಕೆರೆಯ ನೀರನ್ನು ನಿಯಂತ್ರಿಸಿ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಹಾಯಿಸುವ ಮಾರ್ಗಕ್ಕೆ ಕಾಲುವೆ ಎಂದು ಹೆಸರು. ಕಾಲುವೆಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದು. ಮೊದಲನೆಯದು ಕೆರೆಗೆ ನೀರು ಬರುವ ಕಾಲುವೆ ಮತ್ತು ಎರಡನೆಯದು ಕೆರೆಯಿಂದ ಆಯಕಟ್ಟು ಪ್ರದೇಶಕ್ಕೆ ನೀರು ಹಾಯಿಸುವ ಕಾಲುವೆಗಳು, ಕೆರೆಯ ನೀರನ್ನು ಹೊರಗೆ ಹೋಗದಂತೆ ತಡೆ ಹಿಡಿದಿಡುವ ಸಾಧನಗಳೇ ತೂಬುಗಳು. ತೂಬುಗಳನ್ನು ಸಾಮಾನ್ಯವಾಗಿ ಕಲ್ಲಿನಿಂದ ಕಟ್ಟಿರುವರು. ಇವು ಎರಡು ಅಥವಾ ನಾಲ್ಕು ಕಂಬಗಳಿಂದ ಕೂಡಿರುತ್ತವೆ. ತೂಬಿನ ಮೇಲ್ಭಾಗದಲ್ಲಿ ಸಾಮಾನ್ಯವಾಗಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿರುತ್ತದೆ. ಇದರಿಂದ ಆ ಕೆರೆಯನ್ನು ವಿಜಯನಗರಕಾಲದ ಕೆರೆಯೆಂದು[೧೩] ಗುರುತಿಸಬಹುದಾಗಿದೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಕೆಲವು ಪ್ರಮುಖ ಕೆರೆಗಳು

ದೇವರಕೆರೆ

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಪ್ರಾಚೀನ ಕೆರೆಗಳಲ್ಲಿ ದೇವರಕೆರೆ ಒಂದು. ಇದು ಕೂರ್ಗಲ್ಲು ಗ್ರಾಮದಲ್ಲಿದೆ. ದೇವರಕೆರೆ ಎಂದರೆ ಮುಖ್ಯವಾಗಿ ಧಾರ್ಮಿಕ ಮತ್ತು ಸಾಮಾಜಿಕ ಉದ್ದೇಶಕ್ಕಾಗಿ ದೇವರ ಹೆಸರಿನಲ್ಲಿ ಕಟ್ಟಲ್ಪಟ್ಟ ಕೆರೆಯಾಗಿದೆ. ಕೆರೆ ಪರಿಸರದಲ್ಲಿ ಪ್ರಾಚೀನ ದೇವಾಲಯಗಳು, ಶಿಲಾಶಾಸನಗಳು, ಕೆರೆಯ ತೂಬಿನ ಬಳಿ ಇರುವ ವೀರಗಲ್ಲು ಶಿಲ್ಪ ಈ ಕೆರೆಯ ಪ್ರಾಚೀನತೆಯನ್ನು ಗುರುತಿಸುವಲ್ಲಿ ಸಹಾಯಕವಾಗಿವೆ. ಕೆರೆಯನ್ನು ಹದಿನಾಲ್ಕನೆ ಶತಮಾನದಲ್ಲಿ ನಿರ್ಮಿಸಲಾಗಿದೆ. ಪಿರಿಯಾಪಟ್ಟಣ ತಾಲ್ಲೂಕಿನ ಅತ್ಯಂತ ದೊಡ್ಡ ಶೈವ ದೇವಾಲಯ ಮಲ್ಲಿಕಾರ್ಜುನದೇವರು. ಇಂದು ಬೆಟ್ಟದಪುರದ ಬೆಟ್ಟದ ಮೇಲಿರುವುದು. ಈ ದೇವರ ಧಾರ್ಮಿಕ ಕಾರ್ಯಗಳಿಗಾಗಿ ಗ್ರಾಮದ ಪ್ರಧಾನ ಮುಖಂಡ ಕೆರೆಯ ನಾಯಕನ ಪುತ್ರರಾದ ಹದಿಹಳೆಯನಾಯಕ ಮತ್ತು ಚಿಕ್ಕಹಳೆಯನಾಯಕರು, ಮಲ್ಲಿಕಾರ್ಜುನ ದೇವರ ನಿತ್ಯ ಪೂಜೆಗಾಗಿ ಉದ್ಯಾನವನ ನಿರ್ಮಿಸಿ ಸಾರ್ವಜನಿಕರಿಗೆ ಮುಕ್ತವಾಗಿಸಿರುವರು. ಈ ಕೆರೆಯ ಕಾಲ ಕ್ರಿ.ಶ. ೧೩೩೯ ಎಂದು ಕೂರ್ಗಲ ಶಾಸನದಿಂದ[೧೪] ತಿಳಿಯಲಾಗಿದೆ. ಅಲ್ಲದೆ

ಇದನ್ನು ೧೮೨ ಗದ್ಯಾಣ ಖರ್ಚು ಮಾಡಿ ಪ್ರತಿ ವರ್ಷ ದೇವಾಲಯಕ್ಕೆ ಪುಷ್ಪಗಳನ್ನು ಒದಗಿಸುವವರಿಗೆ ಮತ್ತು ೧೦೩ ಗದ್ಯಾಣ ಉಪವನವನ್ನು ನಿರ್ವಹಣೆ ಮಾಡುವಂತಹ ವ್ಯಕ್ತಿಗಳಿಗೆ, ಒಟ್ಟು ೨೮೪ ಗದ್ಯಾಣ ಮತ್ತು ದೇವರಕೆರೆಯ ಕೆಳಭಾಗದಲ್ಲಿ ೧೦ ಕೊಳಗದಷ್ಟು ಒಣಭೂಮಿಯನ್ನು ದಾನ ನೀಡಿರುವರು. ಈ ಕೆರೆಯನ್ನು ಇಂದು ಗ್ರಾಮದ ಸರ್ವೆ ನಂಬರ್ ೧೭ರಲ್ಲಿ ಗುರ್ತಿಸಲಾಗಿದೆ. ಇದು ಒಟ್ಟು ೯.೩೪ ಹೆಕ್ಟೇರ್ ಪ್ರದೇಶವನ್ನು ಒಳಗೊಂಡಿದೆ. ಪ್ರಾಚೀನತೆ ಉಳಿಸಿಕೊಂಡಿದ್ದರೂ ಇಂದು ಗ್ರಾಮದ ಜನತೆಯ ವ್ಯವಸಾಯಕ್ಕಾಗಿ ಒತ್ತುವರಿಗೆ ಒಳಪಟ್ಟಿರುತ್ತದೆ. ಈ ಕೆರೆಯನ್ನು ಚಂಗಾಳ್ವರ ಕಾಲದಲ್ಲಿ ಕಟ್ಟಿರಬೇಕು ಎನ್ನುವುದರಲ್ಲಿ ಸಂದೇಹವಿಲ್ಲ. ಅದು ನೀರಾವರಿಗೆ ಉಪಯುಕ್ತವಾಗುವುದರ ಜೊತೆಗೆ ಅನ್ನದಾನಿಮಲ್ಲಿಕಾರ್ಜುನ ದೇವಾಲಯಕ್ಕೆ ನೀರನ್ನು ಪೂರೈಸುತ್ತಿದ್ದಿರಬೇಕು.

ತಟಾಕಕೆರೆ

ಕೆರೆಯು ಚಿಕ್ಕಹೊನ್ನೂರು ಗ್ರಾಮದ ರಂಗನಾಥ ಬೆಟ್ಟದ ತಳಭಾಗದಲ್ಲಿದೆ. ಇದು ಪ್ರಾಚೀನ ಕೆರೆಯಾಗಿದ್ದು ಇಂದಿಗೂ ಸಹ ಉತ್ತಮ ಸ್ಥಿತಿಯಲ್ಲಿ ಮುಂದುವರೆದುಕೊಂಡು ಬಂದಿದೆ. ಈ ಕೆರೆಯನ್ನು ವಿಜಯನಗರದ ತಿಪ್ಪಶೆಟ್ಟಿಯು[೧೫] ಕ್ರಿ.ಶ.೧೪೨೩ರ ವೇಳೆಯಲ್ಲಿ ನಿರ್ಮಿಸಿರುವನೆಂದು ಶಾಸನದಿಂದ ಕಂಡುಬಂದಿದೆ. ಇದನ್ನು ತಿರುಮಲದೇವರ ಸನ್ನಿಧಿಯಲ್ಲಿ ಮತ್ಸ್ಯ, ಕೋರ್ಮ, ವರಹ ಅವತಾರಿಯಾದ ವಿಷ್ಣುವಿನ ಮೂರ್ತಿಯ ಮುಂದೆ ಹಾಗೂ ಬ್ರಾಹ್ಮಣರು, ಸ್ಥಾನೀಕರು, ತಿರುಮಲಾದೇವರ ಸೇವಕರು ಮತ್ತು ಕರಿಯಮಾರಹಳ್ಳಿಯ ವೀರಣ್ಣಯ್ಯ, ಬಲ್ಲಿ–ಮುನಿಬರ ಮುಂದೆ ಕೆರೆಯನ್ನು ತಂದೆ ತಾಯಿಗಳಿಗೆ ಒಳ್ಳೆಯದಾಗಲಿ ಎಂದು ಸಮರ್ಪಿಸಿರುವುದಾಗಿದೆ. ಇಂದಿಗೂ ಉತ್ತಮ ಕೆರೆಯಾಗಿದ್ದು ಪ್ರವಾಸಿಗರನ್ನು ಆಕರ್ಷಿಸುವ ತಾಣವಾಗಿ ಮಾರ್ಪಟ್ಟಿದೆ.

ಇಂದು ಇಂಗಳ ಕೆರೆಯೆಂದು ಕರೆಯಲ್ಪಟ್ಟ ಪ್ರಾಚೀನ ಕೆರೆಯೇ ತಟಾಕ ಕೆರೆಯಾಗಿದೆ. ಈ ಕೆರೆಯಿಂದ ಸುಮಾರು ೫೫.೬೦ ಹೆಕ್ಟರ್‌ಗಳಷ್ಟು ಭೂಮಿ ಮುಳುಗಡೆಯಾಗಿರುವುದು, ಕೆರೆಯು ಎಡದಂಡೆ ಮತ್ತು ಬಲದಂಡೆ ನಾಲೆಯನ್ನು ಹೊಂದಿದ್ದು, ಎಡದಂಡೆಯು ೬.೦೦ ಕಿ.ಮೀ ಉದ್ದ ಹಾಗೂ ಬಲದಂಡೆಯು ೨.೮೦ ಕಿ.ಮೀ ವಿಸ್ತೀರ್ಣತೆಯಿಂದ ಕೂಡಿದೆ. ಕೆರೆಯು ಒಟ್ಟು ೨೪೪.೦೦ ಹೆಕ್ಟರ್ ಭೂಮಿ ಒಳಗೊಂಡಿದ್ದು, ೪೦.೦೮ ಎಂ.ಸಿ.ಎಫ್ ನೀರಿನ ಸಂಗ್ರಹಣೆ ಒಳಗೊಂಡಿದೆ. ಕೆರೆಯ ನೀರನ್ನು ಗ್ರಾಮದ ಸುತ್ತಮುತ್ತಲಿನ ಜನರು ವ್ಯವಸಾಯ, ಬಟ್ಟೆತೊಳೆಯಲು, ಮೀನುಸಾಕಲು ಉಪಯೋಗಿಸುತ್ತಿರುವರು. ಸ್ಥಳೀಯ ಸರ್ಕಾರ ಕೆರೆಗೆ ಅಡ್ಡಕಟ್ಟೆಯನ್ನು ಕಟ್ಟಿ ನೀರನ್ನು ಒಂದೆಡೆ ಸಂಗ್ರಹಿಸಲು ಅವಕಾಶ ಮಾಡಿದೆ. ಇದರಿಂದ ಸುತ್ತಮುತ್ತಲಿನ ಜನ ನೀರನ್ನು ಉಪಯೋಗಿಸಿಕೊಂಡು ವರ್ಷಕ್ಕೆ ಎರಡು ಅಥವಾ ಮೂರು

ಬೆಳೆ ತೆಗೆದು ಆರ್ಥಿಕವಾಗಿ ಪ್ರಬಲರಾಗುತ್ತಿರುವರು. ಕೆರೆಯಲ್ಲಿ ಮೀನು ಸಾಕಾಣಿಕೆ ಮತ್ತು ವಿಹಾರಕ್ಕೆ ದೋಣಿ ಬಿಟ್ಟು ಜಲಕ್ರೀಡೆಗೆ ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ ಒಂದೆಡೆ ಕೆರೆ ರಕ್ಷಣೆ ಮಾಡುವುದರ ಮೂಲಕ ಆರ್ಥಿಕ ಚಟುವಟಿಕೆಗೆ ಉಪಯೋಗಿಸಿಕೊಳ್ಳಲಾಗಿದೆ.

ವೀರಾಂಬುಧಿಕೆರೆ

ಇಂದು ತಾವರೆಕೆರೆ ಎಂದು ಕರೆಯುತ್ತಿರುವರು. ಇದು ಪ್ರಾಚೀನ ಕೆರೆ ಆಗಿದ್ದು ಸನ್ಯಾಸಿಪುರ ಗ್ರಾಮ ಸರ್ವೆ ನಂಬರ್ ೪೬ರಲ್ಲಿ ಕಂಡುಬಂದಿದೆ. ಕೆರೆಯ ಅಚ್ಚುಕಟ್ಟು ಪ್ರದೇಶ ಒಟ್ಟು ೪.೦೦ ಹೆಕ್ಟೇರ್‌ನಲ್ಲಿ ಹರಡಿದ್ದು, ೫,೭೫೦ ಎಂ.ಸಿ.ಎಫ್ ನೀರಿನ ಸಂಗ್ರಹಣೆ ಒಳಗೊಂಡಿರುವುದು. ಹಾಗೆಯೇ ೪.೫೦ ಕೆರೆಯ ಅಂಗಳದ ವಿಸ್ತೀರ್ಣತೆಯಿಂದ ಕೂಡಿದೆ. ಸನ್ಯಾಸಿಪುರ ಗ್ರಾಮವು ಪ್ರಾಚೀನ ಅಗ್ರಹಾರವಾಗಿದ್ದು ಬ್ರಾಹ್ಮಣ ಸಂಕೇತಿಗಳು ವಾಸವಾಗಿದ್ದರೆಂದು ಅಭಿಪ್ರಾಯವಿದೆ. ಪ್ರಾಚೀನ ಕಾಲದಲ್ಲಿ ವೀರಾಂಬುಧಿ ಗ್ರಾಮವೆಂದು ಹೆಸರಾಗಿದ್ದಿತ್ತು. ಮೂಲವಾಗಿ ಈ ಗ್ರಾಮದಲ್ಲಿ ಒಂಟಿಕೊಪ್ಪಲು ಸಿದ್ಧಾಂತಿಗಳು ನೆಲೆಸಿದ್ದರು. ಇವರ ಮೂಲಕ ಪ್ರಥಮ ಪಂಚಾಂಗ ಪ್ರಕಟಣೆಗೊಳ್ಳಲು ಪ್ರಾರಂಭಿಸಿ ಇಂದು ಮೈಸೂರು ಪಂಚಾಂಗವೆಂಬ ಹೆಸರಿನಲ್ಲಿ ಪ್ರಕಟಗೊಳ್ಳುತ್ತಿದೆ. ಮತ್ತು ಸಿದ್ಧಾಂತಿಗಳ ಮೂಲ ಪ್ರದೇಶ ಆಂಧ್ರಪ್ರದೇಶ. ಇವರೆ ಪಂಚಾಗದ ಸೃಷ್ಟಿಕರ್ತರು ಎಂದು ರಾಜೇಶ್ವರಿ, ರಮೇಶ್‌ರವರ ಅಭಿಪ್ರಾಯ. ವೀರಾಂಬುಧಿ ಕೆರೆ ಇಂದು ಸುತ್ತಲಿನ ಹೊಲ ಗದ್ದೆಗಳಿಗೆ ನೀರುಣಿಸುವುದರ ಮೂಲಕ ವ್ಯವಸಾಯಕ್ಕೆ ಸಹಾಯಕವಾಗಿದೆ. ಯದುವಂಶಕೆ ಸೇರಿದ ರಾಜಾಧಿರಾಜ, ರಾಜಪರಮೇಶ್ವರ, ಶ್ರೀ ವೀರಪ್ರತಾಪ ಶ್ರೀಕಂಠದೇವ ಮಹಾಅರಸರ ಪುತ್ರರಾದ ಶ್ರೀವೀರವೀರೇಂದ್ರ ಮಹಾಅರಸರು ಪಟ್ಟಾಭಿಷಿಕ್ತರಾದ ಸ್ಥಳವಾದ ವೀರಾಂಬುಧಿಯನ್ನು ಅಗ್ರಹಾರವನ್ನಾಗಿ[೧೬] ಪರಿವರ್ತಿಸಿ ನರಸಿಂಹ ಭಟ್ಟರಿಗೆ ತಾಮ್ರಶಾಸನವನ್ನು ವೀರೇಶ್ವರದೇವರ ಸನ್ನಿಧಾನದಲ್ಲಿ ನೀಡಿದೆ. ಶಾಸನದ ಕಾಲ ಕ್ರಿ.ಶ. ೧೫೬೮. ಈ ಪ್ರಾಚೀನ ವೀರಾಂಬುಧಿಕೆರೆ ಅಥವಾ ಗ್ರಾಮದ ಪ್ರಮುಖ ನಾಲ್ಕು ಸೀಮೆಗಳೆಂದರೆ, ಪೂರ್ವಕ್ಕೆ ಹಿಟ್ನೆಹೆಬ್ಬಾಗಿಲು, ಉತ್ತರಕ್ಕೆ ಕಗ್ಗುಂಡಿ, ಪಶ್ಚಿಮಕ್ಕೆ ಆಲದಮರ ಮತ್ತು ದಕ್ಷಿಣಕ್ಕೆ ಹೆಬ್ಬಂಡೆ ಇದೆ. ಈ ನಾಲ್ಕು ಸೀಮೆಗಳಿಗೆ ಇಂದು ಸಹ ಕೆರೆಯ ನೀರು ಅನುಕೂಲಕರವಾಗಿದೆ.

ವೀರಾಂಬುಧಿಕೆರೆ

ಚಂಗಾಳ್ವ ಮನೆತನದಲ್ಲಿ ಬೆಟ್ಟದಪುರ ಒಂದು ಅಗ್ರಹಾರ ಮತ್ತು ಶೈವ ಧಾರ್ಮಿಕ ಸ್ಥಳವಾಗಿತ್ತೆಂದು ಅಲ್ಲಿ ದೊರೆತಿರುವ ಶಾಸನ, ವೀರಗಲ್ಲು, ದೇವಾಲಯಗಳಿಂದ ಕಂಡುಬಂದಿದೆ. ವೀರಾಂಬುಧಿಕೆರೆಯನ್ನು ವೀರರಾಜ ಒಡೆಯರಿಗೆ ಒಳ್ಳೆಯದಾಗಬೇಕೆಂದು ಅವರ ಪುತ್ರರಾದ ಹಿರಿಯೊಡೆಯರು ಫಲಪೂಜೆಗೆ ವೀರಾಂಬುಧಿಕೆರೆಯನ್ನು ಉಳಿಯುವಂತಹ ರೂಪದಲ್ಲಿ

ನೀಡಿರುವರು, ಅಲ್ಲದೆ ತಾಯಿ ವಲ್ಲಭಮ್ಮಳಿಗೆ ಒಳ್ಳೆಯದಾಗಬೇಕೆಂದು ದಾನ ನೀಡಲಾಗಿದೆ. ಶಾಸನದಲ್ಲಿ ಕೆರೆಯನ್ನು ಪಿರಿಯಸಮುದ್ರವೆಂದು ಹೆಸರಿಸಲಾಗಿದೆ. ಕೆರೆಯು ಬೆಟ್ಟದಪುರ ಗ್ರಾಮದಲ್ಲಿದ್ದು ಕ್ರಿ.ಶ.೧೫೮೬ರ ಕಾಲದ್ದಾಗಿದೆ. ಇಂದು ಕೆರೆಯ ಸುತ್ತ ಗಿಡಗಂಟಿಗಳು ಬೆಳೆದಿದ್ದು ಸಂಪೂರ್ಣವಾಗಿ ಅಶುದ್ಧಿಗೊಂಡಿದೆ. ಕೆರೆಯ ನೀರನ್ನು ಗೃಹಪಯೋಗಿ ಕಾರ್ಯಕ್ಕೆ ಬಳಸಲು ಯೋಗ್ಯವಾಗಿಲ್ಲ. ಸ್ಥಳೀಯರ ಪ್ರಕಾರ ಪ್ರಾಚೀನ ಕಾಲದಿಂದ ಇತ್ತೀಚಿನವರೆಗೂ ಕೆರೆಯ ನೀರನ್ನು ಧಾರ್ಮಿಕ, ಸಾಮಾಜಿಕ ಕಾರ್ಯಗಳಿಗೆ ಉಪಯೋಗಿಸುತ್ತಾ ಬಂದಿದ್ದು ಇಂದು ವ್ಯವಸಾಯಕ್ಕೆ ನೀರನ್ನು ಉಪಯೋಗಿಸಲು ಸಾಧ್ಯವಾಗುತ್ತಿಲ್ಲವೆಂದು ಅಸಂತೋಷ ವ್ಯಕ್ತಪಡಿಸುವರು. ಒಟ್ಟಿನಲ್ಲಿ ಅಸಂತೋಷವಿದ್ದರು ಐತಿಹಾಸಿಕ ಕೆರೆಯೆಂದು ಧಾರ್ಮಿಕ ಮನೋಭಾವ ಇಟ್ಟುಕೊಂಡಿರುವರು.

ಗಳಗನಕೆರೆ

ಈ ಕೆರೆ ಹಂಡಿತವಳ್ಳಿ ಗ್ರಾಮ ಪಂಚಾಯಿತಿಯಲ್ಲಿದ್ದು ಗಳಗನಕೆರೆ ಗ್ರಾಮದಲ್ಲಿ ಇದೆ. ಗಳಗನ ಹೆಸರಿನಿಂದ ಗಳಗನಕೆರೆ ಎಂಬ ಹೆಸರು ಬಂದಿದೆ. ಈ ಕೆರೆಯು ಪ್ರಾಚೀನ ಕೆರೆಯಾಗಿದ್ದು ಸರ್ವೆ ನಂಬರ್ ೮೮ರಲ್ಲಿ ಕಂಡುಬಂದಿದೆ. ಕೆರೆಯ ಅಚ್ಚುಕಟ್ಟು ಪ್ರದೇಶ ಒಟ್ಟು ೬.೦೦ ಹೆಕ್ಟೇರ್ ಹೊಂದಿದ್ದು, ೦.೫೨೦ ಎಂ.ಸಿ.ಎಫ್ ನೀರಿನ ಸಂಗ್ರಹಣೆ ಹೊಂದಿದೆ. ಈ ಕೆರೆಯ ಅಂಗಳದ ಒಟ್ಟು ವಿಸ್ತೀರ್ಣ ೨.೦೦. ಕೆರೆಯ ಬಗ್ಗೆ ಶಾಸನದಲ್ಲಿ[೧೮] ಉಲ್ಲೇಖವಿದ್ದರೂ ಯಾವುದೇ ಮಾಹಿತಿಗಳು ದೊರೆಯುವುದಿಲ್ಲ. ಐತಿಹಾಸಿಕವಾಗಿ ವಿಶ್ಲೇಷಿಸಿದಾಗ ಗ್ರಾಮದ ಮುಖಂಡ ಗಳಗ ಎಂಬುವನು ಕೆರೆಯನ್ನು ನಿರ್ಮಿಸಿರುವನೆಂದು ಅಭಿಪ್ರಾಯ. ಐತಿಹ್ಯದ ಪ್ರಕಾರ ಗ್ರಾಮದ ಸುತ್ತಲಿನಲ್ಲಿ ಅಧಿಕ ಪ್ರಮಾಣದ ಅರಣ್ಯವಿದ್ದಿತ್ತು. ಈ ಅರಣ್ಯದಲ್ಲಿ ಅತಿ ಎತ್ತರವಾಗಿ ಉತ್ತಮವಾದ ಬಿದಿರು ಅಥವಾ ಗಳಗಳು ಕಂಡುಬರುತ್ತಿದ್ದವು. ಬಿದಿರಿನ ತಳಭಾಗದಲ್ಲಿ ಒಂದು ಕೆರೆ ಇದ್ದಿತು. ಇದರಿಂದ ಅಲ್ಲಿದ್ದ ಬಿದಿರು ಅಥವಾ ಗಳಗಳಿಂದ ಗಳಗನ ಕೆರೆ ಎಂಬ ಹೆಸರು ಬಂದಿರುವುದು ಎಂದು ಸ್ಥಳೀಯರ ಅಭಿಪ್ರಾಯ. ಒಟ್ಟಿನಲ್ಲಿ ಕೆರೆ ಹದಿನಾರನೆಯ ಶತಮಾನಕ್ಕೆ ಸೇರಿದ್ದಾಗಿದೆ.

ಸಿಂಗಾರ ತೋಟದಕೆರೆ

ಪಿರಿಯಾಪಟ್ಟಣ ತಾಲ್ಲೂಕಿನ ಪ್ರಾಚೀನ ಕೆರೆಗಳಲ್ಲಿ ಸಿಂಗಾರತೋಟ ಕೆರೆ ಪ್ರಮುಖವಾಗಿದೆ. ಶಾಸನ ಉಲ್ಲೇಖಿತ ಕೆಲವೇ ಕೆರೆಗಳಲ್ಲಿ ಇದು ಒಂದು. ಕೆರೆಯು ಬೆಟ್ಟದಪುರ ಹತ್ತಿರದ ಚಿಕ್ಕಾಪುರದಲ್ಲಿದೆ. ಈ ಕೆರೆಯ ಸಮೀಪ ಕೋಟೆಯೊಂದು ನಿರ್ಮಾಣಗೊಂಡಿದ್ದು, ಈಶಾನ್ಯ ಭಾಗಕ್ಕೆ ಇತ್ತೆಂದು ಹೇಳಲಾಗಿದೆ. ಆದರೆ ಕೋಟೆಯ ಯಾವುದೇ ಅವಶೇಷಗಳು ಕಂಡು ಬರುವುದಿಲ್ಲವಾದರೂ ಆ ಮಾರ್ಗದಲ್ಲಿಯೇ ಅದರ ನೆನಪಿನಾರ್ಥವಾಗಿ ಇಂದಿಗೂ ಕೋಟೆ

ಬೀದಿ ಎಂದು ಕರೆಯುವ ವಾಡಿಕೆ ಇದೆ. ಕೋಟೆಯ ಚಾರಿತ್ರ್ಯವನ್ನು ಉಳಿಸುವ ಸಲುವಾಗಿ ಸ್ಥಳೀಯರು ಇಂದಿಗೂ ಐತಿಹಾಸಿಕ ಕುರುಹಾಗಿ ಕೆರೆಯೊಂದಿಗೆ ಕೋಟೆಯನ್ನು ನೆನಪಿಸಿಕೊಳ್ಳುತ್ತಾರೆ.

ಇಂದಿನ ಬೆಟ್ಟದಪುರ ಬೆಟ್ಟದ ಪ್ರಾಚೀನ ಹೆಸರು ಕುಡುಕೂರು. ಇಲ್ಲಿಯ ದೇವರು ಕುಡುಕೂರಿನ ಮಲ್ಲಿಕಾರ್ಜುನ. ಈ ದೇವರ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ಕಾಗಿ ಅಂದಿನ ಚಿಕ್ಕಾಪುರದಲ್ಲಿ ಒಡೆಯ ಎಂಬ ಹೆಸರಿನ ಮುಖಂಡನು ಸಿಂಗಾರತೋಟದ ಕೆರೆಯನ್ನು[೧೯] ನಿರ್ಮಿಸಿರುವನು. ಇದು ಹದಿನಾರನೆಯ ಶತಮಾನಕ್ಕೆ ಸೇರಿದ್ದಿತ್ತೆಂದು ಶಾಸನದಿಂದ ಕಂಡುಬಂದಿದೆ. ಕುಡುಕೂರಿನ ಮಲ್ಲಿಕಾರ್ಜುನ ದೇವರ ದಿನ ನಿತ್ಯ ಧಾರ್ಮಿಕ ಪೂಜಾ ಕಾರ್ಯಗಳಿಗೆ ಪುಷ್ಪಗಳನ್ನು ಒದಗಿಸುವುದಕ್ಕಾಗಿ ತೋಟವನ್ನು ನಿರ್ಮಿಸಲಾಗಿದೆ. ತೋಟದ ನಿರ್ವಹಣೆಗೆ ನೀರನ್ನು ಒದಗಿಸುವುದಕ್ಕೆ ಸಮೀಪದಲ್ಲಿಯೇ ಸಿಂಗಾರ ತೋಟದ ಕೆರೆಯನ್ನು ಒಡೆಯರು ನಿರ್ಮಿಸಿರುವರು ಮತ್ತು ಇದರ ನಿರ್ವಹಣೆಗೆ ಒಣಗಿ ಹೋಗಬಾರದೆಂದು ಸುಮಾರು ೨೦ ಗದ್ಯಾಣಗಳಷ್ಟು ಹೊನ್ನುಗಳನ್ನು ಖರ್ಚುಮಾಡಿ ಕೆರೆಯನ್ನು ನಿರ್ಮಿಸಿರುವುದಾಗಿದೆ. ಇದಕ್ಕಾಗಿ ನಾಲ್ಕು ಖಂಡುಗದಷ್ಟು ಒಣ ಭೂಮಿಯನ್ನು ಅಂಕಪ್ಪ, ಕವನಮಲ್ಲಪ್ಪ, ದೇವಣ್ಣ, ಚೆನ್ನಮಲ್ಲಪ್ಪ ಮತ್ತು ಕಲ್ಲಪ್ಪರಿಂದ ಖರೀದಿಸಲಾಗಿದೆ. ಹಾಗೆಯೇ ಮಲ್ಲಿಕಾರ್ಜುನ ದೇವಾಲಯದ ಸ್ಥಾನಿಕರಿಂದಲೂ ಭೂಮಿಯನ್ನು ಖರೀದಿಸಲಾಗಿದೆ. ಈ ಪ್ರದೇಶದ ಪೂರ್ವದಲ್ಲಿ ಘಂಟೆಮಲ್ಲಿನಾಥನಿಗೆ ಸಂಬಂಧಿಸಿದ ಒಣ ಭೂಮಿಯು, ಪೂರ್ವಕ್ಕೆ ಸಾತಮಾಮಲಾಳ್ವನಿಗೆ ಸಂಬಂಧಿಸಿದ ಒಣ ಭೂಮಿಯಾಗಿರುವುದಾಗಿದೆ. ಈ ರೀತಿಯಾಗಿ ಹಾರುವೀಥಿಯ ಸ್ಥಳದಲ್ಲಿ ಅರವೀಟಿಗೆಯನ್ನು ನಿರ್ಮಿಸಿ ಕವಿಳಾಸದವರಿಗೆ ನಾಲ್ಕು ಖಂಡುಗ ಭೂಮಿ ಹಾಗೂ ಈ ಅರವೀಟಿಗೆಯನ್ನು ರಕ್ಷಿಸಿಕೊಂಡು ಬರಬೇಕೆಂದು ಶಾಸನದಲ್ಲಿ ನಿರ್ದೇಶಿಸಲಾಗಿದೆ. ಆದರೆ ಇಂದು ಕೆರೆಯ ಸುತ್ತ ಮುತ್ತ ಗಿಡಗಂಟಿಗಳು ಬೆಳೆದು ಅಶುದ್ಧಿಗೊಂಡಿದೆ.

ಆಪುಗೊಂಡನಹಳ್ಳಿಕೆರೆ

ಕೆರೆಯು ಇಂದಿನ ಅಲ್ಪನಾಯಕನಹಳ್ಳಿ ಗ್ರಾಮದಲ್ಲಿ ಕಂಡುಬಂದಿದೆ. ಪ್ರಾಚೀನ ಕೆರೆಯಾದರು ಇದರ ಬಗ್ಗೆ ಯಾವುದೇ ಸರ್ಕಾರಿ ದಾಖಲೆ ಮತ್ತು ಶಾಸನಗಳಲ್ಲಿ ಉಲ್ಲೇಖವಿಲ್ಲ. ಸುಮಾರು ಎಂಟು ಹೆಕ್ಟೇರ್‌ಗಳಷ್ಟು ವಿಸ್ತೀರ್ಣತೆಯಿಂದ ಕೂಡಿದ್ದು ಸುತ್ತಮುತ್ತಲಿನ ಹೊಲಗಳಿಗೆ ನೀರನ್ನು ಉಣಿಸುತ್ತಿದೆ. ಕೆರೆಗೆ ಮಳೆಗಾಲದಲ್ಲಿ ಮಳೆಯ ನೀರು ಹರಿದು ಬಂದು ಸಂಗ್ರಹಗೊಳ್ಳುವುದು. ನಂತರ ಬೇಸಿಗೆಯ ವೇಳೆಗೆ ನೀರು ಬಹುತೇಕ ಖಾಲಿಯಾಗುವುದಾಗಿದೆ. ಕೆರೆಯು ಬೆಟ್ಟದಪುರದ ಪಶ್ಚಿಮ ದಿಕ್ಕಿನಲ್ಲಿರುವುದು. ಇಂದು ಕೆರೆಯಲ್ಲಿ ಹೂಳು ತುಂಬಿರುವುದರಿಂದ ಕೆರೆಯ ನೀರನ್ನು ಹೆಚ್ಚು ಸದುಪಯೋಗಿಸಿಕೊಳ್ಳಲು ಕಷ್ಟಕರ ಎಂದು ಗ್ರಾಮಸ್ಥರ ಹೇಳಿಕೆ. ಕೆರೆಯಲ್ಲಿ ಇರುವ ಹೂಳನ್ನು ಸ್ವಚ್ಛಗೊಳಿಸಿದರೆ ಇದರ ಉಪಯೋಗವನ್ನು ಉತ್ತಮವಾಗಿ ಪಡೆಯಬಹುದು.

ಇಲ್ಲದಿದ್ದರೆ ಗ್ರಾಮಾಸ್ಥರು ಕೆರೆಯನ್ನು ಒತ್ತುವರಿ ಮಾಡಿಕೊಳ್ಳುವುದಕ್ಕೆ ದಾರಿಯಾಗುವುದಾಗಿದೆ. ಕೆರೆಯ ಬಗ್ಗೆ ಬೆಟ್ಟದಪುರ ಶಾಸನದಲ್ಲಿ ಅಪ್ಪುಗೊಂಡನಹಳ್ಳಿ ಕೆರೆ[೨೦] ಎಂದು ಉಲ್ಲೇಖಿಸಲಾಗಿದೆ. ಮತ್ತು ಕೆರೆಯ ಕಾಲ ಕ್ರಿ.ಶ.೧೬ನೆಯ ಶತಮಾನ.

ದೊಡ್ಡಕೆರೆ

ಪಿರಿಯಾಪಟ್ಟಣ ಐತಿಹಾಸಿಕ ಮತ್ತು ಜಾನಪದೀಯವಾಗಿಯೂ ಚಂಗಾಳ್ವರ ಪ್ರಮುಖ ಆಡಳಿತ ಕೇಂದ್ರ. ಇಲ್ಲಿ ದೊರೆತಿರುವ ಶಾಸನ, ವೀರಗಲ್ಲು, ದೇವಾಲಯ ಮತ್ತು ಕೋಟೆ ಪ್ರಮುಖ ಆಧಾರಗಳಾಗಿವೆ. ಇಲ್ಲಿರುವ ದೊಡ್ಡಕೆರೆಯು ಪ್ರಾಚೀನತೆಯನ್ನು ಉಳಿಸಿಕೊಂಡು ಪಿರಿಯಾಪಟ್ಟಣ ಜನತೆಯ ರೈತರಿಗೆ ಜೀವನಾಡಿಯಾಗಿದೆ. ದಂಡೆಯಲ್ಲಿ ಪ್ರಾಚೀನ ಆಂಜನೇಯ ದೇವಾಲಯವಿದೆ. ದೇವರ ಮತ್ತು ಧಾರ್ಮಿಕ ಕಾರ್ಯಗಳಿಗೆ ಕೆರೆಯ ನೀರನ್ನು ಉಪಯೋಗಿಸುತ್ತಾ ಬರುತ್ತಿರುವರು. ಕೆರೆಯು ಉತ್ತಮವಾಗಿದ್ದು ಸ್ಥಳೀಯ ಜನತೆ ಬಟ್ಟೆ ತೊಳೆಯಲು ಮತ್ತು ವ್ಯವಸಾಯಕ್ಕೆ ಉಪಯೋಗಿಸುತ್ತಾ ಬರುತ್ತಿರುವರು. ಚಂಗಾಳ್ವರ ಆಳ್ವಿಕೆಯ ಅವಧಿಯಲ್ಲಿ ಇದ್ದ ದೊಡ್ಡಯ್ಯ ಗ್ರಾಮದ ಮುಖಂಡನಾಗಿದ್ದಲ್ಲದೆ, ಜೈನ ಧರ್ಮ ಪ್ರಮುಖ ದೊಡ್ಡ ಧರ್ಮವಾಗಿತ್ತೆಂದು ಹೇಳುವರು. ಇದರಿಂದಾಗಿ ಜೈನ ಕವಿ ದೊಡ್ಡಯ್ಯನ ಹೆಸರಿನಿಂದ ಈ ಕೆರೆಗೆ ದೊಡ್ಡಕೆರೆ ಎಂದು ಕರೆಯುತ್ತಿರುವರು. ಸರ್ಕಾರಿ ದಾಖಲೆಯ ಪ್ರಕಾರ ಕೆರೆಯು ಸರ್ವೆ ನಂ.೩ರಲ್ಲಿ ಕಂಡುಬಂದಿದೆ. ಮತ್ತು ೧೮೦.೧೯ ಹೆಕ್ಟರ್ ಭೂಮಿಯನ್ನು ಒಳಗೊಂಡಿದೆ. ಈ ಕೆರೆಯನ್ನು ಚಂಗಾಳ್ವರ ಕಾಲದಲ್ಲಿ ಕಟ್ಟಿರಬೇಕು ಎನ್ನುವುದರಲ್ಲಿ ಸಂದೇಹವಿಲ್ಲ. ಅದು ನೀರಾವರಿಗೆ ಉಪಯುಕ್ತವಾಗುವುದರ ಜೊತೆಗೆ ಚಂಗಾಳ್ವ ರಾಜಧಾನಿ ಪಿರಿಯಾಪಟ್ಟಣಕ್ಕೆ ನೀರನ್ನು ಪೂರೈಸುತ್ತಿದ್ದಿರಬೇಕು. ಕೆರೆಯಲ್ಲಿ ಇರುವ ಹೂಳನ್ನು ತೆಗೆದು ಶುದ್ಧಿಗೊಳಿಸಿದರೆ ಪ್ರಾಚೀನ ಜೈನ ಕವಿಯಾದ ದೊಡ್ಡಯ್ಯನ ಹೆಸರನ್ನು ಶಾಶ್ವತವಾಗಿ ನೆನಪಿಸಿಕೊಳ್ಳುವುದರ ಮೂಲಕ ಪ್ರಾಚೀನ ಸ್ಮಾರಕವನ್ನು ರಕ್ಷಿಸಬಹುದು.

ತಾವರೆಕೆರೆ

ಈ ಕೆರೆಯು ಬೆಟ್ಟದಪುರ ಗ್ರಾಮದಲ್ಲಿ ಕಂಡುಬರುವ ಕೆರೆಗಳಲ್ಲಿ ಪ್ರಮುಖವಾಗಿದ್ದು ಇಂದಿಗೂ ಉತ್ತಮ ಸ್ಥಿತಿಯಲ್ಲಿದೆ. ಗ್ರಾಮದಿಂದ ಪಶ್ಚಿಮಕ್ಕೆ ಕುಶಾಲನಗರ ರಸ್ತೆಯಲ್ಲಿದೆ. ಮತ್ತು ಸುಮಾರು ೩೦ ಎಕರೆ ಪ್ರದೇಶದಲ್ಲಿ ವಿಸ್ತರಿಸಿಕೊಂಡಿದೆ. ಬೆಟ್ಟದಪುರ ಮತ್ತು ಕುಶಾಲನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯೇ ಏರಿ. ಕೆರೆಯಲ್ಲಿ ಹೆಚ್ಚಿನ ಸಂಖ್ಯೆಯ ತಾವರೆಗಿಡಗಳು ಬೆಳೆದಿರುವುದರಿಂದ ತಾವರೆಕೆರೆ ಹೆಸರು ಬಂದಿದೆ. ಕೆರೆಗೆ ನೀರಿನ ಮೂಲ ಅಂತರ್ಜಲ ಮತ್ತು ಮಳೆಗಾಲದಲ್ಲಿ ಬೀಳುವ ಮಳೆಯ ನೀರು. ಪೂರ್ವ, ಪಶ್ಚಿಮ ಮತ್ತು ದಕ್ಷಿಣದ ಇಳಿಜಾರು ಪ್ರದೇಶದಲ್ಲಿ ಬಿದ್ದ ಮಳೆಯ ನೀರು ಹರಿದು ಬಂದು ಕೆರೆಯಲ್ಲಿ ಸಂಗ್ರಹಗೊಳ್ಳುವುದು.

ಉತ್ತರ ದಿಕ್ಕಿನಲ್ಲಿ ಮಾತ್ರ ಸುಮಾರು ೧೫ ರಿಂದ ೨೦ ಅಡಿ ಎತ್ತರದ ಏರಿಕಟ್ಟೆಯನ್ನು ಕಟ್ಟಿ ಭದ್ರಗೊಳಿಸಿರುವರು. ಈ ಕಟ್ಟೆಯ ತಳಭಾಗದಲ್ಲಿ ಕಾಡುಗಲ್ಲು, ಉರುಟುಕಲ್ಲುಗಳನ್ನು ಉಪಯೋಗಿಸಿ ನಿರ್ಮಿಸಿರುವರು. ಕೆರೆಗೆ ಇಳಿಯಲು ಮೆಟ್ಟಿಲುಗಳಿದ್ದು ಇದರ ಮುಂದೆ ಒಂದು ತೂಬಿರುವುದು. ಇದು ಎರಡು ಕಲ್ಲಿನಿಂದ ನಿಂತಿದ್ದು ಇದರ ಮೇಲ್ಭಾಗದ ಕಲ್ಲಿನ ಮೇಲೆ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರಿಂದ ಈ ಕೆರೆಯನ್ನು ವಿಜಯನಗರ ಆಳ್ವಿಕೆಯ ಅವಧಿಯಲ್ಲಿ ಅರಸ ಅಥವಾ ಮಂತ್ರಿ ನಿರ್ಮಿಸಿರಬೇಕೆಂದು ಹೇಳಬಹುದು. ಇದರ ಸಮೀಪದಲ್ಲಿಯೇ ಒಂದು ಬಸವೇಶ್ವರ ಗುಡಿ ಇದೆ. ಕೆರೆಯ ನೀರನ್ನು ಕೃಷಿ, ಬಟ್ಟೆ ತೊಳೆಯಲು ಹಾಗೂ ಮೀನು ಸಾಕಾಣಿಕೆ ಮಾಡಲು ಉಪಯೋಗಿಸುತ್ತಿರುವರು. ಮಳೆಗಾಲದಲ್ಲಿ ಬೀಳುವ ಮಳೆ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವುದರ ಮೂಲಕ ಬೇಸಿಗೆಯಲ್ಲಿ ಕೃಷಿ ಉತ್ಪನ್ನಗಳಿಗೆ ಉಪಯೋಗಿಸುವರು, ಕೆರೆ ಕಟ್ಟುವಲ್ಲಿ ಪ್ರಾಚೀನ ಕಾಲದ ಜನರ ತಂತ್ರಜ್ಞಾನ ಮತ್ತು ಕೌಶಲ್ಯತೆ ಉತ್ತಮವಾಗಿದೆ. ಅಂದು ಅವರಿಗೆ ತಿಳಿದಿದ್ದ ತಂತ್ರಜ್ಞಾನದಿಂದ ಕಟ್ಟಿದ ಕಟ್ಟಡಗಳು ಇಂದಿಗೂ ಉತ್ತಮಸ್ಥಿತಿಯಲ್ಲಿರುವುದನ್ನು ಕಾಣಬಹುದು. ಮತ್ತು ಅವುಗಳು ಇಂದಿಗೂ ಬಳಕೆಯಾಗುತ್ತಿರುವುದು ಗಮನಾರ್ಹ.

ಸುಗಂಧಕೆರೆ

ಸುಗಂಧಕೆರೆ ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಅತ್ಯಂತ ಪ್ರಾಚೀನ ಕೆರೆ. ಈ ಕೆರೆಯು ರಾಮನಾಥತುಂಗ ಗ್ರಾಮದಲ್ಲಿದ್ದು ಗ್ರಾಮದಿಂದ ಒಂದು ಕಿ.ಮೀ.ದೂರದ ದಕ್ಷಿಣ ದಿಕ್ಕಿನಲ್ಲಿ ಕಂಡುಬಂದಿದೆ. ಕೆರೆ ಸುತ್ತ-ಮುತ್ತ ಅಡಿಕೆ, ಬಾಳೆ ಮತ್ತು ತೆಂಗಿನ ತೋಟಗಳಿಂದ ಅವೃತವಾಗಿದ್ದು, ನೈಸರ್ಗಿಕವಾಗಿ ಉತ್ತಮ ವಾತಾವರಣ ಪ್ರದೇಶದಿಂದ ಕೂಡಿದೆ. ಈ ಕೆರೆಯನ್ನು ಹದಿನಾರನೆಯ ಶತಮಾನದಲ್ಲಿ ನಿರ್ಮಿಸಿರುವುದೆಂದು ಕಂಡುಬರುತ್ತದೆ. ಐತಿಹ್ಯದ ಪ್ರಕಾರ ಕೆರೆಯನ್ನು ನಿರ್ಮಿಸಿದವನು ಸುಗಂಧರಾಜ. ಈತ ತನ್ನ ಪತ್ನಿಗೆ ಪ್ರಸವದ ವೇಳೆಯಲ್ಲಿ ಯಾವ ಕೆರೆಯ ನೀರನ್ನು ಕುಡಿಸಿದರು ಅವಳ ಭಯಾರಿಕೆ ನೀಗಲಿಲ್ಲವಂತೆ ಮತ್ತು ಅವಳ ಪ್ರಸವದ ವೇಳೆಯು ಕಷ್ಟಕರವಾಗಿ ಮುಂದುವರಿಯುತ್ತಿತಂತೆ. ಇದರಿಂದ ನೊಂದ ರಾಜನು ತನ್ನ ಗ್ರಾಮದಲ್ಲಿಯೇ ಒಂದು ಕೆರೆಯನ್ನು ನಿರ್ಮಿಸಲು ನಿರ್ಧರಿಸಿ ಕೆರೆಯನ್ನು ಕಟ್ಟಿಸಿದನೆಂದು ಕಂಡುಬರುತ್ತದೆ. ಈ ಕೆರೆಯಲ್ಲಿ ಸಂಗ್ರಹಗೊಂಡ ನೀರನ್ನು ಕುಡಿದ ಕೆಲ ದಿನಗಳಲ್ಲಿ ಸುಗಂಧರಾಜನ ಪತ್ನಿಗೆ ಸರಳವಾಗಿ ಪ್ರಸವವಾಯಿತೆಂದು ಗ್ರಾಮದ ಆರ್.ಎಸ್.ಸುಬ್ರಮಣ್ಯರವರ ಅಭಿಪ್ರಾಯ. ಇದರಿಂದ ಕೆರೆಯನ್ನು ಸುಗಂಧರಾಜನು ನಿರ್ಮಿಸಿದ್ದರಿಂದ ಅವನ ಹೆಸರಿನಿಂದಲ್ಲೇ ಇಂದಿಗೂ ಕರೆಯುವುದು ವಾಡಿಕೆ. ಸುಗಂಧರಾಜನ ಕೆರೆಯ ಏರಿಯು ಗ್ರಾಮದಿಂದ ಉತ್ತರ ದಿಕ್ಕಿಗೆ ಸುಮಾರು ೫೦೦ ಮೀಟರ್ ಉದ್ದ ವಿಸ್ತೀರ್ಣತೆಯಿಂದ ಕೂಡಿರುವುದು. ಹಾಗೂ ಹದಿನೈದರಿಂದ ಇಪ್ಪತ್ತು ಅಡಿ ಎತ್ತರ ಪರಿಕಟ್ಟೆಯನ್ನು ಹೊಂದಿದೆ. ಪರಿಕಟ್ಟೆಯನ್ನು ಸಂಪೂರ್ಣವಾಗಿ ಸ್ಥಳೀಯವಾಗಿ

ದೊರೆಯುವ ಕಲ್ಲುಗಳನ್ನು ಉಪಯೋಗಿಸಿ ತಳಭಾಗದಲ್ಲಿ ಭದ್ರಗೊಳಿಸಲಾಗಿದೆ. ಇದರ ಮೇಲೆ ಮಣ್ಣನ್ನು ಸೇರಿಸಿ ಕೆರೆಯನ್ನು ನಿರ್ಮಿಸಲಾಗಿದೆ. ಎರಡು ಗುಡ್ಡಗಳ ನಡುವಿನ ಕಿರಿದಾದ ಕಣಿವೆಯಲ್ಲಿರುವ ಕೆರೆ ಪ್ರಶಾಂತವಾದ ನೀರಿನ ಹರವು ಹೊಂದಿದ್ದು, ಸುಂದರ ದೃಶ್ಯದಿಂದ ಕೂಡಿದೆ. ಕೆರೆಗೆ ಮಳೆಗಾಲದಲ್ಲಿ ಬೀಳುವ ಮಳೆನೀರು ಎತ್ತರ ಪ್ರದೇಶದಿಂದ ಹರಿದುಬಂದು ಕೆರೆಯಲ್ಲಿ ಸಂಗ್ರಹಗೊಳ್ಳುವುದು. ಬೇಸಿಗೆಯ ವೇಳೆಗೆ ಬಹುತೇಕವಾಗಿ ಇಂಗಿ ಹೋಗುತ್ತದೆ. ಈ ಐತಿಹಾಸಿಕ ಕೆರೆ ೧೭.೩೮ ಅಚ್ಚುಕಟ್ಟು ಪ್ರದೇಶ ಹೆಕ್ಟೇರ್‌ನಲ್ಲಿದ್ದು, ೩,೧೩೦ ಎಂ.ಸಿ.ಎಫ್ ನೀರಿನ ಸಂಗ್ರಹಣೆ ಒಳಗೊಂಡಿದೆ. ಮತ್ತು ಕೆರೆಯು ಒಟ್ಟು ೧೨೦೦ ಹೆಕ್ಟೇರ್ ವಿಸ್ತೀರ್ಣತೆಯಿಂದ ಹರಡಿಕೊಂಡಿರುವುದು.

ಅತ್ತಿಗೋಡುಕೆರೆ ಅಥವಾ ಮೊಗೆಕೆರೆ

ಅತ್ತಿಗೋಡು ಗ್ರಾಮ ಬೆಟ್ಟದಪುರ-ಕಿತ್ತೂರು ರಸ್ತೆಯ ಮಧ್ಯದಲ್ಲಿದೆ. ಗ್ರಾಮದಲ್ಲಿರುವ ದೊಡ್ಡಕೆರೆಯಿಂದ ಹೆಸರುವಾಸಿಯಾಗಿದೆ. ಕೆರೆಯನ್ನು ಯಾರು ಯಾವಾಗ ಕಟ್ಟಿದ್ದು ಎಂಬುವುದರ ಬಗ್ಗೆ ಮಾಹಿತಿ ಇಲ್ಲ. ಆದರೆ ಕೆಲವು ದಿನಗಳಲ್ಲಿ ಸ್ಥಳೀಯ ಸರ್ಕಾರ ನೀರು ನಿಲ್ಲಲು ಎತ್ತರ ಪ್ರಮಾಣದ ಏರಿಕಟ್ಟೆ ಕಟ್ಟಿರುವುದು ಹಾಗೂ ನೀರಿನ ಸಂಗ್ರಹಣೆಗೆ ಅಲ್ಲಿಯ ಭೂಮಿಯಲ್ಲಿ ಮಣ್ಣನ್ನು ತೆಗೆದು ವಿಸ್ತರಿಸಿರುವುದನ್ನು ಕಾಣಬಹುದು. ಕೆರೆಯಿಂದ ಮುಂದೆ ಸ್ವಲ್ಪ ದೂರದಲ್ಲಿ ಅಥವಾ ಗ್ರಾಮದ ಕೇಂದ್ರಭಾಗದಲ್ಲಿ ಬಸವೇಶ್ವರ ದೇವಾಲಯ ಹಾಗೂ ಈಶ್ವರ ದೇವಾಲಯಗಳಿವೆ. ಗ್ರಾಮದಲ್ಲಿ ದೊಡ್ಡ ಪ್ರಮಾಣದಲ್ಲಿ ಕೆರೆ ಇರುವುದರಿಂದ ಗ್ರಾಮದ ಹೆಸರಿನಿಂದಲೇ ಆ ಕೆರೆಗೆ ಅತ್ತಿಗೋಡು ಕೆರೆಯೆಂದು ಕರೆಯುತ್ತಿರುವರು. ಕೆರೆಯ ಒಂದು ಭಾಗದಲ್ಲಿ ಎತ್ತರವಾದ ಕಟ್ಟೆಯನ್ನು ಕಟ್ಟಿರುವರು. ಈ ಕಟ್ಟೆಯನ್ನೇ ರಸ್ತೆಯನ್ನಾಗಿಸಿ ಉಪಯೋಗಿಸಿಕೊಂಡು ಉತ್ತಮ ಮಟ್ಟದ ಮತ್ತು ಸ್ಥಳೀಯ ಕಲ್ಲುಗಳನ್ನು ಉಪಯೋಗಿಸಿ ಕೆರೆಯ ಏರಿಯನ್ನು ಭದ್ರಗೊಳಿಸಲಾಗಿದೆ. ಕೆರೆಯು ಮಳೆಗಾಲದಲ್ಲಿ ಬೀಳುವ ಮಳೆ ನೀರಿನಿಂದ ಸಂಗ್ರಹಗೊಳ್ಳುವುದು. ಎತ್ತರವಾದ ಪ್ರದೇಶದಿಂದ ಬಿದ್ದ ಮಳೆನೀರು ತಗ್ಗಾದ ಪ್ರದೇಶದೆಡೆಗೆ ಬಂದು ಸೇರುತ್ತದೆ. ಈ ನೀರನ್ನು ಉಪಯೋಗಿಸಿ ಬೆಳೆಯನ್ನು ಉತ್ಪಾದಿಸುವರು. ಕೆರೆಯು ೩೬.೦೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಒಳಗೊಂಡಿದ್ದು, ೧.೮೪೦ ಎಂ.ಸಿ.ಎಫ್ ನೀರಿನ ಸಂಗ್ರಹಣೆ ಒಳಗೊಂಡಿದೆ. ಈ ನೀರನ್ನು ಉಪಯೋಗಿಸಿಕೊಂಡು ಸ್ಥಳೀಯವಾಗಿ ಭತ್ತ, ರಾಗಿ, ಬಾಳೆ ಮತ್ತಿತರ ಬೆಳೆಗಳನ್ನು ಉತ್ಪಾದಿಸುತ್ತಿರುವರು.

ಹುಣಸೆಕಟ್ಟೆ

ಗಂಗಾಧರಬಸವನಹಳ್ಳಿ ಜಿ.ಬಸವನಹಳ್ಳಿಯೆಂದೆ ಹೆಸರುವಾಸಿಯಾಗಿದೆ. ಗ್ರಾಮವು ಚಿಟ್ಟೇನಹಳ್ಳಿಯಿಂದ ಸುಮಾರು ನಾಲ್ಕು ಕೀ.ಮೀ.ಅಂತರದಲ್ಲಿದೆ. ಗ್ರಾಮದಲ್ಲಿ ಗಂಗಾಧರೇಶ್ವರ

ದೇವಾಲಯವಿದೆ. ಈ ದೇವಾಲಯವನ್ನು ಇಂದು ಈಶ್ವರ ದೇವಾಲಯವೆಂದು ಕರೆಯುತ್ತಿರುವರು. ಗಂಗಾಧರೇಶ್ವರ ಅಥವಾ ಈಶ್ವರ ದೇವಾಲಯ ಒಂದು ಸಣ್ಣ ಬೆಟ್ಟದ ಮೇಲಿದೆ. ಇಲ್ಲಿರುವ ದೇವಾಲಯದ ಹೆಸರಿನಿಂದ ಗ್ರಾಮಕ್ಕೆ ಜಿ.ಬಸವನಹಳ್ಳಿ ಎಂಬ ಹೆಸರು ಬಂದಿದೆ. ದೇವಾಲಯದ ಗರ್ಭಗೃಹಕ್ಕೆ ನೇರವಾಗಿ ಒಂದು ಕಟ್ಟೆ ಇರುವುದು. ಕಟ್ಟೆಯ ಲಕ್ಷಣಗಳನ್ನು ಗಮನಿಸಿದಾಗ ದೇವರ ದಿನ ನಿತ್ಯ ಪೂಜಾ ಕಾರ್ಯಗಳಿಗಾಗಿ ಕಟ್ಟಲ್ಪಟ್ಟಿರುವುದು ಎಂಬ ಅಂಶ ಕಂಡುಬರುತ್ತದೆ. ಈ ಕಟ್ಟೆಯ ಬಗ್ಗೆ ಯಾವುದೇ ಶಾಸನಗಳಲ್ಲಿ ಉಲ್ಲೇಖಗಳಿಲ್ಲ. ಒಟ್ಟಿನಲ್ಲಿ ಕಟ್ಟೆ ಸುಮಾರು ಹದಿನೈದು ಅಥವಾ ಹದಿನಾರನೇ ಶತಮಾನದ ರಚನೆಯಾಗಿದೆ. ಹುಣಸೆ ಮರ ಗಳು ಕಟ್ಟೆಯ ಸಮೀಪವಿದ್ದುದ್ದರಿಂದ ಹುಣಸೆಕಟ್ಟೆ ಹೆಸರಿನಿಂದ ಕರೆಯುತ್ತಿರುವರು. ಕಟ್ಟೆಯು ಇಂದಿಗೂ ಉತ್ತಮ ಸ್ಥಿತಿಯಲ್ಲಿದ್ದು ಜನರ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಈ ಕಟ್ಟೆ ೭.೫೫ ಹೆಕ್ಟೇರ್‌ನಷ್ಟು ಅಚ್ಚುಕಟ್ಟು ಪ್ರದೇಶ ಒಳಗೊಂಡಿದ್ದು, ೦.೫೨೨ ಎಂ.ಸಿ.ಎಫ್ ನೀರಿನ ಸಂಗ್ರಹಣೆ ಸಾಮಾರ್ಥ್ಯ ಹೊಂದಿದೆ. ಕಟ್ಟೆಯ ನೀರನ್ನು ಗೃಹಪಯೋಗಿ ಕಾರ್ಯ, ಪಶುಪಾಲನೆ ಮತ್ತು ಮುಖ್ಯವಾಗಿ ಹತ್ತಿರದ ಭೂಮಿಗೆ ನೀರನ್ನು ಉಣಿಸುವುದರ ಮೂಲಕ ತರಕಾರಿ ಆಹಾರ ಉತ್ಪನ್ನಗಳನ್ನು ಉತ್ಪಾದಿಸಲು ಉಪಯೋಗಿಸುತ್ತಿರುವರು. ಹಿಂದಿನ ಕಾಲದಲ್ಲಿ ಗ್ರಾಮವು ಅಧಿಕವಾದ ಬೆಟ್ಟಗುಡ್ಡಗಳಿಂದ ಆವೃತವಾಗಿದ್ದು, ಅಧಿಕವಾದ ಮಳೆ ಬೀಳುವ ಪ್ರದೇಶವಾಗಿತ್ತು. ಬಿದ್ದ ಮಳೆ ನೀರು ಎತ್ತರವಾದ ಬೆಟ್ಟಗುಡ್ಡಗಳಿಂದ ಹರಿದು ಬಂದು ಈ ಪ್ರದೇಶಕ್ಕೆ ಸೇರುತ್ತಿತ್ತು. ಕಟ್ಟೆಯನ್ನು ಕಟ್ಟಲು ಸ್ಥಳೀಯವಾಗಿ ದೊರೆಯುವ ಉಂಡೆಕಲ್ಲು, ಅಡ್ಡಕಲ್ಲುಗಳನ್ನು ಉಪಯೋಗಿಸಿ ಕಟ್ಟಿರುವರು. ದೇವಾಲಯದ ಗರ್ಭಗೃಹಕ್ಕೆ ನೇರವಾಗಿ ವಿವಿಧ ಆಕಾರದ ಬಂಡೆ ಕಲ್ಲುಗಳನ್ನು ಉಪಯೋಗಿಸಿ ಏರಿ ಕಟ್ಟಲು ಉಪಯೋಗಿಸಿರುವರು. ಒಟ್ಟಿನಲ್ಲಿ ಇದೊಂದು ಪ್ರಾಚೀನ ಪುಷ್ಕರಣಿ ಅಥವಾ ಪವಿತ್ರ ಕೊಳವಾಗಿತ್ತೆಂದು ಕಂಡುಬರುತ್ತದೆ. ಈ ಪವಿತ್ರಕೊಳವನ್ನು ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳು ನಡೆಯಲೆಂದೇ ನಿರ್ಮಿಸಿದ್ದಾಗಿದೆ. ಇಂದು ಸಾಮಾನ್ಯ ಕೊಳವಾಗಿದ್ದು ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಿದೆ.

ಕೊಳಗಳು

ತೆಪ್ಪದ ಕೊಳ

ತೆಪ್ಪದ ಕೊಳ ಬೆಟ್ಟದಪುರದಲ್ಲಿರುವ ಪ್ರಾಚೀನ ಕೊಳವಾಗಿದ್ದು ಪೇಟೆ ಬೀದಿಗೆ ಪೂರ್ವಾಭಿಮುಖವಾಗಿದೆ. ಹಿಂದಿನಿಂದಲೂ ದೇವರ ಉತ್ಸವಮೂರ್ತಿಯನ್ನು ತೆಪ್ಪದಲ್ಲಿ ಇಟ್ಟು ಪುರೋಹಿತ ಕಾರ್ಯಗಳನ್ನು ನೆರವೇರಿಸಿಕೊಂಡು ಬರುತ್ತಿರುವರು. ಆದ್ದರಿಂದ ಈ ಕೊಳವನ್ನು ತೆಪ್ಪದಕೊಳವೆಂದು ಕರೆಯಲಾಗಿದೆ. ಮೂರು ದಿಕ್ಕಿನಿಂದಲೂ ಎತ್ತರವಾದ ಏರಿ ಇದೆ. ಏರಿಯು

ಹತ್ತರಿಂದ ಹದಿನೈದು ಅಡಿ ಎತ್ತರವಾಗಿದೆ. ಇದಕ್ಕೆ ಒಂದು ತೂಬನ್ನು ಕಟ್ಟಲಾಗಿದೆ. ಇದು ಕೆರೆ ಏರಿಯಿಂದ ಸುಮಾರು ಹತ್ತು ಅಡಿ ದೂರದಲ್ಲಿದೆ. ತೂಬಿನಿಂದ ತೋಟಗಳಿಗೆ ನೀರನ್ನು ಹಾಯಿಸುವರು. ಈ ನೀರನ್ನು ಜಾನುವಾರುಗಳು ಕುಡಿಯಲಿಕ್ಕೆ, ಬಟ್ಟೆ ತೊಳೆಯಲು ಉಪಯೋಗಿಸುವರು. ಇಂದು ಇಲ್ಲಿಯ ನೀರು ಕಲುಷಿತಗೊಂಡಿದೆ. ತೆಪ್ಪದ ಸಮೀಪದಲ್ಲಿ ಒಂದು ಮಂಟಪ ಇದೆ. ಈ ಮಂಟಪವು ಚೌಕಕಾರವಾಗಿದ್ದು, ವೃತ್ತಕಾರ ಸ್ತಂಭದ ಮೇಲೆ ನಂದಿಯ ವಿಗ್ರಹವಿತ್ತು. ಆದರೆ ಇಂದು ನಂದಿಯ ಮೂರ್ತಿಶಿಲ್ಪ ಕೆಳಗೆ ಬಿದ್ದಿದೆ. ಮಂಟಪವನ್ನು ಇಟ್ಟಿಗೆಯಿಂದ ಕಟ್ಟಲಾಗಿದೆ. ಭುವನೇಶ್ವರಿಯಿದ್ದು ಪುಷ್ಪಾಲಂಕಾರವನ್ನು ಹೊಂದಿದೆ. ಇಂದು ಮಂಟಪವು ಅವನತಿಯ ಹಾದಿಯಲ್ಲಿದ್ದು ಮತ್ತು ಎರಡು ಎಕರೆ ಪ್ರದೇಶವನ್ನು ಒಳಗೊಂಡಿದೆ.

ಕೋಟೆ ಕೊಳ

ಬೆಟ್ಟದಪುರದಲ್ಲಿರುವ ಪ್ರಾಚೀನ ಕೊಳಗಳಲ್ಲಿ ಕೋಟೆ ಕೊಳ ಒಂದು. ಇದು ಹೊರಕೋಟೆಯ ಸಮೀಪದಲ್ಲಿದೆ. ಪೇಟೆ ಬೀದಿಗೆ ಪೂರ್ವಾಭಿಮುಖವಾಗಿದೆ. ಈ ಕೊಳದ ಏರಿಯು ಆರರಿಂದ ಎಂಟು ಅಡಿ ಅಗಲವಾಗಿದೆ. ಇದು ೮೦x೫೦ ಅಡಿ ಉದ್ದ ಅಗಲವಿದ್ದು, ಹದಿನೈದು ಅಡಿ ಎತ್ತರವಿದೆ. ಇಲ್ಲಿಯ ಕೊಳದ ಸುತ್ತಲು ಅಡ್ಡಗೋಡೆಯನ್ನು ಗಟ್ಟಿಯಾದ ಕಲ್ಲುಗಳಿಂದ ಮತ್ತು ಮಣ್ಣಿನಿಂದ ಕಟ್ಟಿರುವರು. ಇಲ್ಲಿಯ ನೀರು ಉಪಯೋಗಿಸಲು ಯೋಗ್ಯಕರವಾಗಿಲ್ಲ. ಮತ್ತು ತೂಬನ್ನು ಜೋಡಿಸಿರುವುದಿಲ್ಲ. ಇಲ್ಲಿಯ ನೀರಿನ ಮೂಲ ಅಂತರ್ಜಲ. ಈಗ ಕೊಳದ ತುಂಬಾ ಹೂಳು ತುಂಬಿ ಗಿಡ-ಪೊದೆಗಳು ಬೆಳೆದು ತನ್ನ ಮೂಲ ಆಕಾರವನ್ನು ಕಳೆದುಕೊಂಡಿದೆ. ಕೆರೆಯ ಸುತ್ತಲೂ ಮನೆ ಮತ್ತು ನಿವೇಶನಗಳಿಂದ ಒತ್ತುವರಿಯಾಗಿದೆ.

ನಂದಿಮಂಟಪ ಕೊಳ

ಬೆಟ್ಟದಪುರ ಗ್ರಾಮದ ರಥಬೀದಿಯ ಕೊನೆಯಲ್ಲಿ ಈ ಕೊಳವು ಪೂರ್ವಾಭಿಮುಖವಾಗಿದೆ. ಕೊಳಕ್ಕೆ ಇಳಿಯಲು ಮೆಟ್ಟಿಲುಗಳು ಪಶ್ಚಿಮ ದಿಕ್ಕಿನಲ್ಲಿದ್ದು ಚೌಕಕಾರವಾಗಿದೆ. ಇದಕ್ಕೆ ನೀರಿನ ಮೂಲ ಅಂತರ್ಜಲ. ಆದರೆ ಈ ಪುಷ್ಕರಣಿ ಅಥವಾ ಕೊಳದ ನೀರನ್ನು ಗ್ರಾಮಸ್ಥರು ಉಪಯೋಗಿಸುತ್ತಿಲ್ಲ. ಕೊಳವು ಲಿಂಗಾಯತರ ಸ್ಮಶಾನದ ಸಮೀಪದಲ್ಲಿದೆ. ಸ್ಮಶಾನ ವಿಶಾಲವಾದ ಎರಡು ಎಕರೆ ಪ್ರದೇಶದಷ್ಟು ಭೂಮಿಯನ್ನು ಆವರಿಸಿಕೊಂಡಿದೆ. ಕೊಳದ ಸಮೀಪದಲ್ಲಿಯೇ ಒಂದು ನಂದಿ ಮಂಟಪವಿದೆ. ಮಂಟಪದ ಗೋಡೆಯು ಕಲ್ಲಿನಿಂದ ಕಟ್ಟಲ್ಪಟ್ಟಿದೆ. ಇದರ ಮೇಲೆ ಗೋಪುರವನ್ನು ಇಟ್ಟಿಗೆಯಿಂದ ನಿರ್ಮಿಸಿದ್ದು, ದ್ರಾವಿಡ ಶೈಲಿಯ ಲಕ್ಷಣ ಹೊಂದಿದೆ. ಒಳಭಾಗದಲ್ಲಿ ನಂದಿಸ್ಥಂಬವಿದ್ದು ಮುರಿದು ಬಿದ್ದಿದೆ. ಈ ನಂದಿಮಂಟಪವು ದಕ್ಷಿಣಾಭಿಮುಖ

ವಾಗಿದೆ. ಕೊಳವು ಸಮತಟ್ಟಾದ ಪ್ರದೇಶದಲ್ಲಿರುವುದು ಮತ್ತು ಇದು ೪೦x ೨೦ ಅಡಿ ಉದ್ದ ಅಗಲವಿದೆ.

ಕಲ್ಯಾಣಿ ಕೊಳ

ದೊಡ್ಡಬೆಟ್ಟದ ತಳಭಾಗದಲ್ಲಿ ಪಶ್ಚಿಮ ದಿಕ್ಕಿಗೆ ಕಲ್ಯಾಣಿ ಕೊಳವಿದೆ. ಭೌಗೋಳಿಕ ಪರಿಸರ ಮತ್ತು ಜಲಾಶಯವನ್ನು ಗಮನಿಸಿ ಬೆಟ್ಟಗಳ ಬೃಹತ್ ಪ್ರಮಾಣದ ಕೊಳ ಮತ್ತು ಏರಿ ಕಟ್ಟಿರುವುದು ಕಂಡುಬಂದಿದೆ. ಕೊಳಕ್ಕೆ ಮಳೆಗಾಲದಲ್ಲಿ ಬೆಟ್ಟದಪುರದ ಬೆಟ್ಟದ ಮೇಲಿನಿಂದ ನೀರು ಹರಿದುಬಂದು ಸೇರುವುದು. ವೃತ್ತಾಕಾರವಾಗಿದ್ದು ಎತ್ತರವಾಗಿದೆ ಮತ್ತು ಸುಮಾರು ಎರಡೂವರೆ ಎಕರೆ ಪ್ರದೇಶವನ್ನು ಆವರಿಸಿಕೊಂಡಿದೆ. ಈ ಪ್ರದೇಶವು ಬೆಟ್ಟಗುಡ್ಡಗಳಿಂದ ಹೆಚ್ಚಾಗಿ ಬಂಡೆಯ ತಳಭಾಗದಲ್ಲಿ ಆವರಿಸಲ್ಪಟ್ಟಿರುವುದು. ಇಲ್ಲಿಯ ನೀರು ಹೊರಹೋಗಲು ಸಾಧ್ಯವಿಲ್ಲ ಮತ್ತು ಕೊಳಚೆಯಾಗಿರುವುದು. ಇದರ ಸಮೀಪದಲ್ಲಿ ಒಂದು ನಂದಿ ಸ್ಥಂಬವಿದೆ.

ಸೂಳೆ ಕೊಳ

ಸೂಳೆ ಕೊಳವು ದೊಡ್ಡದಾಗಿದ್ದು ರಾಯಗೋಪುರದ ಸಮೀಪದಲ್ಲಿದೆ. ಸಿಡಿಲು ಮಲ್ಲಿಕಾರ್ಜುನ ಬೆಟ್ಟಕ್ಕೆ ಹೋಗುವ ರಸ್ತೆಯ ಎಡಭಾಗದಲ್ಲಿದ್ದು, ಒಂದರಿಂದ ಎರಡೂವರೆ ಅಡಿ ಅಗಲ ಉದ್ದದ ಕಲ್ಲಿನಿಂದ ಗೋಡೆ ಕಟ್ಟಿರುವರು. ಸುಮಾರು ಇಪ್ಪತ್ತು ಅಡಿ ಆಳವಿದ್ದು ೪೦x೨೫ ಅಡಿ ಉದ್ದ ಅಗಲವನ್ನು ಹೊಂದಿದೆ. ಕೊಳಕ್ಕೆ ಇಳಿಯಲು ಉತ್ತಮ ಕಲ್ಲಿನಿಂದ ಮಾಡಲ್ಪಟ್ಟ ಮೆಟ್ಟಿಲು ಇರುವುದು. ಆದರೆ ಅಂತರ್ಜಲ ನೀರಿನ ವ್ಯವಸ್ಥೆ ಇರುವುದಿಲ್ಲ. ಕೊಳವು ಯಾವಾಗಲೂ ಬರಿದಾಗಿರುತ್ತದೆ. ಐತಿಹ್ಯದ ಪ್ರಕಾರ ಮಹಿಳೆಗೆ ಮಕ್ಕಳ ಸಂತತಿ ಇರಲಿಲ್ಲ. ಆ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ದೇವರಲ್ಲಿ ಹರಕೆ ಕಟ್ಟಿಕೊ ಎಂದು ತಿಳಸಿರುವನು. ಅದರಂತೆ ಆಕೆ ದೇವರಿಗೆ ಹರಕೆಯನ್ನು ಹೊತ್ತು ಈ ಕೊಳವನ್ನು ನಿರ್ಮಿಸಿದಳು. ಆದರೂ ಆ ಮಹಿಳೆಗೆ ಮಕ್ಕಳು ಆಗಲೇ ಇಲ್ಲ ಎಂಬುದು ಇಲ್ಲಿನ ಜನರ ನಂಬಿಕೆ. ಆದ್ದರಿಂದ ಈ ಕೊಳವನ್ನು ಬಂಜೆಕೊಳವೆಂದು ಸಹ ಕರೆಯುವರು. ಈ ಮಹಿಳೆಯ ನೆನಪಿನಾರ್ಥವಾಗಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸೂಳೆಕೋಟೆ ಗ್ರಾಮವಿದೆಯೇ ಅಥವಾ ಚಂಬುರಾಯನ ಸೂಳೆಯೇ ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ.

ನಾಗರ ಕೊಳ

ಹತ್ತು ಅಡಿ ಆಳವಿರುವ ನಾಗರ ಕೊಳವು ಪ್ರಾಚೀನ ಕೊಳಗಳಲ್ಲಿ ಒಂದು. ಇದು ಮಲ್ಲಿಕಾರ್ಜುನ ಬೆಟ್ಟದ ಮಧ್ಯ ತಪ್ಪಲಿನಲ್ಲಿ ಕಂಡುಬಂದಿದೆ. ಬೆಟ್ಟಹತ್ತುವ ಮೆಟ್ಟಿಲಿನ

ಎಡಭಾಗದಲ್ಲಿದ್ದು ಸಂಕ್ರಾಂತಿ ಮಂಟಪದಿಂದ ಇನ್ನೂರು ಮೀಟರ ದೂರದಲ್ಲಿದೆ. ಈ ಕೊಳವು ವೃತ್ತ ಮತ್ತು ಚೌಕಕಾರವಾಗಿದ್ದು ದಕ್ಷಿಣ ದಿಕ್ಕಿನಲ್ಲಿ ಮೆಟ್ಟಿಲನ್ನು ಹೊಂದಿದೆ. ಕೊಳವನ್ನು ಕಟ್ಟಲು ಕಲ್ಲುಗಳನ್ನು ಉಪಯೋಗಿಸಿದ್ದಾರೆ. ಈ ಕೊಳದಲ್ಲಿ ನಾಗದೇವತೆಯ ಮೂರ್ತಿಶಿಲ್ಪ ಇರುವುದರಿಂದ ನಾಗರ ಕೊಳವೆಂದು ಸ್ಥಳೀಯ ಜನತೆ ಕರೆಯುವರು. ಪ್ರಸ್ತುತ ಇದರಲ್ಲಿ ನೀರು ಇಲ್ಲದಾಗಿದೆ. ಕೊಳದ ತುಂಬಾ ಹೂಳು ತುಂಬಿ ಗಿಡ ಪೊದೆಗಳು ಬೆಳೆದಿದೆ. ಇದರಿಂದ ಕೊಳವು ಗುರುತಿಸಲಾಗದಷ್ಟು ಆಕಾರವನ್ನು ಕಳೆದುಕೊಳ್ಳುತ್ತಲ್ಲಿದೆ.

ಅಭಿಷೇಕ ಕೊಳ

ಬೆಟ್ಟದಪುರ ಅನ್ನದಾನಿಮಲ್ಲಿಕಾರ್ಜುನ ಬೆಟ್ಟದ ಮೇಲೆ ಅಭಿಷೇಕ ಕೊಳವಿದೆ. ಇದು ದೇವಾಲಯದಿಂದ ಸುಮಾರು ೨೦೦ ಮೀಟರ್ ಅಂತರದ ವಾಯವ್ಯ ದಿಕ್ಕಿನಲ್ಲಿದೆ. ದೇವರ ವಿಗ್ರಹದ ಅಭಿಷೇಕ ಕಾರ್ಯಗಳಿಗೆ ಕೊಳದಿಂದ ನೀರನ್ನು ತೆಗೆದುಕೊಳ್ಳುವುದರಿಂದ ಅಭಿಷೇಕ ಕೊಳ ಎಂದು ಕರೆಯುತ್ತಿರುವರು. ಈ ಕೊಳವನ್ನು ಬಿಟ್ಟರೆ ಯಾವುದೇ ಕೊಳ ದೇವಾಲಯದ ಸಮೀಪದಲ್ಲಿ ಕಂಡುಬರುವುದಿಲ್ಲ. ಇದು ದೋಣಿಯಾಕಾರದಲ್ಲಿದ್ದು ಕಲ್ಲುಬಂಡೆಯಿಂದ ನೈಸರ್ಗಿಕವಾಗಿ ರಚನೆಯಾಗಿದೆ. ಕೊಳದಲ್ಲಿ ವರ್ಷದ ಎಲ್ಲಾ ದಿನಗಳು ನೀರು ಇರುವುದು ಹಾಗೂ ಎಂದು ಬತ್ತುವುದಿಲ್ಲ ಎಂಬ ನಂಬಿಕೆ ಜನರಲ್ಲಿದೆ. ಇಲ್ಲಿ ಜಲವು ನಿತ್ಯ ಹರಿಯುವುದು. ನೀರಿನ ಬಣ್ಣವು ಹಸಿರಾಗಿದ್ದು ಇದನ್ನೇ ದೇವರ ಅಭಿಷೇಕಕ್ಕೆ ಮತ್ತು ಕುಡಿಯಲ್ಲಿಕ್ಕೆ ಉಪಯೋಗಿಸುವರು. ಇದು ೮ x ೨ ಅಡಿ ವಿಸ್ತೀರ್ಣತೆಯಿಂದ ಕೂಡಿದೆ.

ಅಕ್ಕತಂಗಿಯರ ದೋಣೆ

ಸಿಡಿಲುಮಲ್ಲಿಕಾರ್ಜುನ ದೇವಾಲಯದ ಉತ್ತರ ದಿಕ್ಕಿನಲ್ಲಿ ಒಂದು ಪ್ರಾಕೃತಿಕ ನೀರಿನ ಆಸರೆ ಇದೆ. ಇದು ಮೂಡಲಗವಿಯ ಸಮೀಪದಲ್ಲಿದ್ದು ಒಂದು ದೊಡ್ಡಕೊಳ ಮತ್ತೊಂದು ಚಿಕ್ಕಕೊಳವಿರುವುದು. ದೊಡ್ಡ ಕೊಳವನ್ನು ಅಕ್ಕನ ಕೊಳವೆಂದು ಮತ್ತು ಚಿಕ್ಕ ಕೊಳವನ್ನು ತಂಗಿ ಕೊಳವೆಂದು ಹೇಳುವರು. ಇದರಿಂದಾಗಿ ಈ ಕೊಳವನ್ನು ಅಕ್ಕತಂಗಿಯರ ಕೊಳವೆಂದು ಕರೆಯುತ್ತಿರುವರು. ಇಲ್ಲಿಯ ನೀರು ಕುಡಿಯಲ್ಲಿಕ್ಕೆ ಯೋಗ್ಯಕರವಾಗಿದೆ. ವಿಸ್ತೀರ್ಣದ ದೃಷ್ಟಿಯಿಂದ ವಿಶಾಲವಾಗಿಲ್ಲದಿದ್ದರೂ ೮ x ೩ ವಿಸ್ತೀರ್ಣದಲ್ಲಿ ಹರಡಿಕೊಂಡಿದೆ. ಸಾಮಾನ್ಯವಾಗಿ ಬೆಟ್ಟದ ಮೇಲೆ ಅಥವಾ ಕೆಳಗೆ ಸಮೀಪದಲ್ಲಿಯೇ ಎರಡು ಕೊಳಗಳು ಕಂಡುಬಂದರೆ ಅವುಗಳನ್ನು ವಿಸ್ತೀರ್ಣದ ದೃಷ್ಟಿಯಿಂದ ದೊಡ್ಡದಾದ ಕೊಳವನ್ನು ಅಕ್ಕನ ಕೊಳವೆಂದು ಹಾಗೂ ಚಿಕ್ಕದಾದ ಕೊಳವನ್ನು ತಂಗಿಯ ಕೊಳವೆಂದು ಕರೆಯುವರು. ಉದಾಹರಣೆಗೆ ಮೇಲುಕೋಟೆಯಲ್ಲಿ

ಬೆಟ್ಟದ ನಡುವೆ ಹರಡಿರುವ ಕೊಳವನ್ನು ಅಕ್ಕ-ತಂಗಿಯರ ಕೊಳವೆಂದು ಕರೆದಿರುವುದನ್ನು ಗಮನಿಸಬಹುದು. ಬೆಟ್ಟದಪುರದಲ್ಲಿರುವ ಈ ಕೊಳವು ಬೆಟ್ಟದ ಮಧ್ಯಭಾಗದಲ್ಲಿ ಪತ್ತೆಯಾಗಿದೆ.

ನಾರದ ತೀರ್ಥ

ಬೆಟ್ಟದಪುರದಲ್ಲಿ ಕಂಡುಬಂದಿರುವ ಪುಷ್ಕರಣಿಗಳಲ್ಲಿ ನಾರದ ತೀರ್ಥ ಪುಷ್ಕರಣಿಯು ಒಂದು. ಇದು ಎರಡು ಬೃಹತ್ ಬಂಡೆಯ ನಡುವೆ ಇದೆ. ಇದೊಂದು ಚಿಕ್ಕ ತೀರ್ಥ ಅಥವಾ ದೋಣೆಯಾಗಿದೆ. ಇದನ್ನು ವ್ಯಾಸತೀರ್ಥವೆಂಥಲು ಕರೆಯುವರು. ಸ್ಥಳಪುರಾಣದ ಪ್ರಕಾರ ನಾರದಮುನಿ ಈ ಪ್ರದೇಶದಲ್ಲಿ ನೆಲೆಸಿ ವೀಣಾಜ್ಞಾನವನ್ನು ಪಡೆಯಬೇಕೆಂಬ ಬಯಕೆಯಿಂದ ಇಲ್ಲಿ ತಪಸ್ಸನ್ನು ಆಚರಿಸಿ ಬೆಟ್ಟದ ಮೇಲಿರುವ ಅನ್ನದಾನಿಮಲ್ಲಿಕಾರ್ಜುನ ದೇವನಿಂದ ವೀಣೆಯನ್ನು ವರವಾಗಿ ಪಡೆದನೆಂದು ಹೇಳಲಾಗಿದೆ. ಇದರಿಂದಾಗಿ ದೊಣೆಯನ್ನು ನಾರದತೀರ್ಥ ಕೊಳವೆಂದು ಮತ್ತು ಅನ್ನದಾನಿ ಮಲ್ಲಿಕಾರ್ಜುನನ್ನು ವೀಣಾರ್ಪಣೇಶ್ವರನೆಂದು ಕರೆಯಲಾಗಿದೆ.

ಬಾವಿಗಳು

ಪ್ರಾಚೀನ ಮಾನವ ನೀರಾವರಿ ಉದ್ದೇಶಗಳಿಗಾಗಿ ಕಂಡುಹಿಡಿದ ಮೂಲಗಳಲ್ಲಿ ಬಾವಿಗಳು ಪ್ರಮುಖವಾಗಿವೆ. ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದಕ್ಕೋಸ್ಕರ ನಿರ್ಮಿಸಿದ ಬಾವಿಗಳನ್ನು ಎರಡು ರೀತಿಯಲ್ಲಿ ಕಾಣಬಹುದು. ಒಂದು ಜನರು ವಾಸವಾಗಿರುವಲ್ಲಿ ಅಗೆಯಲಾದ ಬಾವಿಗಳು ಮತ್ತೊಂದು ಹೊಲಗಳಲ್ಲಿ ತೆಗೆಯಲಾದ ಬಾವಿಗಳು. ಜನರು ವಾಸವಾಗಿರುವಲ್ಲಿ ಅಗೆಯಲಾದ ಬಾವಿಗಳು ಕುಡಿಯಲು ಮತ್ತು ಬಟ್ಟೆ ತೊಳೆಯಲು ಹಾಗೂ ದಿನನಿತ್ಯದ ಕಾರ್ಯಗಳಿಗೆ ಉಪಯೋಗವಾದರೆ, ಹೊಲಗಳಲ್ಲಿ ತೆಗೆದ ಬಾವಿಗಳು ಕೃಷಿ ಕಾರ್ಯಕ್ಕೆ ಉಪಯೋಗವಾಗುತ್ತಿದ್ದವು. ಮೊದಲನೆಯ ವಿಧವಾದ ಬಾವಿಗಳ ರಚನೆ ಸಂಕೀರ್ಣತೆಯಿಂದ ಕೂಡಿದ್ದು, ಗೃಹಪಯೋಗಿ, ಪೂಜೆಪುರಸ್ಕಾರ ಕಾರ್ಯಕ್ಕೆ ಉಪಯೋಗವಾಗಿದ್ದವು. ಆದರೆ ಹೊಲಗಳಲ್ಲಿಯ ಬಾವಿಗಳು ತೆರೆದ ಬಾವಿಗಳಾಗಿದ್ದು, ಪ್ರಮುಖವಾಗಿ ವ್ಯವಸಾಯ ಉದ್ದೇಶಗಳನ್ನು ಮಾತ್ರ ಹೊಂದಿರುತ್ತವೆ. ಕವಲು ದಾರಿಯಲ್ಲಿ ಕಟ್ಟಿದ ಬಾವಿಗಳು, ದಾರಿಹೋಕರ ಮಾರ್ಗಯಾಸ ಮತ್ತು ಬಾಯಾರಿಕೆಯನ್ನು ನಿವಾರಿಸಲೆಂದೇ ಕಟ್ಟಲಾಗಿದ್ದರು, ಹಲವೆಡೆ ನೀರಾವರಿಗೂ ಬಳಸಿರುವುದನ್ನು ಕಾಣಬಹುದು. ಬಾವಿಗಳ ರಚನೆ ಬಗೆಗೆ ಪುರಾತನ 'ಕೃಷಿಸೂಕ್ತಿ' ಗ್ರಂಥದಲ್ಲಿ ವಿವರಿಸಲಾಗಿದೆ. ಇದು ಉತ್ತರ ಭಾರತಕ್ಕೆ ಹೆಚ್ಚು ಅನ್ವಯಿಸುತ್ತದೆ. ಮತ್ತೊಂದು ಕೃತಿ 'ವಿಶ್ವವಲ್ಲಭ'.

ಇದು ಮಿಶ್ರ ಚಕ್ರಪಾಣಿಯಿಂದ ರಚನೆಗೊಂಡಿದೆ. ಆದರೆ ದಕ್ಷಿಣ ಬಾರತದಲ್ಲಿ ಪ್ರಮುಖವಾಗಿ ವಿಜಯನಗರದ ಅವಧಿಯಲ್ಲಿ ಬಾವಿಗಳ ನಿರ್ಮಾಣ ಗಟ್ಟಿಯಾದ ಭೂಪ್ರದೇಶಗಳಲ್ಲಿ ಅಗೆಯುತ್ತಿದ್ದರು, ಸಡಿಲು ಭೂಮಿ ಇದ್ದ ಭಾಗದಲ್ಲಿ ಮಾತ್ರ ಕಲ್ಲಿನಿಂದ ಗೋಡೆಯನ್ನು ನಿರ್ಮಿಸಲಾಗುತ್ತಿತ್ತು. ಸಾಮಾನ್ಯವಾಗಿ ಸ್ಥಳದ ಭೌಗೋಳಿಕ ಪರಿಸ್ಥಿತಿಯನ್ನೇ ಆಧರಿಸಿ ರಚನೆ ಮಾಡುತ್ತಿದ್ದರು.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಪ್ರಾಚೀನ ಕಾಲದಿಂದಲೂ ಬಾವಿಗಳ ಬಳಕೆ ಕಂಡುಬಂದಿರುವವು ಮತ್ತು ಪ್ರಸ್ತುತ ಮುಂದುವರಿಯುತ್ತಿರುವುದನ್ನು ಕಾಣಬಹುದು. ಇಲ್ಲಿಯ ಭೂಪ್ರದೇಶವು ಅಲ್ಪವಧಿಯ ಮುಂಗಾರು ಮಾನ್‌ಸೂನ್ ಮಳೆಯ ಮೇಲೆ ಅವಲಂಬಿತವಾಗಿದೆ. ಈ ಪರಿಸರದಲ್ಲಿ ನಿರಂತರವಾಗಿ ಹರಿಯುವ ಕಾವೇರಿ ನದಿ ಇದ್ದರು ಪೂರ್ವ ಭಾಗದಲ್ಲಿ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತಿತ್ತು. ಉಳಿದ ಪ್ರದೇಶಗಳಲ್ಲಿ ಕೆರೆಗಳೇ ನೀರಿಗೆ ಆಧಾರ, ಅವುಗಳು ಕೂಡ ಮಳೆ ಸರಿಯಾಗಿ ಆದಲ್ಲಿ ಮಾತ್ರ ತುಂಬುತ್ತಿದ್ದವು. ಆದ್ದರಿಂದ ಇಲ್ಲಿಯ ಕೃಷಿಕರು ಅನಿವಾರ್ಯವಾಗಿ ಅಂತರ್ಜಲ ಮೂಲಗಳನ್ನು ಅವಲಂಬಿಸಬೇಕಾಯಿತು. ಇದರಿಂದ ಬಾವಿಗಳನ್ನು ಅಗೆದು ಬೇಸಾಯಕ್ಕೆ ಬಳಸಿಕೊಳ್ಳಲು ಪ್ರಾರಂಭಿಸಿದರು. ಹೀಗೆ ತೆಗೆಯಲಾದ ಬಾವಿಗಳಿಂದ ಅಂತರ್ಜಲ ನೀರು ಸದಾ ದೊರಕುತ್ತಿತ್ತು. ಈ ವಿಧವಾದ ಬಾವಿ ನೀರಾವರಿಯಿಂದ ಒಂದರಿಂದ ಇಪ್ಪತ್ತು ಎಕರೆ ಭೂಮಿಗೆ ನೀರೂಣಿಸಲಾಗುತ್ತಿತ್ತು. ಬಾವಿ ನೀರಾವರಿ ಕಾರ್ಯ ಸ್ಥಳೀಯ ಮತ್ತು ನಿರ್ಧಿಷ್ಟ ಪ್ರಮಾಣದಲ್ಲಿ ಮಾತ್ರ ಸಾಧ್ಯವಾಗುತ್ತಿತ್ತು. ಬಾವಿಗಳು ಕೇವಲ ನೀರಾವರಿಗಲ್ಲದೆ ಕುಡಿಯಲು ಉಪಯೋಗಿಸುತ್ತಿದ್ದರು. ದಿನಬಳಕೆಗೆ ಬಳಸುವಂತಹ ಬಾವಿಗಳನ್ನು ಸೇದೋ ಬಾವಿಗಳೆನ್ನುತ್ತಿದ್ದರು. ಬಿಂದಿಗೆಗೆ ಹಗ್ಗ ಕಟ್ಟಿ ಅದರ ಮೂಲಕ ನೀರು ಪಡೆಯುತ್ತಿದ್ದರು.

ಬಾವಿಗಳು ಅಧಿಕ ಪ್ರದೇಶಕ್ಕೆ ನೀರು ನೀಡುವ ಸಾಮಾರ್ಥ್ಯ ಹೊಂದಿರಲಿಲ್ಲ. ನೀರಾವರಿ ಕಾರ್ಯಕ್ಕಲ್ಲದೆ ಸಾಮಾಜಿಕ ಮತ್ತು ಧಾರ್ಮಿಕವಾಗಿ ತನ್ನದೇ ಆದ ಪ್ರಾಮುಖ್ಯತೆ ಪಡೆದುಕೊಂಡಿದೆ. ಅನೇಕ ವೇಳೆ ದೇವಾಲಯಗಳಿಗೂ ಬಾವಿ ರಚನೆಗೊಂಡಿದ್ದವು. ಶುಭ ಕಾರ್ಯಗಳಿಗೆ ಜನರು ಇಂದಿಗೂ ಬಾವಿಗಳನ್ನು ಅವಲಂಭಿಸಿದ್ದಾರೆ ಮತ್ತು ಬಾವಿಯಲ್ಲಿ ಗಂಗಮ್ಮ ಇರುತ್ತಾಳೆ ಎಂಬ ಭಾವನೆ ಇದೆ. ವಿಜಯನಗರ ಅವಧಿಯ ಒಂದು ಶಾಸನವು ಬಾವಿಗಳನ್ನು ಕಟ್ಟಿಸುವುದು ಪುಣ್ಯ ಕಾರ್ಯವೆಂದೇ ನಿರೂಪಿಸಿದೆ. ಸಾಮಾನ್ಯವಾಗಿ ನೀರಾವರಿಗೆಂದೇ ನಿರ್ಮಿಸಿದ ಬಾವಿಗಳು ಊರಿಗೊಂದು ಹೊರಗಡೆ ಪ್ರದೇಶಗಳಾದ ಹೊಲ, ತೋಟ, ಗದ್ದೆಗಳಲ್ಲಿರುತ್ತಿದ್ದವು. ಆದರೆ

ಜನರಿಗೆ ಕುಡಿಯಲು ಮತ್ತು ದೇವಸ್ಥಾನದಲ್ಲಿ ಧಾರ್ಮಿಕ ಕಾರ್ಯಗಳಿಗೆಂದೇ ತೆಗಿಸಿದ ಬಾವಿಗಳು ಜನವಸತಿಯ ಪ್ರದೇಶದಲ್ಲಿರುತ್ತಿದ್ದವು. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ಶ್ರೀಮಂತರು ಬಾವಿಗಳನ್ನು ತೋಡಿಸಿರುವುದು ಹಾಗೂ ಪುಷ್ಕರಣಿಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ.

ಪ್ರಾಚೀನ ಕಾಲದ ಬಾವಿಗಳು ಕಂಪಲಾಪುರ, ಬೆಟ್ಟದಪುರ, ಚಿಕ್ಕಹೂನ್ಸೂರು, ಪಿರಿಯಾಪಟ್ಟಣ, ದೊಡ್ಡಕಮರವಳ್ಳಿ, ಆವರ್ತಿ, ನಿಲವಾಡಿ ಮತ್ತು ಹರದೂರು ಗ್ರಾಮಗಳಲ್ಲಿ ಕಂಡುಬಂದಿವೆ. ಕಂಪಲಾಪುರದಲ್ಲಿ ಒಂದು ಶಾಸನ ಉಲ್ಲೇಖಿತ ಬಾವಿ ಇದೆ. ಈ ಬಾವಿಯನ್ನು ಮಲ್ಲಣ್ಣನ ಮಗ ನಂಜುಂಡಶೆಟ್ಟಿ[೨೧] ಕ್ರಿ.ಶ. ೧೬೮೭ರಲ್ಲಿ ನಿರ್ಮಿಸಿದನೆಂದು ಕಂಡುಬಂದಿದೆ. ಶಾಸನದಲ್ಲಿ ಗಂಗಾಬಾವಿಯೆಂದು ಉಲ್ಲೇಖಿತಗೊಂಡಿದ್ದು ಕರಕಂಠೇಶ್ವರ ದೇವರ ಧಾರ್ಮಿಕ ಉದ್ದೇಶಕ್ಕಾಗಿ ನಿರ್ಮಿತಗೊಂಡಿರುವುದು. ಈ ಬಾವಿಯನ್ನು ಕಲ್ಲು, ಗಾರೆ ಮತ್ತು ಇಟ್ಟಿಗೆಗಳಿಂದ ರಚಿಸಲಾಗಿದೆ. ಇದು ಚೌಕಕಾರದಲ್ಲಿದ್ದು ೧೫x೧೫ ವಿಸ್ತೀರ್ಣತೆಯಿಂದ ಕೂಡಿದೆ. ಇಂದು ಗಿಡಗಂಟಿಗಳು ಬೆಳೆದು ಅವಶೇಷದ ಅಂಚಿನಲ್ಲಿದೆ. ಬೆಟ್ಟದಪುರದಲ್ಲಿ ಒಂದು ಶಾಸನದ ಉಲ್ಲೇಖಿತ ಬಾವಿ ಇದೆ. ಇದು ತಿಪ್ಪೆಗುಂಡಿಯ ಸಮೀಪದಲ್ಲಿದ್ದು ಇಂದು ನಾಶಗೊಂಡಿರುವುದು. ಈ ಬಾಯಿಯನ್ನು ಸೇನಾಬೋವನಂಜಪ್ಪ[೨೨] ಕ್ರಿಶ ಹದಿನೇಳನೆಯ ಶತಮಾನದಲ್ಲಿ ನಿರ್ಮಿಸಿರುವರು. ಬಾವಿ ಉತ್ತರ ದಿಕ್ಕಿನಲ್ಲಿ ಇಳಿಯಲು ಮೆಟ್ಟಿಲುಗಳಿದ್ದು ಮೇಲ್ಭಾಗದಲ್ಲಿ ಸುಮಾರು ೨೫ ಮೀಟರ್ ಉದ್ದ ಮತ್ತು ೨೩ ಮೀಟರ್ ಅಗಲ ವಿಸ್ತೀರ್ಣ ಹೊಂದಿದೆ. ಇದನ್ನು ಕಟ್ಟಲು ಕಲ್ಲು, ಗಾರೆ ಮತ್ತು ಇಟ್ಟಿಗೆಯನ್ನು ಉಪಯೋಗಿಸಿರುವರು, ಆದರೆ ಇಂದು ಉಪಯೋಗಿಸಲು ಅಸಾಧ್ಯವಾಗಿದ್ದು ಅವನತಿಯ ಅಂಚಿನಲ್ಲಿದೆ.

ಒಟ್ಟಿನಲ್ಲಿ ಕೆರೆಯನ್ನು ಯಾರೇ ಕಟ್ಟಿಸಲಿ ಅದರ ರಕ್ಷಣೆ ಹೊಣೆಯನ್ನು ಊರಿನ ಜನರು ನಿರ್ವಹಿಸುತ್ತಿದ್ದರು. ಕೆರೆ ಕಟ್ಟೆ ಒಡೆಯಬಹುದು. ತೂಬು ಹಾಳಾಗಬಹುದು, ಮರಳಿನಿಂದ ಕೆರೆ ಹೂತು ಹೋಗಬಹುದು. ಇವುಗಳ ರಕ್ಷಣೆಗೆ ಅಥವಾ ದುರಸ್ತಿಗೆ ಹಣ ಬೇಕಾಗುತ್ತಿತ್ತು. ಇದಕ್ಕಾಗಿ ಸಮಸ್ತ ಜನರು ಸೇರಿ ಕೆರೆಗಾಗಿ ಒಂದು ಜಮೀನನ್ನು ಬಿಡುತ್ತಿದ್ದರು. ಇದನ್ನೇ ಬಿತ್ತುವಾಟ ಅಥವಾ ಬಿತ್ತುವಟ್ಟ ಎಂದು ಶಾಸನಗಳಲ್ಲಿ ಉಲ್ಲೇಖಿಸಿದೆ. ಕೆರೆ ಅಥವಾ ಕಟ್ಟೆಗಳ ಜಲನಿರ್ವಹಣೆ ಮುಖ್ಯವಾದುದ್ದಾಗಿತ್ತು. ಇದರ ವೆಚ್ಚವನ್ನು ಭರಿಸಲು ಕೆರೆಯಲ್ಲಿ ಮೀನು ಸಾಕಾಣಿಕೆಗೆ ಅವಕಾಶ ನೀಡಿ ಅದರಿಂದ ಬಂದ ಹಣವನ್ನು ಕೆರೆ ಕಟ್ಟೆ ನಿರ್ವಹಣೆಗೆ ಉಪಯೋಗಿಸುತ್ತಿದ್ದರು.

ಶಾಸನೋಕ್ತ ಕೆರೆಗಳು

ಕ್ರ.ಸಂ	ಕೆರೆಗಳು	ಕಟ್ಟಿಸಿದವರ ಹೆಸರು	ಸ್ಥಳ	ಕಾಲ	ಆಕರ
೧.	ದೇವರ ಕೆರೆ	ಹಿರಿಹಳೆಯ ನಾಯಕ ಮತ್ತು ಚಿಕ್ಕಹಳೆಯ ನಾಯಕ	ಕೂರ್ಗಲ್ಲು	ಕ್ರಿ.ಶ.೧೩೩೯	ಕೂರ್ಗಲ್ಲು ಶಾ.ಸಂ.೨೯
೨.	ತಟಾಕ	ತಿಪ್ಪಶೆಟ್ಟಿ	ಚಿಕ್ಕಹೊನ್ನೂರು	ಕ್ರಿ.ಶ.೧೪೨೩	ಚಿಕ್ಕಹೊನ್ನೂರು ಶಾ.ಸಂ.೧೧೫
೩.	ವೀರಾಂಬುಧಿ	ವೀರವೀರದೇವರು	ಸಂನ್ಯಾಸಿಪುರ	ಕ್ರಿ.ಶ.೧೫೬೮	ಸಂನ್ಯಾಸಿಪುರ ಶಾ.ಸಂ.೧೧೪
೪.	ವೀರಾಂಬುಧಿ	ಪಿರಿಒಡೆಯರು	ಬೆಟ್ಟದಪುರ	ಕ್ರಿ.ಶ.೧೫೮೬	ಬೆಟ್ಟದಪುರ ಶಾ.ಸಂ.೭೨
೫.	ಹೆಸರಿನ ಉಲ್ಲೇಖವಿಲ್ಲ	ಇಲ್ಲ	ಗಳಗನಕೆರೆ	ಕ್ರಿ.ಶ.೧೬ನೆಯ ಶತಮಾನ	ಗಳಗನಕೆರೆ ಶಾ.ಸಂ.೧೪೫
೬.	ಸಿಂಗಾರ ತೋಟದ ಕೆರೆ	ಒಡೆಯರು	ಚಿಕ್ಕಪುರ	ಕ್ರಿ.ಶ.೧೬ನೆಯ ಶತಮಾನ	ಬೆಟ್ಟದಪುರ ಶಾ.ಸಂ.೬೦
೭	ಆಪ್ಪುಗೊಂಡನ ಹಳ್ಳಿಕೆರೆ	ಇಲ್ಲ	ಆಪ್ಪುಗೊಂಡ ನಹಳ್ಳಿ		

ಶಾಸನೋಕ್ತ ಬಾವಿಗಳು

ಕ್ರ.ಸಂ	ಕೆರೆಗಳು	ಕಟ್ಟಿಸಿದವರ ಹೆಸರು	ಸ್ಥಳ	ಕಾಲ	ಆಕರ
೧.	ಗಂಗಾಬಾವಿ	ನಂಜುಂಡಶೆಟ್ಟಿ	ಕಂಪಲಾಪುರ	ಕ್ರಿ.ಶ.೧೬೮೭	ಕಂಪಲಾಪುರ ಶಾ.ಸಂ.೧೧೯
೨.	ಬಾವಿ	ಸೇನಬೋವನಂಜಪ್ಪ	ಬೆಟ್ಟದಪುರ	ಕ್ರಿ.ಶ.೧೭ನೇ	ಬೆಟ್ಟದಪುರ ಶಾ.ಸಂ.೬೧

ಪಿರಿಯಾಪಟ್ಟಣ ತಾಲ್ಲೂಕಿನ ಕೆರೆಕಟ್ಟೆಗಳು

ಕ್ರ.ಸಂ.	ಗ್ರಾಮದ ಹೆಸರು	ಕೆರೆಯ ಹೆಸರು	ಉದ್ದೇಶ
೧.	ಮೇಲೂರು	ತೂಬಿನಕೆರೆ	ಕೃಷಿ/ಸಾಮಾನ್ಯ ಬಳಕೆ
೨.	ಕೆಳಗಿನಹಳ್ಳಿ	ಮಲ್ಲಶೆಟ್ಟಿಕೆರೆ	ಕೃಷಿ/ಸಾಮಾನ್ಯ ಬಳಕೆ
೩.	ಹರಿನಹಳ್ಳಿ	ದೊಡ್ಡಕೆರೆ	ಕೃಷಿ/ಸಾಮಾನ್ಯ ಬಳಕೆ
೪.	ಅತ್ತಿಗೋಡು	ಮೊಗೆಕೆರೆ	ಕೃಷಿ/ಸಾಮಾನ್ಯ ಬಳಕೆ
೫.	ಕೊತ್ತವಳ್ಳಿ	ಕೊತ್ತವಳ್ಳಿಕೆರೆ	ಕೃಷಿ/ಸಾಮಾನ್ಯ ಬಳಕೆ
೬.	ಅತ್ತಿಗೋಡು	ವಡ್ಡರಹಳ್ಳಿಕೆರೆ	ಕೃಷಿ/ಸಾಮಾನ್ಯ ಬಳಕೆ

೭.	ಅತ್ತಿಗೋಡು	ಅರಸನಕಟ್ಟೆಕೆರೆ	ಕೃಷಿ/ಸಾಮಾನ್ಯ ಬಳಕೆ
೮.	ರಾಜನಬಿಳಗುಲಿ	ಮೊಗೆಯೂಕೆರೆ	ಕೃಷಿ/ಸಾಮಾನ್ಯ ಬಳಕೆ
೯.	ರಾಜನಬಿಳಗುಲಿ	ಬೆವಿನಕೆರೆ	ಕೃಷಿ/ಸಾಮಾನ್ಯ ಬಳಕೆ
೧೦.	ಐಚನಹಳ್ಳಿ	ಗೌರಿಕೆರೆ	ಕೃಷಿ/ಸಾಮಾನ್ಯ ಬಳಕೆ
೧೧.	ಅಡಗೂರು	ನಂಜನಕೆರೆ	ಕೃಷಿ/ಸಾಮಾನ್ಯ ಬಳಕೆ
೧೨.	ಅಡಗೂರು	ದೊಡ್ಡಕೆರೆ	ಕೃಷಿ/ಸಾಮಾನ್ಯ ಬಳಕೆ
೧೩.	ಕಂಬೀಪುರ	ಕೆರೆ	ಕೃಷಿ/ಸಾಮಾನ್ಯ ಬಳಕೆ
೧೪.	ಹೊಸಹಳ್ಳಿ	ಎರೆಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೫.	ಮನಗನಹಳ್ಳಿ	ಮನುಗನಹಳ್ಳಿಕೆರೆ	ಕೃಷಿ/ಸಾಮಾನ್ಯ ಬಳಕೆ
೧೬.	ಸೀಗೂರು	ಅಮ್ಮನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೭.	ಆಯಿತನಹಳ್ಳಿ	ದೊಡ್ಡಕೆರೆ	ಕೃಷಿ/ಸಾಮಾನ್ಯ ಬಳಕೆ
೧೮.	ಹಿಟ್ನಹಳ್ಳಿ	ಬೊಮ್ಮರಸನಕೆರೆ	ಕೃಷಿ/ಸಾಮಾನ್ಯ ಬಳಕೆ
೧೯.	ಸೀಗೂರು	ಅನೆಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೨೦.	ಹರವೆಮಲ್ಲರಾಜಪಟ್ಟಣ	ಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೨೧.	ಹರವೆಮಲ್ಲರಾಜಪಟ್ಟಣ	ತೋಟದಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೨೨.	ಬಿಲ್ಲಹಳ್ಳಿ	ಚಿಕ್ಕಯ್ಯನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೨೩.	ಬಿಲ್ಲಹಳ್ಳಿ	ಶ್ಯಾನುಬೋಗನಕೆರೆ	ಕೃಷಿ/ಸಾಮಾನ್ಯ ಬಳಕೆ
೨೪.	ಸೀಗೂರು	ಅಮ್ಮನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೨೫.	ಆಯಿತನಹಳ್ಳಿ	ದೊಡ್ಡಕೆರೆ	ಕೃಷಿ/ಸಾಮಾನ್ಯ ಬಳಕೆ
೨೬.	ಸೀಗೂರು	ಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೨೭.	ಆಯಿತನಹಳ್ಳಿ	ಗೌಡನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೨೮.	ಬೆಕ್ಯಾ	ಕರೀಗೌಡನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೨೯.	ಹರಿಲಾಪುರ	ಮೊಗೆಕೆರೆ	ಕೃಷಿ/ಸಾಮಾನ್ಯ ಬಳಕೆ
೩೦.	ಕಂಪ್ಲಾಪುರ	ಸುಂಡಕೆರೆ	ಕೃಷಿ/ಸಾಮಾನ್ಯ ಬಳಕೆ
೩೧.	ಕಂಪ್ಲಾಪುರ	ಮಸಣಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೩೨.	ಹರಿಲಾಪುರ	ಮೊಗೆಕೆರೆ	ಕೃಷಿ/ಸಾಮಾನ್ಯ ಬಳಕೆ

೩೩.	ಮೆಲ್ಲಹಳ್ಳಿ	ಅರಳಿಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೩೪.	ಮಂಚದೇವನಹಳ್ಳಿ	ಇಡ್ಡಲಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೩೫.	ಮಂಚದೇವನಹಳ್ಳಿ	ಬಾಳೆಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೩೬.	ಬೈಲಕುಪ್ಪೆ	ಕೊಳ್ಳಿಹಳ್ಳಿಕೆರೆ	ಕೃಷಿ/ಸಾಮಾನ್ಯ	ಬಳಕೆ
೩೭.	ಬೈಲಕುಪ್ಪೆ	ಕೊಳ್ಳಿಹಳ್ಳಿಕೆರೆ	ಕೃಷಿ/ಸಾಮಾನ್ಯ	ಬಳಕೆ
೩೮.	ಬ್ಯಾಡರಬಿಳಗುಲಿ	ಪಾಕನಕೆರೆ	ಕೃಷಿ/ಸಾಮಾನ್ಯ	ಬಳಕೆ
೩೯.	ಬ್ಯಾಡರಬಿಳಗುಲಿ	ಚನ್ನನಾಯನಕೆರೆ	ಕೃಷಿ/ಸಾಮಾನ್ಯ	ಬಳಕೆ
೪೦.	ತರೀಕಲ್	ಸತ್ತೆಕೆರೆ	ಕೃಷಿ/ಸಾಮಾನ್ಯ	ಬಳಕೆ
೪೧.	ಚಿಕ್ಕನೇರಳೆ	ದೊಡ್ಡಕೆರೆ	ಕೃಷಿ/ಸಾಮಾನ್ಯ	ಬಳಕೆ
೪೨.	ದೊಡ್ಡನೇರಳೆ	ದಾಸನಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೪೩	ನಿಲುವಾಡಿ	ನಾಯ್ಕನಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೪೪.	ಬಿಳಗುಂದ	ಶಿವಪೂಜೆಕೆರೆ	ಕೃಷಿ/ಸಾಮಾನ್ಯ	ಬಳಕೆ
೪೫.	ಆವರ್ತಿ	ದೊಡ್ಡಮ್ಮನಹಳ್ಳಿಕೆರೆ	ಕೃಷಿ/ಸಾಮಾನ್ಯ	ಬಳಕೆ
೪೬.	ಗುಡ್ಡೇನಹಳ್ಳಿ	ಮೊಗೆಕೆರೆ	ಕೃಷಿ/ಸಾಮಾನ್ಯ	ಬಳಕೆ
೪೭.	ದೊಡ್ಡಹೊಸೂರು	ಗುಂಡನಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೪೮.	ಗಿರಗೂರು	ದೊಡ್ಡಯ್ಯನಕೆರೆ	ಕೃಷಿ/ಸಾಮಾನ್ಯ	ಬಳಕೆ
೪೯.	ದೊಡ್ಡಹೊಸೂರು	ಬಾಳೆಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೫೦.	ಹಲಗನಹಳ್ಳಿ	ಸೂಳೆಕೆರೆ	ಕೃಷಿ/ಸಾಮಾನ್ಯ	ಬಳಕೆ
೫೧.	ರಾಜನಬಿಳಗುಲಿ	ಚಿಕ್ಕರೆ	ಕೃಷಿ/ಸಾಮಾನ್ಯ	ಬಳಕೆ
೫೨.	ಸುರಗಳ್ಳಿ	ಚನ್ನಪ್ಪನಕೆರೆ	ಕೃಷಿ/ಸಾಮಾನ್ಯ	ಬಳಕೆ
೫೩.	ಹಲಗನಹಳ್ಳಿ	ಹಿರೆಕೆರೆ	ಕೃಷಿ/ಸಾಮಾನ್ಯ	ಬಳಕೆ
೫೪.	ಸುಗಂಧಿಕೆರೆ	ಸುಗಂಧಿಕೆರೆ	ಕೃಷಿ/ಸಾಮಾನ್ಯ	ಬಳಕೆ
೫೫.	ಅಸ್ವಾಳ್	ಕಲ್ಕೆರೆ	ಕೃಷಿ/ಸಾಮಾನ್ಯ	ಬಳಕೆ
೫೬.	ಸುಂಡವಾಳು	ಹೊದಿಕೆಕೆರೆ	ಕೃಷಿ/ಸಾಮಾನ್ಯ	ಬಳಕೆ
೫೭.	ಸನ್ಯಾಸಿಪುರ	ಅಜ್ಜಿಕೆರೆ	ಕೃಷಿ/ಸಾಮಾನ್ಯ	ಬಳಕೆ
೫೮.	ಚಿಕ್ಕವಡ್ಡರಕೆರೆ	ಚಾಮುಂಡಿಕಟ್ಟೆ	ಕೃಷಿ/ಸಾಮಾನ್ಯ	ಬಳಕೆ

೮೩.	ಬೆಟ್ಟದಪುರ	ಬಂಡಾರಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೮೪.	ಬೆಟ್ಟದಪುರ	ಮಾದಿಗರಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೮೫.	ಹರದೂರು	ಕೊರಳಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೮೬.	ಬೆಟ್ಟದಪುರ	ತಾವರೆಕೆರೆ	ಕೃಷಿ/ಸಾಮಾನ್ಯ	ಬಳಕೆ
೮೭.	ಬೆಟ್ಟದಪುರ	ತಾವರೆಕೆರೆ	ಕೃಷಿ/ಸಾಮಾನ್ಯ	ಬಳಕೆ
೮೮.	ನಾಗನಹಳ್ಳಿ	ನವಿಲಕೋಡಿಕಾವಲ್‌ಕೆರೆ	ಕೃಷಿ/ಸಾಮಾನ್ಯ	ಬಳಕೆ
೮೯.	ಕುಡುಕೂರು	ಬೊಳಶಟ್ಟಿಕೆರೆ	ಕೃಷಿ/ಸಾಮಾನ್ಯ	ಬಳಕೆ
೯೦.	ಕುಡುಕೂರು	ಕಲ್ಕೆರೆ	ಕೃಷಿ/ಸಾಮಾನ್ಯ	ಬಳಕೆ
೯೧.	ಕುಡುಕೂರು	ದೇವರಕೆರೆ	ಕೃಷಿ/ಸಾಮಾನ್ಯ	ಬಳಕೆ
೯೨.	ಹಿರೀಮಳಲಿ	ದೊಡ್ಡಕೆರೆ	ಕೃಷಿ/ಸಾಮಾನ್ಯ	ಬಳಕೆ
೯೩.	ಬೆಟ್ಟದತುಂಗ	ನವಿಲಕೋಡಿಕೆರೆ	ಕೃಷಿ/ಸಾಮಾನ್ಯ	ಬಳಕೆ
೯೪.	ಕಿತ್ತೂರು	ಛತ್ರಗಟ್ಟೆ	ಕೃಷಿ/ಸಾಮಾನ್ಯ	ಬಳಕೆ
೯೫.	ಕಿತ್ತೂರು	ದೊಡ್ಡಕೆರೆ	ಕೃಷಿ/ಸಾಮಾನ್ಯ	ಬಳಕೆ
೯೬.	ಕಿತ್ತೂರು	ಮೂಡಲಕೊಪ್ಪಲುಕೆರೆ	ಕೃಷಿ/ಸಾಮಾನ್ಯ	ಬಳಕೆ
೯೭.	ಬಾವಲಾಳು	ಚಿಕ್ಕಕೆರೆ	ಕೃಷಿ/ಸಾಮಾನ್ಯ	ಬಳಕೆ
೯೮.	ಹಂಡಿತವಳ್ಳಿ	ಸಣ್ಣಕೆರೆ	ಕೃಷಿ/ಸಾಮಾನ್ಯ	ಬಳಕೆ
೯೯.	ಹಂಡಿತವಳ್ಳಿ	ಮೊಗೆಯೂಕೆರೆ	ಕೃಷಿ/ಸಾಮಾನ್ಯ	ಬಳಕೆ
೧೦೦.	ಗಳಗನಕೆರೆ	ಕೆಳಗಿನಕೆರೆ	ಕೃಷಿ/ಸಾಮಾನ್ಯ	ಬಳಕೆ
೧೦೧.	ಹಂಡಿತವಳ್ಳಿ	ಹಂಡಿತವಳ್ಳಿಕೆರೆ	ಕೃಷಿ/ಸಾಮಾನ್ಯ	ಬಳಕೆ
೧೦೨.	ಹೊಸಹಳ್ಳಿ	ಮೊಗೆಕೆರೆ	ಕೃಷಿ/ಸಾಮಾನ್ಯ	ಬಳಕೆ
೧೦೩.	ಬೋಗನಹಳ್ಳಿ	ಬಾಳಕೆರೆ	ಕೃಷಿ/ಸಾಮಾನ್ಯ	ಬಳಕೆ
೧೦೪.	ಬೋಗನಹಳ್ಳಿ	ಮೊಗೆಕೆರೆ	ಕೃಷಿ/ಸಾಮಾನ್ಯ	ಬಳಕೆ
೧೦೫.	ದೊರೆಕೆರೆ	ಚೌಡಿಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೧೦೬.	ಹರೇನಹಳ್ಳಿ	ಮುಳ್ಳುಕೆರೆ	ಕೃಷಿ/ಸಾಮಾನ್ಯ	ಬಳಕೆ
೧೦೭.	ನಂದಿಪುರ	ದೊಡ್ಡಕೆರೆ	ಕೃಷಿ/ಸಾಮಾನ್ಯ	ಬಳಕೆ

೧೦೮.	ನಿಲಂಗಾಲ	ದೊಡ್ಡಕೆರೆ	ಕೃಷಿ/ಸಾಮಾನ್ಯ ಬಳಕೆ
೧೦೯.	ಹೊನ್ನೇನಹಳ್ಳಿ	ಬಾಳಕೆರೆ	ಕೃಷಿ/ಸಾಮಾನ್ಯ ಬಳಕೆ
೧೧೦.	ಮಾಕೋಡು	ಕೆರೆ	ಕೃಷಿ/ಸಾಮಾನ್ಯ ಬಳಕೆ
೧೧೧.	ಮಾಕೋಡು	ವಡ್ಡರಕೆರೆ	ಕೃಷಿ/ಸಾಮಾನ್ಯ ಬಳಕೆ
೧೧೨.	ಮಾಕೋಡು	ಅಮ್ಮನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೧೩.	ಮಾಕೋಡು	ಚಿಕ್ಕಕೆರೆ	ಕೃಷಿ/ಸಾಮಾನ್ಯ ಬಳಕೆ
೧೧೪.	ರಾಮನಹಳ್ಳಿ	ಸಾಬರಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೧೫.	ಶೆಟ್ಟಿಹಳ್ಳಿ	ಕೆರೆ	ಕೃಷಿ/ಸಾಮಾನ್ಯ ಬಳಕೆ
೧೧೬.	ಶೆಟ್ಟಿಹಳ್ಳಿ	ಕೆರೆ	ಕೃಷಿ/ಸಾಮಾನ್ಯ ಬಳಕೆ
೧೧೭.	ಮಾಕೋಡು	ಎಂ.ಶೆಟ್ಟಿಹಳ್ಳಿಕೆರೆ	ಕೃಷಿ/ಸಾಮಾನ್ಯ ಬಳಕೆ
೧೧೮.	ದೊಡ್ಡಬೇಲಾಳು	ಹುಮ್ಮಯ್ಯನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೧೯.	ಬಸಲಾಪುರ	ತೋಟದಕೆರೆ	ಕೃಷಿ/ಸಾಮಾನ್ಯ ಬಳಕೆ
೧೨೦.	ದೊಡ್ಡಬೇಲಾಳು	ಮುದ್ದಿಕೆರೆ	ಕೃಷಿ/ಸಾಮಾನ್ಯ ಬಳಕೆ
೧೨೧.	ದೊಡ್ಡಬೇಲಾಳು	ದಾಸನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೨೨.	ಚಿಕ್ಕಬೇಲಾಳು	ಮೊಗೆಕೆರೆ	ಕೃಷಿ/ಸಾಮಾನ್ಯ ಬಳಕೆ
೧೨೩.	ದೊಡ್ಡಬೇಲಾಳು	ಹೊಸಕೆರೆ	ಕೃಷಿ/ಸಾಮಾನ್ಯ ಬಳಕೆ
೧೨೪.	ದೊಡ್ಡಬೇಲಾಳು	ಚನ್ನಿಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೨೫.	ಮಾಕನಹಳ್ಳಿ	ತೆಂಗಿನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೨೬.	ಬಸಲಾಪುರ	ತಿಮ್ಮೇಗೌಡನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೨೭.	ಜವನಿಕಟ್ಟೆ	ಮಸಣಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೨೮.	ದೊಡ್ಡಬೇಲಾಳು	ಹಳೆಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೨೯.	ದೊಡ್ಡಬೇಲಾಳು	ಕಲ್ಕೆರೆಕೆರೆ	ಕೃಷಿ/ಸಾಮಾನ್ಯ ಬಳಕೆ
೧೩೦.	ದೊಡ್ಡಬೇಲಾಳು	ಕೆರೆ	ಕೃಷಿ/ಸಾಮಾನ್ಯ ಬಳಕೆ
೧೩೧.	ಅಬ್ಬಳತಿ	ತೂಬಿನಕೆರೆ	ಕೃಷಿ/ಸಾಮಾನ್ಯ ಬಳಕೆ
೧೩೨.	ಮಾಲಂಗಿ	ಮೊಗೆಕೆರೆ	ಕೃಷಿ/ಸಾಮಾನ್ಯ ಬಳಕೆ
೧೩೩.	ಐಚನಹಳ್ಳಿ	ಹೊಲದಮೊಗೆಯೋಕೆರೆ	ಕೃಷಿ/ಸಾಮಾನ್ಯ ಬಳಕೆ

೧೩೪.	ಐಚನಹಳ್ಳಿ	ಗುರಪ್ಪನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೩೫.	ಐಚನಹಳ್ಳಿ	ಮೊಗೆಕೆರೆ	ಕೃಷಿ/ಸಾಮಾನ್ಯ ಬಳಕೆ
೧೩೬.	ಐಚನಹಳ್ಳಿ	ಚೆಮಿಕೆರೆ	ಕೃಷಿ/ಸಾಮಾನ್ಯ ಬಳಕೆ
೧೩೭.	ಹಬಟೂರು	ತೋಟದಕೆರೆ	ಕೃಷಿ/ಸಾಮಾನ್ಯ ಬಳಕೆ
೧೩೮.	ಹಬಟೂರು	ಮೊಗೆಕೆರೆ	ಕೃಷಿ/ಸಾಮಾನ್ಯ ಬಳಕೆ
೧೩೯.	ಅಂಕನಹಳ್ಳಿ	ಲಕ್ಕಶೆಟ್ಟಿಕೆರೆ	ಕೃಷಿ/ಸಾಮಾನ್ಯ ಬಳಕೆ
೧೪೦.	ಹಬಟೂರು	ಹುಲಿಕ್ಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೪೧.	ಲಕ್ಷ್ಮೀಪುರ	ಕರಡಿಲಕ್ಕನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೪೨.	ಹಬಟೂರು	ಹಳೆಕಿಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೪೩.	ಹಬಟೂರು	ಕೊಳದಕೆರೆ	ಕೃಷಿ/ಸಾಮಾನ್ಯ ಬಳಕೆ
೧೪೪.	ಹಬಟೂರು	ತೂಬಿನಕೆರೆ	ಕೃಷಿ/ಸಾಮಾನ್ಯ ಬಳಕೆ
೧೪೫.	ಐಚನಹಳ್ಳಿ	ಗುರಪ್ಪನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೪೬.	ಐಚನಹಳ್ಳಿ	ಕಮರೀಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೪೭.	ಸೆಣಬಿನಕುಪ್ಪೆ	ಮೊಗೆಕೆರೆ	ಕೃಷಿ/ಸಾಮಾನ್ಯ ಬಳಕೆ
೧೪೮.	ತೆಲಗಿನಕುಪ್ಪೆ	ನಿಂಗಾಪಟ್ಟಣಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೪೯.	ನೇರಳಕುಪ್ಪೆ	ಸತ್ತೆಕೆರೆ	ಕೃಷಿ/ಸಾಮಾನ್ಯ ಬಳಕೆ
೧೫೦.	ತೆಲಗಿನಕುಪ್ಪೆ	ಅಣ್ಣಿಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೫೧.	ನೇರಳಕುಪ್ಪೆ	ಹೊಲಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೫೨.	ತೆಲಗಿನಕುಪ್ಪೆ	ಗೌಡನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೫೩.	ತೆಲಗಿನಕುಪ್ಪೆ	ಮೊಗೆಕೆರೆ	ಕೃಷಿ/ಸಾಮಾನ್ಯ ಬಳಕೆ
೧೫೪.	ಕೋಮಲಾಪುರ	ಆಲದಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೫೫.	ಕೊಣಸೂರು	ಹುಣಸೇಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೫೬.	ಕೊಣಸೂರು	ಬಿದಿರುಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೫೭.	ಕಾನೂರು	ಹೊಸಕೆರೆ	ಕೃಷಿ/ಸಾಮಾನ್ಯ ಬಳಕೆ
೧೫೮.	ಕಾನೂರು	ಸತ್ತೆಕೆರೆ	ಕೃಷಿ/ಸಾಮಾನ್ಯ ಬಳಕೆ
೧೫೯.	ಕೋಮಲಾಪುರ	ಬಾಳೆಕೆರೆ	ಕೃಷಿ/ಸಾಮಾನ್ಯ ಬಳಕೆ

೧೬೦.	ಕಾನೂರು	ದೊಡ್ಡಕೆರೆ	ಕೃಷಿ/ಸಾಮಾನ್ಯ ಬಳಕೆ
೧೬೧.	ಕೋಮಲಾಪುರ	ಗುರಪ್ಪನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೬೨.	ಕೋಮಲಾಪುರ	ದೇವರಕೆರೆ	ಕೃಷಿ/ಸಾಮಾನ್ಯ ಬಳಕೆ
೧೬೩.	ಕಂಠಾಪುರ	ಕುಂಬಾರಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೬೪.	ಕಂಠಾಪುರ	ಪಂಡಿತನಕೆರೆ	ಕೃಷಿ/ಸಾಮಾನ್ಯ ಬಳಕೆ
೧೬೫.	ಕಂಠಾಪುರ	ಬಿದರಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೬೬.	ಚನ್ನೇನಹಳ್ಳಿ	ಹುಂಬಾಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೬೭.	ಚನ್ನೇನಹಳ್ಳಿ	ಗೌಡನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೬೮.	ಚನ್ನೇನಹಳ್ಳಿ	ಬಾರಲಿನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೬೯.	ಬೆಳತ್ತೂರು	ಕೊರಲಾಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೭೦.	ಬೆಳತ್ತೂರು	ಬಾಳೆಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೭೧.	ಚನ್ನೇನಹಳ್ಳಿ	ದೇವಿಚಂದ್ರಕೆರೆ	ಕೃಷಿ/ಸಾಮಾನ್ಯ ಬಳಕೆ
೧೭೨.	ಕಂದೇಗಾಲ	ಅಣಿಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೭೩.	ಕಂದೇಗಾಲ	ಮೊಗೆಕೆರೆ	ಕೃಷಿ/ಸಾಮಾನ್ಯ ಬಳಕೆ
೧೭೪.	ಚನ್ನೇನಹಳ್ಳಿ	ತೋಟದಕೆರೆ	ಕೃಷಿ/ಸಾಮಾನ್ಯ ಬಳಕೆ
೧೭೫.	ಗಂಗಾಧರಬಸವನಹಳ್ಳಿ	ಹುಣಸೆಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೭೬.	ಹೆಮ್ಮಿಗೆ	ಮೊಗೆಕೆರೆ	ಕೃಷಿ/ಸಾಮಾನ್ಯ ಬಳಕೆ
೧೭೭.	ಕೋಡಿಹಳ್ಳಿ	ಹೊಂಗೆಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೭೮.	ಬೆಳತ್ತೂರು	ಬಾಳೆಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೭೯.	ನಾರಳಾಪುರ	ದೊಡ್ಡಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೮೦.	ಕಿರಂಗೂರು	ಅಮ್ಮನಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೮೧.	ಕಿರಂಗೂರು	ಕಿರಂಗೂರುಹೊಲಗಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೮೨.	ಕಿರಂಗೂರು	ಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೮೩.	ಲಿಂಗಾಪುರ	ಸುಂಡಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೧೮೪.	ಲಿಂಗಾಪುರ	ಗುಂಡಪಟ್ಟಣಟ್ಯಾಂಕ್	ಕೃಷಿ/ಸಾಮಾನ್ಯ ಬಳಕೆ
೧೮೫.	ಕಿರಂಗೂರು	ಗೌಡನಕಟ್ಟೆ	ಕೃಷಿ/ಸಾಮಾನ್ಯ ಬಳಕೆ

೧೮೬.	ಆಯಿರಬೀಡು	ಮಸ್ತದೇವಿಕೆರೆ	ಕೃಷಿ/ಸಾಮಾನ್ಯ	ಬಳಕೆ
೧೮೭.	ಆಯಿರಬೀಡು	ಅಣಿಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೧೮೮.	ಬೆಮ್ಮತ್ತಿ	ಬುಂಡಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೧೮೯.	ಕಾಮನಹಳ್ಳಿ	ತಮ್ಮಯ್ಯನಕೆರೆ	ಕೃಷಿ/ಸಾಮಾನ್ಯ	ಬಳಕೆ
೧೯೦.	ಕೋರಲಾಹೊಸಹಳ್ಳಿ	ಅಮ್ಮನಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೧೯೧.	ಕಾಮನಹಳ್ಳಿ	ತೋಟದಕೆರೆ	ಕೃಷಿ/ಸಾಮಾನ್ಯ	ಬಳಕೆ
೧೯೨.	ಭೂತನಹಳ್ಳಿ	ಸತ್ತೇಕೆರೆ	ಕೃಷಿ/ಸಾಮಾನ್ಯ	ಬಳಕೆ
೧೯೩.	ನವಿಲೂರು	ಪೊಲಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೧೯೪.	ನವಿಲೂರು	ಕೆಸರಕೆರೆ	ಕೃಷಿ/ಸಾಮಾನ್ಯ	ಬಳಕೆ
೧೯೫.	ನವಿಲೂರು	ದೇವಿಕೆರೆ	ಕೃಷಿ/ಸಾಮಾನ್ಯ	ಬಳಕೆ
೧೯೬.	ಆಲನಹಳ್ಳಿ	ಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೧೯೭.	ಆಲನಹಳ್ಳಿ	ಸತ್ತೇಕೆರೆ	ಕೃಷಿ/ಸಾಮಾನ್ಯ	ಬಳಕೆ
೧೯೮.	ಆಲನಹಳ್ಳಿ	ಮಾಗೆಕೆರೆ	ಕೃಷಿ/ಸಾಮಾನ್ಯ	ಬಳಕೆ
೧೯೯.	ಭೂತನಹಳ್ಳಿ	ಮಾಗೆಕೆರೆ	ಕೃಷಿ/ಸಾಮಾನ್ಯ	ಬಳಕೆ
೨೦೦.	ಕಾಮನಹಳ್ಳಿ	ಬಿದಿರುಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೨೦೧.	ಹುಣಸೇವಾಡಿ	ಚಿಕ್ಕಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೨೦೨.	ಹುಣಸೇವಾಡಿ	ಗೌಡನಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೨೦೩.	ಕಾಮನಹಳ್ಳಿ	ಎಲೆಕೆರೆ	ಕೃಷಿ/ಸಾಮಾನ್ಯ	ಬಳಕೆ
೨೦೪.	ಹುಣಸೇವಾಡಿ	ಅಣಿಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೨೦೫.	ಕುಂದನಹಳ್ಳಿ	ಹುಣಸೇಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೨೦೬.	ಹುಣಸೇವಾಡಿ	ಹುಲಿಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೨೦೭.	ಮಲ್ಲಿನಾಥಪುರ	ಹೊಸಕೆರೆ	ಕೃಷಿ/ಸಾಮಾನ್ಯ	ಬಳಕೆ
೨೦೮.	ಮಲ್ಲಿನಾಥಪುರ	ಅಮ್ಮನಕೆರೆ	ಕೃಷಿ/ಸಾಮಾನ್ಯ	ಬಳಕೆ
೨೦೯.	ಅಂಬ್ಲಾರೆ	ತಾವರೆಕೆರೆ	ಕೃಷಿ/ಸಾಮಾನ್ಯ	ಬಳಕೆ
೨೧೦.	ಅಂಬ್ಲಾರೆ	ಹೊಸಕೆರೆ	ಕೃಷಿ/ಸಾಮಾನ್ಯ	ಬಳಕೆ
೨೧೧.	ಹಾರನಹಳ್ಳಿ	ಮುಳ್ಳುರುಕೆರೆ	ಕೃಷಿ/ಸಾಮಾನ್ಯ	ಬಳಕೆ

೨೧೨.	ಗಂಗನಕಟ್ಟೆ	ಕೆಂಪನಕೆರೆ	ಕೃಷಿ/ಸಾಮಾನ್ಯ	ಬಳಕೆ
೨೧೩.	ಹಾರನಹಳ್ಳಿ	ಚಿಕ್ಕಕೆರೆ ಅಥವಾ ಕಂದನಕೆರೆ	ಕೃಷಿ/ಸಾಮಾನ್ಯ	ಬಳಕೆ
೨೧೪.	ಹಾರನಹಳ್ಳಿ	ಜೋಗಿಕೆರೆ	ಕೃಷಿ/ಸಾಮಾನ್ಯ	ಬಳಕೆ
೨೧೫.	ಹಾರನಹಳ್ಳಿ	ದೊಡ್ಡಕೆರೆ	ಕೃಷಿ/ಸಾಮಾನ್ಯ	ಬಳಕೆ
೨೧೬.	ನಾಗನಹಳ್ಳಿ	ನವಿಲಕೋಡಿ	ಕೃಷಿ/ಸಾಮಾನ್ಯ	ಬಳಕೆ
೨೧೭.	ಹೊಸಳ್ಳಿ	ಬಾಳೆಕೆರೆ	ಕೃಷಿ/ಸಾಮಾನ್ಯ	ಬಳಕೆ
೨೧೮.	ಚಪ್ಪರದಹಳ್ಳಿ	ಅಂಬ್ಲಾರೆಕೆರೆ	ಕೃಷಿ/ಸಾಮಾನ್ಯ	ಬಳಕೆ
೨೧೯.	ಚಪ್ಪರದಹಳ್ಳಿ	ಹಾರ್‍ನಹಳ್ಳಿಕೆರೆ	ಕೃಷಿ/ಸಾಮಾನ್ಯ	ಬಳಕೆ
೨೨೦.	ಚಪ್ಪರದಹಳ್ಳಿ	ಕರಿಕೋಡಿಹಳ್ಳಿಕೆರೆ	ಕೃಷಿ/ಸಾಮಾನ್ಯ	ಬಳಕೆ
೨೨೧.	ಕೋಗಿಲವಾಡಿ	ಚೌಡಿಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೨೨೨.	ಚೌತಿ	ಶಿವಗೌಡನಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೨೨೩.	ಕಾಳೆತಿಮ್ಮನಹಳ್ಳಿ	ಲಿಂಗಯ್ಯನಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೨೨೪.	ಕಾಳೆತಿಮ್ಮನಹಳ್ಳಿ	ಹಳ್ಳದಕೆರೆ	ಕೃಷಿ/ಸಾಮಾನ್ಯ	ಬಳಕೆ
೨೨೫.	ಕಾಳೆತಿಮ್ಮನಹಳ್ಳಿ	ಕರಡಿಕೆರೆ	ಕೃಷಿ/ಸಾಮಾನ್ಯ	ಬಳಕೆ
೨೨೬.	ಮುತ್ತೂರು	ಕೊಳದಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೨೨೭.	ಬೇಗೂರು	ದೇವರಸನಕೆರೆ	ಕೃಷಿ/ಸಾಮಾನ್ಯ	ಬಳಕೆ
೨೨೮.	ಬೇಗೂರು	ಕವಳಕೆರೆ	ಕೃಷಿ/ಸಾಮಾನ್ಯ	ಬಳಕೆ
೨೨೯.	ಬೇಗೂರು	ಅಮ್ಮನಕೆರೆ	ಕೃಷಿ/ಸಾಮಾನ್ಯ	ಬಳಕೆ
೨೩೦.	ಮಾಗಳಿ	ಮೊಗೆಯೋಕೆರೆ	ಕೃಷಿ/ಸಾಮಾನ್ಯ	ಬಳಕೆ
೨೩೧.	ಮುತ್ತೂರು	ದೊಡ್ಡಕೆರೆ	ಕೃಷಿ/ಸಾಮಾನ್ಯ	ಬಳಕೆ
೨೩೨.	ಮುತ್ತೂರು	ಹರನಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೨೩೩.	ಮುತ್ತೂರು	ಕುರುಬರಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೨೩೪.	ಚೌತಿ	ಚೌಡಿಕಟ್ಟೆ	ಕೃಷಿ/ಸಾಮಾನ್ಯ	ಬಳಕೆ
೨೩೫.	ಚೌತಿ	ಹಳೇಕೆರೆ	ಕೃಷಿ/ಸಾಮಾನ್ಯ	ಬಳಕೆ
೨೩೬.	ಕೋಗಿಲವಾಡಿ	ಮೊಗೆಕೆರೆ	ಕೃಷಿ/ಸಾಮಾನ್ಯ	ಬಳಕೆ
೨೩೭.	ಕೋಗಿಲವಾಡಿ	ಹಿರೇಸಮುದ್ರಕೆರೆ	ಕೃಷಿ/ಸಾಮಾನ್ಯ	ಬಳಕೆ

೨೩೮.	ಜೌತಿ	ಶೆಟ್ಟಿಕೆರೆ	ಕೃಷಿ/ಸಾಮಾನ್ಯ ಬಳಕೆ
೨೩೯.	ಜೌತಿ	ಮೊಗೆಕೆರೆ	ಕೃಷಿ/ಸಾಮಾನ್ಯ ಬಳಕೆ
೨೪೦.	ಪಿರಿಯಾಪಟ್ಟಣ	ತಾವರೆಕೆರೆ	ಕೃಷಿ/ಸಾಮಾನ್ಯ ಬಳಕೆ
೨೪೧.	ಪಿರಿಯಾಪಟ್ಟಣ	ಬಾಳೆಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೨೪೨.	ಪಿರಿಯಾಪಟ್ಟಣ	ಪೆದ್ದಿಕಟ್ಟೆ	ಕೃಷಿ/ಸಾಮಾನ್ಯ ಬಳಕೆ
೨೪೩.	ಹರಿಲಾಪುರ	ಕಟ್ಟೆ	ಕೃಷಿ/ಸಾಮಾನ್ಯ ಬಳಕೆ

ಅಡಿಟಿಪ್ಪಣಿಗಳು

೧. ವಾಸುದೇವನ್ ಸಿ.ಎಸ್, ೨೦೦೧: **ಹಂಪಿ ಪರಿಸರದ ಕೆರೆಗಳು,** ಪು.೫

೨. ರಮೇಶ ನಾಯಕ(ಸಂ), ೨೦೦೭: **ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ,** ಪು.೧೨೫

೩. ಅಂಬಳಿಕೆ ಹಿರಿಯಣ್ಣ(ಸಂ), ೨೦೧೨: **ಕನ್ನಡ ವಿಷಯ ವಿಶ್ವಕೋಶ: ಇತಿಹಾಸ ಮತ್ತು ಪುರಾತತ್ವ,** ಪು.೫೪೯.

೪. ರಮೇಶ ನಾಯಕ(ಸಂ), **ಪೂರ್ವೋಕ್ತ,** ಪು.೮

೫. ನೀಲತ್ತಹಳ್ಳಿ ಕಸ್ತೂರಿ(ಅನು), ೨೦೦೦: **ಕರ್ನಾಟಕದಲ್ಲಿ ಕೆರೆ ನೀರಾವರಿ,** ಪು.೨೭.

೬. ವಾಸುದೇವನ್ ಸಿ.ಎಸ್, ೨೦೦೧: **ಪೂರ್ವೋಕ್ತ,** ಪು.೧೫.

೭. **ಕನ್ನಡ ವಿಷಯ ವಿಶ್ವಕೋಶ, ಪೂರ್ವೋಕ್ತ,** ಪು.೫೪೯.

೮. ವಾಸುದೇವನ್ ಸಿ.ಎಸ್, ೨೦೦೧: **ಪೂರ್ವೋಕ್ತ,** ಪು.೨೭.

೯. ರಾಜಾರಾಮ್ ಹೆಗಡೆ(ಸಂ), ೨೦೦೨: **ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ,** ಪು.೧.

೧೦. ಅದೇ, ಪು.೨

೧೧. ಚಿನ್ನಸ್ವಾಮಿ ಸೋಸಲೆ ಎನ್., ೨೦೦೪: **ನಮ್ಮ ಗ್ರಾಮಗಳು ಅಂದು–ಇಂದು,** ಪು.೫೭.

೧೨. ನೀಲತ್ತಹಳ್ಳಿ, **ಪೂರ್ವೋಕ್ತ,** ಪು.೬೯.

೧೩. ವಾಸುದೇವನ್ ಸಿ.ಎಸ್, ೨೦೦೧: **ಪೂರ್ವೋಕ್ತ,** ಪು.೧೮.

೧೪. ಎ.ಕ. ಸಂಪುಟ ೪, ಶಾ.ಸಂ.೨೯.

೧೫. ಅದೇ, ಪಿ.ಪ.೧೧೫

೧೬ ಅದೇ, ಪಿ.ಪ.೧೧೪

೧೭. ಅದೇ, ಪು.ಪ.೭೨

೧೮. ಅದೇ, ಪು.ಪ.೧೪೫

೧೯. ಅದೇ, ಪು.ಪ.೬೦

೨೦. ಅದೇ, ಪು.ಪ.೬೦

೨೧. ಅದೇ, ಪು.ಪ.೧೧೯

೨೨. ಅದೇ, ಪು.ಪ.೬೧

ಅಧ್ಯಾಯ ಎಂಟು

ಸಮಾರೋಪ

ಅಧ್ಯಾಯ ಎಂಟು

ಸಮಾರೋಪ

ಸಂಶೋಧನೆಯ ಮುಖ್ಯ ಉದ್ದೇಶ ತಳಮಟ್ಟದಲ್ಲಿರುವ ವಿಷಯಗಳನ್ನು ಪರಿಶೀಲಿಸಿ ಫಲಿತಗಳನ್ನು ಕಂಡುಕೊಳ್ಳುವುದು. ಇದಕ್ಕೆ ಅನುಗುಣವಾಗಿ ಪ್ರಾಚೀನ ಕಾಲದಿಂದ ಪಿರಿಯಾಪಟ್ಟಣ ತಾಲ್ಲೂಕು ಪರಿಸರವು ಪ್ರಾಗೈತಿಹಾಸ ಮತ್ತು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಇತಿಹಾಸ ಕಾಲದಿಂದ ಮಾತ್ರವಲ್ಲದೆ, ಇತಿಹಾಸ ಪೂರ್ವಕಾಲದಿಂದಲೂ ಮಾನವ ಸಂಸ್ಕೃತಿಯ ಕುರುಹಗಳನ್ನು ನೀಡುತ್ತ ಬಂದಿದೆ. ಈ ಪರಿಸರವು ವಿಭಿನ್ನ ವೈಶಿಷ್ಟತೆಗಳಿಂದ ಕೂಡಿದೆ. ಅಂತಹ ವೈಶಿಷ್ಟ್ಯತೆಯು ಪ್ರಾಗೈತಿಹಾಸಿಕ, ಐತಿಹಾಸಿಕ, ಸಾಂಸ್ಕೃತಿಕ ಮತ್ತು ರಾಜಕೀಯವಾಗಿ ಪ್ರಾಮುಖ್ಯತೆಯನ್ನು ಹೊಂದಿದೆ. ಚರಿತ್ರೆಯ ಕಾಲದಿಂದ ಹಲವು ಸಾಮ್ರಾಜ್ಯ, ಸಾಮಂತ ರಾಜಮನೆತನಗಳು ಆಳ್ವಿಕೆಯನ್ನು ಮಾಡಿವೆ. ಇದಕ್ಕೆ ಅನುಗುಣವಾಗಿ ಪುರಾತತ್ವ ಮತ್ತು ಚರಿತ್ರೆಯ ಅವಶೇಷಗಳು ಇಂದಿಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಮಾಹಿತಿ ನೀಡು ವಲ್ಲಿ ಸಫಲವಾಗಿವೆ.

ಪ್ರಸ್ತುತ ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಪುರಾತತ್ವ ಅಧ್ಯಯನ ವಿಷಯ ಕುರಿತು ವಿವರವಾದ ಅಧ್ಯಯನಗಳು ನಡೆದಿರುವುದು ವಿರಳ. ಈ ಹಿನ್ನೆಲೆಯಲ್ಲಿ ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಪುರಾತತ್ವ ಅಧ್ಯಯನ ವಿಷಯವನ್ನು ಆಯ್ದುಕೊಂಡು ಸ್ಥಳೀಯ ಚರಿತ್ರೆಯನ್ನು ವಿಶ್ಲೇಷಣಾತ್ಮಕ ಹಾಗೂ ವಿವರಣಾತ್ಮಕವಾಗಿ ಕಟ್ಟಿಕೊಡುವ ಪ್ರಯತ್ನದ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಆ ಮೂಲಕ ತಾಲ್ಲೂಕಿನಲ್ಲಿರುವ ಪ್ರಾಗಿತಿಹಾಸ ಕಾಲದ ನೆಲೆಗಳು, ಐತಿಹ್ಯ, ಸ್ಥಳನಾಮಗಳು, ಚಾರಿತ್ರಿಕ ಕಾಲಘಟ್ಟದ ದೇವಾಲಯಗಳು, ಬಸದಿಗಳು, ಮೂರ್ತಿಶಿಲ್ಪಗಳು ಮತ್ತು ರಕ್ಷಣಾ ವಾಸ್ತುಶಿಲ್ಪವಾದ ಕೋಟೆ, ಸ್ಮಾರಕ ಶಿಲ್ಪ ಹಾಗೂ ಕೆರೆಕಟ್ಟೆಗಳ ಬಗ್ಗೆ ಅಧ್ಯಯನ ನಡೆಸಲಾಯಿತು. ಒಟ್ಟಾರೆಯಾಗಿ ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಚರಿತ್ರೆಯನ್ನು ಸಮಗ್ರವಾಗಿ ರಚಿಸುವ ಸಲುವಾಗಿ ಸೂಕ್ಷ್ಮ ಸಂಗತಿಗಳನ್ನು ಅರಿಯುವ ಪ್ರಯತ್ನ

ಮಾಡಲಾಗಿದೆ. ಪ್ರಾಗಿತಿಹಾಸ ಕಾಲದಿಂದ ಸ್ವಾತಂತ್ರ್ಯಪೂರ್ವ ಕಾಲದವರೆಗೆ ಒಂದಲ್ಲ ಒಂದು ರೀತಿಯಲ್ಲಿ ಮಾನವ ತನ್ನ ಪ್ರಭಾವ ಬೀರಿರುವುದನ್ನು ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸಲಾಗಿದ್ದು, ಈ ಮೂಲಕ ಪ್ರಸ್ತುತ ಅಧ್ಯಯನದ ಒಟ್ಟು ಆಶಯವನ್ನು ಸೂಚಿಸಲಾಗಿದೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರ ಮತ್ತು ಇಲ್ಲಿ ಆಡಳಿತ ನಡೆಸಿದ ಅರಸರ ಕುರಿತಾಗಿ ತಕ್ಕಮಟ್ಟಿಗೆ ಅಧ್ಯಯನಗಳು ನಡೆದಿವೆ. ಆದರೆ ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಪುರಾತತ್ವ ಅಧ್ಯಯನದ ಬಗ್ಗೆ ನಡೆಯಬೇಕಾದ ಅಧ್ಯಯನ ಸಾಕಷ್ಟಿದೆ. ಈ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವನ್ನು ಯೋಜಿಸಿಕೊಳ್ಳಲಾಯಿತು.

ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಭೌಗೋಳಿಕ ವೈಶಿಷ್ಟ್ಯ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಅವಲೋಕಿಸಲಾಗಿದೆ. ಯಾವುದೇ ಜನಾಂಗದ ನಾಗರಿಕತೆಗಳ ಜೀವನ ಸಂಸ್ಕೃತಿ ರೂಪುಗೊಳ್ಳುವಲ್ಲಿ ಅಲ್ಲಿಯ ಭೌಗೋಳಿಕ ಪರಿಸರದ ಪ್ರಭಾವ ಮುಖ್ಯವಾಗಿರುವುದನ್ನು ಗುರುತಿಸಬಹುದು. ಹಾಗಾಗಿ ಯಾವುದೇ ಸಾಂಸ್ಕೃತಿಕ ಅಂಶಗಳ ಅಧ್ಯಯನಗಳಿಗೆ ಅಲ್ಲಿಯ ಭೌಗೋಳಿಕ ಲಕ್ಷಣಗಳನ್ನು ಅವಲೋಕಿಸುವುದು ಅಧ್ಯಯನದ ದೃಷ್ಟಿಯಿಂದ ಅವಶ್ಯಕವಾದ ಅಂಶವಾಗಿದೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರವು ಇದಕ್ಕೆ ಹೊರತಾಗಿಲ್ಲ. ಇಲ್ಲಿ ವ್ಯಾಪಕವಾಗಿರುವ ಬೆಟ್ಟಗುಡ್ಡಗಳ ಸಾಲು, ವಿಶಾಲವಾದ ಬಯಲು ಪ್ರದೇಶ, ಖನಿಜ ಸಂಪತ್ತು ಹಾಗೂ ಸೀಮಿತ ಜಲ, ಸಸ್ಯ ಸಂಪತ್ತುಗಳು ಇಲ್ಲಿಯ ಚರಿತ್ರೆಯನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿರುವುದನ್ನು ಗಮನಿಸಬಹುದು. ಸಾಮಾನ್ಯವಾಗಿ ನೀರಿನ ಸೌಲಭ್ಯಗಳ ಪರಿಸರದಲ್ಲಿಯೇ ಪ್ರಾಚೀನ ನಾಗರಿಕತೆಗಳು ಬೆಳೆದುಬಂದಿರುವುದು ಕಂಡುಬಂದಿದೆ. ಇದಕ್ಕೆ ವ್ಯತಿರಿಕ್ತವಾದ ಸನ್ನಿವೇಶ ಪಿರಿಯಾಪಟ್ಟಣ ತಾಲ್ಲೂಕು ಪರಿಸರ ಇದೆಯಾದರೂ ಪ್ರಾಚೀನ ಕಾಲದಿಂದಲೂ ಇಲ್ಲಿಯ ಮಾನವ ಕೃತಕವಾಗಿ ನೀರನ್ನು ಸಂಗ್ರಹಿಸುವ ವಿಧಾನಗಳನ್ನು ಕಂಡುಕೊಂಡಿದ್ದನೆಂದು ಕಂಡುಬಂದಿದೆ. ಚಾರಿತ್ರಿಕ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಕದಂಬ, ಗಂಗ, ಚಾಲುಕ್ಯ, ಚಂಗಾಳ್ವ, ಹೊಯ್ಸಳ, ವಿಜಯನಗರ ಹಾಗೂ ಮೈಸೂರು ಒಡೆಯರು ಈ ಪರಿಸರದಲ್ಲಿ ಆಳ್ವಿಕೆ ಮಾಡಿರುವರು. ಇವರ ಕಾಲದಲ್ಲಿ ನಿರ್ಮಿಸಲ್ಪಟ್ಟ ದೇವಾಲಯ, ಶಾಸನಗಳಿಂದ ತಿಳಿಯಲಾಗಿದೆ. ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಫಲಿತಗಳು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿವೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ನೂತನ ಶಿಲಾಯುಗ, ಬೃಹತ್ ಶಿಲಾಯುಗದ ನೆಲೆಗಳಿದ್ದು, ಅವುಗಳನ್ನು ಪತ್ತೆ ಹಚ್ಚುವ ಕಾರ್ಯ ನಡೆದಿದೆ. ನನ್ನ ಅಧ್ಯಯನದ ವೇಳೆಯಲ್ಲಿ

ಪ್ರಾಗಿತಿಹಾಸ ಕಾಲದ ನೆಲೆಗಳನ್ನು ಪತ್ತೆ ಹಚ್ಚುವ ಪ್ರಯತ್ನ ಮಾಡಲಾಗಿದೆ. ಈ ವೇಳೆಯಲ್ಲಿ ಇಪ್ಪತ್ತೆರಡು ಬೃಹತ್ ಶಿಲಾಯುಗದ(ಪುನಾಡನಹಳ್ಳಿ, ಅತ್ತಿಗೋಡು, ಹರದೋರು, ನಾಗನಹಳ್ಳಿ, ನಿಲವಾಡಿ, ಆಯಿತನಹಳ್ಳಿ, ಕಂದೆಗಾಲ, ಹರವೆಮಲ್ಲರಾಜಪಟ್ಟಣ, ಸೂಳೆಕೋಟೆ, ಸುಂಡುವಾಳು, ಹಳಗನಹಳ್ಳಿ, ದೊಡ್ಡಹೊಸೂರು, ದೊಡ್ಡಕಮರವಳ್ಳಿ, ಬೂದಿತಿಟ್ಟು, ಮನುಗನಹಳ್ಳಿ) ನೆಲೆಗಳನ್ನು ಪತ್ತೆ ಹಚ್ಚಲಾಯಿತು. ಆದರೆ ಪಿರಿಯಾಪಟ್ಟಣ ತಾಲ್ಲೂಕು ಪರಿಸರವು ಫಲವತ್ತಾದ ಭೂಮಿ ಯಾಗಿದೆ. ಇದರಿಂದ ಪ್ರಾಗಿತಿಹಾಸ ಕಾಲದ ಮಡಿಕೆ ಚೂರು, ಆಯುಧಗಳು ದೊರೆತಿರುವುದಿಲ್ಲ, ಇದಕ್ಕೆ ಕಾರಣ ನೆಲೆಗಳು ಅವನತಿಗೊಂಡಿರುವುದು. ಒಟ್ಟಿನಲ್ಲಿ ಈ ನೆಲೆಗಳು ಆಧುನಿಕ ಮಾನವನ ವಿಸ್ತೃತ ಕೃಷಿ ಚಟುವಟಿಕೆಗಳ ಪರಿಣಾಮವಾಗಿ ತಮ್ಮ ಮೂಲ ಸ್ವರೂಪ ಕಳೆದುಕೊಂಡಿವೆ. ಆದರೂ ಸಹ ಬೃಹತ್‌ಶಿಲಾಯುಗದಿಂದ ಮಾನವ ನೆಲೆಯಾಗಿರುವುದನ್ನು ಇಲ್ಲಿ ಗುರುತಿಸಲಾಗಿದೆ.

ಸ್ಥಳನಾಮಗಳಿಂದ ಹೊಸ ಹೊಸ ವಿಚಾರಗಳು ಬೆಳಕಿಗೆ ಬರುತ್ತಿವೆ. ಅದು ಮಾನವನ ಹುಟ್ಟು, ಬೆಳವಣಿಗೆ, ಸಂಸ್ಕೃತಿ, ನಾಗರಿಕತೆಯ ಹೊಸದೃಷ್ಟಿ ಮತ್ತು ಜೀವಂತ ಪಳೆಯುಳಿಕೆಗಳ ಮಹತ್ವವನ್ನು ಖಚಿತಪಡಿಸುತ್ತದೆ. ಪ್ರಾಗಿತಿಹಾಸಯುಗದಲ್ಲಿ ಮಾನವ ಬೇಟೆಯಿಂದ ಜೀವನ ನಿರ್ವಹಿಸುತ್ತಿದ್ದಾಗ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುತ್ತಿದ್ದುದರಿಂದ ವ್ಯವಸ್ಥಿತವಾದ ಗ್ರಾಮಗಳಿರುವ ಸಾಧ್ಯತೆ ಇರಲಿಲ್ಲ. ವ್ಯವಸಾಯ ಮತ್ತು ಪಶುಪಾಲನೆ ಬಳಕೆಗೆ ಬಂದು ಶಿಲಾಯುಗದಿಂದ ಹಲವು ಗ್ರಾಮ ನೆಲೆಗಳು ಕಂಡುಬಂದಿವೆ.

ವ್ಯಕ್ತಿ ಪ್ರಧಾನ ಐತಿಹ್ಯಗಳಲ್ಲಿ ಚಂಗಾಲರಾಯ, ಕರಿಕಾಳ ಚೋಳ, ಪೆರಿಯರಾಜ, ಕಣ್ವಮಹರ್ಷಿ, ದಶರಥರಾಮೇಶ್ವರ, ಸೀತೆ, ರಾವಂದೊರು ಮುಂತಾದವುಗಳನ್ನು ಮೌಖಿಕ ದಾಖಲೆಗಳ ಮೂಲಕ ದಾಖಲಿಸಿ ವಿಮರ್ಶಿಸಿ ವಿಶ್ಲೇಷಣೆ ಮಾಡಲಾಗಿದೆ. ಸ್ಥಳ ಪ್ರಧಾನ ಐತಿಹ್ಯಗಳಲ್ಲಿ ಬೆಣಗಾಲು, ಕಂದೆಗಾಲ, ಬೂದಿತಿಟ್ಟು ಇವುಗಳನ್ನು ಕುರಿತು ವಿವೇಚಿಸಲಾಗಿದೆ. ಒಟ್ಟಾರೆ ಐತಿಹ್ಯಗಳು ಚರಿತ್ರೆಗೆ ಸಮೀಪವರ್ತಿಯಾಗಿದ್ದು, ಭೌಗೋಳಿಕ, ಜನಾಂಗಿಕ, ಚಾರಿತ್ರಿಕ, ಪ್ರಾಗಿತಿಹಾಸಿಕ, ಆಡಳಿತಾತ್ಮಕ ದೃಷ್ಟಿಕೋನದ ವಿಚಾರಗಳನ್ನು ಕುರಿತು ಚರ್ಚಿಸಲಾಗಿದೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ದೊರೆತಿರುವ ಶಾಸನಗಳು ಸಂಖ್ಯೆಯ ದೃಷ್ಟಿಯಲ್ಲಿ ಅಧಿಕವಾದರೂ ಮಾಹಿತಿಯ ದೃಷ್ಟಿಯಿಂದ ವಿರಳವೆನ್ನಬಹುದು. ಆದರೂ ದೊರೆತಿರುವ ಶಾಸನಗಳಿಂದ ಅಂದಿನ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಅಂಶಗಳನ್ನು ತಿಳಿಯಲಾಗಿದೆ. ಕ್ರಿ.ಶ.೪೭೫–೪೯೦ರಲ್ಲಿ ದೊರೆತ ಕದಂಬರ ಶಾಂತಿವರ್ಮನ ಮಗನಾದ

ಮೃಗೇಶವರ್ಮನ ಕಾಲದ ಶಾಸನವು ಈ ಪರಿಸರದಲ್ಲಿ ದೊರೆತಿರುವ ಅತೀ ಪ್ರಾಚೀನ ಶಾಸನವಾಗಿದೆ. ಇಲ್ಲಿ ದೊರೆತಿರುವ ಶಾಸನಗಳು ಕದಂಬ, ಗಂಗ, ಚಾಲುಕ್ಯ, ಚಂಗಾಳ್ವ, ಹೊಯ್ಸಳ, ವಿಜಯನಗರದ ಅರಸರು ಮತ್ತು ಮೈಸೂರು ಒಡೆಯರು ಹಾಗೂ ಹಾಲೇರಿ ಅರಸರಿಗೆ ಸಂಬಂಧಿಸಿದ್ದು, ಅವರ ಆಡಳಿತಾವಧಿಯ ಮಾಹಿತಿಯನ್ನು ತಿಳಿಸಿಕೊಡುತ್ತವೆ. ಇಲ್ಲಿಯ ಶಾಸನಗಳು ಕನ್ನಡ, ಸಂಸ್ಕೃತ ಭಾಷೆಯಲ್ಲಿ ದೊರೆತಿದ್ದು, ಹೆಚ್ಚಾಗಿ ಕನ್ನಡದ ಶಾಸನ ಬರಹಗಳು ಲಭ್ಯವಾಗಿವೆ.

ಈ ಪರಿಸರದಲ್ಲಿ ಆಳ್ವಿಕೆ ಮಾಡಿದ ಅರಸರು, ಸಾಮಂತರು ಮತ್ತು ಅಧಿಕಾರಿಗಳು ದೇವಾಲಯಗಳನ್ನು ನಿರ್ಮಿಸುವಲ್ಲಿ ಉತ್ಸುಹಕರಾಗಿದ್ದರೆಂದು ಕಂಡುಬರುತ್ತದೆ. ಆದರೆ ಕಲಾತ್ಮಕ ದೃಷ್ಟಿಯಿಂದ ಗಮನಿಸಿದಾಗ ಇಲ್ಲಿಯ ದೇವಾಲಯಗಳು ಪಲ್ಲವ, ಚಾಲುಕ್ಯ, ಹೊಯ್ಸಳ ಮತ್ತು ರಾಷ್ಟ್ರಕೂಟ ಹಾಗೂ ವಿಜಯನಗರ ಕಾಲದ ದೇವಾಲಯಗಳಂತೆ ಸೌಂದರ್ಯದಿಂದ ಕೂಡಿರದೆ ಸರಳ ರಚನೆಯಾಗಿವೆ. ಬಹುಶಃ ಈ ಪರಿಸರವನ್ನು ಆಳಿದ ಚಂಗಾಳ್ವರು, ಸಾಮಂತ ಅರಸರಾಗಿದ್ದೆ ಇದಕ್ಕೆ ಕಾರಣವಿರಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಚಿಕ್ಕ ಚಿಕ್ಕ ಗುಡಿಗಳು, ಮಂಟಪಗಳು ಇದೇ ಮೊದಲ ಬಾರಿಗೆ ಬೆಳಕು ಕಾಣತ್ತಲಿವೆ. ಹಾಗಾಗಿ ಇಂತಹ ಅಪರಿಚಿತ ದೇವಾಲಯ ಸ್ಮಾರಕಗಳನ್ನು ಅಧ್ಯಯನಕ್ಕೆ ಒಳಪಡಿಸಿ ಮತ್ತು ವಿಂಗಡಿಸಿಕೊಂಡು ವಿಶ್ಲೇಷಿಸಲಾಗಿದೆ. ಇಲ್ಲಿನ ದೇವಾಲಯಗಳು ಕದಂಬರಿಂದ ಹಿಡಿದು ಮೈಸೂರು ಒಡೆಯರ ಕಾಲದವರೆಗೆ ನಿರ್ಮಾಣಗೊಂಡಿವೆ. ಇಲ್ಲಿಯ ಬಹುತೇಕ ದೇವಾಲಯ, ಮಂಟಪ, ಗುಡಿಗಳು ದ್ರಾವಿಡ ವಾಸ್ತುಶೈಲಿ ಲಕ್ಷಣಗಳಿಂದ ಕೂಡಿವೆ. ಈ ಅಧ್ಯಯನದಲ್ಲಿ ದೇವಾಲಯಗಳ ರಚನೆ ವಾಸ್ತುಶೈಲಿ ಮತ್ತು ಲಕ್ಷಣಗಳ ಬಗ್ಗೆ ಅರಿಯಲು ಪ್ರಯತ್ನಿಸಲಾಗಿದೆ.

ಶಾಸನಾಧಾರಿತ ದೇವಾಲಯಗಳು, ಶಾಸನಾಧಾರಿತವಲ್ಲದ ದೇವಾಲಯಗಳು ಮತ್ತು ಬಸದಿಗಳನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗುರುತಿಸಲಾಗಿದೆ. ಇವುಗಳು ಕದಂಬ, ಗಂಗ, ಚಂಗಾಳ್ವ, ಚಾಲುಕ್ಯ, ಹೊಯ್ಸಳ, ವಿಜಯನಗರ ಮತ್ತು ಮೈಸೂರು ಒಡೆಯರ ಕಾಲದಾಗಿದ್ದು ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ವಾಸ್ತುಶಿಲ್ಪಗಳ ಅಧ್ಯಯನದಲ್ಲಿ ಶೈವ, ವೈಷ್ಣವ, ಶಾಕ್ತ ಹಾಗೂ ಜೈನ ದೇವಾಲಯಗಳೆಂದು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಅವುಗಳ ರಚನೆಯು ಬೆಳೆದುಬಂದ ಹಿನ್ನೆಲೆಯಲ್ಲಿ ವಿವೇಚಿಸುತ್ತ, ವಿವಿಧ ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡ ಬಗ್ಗೆ ಚಿತ್ರಣವನ್ನು ನೀಡುವ ಪ್ರಯತ್ನ ಈ ಪ್ರಬಂಧದಲ್ಲಿ ಮೊದಲ ಬಾರಿಗೆ ಮಾಡಲಾಗಿದೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ದೊರೆತಿರುವ ದೇವಾಲಯ, ಬಸದಿಗಳು ಹಾಗೂ ಮೂರ್ತಿಶಿಲ್ಪಗಳನ್ನು ಆಧಾರವಾಗಿಟ್ಟುಕೊಂಡು ತಾಲ್ಲೂಕಿನ ಪ್ರಾಚೀನ

ಮತ್ತು ಮಧ್ಯಯುಗೀನ ಕಾಲದ ಧಾರ್ಮಿಕ ಇತಿಹಾಸವನ್ನು ರಚಿಸಲಾಗಿದೆ. ಶೈವ, ವೈಷ್ಣವ, ಶಾಕ್ತ ಮತ್ತು ಜೈನ ಇತರೆ ಧರ್ಮಗಳಿಗೆ ಸಂಬಂಧಿಸಿದ ದೇವಾಲಯಗಳು, ಬಸದಿ ಗಳು ಹಾಗೂ ಮೂರ್ತಿಶಿಲ್ಪಗಳು ಈ ಪರಿಸರದ ವಿವಿಧ ಗ್ರಾಮಗಳಲ್ಲಿ ದೊರೆತಿವೆ. ಶೈವಧರ್ಮಕ್ಕೆ ಸಂಬಂಧಿಸಿದ ದೇವಾಲಯ ಹಾಗೂ ಮೂರ್ತಿಶಿಲ್ಪಗಳು ಇತರೆ ಧರ್ಮದ ದೇವಾಲಯ ಶಿಲ್ಪಗಳಿಗಿಂತಲೂ ಅಧಿಕ ಪ್ರಮಾಣದಲ್ಲಿ ದೊರೆತಿವೆ. ಇದರಿಂದಾಗಿ ಶೈವ ಧರ್ಮದ ಆರಾಧಕರು ಹೆಚ್ಚಾಗಿದ್ದರೆಂದು ಹಾಗೂ ಪ್ರಾಚೀನ ಮತ್ತು ಮಧ್ಯಯುಗದ ಕಾಲದಲ್ಲಿ ಶೈವ ಧರ್ಮ ಇತರೆ ಧರ್ಮಗಳಿಗಿಂತ ಪ್ರಾಬಲ್ಯದಲ್ಲಿತ್ತೆಂದು ಸ್ಪಷ್ಟವಾಗುತ್ತದೆ.

ಈ ಪರಿಸರದಲ್ಲಿ ಜೈನ, ಶೈವ ಮತ್ತು ವೈಷ್ಣವ ಮತಾಚರಣೆಗಳು ಅಸ್ತಿತ್ವದಲ್ಲಿದ್ದವು. ದೇವಾಲಯ ವಾಸ್ತುಶೈಲಿಯನ್ನು ಗಮನಿಸಿದಾಗ ಪ್ರಾರಂಭದಲ್ಲಿ ಜೈನಧರ್ಮ ಪ್ರಧಾನವಾಗಿರುವುದು ಕಂಡುಬಂದಿದೆ. ನಂತರ ಶೈವ, ವೈಷ್ಣವ ದೇವಾಲಯಗಳು ಹಾಗೂ ಮೂರ್ತಿಶಿಲ್ಪಗಳ ಬೆಳವಣಿಗೆಯನ್ನು ಕಾಣಬಹುದು. ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳು ಕಡಿಮೆ ಸಂಖ್ಯೆಯಲ್ಲಿ ದೊರೆತಿವೆ. ಶಾಕ್ತ ಧರ್ಮಕ್ಕೆ ಸೇರಿದ ದೇವಾಲಯಗಳು ಸಹ ಕಡಿಮೆ ಪ್ರಮಾಣದಲ್ಲಿ ದೊರೆತಿವೆ. ಇದರಿಂದಾಗಿ ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಲ್ಲಿ ಈ ಮತಗಳು ಅಸ್ತಿತ್ವದಲ್ಲಿದ್ದವೆಂದು ಖಚಿತಪಡಿಸಬಹುದು. ಪ್ರಾರಂಭದಲ್ಲಿ ಜೈನಧರ್ಮ ಪ್ರಭಾವವಿದ್ದರೂ ಚಾಲುಕ್ಯ ಮತ್ತು ವಿಜಯನಗರ ಅರಸರ ಕಾಲದಲ್ಲಿ ಶೈವ ಮತ್ತು ವೈಷ್ಣವ ಧರ್ಮ ಹೆಚ್ಚು ಪ್ರಭಾವಶಾಲಿಯಾಗಿತ್ತೆಂದು ತಿಳಿಯಲಾಗಿದೆ. ಈ ಪರಿಸರದಲ್ಲಿ ಕಂಡುಬಂದಿರುವ ಸ್ಮಾರಕಶಿಲ್ಪಗಳಾದ ವೀರಗಲ್ಲು, ಮಾಸ್ತಿಗಲ್ಲುಗಳಿಂದ ಅಂದಿನ ವೀರ, ಶೂರ ಪರಂಪರೆಯ ಜೊತೆಗೆ ಸಾಮಾಜಿಕ ಜೀವನದ ಚಿತ್ರಣದ ಬಗ್ಗೆ ಅರಿಯಲಾಗಿದೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ರಾಜಮನೆತನಗಳ ಆಡಳಿತ ವ್ಯಾಪ್ತಿಯನ್ನು ಗುರುತಿಸಿಕೊಂಡು ಕ್ಷೇತ್ರಕಾರ್ಯವನ್ನು ನಡೆಸಲಾಯಿತು. ಈ ಕ್ಷೇತ್ರದಲ್ಲಿ ಬೃಹತ್ ಶಿಲಾಸಮಾಧಿಗಳು, ದೇವಾಲಯಗಳು, ಮೂರ್ತಿಶಿಲ್ಪ ಮತ್ತು ಕೆರೆಕಟ್ಟೆಗಳನ್ನು ಗುರುತಿಸಿ ಅಧ್ಯಯನಕ್ಕೆ ಒಳಪಡಿಸಲಾಯಿತು. ಇವುಗಳಲ್ಲಿ ಪ್ರಮುಖವಾದ ಕೆಲವೇ ದೇವಾಲಯಗಳ ಬಗೆಗೆ ಈ ಮೊದಲೇ ಬಿಡಿ ಲೇಖನಗಳು ಹೊರಬಂದಿವೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಸಣ್ಣ ಸ್ಮಾರಕಗಳು ಇದೇ ಮೊದಲ ಬಾರಿಗೆ ಬೆಳಕು ಕಾಣುತ್ತಲಿವೆ. ಹಾಗಾಗಿ ಇಂತಹ ಅಪರಿಚಿತ ಸ್ಮಾರಕಗಳನ್ನು ಅಧ್ಯಯನಕ್ಕೆ ಒಳಪಡಿಸಿ ಬೆಳಕಿಗೆ ತರಲಾಗಿದೆ. ಪಿರಿಯಾಪಟ್ಟಣ ತಾಲೂಕು ಪರಿಸರದಲ್ಲಿ ಕಂಡುಬಂದಿರುವ ದೇವಾಲಯಗಳು ಚಿಕ್ಕದಾಗಿರುವುದರ ಜೊತೆಗೆ

ಎತ್ತರವೂ ಕಡಿಮೆಯುಳ್ಳದಾಗಿವೆ. ಹೀಗಾಗಿ ಇವುಗಳಲ್ಲಿನ ಶಿಲ್ಪಗಳು ಚಿಕ್ಕದಾಗಿವೆ. ಮೂಲವಿಗ್ರಹವನ್ನು ಬಿಟ್ಟು ಉಳಿದ ಶಿಲ್ಪಗಳು ಅಂತರಾಳ ಮತ್ತು ನವರಂಗ ಭಾಗದಲ್ಲಿ ಪ್ರತಿಷ್ಠಾಪಿತವಾಗಿವೆ. ಇಲ್ಲಿಯ ಶಿಲ್ಪಗಳ ಮುಖ್ಯ ಲಕ್ಷಣಗಳನ್ನು ಹೀಗೆ ಗುರುತಿಸಲಾಗಿದೆ. ಶಿಲ್ಪಗಳು ಹೆಚ್ಚಾಗಿ ಗಟ್ಟಿ ಕಲ್ಲಿನಲ್ಲಿ ಕೆತ್ತಿದವುಗಳಾಗಿವೆ. ಉಬ್ಬು ಕೆತ್ತನೆ ಅಲ್ಪಪ್ರಮಾಣದಲ್ಲಿದ್ದು, ಬಿಡಿಬಿಡಿಯಾಗಿ ಅಂಗಗಳನ್ನು ಬಿಡಿಸಿದ ಶಿಲ್ಪಗಳು ಕಡಿಮೆ. ಇರುವ ಶಿಲ್ಪಗಳು ಹೆಚ್ಚು ಅಲಂಕರಣೆಯಿಂದ ಕೂಡಿರುವುದಿಲ್ಲ. ಈ ಶಿಲ್ಪಗಳಲ್ಲಿ ನಂದಿಶಿಲ್ಪಗಳೇ ಅಧಿಕವಾಗಿವೆ. ಈ ಪರಿಸರವನ್ನು ಆಳಿದ ಅರಸರು ಮತ್ತು ಸಾಮಂತ ಅರಸರು ಶಿಲ್ಪಗಳಿಗೆ ಗಾರೆ, ಲೋಹ ಮತ್ತು ಶಿಲೆಗಳನ್ನು ಬಳಸಿರುತ್ತಾರೆ. ಏಕೆಂದರೆ ದೀರ್ಘಕಾಲ ಬಾಳಿಕೆ ಬರಬಲ್ಲ ವಸ್ತುಗಳಾಗಿದ್ದರಿಂದ ಇವುಗಳನ್ನು ಉಪಯೋಗಿಸಿರುವರು. ಪ್ರಸ್ತುತ ದಿನಗಳಲ್ಲೂ ಶಿಲ್ಪಗಳನ್ನು ರಚಿಸಲು ಲೋಹಶಿಲ್ಪಗಳನ್ನು ಅಧಿಕವಾಗಿ ಬಳಸುತ್ತಿರುವರು. ಮೂರ್ತಿಶಿಲ್ಪಗಳ ಬಗ್ಗೆ ಸಮೀಕ್ಷೆ ಹಾಗೂ ಅಧ್ಯಯನ ಬಹುಮಟ್ಟಿಗೆ ನಡೆದೇ ಇರಲಿಲ್ಲವೆಂದು ಹೇಳಬಹುದು. ಹಾಗಾಗಿ ಈ ಅಧ್ಯಯನದಲ್ಲಿ ಕದಂಬ, ಗಂಗ, ಚಾಲುಕ್ಯ ಮತ್ತು ಚಂಗಾಳ್ವ ಮತ್ತು ಇತರೆ ಕಾಲದ ಮೂರ್ತಿಶಿಲ್ಪಗಳನ್ನು ವಿಂಗಡಿಸಿಕೊಂಡು ಅವುಗಳ ಲಕ್ಷಣಗಳನ್ನು ಗುರುತಿಸಲಾಗಿದೆ.

ಸಾಮ್ರಾಜ್ಯದ ಅಥವಾ ರಾಜ್ಯದ ರಕ್ಷಣೆಗೆ ಕೋಟೆ ಪ್ರಮುಖ ಪಾತ್ರವಹಿಸುತ್ತದೆ. ಅಂತಹ ಸುಭದ್ರ ಕೋಟೆಯನ್ನು ಪಿರಿಯಾಪಟ್ಟಣ ತಾಲ್ಲೂಕು ಪರಿಸರವನ್ನು ಆಳಿದ ಅರಸರು ಕಟ್ಟಿದ ಕೋಟೆಯನ್ನು ಇಂದಿಗೂ ಕಾಣಬಹುದು. ಕೋಟೆಯ ರಚನೆ, ಬುರುಜು-ಬತೇರಿಗಳನ್ನು ಕುರಿತು ವಿವರಿಸಲಾಗಿದೆ. ಪ್ರಸ್ತುತ ಸ್ಮಾರಕಗಳ ಸಂರಕ್ಷಣೆ ಮಾಡಿ ಚರಿತ್ರೆಯ ಅವಶೇಷಗಳಾದ ಕೋಟೆ-ಕೊತ್ತಲುಗಳನ್ನು ಉಳಿಸುವುದು ಅವಶ್ಯಕವಾಗಿದೆ.

ಶಾಸನೋಕ್ತ ಕೆರೆ ಕಟ್ಟೆಗಳು ಸಂಖ್ಯೆಯಲ್ಲಿ ಕಡಿಮೆ ಇವೆ. ಅವುಗಳಲ್ಲಿ ಪ್ರಮುಖವಾದುಗಳೆಂದರೆ ದೇವರ ಕೆರೆ, ತಟಕಕೆರೆ, ವೀರಾಂಬುಧಿ ಕೆರೆ, ಸಿಂಗಾರ ತೋಟದ ಕೆರೆ ಮತ್ತು ಆಪ್ಪುಗೊಂಡನಹಳ್ಳಿ ಹಾಗೆಯೇ ಶಾಸನೋಕ್ತ ಬಾವಿಗಳು ಕಡಿಮೆ ಇವೆ. ಅವುಗಳಲ್ಲಿ ಗಂಗಾಬಾವಿ ಮತ್ತು ಸೇನಬೋವನಂಜಪ್ಪ ಕಟ್ಟಿಸಿದ ಬಾವಿಗಳಿವೆ. ಈ ಪರಿಸರವು ಪಶ್ಚಿಮ ಘಟ್ಟದ ಅರಣ್ಯ ಪ್ರದೇಶದಲ್ಲಿರುವುದರಿಂದ ವಾರ್ಷಿಕ ಮಳೆಯೂ ಅಧಿಕ ಪ್ರಮಾಣದಲ್ಲಿ ಬೀಳುತ್ತಿತ್ತು. ಇದರಿಂದ ಬಿದ್ದ ಮಳೆನೀರು ತಗ್ಗದ ಪ್ರದೇಶಗಳಲ್ಲಿ ಬಂದು ಸೇರುತ್ತಿತ್ತು. ಜೊತೆಗೆ ಅರಣ್ಯ ಪ್ರದೇಶವಿದ್ದುದರಿಂದ ಜನಸಂಖ್ಯೆಯೂ ಕಡಿಮೆ ಇದ್ದಿತ್ತು. ಇದರಿಂದ ಕೆರೆ ಕಟ್ಟೆ ಕಟ್ಟಿಸುವ ಅವಶ್ಯಕತೆ ಕಡಿಮೆ ಇತ್ತೆಂದು ಕಂಡುಬಂದಿದೆ.

ಕೆರೆ ಕಟ್ಟೆಗಳ ಬಗ್ಗೆ ಸಮೀಕ್ಷೆ ಹಾಗೂ ಅಧ್ಯಯನ ಬಹುಮಟ್ಟಿಗೆ ನಡೆದೇ ಇಲ್ಲವೆಂದು ಹೇಳಬಹುದು. ಹಾಗಾಗಿ ಈ ಅಧ್ಯಯನದಲ್ಲಿ ಪ್ರಾಚೀನ ಕಾಲದ ಕೆರೆಕಟ್ಟೆ, ಕೊಳ ಮತ್ತು ಪುಷ್ಕರಣಿಗಳ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ಪ್ರಾಚೀನ ಕಾಲದಿಂದಲೂ ಈ ಪರಿಸರದಲ್ಲಿ ಬಹುತೇಕವಾಗಿ ಕೃಷಿಗೆ ಮತ್ತು ಗೃಹಪಯೋಗಿ ಕಾರ್ಯಕ್ಕೆ ಕೆರೆ, ಕಟ್ಟೆ, ಬಾವಿ ಹಾಗೂ ಪ್ರಾಕೃತಿಕ ದೋಣೆಗಳನ್ನು ಆಶ್ರಯಿಸಿರುವುದನ್ನು ವಿಶ್ಲೇಷಿಸಲಾಗಿದೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರವು ಅರೆಮಲೆನಾಡು ಪ್ರದೇಶ ವ್ಯಾಪ್ತಿಗೆ ಒಳಪಟ್ಟಿದೆ. ಇಲ್ಲಿ ಬೆಟ್ಟಗುಡ್ಡಗಳು ಕಂಡುಬರುವುದರಿಂದ ದೊಡ್ಡ ದೊಡ್ಡ ಕೆರೆಗಳು ಅಧಿಕ ಸಂಖ್ಯೆಯಲ್ಲಿ ನಿರ್ಮಿತಗೊಂಡಿಲ್ಲ. ಮಳೆಯು ಸಮಪ್ರಮಾಣದಲ್ಲಿ ಬೀಳುವುದರಿಂದ ಹಳ್ಳಕೊಳ್ಳಗಳು ಮಳೆ ನೀರಿನಿಂದಲೇ ತುಂಬಿಕೊಳ್ಳುವವು. ಇದರಿಂದ ಅಧಿಕ ಪ್ರಮಾಣದಲ್ಲಿ ಕೆರೆಕಟ್ಟೆಗಳನ್ನು ಕಟ್ಟಿಲ್ಲದಿರು ವುದನ್ನು ಗುರುತಿಸಲಾಗಿದೆ. ಹಾಗೆಯೇ ಹಿಂದೆ ಅರಣ್ಯ ಪ್ರದೇಶ ಮತ್ತು ಮಳೆಯು ಅಧಿಕವಾಗಿದ್ದ ರಿಂದ ಜನವಾಸ್ತವ್ಯವು ಕಡಿಮೆಯಿದ್ದಿತು. ಈ ಪರಿಸರದಲ್ಲಿ ಆಳ್ವಿಕೆ ಮಾಡಿದ ಅಂದಿನ ಸಣ್ಣಪುಟ್ಟ ಮನೆತನಗಳ ಆಡಳಿತಗಾರರು ದೊಡ್ಡ ದೊಡ್ಡ ದೇವಾಲಯ ಮತ್ತು ಸ್ಮಾರಕಗಳನ್ನು ಕಟ್ಟಲಿಕ್ಕೆ ಆಸಕ್ತಿ ಹೊಂದಿಲ್ಲದರಿರುವುದನ್ನು ಗುರುತಿಸಲಾಗಿದೆ.

ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಬಗ್ಗೆ ಹಿಂದೆ ನಡೆದಿರುವ ಅಧ್ಯಯನಗಳನ್ನು ಕುರಿತು ಈ ಹಿಂದೆಯೇ ಸ್ಪಷ್ಟಪಡಿಸಲಾಗಿದೆ. ಹಿಂದಿನ ಅಧ್ಯಯನಗಳು ಸಮಗ್ರತೆಯನ್ನು ಪಡೆದಿರುವುದಿಲ್ಲ ಎಂಬ ಹಿನ್ನೆಲೆಯಲ್ಲಿ ಇಂತಹ ಕೊರತೆಯನ್ನು ನೀಗಿಸುವ ಪ್ರಯತ್ನ ಕೈಗೊಳ್ಳಲಾಯಿತು. ಕ್ಷೇತ್ರ ಕಾರ್ಯದ ಮೂಲಕ ಪುರಾತತ್ವ ಆಕರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಚರಿತ್ರೆ ನಿರ್ಮಿಸುವ ಪ್ರಯತ್ನವನ್ನು ಮಾಡಲಾಗಿದೆ. ಇದುವರೆವಿಗೂ ಪ್ರಕಟಣೆಯಾಗಿರದ ಹೊಸ ನೆಲೆಗಳನ್ನು ಪತ್ತೆ ಹಚ್ಚುವ ಹಾಗೂ ಅರ್ಥೈಸುವ ಪ್ರಯತ್ನ ಮಾಡಲಾಗಿದೆ. ಇಲ್ಲಿನ ದೇವಾಲಯ ವಾಸ್ತುಶಿಲ್ಪವನ್ನು ಕುರಿತು ಯಾವುದೇ ಸಮಗ್ರ ಅಧ್ಯಯನ ನಡದೇ ಇಲ್ಲವೆನ್ನಬಹುದು. ಈ ಕೊರತೆಯನ್ನು ನೀಗಿಸುವ ಪ್ರಯತ್ನ ಮಾಡಲಾಗಿದೆ. ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿ ವಿವಿಧ ಕಾಲಘಟ್ಟಗಳಲ್ಲಿ ನಿರ್ಮಿತಿಗೊಂಡ ದೇವಾಲಯ ವಾಸ್ತುಶಿಲ್ಪ, ಮೂರ್ತಿಶಿಲ್ಪ ಹಾಗು ಕೆರೆಕಟ್ಟೆಗಳ ಬಗ್ಗೆ ಒಂದೆಡೆ ಇಡಿಯಾಗಿ ನೀಡುವಂಥ ಪ್ರಯತ್ನವನ್ನು ಮೊದಲ ಬಾರಿಗೆ ಈ ಮಹಾಪ್ರಬಂಧದಲ್ಲಿ ಮಾಡಲಾಗಿದೆ. ಇಷ್ಟಾಗಿಯೂ ಈ ಪರಿಸರದ ಪ್ರಾಗಿತಿಹಾಸದಿಂದ ಮತ್ತಷ್ಟು ಚಾರಿತ್ರಿಕ ವಿಷಯಗಳನ್ನು ವಿವಿಧ ದೃಷ್ಟಿಕೋನಗಳಿಂದ ಅಧ್ಯಯನ ನಡೆಸುವುದಕ್ಕೆ ಅವಕಾಶಗಳಿವೆ.

ಪ್ರಸ್ತುತ ಪಿರಿಯಾಪಟ್ಟಣ ತಾಲ್ಲೂಕು ಪರಿಸರದಲ್ಲಿರುವ ಬೃಹತ್ ಶಿಲಾ ಸಮಾಧಿಗಳು, ದೇವಾಲಯಗಳು ಮತ್ತು ಬಸದಿಗಳು, ಮಂಟಪಗಳು, ಮೂರ್ತಿಶಿಲ್ಪಗಳು, ಕೆರೆಕಟ್ಟೆ, ಕೊಳಗಳು

ವಿನಾಶದ ಅಂಚಿನಲ್ಲಿವೆ. ಗ್ರಾಮ ಪಟ್ಟಣಗಳು ಆಧುನಿಕ ಶೈಲಿಯಲ್ಲಿ ಬೆಳೆಯುತ್ತಿವೆ. ಹೊಸ ಕಟ್ಟಡಗಳನ್ನು ಕಟ್ಟಲು ನಿವೇಶನಕ್ಕಾಗಿ ದೇವಾಲಯ, ಬೃಹತ್ ಶಿಲಾಸಮಾಧಿ ಮತ್ತು ಕೆರೆಕಟ್ಟೆಗಳನ್ನು ಒತ್ತುವರಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಪಾಳುಬಿದ್ದ ದೇವಾಲಯ, ಬೃಹತ್ ಶಿಲಾಸಮಾಧಿಗಳ ಕಲ್ಲುಗಳಿಂದ ಮನೆ, ಚರಂಡಿ ನಿರ್ಮಿಸಲು, ಸಾಕು ಪ್ರಾಣಿಗಳನ್ನು ಕಟ್ಟಿಹಾಕಲು ಉಪಯೋಗಿಸುತ್ತಿರುವರು. ಮತ್ತೊಂದೆಡೆ ರಸ್ತೆಗಳ ಅಗಲೀಕರಣ, ಹೀಗೆ ಒಂದಲ್ಲ ಒಂದು ಕಾರಣದಿಂದ ಬೃಹತ್ ಶಿಲಾಸಮಾಧಿ, ದೇವಾಲಯಗಳು ಮತ್ತು ಮಂಟಪಗಳು ಕ್ಷೀಣಿಸುತ್ತಾ ವಿನಾಶದ ಅಂಚನ್ನು ತಲುಪುತ್ತಿವೆ. ಹೀಗಾಗಿ ಇವು ಪೂರ್ಣ ನಾಶವಾಗುವುದಕ್ಕಿಂತ ಮುಂಚೆ ಇವುಗಳ ದಾಖಲೀಕರಣ ಮತ್ತು ಅಧ್ಯಯನ ತುರ್ತಾಗಿ ಮಾಡಬೇಕಿದೆ. ಈ ಕೆಲಸವನ್ನು ಸಾಧ್ಯವಾದಷ್ಟು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಕೆಲವು ಮಿತಿಗಳನ್ನು ಸಹ ಕಂಡುಕೊಳ್ಳಲಾಗಿದೆ. ಅವುಗಳೆಂದರೆ ಕೆಲವು ಬೃಹತ್ ಶಿಲಾಸಮಾಧಿಗಳ ಕಾಲ, ದೇವಾಲಯ, ಮೂರ್ತಿಶಿಲ್ಪಗಳು ಮತ್ತು ಕೆರೆಕಟ್ಟೆಯ ಕಾಲ ಗುರುತಿಸುವಿಕೆ ಸಾಧ್ಯವಾಗದಿರುವುದು. ಕೆಲವು ದೇವಾಲಯಗಳು ಕಾಲಕಾಲಕ್ಕೆ ಜೀರ್ಣೋದ್ಧಾರಗೊಂಡ ಪರಿಣಾಮವಾಗಿ, ಅವುಗಳ ನಿಖರವಾದ ಕಾಲವನ್ನು ಗುರುತಿಸುವುದು ಕಷ್ಟಕರವಾಗಿದೆ. ಅದೇ ರೀತಿ ಕೋಟೆಗಳು ಇಂದು ನೆಲಸಮಗೊಂಡಿವೆ. ಅಂತಹ ದೇವಾಲಯ, ಕೋಟೆ, ಬಸದಿಗಳ ಕಾಲ, ನೆಲೆ ಮತ್ತು ನಿರ್ಮಾಣ ಸ್ವರೂಪವನ್ನು ಗ್ರಹಿಸಲು ಸಾಧ್ಯವಾಗುತ್ತಿಲ್ಲ ಮತ್ತು ಇವುಗಳ ನಿರ್ಮಾಣ ಕುರಿತಂತೆ ಆಧಾರಗಳ ಕೊರತೆ ಎದ್ದು ಕಾಣುತ್ತದೆ.

ಒಟ್ಟಿನಲ್ಲಿ ಸಂಶೋಧನೆ ಎಂಬುವುದು ನಿಂತ ನೀರಲ್ಲ, ನಿರಂತರವಾಗಿ ಬದಲಾವಣೆಗೊಳ್ಳುವುದಾಗಿದೆ. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಕ್ಷೇತ್ರವು ಸಾಗರದಷ್ಟು ವಿಸ್ತಾರವಾದುದ್ದು. ಎಲ್ಲಾ ಸಾಹಿತ್ಯಕ ಮತ್ತು ಪುರಾತತ್ವ ಆಕರಗಳನ್ನು ಒಂದೆಡೆ ಕಲೆ ಹಾಕಿ ಅಧ್ಯಯನ ಮಾಡಿದ್ದೇವೆಂದು ಹೇಳಿಕೊಳ್ಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಪ್ರತಿದಿನವೂ ಹೊಸ ಹೊಸ ವಿಷಯಗಳು ಬೆಳಕಿಗೆ ಬರುತ್ತಲೇ ಇವೆ. ಇದಕ್ಕೆ ಕಾರಣ ನಿರಂತರವಾದ ಪ್ರಾಕೃತಿಕ ಬದಲಾವಣೆಗಳು. ಭೂಮಿ, ಬಾವಿ, ಕೆರೆಕಟ್ಟೆಗಳಲ್ಲಿ ಹೂತುಹೋಗಿರುವ ಶಾಸನಗಳು, ನಾಣ್ಯಗಳು ಮತ್ತು ಮುದ್ರೆಗಳು ಕಾಲಾಂತರದಲ್ಲಿ ಅನೇಕ ಕಾರಣಗಳಿಂದ ಬೆಳಕು ಕಾಣುತ್ತಲೇ ಇರುತ್ತವೆ. ಒಟ್ಟಾರೆ ಅಧ್ಯಯನದ ಮುಖ್ಯ ಉದ್ದೇಶವೆಂದರೆ ಪಿರಿಯಾಪಟ್ಟಣ ತಾಲ್ಲೂಕು ಪರಿಸರದ ಪುರಾತತ್ವ ಮತ್ತು ಚರಿತ್ರೆಯ ವಿಷಯಗಳನ್ನು ಪರಿಶೀಲಿಸಿ ಈ ಪರಿಸರದ ಸ್ಥಳೀಯ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಈ ಮಹಾಪ್ರಬಂಧದ ರಚನೆಯ ಮೂಲಕ ಮಾಡಲಾಗಿದೆ.

ಅನುಬಂಧಗಳು

೧. ಸಂಕ್ಷೇಪಗಳು

೨. ನಕ್ಷೆಗಳು

೩. ತಲನಕ್ಷೆಗಳು

೪. ಕೋಷ್ಟಕಗಳು

೫. ಪದಕೋಶ

೬. ವಕ್ತ್ಯವಿವರಗಳು

೭. ಗ್ರಂಥ ಋಣ

೮. ಛಾಯಾಚಿತ್ರಗಳು

೧

ಸಂಕ್ಷೇಪಗಳು

೧.	ಕ.ವಿ.ವಿ.	:	ಕನ್ನಡ ವಿಷಯ ವಿಶ್ವಕೋಶ,
೨.	ಕ.ಇ.ದ	:	ಕರ್ನಾಟಕ ಇತಿಹಾಸ ದರ್ಶನ
೩.	ಪ್ರಾ.ಸಂ.ನಿ	:	ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ
೪.	ಕ.ಸಾ.ಪ	:	ಕನ್ನಡ ಸಾಹಿತ್ಯ ಪರಿಷತ್ತು
೫.	ಕ.ವಿ.ವಿ	:	ಕನ್ನಡ ವಿಶ್ವವಿದ್ಯಾಲಯ, ಹಂಪಿ
೬.	ಮೈ.ವಿ.ವಿ	:	ಮೈಸೂರು ವಿಶ್ವವಿದ್ಯಾಲಯ
೭.	ಕ.ಅ.ಸಂ.	:	ಕನ್ನಡ ಅಧ್ಯಯನ ಸಂಸ್ಥೆ
೮.	ಇ. ದ	:	ಇತಿಹಾಸ ದರ್ಶನ
೯.	ಎ.ಕ	:	ಎಪಿಗ್ರಾಫಿಯ ಕರ್ನಾಟಿಕ
೧೦.	ಕ.ವಿ.	:	ಕನ್ನಡ ವಿಶ್ವಕೋಶ
೧೧.	ಪಿ.ಪ.	:	ಪಿರಿಯಾಪಟ್ಟಣ
೧೨.	ಶಾ.ಸಂ.	:	ಶಾಸನ ಸಂಖ್ಯೆ
೧೩.	ಪು.ಸಂ.	:	ಪುಟ ಸಂಖ್ಯೆ
೧೪.	ಕೊ.ಜಿ	:	ಕೊಡಗು ಜಿಲ್ಲೆ ಗ್ಯಾಸೆಟಿಯರ್
೧೫.	ಎಂ.ಎ.ಆರ್.	:	ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್
೧೬.	ಎಂ.ಎಸ್.ಜಿ.	:	ಮೈಸೂರು ಡಿಸ್ಟ್ರಿಕ್ ಗ್ಯಾಸೆಟಿಯರ್
೧೭.	ಕೆ.ಎಸ್.ಜಿ	:	ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್
೧೮.	ಕಿ.ಜಿ.	:	ಕೂರ್ಗ್ ಗ್ಯಾಸೆಟಿಯರ್

೧೯. ಕ.ಐ. : ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್

೨೦. ಕ್ಯೂ.ಜೆ.ಎಂ.ಎಸ್. : ಕ್ವಾಟರ್ಲಿ ಜನರಲ್ಸ್ ಆಫ್ ಮಿಥಿಕ್ ಸೊಸೈಟಿ

೨೧. ಐ.ಎ.ಆರ್. : ಇಂಡಿಯನ್ ಆರ್ಕಿಯಾಲಿಜಿಕಲ್ ಎ. ರಿವೀವ್


೨೨. ಎಸ್.ಐ.ಐ. : ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್

೨೩. ಎಂ.ಜಿ. : ಮೈಸೂರು ಗ್ಯಾಸೆಟಿಯರ್


೨೪. ಎಂ.ಎಸ್.ಜಿ. : ಮೈಸೂರು ಸ್ಟೇಟ್ ಗ್ಯಾಸೆಟಿಯರ್

೨

ನಕ್ಷೆಗಳು



ಮೈಸೂರು ಜಿಲ್ಲೆ ಮತ್ತು ತಾಲ್ಲೂಕುಗಳ ನಕ್ಷೆ
ಹಾಸನ ಜಿಲ್ಲೆ
ಕೃಷ್ಣರಾಜನಗರ
ಮಂಡ್ಯ ಜಿಲ್ಲೆ
ಪಿರಿಯಾಪಟ್ಟಣ
ಹುಣಸೂರು
ಮೈಸೂರು
ಟಿ.ನರಸೀಪುರ
ಕೊಡಗು ಜಿಲ್ಲೆ
ನಂಜನಗೂಡು
ಹೆಚ್.ಡಿ.ಕೋಟೆ
ಚಾಮರಾಜನಗರ ಜಿಲ್ಲೆ
ಉ
ಕೇರಳ ರಾಜ್ಯ

ಪಿರಿಯಾಪಟ್ಟಣ ತಾಲ್ಲೂಕು ಮತ್ತು ಬೃಹತ್‌ಶಿಲಾಯುಗ ಸಮಾಧಿಗಳ ನೆಲೆಗಳು




೩


ತಲನಕ್ಷೆಗಳು




ನಾರಾಯಣಸ್ವಾಮಿ ದೇವಾಲಯ ಕಿತ್ತೂರು




ಸಿಡಿಲು ಮಲ್ಲಿಕಾರ್ಜುನ ದೇವಾಲಯ ಬೆಟ್ಟದಪುರ
ಕೃಪೆ : ಎಂ.ಎ.ಆರ್ ೧೯೪೩




ನಂದಿಬಸವೇಶ್ವರ ದೇವಾಲಯ, ಐಲಾಪುರ






ಚನ್ನಕೇಶವ ದೇವಾಲಯ, ಪಿರಿಯಾಪಟ್ಟಣ






ಆನಂತನಾಥ ಬಸದಿ, ಆನಿವಾಳು







0 5mm

ಜೈನ ಬಸದಿ, ಬೆಟ್ಟದತುಂಗ

೪. ಕೋಷ್ಟಕಗಳು

ಪ್ರಮುಖ ದೇವಾಲಯಗಳು

ಕ್ರ.ಸಂ.	ದೇವಾಲಯಗಳ ಹೆಸರು	ಸ್ಥಳ	ತಲವಿನ್ಯಾಸ	ವಾಸ್ತುಶೈಲಿ	ಕಾಲ	ಪಂಥ	ನಿರ್ಮಾಣಸಾಮಾಗ್ರಿ
೧	ಸೋಮೇಶ್ವರ	ಕಿತ್ತೂರು	ಗರ್ಭಗೃಹ, ಅಂತರಾಳ, ರಂಗಮಂಟಪ, ತೆರೆದ ಮಂಟಪ, ದೀಪಸ್ತಂಭ.	ಚೋಳ, ಹೊಯ್ಸಳ	೧೭ನೆ ಶತಮಾನ	ಶೈವ	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ
೨	ನಾರಾಯಣಸ್ವಾಮಿ	ಕಿತ್ತೂರು	ಗರ್ಭಗೃಹ, ಅಂತರಾಳ, ದ್ವಿರಂಗಮಂಟಪ, ಶಿಖರ	ಮೈಸೂರು ರಾಜ ಮನೆತನತ,	೧೭ನೆ ಶತಮಾನ	ವೈಷ್ಣವ	ಗ್ರಾನೈಟ್ ಶಿಲೆ,
೩	ಕಿತ್ತೂರಮ್ಮ	ಕಿತ್ತೂರು	ಗರ್ಭಗೃಹ, ಸಭಾಂಗಣ	ಚೋಳ		ಶಾಕ್ತ	ಇಟ್ಟಿಗೆಗಾರೆ
೪	ಈಶ್ವರ	ಮೇಲೂರು	ಗರ್ಭಗೃಹ, ಅಂತರಾಳ,	ಮೈಸೂರು ರಾಜಮನೆತನ, ರಂಗಮಂಟಪ,		ಶೈವ	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ
೫	ಆಂಜನೇಯ	ಕಿತ್ತೂರು	ಗರ್ಭಗೃಹ, ಮುಖಮಂಟಪ	ವಿಜಯನಗರ			ಗ್ರಾನೈಟ್ ಶಿಲೆ
೬	ಈಶ್ವರ	ಮರದೂರು	ಗರ್ಭಗೃಹ, ಸುಖನಾಸಿ, ನವರಂಗಮಂಟಪ			ಶೈವ	ಕಣಶಿಲೆ, ಇಟ್ಟಿಗೆ
೭	ನಂದಿಬಸವೇಶ್ವರ	ಐಲಾಪುರ	ಗರ್ಭಗೃಹ, ಸುಖನಾಸಿ, ನವರಂಗಮಂಟಪ, ಹಜಾರ	ಚೋಳ		ಶೈವ	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ

ಕ್ರಸಂ.	ದೇವಾಲಯಗಳ ಹೆಸರು	ಸ್ಥಳ	ತಲವಿನ್ಯಾಸ	ವಾಸ್ತುಶೈಲಿ	ಕಾಲ	ಪಂಥ	ನಿರ್ಮಾಣಸಾಮಾಗ್ರಿ
೮	ಸೋಮೇಶ್ವರ	ಹರದೂರು	ಗರ್ಭಗೃಹ, ನವರಂಗಮಂಟಪ	ಜೀರ್ಣೋದ್ಧಾರ		ಶೈವ	ಆಧುನಿಕ ಇಟ್ಟಿಗೆ
೯	ಆಂಜನೇಯ	ಚಿಕ್ಕಹೊನ್ನೂರು	ಗರ್ಭಗೃಹ, ತೆರೆದ ಮಂಟಪ	ವಿಜಯನಗರ			ಶಿಲೆ
೧೦	ರಂಗನಾಥ	ಚಿಕ್ಕಹೊನ್ನೂರು	ಗರ್ಭಗೃಹ, ಸುಖನಾಸಿ, ನವರಂಗಮಂಟಪ, ದ್ವಿಕೂಟ	ವಿಜಯನಗರ	೧೫ನೇ ಶತಮಾನ	ವೈಷ್ಣವ	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ
೧೧	ಶಿವ	ಕೆಸುವಿನ ಕೆರೆ	ಗರ್ಭಗೃಹ, ತೆರೆದಮಂಟಪ			ಶೈವ	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ
೧೨	ಚನ್ನಕೇಶವ	ಪಿರಿಯಾಪಟ್ಟಣ	ಗರ್ಭಗೃಹ, ಸುಖನಾಸಿ, ರಂಗಮಂಟಪ, ಮುಖಮಂಟಪ	ಚೋಳ, ಹೊಯ್ಸಳ, ವಿಜಯನಗರ	೧೬ನೆ ಶತಮಾನ	ವೈಷ್ಣವ	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ
೧೩	ಈಶ್ವರ	ಪಿರಿಯಾಪಟ್ಟಣ	ಗರ್ಭಗೃಹ, ಅಂತರಾಳ, ನವರಂಗಮಂಟಪ, ತೆರೆದ ಮಂಟಪ	ಚಂಗಾಳ್ವ ವಿಜಯನಗರ	೧೭ನೆ ಶತಮಾನ	ಶೈವ	ಗ್ರಾನೈಟ್ ಶಿಲೆ, ಆಧುನಿಕ
೧೪	ಮತ್ಸ್ಯ ಆಂಜನೇಯ	ಪಿರಿಯಾಪಟ್ಟಣ	ಗರ್ಭಗೃಹ, ತೆರೆದಮಂಟಪ	ವಿಜಯನಗರ	೧೭ನೆ ಶತಮಾನ		ಗ್ರಾನೈಟ್ ಶಿಲೆ
೧೫	ಮಸಣಿಕಮ್ಮ	ಪಿರಿಯಾಪಟ್ಟಣ	ಗರ್ಭಗೃಹ, ಸುಖನಾಸಿ, ಮುಖಮಂಟಪ, ಬಲಿಪೀಠ	ಚೋಳ, ಹೊಯ್ಸಳ ವಿಜಯನಗರ		ಶಾಕ್ತ	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ
೧೬	ಚನ್ನಕೇಶವ	ಹಿಟ್ನೆಹೆಬ್ಬಾಗಿಲು	ಗರ್ಭಗೃಹ, ಸುಖನಾಸಿ, ನವರಂಗಮಂಟಪ	ಕದಂಬ		ವೈಷ್ಣವ	ಗ್ರಾನೈಟ್ ಶಿಲೆ
೧೭	ಮಹಾಬಲೇಶ್ವರ	ಹಿಟ್ನೆಹೆಬ್ಬಾಗಿಲು	ಗರ್ಭಗೃಹ, ಸುಖನಾಸಿ, ಮುಖಮಂಟಪ	ಚೋಳ		ಶೈವ	ಗ್ರಾನೈಟ್, ಇಟ್ಟಿಗೆ, ಗಾರೆ
೧೮	ಬಸವೇಶ್ವರ	ಆಯಿತನಹಳ್ಳಿ	ಗರ್ಭಗೃಹ, ತೆರೆದ ಮಂಟಪ	ವಿಜಯನಗರ	೧೬ನೆ ಶತಮಾನ	ಶೈವ	ಗ್ರಾನೈಟ್ ಶಿಲೆ
೧೯	ಜೀರೇಶ್ವರ	ರಾಮನಾಥ ತುಂಗ	ಗರ್ಭಗೃಹ, ಮುಖಮಂಟಪ			ಶೈವ	ಇಟ್ಟಿಗೆ ಗಾರೆ, ಶಿಲೆ

ಕ್ರ.ಸಂ.	ದೇವಾಲಯಗಳ ಹೆಸರು	ಸ್ಥಳ	ತಲವಿನ್ಯಾಸ	ವಾಸ್ತುಶೈಲಿ	ಕಾಲ	ಪಂಥ	ನಿರ್ಮಾಣಸಾಮಾಗ್ರಿ
೨೦	ಗಂಗಾಧರೇಶ್ವರ	ಜಿ.ಬಸವನಹಳ್ಳಿ	ಗರ್ಭಗೃಹ, ತೆರೆದ ಮಂಟಪ	ಚೋಳ		ಶೈವ	ಗ್ರಾನೈಟ್ ಶಿಲೆ, ಇಟ್ಟಿಗೆ
೨೧	ಅನ್ನದಾನಿ ಮಲ್ಲಿಕಾರ್ಜುನ	ಬೆಟ್ಟದಪುರ	ಗರ್ಭಗೃಹ, ಸುಖನಾಸಿ, ನವರಂಗಮಂಟಪ, ವೇದಿಕೆ	ಗಂಗ, ಹೊಯ್ಸಳ, ಚಂಗಾಳ್ವ, ವಿಜಯನಗರ	೧೬ನೆ ಶತಮಾನ	ಶೈವ	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ
೨೨	ವೀರಭದ್ರ ದೇವಾಲಯ	ಬೆಟ್ಟದಪುರ	ಗರ್ಭಗೃಹ, ಅಂತರಾಳ, ನವರಂಗಮಂಟಪ	ವಿಜಯನಗರ		ಶೈವ	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ
೨೩	ಏಣಿ ಹನುಮಂತ	ಬೆಟ್ಟದಪುರ	ಗರ್ಭಗೃಹ, ತೆರೆದಮಂಟಪ				ಗ್ರಾನೈಟ್ ಶಿಲೆ
೨೪	ಪಾಳುಬಿದ್ದ ಶಿವ	ಬೆಟ್ಟದಪುರ	ಗರ್ಭಗೃಹ, ಅಂತರಾಳ ತೆರೆದಮಂಟಪ	ವಿಜಯನಗರ		ಶೈವ	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ
೨೫	ರಾಮ	ಬೆಟ್ಟದಪುರ	ಗರ್ಭಗೃಹ, ಅಂತರಾಳ, ನವರಂಗ	ವಿಜಯನಗರ		ವೈಷ್ಣವ	ಶಿಲೆ, ಇಟ್ಟಿಗೆ ಗಾರೆ
೨೬	ಬಸವೇಶ್ವರ	ಬೆಟ್ಟದಪುರ	ಗರ್ಭಗೃಹ, ಸಭಾಂಗಣ	ಚೋಳ		ಶೈವ	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ
೨೭	ಕಾಳಿ	ಬೆಟ್ಟದಪುರ	ಗರ್ಭಗೃಹ, ಅಂತರಾಳ, ನವರಂಗ			ಶಾಕ್ತ	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ
೨೮	ಬಸವೇಶ್ವರ	ಕುಡುಕುರು	ಗರ್ಭಗೃಹ, ತೆರೆದಮಂಟಪ	ವಿಜಯನಗರ	೧೧ ನೆ ಶತಮಾನ	ಶೈವ	ಗ್ರಾನೈಟ್ ಶಿಲೆ
೨೯	ಅರ್ಕೇಶ್ವರ	ಕುಡುಕುರು	ಗರ್ಭಗೃಹ, ಸುಖನಾಸಿ, ನವರಂಗ	ಚೋಳ, ಹೊಯ್ಸಳ		ಶೈವ	ಶಿಲೆ, ಇಟ್ಟಿಗೆ ಗಾರೆ
೩೦	ಬಸವೇಶ್ವರ	ಬಾರ್ಸೆ	ಗರ್ಭಗೃಹ, ತೆರೆದಮಂಟಪ	ವಿಜಯನಗರ	೧೬ನೆ ಶತಮಾನ	ಶೈವ	ಗ್ರಾನೈಟ್ ಶಿಲೆ, ಇಟ್ಟಿಗೆ ಗಾರೆ
೩೧	ಈಶ್ವರ	ದೊಡ್ಡನೇರ್ಲೆ	ಗರ್ಭಗೃಹ, ತೆರೆದಮಂಟಪ	ಚೋಳ ವಿಜಯನಗರ		ಶೈವ	ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ
೩೨	ಜೈನಬಸದಿ	ಬೆಟ್ಟದಪುರ	ಗರ್ಭಗೃಹ, ಸಭಾಂಗಣ	ಚೋಳ	೧೧ ನೆ ಶತಮಾನ		ಗ್ರಾನೈಟ್ ಶಿಲೆ, ಇಟ್ಟಿಗೆ, ಗಾರೆ
೩೩	ಶಾಂತಿನಾಥ	ಕೂಣಸೂರು	ಗರ್ಭಗೃಹ, ಅಂತರಾಳ, ನವರಂಗ, ಗೋಪುರ ಬಲೀಪೀಠ	ವಿಜಯನಗರ	೧೬ನೆ ಶತಮಾನ		ಗ್ರಾನೈಟ್ ಶಿಲೆ

ಕ್ರ.ಸಂ.	ದೇವಾಲಯಗಳ ಹೆಸರು	ಸ್ಥಳ	ತಲವಿನ್ಯಾಸ	ವಾಸ್ತುಶೈಲಿ	ಕಾಲ	ಪಂಥ	ನಿರ್ಮಾಣಸಾಮಾಗ್ರಿ
೩೪	ಚಂದ್ರನಾಥ ತೀರ್ಥಂಕರ	ಬೂವನಹಳ್ಳಿ	ಗರ್ಭಗೃಹ, ಸುಖನಾಸಿ, ನವರಂಗ, ತೆರೆದ ಮಂಟಪ	ಚೋಳ, ವಿಜಯನಗರ	೧೬ನೇ ಶತಮಾನ	ಜೈನ	ಗ್ರಾನೈಟ್‌ಶಿಲೆ
೩೫	ಅನಂಥನಾಥ	ಆನಿವಾಳು	ಗರ್ಭಗೃಹ, ಅಂತರಾಳ, ಗರ್ಭಗುಡಿಯ ಒಳಗೆ ಪ್ರದಕ್ಷಿಣೆ ಪಥ, ತೆರೆದ ಮಂಟಪ	ಚೋಳ, ಪ್ರಾಂಗಾಣ	–	ಜೈನ	ಗ್ರಾನೈಟ್‌ಶಿಲೆ
೩೬	ಆದಿತೀರ್ಥಂಕರ	ಬೆಟ್ಟದತುಂಗ	ಗರ್ಭಗೃಹ, ಅಂತರಾಳ, ರಂಗಮಂಟಪ, ಸಭಾ ಮಂಟಪ, ತೆರೆದಮಂಟಪ	ಚೋಳ,	–	ಜೈನ	ಗ್ರಾನೈಟ್‌ಶಿಲೆ

ಇತರೆ ದೇವಾಲಯಗಳು

ಕ್ರ.ಸಂ.	ದೇವಾಲಯಗಳು	ಸ್ಥಳ	ಪಂಥ	ಕಾಲ
೧	ಈಶ್ವರ	ಅತ್ತಿಗೋಡು	ಶೈವ	ಪ್ರಾಚೀನ
೨	ಈಶ್ವರ	ಹರದೂರು	ಶೈವ	ಪ್ರಾಚೀನ
೩	ಮಲ್ಲಿಕಾರ್ಜುನ	ಸಂಗರಸೆಟ್ಟಿಹಳ್ಳಿ	ಶೈವ	ಪ್ರಾಚೀನ
೪	ಈಶ್ವರ	ಆಯತನಹಳ್ಳಿ	ಶೈವ	ಪ್ರಾಚೀನ
೫	ಬಸವೇಶ್ವರ	ಬೆಟ್ಟದಪುರ	ಶೈವ	ಪ್ರಾಚೀನ
೬	ಬಸವೇಶ್ವರ	ಬೆಟ್ಟದಪುರ	ಶೈವ	ಪ್ರಾಚೀನ
೭	ಬಸವೇಶ್ವರ	ಹರದೂರು	ಶೈವ	ಪ್ರಾಚೀನ
೮	ಕನ್ನಂಬಾಡಿಯಮ್ಮ	ಪಿರಿಯಾಪಟ್ಟಣ	ಶಾಕ್ತ	ಆಧುನಿಕ
೯	ಲಕ್ಷ್ಮೀದೇವಾಲಯ	ದೊಡ್ಡಕಮರವಳ್ಳಿ	ಶೈವ	ಆಧುನಿಕ
೧೦	ಚಂದ್ರಮೌಳೇಶ್ವರ	ಕಣಗಾಲು	ಶೈವ	ಆಧುನಿಕ
೧೧	ಆಂಜನೇಯ	ಕಣಗಾಲು	ಗ್ರಾಮದೇವತೆ	ಆಧುನಿಕ
೧೨	ಮಲ್ಲಿಕಾರ್ಜುನ	ಚಪ್ಪರದಹಳ್ಳಿ	ಶೈವ	ಪ್ರಾಚೀನ
೧೩	ಆಂಜನೇಯ	ಹಳೆಸುರಗಳ್ಳಿ	ಗ್ರಾಮದೇವತೆ	ಪ್ರಾಚೀನ
೧೪	ಈಶ್ವರ	ಬ್ಯಾಡರ ಬಿಳಗುಲಿ	ಶೈವ	ಪ್ರಾಚೀನ
೧೫	ಬಸವೇಶ್ವರ	ಕೂರಗಲ್ಲು	ಶೈವ	ಪ್ರಾಚೀನ
೧೬	ಕನ್ನಂಬಾಡಿಯಮ್ಮ	ಜೋಗನಹಳ್ಳಿ	ಶಾಕ್ತ	ಪ್ರಾಚೀನ
೧೭	ರಾಮದೇವಾಲಯ	ಕೋಮಲಾಪುರ	ವೈಷ್ಣವ	ಪ್ರಾಚೀನ
೧೮	ಕರಕಂಠೇಶ್ವರ	ಕಂಪಲಾಪುರ	ಶೈವ	ಪ್ರಾಚೀನ
೧೯	ಈಶ್ವರ	ದೊಡ್ಡಬೆಲಾಳು	ಶೈವ	ಪ್ರಾಚೀನ
೨೦	ಬಸದಿ	ರಾವಂದೂರು	ಜೈನ	ಪ್ರಾಚೀನ
೨೧	ಬಸವೇಶ್ವರ	ಮಾಕೋಡು	ಶೈವ	ಪ್ರಾಚೀನ
೨೨	ಆಂಜನೇಯ	ಮೇಲೂರು	ಗ್ರಾಮದೇವತೆ	ಪ್ರಾಚೀನ
೨೩	ಬಸವೇಶ್ವರ	ಹಾರನಹಳ್ಳಿ	ಶೈವ	ಪ್ರಾಚೀನ
೨೪	ಬಸವೇಶ್ವರ	ಕಗ್ಗುಂಡಿ	ಶೈವ	ಪ್ರಾಚೀನ

೨೫	ಈಶ್ವರ	ಕೊಪ್ಪ	ಶೈವ	ಪ್ರಾಚೀನ
೨೬	ಮಹದೇಶ್ವರ	ಪಿರಿಯಾಪಟ್ಟಣ	ಶೈವ	ಆಧುನಿಕ
೨೭	ಈಶ್ವರ	ದೊಡ್ಡಹೊಸರು	ಶೈವ	ಆಧುನಿಕ
೨೮	ಬಸವೇಶ್ವರ	ಹೊನ್ನಪುರ	ಶೈವ	ಪ್ರಾಚೀನ
೨೯	ಚನ್ನಕೇಶವ	ಚನ್ನಕೇಶವಪುರ	ವೈಷ್ಣವ	ಪ್ರಾಚೀನ
೩೦	ಬಸವೇಶ್ವರ	ಸುಂಡವಾಳು	ಶೈವ	ಆಧುನಿಕ
೩೧	ಶನಿದೇವರು	ಚಿಟ್ಟೆನೆಹಳ್ಳಿ	ಶೈವ	ಪ್ರಾಚೀನ
೩೨	ಬಸವೇಶ್ವರ	ಕಂದೆಗಾಲ	ಶೈವ	ಪ್ರಾಚೀನ
೩೩	ಹನುಮಂತ	ಚಾಮರಾಯನಕೋಟೆ	ಗ್ರಾಮದೇವತೆ	ಪ್ರಾಚೀನ
೩೪	ಆಂಜನೇಯ	ಪಿರಿಯಾಪಟ್ಟಣ	ಗ್ರಾಮದೇವತೆ	ಪ್ರಾಚೀನ

೫

ಪದಕೋಶ

ಅಧಿಷ್ಠಾನ : ದೇವಾಲಯ ಗೋಡೆಗೆ ಅಧಾರವಾಗಿರುವ ಕೆಳಭಾಗ

ಅರೆಗಂಭ : ಗೋಡೆಗಳ ನಡುವಣ ಅರ್ಧಕಂಭ, ಕಂಭದ ಅರ್ಧಭಾಗ ಗೋಡೆಯಲ್ಲಿ ಸೇರಿದ್ದು, ಉಳಿದ ಭಾಗ ಮಾತ್ರ ಗೋಚರಿಸುತ್ತದೆ.

ಅಭಿಷೇಕ ಜಲ : ದೇವತಾಮೂರ್ತಿಗೆ ಎರೆಯುವ ಜಲ

ಅಂಕಣ : ಏಂಗಡಣೆಯ ಒಂದು ಭಾಗ

ಅಂಜಲಿಮುದ್ರೆ : ಎರಡು ಕೈ ಜೊಡಿಸಿ ಮುಗಿಯುತ್ತಿರುವುದು.

ಅಭಯಹಸ್ತ : ಸಂರಕ್ಷಣಾ ಸೂಚಿ ಹಸ್ತ

ಕಲಶ : ಶಿಖರದ ಮೇಲಿನ ಪಾತ್ರೆಯಂತಹ ಭಾಗ

ಕಕ್ಷಾಸನ : ಕುಳಿತುಕೊಳ್ಳಲು ನಿರ್ಮಿಸಿದ ಕಟ್ಟೆ

ಕಿರೀಟ ಮುಕುಟ : ತಲೆಯ ಮೇಲೆ ಕಿರೀಟ ಧರಿಸಿದ ಮೂರ್ತಿ

ಕುಚಬಂಧ : ಸ್ಥಾನಪಟ್ಟಿ

ಕುಂಭಲತಾ : ಭಿತ್ತಿಯಲ್ಲಿ ಕುಡ್ಯಾ ಸ್ತಂಭಗಳ ನಡುವಿನ ಅಲಂಕಾರಿಕ ಭಾಗ.

ಕುಮುದು : ಅಧಿಷ್ಠಾನದಲ್ಲಿ ಕಾಣಬರುವ ಅಂಗ

ಕೋಷ್ಟಗುಡಿ : ಮೂರ್ತಿಗಳನ್ನು ಇಡಲು ಮಾಡಿದ ಚಿಕ್ಕ ಗೂಡು.

ಗರುಡಕಂಭ : ದೇವಾಲಯದ ಮುಂದೆ ನಿಲ್ಲಿಸಿರುವ ಗರುಡನ ಚಿತ್ರ ಕೆತ್ತಿದ ದೀಪಸ್ತಂಭ.

ಗೋಪುರ : ಪ್ರವೇಶದ್ವಾರದ ಮೇಲಿನ ನಿರ್ಮಾಣ.

ಚಕ್ರಕುಂಡಲ : ದುಂಡಾಕಾರದ ಕಿವಿಯೋಲೆ.

ತ್ರಿಪಟ್ಟಿ ಕುಮುದ: ಮೂರು ಮುಖದ ಕುಮುದ

ದ್ವಾರಪಾಲಕರು : ಬಾಗಿಲನ್ನು ಕಾಯುವ ಸೇವಕರು.

ಧನಸ್ಸು	:	ಬಿಲ್ಲು
ನಾಗಿಣಿ	:	ನಾಗದೇವತೆ
ಪದ್ಮ	:	ಕಮಲ
ಪದ್ಮಾಸನ	:	ಪದ್ಮದ ಮೇಲೆ ಕುಳಿತಿರುವುದು.
ಪದ್ಮಪೀಠ	:	ಪದ್ಮದಿಂದ ಅಲಕರಿಸಿರುವುದು.
ಪ್ರದಕ್ಷಿಣಾ ಪಥ	:	ಭಕ್ತಾಧಿಗಳು ಗರ್ಭಗುಡಿ ಸುತ್ತಲು ಇರುವ ದಾರಿ
ಪ್ರಣಾಳ	:	ಅಭಿಷೇಕ ಮಾಡಿದ ನೀರು ಹೊರ ಹೋಗಲು ಮಾಡಿರುವ ನಾಳ
ಪ್ರಭಾವಳಿ	:	ಮೂರ್ತಿಗಳ ಬೆನ್ನ ಹಿಂದೆ ಮಾಡಿರುವ ಸುತ್ತಲಿನ ಅಲಂಕಾರಿಕ ಪಟ್ಟಿ
ಪಂಜರ	:	ಗೂಡು
ಭಿತ್ತಿ	:	ಗೋಡೆ
ಮಕರಧ್ವಜ	:	ಮೊಸಳೆ ಹೊಂದಿರುವ ಧ್ವಜ
ವರದಹಸ್ತ	:	ಭಕ್ತರಿಗೆ ವರ ನೀಡುವ ಹಸ್ತ
ವಲ್ಲಿಬಂಧ	:	ಬಳ್ಳಿಗಳು ಒಂದಕ್ಕೊಂದು ವೃತ್ತಕಾರದಲ್ಲಿ ಹೆಣೆದುಕೊಂಡಿರುವ ಕಿಟಕಿ
ಸಮಭಂಗಿ	:	ಎರಡು ಕಾಲಿನ ಮೇಲೆ ಸಮನಾಗಿ ನಿಂತಭಂಗಿ
ಕುಡ್ಯ	:	ಗೋಡೆ
ಕಪೋತ	:	ಪಾರಿವಾಳ ರೀತಿಯ ಅಲಂಕರಣೆ
ಇಷ್ಟಕ	:	ಇಟ್ಟಿಗೆ
ಕುಣಿ	:	ಗುಂಡಿ

೬

ವಕ್ತೃಗಳ ವಿವರ

ಕ್ರ.ಸಂ	ಹೆಸರು	ವಯಸ್ಸು	ಜಾತಿ	ಉದ್ಯೋಗ	ಸ್ಥಳ
೧.	ತಮ್ಮೇಗೌಡ	೪೫	ಒಕ್ಕಲಿಗ	ವ್ಯವಸಾಯ	ಮಲ್ಲಿನಾಥಪುರ
೨.	ತಿಮ್ಮೆರಾಯಗೌಡ	೫೫	ಒಕ್ಕಲಿಗ	ವ್ಯವಸಾಯ	ಪುನಾಡನಹಳ್ಳಿ
೩.	ಗೋವಿಂದಯ್ಯ	೬೦	ಪ.ಜಾ	ವ್ಯವಸಾಯ	ಪುನಾಡನಹಳ್ಳಿ
೪.	ವಿಶ್ವನಾಥ	೩೫	ಒಕ್ಕಲಿಗ	ವ್ಯವಸಾಯ	ಪುನಾಡನಹಳ್ಳಿ
೫.	ಮುನ್ನೆಗೌಡ	೭೧	ಒಕ್ಕಲಿಗ	ವ್ಯವಸಾಯ	ಐಲಾಪುರ
೬.	ಜಯದೇವ ಶಾಸ್ತ್ರಿ ಕೆ.ಸಿ	೬೭	ಬೇಡಜಂಗಮ	ಪುರೋಹಿತ	ಅತ್ತಿಗೂಡು
೭.	ಗಣೇಶ್	೨೪	ಒಕ್ಕಲಿಗ	ವ್ಯವಸಾಯ	ಅತ್ತಿಗೂಡು
೮.	ಮಹದೇವ	೫೪	ಲಿಂಗಾಯಿತ	ವ್ಯಾಪಾರಿ	ಅತ್ತಿಗೂಡು
೯.	ಜಯ	೬೦	ಲಿಂಗಾಯಿತ	ವ್ಯಾಪಾರಿ	ಅತ್ತಿಗೂಡು
೧೦.	ಸ್ವಾಮಿ	೨೪	ಲಿಂಗಾಯಿತ	ಪುರೋಹಿತ	ಹರದೂರು
೧೧.	ಅಪ್ಪಜಿಗೌಡ	೭೦	ಒಕ್ಕಲಿಗ	ನಿವೃತ ಶಿಕ್ಷಕ	ಸಂಗರಸೆಟ್ಟೆಹಳ್ಳಿ
೧೨.	ಸೋಮಚಾರ್ಯ	೫೫	ವಿಶ್ವಕರ್ಮ	ಮರಗೆಲಸ	ಸಂಗರಸೆಟ್ಟೆಹಳ್ಳಿ
೧೩.	ರಾಜಶೇಖರ	೪೫	ನಾಯಕ	ಅರ್ಚಕ	ಕಿತ್ತೂರು
೧೪.	ಪಾರ್ವತಮ್ಮ	೯೫	ಲಿಂಗಾಯಿತ	ಗೃಹಿಣಿ	ಕಿತ್ತೂರು
೧೫.	ಅನಂತರಾಮಯ್ಯ	೭೭	ಬ್ರಾಹ್ಮಣ	ನಿವೃತ ಶಿಕ್ಷಕ	ಕಿತ್ತೂರು
೧೬.	ವೆಂಕಟೇಶಯ್ಯ	೪೦	ವೈಷ್ಣವ	ಪುರೋಹಿತ	ಚಿಕ್ಕಹೊನ್ನುರು
೧೭.	ಶ್ರೀಧರ್	೩೬	ವೈಷ್ಣವ	ಶಿಕ್ಷಕ	ಹಿಟ್ನೆಹೆಬ್ಬಾಗಿಲು

ಕ್ರ.ಸಂ	ಹೆಸರು	ವಯಸ್ಸು	ಜಾತಿ	ಉದ್ಯೋಗ	ಸ್ಥಳ
೧೮.	ಜನಾರ್ಧನ	೪೫	ಮಲೆಯಾಳಿ	ಟೈಲರ್	ಕೊಪ್ಪ
೧೯.	ಶಂಭುಲಿಂಗಪ್ಪ	೫೪	ಒಕ್ಕಲಿಗ	ವ್ಯವಸಾಯ	ಬಿಳಗುಂದ
೨೦.	ನಾಗರಾಜು	೫೫	ಉಪ್ಪಾರಶೆಟ್ಟಿ	ಕೂಲಿ	ಪಿರಿಯಾಪಟ್ಟಣ
೨೧.	ಸ್ವಾಮಿ	೩೬	ಉಪ್ಪಾರಶೆಟ್ಟಿ	ಪುರೋಹಿತ	ಪಿರಿಯಾಪಟ್ಟಣ
೨೨.	ಪಾಂಡುರಂಗ	೫೫	ಬ್ರಾಹ್ಮಣ	ಅರ್ಚಕ	ಪಿರಿಯಾಪಟ್ಟಣ
೨೩.	ದಕ್ಷಿಣಮೂರ್ತಿಎಸ್.ಟಿ.	೭೫	ಬ್ರಾಹ್ಮಣ	ನಿವೃತ ಶಿಕ್ಷಕ	ಪಿರಿಯಾಪಟ್ಟಣ
೨೪.	ಸತೀಶ್	೪೦	ಬ್ರಾಹ್ಮಣ	ಉಪನ್ಯಾಸಕ	ಪಿರಿಯಾಪಟ್ಟಣ
೨೫.	ಸುರೇಶ್	೪೦	ನಾಯಕ	ಕೂಲಿ	ಪಿರಿಯಾಪಟ್ಟಣ
೨೬.	ಬಾಲಾಜಿ	೩೦	ಪರಿಶಿಷ್ಠ ಪಂಗಡ	ಅರ್ಚಕ	ಪಿರಿಯಾಪಟ್ಟಣ
೨೭.	ರಾಜಶೇಖರ್ ಪಿ.ಕೆ.	೬೫	ಒಕ್ಕಲಿಗ	ನಿವೃತ ಪ್ರಾಧ್ಯಪಕ	ಪಿರಿಯಾಪಟ್ಟಣ
೨೮.	ಪ್ರಭುಸ್ವಾಮಿ	೩೦	ಲಿಂಗಾಯಿತ	ವ್ಯವಸಾಯ	ಹಿಟ್ನೆಹೆಬ್ಬಾಗಿಲು
೨೯.	ಮಹದೇವಪ್ಪ	೬೮	ಲಿಂಗಾಯಿತ	ವ್ಯವಸಾಯ	ಬಿಲ್ಲಹಳ್ಳಿ
೩೦.	ಗಣೇಶ	೩೨	ನಾಮಧಾರಿಗೌಡ	ವ್ಯವಸಾಯ	ಆಯಿತನಹಳ್ಳಿ
೩೧.	ಬಾಬುಸಿಂಗ್	೪೩	ರಜಪುತ್	ವ್ಯವಸಾಯ	ಹರವೆ ಮಲ್ಲರಾಜಪಟ್ಟಣ
೩೨.	ರಾಜು.ಟಿ	೪೫	ಒಕ್ಕಲಿಗ	ಉಪನ್ಯಾಸಕ	ಹರವೆ ಮಲ್ಲರಾಜಪಟ್ಟಣ
೩೩.	ಬಸವಯ್ಯ	೮೫	ಪ.ಜಾ	ವ್ಯವಸಾಯ	ದೊಡ್ಡಹೂಸುರು
೩೪.	ರಾಜಶ್ವೇರಿ ರಮೇಶ್ ಎಫ್.ಎಸ್.	೪೫	ಬ್ರಾಹ್ಮಣ	ಗೃಹಿಣಿ	ಸಂನ್ಯಾಸಿಪುರ
೩೫.	ಪುರುಶೋತ್ತಮ	೫೩	ಹಾಲುಮತ	ಅರ್ಚಕರು	ರಾಮನಾಥತುಂಗ
೩೬.	ಸುಬ್ರಮಣ್ಯ ಆರ್.ಎಸ್	೩೮	ಪ.ಪಂ.	ನೀರಗಂಟಿ	ರಾಮನಾಥತುಂಗ
೩೭.	ಸ್ವಾಮಿ	೫೬	ಜಂಗಮ	ಅರ್ಚಕ	ಸುಂಡವಾಳು
೩೮.	ತಮ್ಮಯ್ಯಶೆಟ್ಟಿ	೬೦	ಶೆಟ್ಟಿ	ವ್ಯವಸಾಯ	ಚಿಟ್ಟೆನೆಹಳ್ಳಿ
೩೯.	ಸ್ವಾಮಿಗೌಡ	೫೮	ಒಕ್ಕಲಿಗ	ವ್ಯವಸಾಯ	ಕಂದೆಗಾಲ
೪೦.	ಮೆಹಬೂಬ	೪೫	ಮುಸ್ಲಿಂ	ವ್ಯವಸಾಯ	ಹಮ್ಮಿಗೆ
೪೧.	ಸ್ವಾಮಿ	೫೫	ಲಿಂಗಾಯಿತ	ವ್ಯವಸಾಯ	ಜಿ.ಬಸವನಹಳ್ಳಿ

ಕ್ರ.ಸಂ	ಹೆಸರು	ವಯಸ್ಸು	ಜಾತಿ	ಉದ್ಯೋಗ	ಸ್ಥಳ
೪೨.	ನಿಂಗಮ್ಮ	೬೫	ನಾಮಧಾರಿ	ಲಿಂಗಾಯಿತ	ವ್ಯವಸಾಯಶಿರಂಗಾಲ
೪೩.	ನಾಗರಾಜು ಜಿ.ಎಸ್	೪೦	ಉಪ್ಪಾರ	ವ್ಯವಸಾಯ	ಜಿ.ಬಸವನಹಳ್ಳಿ
೪೪.	ಚಂದ್ರ	೪೦	ಉಪ್ಪಾರ	ವ್ಯವಸಾಯ	ಜಿ.ಬಸವನಹಳ್ಳಿ
೪೫.	ಮಹಮ್ಮದ್‌ಷಪಿಯ	೪೦	ಮುಸ್ಲಿಂ	ಉಪನ್ಯಾಸಕ	ಪಿರಿಯಪಟ್ಟಣ
೪೬.	ಬಸವಯ್ಯ	೯೦	ಪ.ಜಾ	ವ್ಯವಸಾಯ	ದೊಡ್ಡಕಮರವಳ್ಳಿ
೪೭.	ಚಲುವಮ್ಮ	೮೦	ಪ.ಜಾ	ಗೃಹಿಣಿ	ದೊಡ್ಡಕಮರವಳ್ಳಿ
೪೮.	ಮೋಹನ್	೫೫	ಬ್ರಾಹ್ಮಣ	ಪತ್ರಕರ್ತ	ಕಂಪ್ಲಪುರ
೪೯.	ಜಗದೀಶ್.ಬಿ.ಜಿ	೬೦	ಒಕ್ಕಲಿಗ	ನಿವೃತ ಶಿಕ್ಷಕ	ಬೆಟ್ಟದಪುರ
೫೦.	ರವೀಂದ್ರಕುಮಾರ್ ಜೈನ್	೪೦	ಜೈನ	ಅರ್ಚಕ	ಕೂಣಸೂರು

೭

ಗ್ರಂಥಋಣ

ಪ್ರಾಥಮಿಕ ಆಕರಗಳು

ಎಪಿಗ್ರಾಫಿಯ ಕರ್ನಾಟಿಕ (ಸಂ) ೧ ರಿಂದ ೧೨. ಸಂಪುಟಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಕಲಬುರ್ಗಿ ಎಂ.ಎಂ. (ಸಂ) ೧೯೯೪: ಕರ್ನಾಟಕದ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೃಷ್ಣಭಟ್ಟ ಕೆ. (ಅನು) ೧೯೭೨: ಕೌಟಿಲ್ಯನ ಅರ್ಥಶಾಸ್ತ್ರ, ಸಮಾಜ ಪುಸ್ತಕಾಲಯ, ಧಾರವಾಡ.

ದೇವೀರಪ್ಪ ಹೆಚ್. (ಸಂ) ೧೯೯೪: ರಾಮನಾಥ ಚರಿತೆ, ಸಂ ೨ ಮತ್ತು ೩, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಪರಮಶಿವಯ್ಯ ಜೀ.ಶಂ. (ಸಂ) ೧೯೭೩: ಜನಪದ ವೀರಕಾವ್ಯಗಳು, ಪೃಥ್ವಿ ಪ್ರಕಾಶನ, ಮೈಸೂರು

ರಾಮಾನುಜಯ್ಯಂಗಾರ್ ಎಂ.ಎ. (ಸಂ) ೧೯೩೩: ತಿರುಮಲೆಯಾರ್ಯನ ಚಿಕ್ಕದೇವರಾಯ ವಂಶಾವಳಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಲಿಂಗಯ್ಯ ಡಿ. ೧೯೭೯: ಪಿರಿಯಾಪಟ್ಟಣದ ಜಗಳ, ದಿನಕರ ಪ್ರಕಾಶನ, ಬೆಂಗಳೂರು

ವರದರಾಜರಾವ್ ಜಿ. ೧೯೬೬: ಕುಮಾರರಾಮನ ಸಾಂಗತ್ಯಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶಾಮಶಾಸ್ತ್ರಿ ಆರ್. (ಸಂ). ೧೯೭೧: ಕಂಠೀರವ ನರಸರಾಜ ವಿಜಯಂ(ಗೋವಿಂದ ವೈದ್ಯ), ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶಾಮಶಾಸ್ತ್ರಿ ಆರ್. (ಸಂ). ೧೯೭೩: ಕೆಳದಿ ನೃಪವಿಜಯಂ(ಲಿಂಗಣ್ಣ ಕವಿ), ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಅನುಷಂಗಿಕ ಆಕರಗಳು

ಅಪರ್ಣ ಕೂ.ಸ. ೧೯೯೯: ದೇವಾಲಯ ವಾಸ್ತುಶಿಲ್ಪ ಪರಿಚಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಎಚ್ಚೆಸ್ಕೆ, (ಸಂ) ೧೯೮೫: ಅವಲೋಕನ ಕರ್ನಾಟಕದ ಪರಂಪರೆಯ ಸಮೀಕ್ಷೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಕುಲಕರ್ಣಿ ಆರ್.ಎಚ್. ೨೦೦೧: ವಿಜಯನಗರ ಕಾಲದಲ್ಲಿ ಗಾರೆಕಲೆ ಒಂದು ಅವಲೋಕನ ವಿಜಯನಗರ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಕೃಷ್ಣಯ್ಯ ಡಿ.ಎನ್. ೧೯೯೫: ಕೊಡಗಿನ ಇತಿಹಾಸ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕೃಷ್ಣಯ್ಯ ಡಿ.ಎನ್. ೧೯೯೫: ಕೊಡಗಿನ ಇತಿಹಾಸ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ಟ ಎಂ. ಆಗಸ್ಟ್ ೧೯೭೦: ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕದ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

ಕೆಂಪಣ್ಣವರ ಪಿ.ಜಿ. ಜೋಡಟ್ಟೆ ಟಿ.ಆರ್. (ಸಂ) ೧೯೯೦: ಜೈನ ಕ್ಷೇತ್ರಗಳ ಐತಿಹ್ಯ, ಬಿ.ಬಿ. ಕರ್ಣವಾಡಿ, ರಾಯಭಾಗ, ಬೆಳಗಾವಿ.

ಕೊಟ್ರಯ್ಯ ಸಿ.ಟಿ.ಎಂ. ೨೦೦೧: ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಕೊಟ್ರೇಶ್ ಎಂ. ೨೦೧೧: ಬಳ್ಳಾರಿ ಜಿಲ್ಲೆಯ ಕೋಟೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಗೋಪಾಲರಾವ್ ಎಚ್.ಎಸ್. ೨೦೦೦: ಚಂಗಾಳ್ವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಗೋಪಾಲ್ ಆರ್(ಸಂ) ೨೦೧೦: ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ಗೋಪಾಲರಾವ್ ಎಚ್.ಎಸ್. ೧೯೭೭: ಇತಿಹಾಸ ಅಧ್ಯಯನ: ಅಂದು ಇಂದು, ನವ ಕರ್ನಾಟಕ, ಬೆಂಗಳೂರು.

ಗೋಪಾಲ್ ಬಾ.ರಾ. ೧೯೯೩: ಕಲೆ ಮತ್ತು ವಾಸ್ತು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ಚಂದ್ರಪೂಜಾರಿ ಎಂ. ೨೦೦೫: ಸಮಾಜ ಸಂಶೋಧನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಚಂದ್ರಪೂಜಾರಿ ಎಂ. ೨೦೦೮: ಸಂಶೋಧನಾ ಜವಾಬ್ದಾರಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಚನ್ನಪ್ಪ ಎಸ್. ಪಾಟೀಲ್. ೧೯೯೯: ಕರ್ನಾಟಕದ ಕೋಟೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಚಂದ್ರಶೇಖರಪ್ಪ ಟಿ.ಜಿ. ೨೦೦೬: ಪ್ರಾಚೀನ ಭಾರತದ ಇತಿಹಾಸ, ಪೂರ್ಣ ಪ್ರಕಾಶನ, ಶಿವಮೊಗ್ಗ.

ಚಿದಾನಂದಮೂರ್ತಿ ಎಂ. ೧೯೬೬: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಚಿದಾನಂದಮೂರ್ತಿ ಎಂ. ೧೯೯೮: ಹೊಸತು ಹೊಸತು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಜಯಮ್ಮ ಕರಿಯಣ್ಣ ಹೆಚ್, ೨೦೧೦: ಶಾಸನಗಳಲ್ಲಿ ದಾನದತ್ತಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಜ್ಞಾನಾನಂದ ಜಿ. ೨೦೦೧: ಶಿಲ್ಪದರ್ಶ, (ಸಂ) ೧. ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಜ್ಞಾನಾನಂದ ಜಿ. ೨೦೦೨: ಶಿಲ್ಪದರ್ಶ ಸಂಪುಟ ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ತಿಪ್ಪೇರುದ್ರಸ್ವಾಮಿ ಹೆಚ್. ೨೦೧೦: ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ವಿಶ್ವಾಸ್ ಪ್ರಿಂಟ್ಸ್, ಬೆಂಗಳೂರು.

ತಿಪ್ಪೇಸ್ವಾಮಿ ಪಿ.ಆರ್.(ಸಂ) ೧೯೯೪: ಶಿಲ್ಪಕಲಾ ಪ್ರಪಂಚ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

ದೇವರಕೊಂಡಾರೆಡ್ಡಿ, ೧೯೯೪: ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ, ಬೆಂಗಳೂರು.

ದೇವರಕೊಂಡಾರೆಡ್ಡಿ, ೧೯೯೩: ಗಂಗರ ಶಿಲ್ಪಕಲೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ದೇಜಗೌ, ೧೯೯೦: ಸ್ಥಳನಾಮ ವ್ಯಾಸಂಗ, ಸಹ್ಯಾದ್ರಿ ಪ್ರಕಾಶನ, ಮೈಸೂರು

ನಂಜಯ್ಯ ಎಂ. ಹೊಂಗನೂರು, ೨೦೦೯: ಸ್ಥಳನಾಮಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ನರಸಿಂಹಮೂರ್ತಿ ಎ.ವಿ. ೧೯೮೩: ಪುರಾತತ್ವಶಾಸ್ತ್ರ ಪರಿಚಯ, ಧಾರವಾಡ

ನಾಗರಾಜ್ ಎಂ.ಜಿ. ೨೦೦೪: ಕೊಡಗಿನ ಹಾಲೇರಿ ರಾಜವಂಶವು ಭಾಗ ೧, ೨ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

ನೀಲತ್ತಹಳ್ಳಿ ಕಸ್ತೂರಿ, ೨೦೦೦: ಕರ್ನಾಟಕದಲ್ಲಿ ಕೆರೆ ನೀರಾವರಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪಪ್ಪು ಆರ್.ಎಸ್. ಕರ್ನಾಟಕ ಚರಿತ್ರೆ, ಪ್ರಾಚೀನತಮ ಮಾನವ ಸಂಸ್ಕೃತಿಗಳು ವಿಕಾಸದ ಹಂತಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪ್ರಭಾಕರ್ ಎಂ.ಎಸ್. ೧೯೯೯: ದೇವಾಲಯಗಳ ವಾಸ್ತುಚಂದ್ರಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪ್ರಭಾಕರ್ ಎಂ.ಎಸ್. ೨೦೧೧: ದೇವಾಲಯ ವಾಸ್ತು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪರಮಶಿವಯ್ಯ ಜಿ.ಶಂ. ೧೯೮೯: ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಪರಮಶಿವಮೂರ್ತಿ ಡಿ.ವಿ. ೧೯೯೯: ಕನ್ನಡ ಶಾಸನಶಿಲ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪರಮಶಿವಮೂರ್ತಿ ಡಿ.ವಿ. ೨೦೧೧: ತುರುಗೊಳ್ ಸಂಕಥನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಮಹದೇವ ಸಿ. ಸುಬ್ಬಣ್ಣ ರೈ. ಎ. ಮಾಧವ ಪೆರಾಜೆ, (ಸಂ) ೨೦೦೨: ಹೊಸಪೇಟೆ ತಾಲ್ಲೂಕು ದರ್ಶನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಮಹದೇವ ಸಿ. ೨೦೦೧: ಕರ್ನಾಟಕ ಪುರಾತತ್ವ ಶೋಧ, ಶ್ರೀ ಲಕ್ಷ್ಮಿ ಪ್ರಕಾಶನ, ಶ್ರೀರಂಗಪಟ್ಟಣ.

ಮಹದೇವ ಸಿ. ೨೦೦೦: ವಿಜಯನಗರದ ಗಾರೆಶಿಲ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಮಹಂತೇಶ ಎನ್.ಎಸ್. ೨೦೦೮: ಚಿತ್ರದುರ್ಗದ ಕೋಟೆ ಪರಿಸರದ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ರೇಣುಕ ಪ್ರಕಾಶನ, ಚಿತ್ರದುರ್ಗ.

ಮರಿಶಾಮಾಚಾರ್ ಎನ್., ೨೦೦೦: ಭಾರತೀಯ ಶಿಲ್ಪಕಲೆ, ಬೆಂಗಳೂರು.

ಮುದ್ದಾಚಾರಿ ಬಿ. ೧೯೮೭: ಕರ್ನಾಟಕದ ಚರಿತ್ರೆ ಮತ್ತು ಸಂಸ್ಕೃತಿ, ಚಂದ್ರಮೌಳಿ ಪ್ರಕಾಶನ, ಮೈಸೂರು.

ಮೂರ್ತಿ ಕೆ.ಎಲ್.ಎನ್. ೧೯೯೮: ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ, ರಂಜಿತ ಪ್ರಕಾಶನ, ಬೆಂಗಳೂರು.

ಮೈಸೂರು ಜಿಲ್ಲಾ ಅಂಕಿ ಅಂಶಗಳ ನೋಟ, ೨೦೧೦–೨೦೧೧: ಜಿಲ್ಲಾ ಪಂಚಾಯತ್, ಮೈಸೂರು.

ರಘುಪತಿ ಕೆಮ್ತೂರು, ಲಕ್ಷ್ಮಣ ತೆಲಗಾವಿ (ಸಂ) ೧೯೮೭: ಸ್ಥಳನಾಮಾಧ್ಯಯನದ ಇತ್ತೀಚಿನ ಒಲವುಗಳು ಒಂದು ಸ್ಥೂಲ ಚಿತ್ರ, ಹರಿತಿಸಿರಿ.

ರಮೇಶನಾಯಕ, (ಸಂ) ೨೦೦೭: ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ರಂಗಸ್ವಾಮಿ ಎ, ರವಿಕೋರಿಶೆಟ್ಟರ್, (ಸಂ) ೨೦೧೦: ಕನ್ನಡ ನಾಡಿನ ವಾಸ್ತುಶಿಲ್ಪ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.

ರವೀಂದ್ರನಾಥ ಕೆ. (ಸಂ) ೨೦೦೮: ಅಧ್ಯಯನದ ವಿಧಿ ವಿಧಾನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ರಂಗಸ್ವಾಮಿ, ೧೯೯೨: ಭಾರತದ ಇತಿಹಾಸ, ಭಾರತ ಬುಕ್ ಡಿಪೋ, ಧಾರವಾಡ.

ರಾಜಶೇಖರ ಪಿ.ಕೆ. ೨೦೦೦: ಊರಹೆಸರಿನ ಕಥೆಗಳು, ಮೈಸೂರು

ರಾಜಶೇಖರ ಪಿ.ಕೆ. ೨೦೦೧: ಪಿರಿಯಾಪಟ್ಟಣ ಕಾಳಗ, ಶ್ರೀ ರಾಜೇಂದ್ರ ಪ್ರಿಂಟರ್ಸ್, ಮೈಸೂರು.

ರಾಜಶೇಖರ್ ಪಿ.ಕೆ. ೨೦೦೧: ಶಿವಸಂಪದ, ರಾಜೇಂದ್ರ ಪ್ರಿಂಟರ್ಸ್, ಮೈಸೂರು.

ರಾಜಶೇಖರ್ ಪಿ.ಕೆ. ೨೦೧೦: ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

ರಾಜಶೇಖರ್ ಪಿ.ಕೆ. ೨೦೧೦: ಪಿರಿಯಾಪಟ್ಟಣದ ಕಾಳಗ ಕಥಾಧಾರೆ, ಕೀರ್ತನ್ ಗ್ರಾಫಿಕ್ಸ್, ಮೈಸೂರು.

ರಾಜಶೇಖರ್ ಪಿ.ಕೆ. ೨೦೧೨: ಪಿರಿಯಾಪಟ್ಟಣದ ಕದನ, ಶ್ರೀನಾಗಾ ಪ್ರಕಾಶನ, ಮೈಸೂರು.

ರಾಜಶೇಖರ್ ಸಿಂದಗಿ, ೧೯೯೮: ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ ಪಬ್ಲಿಕೇಷನ್ಸ್, ಧಾರವಾಡ.

ರಾಜರಾಮ ಹೆಗಡೆ, ಅಶೋಕ ಶೆಟ್ಟರ್, (ಸಂ) ೨೦೦೧: ಮಲೆ ಕರ್ನಾಟಕದ ಅರಸು ಮನೆತನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ರಾಜಾರಾಮ ಹೆಗಡೆ, (ಸಂ) ೨೦೦೨: ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ರಾಮಚಂದ್ರರಾವ್ ಎಸ್.ಕೆ. ೧೯೭೫: ಮೂರ್ತಿಶಿಲ್ಪದ ನೆಲೆ ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ರಾಮಚಂದ್ರರಾವ್ ಎಸ್.ಕೆ. ೧೯೭೮: ಭಾರತದ ದೇವಾಲಯ ನೆಲೆ ಹಿನ್ನೆಲೆ, ಬೆಂಗಳೂರು.

ಲಕ್ಷ್ಮಣ್ ತೆಲಗಾವಿ, (ಸಂ) ೧೯೮೭: ಹರತಿ ಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಚಿತ್ರದುರ್ಗ.

ಲಕ್ಷ್ಮಣ್ ತೆಲಗಾವಿ, ೨೦೦೩: ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಲಕ್ಷ್ಮಣ್ ತೆಲಗಾವಿ, ೨೦೦೪: ಮೌರ್ಯ ಮತ್ತು ಶಾತವಾಹನ ಯುಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಲಿಂಗಯ್ಯ ಡಿ. (ಸಂ) ೧೯೯೬: ಜಾನಪದ ಜಗತ್ತು, ಕರ್ನಾಟಕ ಜಾನಪದ ಪರಿಷತ್, ಬೆಂಗಳೂರು

ವಿಶ್ವನಾಥ, ೧೯೯೬: ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ, ದೇವಿಪ್ರಕಾಶನ, ಮೈಸೂರು.

ವಿಶ್ವನಾಥ, ೧೯೯೬: ಸಕಲೇಶಪುರ ಪರಿಸರದ ಸ್ಥಳನಾಮಗಳು, ಮೈಸೂರು

ಶ್ರೀಕಂಠಶಾಸ್ತ್ರಿ ಎಸ್. ೧೯೬೫: ಹೊಯ್ಸಳ ವಾಸ್ತುಶಿಲ್ಪ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶ್ರೀನಿವಾಸ್ ಎಲ್. ೨೦೧೦: ಹಂಪಿ ಪರಿಸರದ ಆದಿಮಾನವನ ನೆಲೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಶ್ರೀನಿವಾಸ ಪಾಡಿಗಾರ್, ೧೯೮೭: ಪುರಾತತ್ವ ಶೋಧನೆ, ಮೈಸೂರು.

ಶಾಲಿನಿ ರಘುನಾಥ, ೨೦೦೮: ಸ್ಥಳನಾಮ, ಸ್ಥಳೀಯ ಚರಿತ್ರೆ ಪುರಾತತ್ವ ಮಾಲೆ ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಶಿವರಾಮ ಕಾರಂತ ಕೆ., ೧೯೯೧: ಚಾಲುಕ್ಯ ವಾಸ್ತುಶಿಲ್ಪ, ಬೆಂಗಳೂರು.

ಶಿವರಾಮ ಕಾರಂತ ಕೆ., ೧೯೭೫: ಭಾರತೀಯ ಶಿಲ್ಪ, ಬೆಂಗಳೂರು.

ಶಿವತಾರಕ್ ಕೆ.ಬಿ. ೨೦೦೧: ಕರ್ನಾಟಕದ ಪುರಾತತ್ವ ನೆಲೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಶೇಷಶಾಸ್ತ್ರಿ ಆರ್. ೧೯೮೨: ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಸದಾಶಿವ ಕೆ. ೨೦೦೪: ಪ್ರಚೀನ ಭಾರತದ ಇತಿಹಾಸ, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು.

ಸಣ್ಣಯ್ಯ ಬಿ.ಎಸ್. (ಸಂ) ೧೯೮೮: ದೇವಚಂದ್ರನ ರಾಜಾವಳಿ ಕಥಾಸಾರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಸುರೇಶ ರೈ.ಕೆ. ೨೦೧೦: ಪ್ರಾಚೀನ ಭಾರತ, ಯುನೈಟೆಡ್ ಪಬ್ಲಿಶರ್ಸ್, ಮಂಗಳೂರು.

ಸೂರ್ಯನಾಥ ಯು. ಕಾಮತ್, ೧೯೯೨: ಕೊಡಗು ಜಿಲ್ಲೆ ಗ್ಯಾಸೆಟಿಯರ್, ಬೆಂಗಳೂರು.

ಷೇಕ್ ಅಲಿ (ಸಂ) ೧೯೭೬: ಇತಿಹಾಸ ಪರಿಚಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಷೇಕ್ ಆಲಿ, ಸಂಪುಟ ೧, ಕರ್ನಾಟಕ ಚರಿತ್ರೆ ಸಂಪುಟಗಳು, ೧೯೯೫–೧೯೯೭: ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪತ್ರಿಕೆಗಳು

ಆಂದೋಲನ, ನವೆಂಬರ್ ೪, ೨೦೧೧, ಶೀಲಾಯುಗ ಸಂಸ್ಕೃತಿಯ ನಿಲಸುಕಲ್ಲು ಸಮಾಧಿಗಳು

ದಾರಿದೀಪ, ಮಾರ್ಚ್ ೨೦೧೨, ಶಾಸನವುಳ್ಳ ಚಪ್ಪಡಿಗಳು

ಪ್ರಜಾವಾಣಿ, ನವೆಂಬರ್ ೨೯, ೨೦೧೧, ಶಿಲಾ ಸಮಾಧಿ ಪತ್ತೆ

ಮೈಸೂರು ಮಿತ್ರ, ಸೆಪ್ಟೆಂಬರ್ ೧೯, ೨೦೧೨, ಹೊನ್ನಮ್ಮನ ಕೆರೆ

ವಿಜಯ ಕರ್ನಾಟಕ, ನವೆಂಬರ್ ೧೫, ೨೦೧೨, ಬೆಟ್ಟದಪುರದಲ್ಲಿ ದೀವಟಿಗೆ ಹಬ್ಬ

ಸಂಚಿಕೆಗಳು

ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ಪ್ರಬುದ್ಧ ಕರ್ಣಾಟಕ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಮಾನವಿಕ ಕರ್ಣಾಟಕ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಪಿರಿಯಾಸಿರಿ, ಪಿರಿಯಾಪಟ್ಟಣ

ವಿಶ್ವಕೋಶಗಳು

ಕನ್ನಡ ವಿಷಯ ವಿಶ್ವಕೋಶ, ಮೈಸೂರು ವಿಶ್ವವಿದ್ಯಾಲಯ ಮೈಸೂರು.

ಕನ್ನಡ ಜಾನಪದ ವಿಶ್ವಕೋಶ, ಮೈಸೂರು ವಿಶ್ವವಿದ್ಯಾಲಯ ಮೈಸೂರು.

ಕನ್ನಡ ರತ್ನಕೋಶ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು,

ಕನ್ನಡ, ಕನ್ನಡ–ಇಂಗ್ಲೀಷ್ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಅಪ್ರಕಟಿತ ಎಂ.ಫಿಲ್. ಮತ್ತು ಪಿಎಚ್.ಡಿ.ಮಹಾಪ್ರಬಂಧಗಳು

ಉದಯಕುಮಾರ ಕೆ.ಸಿ. ೨೦೦೮: ಬೆಟ್ಟದಪುರ ಪರಿಸರದ ಪುರಾತತ್ವ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಕೃಷ್ಣಪ್ಪ ಎಸ್, ೨೦೦೭: ಪಿರಿಯಾಪಟ್ಟಣ ತಾಲ್ಲೂಕು ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕೃಷ್ಣಪ್ಪ ಎನ್. ೨೦೦೬: ಕರ್ನಾಟಕದಲ್ಲಿ ಉತ್ಖನನಗಳ ನೆಲೆಗಳ ಸಾಂಸ್ಕೃತಿಕ ಅಧ್ಯಯನ, ಪ್ರಾಚೀನ ಇತಿಹಾಸ ಮತ್ತು ಪುರತತ್ವ ಅಧ್ಯಯನ ವಿಭಾಗ, ಮೈಸೂರು.

ಚಂದ್ರೇಗೌಡ ಎನ್.ಆರ್. ಬೈಲುಕುಪ್ಪೆ ಟಿಬೇಟಿಯನ್ನರು: ಒಂದು ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಚಿಕ್ಕಮಾದು ಎನ್.ಎನ್. ೨೦೦೫: ಹುಣಸೂರು ತಾಲ್ಲೂಕಿನ ನಂಬಿಕೆಗಳು ಮತ್ತು ಸಂಪ್ರದಾಯಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ತಿಪ್ಪೇಸ್ವಾಮಿ ಎನ್. ೨೦೦೪: ರಕ್ಷಣಾ ವಾಸ್ತುಶಿಲ್ಪ: ಚಿತ್ರದುರ್ಗ ಜಿಲ್ಲೆ, ಪ್ರಾಚೀನ ಇತಿಹಾಸ ಮತ್ತು ಪುರತತ್ವ ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ನಾಗಾಚಾರಿ ಎಸ್. ೨೦೦೬: ಮೈಸೂರು ಜಿಲ್ಲಾ ಗ್ರಾಮ ನಾಮಗಳ ಅಧ್ಯಯನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ವೃಷಭಕುಮಾರ್, ೨೦೦೬: ಮೈಸೂರು ಜಿಲ್ಲೆಯ ಐತಿಹ್ಯಗಳು: ಒಂದು ಅಧ್ಯಯನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಶಂಕರಯ್ಯ ಎಸ್.ಕೆ. ೨೦೦೯: ಮದ್ದೂರು ತಾಲ್ಲೂಕು ಸ್ಥಳನಾಮಗಳು: ಒಂದು ಅಧ್ಯಯನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಶಕುಂತಲ ಎನ್. ೨೦೦೯: ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಒಂದು ಅಧ್ಯಯನ, ಪ್ರಾಚೀನ ಇತಿಹಾಸ ಮತ್ತು ಪುರತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.

ಶೋಭ ಎಚ್.ಎಲ್. ೧೯೯೯: ಪಿರಿಯಾಪಟ್ಟಣದ ಶಾಸನಗಳು ಮತ್ತು ಜನಪದ ಸಾಹಿತ್ಯದ ಐತಿಹಾಸಿಕ ಅಧ್ಯಯನ, ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಸೋಮಣ್ಣ, ೧೯೯೫: ಕುಂತಿಪೂಜೆ: ಒಂದು ಅಧ್ಯಯನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

English Books

Acharya P.K. 1934: Architecture of manasara, Volume- IV Oriental Book Reprint Coroporation, New delhi.

Acharya P.K. 1972: Indian Architecture According to Shilpa sastra, Allahabad.

Banerje G.N. 1941: Development of Hindu Iconogrophy, University of Calcutta.

Bhattsuri K.G. 1995: Antiquities of in the Government Museum Shivamogga.

Bhattsuri K.G. 1987: Art and Architecture of North Kannada (Early and Medival phase) un publish and Thesis, Karnataka University, Dharawad.

Bhattacharya B.C. 1974: Jaain Iconography, Inteellectual publishing House, New delhi.

Chinthamanikar, 1952: Indian Metal Scuplture, Allahabad

Chakrabarti Dilip K. 2011: Indian an Archaeological History, Oxford, New delhi.

Derrett J.D.M. 1957: The Hoysalas, Oxford University press, London.

Desai. P.B. (Ed) 1970: A History of Karnataka, Dharwad.

Devaraj, D.V. and Patil C.S. (eds) 1996: Art and Architecture in Karnataka, Mysore.

Dhamija Jassin. 1970: Indian Phoke Arts and Crafts, Calcutta

Frenekis Buchanan, 2010: A Journey from Madras Through the country of mysore, Canara and Malabar, Govt of Karnataka, Mysore.

Gansoli O.C. 1978: South Indian Brozes, Allahabad

Ghetters Gunthor D and Senthimeer (edit) 1982: Memorial stone A Study of There origin, Allahabad

Gopal B.R. 1982: Same minor Dynastics of South India, Karnataka, vol-I.

Gopinath rao T.A. 1985: Elements of Hindus Iconography, vol II parts, Indiological Book House, Varnasi, New delhi.

Gururaj rao B.K. 1972: the megalithic culture in south India, Mysore University, Mysore.

Gururaj Bhatt P. 1975: Studies of Tuluva History and culture, Mangalore

Gupthe R.S. 1972: Iconography of Hindus, Budist and Jaines, Inteellectual publishing House, New delhi.

Narasimha Murthy A.V. 1975: Coins of Karnataka, Mysore.

Narasimhachari M. 1989: History and cult of Narishmman in Thellangana, Varangale.

Nilakanta sastri K.A. 1996: A History of south Indian from prehistoric times to the fall of Vijayanagara, Oxford, New Delhi

Percy Brown. 1976: Indian Architecture, Part II (Islamic Period) (Fifth Ed), Bombay.

Rajeshwari D.R. 1989: Shakthi Iconogrophy, Inteellectual publishing House, New delhi.

Ramachandra rao S.K. 1992: Art and Architecture of Indian Temples, Vol III, Bangalore.

Shivaruddra swamy S.N. 1996: Vijayanagar Temples in Karnataka, Bangalore

Swamy Harshanandha, 1982: Hindu God's and Godess, University of Calcutta.

Shivaram Murthy C. 1963: South Indian Bronges, Allahabad

Shamashastri R. 1958: Artha sastra of kautilya (fifth Ed) Mysore.

Subbayya K.K. 1978: Archaeology of Coorg with special reference of Megalithic, Geetha Book house, Mysore.

Articles and Journals

Krishna M.H. 1929: Excavation of chandravalli, Suppelement of A.R. Mysore Archaeological Department, Mysore.

Madhav N.Katti, Srinivasan C.R(Ed), 1982: Studies in Indian Place Names, Volume 3, Geetha Book House, Mysore

Raju N.S. Recent Archaeological Exploration in Karnataka, recent Researches in Karnataka Archaeology, Mysore.

Sampath M.D.and Swaminathan S.(Ed), 1991: Studies in Indian Place Names(Bharatiya Sthalanama Patrika) Journal of the Place Names Soceity of India, Volume 12, Geetha Book House, Mysore

Seshaddri.M. 1970: Report on the Excavation at T. Nariseepur, Govt of Mysore, Mysore.

Subbayya K.K. 1990: Light on the Megalithic excavations at Heggadehalli and Koppa, Publication Directorate of Archaeology and Museums, Mysore.

Reports and Gazetteer

Annual Reports of the Mysore Archaeological Department, Mysore.

Annual Reports of the Archaeological Survey of India, southern Circle, Madras.

Archarya P.K., 1927: Manasara and Encyclopedia of Hindu Architerature, Allahabad

Hayawadara Rao C. 1913: Mysore Gazatteer, Vol-I, II, III and IV, V. New Editions, Mysore.

Hassana District Gazetteer, Bangalore.

Hayavadana Rao C. 1943: History of Mysore, Mysore.

Kodagu District Gazetteer, Bangalore.

Rice B. Lewis, Mysore and Coorg from the inscriptions, Bangalore.

Rice B.L. 2004: Mysore District of Gazetteer, Bangalore.

Rice B.L. Mysore Gazetteer, Vol, 1 to 5

Suryanath. U. Kamath (Ed), 1982: Karnataka State Gazetteer, Bangalore.

Suryanath. U. Kamath (Ed), 1983-93: Karnataka State Gazetteer, Decennial Supplement, Bangalore.

Suryanath U. Kamath (Ed), 1988: Mysore District Gazetteer, Bangalore.

ಛಾಯಾಚಿತ್ರಗಳು



ಬೃಹತ್ ಶಿಲಾಸಮಾಧಿ, ಆಯತನಹಳ್ಳಿ ಗ್ರಾಮ



ಬೃಹತ್ ಶಿಲಾಸಮಾಧಿ, ಬೆಣಗಾಲು



ಕ್ಯಾಪ್‌ಸ್ಟೋನ್ ಸಮಾಧಿ, ಆಯತನಹಳ್ಳಿ



ವೃತ್ತಕಾರ ಶಿಲಾಸಮಾಧಿ, ಚನ್ನಕಲ್ಲಕಾವಲು



ಬೃಹತ್ ಶಿಲಾಸಮಾಧಿ, ಸೊಳೆಕೋಟೆ



ಮಡಕೆ ಅವಶೇಷಗಳು, ಉತ್ಖನನಗೊಂಡ ನೆಲೆ, ಕೊಪ್ಪ



ಮಡಕೆ ಅವಶೇಷಗಳು, ಉತ್ಖನನಗೊಂಡ ನೆಲೆ, ಕೊಪ್ಪ



ಪ್ರಾಚೀನ ಆಯುಧಗಳು, ಉತ್ಖನನಗೊಂಡ ನೆಲೆ, ಕೊಪ್ಪ



ಅಧಿಷ್ಠಾನ, ಚನ್ನಕೇಶವ ದೇವಾಲಯ, ಹಿಟ್ನೆಹೆಬ್ಬಾಗಿಲು



ಬಸವೇಶರ ದೇವಾಲಯ, ಕುಡುಕೂರು



ಕೋಟೆಯ ಕಂದಕ, ಪಿರಿಯಾಪಟ್ಟಣ



ಅನ್ನದಾನಿ ಮಲ್ಲಿಕಾರ್ಜುನ ದೇವಾಲಯದ ಶಿಖರ, ಬೆಟ್ಟದಪುರ



ಹೊಯ್ಸಳ ಶೈಲಿ ಕಂಬ, ಸೋಮೇಶ್ವರ ದೇವಾಲಯ, ಕಿತ್ತೂರು



ಅನ್ನದಾನಿ ಮಲ್ಲಿಕಾರ್ಜುನ ದೇವಾಲಯದ ಹೊರಭಾಗ ಬೆಟ್ಟದಪುರ



ಜಡೇವೀರಭದ್ರದೇವಾಲಯ, ಬೆಟ್ಟದಪುರ



ಚಂದ್ರನಾಥ ತೀರ್ಥಂಕರರ ಬಸದಿ, ಭುವನಹಳ್ಳಿ



ಕಂಬ ಆದಿತೀರ್ಥಂಕರ ಬಸದಿ, ಬೆಟ್ಟದತುಂಗ.



ಕೆರೆ, ಹರದೂರು



ಚನ್ನಕೇಶವ ದೇವಾಲಯದ ಹೊರಭಾಗ, ಪಿರಿಯಾಪಟ್ಟಣ



ಈಶ್ವರ ದೇವಾಲಯದ ಕಂಬ, ಪಿರಿಯಾಪಟ್ಟಣ



ಸಂಕ್ರಾಂತಿ ಮಂಟಪ, ಬೆಟ್ಟದಪುರ



ಉಯ್ಯಾಲೆಕಂಬ, ಬೆಟ್ಟದಪುರ



ವಿಶ್ರಾಂತಿಮಂಟಪ, ಬೆಟ್ಟದಪುರ



ಮಹಿಷಮರ್ದಿನಿ, ಈಶ್ವರದೇವಾಲಯ, ಕುಡುಕೊರು



ಕೋಟೆಯ ಪ್ರವೇಶ ದ್ವಾರ, ಪಿರಿಯಾಪಟ್ಟಣ



ಏಕಶಿಲಾಗಣೇಶ, ಸಂಗರಶೆಟ್ಟಿಹಳ್ಳಿ



ನಂದಿಕಂಬ ಆದಿತೀರ್ಥಂಕರಬಸದಿ, ಬೆಟ್ಟತುಂಗ



ಅನಂತನಾಥಶಿಲ್ಪ, ಆನೆವಾಳು



ವೀರಗಲ್ಲು, ಹರದೂರು



ರಾಜಭಕ್ತ ಅನ್ನದಾನಿಮಲ್ಲಿಕಾರ್ಜುನ
ದೇವಾಲಯ, ಬೆಟ್ಟದಪುರ



ಓಕೈಮಾಸ್ತಿಗಲ್ಲು, ಬೆಟ್ಟತುಂಗ